ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೫೦

ಶ್ರೀ ಬ್ರಹ್ಮವೈವರ್ತ ಮಹಾಪುರಾಣಂ

(ಕನ್ನಡ ಅನುವಾದಸಹಿತ)

ಸಂಚಿಕೆ ೯

ಅನುವಾದಕ :

ಸಾಹಿತ್ಯ ಮತ್ತು ಕನ್ನಡ ವಿದ್ವಾನ್,

ಚಿಟ್ಟದಪುರದ ಸುಬ್ರಾಯರ ಮಗ ಕೃಷ್ಣಪ್ಪ,

ಸಂಸ್ಕೃತ ಪಂಡಿತ,

ಮರಿಮಲ್ಲಪ್ಪ ಹೈಸ್ಕೂಲು, ಮೈಸೂರು.

ಮೈಸೂರು

ಶ್ರೀ ಶಾರದಾ ಪ್ರೆಸ್,

೧೯೫೩

ಪೀಠಿಕೆ

ಶ್ರೀಕೃಷ್ಣಜನ್ಮಖಂಡದ ಈ ಮೂರನೆಯ ಸಂಪುಟದಲ್ಲಿ ಕೆಲವು ಅಪೂರ್ವವಾದ ಆಖ್ಯಾನಗಳೂ, ಅನೇಕ ದೇವತೆಗಳ 'ಗರ್ವಭಂಗ' ವೂ ಹೃದಯಂಗಮವಾಗಿ ಚಿತ್ರಿತವಾಗಿದೆ. ಬ್ರಹ್ಮ, ಮಹೇಶ್ವರ, ಇಂದ್ರ ಮುಂತಾದ ಅನೇಕ ದೇವಾಧಿದೇವತೆಗಳ ಗರ್ವಪ್ರಸಂಗವನ್ನೂ, ಆ ಗರ್ವಭಂಗದ ಅದ್ಭುತಸನ್ನಿವೇಶಗಳನ್ನೂ ಓದಿದರೆ 'ದೇವತೆಗಳ ಸ್ಥಿತಿಯೇ ಹೀಗಾದ ಮೇಲೆ ಮನುಜಸಾಮಾನ್ಯರ ಪಾಡೇನು?' ಎನಿಸುತ್ತದೆ.

> **'ಪ್ರಕೃತೇಃ ಕ್ರಿಯಮಾಣಾನಿ ಗುಣ್ಯೈಃ ಕರ್ಮಾಣಿ ಸರ್ವಶಃ ।**
> **ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ॥**
> **ತತ್ವವಿತ್ತು ಮಹಾಬಾಹೋ ಗುಣಕರ್ಮ ವಿಭಾಗಯೋಃ ।**
> **ಗುಣಾಗುಣೇಷು ವರ್ತಂತ ಇತಿಮತ್ವಾ ನ ಸಜ್ಜತೇ ॥' "ಗೀತಾ"**

'ಬ್ರಹ್ಮಾದಿ ಸ್ತಂಬಪರ್ಯಂತವಾದ ಅಖಿಲಜಗತ್ತೂ 'ಪ್ರಕೃತಿಗೆ' ಅಧೀನವಾದುದು ಸತ್ವರಜಸ್ತಮೋರೂಪದಿಂದ ತ್ರಿಗುಣಾತ್ಮಕವಾದ, ಆ ಪ್ರಕೃತಿಯ ಪ್ರೇರಣೆಗನುಸಾರವಾಗಿ ಜೀವಿಯು ಕರ್ಮಗಳನ್ನು ಮಾಡುತ್ತಾನೆ. ಆದರೆ ಅದನ್ನು ಅರಿಯದೆ ನಾನೇ ಕರ್ತೃವೆಂದು 'ಅಹಂ'ಕಾರ ಪಡುತ್ತಾನೆ. ಅದರ ಪರಿಣಾಮವಾಗಿ ತಾನು ಮಾಡಿದ ಕಾರ್ಯಗಳ ಸದಸತ್ಫಲಗಳಿಗೆ ಗುರಿಯಾಗುತ್ತಾನೆ. ತತ್ವಜ್ಞಾನಿಯಾದವನು ತಾನು ಮಾಡುವ ಕಾರ್ಯವೆಲ್ಲವೂ ಪ್ರಕೃತಿಯ ಪ್ರೇರಣೆಗನುಸಾರವಾದುದೆಂದು ತಿಳಿದು 'ಅಹಂ ಕರ್ತಾ, ಅಹಂ ಭೋಕ್ತಾ' ಎಂಬ ಭಾವನೆಗಳನ್ನು ಬಿಟ್ಟು ನಿರ್ಲಿಪ್ತನಾಗಿ ನಿಷ್ಕಾಮಕರ್ಮವನ್ನು ಮಾಡಿ ಮುಕ್ತನಾಗುತ್ತಾನೆ.' ಎಂಬ ತತ್ವವನ್ನು ತಿಳಿಸುವುದೇ ಈ ಎಲ್ಲ ದೇವತೆಗಳ ಗರ್ವಭಂಗದ ಕಥೆಗಳ ಉದ್ದೇಶವೆಂದು ಸುಸ್ಪಷ್ಟವಾಗಿದೆ. ಶ್ರೀಕೃಷ್ಣನು ನಿರ್ಗುಣನೂ, ನಿರಾಕಾರನೂ, ನಿಷ್ಕಾಮನೂ ಆದುದರಿಂದ ರಾಧೆ ಮುಂತಾದ ಗೋಪಿಯರೊಡನೆ ಕ್ರೀಡೆಯಲ್ಲಿ ನಿರತನಾಗಿದ್ದರೂ ಪದ್ಮಪತ್ರದಂತೆ 'ನಿರ್ಲಿಪ್ತ' ನಾಗಿದ್ದುಕೊಂಡು ನಿತ್ಯಶುದ್ಧಬುದ್ಧಸ್ವರೂಪನಾಗಿ ಜೀವಿಗಳಿಗೆ ಆದರ್ಶವನ್ನು ತೋರಿಸಿದ್ದಾನೆ.

ಈ ರೀತಿಯಾದ ಧಾರ್ಮಿಕಗ್ರಂಥಗಳನ್ನು ಭಕ್ತಾದಿಗಳು ಓದಿ ಮುಕ್ತಿ ಮಾರ್ಗವನ್ನು ಅನುಸರಿಸುವುದಲ್ಲದೆ ದಿವ್ಯಜ್ಞಾನವನ್ನು ಸಂಪಾದಿಸಲೆಂಬ ಸದುದ್ದೇಶ ದಿಂದ ಕರ್ಣಾಟಕಭಾಷೆಗೆ ಪರಿವರ್ತನೆ ಮಾಡಿಸುವುದರ ಮೂಲಕ ಕನ್ನಡಿಗರಿಗೆ ಮಹದುಪಕಾರವನ್ನು ಮಾಡುತ್ತಿರುವ, ಪರಮದಯಾಳುಗಳೂ, ಪ್ರಜಾನು ರಾಗಿಗಳೂ, ವಿದ್ವದಭಿಮಾನಿಗಳೂ, ಪರಮೋದಾರಿಗಳೂ, ಕರ್ಣಾಟಕರತ್ನ ಸಿಂಹಾಸನಾಧೀಶ್ವರರೂ ಆದ **ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ.,** ಮಹಾಪ್ರಭುಗಳವರು ಪತ್ನೀಪುತ್ರ ರೊಡನೆಯೂ, ಬಂಧುಮಿತ್ರರೊಡನೆಯೂ, ಚಿರಕಾಲ ಸುಖವಾಗಿದ್ದು ಧರ್ಮದಿಂದ ರಾಜ್ಯವನ್ನು ಪರಿಪಾಲಿಸಲೆಂದು ಲೀಲಾಮಾನುಷರೂಪಿಯಾದ ಶ್ರೀಕೃಷ್ಣಪರಮಾತ್ಮ ನನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುವ,

ವಿದ್ವಜ್ಜನ ವಿಧೇಯ
ಅನುವಾದಕ,
ಬಿ. ಎಸ್. ಕೃಷ್ಣಪ್ಪ.

ವಿಜಯ ಸಂ|| ಅಧಿಕ ವೈಶಾಖ
ಶುಕ್ಲ ತೃತೀಯಾ ಗುರುವಾರ.

ವಿಷಯಾನುಕ್ರಮಣಿಕೆ.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಏಕೋನತ್ರಿಂಶೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಅಥ ಗೋಪಾಂಗನಾಃ ಸರ್ವಾಃ ಕಾಮಮತ್ತತಯಾ ಮುನೇ ।
ಅತಿಪ್ರೌಢಾಶ್ಚ ಮಾನಿನ್ಯೋ ನೇಶ್ವರಂ ಮೇನಿರೇ ಪತಿಂ ॥ ೧ ॥

ಕಾಶ್ಚಿದೂಚುರಹೋ ಕೃಷ್ಣಂ ಸಸ್ಮಿತಾ ವಕ್ರಲೋಚನಾಃ ।
ಮಾಲತೀಪುಷ್ಪಮುತ್ತೋಲ್ಯ ದೇಹಿ ಮೇ ಮಾಲಿಕಾಮಿತಿ ॥ ೨ ॥

ಕಾಶ್ಚಿದೂಚುರಯೇ ಕೃಷ್ಣ ಸ್ವಕ್ರೋಡೇಽಸ್ಮಾಂಶ್ಚ ಕುರ್ವಿತಿ ।
ಗೃಹೀತ್ವಾ ಶ್ರೀಹರೇಃ ಸ್ಕಂಧಮಾರುರೋಹ ಚ ಕಾಚನ ॥ ೩ ॥

ಇಪ್ಪತ್ತೊಂಭತ್ತನೆಯ ಅಧ್ಯಾಯ.

೧. ನಾರಾಯಣ:—ಎಲೈ ನಾರದಮುನಿಯೇ; ಅತಿ ಪ್ರೌಢೆಯರೂ ಮಾನಶಾಲಿನಿಯರೂ ಆದ ಗೋಪಾಂಗನೆಯರೆಲ್ಲರೂ ಕಾಮಮತ್ತರಾದುದರಿಂದ ತಮ್ಮ ಪತಿಯಾದ ಶ್ರೀಕೃಷ್ಣನು ಸರ್ವೇಶ್ವರನೆಂಬುದನ್ನು ತಿಳಿಯಲಿಲ್ಲ.

೨. ಆದುದರಿಂದ ಕೆಲವು ಗೋಪಿಯರು ಶ್ರೀಕೃಷ್ಣನನ್ನು ಕಡೆಗಣ್ಣಿನಿಂದ ನೋಡುತ್ತ ಸ್ಮಿತಮುಖಿಯರಾಗಿ 'ಜಾಜಿಯ ಹೂವನ್ನು ಕಿತ್ತು ತಂದು ನಮಗೆ ಮಾಲೆಯನ್ನು ಮಾಡಿಕೊಡು' ಎಂದರು

೩. 'ಎಲೈ ಕೃಷ್ಣನೇ, ನಮ್ಮನ್ನೂ ನಿನ್ನ ತೊಡೆಯ ಮೇಲೆ ಕುಳ್ಳಿರಿಸಿಕೋ' ಎಂದು ಕೆಲವು ಗೋಪಿಕೆಯರು ಹೇಳಿದರು. ಮತ್ತೊಬ್ಬ ಗೋಪಿಯು ಶ್ರೀಹರಿಯನ್ನು ಹಿಡಿದುಕೊಂಡು ಅವನ ಹೆಗಲನ್ನೇರಿದಳು.

ಉವಾಚ ಕಾಚಿದ್ದರ್ಪೇಣ ಪ್ರಮತ್ತಾ ಪ್ರಾಣವಲ್ಲಭಂ ।
ಸ್ವಕೀಯಪೀತವಸನಂ ಪರಿಧಾಪಯ ಮಾಮಿತಿ ॥ ೪ ॥

ಉವಾಚ ಕಾಚಿದೀಶಂ ತಂ ಸಿಂದೂರಂ ದೇಹಿ ಮಾಮಿತಿ ।
ಉವಾಚ ಕಾಚಿತ್ಪ್ರಾಣೇಶಂ ಶೀಘ್ರಮಾಗತ್ಯ ಸಾಂಪ್ರತಂ ॥ ೫ ॥

ಕೃತ್ವಾ ಕುಂತಲಸಂಸ್ಕಾರಂ ಕುರು ಮೇ ಕಬರೀಮಿತಿ ।
ಕಾಶ್ಚಿತ್ಸಂಪ್ರೇರಯಾಮಾಸುಃ ಶ್ರೀಖಂಡಂ ವಲ್ಲಭಾಯ ಚ ॥ ೬ ॥

ಸ್ವಾಂಗವೇಷವಿಧಾಯಿನ್ಯೋ ಭೂಷಾರ್ಥಂ ಶ್ರುತಿಮೂಲಯೋಃ ।
ಉವಾಚ ಕಾಚಿತ್ಕಾಮೇನ ಪರಂ ಸಂಕೇತಪೂರ್ವಕಂ ॥ ೭ ॥

ಪಶ್ಯಂತೀ ತನ್ಮುಖಾಂಭೋಜಂ ಸಸ್ಮಿತಾ ಮೈಥುನಾಯ ಚ ।
ಕಾಚಿಜ್ಜಗ್ರಾಹ ಮುರಲೀಂ ಬಲಾದಾಕೃಷ್ಯ ಮಾಧವಂ ॥ ೮ ॥

---

೪. ಪ್ರಮತ್ತಳಾದ ಪ್ರಮದೆಯೊಬ್ಬಳು ಪ್ರಾಣವಲ್ಲಭನಾದ ಶ್ರೀಹರಿಯನ್ನು ಕುರಿತು 'ನಿನ್ನ ಪೀತಾಂಬರವನ್ನು ನನಗೆ ಉಡಿಸು' ಎಂದು ದರ್ಪವಚನಗಳ ನ್ನಾಡಿದಳು.

೫–೮. 'ನನಗೆ ಸಿಂದೂರವನ್ನು ಕೊಡು' ಎಂದು ಒಬ್ಬ ಗೋಪಿಯು ಹೇಳಿದಳು. 'ಜಾಗ್ರತೆಯಾಗಿ ಬಂದು ನನ್ನ ತಲೆಗೂದಲನ್ನು ಬಾಚಿ ಹೆರಳುಹಾಕು' ಎಂದು ಮತ್ತೊಬ್ಬಳು ತನ್ನ ಪ್ರಾಣೇಶನಾದ ಶ್ರೀಹರಿಗೆ ಹೇಳಿದಳು. ತನ್ನ ಅವಯವ ಗಳನ್ನು ಚೆನ್ನಾಗಿ ಅಲಂಕರಿಸಿಕೊಳ್ಳಲು ಬಯಸುತ್ತಿದ್ದ ಕೆಲವು ಗೋಪಿಯರು ಶ್ರೀಗಂಧವನ್ನು ಲೇಪನ ಮಾಡೆಂದು ಪ್ರಾಣವಲ್ಲಭನಿಗೆ ಹೇಳಿದರು. ಕಾಮಾರ್ತ ಳಾದ ಕಾಮಿನಿಯೊಬ್ಬಳು, ಸ್ಮಿತಮುಖಿಯಾಗಿ ಶ್ರೀಹರಿಯ ಮುಖಕಮಲವನ್ನು ನೋಡುತ್ತ ಅವನ ಸಮಾಗಮಾಕಾಂಕ್ಷೆಯಿಂದ ಕಿವಿಯಲ್ಲಿ ಏನೋ ಸಂಕೇತವನ್ನು ಹೇಳಿದಳು. ಮತ್ತೊಬ್ಬಳು ಶ್ರೀಹರಿಯನ್ನು ಬಲಾತ್ಕಾರದಿಂದ ಎಳೆದುಕೊಂಡು ಅವನ ಕೈಯ್ಯಲ್ಲಿದ್ದ ಕೊಳಲನ್ನು ಕಿತ್ತುಕೊಂಡಳು.

ಜಹಾರ ಪೀತವಸನಂ ಕೃತ್ವಾ ನಗ್ನಂ ಚ ಕಾಮಿನೀ ।
ಕಾಮಿನ್ಯಃ ಕಾಶ್ಚಿದಿತ್ಯೂಚುರ್ಮಾನಿನ್ಯೋ ಮಧುಸೂದನಂ ॥ ೯ ॥

ಅಲಕ್ತಕದ್ರವಂ ದೇಹಿ ಪಾದಯೋರ್ನಖರೇಷು ಚ ।
ಉವಾಚ ಕಾಚಿತ್ ಪ್ರೇಮ್ಣಾ ತಂ ಗಂಡಯೋಃ ಸ್ತನಯೋರ್ಮಮ ।
ನಾನಾಚಿತ್ರವಿಚಿತ್ರಾಢ್ಯಾಂ ಕುರು ಪತ್ರಾವಲೀಮಿತಿ ॥ ೧೦ ॥

ಕೃತ್ವಾನುಮಾನಂ ಮನಸಾ ದೃಷ್ಟ್ವಾ ತಾಸಾಂ ಪ್ರಮತ್ತತಾಂ ॥ ೧೧ ॥

ಮಾಧವೋ ರಾಧಯಾ ಸಾರ್ಧಮಂತರ್ಧಾನಂ ಚಕಾರ ಹ ।
ಅತೀವನಿರ್ಜನೇ ಸ್ಥಾನೇ ಮುದಾ ಸ್ವೇಚ್ಛಾಮಯೋ ವಿಭುಃ ॥ ೧೨ ॥

ಕಲಾಮಾನಪ್ರಕಾರಂ ಚ ಶೃಂಗಾರಂ ಚ ಚಕಾರ ಹ ।
ಪರ್ವತೇ ಪರ್ವತೇ ರಮ್ಯೇ ದ್ವೀಪೇ ದ್ವೀಪೇ ಸುನಿರ್ಜನೇ ॥ ೧೩ ॥

೯-೧೦. ಕಾಮಿನಿಯೊಬ್ಬಳು ಶ್ರೀಹರಿಯ ಪೀತಾಂಬರವನ್ನು ಕಿತ್ತುಕೊಂಡು ಅವನನ್ನು ಬೆತ್ತಲೆಯಾಗಿ ನಿಲ್ಲಿಸಿದಳು. ಮಾನವತಿಯರಾದ ಮತ್ತೆ ಕೆಲವರು ಮಧುಸೂದನನನ್ನು ಕುರಿತು 'ನಮ್ಮ ಕಾಲು ಮತ್ತು ಕೈಗಳ ಉಗುರುಗಳಿಗೆ ಅರಗಿನ ರಸವನ್ನು ಲೇಪನಮಾಡು' ಎಂದು ಹೇಳಿದರು. ಮತ್ತೊಬ್ಬ ಗೋಪಿಯು 'ನನ್ನ ಕಪೋಲ ಮತ್ತು ಸ್ತನಗಳಲ್ಲಿ ಚಿತ್ರವಿಚಿತ್ರವಾದ ಪತ್ರಾವಳಿಯನ್ನು ರಚಿಸು' ಎಂದು ಪ್ರಿಯವಚನಗಳನ್ನಾಡಿದಳು.

೧೧-೧೨. ಮಾಧವನು ಆ ಗೋಪಾಂಗನೆಯರ ಪ್ರಮತ್ತತೆಯನ್ನು ನೋಡಿ ಅದರ ಪರಿಣಾಮವನ್ನು ಮನಸ್ಸಿನಲ್ಲೇ ಊಹಿಸಿದನು. ಕೂಡಲೇ ಸ್ವೇಚ್ಛಾಮಯನಾದ ಆ ವಿಭುವು ರಾಧೆಯೊಡನೆ ಅಂತರ್ಧಾನನಾಗಿ ನಿರ್ಜನಪ್ರವೇಶಕ್ಕೆ ಹೊರಟು ಹೋದನು.

೧೩. ರಮ್ಯವಾದ ಪರ್ವತಗಳಲ್ಲಿಯೂ, ನಿರ್ಜನವಾದ ದ್ವೀಪಗಳಲ್ಲಿಯೂ, ಆ ರಾಧೆಯೊಡನೆ ಕಲಾಮಾನಕ್ಕೆ ಅನುಸಾರವಾಗಿ ಶೃಂಗಾರಸುಖವನ್ನನುಭವಿಸ-

ತಟೇ ತಟೇ ನದೀನಾಂ ಚ ಸರ್ವಜಂತುವಿವರ್ಜಿತೇ ।
ಶ್ರೀಗೋಷ್ಠೇ ರತ್ನಶೈಲೇ ಚ ವೇಲಾಗಂಗಾತಟೇಽಪಿ ಚ ॥ ೧೪ ॥

ಕಾಲಿಂದೇ ಚ ಪುಲಿಂದೇ ಚ ಮಂದಿರೇ ಗಂಧಮಾದನೇ ।
ಮನೋಹರೇ ಕುಂದವನೇ ಕಾವೇರೀತೀರನೀರಜೇ ॥ ೧೫ ॥

ಪುಷ್ಪಭದ್ರಾಪುಲಿನಜೇ ಪುಷ್ಪೋದ್ಯಾನೇ ಸುಪುಷ್ಪಿತೇ ।
ಸರ್ವತ್ರ ರಮಣಂ ಕೃತ್ವಾ ರಾಧಾವೇಷಂ ವಿಧಾಯ ಚ ॥ ೧೬ ॥

ಜಗಾಮ ಮಲಯದ್ರೋಣೀಂ ರಮ್ಯಾಂ ಚಂದನವಾಯುನಾ ।
ಶಯ್ಯಾಂ ಪುಷ್ಪಮಯೀಂ ಕೃತ್ವಾ ತತ್ರ ರೇಮೇ ತಯಾ ಸಹ ॥ ೧೭ ॥

ಅತೀವ ಸುಖಸಂಭೋಗಾನ್ಮೂರ್ಛಾಂ ಸಂಪ್ರಾಪ್ಯ ರಾಧಿಕಾ ।
ಕೃತ್ವಾ ವಕ್ಷಸಿ ಗೋವಿಂದಂ ಪುಲಕಾಂಚಿತವಿಗ್ರಹಾ ॥ ೧೮ ॥

---

೧೪. ಯಾವ ಜಂತುಗಳೂ ಇಲ್ಲದ ನದಿಗಳ ತಟಪ್ರದೇಶಗಳಲ್ಲಿಯೂ, ಶ್ರೀಗೋಷ್ಠದಲ್ಲಿಯೂ, ರತ್ನಶೈಲದಲ್ಲಿಯೂ, ಗಂಗಾತೀರದಲ್ಲಿಯೂ ಅವಳೊಡನೆ ಶೃಂಗಾರಕ್ರೀಡೆಯನ್ನಾಡಿದನು.

೧೫. ಕಾಳಿಂದಿಯ ಮರಳುರಾಶಿಯಲ್ಲಿಯೂ, ಗಂಧಮಾದನ ಪರ್ವತದ ಮಂದಿರದಲ್ಲಿಯೂ, ಕಾವೇರಿಯ ತೀರದಲ್ಲಿರುವ ಮನೋಹರವಾದ ಕುಂದ (ಮೊಲ್ಲೆ) ವನದಲ್ಲಿಯೂ ಶ್ರೀಹರಿಯು ಕ್ರೀಡಿಸಿದನು.

೧೬–೧೭. ಪುಷ್ಪಭದ್ರಾನದಿಯ ಪುಲಿನದಲ್ಲಿರುವ ಪುಷ್ಪಿತವಾದ ಪುಷ್ಪೋದ್ಯಾನದಲ್ಲಿಯೂ ರಾಧೆಯೊಡನೆ ಕ್ರೀಡಿಸಿದನಂತರ ತಾನೂ ರಾಧೆಯ ವೇಷವನ್ನು ಧರಿಸಿಕೊಂಡು ಚಂದನ ವಾಯುವಿನಿಂದ ಮನೋಹರವಾದ ಮಲಯಪರ್ವತದ ಕಣಿವೆಗೆ ಹೋದನು. ಅಲ್ಲಿ ಪುಷ್ಪಮಯವಾದ ಶಯನವನ್ನು ರಚಿಸಿ ಆ ರಾಧೆಯೊಡನೆ ರತಿಕ್ರೀಡೆಯನ್ನಾಡಿದನು.

೧೮. ರಾಧಾದೇವಿಯಾದರೋ ಅತ್ಯಂತ ಸುಖಸಂಭೋಗದಿಂದ ಮೂರ್ಛೆಗೊಂಡವಳಾಗಿ, ತನ್ನ ವಕ್ಷಃಸ್ಥಲದಲ್ಲಿ ಗೋವಿಂದನನ್ನು ಅಪ್ಪಿಕೊಂಡು ರೋಮಾಂಚಿತ ಶರೀರಳಾಗಿ ಕುಳಿತಿದ್ದಳು.

ದೃಷ್ಟ್ವಾ ತಾಂ ಮೂರ್ಛಿತಾಂ ಕೃಷ್ಣಃ ಘನಶ್ರೋಣಿಪಯೋಧರಾಂ ।
ವಿಲುಪ್ತವೇಷಾಂ ಕಾಮಾರ್ತಾಂ ನಗ್ನಾಂ ಶಿಥಿಲಕುಂತಲಾಂ ॥ ೧೯ ॥

ಚೇತನಾಂ ಕಾರಯಾಮಾಸ ಕೃತ್ವಾ ವಕ್ಷಸಿ ತಂದ್ರಿತಾಂ ।
ವಾಸಯಾಮಾಸ ವಸನಂ ರಾಧಾಯಾ ಮೇಖಲಾಂಬರಂ ॥ ೨೦ ॥

ಕಬರೀಂ ರಚಯಾಮಾಸ ಕಿಂಚಿದ್ವಾಮೇನ ವಕ್ರತಾಂ ।
ಮಾಲತೀಮಾಲ್ಯಸಂಯುಕ್ತಾಂ ಕುಂದಪುಷ್ಪೈಶ್ಚ ವೇಷ್ಟಿತಾಂ ॥ ೨೧ ॥

ತಸ್ಯಾಃ ಕಪಾಲೇ ಸಿಂದೂರತಿಲಕಂ ಸುಂದರಂ ದದೌ ।
ಗಂಡಯೋಃ ಸ್ತನಯೋಶ್ಚಿತ್ರಾಂ ಚಕಾರ ಪತ್ರಿಕಾಂ ಮುದಾ ॥ ೨೨ ॥

ಸಾಲಕ್ತಕಾಂಶ್ಚ ನಖರಾಂಶ್ಚಿತ್ರಿತಾನ್ಪಾದಪದ್ಮಯೋಃ ।
ನಖೈಃ ಕೃತ್ರಿಮಪದ್ಮಾನಿ ನಿರ್ಮಮೇ ಶ್ರೋಣಿವಕ್ಷಸೋಃ ॥ ೨೩ ॥

೧೯–೨೦. ಕಾಮಾರ್ತಳಾಗಿ ಮೂರ್ಛೆಗೊಂಡು ಬೆತ್ತಲೆಯಾಗಿ ಮಲಗಿರುವ ಆ ರಾಧೆಯ ಶ್ರೋಣೀಬಿಂಬ ಮತ್ತು ಪಯೋಧರಗಳನ್ನೂ, ಅಸ್ತವ್ಯಸ್ತವಾದ ವೇಷವನ್ನೂ, ಶಿಥಿಲವಾದ ಕುಂಡಲವನ್ನೂ ಶ್ರೀಕೃಷ್ಣನು ನೋಡಿ, ಅವಳನ್ನು ಚೇತನಗೊಳಿಸಿ, ಅವಳಿಗೆ ವಸ್ತ್ರವನ್ನು ಸರಿಯಾಗಿ ಉಡಿಸಿ, ಡಾಬನ್ನು ಹಾಕಿ ತನ್ನ ವಕ್ಷಃಸ್ಥಳದಲ್ಲಿ ಮಲಗಿಸಿಕೊಂಡನು.

೨೧. ಅನಂತರ ಎಡಭಾಗದಲ್ಲಿ ಸ್ವಲ್ಪ ವಕ್ರವಾಗುವಂತೆ ಅವಳ ತಲೆಗೂದಲನ್ನು ಬಾಚಿ, ಹೆರಳನ್ನು ಹಾಕಿ, ಮಾಲತೀಪುಷ್ಪಮಾಲೆಯನ್ನೂ ಮೊಲ್ಲೆ ಮೊಗ್ಗುಗಳನ್ನೂ ಹೆರಳಿಗೆ ಸುತ್ತಿದನು.

೨೨. ಅವಳ ಹಣೆಯಲ್ಲಿ ಸುಂದರವಾದ ಸಿಂದೂರದ ತಿಲಕವನ್ನಿಟ್ಟನು. ಕಪೋಲಪ್ರದೇಶಗಳಲ್ಲೂ, ಸ್ತನಗಳಲ್ಲೂ ಮಕರಿಕಾದಿ ಪತ್ರಗಳನ್ನು ಮನೋಹರವಾಗಿ ರಚಿಸಿದನು.

೨೩. ಆ ರಾಧೆಯ ಕೆಂಪಾದ ಕಾಲಿನ ಉಗುರುಗಳಿಗೆ ಅರಗಿನ ರಸವನ್ನು ಲೇಪಿಸಿದನು. ಅವಳ ಶ್ರೋಣೀಬಿಂಬಗಳಲ್ಲೂ ವಕ್ಷಃಸ್ಥಳಗಳಲ್ಲೂ ನಖಕ್ಷತಗಳಿಂದ ಕೃತ್ರಿಮವಾದ ಪದ್ಮಗಳನ್ನು ರಚಿಸಿದನು.

ಉತ್ಥಾಯಾಥ ತಯಾ ಸಾರ್ಧಂ ಜಗಾಮ ಹ ಸರೋವರಂ ।
ನಾನಾಪ್ರಕಾರ ಪದ್ಮಾನಾಂ ರಾಜಿಭಿಶ್ಚ ವಿರಾಜಿತಂ ॥ ೨೪ ॥

ನಿರ್ಮಲಸ್ಫಟಿಕಾಕಾರಜಲಪೂರ್ಣಂ ಮನೋಹರಂ ।
ಹಂಸಕಾರಂಡವಾಕೀರ್ಣಂ ಜಲಕುಕ್ಕುಟಕೂಜಿತಂ ॥ ೨೫ ॥

ಮಧುಲುಬ್ಧಮಧುಭ್ರಾಣಾಂ ಪದ್ಮಸ್ಥಾನಂ ಸುಪದ್ಮಜಂ ।
ಚಾರುಣಾ ಕಲಶಬ್ದೇನ ಶಬ್ದಿತಂ ಶಶ್ವದೇವ ಹಿ ॥ ೨೬ ॥

ತತ್ರ ಸ್ನಾತ್ವಾ ಜಲಕ್ರೀಡಾಂ ಚಕಾರ ಹ ತಯಾ ಸಹ ।
ಜಲಂ ದದೌ ರಾಧಿಕಾಯೈ ಮುದಾ ಸಾ ಮಾಧವಾಯ ಚ ॥ ೨೭ ॥

ಸಹಸ್ರದಲಪದ್ಮೇ ಚ ಗೃಹೀತ್ವಾ ಮಾಧವಃ ಸ್ವಯಂ ।
ಏಕಂ ದದೌ ರಾಧಿಕಾಯೈ ದರಕ್ಷ ಸ್ವಾರ್ಥಮೇಕಕಂ ॥ ೨೮ ॥

---

೨೪. ಅನಂತರ ಅಲ್ಲಿಂದೆದ್ದು ಆ ರಾಧೆಯೊಡನೆ ಅನೇಕ ಪದ್ಮಪಂಕ್ತಿಗಳಿಂದ ಶೋಭಿಸುತ್ತಿರುವ ಸುಂದರವಾದ ಸರೋವರಕ್ಕೆ ಹೋದನು.

೨೫. ಸ್ಫಟಿಕಮಣಿಯಂತೆ ನಿರ್ಮಲವಾದ ನೀರಿನಿಂದ ಮನೋಹರವಾಗಿದ್ದ ಆ ಸರೋವರವು ಹಂಸ, ಕಾರಂಡವ ಮತ್ತು ನೀರುಕೋಳಿಗಳ ಇಂಚರದಿಂದ ಶೋಭಿಸುತ್ತಿದ್ದಿತು.

೨೬. ತಾವರೆಯ ಮಕರಂದವನ್ನು ಕುಡಿಯಲು ಆಶೆಗೊಂಡಿರುವ ದುಂಬಿಗಳ ಕಲನಾದದಿಂದ ಆ ಪದ್ಮಸರೋವರವು ಆಕುಲಿತವಾಗಿದ್ದಿತು

೨೭. ಆ ಸರೋವರದಲ್ಲಿ ಸ್ನಾನಮಾಡಿ ಆ ರಾಧೆಯೊಡನೆ ಜಲಕ್ರೀಡೆಯಾಡಿದನು. ಶ್ರೀಕೃಷ್ಣನು ರಾಧೆಗೂ, ರಾಧೆಯು ಶ್ರೀಕೃಷ್ಣನಿಗೂ ಪರಸ್ಪರವಾಗಿ ನೀರನ್ನು ಎರಚಾಡಿದರು.

೨೮. ಶ್ರೀಹರಿಯು ಸಹಸ್ರದಲಗಳುಳ್ಳ ಎರಡು ಪದ್ಮಗಳನ್ನು ಕಿತ್ತುಕೊಂಡು, ಒಂದನ್ನು ರಾಧೆಗೆ ಕೊಟ್ಟು ಮತ್ತೊಂದನ್ನು ತನಗೆ ಇಟ್ಟುಕೊಂಡನು.

ಚಂದನಾಗರುಕಸ್ತೂರೀಕುಂಕುಮದ್ರವಮಿಶ್ರಿತಂ ।
ಸ್ವಾಂಗೇ ದತ್ವಾ ರಾಧಿಕಾಯೈ ಲಿಲೇಪ ರಾಧಿಕೇಶ್ವರಃ ॥ ೨೯ ॥

ತತೋ ಗಚ್ಛಂಸ್ತಯಾ ಸಾರ್ಧಂ ದದರ್ಶ ಪುರತೋ ವಟಂ ।
ಅತೀವೋತ್ತುಂಗಶಾಖಾಗ್ರಮತಿವಿಸ್ತೃತಮೇವ ಚ ॥ ೩೦ ॥

ಮೂಲೇ ಯೋಜನಪರ್ಯಂತಂ ಛಾಯಯಾ ಪರಿವೇಷ್ಟಿತಂ ।
ಉವಾಸ ತತ್ರ ಗೋವಿಂದಃ ಕೇತಕೀವನಸನ್ನಿಧೌ ॥ ೩೧ ॥

ಪುಷ್ಪಾಕ್ತೇನ ಸುಶೀತೇನ ವಾಯುನಾ ಸುರಭೀಕೃತೇ ।
ಚಿತ್ರಂ ರಹಸ್ಯಂ ಸುಚಿರಂ ಪುರಾಣಂ ಚ ಪುರಾತನಂ ॥ ೩೨ ॥

ಪ್ರಹರ್ಷಿತಶ್ಚ ಶ್ರೀಕೃಷ್ಣಃ ಕಥಯಾಮಾಸ ರಾಧಿಕಾಂ ।
ಏತಸ್ಮಿನ್ನಂತರೇ ತತ್ರ ದದರ್ಶ ಮುನಿಪುಂಗವಂ ॥ ೩೩ ॥

---

೨೯. ಆ ರಾಧಾರಮಣನು ಅಭೀಪ್ಸಿತವಾದ ಚಂದನ, ಅಗುರು, ಕಸ್ತೂರಿ ಮತ್ತು ಕುಂಕುಮ ದ್ರವವನ್ನು ತನ್ನ ಸರ್ವಾಂಗಗಳಿಗೂ ಲೇಪಿಸಿಕೊಂಡು, ರಾಧೆಯ ಅಂಗಾಂಗಗಳಿಗೂ ಲೇಪಿಸಿದನು.

೩೦. ಅನಂತರ ಅವಳೊಡನೆ ಮುಂದುವರಿಯುತ್ತಾ, ಅತ್ಯುನ್ನತವಾದ ಶಾಖಾಗ್ರಗಳಿಂದ ಶೋಭಿಸುತ್ತಿದ್ದ ವಿಸ್ತಾರವಾದ ವಟವೃಕ್ಷವೊಂದನ್ನು ಮುಂದೆ ನೋಡಿದನು.

೩೧. ಆ ವಟವೃಕ್ಷದ ಬುಡದಲ್ಲಿ ನೆರಳು ಒಂದುಯೋಜನ ಪರ್ಯಂತವಾಗಿ ವ್ಯಾಪಿಸಿದ್ದಿತು. ಕೇತಕೀವನದ ಸಮೀಪದಲ್ಲಿದ್ದ ಆ ನೆರಳಿನಲ್ಲಿ ಶ್ರೀಕೃಷ್ಣನು ರಾಧೆಯೊಡನೆ ಕುಳಿತುಕೊಂಡನು.

೩೨–೩೩. ಶೈತ್ಯಸೌರಭ್ಯಮಾಂದ್ಯವಿಶಿಷ್ಟವಾದ ವಾಯುವಿನಿಂದ ಸುವಾಸಿತವಾಗಿದ್ದ ಆ ಪ್ರದೇಶದಲ್ಲಿ ಅತಿ ರಹಸ್ಯವೂ, ಪುರಾತನವೂ ಆದ ವಿಚಿತ್ರಕಥೆಯನ್ನು ರಾಧೆಗೆ ಸಂತೋಷದಿಂದ ಹೇಳುತ್ತ ಶ್ರೀಕೃಷ್ಣನು ಕುಳಿತಿದ್ದನು. ಆ ಸಮಯಕ್ಕೆ ಸರಿಯಾಗಿ ಅಷ್ಟಾವಕ್ರಮುನಿಯು ಅಲ್ಲಿಗೆ ಬಂದುದನ್ನು ಶ್ರೀಕೃಷ್ಣನು ನೋಡಿದನು.

ಆಗಚ್ಛಂತಂ ಚ ತಂ ದೃಷ್ಟ್ವಾ ಪ್ರಸನ್ನವದನೇಕ್ಷಣಂ ।
ನದೃಷ್ಟ್ವಾ ಹೃದಯೇ ರೂಪಮಿಾಶಸ್ಯ ಪರಮಾತ್ಮನಃ ॥ ೩೪ ॥

ಧ್ಯಾನಾದ್ವಿರತಮಗ್ರೇ ಚ ಪಶ್ಯಂತಂ ಬಹಿರೇವ ತತ್ ।
ಸರ್ವಾವಯವವಕ್ರಂ ಚ ಕೃಷ್ಣಂ ಸರ್ವಂ ದಿಗಂಬರಂ ॥ ೩೫ ॥

ನಾಮ್ನಾಽಷ್ಟಾವಕ್ರಂ ಜಟಿಲಂ ಜ್ವಲಂತಂ ಬ್ರಹ್ಮತೇಜಸಾ ।
ಮುಖತೋಽಗ್ನಿಮುದ್ಗಿರಂತಂ ತಪೋರಾಶಿಮಿವೋತ್ಥಿತಂ ॥ ೩೬ ॥

ಅಹೋ ಕಿಂ ವಾ ಬ್ರಹ್ಮತೇಜೋ ಮೂರ್ತಿಮಂತಮಿಹ ಸ್ವಯಂ
ನಖಶ್ಮಶ್ರುಸುದೀರ್ಘಂ ಚ ಶಾಂತಂ ತೇಜಸ್ವಿನಂ ಪರಂ ॥ ೩೭ ॥

ಪುಟಾಂಜಲಿಯುತಂ ಭಕ್ತ್ಯಾ ಭೀತಂ ಪ್ರಣತಕಂಧರಂ ।
ದೃಷ್ಟ್ವಾ ಹಸಂತೀಂ ರಾಧಾಂ ತಾಂ ವಾರಯಾಮಾಸ ಮಾಧವಃ ।
ಪ್ರಭಾವಂ ಕಥಯಾಮಾಸ ಮುನೀಂದ್ರಸ್ಯ ಮಹಾತ್ಮನಃ ॥ ೩೮ ॥

೩೪-೩೫. ಧ್ಯಾನಾಸಕ್ತನಾಗಿ ಹೃದಯಕಮಲದಲ್ಲಿ ಪರಮಾತ್ಮನ ದಿವ್ಯ ರೂಪವನ್ನು ಕಾಣದೆ ಬಹಿರ್ಮುಖನಾಗಿ ಮುಂದೆ ಕುಳಿತಿರುವ ಶ್ರೀಕೃಷ್ಣಪರಮಾತ್ಮನ ದಿವ್ಯರೂಪವನ್ನು ನೋಡಿ ಪ್ರಸನ್ನವದನನಾಗಿ ಬರುತ್ತಿರುವ ಸರ್ವಾವಯವವಕ್ರನೂ, ಕೃಷ್ಣವರ್ಣನೂ, ದಿಗಂಬರನೂ ಆದ ಮುನಿಯನ್ನು ಶ್ರೀಕೃಷ್ಣನು ನೋಡಿದನು

೩೬. ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಜಟಾಧಾರಿಯಾದ ಆ ಅಷ್ಟಾವಕ್ರ ಮುನಿಯು ಮೂರ್ತಿವೆತ್ತ ತಪೋರಾಶಿಯೋ ಎಂಬಂತೆ ಕಾಣುತ್ತಿದ್ದನು. ಆ ಮುನಿಯ ಮುಖವು ಅಗ್ನಿಜ್ವಾಲೆಯಂತೆ ತೇಜೋಮಯವಾಗಿದ್ದಿತು.

೩೭. ಸ್ವಯಂ ಬ್ರಹ್ಮತೇಜಸ್ಸೇ ಮೂರ್ತಿಮತ್ತಾಗಿ ಬರುತ್ತಿದೆಯೋ ಎಂಬಂತಿದ್ದ ತೇಜಸ್ವಿಯೂ, ಶಾಂತರೂಪನೂ ಆದ ಆ ಮುನಿಯ ಉಗುರು ಮತ್ತು ಗಡ್ಡಗಳು ಅತಿ ದೀರ್ಘವಾಗಿ ಬೆಳೆದಿದ್ದವು.

೩೮. ಭಕ್ತಿಯಿಂದ ಅಂಜಲಿಬದ್ಧನಾಗಿ ಭಯದಿಂದ ತಲೆಬಾಗಿ ನಿಂತಿರುವ ಆ ಅಷ್ಟಾವಕ್ರಮುನಿಯನ್ನು ನೋಡಿ ನಗುತ್ತಿದ್ದ ರಾಧೆಯನ್ನು ಮಾಧವನು ತಡೆದನು. ಅಲ್ಲದೆ ಮಹಾತ್ಮನಾದ ಆ ಮುನೀಂದ್ರನ ಪ್ರಭಾವವನ್ನು ವಿಸ್ತರಿಸಿ ಹೇಳಿದನು.

ಅಥ ಪ್ರಣಮ್ಯ ಗೋವಿಂದಂ ತುಷ್ಟಾವ ಮುನಿಪುಂಗವಃ ।
ಯತ್ ಸ್ತೋತ್ರಂ ಚ ಪುರಾ ದತ್ತಂ ಶಂಕರೇಣ ಮಹಾತ್ಮನಾ ॥ ೩೯ ॥

॥ ಅಷ್ಟಾವಕ್ರ ಉವಾಚ ॥

ಗುಣಾತೀತ ಗುಣಾಧಾರ ಗುಣಬೀಜ ಗುಣಾತ್ಮಕ ।
ಗುಣೇಶ ಗುಣಿನಾಂ ಬೀಜ ಗುಣಾಯನ ನಮೋಽಸ್ತು ತೇ ॥ ೪೦ ॥

ಸಿದ್ಧಿಸ್ವರೂಪ ಸಿದ್ಧ್ಯಂಶ ಸಿದ್ಧಬೀಜ ಪರಾತ್ಪರ ।
ಸಿದ್ಧಿಸಿದ್ಧ ಗುಣಾಧೀಶ ಸಿದ್ಧಾನಾಂ ಗುರವೇ ನಮಃ ॥ ೪೧ ॥

ಹೇ ವೇದಬೀಜ ವೇದಜ್ಞ ವೇದಿನ್ವೇದವಿದಾಂ ವರ ।
ವೇದಾಜ್ಞಾತಾಽಽದ್ಯರೂಪೇಶ ವೇದಜ್ಞೇಶ ನಮೋಽಸ್ತು ತೇ ॥ ೪೨ ॥

---

೩೯. ಅನಂತರ ಆ ಮುನಿಪುಂಗವನು ಗೋವಿಂದನಿಗೆ ಸಾಷ್ಟಾಂಗನಮಸ್ಕಾರ ಮಾಡಿ, ಪೂರ್ವದಲ್ಲಿ ಮಹಾತ್ಮನಾದ ಶಂಕರನು ತನಗೆ ಉಪದೇಶಿಸಿದ್ದ ಸ್ತೋತ್ರದಿಂದ ಶ್ರೀಹರಿಯನ್ನು ಸ್ತುತಿಸಿದನು.

೪೦. ಅಷ್ಟಾವಕ್ರ :—ತ್ರಿಗುಣಾತೀತನೂ, ತ್ರಿಗುಣಗಳಿಗಾಧಾರನೂ, ಗುಣಬೀಜನೂ, ಗುಣಾತ್ಮಕನೂ, ಗುಣಗಳಿಗೆ ಒಡೆಯನೂ, ಗುಣಿಗಳ ಬೀಜರೂಪನೂ, ಗುಣಾಕರನೂ ಆದ ನಿನಗೆ ವಂದಿಸುವೆನು.

೪೧. ಸಿದ್ಧಿಸ್ವರೂಪನೂ, ಸಿದ್ಧಿಯ ಅಂಶನೂ, ಸಿದ್ಧಬೀಜನೂ, ಪರಾತ್ಪರನೂ, ಸರ್ವಸಿದ್ಧಿಯನ್ನು ಪಡೆದವನೂ, ಗುಣಗಳಿಗೆ ಅಧೀಶ್ವರನೂ ಆದ ಸಿದ್ಧರ ಗುರುವಿಗೆ ವಂದಿಸುವೆನು.

೪೨ ವೇದಬೀಜನೂ, ವೇದಜ್ಞನೂ, ವೇದವೇತ್ತೃಗಳಲ್ಲಿ ಶ್ರೇಷ್ಠನೂ, ವೇದಗಳಿಂದ ತಿಳಿಯಲ್ಪಡದವನೂ, ಪುರಾಣಪುರುಷನೂ ಆದ ವೇದಜ್ಞರೊಡೆಯನಿಗೆ ವಂದಿಸುವೆನು.

ಬ್ರಹ್ಮಾನಂತೇಶ ಶೇಷೇಂದ್ರಧರ್ಮಾದೀನಾಮಧೀಶ್ವರ ।
ಸರ್ವ ಸರ್ವೇಶ ಶರ್ವೇಶ ಬೀಜರೂಪ ನಮೋಽಸ್ತು ತೇ ॥ ೪೩ ॥

ಪ್ರಕೃತೇಃ ಪ್ರಾಕೃತ ಪ್ರಜ್ಞ ಪ್ರಕೃತೀಶ ಪರಾತ್ಪರ ।
ಸಂಸಾರವೃಕ್ಷ ತದ್ಬೀಜ ಫಲರೂಪ ನಮೋಽಸ್ತು ತೇ ॥ ೪೪ ॥

ಸೃಷ್ಟಿಸ್ಥಿತ್ಯಂತಬೀಜೇಶ ಸೃಷ್ಟಿಸ್ಥಿತ್ಯಂತಕಾರಣ ।
ಮಹಾವಿರಾಟ್ತರೋರ್ಬೀಜ ರಾಧಿಕೇಶ ನಮೋಽಸ್ತು ತೇ ॥ ೪೫ ॥

ಅಹೋ ಯಸ್ಯ ತ್ರಯಃ ಸ್ಕಂಧಾ ಬ್ರಹ್ಮವಿಷ್ಣುಮಹೇಶ್ವರಾಃ ।
ಶಾಖಾಪ್ರಶಾಖಾ ವೇದಾದ್ಯಾಸ್ತಪಾಂಸಿ ಕುಸುಮಾನಿ ಚ ॥ ೪೬ ॥

ಸಂಸಾರಾ ವಿಫಲಾ ಏವ ಪ್ರಕೃತ್ಯಂಕುರಮೇತ್ಯ ಚ ।
ತದಾಧಾರ ನಿರಾಧಾರ ಸರ್ವಾಧಾರ ನಮೋಽಸ್ತು ತೇ ॥ ೪೭ ॥

---

೪೩. ಬ್ರಹ್ಮ. ಅನಂತ, ಈಶ, ಶೇಷ, ಇಂದ್ರ, ಧರ್ಮ ಮುಂತಾದ ದೇವತೆಗಳಿಗೆ ಅಧೀಶ್ವರನೂ, ಸರ್ವರೂಪನೂ, ಸರ್ವೇಶ್ವರನೂ ಆದ ಸಕಲ ಕಾರಣನಿಗೆ ನಮಿಸುವೆನು

೪೪. ಪ್ರಕೃತಿಗಿಂತ ಪುರಾತನನೂ, ಪ್ರಕೃತಿಗೊಡೆಯನೂ, ಪರಾತ್ಪರನೂ, ಸಂಸಾರವೆಂಬ ವೃಕ್ಷಕ್ಕೆ ಬೀಜ ಮತ್ತು ಫಲರೂಪನೂ ಆದ ಪರಮಾತ್ಮನಿಗೆ ವಂದಿಸುವೆನು.

೪೫. ಸೃಷ್ಟಿ ಸ್ಥಿತಿ ಲಯಗಳಿಗೆ ಬೀಜರೂಪನೂ, ಸೃಷ್ಟಿಸ್ಥಿತ್ಯಂತಗಳಿಗೆ ಕಾರಣನೂ, ಮಹಾ ವಿರಾಟೆಂಬ ವೃಕ್ಷಕ್ಕೆ ಬೀಜರೂಪನೂ ಆದ ರಾಧಾಪತಿಗೆ ನಮಿಸುವೆನು.

೪೬–೪೭. ಯಾವ ಮಹಾ ವಿರಾಡ್ವೃಕ್ಷಕ್ಕೆ ಬ್ರಹ್ಮ ವಿಷ್ಣು ಮಹೇಶರೆಂಬ ಮೂರು ಪ್ರಧಾನ ಕೊಂಬೆಗಳಿರುವುವೋ, ವೇದವೇದಾಂಗಗಳೆಂಬ ಶಾಖೋಪಶಾಖೆಗಳಿರುವುವೋ, ತಪಸ್ಸೆಂಬ ಕುಸುಮಗಳಿರುವುವೋ, ಸಂಸಾರವೆಂಬ ವಿಶೇಷಫಲವೂ, ಪ್ರಕೃತಿ ಎಂಬ ಅಂಕುರವೂ ಇರುವುದೋ, ಅಂಥ ಮಹಾವಿರಾಡ್ವೃಕ್ಷಕ್ಕೆ ಆಧಾರನೂ, ಸ್ವಯಂ ನಿರಾಧಾರನೂ ಆದ ಸರ್ವಾಧಾರನಿಗೆ ನಮಿಸುವೆನು.

ತೇಜೋರೂಪ ನಿರಾಕಾರ ಪ್ರತ್ಯಕ್ಷಾನೂಹಮೇವ ಚ |
ಸರ್ವಾಕಾರಾತಿಪ್ರತ್ಯಕ್ಷ ಸ್ವೇಚ್ಛಾಮಯ ನಮೋಽಸ್ತು ತೇ || ೪೮ ||

ಇತ್ಯುಕ್ತ್ವಾ ಸ ಮುನಿಶ್ರೇಷ್ಠೋ ನಿಪತ್ಯ ಚರಣಾಂಬುಜೇ |
ಪ್ರಾಣಾಂಸ್ತತ್ಯಾಜ ಯೋಗೇನ ತಯೋಃ ಪ್ರತ್ಯಕ್ಷ ಏವ ಚ || ೪೯ ||

ಪಪಾತ ತತ್ರ ತದ್ದೇಹಃ ಪಾದಪದ್ಮಸಮೀಪತಃ |
ತತ್ತೇಜಶ್ಚ ಸಮುತ್ತಸ್ಥೌ ಜ್ವಲದಗ್ನಿಶಿಖೋಪಮಂ || ೫೦ ||

ಸಪ್ತತಾಲಪ್ರಮಾಣಂ ತು ಚೋತ್ಥಾಯ ಚ ಪಪಾತ ಹ |
ಭ್ರಾಮಂ ಭ್ರಾಮಂ ಚ ಪರಿತೋ ಲೀನಂ ಚಾಭೂತ್ಪದಾಂಬುಜೇ || ೫೧

ಅಷ್ಟಾವಕ್ರಕೃತಂ ಸ್ತೋತ್ರಂ ಪ್ರಾತರುತ್ಥಾಯ ಯಃ ಪಠೇತ್ |
ಪರಂ ನಿರ್ವಾಣಮೋಕ್ಷಂ ಚ ಸಮಾಪ್ನೋತಿ ನ ಸಂಶಯಃ || ೫೨

---

೪೮. ತೇಜೋಮಯನೂ, ನಿರಾಕಾರನೂ, ಪ್ರತ್ಯಕ್ಷನಾದರೂ ಊಹೆಗೆ ಸಿಲುಕದವನೂ, ಸರ್ವರೂಪನೂ, ಸ್ವೇಚ್ಛಾಮಯನೂ ಆದ ಪರಮಾತ್ಮನನ್ನು ವಂದಿಸುವೆನು.

೪೯. ಆ ಅಷ್ಟಾವಕ್ರಮುನಿಯು ಈ ರೀತಿಯಾಗಿ ಸ್ತುತಿಸಿ, ಶ್ರೀಕೃಷ್ಣನ ಚರಣಕಮಲಗಳಮೇಲೆ ಬಿದ್ದು ಅವನ ಎದುರಿನಲ್ಲೇ ಯೋಗಶಕ್ತಿಯಿಂದ ಪ್ರಾಣಗಳನ್ನು ತೊರೆದನು.

೫೦. ಆ ಮುನಿಯ ದೇಹವು ಶ್ರೀಕೃಷ್ಣನ ಪಾದಕಮಲಗಳ ಸಮೀಪದಲ್ಲಿ ಬಿದ್ದಿತು. ಅಗ್ನಿಜ್ವಾಲೆಗೆ ಸಮಾನವಾದ ತೇಜಸ್ಸು ಆ ಶರೀರದಿಂದ ಹೊರಬಂದಿತು.

೫೧. ಆ ತೇಜಸ್ಸು ಏಳು ತಾಳೆಯ ಮರದಷ್ಟು ಉನ್ನತವಾಗಿ ಮೇಲಕ್ಕೆದ್ದು, ಸುತ್ತಲೂ ಸುತ್ತಾಡಿ ಶ್ರೀಕೃಷ್ಣನ ಪಾದಕಮಲಗಳಲ್ಲಿ ಲೀನವಾಯಿತು.

೫೨. ಅಷ್ಟಾವಕ್ರಮುನಿಯು ಮಾಡಿದ ಈ ಸ್ತೋತ್ರವನ್ನು ಪ್ರಾತಃಕಾಲದಲ್ಲೆದ್ದು ಪಠಿಸುವವನು ಶಾಶ್ವತವಾದ ನಿರ್ವಾಣ ಮೋಕ್ಷವನ್ನು ಹೊಂದುವುದರಲ್ಲಿ ಸಂಶಯವಿಲ್ಲ.

ಪ್ರಾಣಾಧಿಕೋ ಮುಮುಕ್ಷೂಣಾಂ ಸ್ತೋತ್ರರಾಜಶ್ಚ ನಾರದ ।
ಹರಿಣಾಽಸೌ ಪುರಾ ದತ್ತೋ ವೈಕುಂಠೇ ಶಂಕರಾಯ ಚ ॥ ೫೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಪೂರ್ವಾರ್ಧೇ ನಾರದನಾರಾಯಣಸಂವಾದೇ
ಮುನಿಮೋಕ್ಷಣಪ್ರಸ್ತಾವೋ ನಾಮ
ಏಕೋನತ್ರಿಂಶೋಽಧ್ಯಾಯಃ

---

೫೩. ಎಲೈ ನಾರದನೇ, ಮೋಕ್ಷಕಾಮಿಗಳಿಗೆ ಪ್ರಾಣಕ್ಕಿಂತ ಪ್ರಿಯವಾದ ಈ ಸ್ತೋತ್ರವನ್ನು ಪೂರ್ವದಲ್ಲಿ ಶ್ರೀಹರಿಯು ಶಂಕರನಿಗೆ ವೈಕುಂಠದಲ್ಲಿ ಉಪದೇಶಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
'ಮುನಿಮೋಕ್ಷಣಪ್ರಸ್ತಾವ' ವೆಂಬ ಇಪ್ಪತ್ತೊಂಭತ್ತನೆಯ
ಅಧ್ಯಾಯವು ಮುಗಿದುದು.

ಇಪ್ಪತ್ತೊಂಭತ್ತನೆಯ ಅಧ್ಯಾಯದ ಸಾರಾಂಶ.

ಗೋಪಾಂಗನೆಯರೆಲ್ಲರೂ ಶ್ರೀಕೃಷ್ಣನಲ್ಲಿ ಅತ್ಯಂತ ಸಲಿಗೆಯಿಂದ ವರ್ತಿಸುತ್ತ ಅವನೊಡನೆ ಸ್ವೇಚ್ಛಾವಿಹಾರಮಾಡಲು ಬಯಸಿದರು. ಆಗ ಶ್ರೀಕೃಷ್ಣನು ರಾಧೆಯೊಡನೆ ಅಂತರ್ಧಾನನಾಗಿ, ನಿರ್ಜನಪ್ರದೇಶಕ್ಕೆ ಹೋಗಿ ಅಲ್ಲಿ ರಾಧೆಯೊಡನೆ ವಿಹರಿಸಿಕೊಂಡಿದ್ದನು. ಆ ಸಮಯಕ್ಕೆ ಸರಿಯಾಗಿ ಅಷ್ಟಾವಕ್ರಮುನಿಯು ಶ್ರೀಕೃಷ್ಣ ಪರಮಾತ್ಮನನ್ನು ಅರಸಿಕೊಂಡು ಬಂದು, ಅವನನ್ನು ಸ್ತುತಿಸಿ, ಅವನ ಪಾದಕಮಲಗಳಲ್ಲಿ ತನ್ನ ಪ್ರಾಣವನ್ನು ಅರ್ಪಿಸಿ ಮುಕ್ತನಾದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ತ್ರಿಂಶೋಽಧ್ಯಾಯಃ ॥

॥ ನಾರದ ಉವಾಚ ॥

ಮಹಾಮುನೇ ರಹಸ್ಯಂ ಚ ಶ್ರುತಂ ಬ್ರಹ್ಮನ್ಸಿಮದ್ಭುತಂ ।
ಮೃತೇ ಮುನೌ ಕಿಂ ಚಕಾರ ಶ್ರೀಕೃಷ್ಣೋ ಭಕ್ತವತ್ಸಲಃ ॥ ೧ ॥

॥ ನಾರಾಯಣ ಉವಾಚ ॥

ದೃಷ್ಟ್ವಾ ಮೃತಂ ಮುನಿಂ ಕೃಷ್ಣಃ ಸಂಸ್ಕಾರಂ ಕರ್ತುಮುದ್ಯತಃ ।
ಕೃತ್ವಾ ವಕ್ಷಸಿ ತದ್ದೇಹಂ ರುರೋದೋಚ್ಚೈರ್ಯಥಾ ನರಃ ॥ ೨ ॥

ಬಾಹುಭ್ಯಾಂ ಚ ಸಮಾಶ್ಲಿಷ್ಯ ಪಿಪೇಷೋದ್ರಿಕ್ತಮೋಹನಃ ।
ನಿರ್ಗತಂ ಭಸ್ಮನಿಕರಂ ಶವಾದ್ವಜ್ರಾಂಗಘರ್ಷಣಾತ್ ॥ ೩ ॥

ಮೂವತ್ತನೆಯ ಅಧ್ಯಾಯ.

೧. ನಾರದ :—ಎಲೈ ನಾರಾಯಣಮಹರ್ಷಿಯೇ, ಅತ್ಯದ್ಭುತವಾದ ರಹಸ್ಯ ವೃತ್ತಾಂತವನ್ನು ನಾನು ಕೇಳಿದೆನು. ಅಷ್ಟಾವಕ್ರಮುನಿಯು ಮೃತನಾದನಂತರ ಭಕ್ತವತ್ಸಲನಾದ ಶ್ರೀಕೃಷ್ಣನು ಏನನ್ನೆಸಗಿದನು ?

೨. ನಾರಾಯಣ :—ಎಲೈ ನಾರದನೇ, ಮೃತನಾದ ಮುನಿಯನ್ನು ನೋಡಿ ಶ್ರೀಕೃಷ್ಣನು ಅವನ ಶವಕ್ಕೆ ಸಂಸ್ಕಾರಮಾಡಲು ತೊಡಗಿದನು. ಅವನ ಮೃತ ದೇಹವನ್ನು ಎದೆಗಪ್ಪಿಕೊಂಡು ಮನುಷ್ಯಸಾಮಾನ್ಯನಂತೆ ಗಟ್ಟಿಯಾಗಿ ಅತ್ತನು.

೩. ಅಲ್ಲದೆ ತನ್ನ ಎರಡು ಬಾಹುಗಳಿಂದಲೂ ಆ ಶವಶರೀರವನ್ನು ಅಪ್ಪಿ ಕೊಂಡು ಬಲವಾಗಿ ಮರ್ದನಮಾಡಿದನು. ಶ್ರೀಕೃಷ್ಣನ ವಜ್ರಾಂಗಮರ್ದನದಿಂದ ಆ ಶವಶರೀರವು ಪಿಂಡಿತವಾಗಿ ಅದರಿಂದ ಭಸ್ಮರಾಶಿಯು ಹೊರಕ್ಕೆ ಬಂದಿತು.

ರಕ್ತಮಾಂಸಾಸ್ಥಿಹೀನಂ ತಚ್ಛರೀರಂ ಚ ಮಹಾತ್ಮನಃ ।
ಷಷ್ಟಿವರ್ಷಸಹಸ್ರಾಣಿ ನಿರಾಹಾರಕೃತೋ ಮುನೇಃ ॥ ೪ ॥

ದಗ್ಧಂ ಲೋಹಿತಮಾಂಸಾಸ್ಥಿ ಜ್ವಲತಾ ಜಠರಾಗ್ನಿನಾ ।
ಬಾಹ್ಯಜ್ಞಾನವಿಹೀನಸ್ಯ ಹರಿಪಾದಾಬ್ಜ ಚೇತಸಃ ॥ ೫ ॥

ಚಿತಾಂ ಚಂದನಕಾಷ್ಠೇನ ನಿರ್ಮಾಯ ಮಧುಸೂದನಃ ।
ಕೃತ್ವಾಽಗ್ನಿಕಾರ್ಯಂ ತತ್ರೈವ ಸ್ಥಾಪಯಾಮಾಸ ಶೋಕತಃ ॥ ೬ ॥

ದದೌ ಚಿತಾಯಾಮಗ್ನಿಂ ಚ ಕಾಷ್ಠಂ ದತ್ವಾ ಶವೋಪರಿ ।
ಜ್ವಲಿತಾಯಾಂ ಚಿತಾಯಾಂ ಚ ಮೂರ್ಛಾಮಾಪ ಕ್ಷಣಂ ಪ್ರಭುಃ ॥ ೭ ॥

ತದ್ದೇಹೇ ಭಸ್ಮಸಾದ್ಭೂತೇ ನೇದುರ್ದುಂದುಭಯೋ ದಿವಿ ।
ಬಭೂವ ಪುಷ್ಪವೃಷ್ಟಿಶ್ಚ ತತಃ ಕ್ಷಣಾದ್ಗಗನಾದಹೋ ॥ ೮ ॥

---

೪. ಮಹಾತ್ಮನಾದ ಆ ಮುನಿಯು ನಿರಾಹಾರನಾಗಿ ಅರವತ್ತು ಸಾವಿರವರ್ಷ ತಪಸ್ಸು ಮಾಡಿದುದರಿಂದ ಅವನ ಶರೀರದ ರಕ್ತ ಮಾಂಸ ಮತ್ತು ಮೂಳೆಗಳೆಲ್ಲ ನಾಶವಾಗಿದ್ದವು.

೫. ಬಾಹ್ಯಜ್ಞಾನರಹಿತನಾಗಿ ಶ್ರೀಹರಿಯ ಪಾದಕಮಲಗಳನ್ನೇ ಧ್ಯಾನಿಸುತ್ತಿದ್ದ ಆ ಮುನಿಯ ರಕ್ತ, ಮಾಂಸ ಮತ್ತು ಮೂಳೆಗಳು ಉರಿಯುತ್ತಿದ್ದ ಜಠರಾಗ್ನಿಯಿಂದ ಭಸ್ಮವಾಗಿತ್ತು.

೬. ಶ್ರೀಕೃಷ್ಣನು ಗಂಧದ ಕಟ್ಟಿಗೆಯಿಂದ ಚಿತೆಯನ್ನು ನಿರ್ಮಿಸಿ, ಅಲ್ಲಿಯೇ ಮಂತ್ರೋಚ್ಚಾರಣೆಪೂರ್ವಕವಾಗಿ ಅಗ್ನಿಪ್ರತಿಷ್ಠಾಪನೆಮಾಡಿ ದುಃಖಿತನಾದನು.

೭. ಅನಂತರ ಆ ಮುನಿಯ ಶವದ ಮೇಲೂ ಕಟ್ಟಿಗೆಗಳನ್ನಿರಿಸಿ ಚಿತೆಗೆ ಅಗ್ನಿದಾನ ಮಾಡಿದನು. ಚಿತೆಯು ಉರಿಯಲಾರಂಭಿಸಲು ಸರ್ವೇಶ್ವರನು ಕ್ಷಣಕಾಲ ಮೂರ್ಛೆಗೊಂಡನು

೮. ಆ ಮುನಿಯ ಶವವು ಚಿತಾಗ್ನಿಯಿಂದ ಭಸ್ಮರಾಶಿಯಾದಾಗ ದೇವಲೋಕದಲ್ಲಿ ನಗಾರಿಗಳು ಮೊಳಗಿದವು. ಅಂತರಿಕ್ಷದಿಂದ ಪುಷ್ಪವೃಷ್ಟಿಯು ಆ ಚಿತೆಯ ಮೇಲೆ ಬಿದ್ದಿತು.

ಏತಸ್ಮಿನ್ನಂತರೇ ತತ್ರ ರತ್ನಸಾರವಿನಿರ್ಮಿತಂ ।
ಸ್ಯಂದನಂ ಚ ಮನೋಯಾಯಿ ವಸ್ತ್ರಮಾಲ್ಯಪರಿಚ್ಛದಂ ॥ ೯ ॥

ಪಾರ್ಷದಪ್ರವರೈರ್ಯುಕ್ತಂ ಶ್ರೀಕೃಷ್ಣಸದೃಶೈರ್ವರೈಃ ।
ಆವಿರ್ಬಭೂವ ಗೋಲೋಕಾತ್ಸುಂದರಂ ಪುರತೋ ಹರೇಃ ॥ ೧೦ ॥

ಅವರುಹ್ಯ ರಥಾತ್ತೂರ್ಣಂ ಪಾರ್ಷದಪ್ರವರಾ ಹರೇಃ ।
ಸರ್ವೇ ಸಮಾನರೂಪಾಸ್ತೇ ಪ್ರಣಮ್ಯ ರಾಧಿಕೇಶ್ವರೌ ॥ ೧೧ ॥

ಧೃತವಂತಂ ಸೂಕ್ಷ್ಮದೇಹಂ ಪ್ರಣಮಯ್ಯ ಮುನೀಶ್ವರಂ ।
ರಥೇ ಕೃತ್ವಾ ತು ತಂ ದೇಹಂ ಜಗ್ಮುರ್ಗೋಲೋಕಮುತ್ತಮಂ ॥ ೧೨ ॥

ಗತೇ ಮುನೀಂದ್ರೇ ಗೋಲೋಕಂ ವೃಂದಾವನವಿನೋದಿನೀ ।
ಬಭೂವ ವಿಸ್ಮಿತಾ ಸಾಧ್ವೀ ಪಪ್ರಚ್ಛ ಜಗದೀಶ್ವರಂ ॥ ೧೩ ॥

೯-೧೦. ಈ ಸಮಯಕ್ಕೆ ಸರಿಯಾಗಿ ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿಯೂ, ದಿವ್ಯವಸ್ತ್ರಮಾಲ್ಯಗಳಿಂದ ಅಲಂಕೃತವಾಗಿಯೂ, ಶ್ರೀಕೃಷ್ಣನಿಗೆ ಸಮಾನರಾದ ಪಾರ್ಷದರಿಂದ ಪರಿವೃತವಾಗಿಯೂ, ಮನೋವೇಗದಿಂದ ಹೋಗತಕ್ಕದ್ದಾಗಿಯೂ ಇದ್ದ ಸುಂದರವಾದ ರಥವೊಂದು ಗೋಲೋಕದಿಂದ ಬಂದು ಶ್ರೀಕೃಷ್ಣನ ಮುಂದೆ ಕಾಣಿಸಿಕೊಂಡಿತು.

೧೧-೧೨. ಶ್ರೀಹರಿಯ ಸಮಾನರೂಪಿಗಳಾದ ಪಾರ್ಷದಶ್ರೇಷ್ಠರು ಆ ರಥದಿಂದ ಜಾಗ್ರತೆಯಾಗಿ ಇಳಿದು, ರಾಧಾಕೃಷ್ಣರಿಗೆ ವಂದಿಸಿ, ಆ ಮುನೀಶ್ವರನಿಗೂ ವಂದಿಸಿ, ಅವನ ಸೂಕ್ಷ್ಮದೇಹವನ್ನು ತೆಗೆದುಕೊಂಡು ರಥದಲ್ಲಿಟ್ಟುಕೊಂಡು ಉತ್ತಮವಾದ ಗೋಲೋಕಕ್ಕೆ ತೆರಳಿದರು.

೧೩. ಇಂತು ಆ ಮುನಿಯ ಸೂಕ್ಷ್ಮಶರೀರವು ಗೋಲೋಕಕ್ಕೆ ತೆರಳಿದ ನಂತರ ಸಾಧ್ವೀಮಣಿಯೂ, ವೃಂದಾವನವಿನೋದಿನಿಯೂ ಆದ ರಾಧೆಯು ವಿಸ್ಮಯಾವಿಷ್ಟಳಾಗಿ ಜಗದೀಶ್ವರನನ್ನು ಕುರಿತು ಇಂತು ಪ್ರಶ್ನಿಸಿದಳು.

॥ ರಾಧಿಕೋವಾಚ ॥

ಕೋಽಯಂ ನಾಥ ಮುನಿಶ್ರೇಷ್ಠಃ ಸರ್ವಾವಯವವಕ್ರಿಮಃ ।
ಅತಿಖರ್ವಜನಾಕಾರಸ್ತೇಜಸ್ವೀಯೋ ನತಿಕುತ್ಸಿತಃ ॥ ೧೪ ॥

ಕಥಂ ವಾ ನಿರ್ಗತಂ ಭಸ್ಮ ದೇಹಾದಸ್ಯ ಕಿಮದ್ಭುತಂ ।
ಸಾಕ್ಷಾದ್ವಿಲೀನಂ ಯತ್ತೇಜಸ್ತ್ವತ್ಪಾದಾಬ್ಜೇಽನಲೋಪಮಂ । ॥ ೧೫ ॥

ರಥಸ್ಥಃ ಪುಣ್ಯವಾನ್ಸದ್ಯೋ ಗೋಲೋಕಂ ಚ ಜಗಾಮ ಹ ।
ಸ್ವಾತ್ಮಾರಾಮಸ್ಯ ಯದ್ಧೇತೋ ರೋದನಂ ತೇ ಬಭೂವ ಹ ॥ ೧೬ ॥

ತ್ವಯಾ ಕೃತಂ ಚ ಸತ್ಕಾರಮಶ್ರುಪೂರ್ಣೇನ ಚಕ್ಷುಷಾ ।
ಸರ್ವಂ ವಿವರಣಂ ತೂರ್ಣಂ ಸಂವ್ಯಸ್ಯ ಕಥಯ ಪ್ರಭೋ ॥ ೧೭ ॥

ರಾಧಿಕಾವಚನಂ ಶ್ರುತ್ವಾ ಪ್ರಹಸ್ಯ ಮಧುಸೂದನಃ ।
ಕಥಾಂ ಕಥಿತುಮಾರೇಭೇ ಯುಗಾಂತರಗತಾಮಪಿ ॥ ೧೮ ॥

---

೧೪. ರಾಧಿಕೆ:—ಎಲೈ ಪ್ರಾಣನಾಥನೇ, ಸಕಲಾವಯವಗಳೂ ವಕ್ರವಾಗಿ ಅತ್ಯಂತ ಕುಬ್ಜನೂ, ಕುತ್ಸಿತಾಕಾರನೂ ಆದರೆ ಮಾತ್ರ ತೇಜಸ್ವಿಯೂ ಆಗಿದ್ದ ಈ ಮುನಿಶ್ರೇಷ್ಠನಾರು?

೧೫ ಈ ಮುನಿಯ ಶರೀರದಿಂದ ಭಸ್ಮರಾಶಿಯು ಹೊರಗೆ ಬರಲು ಕಾರಣವೇನು? ಇದೇನಾಶ್ಚರ್ಯ? ಅಗ್ನಿಯಂತೆ ಜ್ವಾಜ್ವಲ್ಯಮಾನವಾದ ಆ ಮುನಿಯ ತೇಜಸ್ಸು ನಿನ್ನ ಪಾದಕಮಲಗಳಲ್ಲಿ ವಿಲೀನವಾಯಿತಲ್ಲವೇ?

೧೬. ಆ ಪುಣ್ಯಾತ್ಮನು ದಿವ್ಯರಥದಲ್ಲಿ ಕುಳಿತು ಗೋಲೋಕಕ್ಕೆ ತೆರಳಿದನು. ಸ್ವಾತ್ಮಾರಾಮನಾದ ನೀನೂ ಕೂಡ ಅವನ ವಿರಹದಿಂದ ಕಣ್ಣೀರು ಸುರಿಸಲು ಕಾರಣವೇನು?

೧೭. ನೀನು ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡೇ ಆ ಮುನಿಯ ಶವಸಂಸ್ಕಾರಗಳನ್ನು ಮಾಡಿದೆಯಲ್ಲವೆ? ಎಲೈ ಪ್ರಭುವೇ, ಈ ವಿಷಯಗಳನ್ನೆಲ್ಲ ನನಗೆ ವಿಸ್ತಾರವಾಗಿ ವಿವರಿಸು.

೧೮. ಈ ರೀತಿಯಾದ ರಾಧೆಯ ಪ್ರಶ್ನೆಗಳನ್ನು ಕೇಳಿ ಮಧುಸೂದನನು ನಸುನಕ್ಕು ಯುಗಾಂತರದಲ್ಲಿ ನಡೆದ ಆ ಮುನಿಯ ಚರಿತ್ರೆಯನ್ನು ಹೇಳಲಾರಂಭಿಸಿದನು.

॥ ಶ್ರೀ ಕೃಷ್ಣ ಉವಾಚ ॥

ರಹಸ್ಯಮಷ್ಟಾವಕ್ರೀಯಂ ವಿಖ್ಯಾತಂ ಸರ್ವತಃ ಪ್ರಿಯೇ ।
ಪಶ್ಚಾಚ್ಛ್ರೋಷ್ಯಸಿ ಕಾಲೇನ ಪ್ರಸಂಗೇ ವಿದುಷಾಂ ಮುಖಾತ್ ॥ ೧೯ ॥

ಅಷ್ಟಾವಕ್ರೋ ಮುನೀಂದ್ರೋಪಿ ವಿಖ್ಯಾತೋ ಭುವನತ್ರಯೇ ।
ಪರಿಪೂರ್ಣಂ ಯದ್ಯಶಸಾ ಜಗನ್ಮಾತರ್ಜಗತ್ತ್ರಯಂ ॥ ೨೦ ॥

ಕೃಷ್ಣಸ್ಯ ವಚನಂ ಶ್ರುತ್ವಾ ವಿಮನಸ್ಕಾ ಹರಿಪ್ರಿಯಾ ।
ಉವಾಚ ಮಧುರಂ ಯತ್ನಾಚ್ಛುಷ್ಕಕಂಠೋಷ್ಠತಾಲುಕಾ ॥ ೨೧ ॥

॥ ರಾಧಿಕೋವಾಚ ॥

ಯತ್ತೃಷಾರ್ತೋರ್ಮರ್ನಃ ಪೂರ್ಣಂ ಸಂಬಭೂವ ಸುಧಾಂಬುಧೌ ।
ಸ ವಿತೃಪ್ತೋ ಭವತಿ ಕಿಂ ಗೋಷ್ಪದೋದಕಪಾನತಃ ॥ ೨೨ ॥

---

೧೯. ಶ್ರೀಕೃಷ್ಣ:—ಎಲೌ ಪ್ರಿಯಳೇ, ಅಷ್ಟಾವಕ್ರಮುನಿಯ ರಹಸ್ಯವಾದ ಈ ಕಥೆಯು ಎಲ್ಲೆಲ್ಲೂ ಪ್ರಖ್ಯಾತವಾಗಿದೆ. ಕಾಲಕ್ರಮದಲ್ಲಿ ಪ್ರಸಂಗವೊದಗಿದಾಗ ವಿದ್ವಾಂಸರ ಮುಖದಿಂದ ಈ ಕಥೆಯನ್ನು ನೀನು ಕೇಳಬಹುದು.

೨೦. ಅಷ್ಟಾವಕ್ರನೆಂಬ ಮುನೀಂದ್ರನು ಭುವನತ್ರಯದಲ್ಲೂ ವಿಖ್ಯಾತನಾಗಿದ್ದನು. ಎಲೌ ಜಗನ್ಮಾತೆಯೇ, ಅವನ ಕೀರ್ತಿಯಿಂದ ತ್ರಿಲೋಕವೂ ಪರಿಪೂರ್ಣವಾಗಿದೆ.

೨೧. ಈ ರೀತಿಯಾದ ಶ್ರೀಕೃಷ್ಣನ ನುಡಿಗಳನ್ನು ಕೇಳಿ, ಶ್ರೀಹರಿಯ ಪ್ರಿಯಳಾದ ರಾಧೆಯು ಅಸಮಾಧಾನಗೊಂಡವಳಾಗಿ ಒಣಗಿದ ತುಟಿ ಮತ್ತು ಗಂಟಲುಗಳಿಂದ ಕೂಡಿ, ಪ್ರಯತ್ನಪೂರ್ವಕವಾಗಿ ಕೆಲವು ಮಾತುಗಳನ್ನಾಡಿದಳು.

೨೨. ರಾಧಿಕೆ :—ಎಲೈ ಪ್ರಾಣನಾಥನೇ, ಬಾಯಾರಿದವರಿಗೆ ಕ್ಷೀರಾಂಬುಧಿಯಲ್ಲೇ ದಾಹವಡಗದಿದ್ದರೆ, ಇನ್ನು ಗೋವಿನ ಹೆಜ್ಜೆ ಮುಳುಗುವಷ್ಟು ನೀರಿನಲ್ಲಿ ದಾಹವಡಗಲು ಸಾಧ್ಯವೇ ?

ವೇದಾನಾಂ ವೇದವಕ್ತೄಣಾಂ ವಿಧಾತುರ್ಜನಕಸ್ಯ ಚ ।
ಮಹಾವಿಷ್ಣೋರೀಶ್ವರಸ್ತ್ವಂ ಕೋಽನ್ಯೋ ವಕ್ತಾಽಸ್ತಿ ತ್ವತ್ಪರಃ ॥ ೨೩ ॥

ರಾಧಿಕಾವಚನಂ ಶ್ರುತ್ವಾ ತುಷ್ಟಃ ಕೃಷ್ಣೋ ಬಭೂವ ಹ ।
ಉವಾಚ ಗೋಪನೀಯಂ ಚ ರಹಸ್ಯಂ ಪರಮಾದ್ಭುತಂ ॥ ೨೪ ॥

॥ ಶ್ರೀ ಕೃಷ್ಣ ಉವಾಚ ॥

ಶೃಣು ಕಾಂತೇ ಪ್ರವಕ್ಷ್ಯೇಽಹಮಿತಿಹಾಸಂ ಪುರಾತನಂ ।
ಶ್ರವಣಾತ್ಕಥನಾದ್ಯಸ್ಯ ಸರ್ವಂ ಪಾಪಂ ಪ್ರಣಶ್ಯತಿ ॥ ೨೫ ॥

ಮಹಾವಿಷ್ಣೋರ್ನಾಭಿಪದ್ಮಾತ್ ಬಭೂವ ಜಗತಾಂ ವಿಧಿಃ ।
ಮಮಾಂಶಶ್ಚ ಮತ್ಕಲಯಾ ಜಲಾಕೀರ್ಣೇ ಜಗತ್ರಯೇ ॥ ೨೬ ॥

ಪುತ್ರಾ ಬಭೂವುಶ್ಚತ್ವಾರೋ ಬ್ರಹ್ಮಣೋ ಮನಸಾತ್ಪರಾ ।
ನಾರಾಯಣಪರಾಃ ಸರ್ವೇ ಜ್ವಲಂತೋ ಬ್ರಹ್ಮತೇಜಸಾ ॥ ೨೭ ॥

---

೨೩. ನೀನು ವೇದಗಳಿಗೂ, ವೇದವೇತ್ತೃಗಳಿಗೂ, ಜಗದ್ವಿಧಾತನಿಗೂ ಜನಕನಾಗಿದ್ದೀಯೆ. ಮಹಾವಿಷ್ಣುವಿಗೂ ಮೂಲಕಾರಣನಾದ ನಿನ್ನನ್ನು ಬಿಟ್ಟು ಮತ್ತಾರು ಈ ಕಥೆಯನ್ನು ಹೇಳಬಲ್ಲರು ?

೨೪. ರಾಧೆಯ ಈ ಮಾತುಗಳನ್ನು ಕೇಳಿ ಶ್ರೀಕೃಷ್ಣನು ಬಹಳ ಸಂತೋಷಪಟ್ಟು ಅತಿರಹಸ್ಯವೂ ಪರಮಾದ್ಭುತವೂ ಆದ ಅಷ್ಟಾವಕ್ರಮುನಿಯ ಕಥೆಯನ್ನು ಹೇಳಲುಪಕ್ರಮಿಸಿದನು

೨೫. ಶ್ರೀಕೃಷ್ಣ:—ಎಲೌ ಕಾಂತೆಯೇ, ಪುರಾತನವಾದ ಅಷ್ಟಾವಕ್ರ ಮುನಿಯ ಇತಿಹಾಸವನ್ನು ಹೇಳುವೆನು ಕೇಳು. ಅದನ್ನು ಕೇಳಿದವರ ಸಕಲ ಪಾಪಗಳೂ ಪರಿಹಾರವಾಗುವುವು.

೨೬. ಜಗತ್ತ್ರಯವೂ ಜಲಪರಿಪೂರ್ಣವಾಗಿದ್ದಾಗ ಮಹಾವಿಷ್ಣುವಿನ ನಾಭಿಕಮಲದಲ್ಲಿ ನನ್ನ ಅಂಶದಿಂದ ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಆವಿರ್ಭವಿಸಿದನು.

೨೭. ಆ ಚತುರ್ಮುಖಬ್ರಹ್ಮನ ಮನಸ್ಸಿನಿಂದ ನಾಲ್ವರು ಪುತ್ರರು ಪ್ರಸಿದ್ಧರಾಗಿ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುವವರೂ, ಪರಮವೈಷ್ಣವರೂ ಆದರು.

ಶಿಶವಃ ಪಂಚವರ್ಷೀಯಾ ನಗ್ನಾ ಅಜ್ಞಾನಿನೋ ಯಥಾ ।
ಬಾಹ್ಯಜ್ಞಾನವಿಹೀನಾಶ್ಚ ಬ್ರಹ್ಮತತ್ತ್ವವಿಶಾರದಾಃ ॥ ೨೮ ॥

ಸನಕಶ್ಚ ಸನಂದಶ್ಚ ತೃತೀಯಶ್ಚ ಸನಾತನಃ ।
ಸನತ್ಕುಮಾರೋ ಭಗವಾನೇತೇ ಚತ್ವಾರ ಏವ ಚ ॥ ೨೯ ॥

ತಾನುವಾಚ ಜಗದ್ಧಾತಾ ಸೃಷ್ಟಿಂ ಕುರುತ ಪುತ್ರಕಾಃ ।
ತೇ ನ ತಸ್ಥುಃ ಪಿತುರ್ವಾಕ್ಯೇ ಪ್ರಯಯುಸ್ತಪಸೇ ಮುದಾ ॥ ೩೦ ॥

ವಿಧಾತಾ ವಿಮನಸ್ಕಶ್ಚ ತನಯೇಷು ಗತೇಷು ಚ ।
ಪಿತುರ್ದುಃಖಾಯ ಪ್ರಭವೇತ್ ಪುತ್ರಶ್ಚೇದವಚಸ್ಕರಃ ॥ ೩೧ ॥

ಜ್ಞಾನೇನ ನಿರ್ಮಮೇ ಪುತ್ರಾನ್ ಸ್ವಾಂಗೇಷು ಚ ತಪೋಧನಾನ್ ।
ವೇದವೇದಾಂಗವಿಜ್ಞಾಂಶ್ಚ ಜ್ವಲತೋ ಬ್ರಹ್ಮತೇಜಸಾ ॥ ೩೨ ॥

---

೨೮. ಹುಟ್ಟುವಾಗಲೇ ಐದುವರ್ಷದ ಬಾಲಕರೂ, ಅಜ್ಞಾನಿಗಳಂತೆ ವಸ್ತ್ರಹೀನರೂ ಆಗಿದ್ದ ಆ ನಾಲ್ವರು ಪುತ್ರರು ಬಾಹ್ಯಜ್ಞಾನರಹಿತರೂ, ಬ್ರಹ್ಮತತ್ತ್ವವನ್ನರಿತವರೂ ಆಗಿದ್ದರು.

೨೯. ಪೂಜ್ಯರಾದ ಆ ನಾಲ್ವರ ಹೆಸರು ಕ್ರಮವಾಗಿ ಸನಕ, ಸನಂದ, ಸನಾತನ ಮತ್ತು ಸನತ್ಕುಮಾರ ಎಂದು ಪ್ರಖ್ಯಾತಿಗೊಂಡಿತು.

೩೦. ಜಗತ್ಸೃಷ್ಟಿಕರ್ತನು ಆ ನಾಲ್ವರು ಪುತ್ರರನ್ನೂ ಕುರಿತು ಸೃಷ್ಟಿಯನ್ನು ಮುಂದುವರಿಸಬೇಕೆಂದು ಹೇಳಲು ಅವರಾರೂ ತಂದೆಯ ಮಾತನ್ನು ಕೇಳದೆ ನನ್ನನ್ನು ಕುರಿತು ತಪಸ್ಸುಮಾಡಲಾರಂಭಿಸಿದರು.

೩೧. ಆ ಮಕ್ಕಳು ಈರೀತಿ ತಪಸ್ಸಿಗೆ ಹೊರಟುಹೋದುದನ್ನು ನೋಡಿ ಬ್ರಹ್ಮನು ಮನಸ್ಸಿನಲ್ಲೇ ಖೇದಗೊಂಡನು. ತಂದೆಯ ಮಾತನ್ನು ಕೇಳದ ಮಗನು ತಂದೆಯ ದುಃಖಕ್ಕೆ ಕಾರಣನಾಗುವನು.

೩೨. ಆಗ ಬ್ರಹ್ಮನು ತನ್ನ ದಿವ್ಯಜ್ಞಾನದಿಂದ ವೇದವೇದಾಂಗ ಪಾರಂಗತರೂ, ತಪೋಧನರೂ, ತೇಜಸ್ವಿಗಳೂ ಆದ ಕೆಲವು ಪುತ್ರರನ್ನು ತನ್ನ ಅವಯವಗಳ ದ್ವಾರಾ ಸೃಷ್ಟಿಮಾಡಿದನು.

ಅತ್ರಿಃ ಪುಲಸ್ತ್ಯಃ ಪುಲಹೋ ಮರೀಚಿರ್ಭೃಗುರಂಗಿರಾಃ ।
ಕ್ರತುರ್ವಸಿಷ್ಠೋ ವೋಢುಶ್ಚ ಕಪಿಲಶ್ಚಾಸುರಿಃ ಕವಿಃ ॥ ೩೩ ॥

ಶಂಕುಃ ಶಂಖಃ ಪಂಚಶಿಖಃ ಪ್ರಚೇತಾಸ್ತೇ ತಪೋಧನಾಃ ।
ಬಹುಕಾಲಂ ತಪಸ್ತಪ್ತ್ವಾ ಚಕ್ರುಃ ಸೃಷ್ಟಿಂ ತದಾಜ್ಞಯಾ ॥ ೩೪ ॥

ಕಲತ್ರವಂತಸ್ತೇ ಸರ್ವೇ ಸಂಸಾರಂ ಕರ್ತುಮುನ್ಮುಖಾಃ ।
ಬಭೂವುಃ ಪುತ್ರಪೌತ್ರಾಶ್ಚ ಸರ್ವೇಷಾಂ ಚ ತಪಸ್ವಿನಾಂ ॥ ೩೫ ॥

ತದಸ್ತು ಚ ತಥಾ ಬಹ್ವೀ ಮುನಿವಂಶಾನುಕೀರ್ತನೀ ।
ಚಾರ್ವೀ ಪುಣ್ಯಸ್ವರೂಪಾ ಚ ಪ್ರಕೃತಂ ಶೃಣು ಸುಂದರಿ ॥ ೩೬ ॥

ಪ್ರಚೇತಸಃ ಸುತಃ ಶ್ರೀಮಾನಸಿತೋ ಮುನಿಪುಂಗವಃ ।
ಸಕಲತ್ರಸ್ತಪಸ್ತೇಪೇ ದಿವ್ಯಂ ವರ್ಷಸಹಸ್ರಕಂ ॥ ೩೭ ॥

೩೩–೩೪. ಅತ್ರಿ, ಪುಲಸ್ತ್ಯ, ಪುಲಹ, ಮರೀಚಿ, ಭೃಗು, ಅಂಗಿರಸ್ಸು, ಕ್ರತು, ವಸಿಷ್ಠ, ವೋಢು, ಕಪಿಲ, ಆಸುರಿ, ಶುಕ್ರ (ಕವಿ), ಶಂಕು, ಶಂಖ, ಪಂಚಶಿಖ ಮತ್ತು ಪ್ರಚೇತ ಎಂಬ ಆ ಷೋಡಶಪ್ರಜಾಪತಿಗಳು ಬಹಳಕಾಲ ತಪಸ್ಸುಮಾಡಿ ಬ್ರಹ್ಮನ ಆಜ್ಞೆಯಂತೆ ಜಗತ್ಸೃಷ್ಟಿಯನ್ನು ಮುಂದುವರಿಸಿದರು.

೩೫. ಅವರೆಲ್ಲರೂ ಕುಟುಂಬಿಗಳಾಗಿ ಸಂಸಾರವನ್ನು ನಡೆಸಲು ಉತ್ಸುಕರಾಗಿದ್ದರು. ಆ ತಪಸ್ವಿಗಳಿಗೆಲ್ಲ ಪುತ್ರರೂ, ಪೌತ್ರರೂ ಕ್ರಮವಾಗಿ ಜನಿಸಿದರು.

೩೬. ಈ ರೀತಿ ಆ ತಪಸ್ವಿಗಳ ವಂಶವು ಬಹುಮುಖವಾಗಿ ವೃದ್ಧಿಗೊಂಡಿತು ಅದಂತಿರಲಿ. ಎಲೌ ಸುಂದರಿಯೇ, ಮನೋಹರವೂ, ಪುಣ್ಯಕರವೂ ಆದ ಪ್ರಕೃತ ಕಥೆಯನ್ನು ಈಗ ಹೇಳುವೆನು ಕೇಳು.

೩೭. ಮೇಲೆ ಹೇಳಿದ ಪ್ರಜಾಪತಿಗಳಲ್ಲೊಬ್ಬನಾದ ಪ್ರಚೇತಸನಿಗೆ ಅಸಿತನೆಂಬ ಮುನಿಶ್ರೇಷ್ಠನು ಜನಿಸಿದನು. ಅವನು ಪತ್ನೀಸಮೇತನಾಗಿ ದಿವ್ಯಸಹಸ್ರ ವರ್ಷಗಳ ಕಾಲ ತಪಸ್ಸನ್ನಾಚರಿಸಿದನು.

ನ ಬಭೂವ ಸುತಸ್ತಸ್ಯ ಪ್ರಾಣಾಸ್ತ್ಯಕ್ತುಂ ಸಮುದ್ಯತಃ ।
ತಂ ಸಂಬೋದ್ಧುಂ ಬಭೂವಾಥ ಸತ್ಯಾವಾಗಶರೀರಿಣೀ ॥ ೩೮ ॥

ಕಥಂ ತ್ಯಜಸಿ ಪ್ರಾಣಾಂಸ್ತ್ವಂ ಗಚ್ಛ ಶಂಕರಸನ್ನಿಧಿಂ ।
ಸಿದ್ಧಂ ಕುರು ಗೃಹೀತ್ವಾ ಚ ಮಂತ್ರಂ ಶಂಕರವಕ್ತ್ರತಃ ॥ ೩೯ ॥

ಮಂತ್ರಾಧಿಷ್ಠಾತೃದೇವೀ ತೇ ಸದ್ಯಃ ಸಾಕ್ಷಾದ್ಭವಿಷ್ಯತಿ ।
ವರೇಣಾಭೀಷ್ಟದೇವ್ಯಾಶ್ಚ ಪುತ್ರಸ್ತೇ ಭವಿತಾ ಧ್ರುವಂ ॥ ೪೦ ॥

ಶ್ರುತ್ವೈತಚ್ಚರಿತಂ ವಿಪ್ರೋ ಜಗಾಮ ಶಿವಸನ್ನಿಧಿಂ ।
ಯೋಗಿನಾಮಪ್ಯಗಮ್ಯಂ ಚ ಶಿವಲೋಕಂ ನಿರಾಮಯಂ ॥ ೪೧ ॥

ಸಕಲತ್ರೋ ಯಥಾ ಯೋಗೀ ತುಷ್ಟಾವ ಯೋಗಿನಾಂ ಗುರುಂ ।
ಪುಟಾಂಜಲಿಯುತೋ ಭೂತ್ವಾ ಭಕ್ತಿನಮ್ರಾತ್ಮಕಂಧರಃ ॥ ೪೨ ॥

---

೩೮. ಆದರೂ ಅವನಿಗೆ ಮಕ್ಕಳಾಗದುದರಿಂದ ಪ್ರಾಣತ್ಯಾಗಮಾಡಲು ಸಿದ್ಧನಾದನು. ಆಗ 'ಅಶರೀರವಾಣಿಯು' ಅವನನ್ನು ಸಂಬೋಧಿಸಿ ಈ ರೀತಿಯಾದ ಸತ್ಯವಚನವನ್ನಾಡಿತು.

೩೯. ಎಲೈ ಮಹರ್ಷಿಯೇ, ನೀನೇಕೆ ಪ್ರಾಣತ್ಯಾಗಮಾಡುತ್ತಿದ್ದೀಯೆ. ನೀನು ಶಂಕರನ ಸಮೀಪಕ್ಕೆ ಹೋಗಿ ಅವನಿಂದ ದಿವ್ಯಮಂತ್ರೋಪದೇಶವನ್ನು ಪಡೆದು ಅದರ ಸಿದ್ಧಿಯನ್ನು ಹೊಂದು.

೪೦. ಆ ಮಂತ್ರದ ಅಭೀಷ್ಟದೇವಿಯು ಕೂಡಲೇ ನಿನಗೆ ಪ್ರತ್ಯಕ್ಷಳಾಗುವಳು. ಆ ಅಭೀಷ್ಟದೇವಿಯ ವರದಿಂದ ನಿನಗೆ ಪುತ್ರನು ಜನಿಸುವುದರಲ್ಲಿ ಸಂಶಯವಿಲ್ಲ.

೪೧-೪೨. ಈ ಸಮಾಚಾರವನ್ನು ಕೇಳಿದ ಅಸಿತಮಹರ್ಷಿಯು ಪತ್ನೀಸಮೇತನಾಗಿ ಯೋಗಿಗಳಿಗೂ ಅಗಮ್ಯವಾದ ಮತ್ತು ನಿರಾಮಯವಾದ ಶಿವಲೋಕಕ್ಕೆ ಹೋಗಿ, ಶಿವನ ಸನ್ನಿಧಿಯನ್ನು ಸೇರಿ, ಭಕ್ತಿಯಿಂದ ಅಂಜಲಿಬದ್ಧನಾಗಿ ಯೋಗಿಗಳ ಗುರುವಾದ ಶಿವನನ್ನು ಮುಂದೆ ಹೇಳುವಂತೆ ಸ್ತುತಿಸಲಾರಂಭಿಸಿದನು.

|| ಅಸಿತ ಉವಾಚ ||

ಜಗದ್ಗುರೋ ನಮಸ್ತುಭ್ಯಂ ಶಿವಾಯ ಶಿವದಾಯ ಚ ।
ಯೋಗೀಂದ್ರಾಣಾಂ ಚ ಯೋಗೀಂದ್ರ ಗುರೂಣಾಂ ಗುರವೇ ನಮಃ ||೪೩||

ಮೃತ್ಯೋಃ ಮೃತ್ಯುಸ್ವರೂಪೇಣ ಮೃತ್ಯುಸಂಸಾರಖಂಡನ ।
ಮೃತ್ಯೋರೀಶ ಮೃತ್ಯುಬೀಜ ಮೃತ್ಯುಂಜಯ ನಮೋಽಸ್ತು ತೇ || ೪೪ ||

ಕಾಲರೂಪಂ ಕಲಯತಾಂ ಕಾಲಕಾಲೇಶ ಕಾರಣ ।
ಕಾಲಾದತೀತ ಕಾಲಸ್ಥ ಕಾಲಕಾಲ ನಮೋಽಸ್ತು ತೇ || ೪೫ ||

ಗುಣಾತೀತ ಗುಣಾಧಾರ ಗುಣಬೀಜ ಗುಣಾತ್ಮಕ ।
ಗುಣೇಶ ಗುಣಿನಾಂ ಬೀಜ ಗುಣಿನಾಂ ಗುರವೇ ನಮಃ || ೪೬ ||

---

೪೩. ಅಸಿತಮಹರ್ಷಿ—ಮಂಗಳಸ್ವರೂಪನೂ, ಮಂಗಳಕರನೂ ಆದ ಎಲ್ಲ ಜಗದ್ಗುರುವೇ, ನಿನಗೆ ವಂದಿಸುವೆನು. ಯೋಗಿಗಳಿಗೆಲ್ಲ ಪರಮಯೋಗಿಯೂ ಗುರುಗಳಿಗೆಲ್ಲ ಗುರುವೂ ಆದ ನಿನಗೆ ನಮಿಸುವೆನು.

೪೪. ಮೃತ್ಯುವಿಗೆ ಮೃತ್ಯುಸ್ವರೂಪನೂ, ಮೃತ್ಯುಸ್ವರೂಪವಾದ ಸಂಸಾರವನ್ನು ಖಂಡಿಸುವವನೂ, ಮೃತ್ಯುವಿಗೆ ಒಡೆಯನೂ, ಮೃತ್ಯುಬೀಜನೂ, ಮೃತ್ಯುಂಜಯನೂ ಆದ ನಿನಗೆ ವಂದಿಸುವೆನು.

೪೫. ಕಾಲಗಣನೆಮಾಡುವವರಿಗೆ ಕಾಲಸ್ವರೂಪನೂ, ಕಾಲಕಾಲನೂ, ಕಾಲಕಾರಣನೂ, ಕಾಲಕ್ಕೆ ಸಿಲುಕದವನೂ, ಕಾಲಾನುಸಾರಿಯೂ ಆದ ಕಾಲೇಶನಿಗೆ ವಂದಿಸುವೆನು.

೪೬. ತ್ರಿಗುಣಾತೀತನೂ, ಗುಣಗಳಿಗೆ ಆಧಾರನೂ, ಗುಣಕಾರಣನೂ, ತ್ರಿಗುಣಾತ್ಮಕನೂ, ಗುಣಿಗಳಿಗೆ ಈಶ್ವರನೂ, ಗುಣಿಗಳಿಗೆ ಬೀಜರೂಪನೂ, ಗುಣಿಗಳ ಗುರುವೂ ಆದ ನಿನಗೆ ವಂದಿಸುವೆನು.

ಬ್ರಹ್ಮಸ್ವರೂಪ ಬ್ರಹ್ಮಜ್ಞ ಬ್ರಹ್ಮಭಾವೇ ಚ ತತ್ಪರ ।
ಬ್ರಹ್ಮಬೀಜಸ್ವರೂಪೇಣ ಬ್ರಹ್ಮಬೀಜ ನಮೋಽಸ್ತು ತೇ ॥ ೪೭ ॥

ಇತಿ ಸ್ತುತ್ವಾ ಶಿವಂ ನತ್ವಾ ಪುರಸ್ತಸ್ಥೌ ಮುನೀಶ್ವರಃ ।
ದೀನವತ್ಸಾಶ್ರುನೇತ್ರಶ್ಚ ಪುಲಕಾಂಚಿತವಿಗ್ರಹಃ ॥ ೪೮ ॥

ಅಸಿತೇನ ಕೃತಂ ಸ್ತೋತ್ರಂ ಭಕ್ತಿಯುಕ್ತಶ್ಚ ಯಃ ಪಠೇತ್ ।
ವರ್ಷಮೇಕಂ ಹವಿಷ್ಯಾಶೀ ಶಂಕರಸ್ಯ ಮಹಾತ್ಮನಃ ॥ ೪೯ ॥

ಸ ಲಭೇತ್ ವೈಷ್ಣವಂ ಪುತ್ರಂ ಜ್ಞಾನಿನಂ ಚಿರಜೀವಿನಂ ।
ಭವೇತ್ ಧನಾಢ್ಯೋ ದುಃಖೀ ಚ ಮೂಕೋ ಭವತಿ ಪಂಡಿತಃ ॥ ೫೦ ॥

ಅಭಾರ್ಯೋ ಲಭತೇ ಭಾರ್ಯಾಂ ಸುಶೀಲಾಂ ಚ ಪ್ರತಿವ್ರತಾಂ ।
ಇಹ ಲೋಕೇ ಸುಖಂ ಭುಕ್ತ್ವಾ ಯಾತ್ಯಂತೇ ಶಿವಸನ್ನಿಧಿಂ ॥ ೫೧ ॥

---

೪೭. ಬ್ರಹ್ಮಸ್ವರೂಪನೂ, ಬ್ರಹ್ಮಜ್ಞಾನಿಯೂ, ಬ್ರಹ್ಮಧ್ಯಾನನಿರತನೂ, ಬ್ರಹ್ಮಬೀಜಸ್ವರೂಪನೂ ಆದ ಪರಬ್ರಹ್ಮನಿಗೆ ನಮಸ್ಕರಿಸುವೆನು.

೪೮. ಅಸಿತಮಹರ್ಷಿಯು ಈ ರೀತಿಯಾಗಿ ಶಿವನನ್ನು ಸ್ತುತಿಸಿ, ಸಾಷ್ಟಾಂಗ ಪ್ರಣಾಮಮಾಡಿ, ರೋಮಾಂಚಿತಶರೀರನಾಗಿ ಕಣ್ಣುಗಳಲ್ಲಿ ಆನಂದಬಾಷ್ಪಗಳನ್ನು ಸುರಿಸುತ್ತ ದೀನನಂತೆ ಪರಶಿವನ ಮುಂದೆ ನಿಂತನು

೪೯–೫೦. ಅಸಿತಮಹರ್ಷಿಯಿಂದ ಹೇಳಲ್ಪಟ್ಟ ಈ ಶಂಕರನ ಸ್ತೋತ್ರವನ್ನು ಒಂದು ವರ್ಷಕಾಲ ಹವಿಷ್ಯಾನ್ನವನ್ನು ಊಟಮಾಡಿಕೊಂಡು ಯಾರು ಭಕ್ತಿಯಿಂದ ಪಠಿಸುವರೋ ಅವರು ಜ್ಞಾನಿಯೂ, ಚಿರಂಜೀವಿಯೂ, ವಿಷ್ಣುಭಕ್ತನೂ ಆದ ಪುತ್ರನನ್ನು ಪಡೆಯುವರು. ಅದರಂತೆ ಬಡವನು ಭಾಗ್ಯವಂತನೂ, ಮೂಕನು ಪಂಡಿತನೂ ಆಗುವುದರಲ್ಲಿ ಸಂಶಯವಿಲ್ಲ.

೫೧. ಭಾರ್ಯಾರಹಿತನು ಪತಿವ್ರತೆಯೂ, ಸುಶೀಲೆಯೂ ಆದ ಭಾರ್ಯೆಯನ್ನು ಪಡೆಯುವನು. ಅಲ್ಲದೆ ಇಹಲೋಕದಲ್ಲಿರುವವರೆಗೂ ಸುಖವನ್ನನುಭವಿಸಿ ಅಂತ್ಯಕಾಲದಲ್ಲಿ ಶಿವನ ಸಾನ್ನಿಧ್ಯವನ್ನು ಸೇರುವನು.

ಇದಂ ಸ್ತೋತ್ರಂ ಪುರಾ ದತ್ತಂ ಬ್ರಹ್ಮಣಾ ಚ ಪ್ರಚೇತಸೇ ।
ಪ್ರಚೇತಸಾ ಸ್ವಪುತ್ರಾಯಾಸಿತಾಯ ದತ್ತಮುತ್ತಮಂ ॥ ೫೨ ॥

॥ ಶ್ರೀಕೃಷ್ಣ ಉವಾಚ ॥

ಸಮಾಕರ್ಣ್ಯ ಮುನೇಃ ಸ್ತೋತ್ರಂ ಭಗವಾನ್ ಶಂಕರಃ ಸ್ವಯಂ ।
ಉವಾಚ ಬ್ರಹ್ಮಣಃ ಪುತ್ರಂ ಸ್ವಭಕ್ತಂ ಭಕ್ತವತ್ಸಲಃ ॥ ೫೩ ॥

॥ ಶಂಕರ ಉವಾಚ ॥

ಸ್ಥಿರೋ ಭವ ಮುನಿಶ್ರೇಷ್ಠ ಜಾನಾಮಿ ತವ ವಾಂಛಿತಂ ।
ಪುತ್ರಸ್ತೇ ಭವಿತಾ ಸತ್ಯಂ ಮದಂಶೇನ ಚ ಮತ್ಸಮಃ ॥ ೫೪ ॥

ದಾಸ್ಯಾಮಿ ಮಂತ್ರಮತುಲಂ ಸರ್ವೇಷಾಂ ಚ ಸುದುರ್ಲಭಂ ।
ಇತ್ಯುಕ್ತ್ವಾ ಚ ದದೌ ಮಂತ್ರಂ ತಸ್ಯೈವ ಷೋಡಶಾಕ್ಷರಂ ॥ ೫೫ ॥

---

೫೨. ಪೂರ್ವದಲ್ಲಿ ಈ ಸ್ತೋತ್ರವನ್ನು ಬ್ರಹ್ಮನು ಪ್ರಚೇತಸನಿಗೆ ಉಪದೇಶಿಸಿದನು. ಪ್ರಚೇತಸನು ತನ್ನ ಪುತ್ರನಾದ ಅಸಿತನಿಗೆ ಈ ದಿವ್ಯಸ್ತೋತ್ರವನ್ನುಪದೇಶಿಸಿದನು.

೫೩. ಶ್ರೀಕೃಷ್ಣ:—ಅಸಿತಮುನಿಯ ಸ್ತೋತ್ರವನ್ನು ಕೇಳಿ ಭಕ್ತವತ್ಸಲನೂ, ಭಗವಂತನೂ ಆದ ಶಂಕರನು ಬ್ರಹ್ಮಪುತ್ರನೂ ತನ್ನ ಭಕ್ತನೂ ಆದ ಆ ಮುನಿಯನ್ನು ಕುರಿತಿಂತೆಂದನು

೫೪. ಶಂಕರ:—ಎಲೈ ಮುನಿವರ್ಯನೇ, ಸ್ಥಿರಚಿತ್ತನಾಗು. ನಿನ್ನ ಅಭೀಪ್ಸಿತವನ್ನು ನಾನು ಬಲ್ಲೆ ನನ್ನ ಅಂಶದಿಂದ ನನಗೆ ಸಮಾನನಾದ ಸತ್ಪುತ್ರನೊಬ್ಬನು ನಿನಗೆ ಜನಿಸುವುದರಲ್ಲಿ ಸಂಶಯವಿಲ್ಲ

೫೫. 'ಅಸಮಾನವೂ, ಸರ್ವ ಸುದುರ್ಲಭವೂ ಆದ ಮಂತ್ರವನ್ನು ನಿನಗೆ ಉಪದೇಶಿಸುವೆನು' ಎಂದು ಹೇಳಿ ಹದಿನಾರು ಅಕ್ಷರದ ಶ್ರೀ ರಾಧಾ ಮಂತ್ರವನ್ನು ಉಪದೇಶಿಸಿದನು.

ಸ್ತೋತ್ರಂ ಪೂಜಾವಿಧಾನಂ ಚ ಕವಚಂ ಪರಮಾದ್ಭುತಂ ।
ಸಂಸಾರವಿಜಯಂ ನಾಮ ಪುರಶ್ಚರಣಪೂರ್ವಕಂ ॥ ೫೬ ॥

ವರಂ ದಾತುಮಿಷ್ಟದೇವೀ ಪ್ರತ್ಯಕ್ಷಾ ಭವಿತೇತಿ ಚ ।
ಇತ್ಯುಕ್ತ್ವಾ ವಿರತೋ ರುದ್ರಃ ಸ ತಂ ನತ್ವಾ ಜಗಾಮ ಹ ॥ ೫೭ ॥

ಜಜಾಪ ಪರಮಂ ಮಂತ್ರಂ ಸೋಽಸಿತಃ ಶತವತ್ಸರಂ ।
ಸಾಕ್ಷಾದ್ಭೂತ್ವಾ ವರಸ್ತಸ್ಮೈ ತ್ವಯಾ ದತ್ತಃ ಪುರಾ ಸತಿ ॥ ೫೮ ॥

ಪುತ್ರಸ್ತೇ ಭವಿತಾ ಸತ್ಯಂ ಮಹಾಜ್ಞಾನೀ ಸುತೇತಿ ಚ ।
ವರಂ ದತ್ವಾ ತ್ವಮಗಮೋ ಗೋಲೋಕಂ ಮಮ ಸನ್ನಿಧಿಂ ॥ ೫೯ ॥

ಕಾಲೇನ ಚ ಸುತಸ್ತಸ್ಯ ಶಿವಾಂಶೇನ ಬಭೂವ ಹ ।
ಬ್ರಹ್ಮಿಷ್ಠೋ ದೇವಲೋ ನಾಮ್ನಾ ಕಂದರ್ಪಸಮಸುಂದರಃ ॥ ೬೦ ॥

---

೫೬. ಅಲ್ಲದೆ ಸ್ತೋತ್ರವನ್ನೂ, ಪೂಜಾ ವಿಧಾನವನ್ನೂ, ಸಂಸಾರವಿಜಯ ವೆಂಬ ಅತ್ಯದ್ಭುತವಾದ ಕವಚವನ್ನೂ ಉಪದೇಶಿಸಿ ಪುರಶ್ಚರಣೆಮಾಡುವ ವಿಧಾನ ವನ್ನು ತಿಳಿಸಿದನು

೫೭. 'ಈ ರೀತಿ ಮಾಡಿದರೆ ಇಷ್ಟದೇವತೆಯು ಪ್ರತ್ಯಕ್ಷಳಾಗಿ ವರವನ್ನು ಕೊಡುವಳು.' ಎಂದು ಹೇಳಿ ಶಂಕರನು ಸುಮ್ಮನಾದನು. ಅಸಿತನೂ ಕೂಡ ಶಂಕರನಿಗೆ ವಂದಿಸಿ ಸಂತೋಷದಿಂದ ತೆರಳಿದನು.

೫೮. ಅನಂತರ ಅಸಿತನು ಆ ಪರಮಮಂತ್ರವನ್ನು ನೂರು ವರ್ಷಗಳಕಾಲ ಜಪಿಸಿದನು. ಎಲೌ ಸಾಧ್ವೀಮಣಿಯೇ, ಆಗ ನೀನು ಪ್ರತ್ಯಕ್ಷಳಾಗಿ ಅವನಿಗೆ ಅಭೀಪ್ಸಿತವಾದ ವರವನ್ನು ಅನುಗ್ರಹಿಸಿದೆ.

೫೯. 'ಮಹಾಜ್ಞಾನಿಯೊಬ್ಬನು ನಿನ್ನ ಪುತ್ರನಾಗಿ ಜನಿಸುವನು.' ಎಂದು ಅನುಗ್ರಹಿಸಿ ನೀನು ಗೋಲೋಕದಲ್ಲಿದ್ದ ನನ್ನ ಸಮೀಪಕ್ಕೆ ಬರುವವಳಾದೆ.

೬೦. ಕಾಲಕ್ರಮದಲ್ಲಿ ಆ ಅಸಿತನಿಗೆ ಶಿವನ ಅಂಶದಿಂದ ಸುತನೊಬ್ಬನು ಜನಿಸಿದನು. ಮನ್ಮಥನಂತೆ ಸುಂದರನೂ, ಬ್ರಹ್ಮಪರಾಯಣನೂ ಆದ ಅವನು ದೇವಲನೆಂದು ವಿಖ್ಯಾತನಾದನು.

ಸುಯಜ್ಞನೃಪತೇಃ ಕನ್ಯಾಂ ರತ್ನಮಾಲಾವತೀಂ ಮುದಾ ।
ತಾಂ ಸುದತೀಂ ವಿವಾಹೇನ ಜಗೃಹೇ ಸರ್ವಮೋಹಿನೀಂ ॥ ೬೧ ॥

ಸ್ಥಾನೇಸ್ಥಾನೇ ಚ ರಹಸಿ ಶತವರ್ಷಂ ತಯಾ ಸಹ ।
ಸ ರೇಮೇ ನಿಪುಣಃ ಶ್ರೇಷ್ಠಃ ಸ್ತ್ರೀಣಾಂ ರಮಣಕರ್ಮಣಿ ॥ ೬೨ ॥

ಕಾಲಾಂತರೇ ಸ ವಿರತೋ ಬಭೂವ ಮುನಿಪುಂಗವಃ ।
ಸುಖಂ ಸರ್ವಂ ಪರಿತ್ಯಜ್ಯ ಧರ್ಮಿಷ್ಠಃ ಶ್ರೀಹರಿಂ ಸ್ಮರನ್ ॥ ೬೩ ॥

ಉತ್ಥಾಯ ರಾತ್ರೌ ಶಯನಾತ್ ವಿರಕ್ತಶ್ಚ ತಪೋಧನಃ ।
ಸ ಯಯೌ ತಪಸೇ ಕಾಂತೇ ಗಂಧಮಾದನಪರ್ವತೇ ॥ ೬೪ ॥

ನಿದ್ರಾಂ ತ್ಯಕ್ತ್ವಾ ಚ ತತ್ಕಾಂತಾ ನ ದೃಷ್ಟ್ವಾ ಸ್ವಾಮಿನಂ ಸತೀ ।
ವಿಲಲಾಪ ಭೃಶಂ ಶೋಕಾತ್ ಪ್ರದಗ್ಧಾ ವಿರಹಾಗ್ನಿನಾ ॥ ೬೫ ॥

---

೬೧. ಆ ದೇವಲನು ಸುಯಜ್ಞನೆಂಬ ರಾಜನ ಮಗಳೂ, ಸರ್ವಾಂಗ ಸುಂದರಿಯೂ, ಜಗನ್ಮೋಹಿನಿಯೂ ಆದ ರತ್ನಮಾಲಾವತಿ ಎಂಬ ಕನ್ಯೆಯನ್ನು ವಿವಾಹ ಮಾಡಿಕೊಂಡನು.

೬೨. ಕಾಮುಕಲಾಚತುರನಾದ ಆ ದೇವಲನು ಆ ರತ್ನಮಾಲಾವತಿಯೊಡನೆ ನೂರು ವರ್ಷಗಳಕಾಲ ರಮ್ಯವಾದ ಸ್ಥಳಗಳಲ್ಲಿ ಗೋಪ್ಯವಾಗಿ ಮನಬಂದಂತೆ ಕ್ರೀಡಿಸಿದನು.

೬೩. ಕೆಲವು ಕಾಲಕಳೆದನಂತರ ಆ ಮುನಿವರ್ಯನು (ದೇವಲ) ಕಾಮ ಸುಖದ ಆಶೆಯನ್ನು ತೊರೆದು ಧರ್ಮಪರಾಯಣನಾಗಿ ಶ್ರೀ ಹರಿಯ ಸ್ಮರಣೆಯಲ್ಲಿ ನಿರತನಾದನು.

೬೪. ಎಲೌ ಕಾಂತೆಯೇ, ಈ ರೀತಿ ಕಾಮಸುಖದಲ್ಲಿ ವಿರಕ್ತನಾದ ಆ ತಪೋಧನನು ಒಂದು ರಾತ್ರಿ ಹಾಸಿಗೆಯಿಂದೆದ್ದು ಹೊರಟು ತಪಸ್ಸಿಗಾಗಿ ಗಂಧಮಾದನ ಪರ್ವತದ ಗುಹೆಗೆ ತೆರಳಿದನು.

೬೫. ನಿದ್ರೆಯಿಂದೆಚ್ಚೆತ್ತ ಅವನ ಪತ್ನಿಯಾದರೋ ಸಮೀಪದಲ್ಲಿ ಮಲಗಿದ್ದ ತನ್ನ ಪತಿಯನ್ನು ಕಾಣದೆ ವಿರಹಾಗ್ನಿದಗ್ಧಳಾಗಿ ಬಹಳ ಗೋಳಾಡಿದಳು.

ಉತ್ತಿಷ್ಠಂತೀ ನಿರ್ವಿಶಂತೀ ರುರೋದೋಚ್ಚೈರ್ಮುಹುರ್ಮುಹುಃ ।
ತಪ್ತಪಾತ್ರೇ ಯಥಾ ಧಾನ್ಯಂ ಬಭೂವ ತನ್ಮನಸ್ತದಾ ॥ ೧೬ ॥

ಆಹಾರಂ ಚ ಪರಿತ್ಯಜ್ಯ ಪ್ರಾಣಾಂಸ್ತತ್ಯಾಜ ಸುಂದರೀ ।
ಚಕಾರ ತತ್ಸುತಸ್ತಸ್ಯಾಃ ಕರ್ಮ ನಿರ್ಹರಣಾದಿಕಂ ॥ ೧೭ ॥

ತಪಶ್ಚಕಾರ ಸ ಮುನಿರ್ಗಂಧಮಾದನಗಹ್ವರೇ ।
ದಿವ್ಯಂ ವರ್ಷಸಹಸ್ರಂ ಚ ಮಮ ಭಕ್ತೋ ಜಿತೇಂದ್ರಿಯಃ ॥ ೧೮ ॥

ತಂ ದದರ್ಶ ಹ ದೈವೇನ ರಂಭಾ ಶೃಂಗಾರಲೋಲುಪಾ ।
ಅತೀವ ಸುಂದರಂ ಶಾಂತಂ ಕಂದರ್ಪಮಿವ ಸುಂದರಂ ॥ ೧೯ ॥

ಸಾ ಚ ತಂ ಕಥಯಾಮಾಸ ನಿರ್ಜನೇ ಸಮುಪಸ್ಥಿತಾ ।
ವಿಧಾಯ ವೇಷಂ ಯತ್ನೇನ ತ್ರೈಲೋಕ್ಯಚಿತ್ತಮೋಹಿನೀ ॥ ೨೦ ॥

---

೧೬. ಕ್ಷಣಕ್ಷಣಕ್ಕೂ ಏಳುತ್ತಾ ಬೀಳುತ್ತಾ ಗಟ್ಟಿಯಾಗಿ ಅಳಲಾರಂಭಿಸಿದಳು ಆಗ ಅವಳ ಮನಸ್ಸು ಕಾದ ಓಡಿನಲ್ಲಿರುವ ಕಾಳಿನಂತೆ ಚಂಚಲವಾಗಿ ಕುದಿಯುತ್ತಿತ್ತು.

೧೭. ಆ ಪತಿವ್ರತೆಯು ಆಹಾರವನ್ನು ಬಿಟ್ಟು ಕೃಶಳಾಗಿ ಪ್ರಾಣತ್ಯಾಗ ಮಾಡಿದಳು. ಆಗ ಅವಳ ಪುತ್ರನು ಅವಳ ಉತ್ತರಕ್ರಿಯಾದಿಗಳನ್ನು ನೆರವೇರಿಸಿದನು.

೧೮. ಇತ್ತ ನನ್ನ ಭಕ್ತನಾದ ಆ ದೇವಲ ಮುನಿಯು ಜಿತೇಂದ್ರಿಯನಾಗಿ ಆ ಗಂಧಮಾದನ ಗುಹೆಯಲ್ಲಿ ದಿವ್ಯಸಹಸ್ರ ವರ್ಷಗಳ ಕಾಲ ತಪಸ್ಸುಮಾಡಿದನು.

೧೯. ಹೀಗಿರುವಾಗ ಒಮ್ಮೆ ಶೃಂಗಾರಲೋಲುಪಳಾದ ರಂಭೆಯು ಅತ್ಯಂತ ಶಾಂತನೂ, ಮನ್ಮಥನಂತೆ ಸುಂದರನೂ ಆದ ಆ ದೇವಲನನ್ನು ದೈವಯೋಗದಿಂದ ನೋಡಿದಳು.

೨೦. ಕೂಡಲೇ ತ್ರಿಲೋಕಮೋಹಕವಾದ ದಿವ್ಯವೇಷವನ್ನು ಕಲ್ಪಿಸಿಕೊಂಡು ನಿರ್ಜನವಾದ ಆ ಸ್ಥಳಕ್ಕೆ ಹೋಗಿ ದೇವಲನನ್ನು ಕುರಿತು ಮುಂದಿನ ಕೆಲವು ಮಾತು ಗಳನ್ನು ಹೇಳಿದಳು

|| ರಂಭೋವಾಚ ||

ನಿಬೋಧ ಸಾಧೋ ಮದ್ವಾಕ್ಯಂ ಕಾಮಿನೀನಾಂ ಮನೋಹರಂ |
ತ್ಯಕ್ತ್ವಾ ಕಠೋರಂ ರಹಸಿ ಭಜಂಮಾಂ ಸುಖದಾಯಿಕಾಂ || ೭೧ ||

ತ್ವಂ ವರೇಷು ವರಃ ಪೃಥ್ವ್ಯಾಂ ವರಾರೋಹಾ ಸ್ವಯಂವರಾ |
ವಿದಗ್ಧಯಾ ವಿದಗ್ಧಸ್ಯ ದುರ್ಲಭೋ ನವ ಸಂಗಮಃ || ೭೨ ||

ಯಜ್ಞಂ ಕುರ್ವಂತಿ ಭೂಪಾಲಾ ಭಾರತೇ ಸ್ವರ್ಗಹೇತುಕಂ |
ಸ್ವರ್ಗಭೋಗನಿಮಿತ್ತಂ ಚ ಭೋಗಸಾರಾ ವಯಂ ಮುನೇ || ೭೩ ||

ಸ್ತನಯೋರ್ಯುಗ್ಮಮೂರ್ವೋರ್ನೇ ಸುಂದರಂ ಮುಖಪಂಕಜಂ |
ಹಾಸ್ಯಭ್ರೂಭಂಗಸಹಿತಂ ದೃಷ್ಟ್ವಾ ಕೋ ನ ಲಭೇತ್ ಸುಖಂ || ೭೪ ||

---

೭೧ ರಂಭೆ—ಎಲೈ ಸಾಧುವರ್ಯನೇ, ನನ್ನ ಮನೋಹರವಾದ ಮಾತು ಗಳನ್ನು ಆಲಿಸು. ಈ ಕಠೋರವಾದ ತಪಸ್ಸನ್ನು ಬಿಟ್ಟು ಸ್ತ್ರೀಯರೊಳಗೆಲ್ಲ ಅತ್ಯಂತ ಸುಖದಾಯಕಳಾದ ನನ್ನನ್ನು ಹೊಂದಿ ಏಕಾಂತದಲ್ಲಿ ಸುಖಪಡು

೭೨. ನೀನು ಪೃಥ್ವಿಯಲ್ಲಿರುವ ಪುರುಷರಲ್ಲೆಲ್ಲ ಶ್ರೇಷ್ಠನಾದವನು. ನಾನೂ ಕೂಡ ಸ್ವತಃ ವರಿಸಿ ಬಂದಿರುವ ಸುಂದರ ಕಾಮಿನಿಯು. ಪ್ರೌಢಳಾದ ಸ್ತ್ರೀಗೆ ಪ್ರೌಢನಾದ ಪುರುಷನೊಡನೆ ಮೊಟ್ಟಮೊದಲಿನ ಸಮಾಗಮವು ದುರ್ಲಭವಾದುದು.

೭೩. ಭರತಖಂಡದಲ್ಲಿರುವ ರಾಜರೆಲ್ಲರೂ ಸ್ವರ್ಗಪ್ರಾಪ್ತಿಗಾಗಿ ಯಜ್ಞವ ನ್ನಾಚರಿಸುತ್ತಾರೆ. ಎಲೈ ಮುನಿಯೇ, ನಾವು ಸ್ವರ್ಗದ ಸುಖಸರ್ವಸ್ವವನ್ನೂ ಕೊಡುವವರಾಗಿದ್ದೇವೆ

೭೪. ನನ್ನ ವರ್ತುಲಾಕಾರವಾದ ಎರಡುಸ್ತನಗಳನ್ನೂ, ರಂಭಾಸ್ತಂಭ ದಂತಿರುವ ಎರಡು ತೊಡೆಗಳನ್ನೂ, ಮಂದಸ್ಮಿತದಿಂದಲೂ ಭ್ರೂಭಂಗದಿಂದಲೂ ಕೂಡಿದ ಸುಂದರ ಮುಖಕಮಲವನ್ನೂ ನೋಡಿ ಯಾರು ತಾನೇ ಸುಖವನ್ನು ಹೊಂದಲಾರರು ?

ಸ್ತ್ರೀರಸಃ ಸುಖಸಾರಶ್ಚ ಮುನೀನಾಮಭಿವಾಂಛಿತಃ ।
ರಸಿಕಾಸುಖಸಂಭೋಗೋ ನಿರ್ಜನೇ ಚಾತಿದುರ್ಲಭಃ ॥ ೭೫ ॥

ದೇವೋ ವಾ ಮಾನವೋ ವಾಪಿ ಗಂಧರ್ವೋ ವಾಥ ರಾಕ್ಷಸಃ ।
ಸ್ತ್ರೀಸುಖೇಷ್ವಪ್ಯವಿಜ್ಞೋಯೋ ರಂಭಾಯಾ ರತಿವಂಚಿತಃ ॥ ೭೬ ॥

ರಹಸ್ಯುಪಸ್ಥಿತಾಂ ಕಾಂತಾಂ ನ ಭಜೇದ್ಯೋ ಜಿತೇಂದ್ರಿಯಃ ।
ಗಾತ್ರಲೋಮಪ್ರಮಾಣಾಬ್ದಂ ಕುಂಭೀಪಾಕೇ ವಸೇದ್ಧ್ರುವಂ ॥ ೭೭ ॥

ಸತ್ಯಂ ತಸ್ಯಾಶ್ಚ ವಧಭಾಕ್ತಚ್ಛಾಪೇನ ಪ್ರಣಶ್ಯತಿ ।
ವಿಧಾತಾ ಮೋಹಿನೀಶಾಪಾದಪೂಜ್ಯೋ ಭುವನತ್ರಯೇ ॥ ೭೮ ॥

ಯೇನ ತ್ಯಕ್ತೋಪಸ್ಥಿತಾ ತಂ ಯಥಾ ಪಶ್ಯತಿ ಪುಂಶ್ಚಲೀ ।
ಸ್ವಾಮಿಪುತ್ರಸ್ವಬಂಧೂನಾಂ ನ ತಥಾ ಘಾತುಕಂ ರುಷಾ ॥ ೭೯ ॥

---

೭೫ ಸುಖಗಳಲ್ಲಿ ಅತ್ಯುತ್ತಮವಾದ ಸ್ತ್ರೀಸುಖವು ಮುನಿಗಳಿಗೂ ಕೂಡ ಅಭೀಪ್ಸಿತವಾದುದು. ನಿರ್ಜನವಾದ ಸ್ಥಳದಲ್ಲಿ ರಸಿಕಳಾದ ಸ್ತ್ರೀಯೊಡನೆ ಸಂಭೋಗ ಸುಖವನ್ನನುಭವಿಸುವುದು ಸುಲಭಸಾಧ್ಯವಲ್ಲ.

೭೬. ದೇವತೆಯಾಗಲೀ, ಮನುಷ್ಯನಾಗಲೀ, ಗಂಧರ್ವನಾಗಲೀ, ಅಥವಾ ರಾಕ್ಷಸನೇ ಆಗಲಿ ರಂಭೆಯ ರತಿಸುಖವನ್ನನ್ನುಭವಿಸದಿದ್ದರೆ, ಅವನಿಗೆ ಸ್ತ್ರೀಸುಖವೇ ತಿಳಿಯದೆನ್ನಬೇಕಾಗುವುದು.

೭೭. ಯಾರು ಜಿತೇಂದ್ರಿಯನಾಗಿ ಏಕಾಂತಸುಖವನ್ನು ಬಯಸಿ ತಾನಾಗಿ ಬಂದ ಕಾಂತೆಯೊಡನೆ ಉಪಭೋಗಿಸುವುದಿಲ್ಲವೋ, ಅವನು ತನ್ನ ಶರೀರದ ರೋಮಗಳ ಪ್ರಮಾಣದಷ್ಟು ಕಾಲ ಕುಂಭೀಪಾಕವೆಂಬ ನರಕದಲ್ಲಿ ತೊಳಲುವನು.

೭೮. ಅಷ್ಟೇ ಅಲ್ಲದೆ ಆ ಹೆಂಗಸನ್ನು ವಧೆಮಾಡಿದ ಪಾಪಕ್ಕೆ ಗುರಿಯಾಗಿ ಅವಳ ಶಾಪದಿಂದ ನಾಶಹೊಂದುವನು. ಬ್ರಹ್ಮನೂ ಕೂಡ ಮೋಹಿನಿಯ ಶಾಪದಿಂದ ಮೂರು ಲೋಕದಲ್ಲೂ ಅಪೂಜ್ಯನಾಗಿರುವುದು ನಿನಗೆ ತಿಳಿಯದೇ ?

೭೯. ಸ್ವೈರಿಣಿಯಾದ ಹೆಂಗಸು ಯಾರಿಂದ ಪರಿತ್ಯಕ್ತಳಾಗುವಳೋ ಅವನನ್ನು ಕ್ರೂರದೃಷ್ಟಿಯಿಂದ ನೋಡುವಂತೆ, ತನ್ನ ಪತಿ ಪುತ್ರ ಬಾಂಧವರ ಕೊಲೆ ಘಾತಕನನ್ನೂ ಸಹ ನೋಡುವುದಿಲ್ಲ.

ಪರಂ ಪ್ರಿಯಂ ಚ ಸರ್ವೇಷಾಂ ಜಾರಂ ಜಾನಾತಿ ಪುಂಶ್ಚಲೀ ।
ಯದಿ ತೇನ ಪರಿತ್ಯಕ್ತಾ ತಂ ಹಂತುಂ ಸಾ ತು ದಕ್ಷಿಣಾ ॥ ೮೦ ॥

ಪುಂಶ್ಚಲೀ ಹಿಂಸ್ರಜಂತುಭ್ಯೋ ನವಘಾತಿಭ್ಯ ಏವ ಚ ।
ದುಷ್ಟಾ ಶಶ್ವದ್ದಯಾಹೀನಾ ದುರಂತಾ ಪ್ರತಿಜನ್ಮನಿ ॥ ೮೧ ॥

ತ್ಯಜ ಧ್ಯಾನಂ ಮುನಿಶ್ರೇಷ್ಠ ಭುಂಕ್ಷ್ವೇದಂ ತಪಸಃ ಫಲಂ ।
ರಹಸ್ಯುಪಸ್ಥಿತಾಂ ಮಾಂ ಚ ಗೃಹೀತ್ವಾ ಸುಚಿರಂ ಸುಖಂ ೮೨

ಸ ರಂಭಾವಚನಂ ಶ್ರುತ್ವಾ ತಾಮುವಾಚ ಭಯಾಕುಲಃ ।
ಹಿತಂ ತಥ್ಯಂ ನೀತಿಸಾರಂ ಪರಿಣಾಮಸುಖಾವಹಂ ॥ ೮೩ ॥

---

೮೦. ಪುಂಶ್ಚಲಿಯು ಎಲ್ಲರಿಗಿಂತಲೂ ಜಾರನನ್ನು ಪ್ರಿಯತಮನೆಂದು ತಿಳಿಯುತ್ತಾಳೆ. ಅವನಿಂದ ಅವಳು ಪರಿತ್ಯಕ್ತಳಾದರೆ ಅವನನ್ನು ಕೊಲ್ಲುವುದಕ್ಕೂ ಅವಳು ಸಮರ್ಥಳಾಗಿರುವಳು.

೮೧. ಕುಲಟೆಯು ಘಾತುಕ ಮೃಗಗಳಿಗಿಂತಲೂ ದುಷ್ಟಳೂ, ದಯಾಹೀನಳೂ ಆಗಿರುವಳು. ಅವಳು ಕುಪಿತಳಾದರೆ ಪ್ರತಿ ಜನ್ಮದಲ್ಲಿಯೂ ದುಷ್ಪರಿಣಾಮಕಾರಿಣಿಯಾಗುವಳು.

೮೨. ಆದುದರಿಂದ ಎಲೈ ಮುನಿವರ್ಯನೇ, ನಿನ್ನ ಧ್ಯಾನಭಕ್ತಿಯನ್ನು ತೊರೆದು ಬಯಸಿಬಂದಿರುವ ನನ್ನೊಡನೆ ಏಕಾಂತಸುಖವನ್ನು ಚಿರಕಾಲ ಅನುಭವಿಸಿ ನಿನ್ನ ತಪಸ್ಸಿನ ಫಲವನ್ನು ಹೊಂದು

೮೩. ಈ ರೀತಿಯಾದ ರಂಭೆಯ ಮಾತುಗಳನ್ನು ಕೇಳಿ ಭಯಭ್ರಾಂತನಾದ ಆ ದೇವಲನು ಹಿತವೂ, ಸತ್ಯವೂ, ನೀತಿಯುತವೂ, ಪರಿಣಾಮ ಸುಖಕರವೂ ಆದ ಕೆಲವು ಮಾತುಗಳನ್ನಾಡಿದನು.

|| ದೇವಲ ಉವಾಚ ||

ಶೃಣು ರಂಭೇ ಪ್ರವಕ್ಷ್ಯಾಮಿ ವೇದಸಾರಂ ಪರಂ ವಚಃ ।
ಕುಲಧರ್ಮೋಚಿತಂ ಸತ್ಯಂ ಬ್ರಾಹ್ಮಣಾನಾಂ ತಪಸ್ವಿನಾಂ || ೮೪ ||

ಧರ್ಮೋऽಯಂ ಯುಕ್ತಕಾಲೇ ಚ ಸ್ವಯೋಷಿತಿ ತತೋ ದ್ವಿಜಃ ।
ಸರ್ವತ್ರ ಪೂಜಿತಃ ಶಶ್ವದಿಹ ಲೋಕೇ ಪರತ್ರ ಚ || ೮೫ ||

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯೋ ಯೋ ರತಃ ಪರಯೋಷಿತಿ ।
ಯಾತಿ ತಸ್ಯಾऽಪೂಜಿತಸ್ಯ ರುಷ್ಟಾ ಲಕ್ಷ್ಮೀರ್ಗೃಹಾದಪಿ || ೮೬ ||

ಇಹಾತಿನಿಂದ್ಯಃ ಸರ್ವತ್ರ ನಾಧಿಕಾರೀ ಸ್ವಕರ್ಮಸು ।
ಪರತ್ರೈವಾಂಧಕೂಪೇ ಚ ಯಾವದ್ವರ್ಷಶತಂ ವಸೇತ್ || ೮೭ ||

---

೮೪. ದೇವಲಮಹರ್ಷಿ—ಎಲೌ ರಂಭೆಯೇ, ವೇದಸಾರವೂ ತಪಸ್ವಿಗಳಾದ ಬ್ರಾಹ್ಮಣರ ಕುಲಧರ್ಮಕ್ಕೆ ಉಚಿತವೂ, ಸತ್ಯವೂ ಆದ ಕೆಲವು ಶ್ರೇಷ್ಠ ನುಡಿಗಳನ್ನು ಹೇಳುತ್ತೇನೆ ಅವಧರಿಸು.

೮೫. ದ್ವಿಜನಾದವನು ಯೋಗ್ಯವಾದ ತಿಥಿ, ವಾರ, ನಕ್ಷತ್ರಗಳಲ್ಲಿ ತನ್ನ ಪತ್ನಿಯೊಡನೆ ರಮಿಸುವುದು ಧರ್ಮವೆನಿಸುವುದು. ಅವನು ಇಹಪರಗಳೆರಡರಲ್ಲಿಯೂ ಸರ್ವದಾ ಪೂಜ್ಯನೆನಿಸುವನು.

೮೬. ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಪರಸ್ತ್ರೀಯಲ್ಲಿ ಅನುರಕ್ತನಾದರೆ, ಗೌರವಕ್ಕೆ ಅನರ್ಹನಾದ ಆ ನೀಚನ ಮನೆಯಿಂದ ಲಕ್ಷ್ಮಿಯು ಕುಪಿತಳಾಗಿ ದೂರಹೋಗುವಳು.

೮೭. ನಿಂದೆಗೆ ಅರ್ಹನಾದ ಆ ಪಾಪಿಯು ಇಹಲೋಕದಲ್ಲಿ ಸ್ವಕರ್ಮಕ್ಕೂ ಅನಧಿಕಾರಿಯಾಗುವುದಲ್ಲದೆ ಪರಲೋಕದ ಅಂಧಕೂಪವೆಂಬ ನರಕದಲ್ಲಿ ನೂರು ವರ್ಷಗಳವರೆಗೆ ತೊಳಲುವನು.

ಗಾತ್ರಹ್ಯಾ ಚೋಪಸ್ಥಿತಾ ಸ್ತ್ರೀ ಚ ಗೃಹಿಣಾ ನ ತಪಸ್ವಿನಾ ।
ತ್ಯಾಗೇ ದೋಷಃ ಕಾಮಿನೀನಾಂ ಶಾಪಭಾಕ್ಪಾಪಭಾಗ್ಗೃಹೀ ॥ ೮೮ ॥

ಬ್ರಹ್ಮಾ ಜಗದ್ವಿಧಾತಾಪಿ ನ ವಿರಕ್ತಃ ಕಲತ್ರವಾನ್ ।
ತ್ಯಾಗೇ ದೋಷಸ್ತತ್ಕದಾಚಿನ್ನಾಸ್ಮಾಕಂ ತ್ಯಕ್ತಯೋಷಿತಾಂ ॥ ೮೯ ॥

ಸ್ವಭಾರ್ಯಾಂ ಚ ಪರಿತ್ಯಜ್ಯ ಯೋ ಗೃಹ್ಣಾತಿ ಪರಸ್ತ್ರಿಯಂ ।
ಯತೋ ಧನಾಯುಷಾಂ ಹಾನಿಃ ಭವೇಜ್ಜೀವನ್ಮೃತಸ್ಯ ಚ ॥ ೯೦ ॥

ಭುವಿ ನಾಸ್ತಿ ಯಶೋ ಯಸ್ಯ ಜೀವನಂ ತಸ್ಯ ನಿಷ್ಫಲಂ ।
ಸುಸಂಪದಾ ಕಿಂ ರಾಜ್ಯೇನ ಸುಖೇನ ಚ ತಪಸ್ವಿನಃ ॥ ೯೧ ॥

ನಿಷ್ಕಾಮೇನ ಚ ವೃದ್ಧೇನ ಮಯಾ ಕಿಂ ತೇ ಪ್ರಯೋಜನಂ ।
ಸುವೇಷಂ ಸುಂದರಂ ಮಾತರ್ಯುವಾನಂ ಪಶ್ಯ ಸುಂದರಿ ॥ ೯೨ ॥

---

೮೮. ತಾನಾಗಿ ಕಾಮಿಸಿ ಬಂದ ಸ್ತ್ರೀಯನ್ನು ಗೃಹಸ್ಥನು ಸ್ವೀಕರಿಸಬಹುದೇ ಹೊರತು ತಪಸ್ವಿಯಾದವನು ಸ್ವೀಕರಿಸಕೂಡದು. ಅಂಥ ಸ್ತ್ರೀಯನ್ನು ಗೃಹಸ್ಥನು ತ್ಯಾಗಮಾಡುವುದು ತಪ್ಪು. ಹಾಗೆಮಾಡಿದರೆ ಆ ಸ್ತ್ರೀಯರ ಶಾಪಕ್ಕೂ ಮತ್ತು ಪಾಪಕ್ಕೂ ಆ ಗೃಹಸ್ಥನು ಗುರಿಯಾಗುವನು.

೮೯. ಜಗತ್ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನೂ ಕೂಡ ವಿರಕ್ತನಲ್ಲ ಪತ್ನೀವಂತನಾಗಿದ್ದಾನೆ. ಸ್ತ್ರೀಯರನ್ನೇ ತ್ಯಾಗಮಾಡಿರುವ ನಮ್ಮಂಥವರಿಗೆ ನಿಮ್ಮಂಥವರನ್ನು ತಿರಸ್ಕರಿಸಿದರೆ ದೋಷವೇನೂ ಇಲ್ಲ.

೯೦. ತನ್ನ ಧರ್ಮಪತ್ನಿಯನ್ನು ಬಿಟ್ಟು ಪರಸ್ತ್ರೀಯನ್ನು ಸ್ವೀಕರಿಸುವವನು ಕೀರ್ತಿ, ಧನ ಮತ್ತು ಆಯುಸ್ಸನ್ನು ಕಳೆದುಕೊಂಡು ಜೀವನ್ಮೃತನಾಗಿ ಬಾಳುವನು.

೯೧. ಪ್ರಪಂಚದಲ್ಲಿ ಯಾರು ಸತ್ಕೀರ್ತಿಯನ್ನು ಗಳಿಸಿರುವುದಿಲ್ಲವೋ ಅವರ ಜೀವನವು ನಿಷ್ಫಲವೆನಿಸುವುದು. ತಪಸ್ವಿಯಾದವನಿಗೆ ಸಂಪತ್ಸಮೃದ್ಧವಾದ ರಾಜ್ಯದಿಂದಾಗಲೀ, ಸುಖದಿಂದಾಗಲೀ ಆಗಬೇಕಾದುದೇನು ?

೯೨. ಕಾಮರಹಿತನೂ, ವೃದ್ಧನೂ ಆದ ನನ್ನಿಂದ ನಿನಗೇನು ಪ್ರಯೋಜನ ಎಲೌ ಮಾತೆಯೇ, ಸುಂದರಿಯಾದ ನೀನು ಸುವೇಷಭೂಷಿತನೂ, ಸುಂದರನೂ ಆದ ಯುವಕನನ್ನು ಹುಡುಕಿಕೊಂಡು ಹೋಗು.

ಇತ್ಯೇವಂ ವಚನಂ ಶ್ರುತ್ವಾ ಚುಕೋಪಾಪ್ಸರಸಾಂ ವರಾ ।
ಉವಾಚ ಭೂಯೋ ವಾಕ್ಯಂ ತಂ ತ್ರಸ್ತಾ ಪ್ರಸ್ಫುರಿತಾಧರಾ ॥ ೯೩ ॥

॥ ರಂಭೋವಾಚ ॥

ಚಾರುಚಂಪಕವರ್ಣಾಭಃ ಕಂದರ್ಪಸಮಸುಂದರಃ ।
ತಪಃ ಪ್ರಭಾವಾತ್ ಸಶ್ರೀಕಃ ಸುವೇಷಃ ಸಂಮತಃ ಸ್ತ್ರಿಯಾಃ ॥ ೯೪ ॥

ತ್ವಯಾ ವಿನಾನ್ಯಂ ಕಂ ಯಾಮಿ ಕೋ ವಾಸ್ತಿ ತ್ವತ್ಪರಃ ಪುಮಾನ್ ।
ಪುಂಶ್ಚಲೀ ತ್ವಾಂ ಪರಿತ್ಯಜ್ಯ ಕಾ ಜೀವತಿ ಸ್ಮರಾತುರಾ ॥ ೯೫ ॥

ಶೀಘ್ರಂ ಮಾಂ ಭಜ ವಿಪ್ರೇಂದ್ರ ದಗ್ಧಾಂ ಕಾಮಾಗ್ನಿನಾ ಸದಾ ।
ಕಾಮೋ ನಶ್ಯತಿ ಮಾಂ ತ್ವತ್ತೋ ಯಥಾ ರಂಭಾಂ ಮತಂಗಜಃ ॥ ೯೬ ॥

೯೩. ಈ ರೀತಿಯಾದ ದೇವಲನ ಮಾತನ್ನು ಕೇಳಿ ಅಪ್ಸರಸೆಯರಲ್ಲಿ ಶ್ರೇಷ್ಠಳಾದ ಆ ರಂಭೆಯು ಕೋಪಗೊಂಡಳು. ಭಯದಿಂದ ನಡಗುತ್ತಿರುವ ತುಟಿಗಳುಳ್ಳವಳಾಗಿ ಅವನನ್ನು ಕುರಿತು ಮತ್ತೊಮ್ಮೆ ಕೆಲವು ಮಾತುಗಳನ್ನಾಡಿದಳು.

೯೪. ರಂಭೆ—ಸುಂದರವಾದ ಸಂಪಿಗೆಯ ವರ್ಣದಿಂದ ಶೋಭಿಸುವ ನೀನು ಮನ್ಮಥನಂತೆ ಸುಂದರನಾಗಿದ್ದೀಯೆ. ತಪೋಮಹಿಮೆಯಿಂದ ತೇಜಸ್ವಿಯೂ ಸುವೇಷಾಲಂಕೃತನೂ ಆದ ನೀನು ಸ್ತ್ರೀಯರಿಗೆ ಪ್ರಿಯನಾಗಿದ್ದೀಯೆ.

೯೫. ನಿನ್ನನ್ನು ಬಿಟ್ಟು ನಾನು ಮತ್ತ್ಯಾರಲ್ಲಿಗೆ ಹೋಗಲಿ? ನಿನಗಿಂತ ಶ್ರೇಷ್ಠನಾದ ಪುರುಷನು ಮತ್ತ್ಯಾವನಿರುವನು? ಮದನಪೀಡಿತಳಾದ ಯಾವ ವೇಶ್ಯೆಯು ತಾನೇ ನಿನ್ನ ಸಂಗವಿಲ್ಲದೆ ಜೀವಿಸಬಲ್ಲಳು?

೯೬. ಆದುದರಿಂದ ಎಲೈ ವಿಪ್ರೇಂದ್ರನೇ, ಕಾಮಾಗ್ನಿಯಿಂದ ದಗ್ಧಳಾಗುತ್ತಿರುವ ನನ್ನನ್ನು ಜಾಗ್ರತೆ ಸ್ವೀಕರಿಸು. ಮದಿಸಿದ ಆನೆಯು ಬಾಳೆಯ ಕಂಬವನ್ನು ಮುರಿಯುವಂತೆ ಮನ್ಮಥನು ನಿನ್ನ ಮೂಲಕ ನನ್ನನ್ನು ನಾಶಗೊಳಿಸುತ್ತಿದ್ದಾನೆ. (ಶ್ಲೋಕದಲ್ಲಿ 'ನಾಶಯತಿ' ಎಂದಿರಬೇಕು.)

ನ ಚೇಚ್ಛಾಪಂ ಪ್ರದಾಸ್ಯಾಮಿ ವದ ವೇದವಿದಾಂ ವರ ।
ಮಾಂ ವಾ ದಾರುಣಶಾಪಂ ವಾ ಸತ್ವರಂ ಗ್ರಹಣಂ ಕುರು　　॥ ೯೭ ॥

ದಗ್ಧಾಃ ಪ್ರಾಣಾ ಮನೋ ದಗ್ಧಂ ಸ್ವಾತ್ಮಾ ವಾ ಇತಿ ಸಂತತಂ ।
ನವಶೃಂಗಾರಪೀಯೂಷಪಾನನಿರ್ವಾಣತಾಂ ವ್ರಜೇತ್　　॥ ೯೮ ॥

ಸ್ವಾಂತರ್ದುಃಖೇನ ದುಃಖಾರ್ತೋ ಯೋ ಯಂ ಶಪತಿ ನಿಶ್ಚಿತಂ ।
ತಂ ಶಾಪಂ ಖಂಡಿತುಂ ಶಕ್ತೋ ನ ವಿಧಾತಾ ಜಗತ್ಪತಿಃ　　॥ ೯೯ ॥

ದ್ವಿಜೋ ರಂಭಾವಚಃ ಶ್ರುತ್ವಾ ಬಭೂವ ಧ್ಯಾನತತ್ಪರಃ ।
ನೋವಾಚ ಕಿಂಚಿನ್ಮೌನಸ್ಥಃ ಸಾ ತಂ ಕೋಪಾಚ್ಛಶಾಪ ಹ　　॥ ೧೦೦ ॥

---

೯೭. ವೇದಜ್ಞರಲ್ಲಿ ಶ್ರೇಷ್ಠನಾದ ಎಲೈ ವಿಪ್ರೇಂದ್ರನೇ ನೀನು ನನ್ನನ್ನು ಸ್ವೀಕರಿಸದಿದ್ದರೆ ನಿನಗೆ ಶಾಪ ಕೊಡುತ್ತೇನೆ. ನನ್ನನ್ನಾಗಲೀ ನನ್ನ ಶಾಪವನ್ನಾಗಲೀ ಸ್ವೀಕರಿಸಲು ಜಾಗ್ರತೆ ಸಿದ್ಧನಾಗು.

೯೮. ನನ್ನ ಪಂಚಪ್ರಾಣಗಳೂ ಮನಸ್ಸೂ ದಗ್ಧವಾಗಿರುವುದಲ್ಲದೆ ನನ್ನ ಆತ್ಮವು ನವಶೃಂಗಾರರಸವೆಂಬ ಅಮೃತದ ಪಾನವಿಲ್ಲದೆ ನಿರ್ವಾಣಾವಸ್ಥೆಯನ್ನು ಹೊಂದುತ್ತಿದೆ.

೯೯. ಮನೋವ್ಯಥೆಯಿಂದ ಪೀಡಿತನಾದ ಯಾರಾದರೂ ಖಚಿತ ಸಂಕಲ್ಪದಿಂದ ಮತ್ತೊಬ್ಬರನ್ನು ಶಪಿಸಿದರೆ ಆ ಶಾಪವನ್ನು ತಪ್ಪಿಸಲು ಜಗತ್ಪತಿಯಾದ ಬ್ರಹ್ಮನಿಂದಲೂ ಸಾಧ್ಯವಾಗುವುದಿಲ್ಲ.

೧೦೦. ರಂಭೆಯ ಈ ನುಡಿಗಳನ್ನು ಕೇಳಿದ ಆ ಬ್ರಾಹ್ಮಣನು ಧ್ಯಾನಾಸಕ್ತನಾಗಿಯೇ ಇದ್ದುಕೊಂಡು ಮೌನದಿಂದ ಯಾವ ಉತ್ತರವನ್ನೂ ಕೊಡದಿರಲು ಕುಪಿತಳಾದ ಆ ಅಪ್ಸರೆಯು ಅವನನ್ನು ಶಪಿಸಿದಳು.

ಹೇ ವಕ್ರಚಿತ್ತ ತೇ ವಿಪ್ರ ಸರ್ವಾವಯುವವಕ್ರಿಮಂ ।
ಶರೀರಮಂಜನಾಕಾರಂ ರೂಪಯೌವನವರ್ಜಿತಂ ॥ ೧೦೧ ॥

ಅತೀವ ವಿಕೃತಾಕಾರಂ ತ್ರಿಷು ಲೋಕೇಷು ಗರ್ಹಿತಂ ।
ಪುರಾತನಂ ತಪೋ ನಷ್ಟಂ ಸದ್ಯೋ ಭವತು ನಿಶ್ಚಿತಂ ॥ ೧೦೨ ॥

ಇತ್ಯುಕ್ತ್ವಾ ಪುಂಶ್ಚಲೀ ಕಾಮಾತ್ಕಾಮಲೋಕಂ ಜಗಾಮ ಹ ।
ಅಚಿರೇಣ ಮುನೀಂದ್ರಶ್ಚ ನ ದದರ್ಶ ಹರೇಃ ಪದಂ ॥ ೧೦೩ ॥

ಪಾದಾರವಿಂದವಿರಹಾತ್ ಸಮುದ್ವಿಗ್ನೋ ಬಭೂವ ಹ ।
ಸ್ವಾಂಗಂ ಚ ದೃಷ್ಟ್ವಾ ವಿಕೃತಂ ಪೂರ್ವಪುಣ್ಯವಿವರ್ಜಿತಂ ॥ ೧೦೪ ॥

ಕೃತ್ವಾಗ್ನಿಕುಂಡಂ ಶೋಕೇನ ಪ್ರಾಣಾಂಸ್ತ್ಯಕ್ತುಂ ಸಮುದ್ಯತಃ ।
ಮಯಾ ದೃಷ್ಟೋ ವರೋ ದತ್ತೋ ದಿವ್ಯಜ್ಞಾನೇನ ಬೋಧಿತಃ ॥ ೧೦೫ ॥

---

೧೦೧. ವಕ್ರಬುದ್ಧಿಯುಳ್ಳ ಎಲೈ ವಿಪ್ರನೇ, ನಿನ್ನ ಅವಯವಗಳೆಲ್ಲವೂ ವಕ್ರವಾಗಲಿ. ನಿನ್ನ ಶರೀರವು ಅಂಜನದಂತೆ ಕಪ್ಪಾದ ಆಕಾರವನ್ನು ಹೊಂದುವುದಲ್ಲದೆ ಸುಂದರವಾದ ರೂಪ ಮತ್ತು ಯೌವನವನ್ನು ಹೊಂದದಿರಲಿ.

೧೦೨. ಅತ್ಯಂತ ವಿಕಾರವಾದ ನಿನ್ನ ರೂಪು ಮೂರು ಲೋಕಗಳಲ್ಲೂ ನಿಂದಿತವಾಗಲಿ. ನೀನು ಇದುವರೆಗೆ ಗಳಿಸಿರುವ ಪುರಾತನ ತಪಃಸಂಪತ್ತೆಲ್ಲವೂ ಈ ಕೂಡಲೇ ನಾಶವಾಗಿಹೋಗಲಿ.

೧೦೩. ಕಾಮುಕಿಯಾದ ಆ ವೇಶ್ಯೆಯು ಹೀಗೆ ಶಪಿಸಿ ಕಾಮಲೋಕಕ್ಕೆ ತೆರಳಿದಳು. ಕೂಡಲೇ ಧ್ಯಾನಾಸಕ್ತನಾಗಿದ್ದ ಆ ಮುನೀಂದ್ರನಿಗೂ ಸಹ ಶ್ರೀಹರಿಯ ಪಾದದರ್ಶನವು ದುರ್ಲಭವಾಯಿತು.

೧೦೪. ತನ್ನ ಪೂರ್ವಪುಣ್ಯವೆಲ್ಲ ನಶಿಸಿಹೋಗಿ ಶ್ರೀಹರಿಯ ಪಾದಾರವಿಂದಗಳ ವಿರಹವುಂಟಾದುದರಿಂದಲೂ, ತನ್ನ ಅವಯವಗಳು ವಿಕಾರಹೊಂದಿದುದರಿಂದಲೂ ಆ ವಿಪ್ರನು ಚಿಂತಾಕ್ರಾಂತನಾದನು.

೧೦೫. ಅಗ್ನಿಕುಂಡವನ್ನು ಕಲ್ಪಿಸಿಕೊಂಡು ಶೋಕದಿಂದ ಪ್ರಾಣತ್ಯಾಗ ಮಾಡಲು ಸಿದ್ಧನಾಗಿದ್ದ ಆ ಮುನಿಯನ್ನು ನೋಡಿ ನಾನು ಅವನಿಗೆ ದಿವ್ಯಜ್ಞಾನವನ್ನು ಬೋಧಿಸಿ ವರವನ್ನು ಕೊಟ್ಟೆನು.

ಆಶ್ವಾಸಶ್ಚ ಕೃತಃ ಪ್ರೀತ್ಯಾ ತತಃ ಶಾಂತೋ ಬಭೂವ ಹ |
ಅಂಗಾನ್ಯಷ್ಟೌ ಚ ವಕ್ರಾಣಿ ದೃಷ್ಟ್ವಾ ತೂರ್ಣಂ ಮಹಾಮುನೇಃ || ೧೦೬ ||

ಅಷ್ಟಾವಕ್ರೇತಿ ತನ್ನಾಮ ಕೌತುಕೇನ ಮಯಾ ಕೃತಂ |
ಮದ್ವಾಕ್ಯಾನ್ಮಲಯದ್ರೋಣೀಮಯಮಾಗಮ್ಯ ಸತ್ವರಃ || ೧೦೭ ||

ಷಷ್ಟಿವರ್ಷಸಹಸ್ರಾಣಿ ಚಕಾರ ಪರಮಂ ತಪಃ |
ತಪೋವಸಾನೇ ಮದ್ಭಕ್ತೋ ಮಯಾ ಯುಕ್ತಃ ಕೃತಃ ಪ್ರಿಯೇ || ೧೦೮ ||

ಸರ್ವಸ್ಮಿನ್ ಪ್ರಲಯೇ ನಷ್ಟೇ ನ ಮದ್ಭಕ್ತಃ ಪ್ರಣಶ್ಯತಿ |
ಸುಚಿರೇಣೈವ ತಪಸಾ ಜ್ವಲತಾ ಜಠರಾಗ್ನಿನಾ || ೧೦೯ ||

ತ್ಯಕ್ತಾಹಾರಸ್ಯಾಂತರಂ ಚ ಭಸ್ಮಪೂರ್ಣಂ ತತೋ ಮುನೇಃ |
ಆಗತಂ ಮಲಯದ್ರೋಣೀಂ ಮುನಿಹೇತೋರ್ವರಮಪ್ರಿಯೇ || ೧೧೦ ||

ಅಷ್ಟಾವಕ್ರಾಚ್ಚ ಮದ್ಭಕ್ತೋ ನ ಭೂತೋ ನ ಭವಿಷ್ಯತಿ |
ಏವಂ ಭೂತಸ್ತಪೋನಿಷ್ಠಃ ಪ್ರಪೌತ್ರೋ ಬ್ರಹ್ಮಣೋ ಮುನಿಃ || ೧೧೧ ||

೧೦೬–೧೦೮. ಪ್ರೀತಿಯಿಂದ ಅವನನ್ನು ಸಮಾಧಾನಮಾಡಿದನಂತರ ಅವನು ಶಾಂತನಾದನು. ಆ ಮಹಾಮುನಿಯ ಎಂಟು (ಅಷ್ಟ) ಅಂಗಗಳು ವಕ್ರವಾಗಿರುವುದನ್ನು ನೋಡಿ ಕುತೂಹಲದಿಂದ ಕೂಡಿದ ನಾನು ಅವನಿಗೆ ಅಷ್ಟಾವಕ್ರನೆಂದು ಹೆಸರಿಟ್ಟೆನು. ನನ್ನ ಮಾತಿನಂತೆ ಆ ಅಷ್ಟಾವಕ್ರಮುನಿಯು ಮಲಯದ್ರೋಣಿಗೆ ಜಾಗ್ರತೆ ಬಂದು ಅರವತ್ತು ಸಾವಿರವರ್ಷಗಳು ಮಹಾತಪಸ್ಸನ್ನು ಮಾಡಿದನು. ಎಲೌ ಪ್ರಿಯಳೇ, ನನ್ನ ಭಕ್ತನಾದ ಆ ಮುನಿಯು ತಪಸ್ಸು ಮುಗಿದನಂತರ ನನ್ನಲ್ಲಿ ಸೇರಿಕೊಂಡನು.

೧೦೯–೧೧೦. ಪ್ರಲಯದಲ್ಲಿ ಜಗತ್ತೆಲ್ಲವೂ ನಾಶವಾದರೂ ನನ್ನ ಭಕ್ತನು ನಾಶವಾಗುವುದಿಲ್ಲ. ಬಹುಕಾಲದ ತಪಸ್ಸಿನ ಫಲವಾಗಿ ಉರಿಯುತ್ತಿರುವ ಜಾಠರಾಗ್ನಿಯಿಂದ ಆಹಾರವನ್ನು ತ್ಯಜಿಸಿದ್ದ ಆ ಮುನಿಯ ಅಂತರಂಗವೆಲ್ಲವೂ ಭಸ್ಮಮಯವಾಯಿತು. ಎಲೌ ಪ್ರಿಯಳೇ, ಈ ಮುನಿಯನ್ನು ಉದ್ಧರಿಸಲೋಸುಗ ನಾನು ಮಲಯದ್ರೋಣಿಗೆ ಬಂದೆನು.

೧೧೧. ಅಷ್ಟಾವಕ್ರನಂತಹ ನನ್ನ ಭಕ್ತನು ಹಿಂದೆಯೂ ಇರಲಿಲ್ಲ, ಮುಂದೆಯೂ ಇರಲಾರನು. ಈ ರೀತಿ ತಪೋನಿಷ್ಠನಾದ ಈ ಮುನಿಯು ಬ್ರಹ್ಮನ ಪ್ರಪೌತ್ರ (ಮೊಮ್ಮಗನ ಮಗ) ನಾಗಬೇಕು.

ನಿಷ್ಕಲಃ ಪುಂಶ್ಚಲೀಶಾಪಾತ್ ಬ್ರಹ್ಮಾಽಪೂಜ್ಯೋ ಯಥಾ ಪುರಾ ।
ಸುಖದಂ ಪುಣ್ಯದಂ ಗೂಢಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೧೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನರನಾರಾಯಣಸಂವಾದೇ ರಾಧಾಪ್ರಶ್ನೇ
ತ್ರಿಂಶತ್ತಮೋಽಧ್ಯಾಯಃ

---

೧೧೨. ಪೂರ್ವದಲ್ಲಿ ಬ್ರಹ್ಮನು ಮೋಹಿನಿಯ ಶಾಪದಿಂದ ಅಪೂಜ್ಯನಾಗಿದ್ದಂತೆ ವೇಶ್ಯೆಯಾದ ರಂಭೆಯ ಶಾಪದಿಂದ ಅಪೂಜ್ಯನೆನಿಸಿದ್ದ ಈ ದೇವಲ ಮಹರ್ಷಿಯೂ ಈಗ ಪೂಜ್ಯನಾದನು. ಸುಖಕರವೂ, ಪುಣ್ಯಕರವೂ, ಗೋಪ್ಯವೂ ಆದ ಈ ಕಥೆಯನ್ನು ನಿನಗೆ ಹೇಳಿದೆನು. ಮುಂದೆ ಏನನ್ನು ಕೇಳಲು ನಿನಗೆ ಆಸೆಯಿದೆ ?

ಎಂಬಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಮೂವತ್ತನೆಯ ಅಧ್ಯಾಯವು ಮುಗಿದುದು.

ಮೂವತ್ತನೆಯ ಅಧ್ಯಾಯದ ಸಾರಾಂಶ.

ಶ್ರೀಕೃಷ್ಣನು ಅಷ್ಟಾವಕ್ರಮುನಿಯ ಮೃತಶರೀರವನ್ನು ಅಪ್ಪಿಕೊಂಡು ದುಃಖಿಸಿದನು. ಅರವತ್ತುಸಾವಿರ ವರ್ಷಗಳು ತಪಸ್ಸುಮಾಡಿದ್ದ ಆ ಮುನಿಯ ಶರೀರವೆಲ್ಲ ಭಸ್ಮವಾಗಿದ್ದಿತು. ಆ ಶರೀರವನ್ನು ಶ್ರೀಕೃಷ್ಣನು ಚಿತೆಯ ಮೇಲಿಟ್ಟಾಗ ದೇವ ದುಂದುಭಿಗಳು ಮೊಳಗಿದವು. ಅಂತರಿಕ್ಷದಿಂದ ಪುಷ್ಪವೃಷ್ಟಿಯು ಕರೆಯಿತು. ಕೂಡಲೇ ಗೋಲೋಕದಿಂದ ದಿವ್ಯರಥದಲ್ಲಿ ಪಾರ್ಷದರು ಬಂದು ಆ ಮುನಿಯ ಸೂಕ್ಷ್ಮದೇಹವನ್ನು ಕರೆದೊಯ್ದರು. ಇದನ್ನೆಲ್ಲ ನೋಡಿದ ರಾಧಾದೇವಿಯು ಅಷ್ಟಾವಕ್ರ ಮುನಿಯ ಇತಿಹಾಸವನ್ನು ಹೇಳಬೇಕೆಂದು ಶ್ರೀಕೃಷ್ಣನನ್ನು ಕೇಳಿಕೊಂಡಳು. ಆಗ ಶ್ರೀಕೃಷ್ಣನು ಅಷ್ಟಾವಕ್ರಮುನಿಯ ಉಪಾಖ್ಯಾನವನ್ನು ಇಂತು ಹೇಳಿದನು.

" ಸೃಷ್ಟಿಯ ಆದಿಯಲ್ಲಿ ಮಹಾವಿಷ್ಣುವಿನ ನಾಭಿಕಮಲದಿಂದ ಚತುರ್ಮುಖ ಬ್ರಹ್ಮನು ಆವಿರ್ಭವಿಸಿದನು. ಅವನ ಮನಸ್ಸಿನಿಂದ ಸನಕ, ಸನಂದ, ಸನಾತನ ಮತ್ತು ಸನತ್ಕುಮಾರರೆಂಬ ನಾಲ್ವರು ಪುತ್ರರು ಜನಿಸಿ ತಪೋನಿಷ್ಠರಾದರು. ಆಗ ಬ್ರಹ್ಮನು ಅತ್ರಿ ಮುಂತಾದ ಷೋಡಶಪ್ರಜಾಪತಿಗಳನ್ನು ಸೃಷ್ಟಿಮಾಡಿ ಜಗತ್ಸೃಷ್ಟಿಯನ್ನು ಮುಂದುವರಿಸುವಂತೆ ಅವರಿಗೆ ಹೇಳಿದನು. ಆ ಷೋಡಶಪ್ರಜಾಪತಿಗಳಲ್ಲೊಬ್ಬನಾದ ಪ್ರಚೇತಸನಿಗೆ ಅಸಿತನೆಂಬ ಮುನಿಶ್ರೇಷ್ಠನು ಜನಿಸಿ ಪುತ್ರಪ್ರಾಪ್ತಿಗಾಗಿ ಸಹಸ್ರಾರು ವರ್ಷಗಳು ತಪಸ್ಸುಮಾಡಿದನು. ಆಗ ಅಶರೀರವಾಣಿಯು ಪರಶಿವನನ್ನು ಸ್ತುತಿಸುವಂತೆ ಅವನಿಗೆ ಹೇಳಿತು. ಅದರಂತೆ ಆ ಮುನಿಯು ಪರಶಿವನನ್ನು ಸ್ತೋತ್ರದಿಂದ ಮೆಚ್ಚಿಸಿ ಅವನಿಂದ ರಾಧಾಮಂತ್ರೋಪದೇಶವನ್ನು ಪಡೆದು ಅದನ್ನು ಶಾಸ್ತ್ರೋಕ್ತವಾಗಿ ಜಪಿಸಿ ಇಷ್ಟಸಿದ್ಧಿಯನ್ನು ಪಡೆದನು. ಕಾಲಕ್ರಮದಲ್ಲಿ ಆ ಅಸಿತನಿಗೆ ದೇವಲನೆಂಬ ಪುತ್ರನು ಜನಿಸಿ, ಸುಯಜ್ಞನ ಮಗಳಾದ ರತ್ನಮಾಲಾವತಿಯನ್ನು ಮದುವೆಮಾಡಿಕೊಂಡು ಅವಳೊಡನೆ ಚಿರಕಾಲ ಕ್ರೀಡಿಸಿಕೊಂಡಿದ್ದನು. ಕೊನೆಗೆ ದೇವಲನು ಸಂಸಾರಸುಖದಲ್ಲಿ ಬೇಸರಗೊಂಡು ಪತ್ನಿಯನ್ನು ಪರಿತ್ಯಜಿಸಿ ತಪಸ್ಸಿಗೆ ಹೊರಟುಹೋದನು ಈ ರೀತಿ ತಪೋನಿಷ್ಠನಾದ ದೇವಲನನ್ನು ಒಮ್ಮೆ ರಂಭೆ

ಎಂಬ ಅಪ್ಸರೆಯು ನೋಡಿ ಮೋಹಗೊಂಡು ತನ್ನ ಅಭೀಷ್ಟವನ್ನು ತಿಳಿಸಿದಳು ಆದರೆ ಪರಮವಿರಾಗಿಯೂ, ಜಿತೇಂದ್ರಿಯನೂ ಆದ ದೇವಲನು ಆಕೆಯನ್ನು ಪರಿಗ್ರಹಿಸದಿರಲು ಆಕೆಯು ಕುಪಿತಳಾಗಿ ಆ ಮುನಿಯು ಅವಯವಗಳೆಲ್ಲ ವಕ್ರವಾಗುವಂತೆಯೂ, ದೇಹವು ಅಂಜನದಂತೆ ಕಪ್ಪಾಗುವಂತೆಯೂ, ಶಪಿಸಿದಳು. ಅಲ್ಲದೆ ಅವನು ತಪಸ್ಸಿನಿಂದ ಗಳಿಸಿದ ಪುಣ್ಯವೆಲ್ಲವೂ ನಷ್ಟವಾಗುವಂತೆ ಶಪಿಸಿ, ಕಾಮಲೋಕಕ್ಕೆ ತೆರಳಿದಳು. ಕೂಡಲೇ ವಿಕಾರಗೊಂಡ ಆ ಮುನಿಯು ಚಿಂತಾಕ್ರಾಂತನಾಗಿ ಅಗ್ನಿಪ್ರವೇಶಮಾಡಲುದ್ಯುಕ್ತನಾದನು. ಆಗ ನಾನು ಅವನಿಗೆ ಪ್ರತ್ಯಕ್ಷನಾಗಿ ದಿವ್ಯಜ್ಞಾನವನ್ನು ಅನುಗ್ರಹಿಸಿದೆನು. ನನ್ನ ಮಾತಿನಂತೆ ಆ ಮುನಿಯು ಮಲಯ ದ್ರೋಣಿಯಲ್ಲಿ ಅರವತ್ತುಸಾವಿರ ವರ್ಷಗಳ ಕಾಲ ತಪಸ್ಸುಮಾಡಿ ನನ್ನಲ್ಲಿ ಲೀನನಾದನು.'' ಈ ಉಪಾಖ್ಯಾನವನ್ನು ಕೇಳಿ ರಾಧೆಯು ಪರಮಾನಂದ ತುಂದಿಲಳಾದಳು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಏಕತ್ರಿಂಶೋಽಧ್ಯಾಯಃ ||

|| ಶ್ರೀ ರಾಧಿಕೋವಾಚ ||

ಶಿವಾಶ್ಚರ್ಯಂ ಶ್ರುತಂ ನಾಥ ಚರಿತಂ ಸುಮನೋಹರಂ ।
ಅಧುನಾ ಶ್ರೋತುಮಿಚ್ಛಾಮಿ ಬ್ರಹ್ಮಣಃ ಶಾಪಕಾರಣಂ ॥ ೧ ॥

ಯೋ ವಿಧಾತಾ ತ್ರಿಜಗತಾಂ ತಪಸಾಂ ಫಲದಾಯಕಃ ।
ಸ ಕಥಂ ಕುಲಟಾಶಾಪಾತ್ ಅಪೂಜ್ಯಶ್ಚ ಬಭೂವ ಹ ॥ ೨ ॥

|| ಶ್ರೀ ಕೃಷ್ಣ ಉವಾಚ ||

ಮನ್ವಂತರೇ ರೈವತಸ್ಯ ಸುಚಂದ್ರೋ ನೃಪಪುಂಗವಃ ।
ತಪಸ್ವೀ ವೈಷ್ಣವಃ ಶ್ರೇಷ್ಠೋ ಜ್ಞಾನೀ ಪರಮಧಾರ್ಮಿಕಃ ॥ ೩ ॥

ಮೂವತ್ತೊಂದನೆಯ ಅಧ್ಯಾಯ.

೧. ರಾಧಿಕಾ :—ಪ್ರಾಣನಾಥನೆ, ಆಶ್ಚರ್ಯಕರವೂ, ಮನೋಹರವೂ ಆದ ಚರಿತ್ರೆಯನ್ನು ಕೇಳಿದುದಾಯಿತು. ಈಗ ಬ್ರಹ್ಮನಿಗೆ ಶಾಪಬರಲು ಕಾರಣವೇನೆಂಬು ವನ್ನು ಕೇಳ ಬಯಸುತ್ತೇನೆ.

೨. ತ್ರಿಲೋಕಸೃಷ್ಟಿಕರ್ತನೂ, ತಪಸ್ಸಿನ ಫಲವನ್ನು ಕೊಡುವವನೂ ಆದ ಚತುರ್ಮುಖಬ್ರಹ್ಮನು ಕುಲಟೆಯ ಶಾಪದಿಂದ ಅಪೂಜ್ಯನಾದುದು ಹೇಗೆ?

೩. ಶ್ರೀಕೃಷ್ಣ—ತಪಸ್ವಿಯೂ, ವೈಷ್ಣವರಲ್ಲಿ ಶ್ರೇಷ್ಠನೂ, ಜ್ಞಾನಿಯೂ, ಧರ್ಮಿಷ್ಠನೂ ಆದ ಸುಚಂದ್ರನೆಂಬ ನೃಪೋತ್ತಮನು ರೈವತಮನ್ವಂತರದಲ್ಲಿದ್ದನು.

ಸ ಚ ಪೂರ್ವಂ ತಪಃ ಕುರ್ವನ್ನಾಜಗಾಮ ಮಮ ಪ್ರಿಯೇ |
ಇಮಾಂ ಚ ಮಲಯದ್ರೋಣೀಂ ಭಾರತೇಷು ಮನೋಹರಂ || ೪ ||

ತಪಶ್ಚಕಾರ ರಾಜೇಂದ್ರೋ ವರ್ಷಾಣಾಂ ಚ ಸಹಸ್ರಕಂ |
ಜೀರ್ಣಂ ತಸ್ಯ ಶರೀರಂ ಚ ಕಠೋರೇಣ ತಪಸ್ವಿನಃ || ೫ ||

ವಲ್ಮೀಕಾಚ್ಛಾದಿತಂ ದೇಹಂ ದೃಷ್ಟ್ವಾ ಧಾತಾ ಕೃಪಾನಿಧಿಃ |
ಆಜಗಾಮ ವರಂ ದಾತುಂ ತಪ ಸ್ಥಾನಂ ಸುನಿರ್ಜನಂ || ೬ ||

ಕಮಂಡಲುಜಲೇನೈವ ಮಮ ದೇಹೋದ್ಭವೇನ ಚ |
ಸಿಷೇಚ ತಂ ಚ ಮಂತ್ರೇಣ ಮಯಾ ದತ್ತೇನ ಯೋಗವಿತ್ || ೭ ||

ಕಮಂಡಲುಜಲಸ್ಪರ್ಶಾದುತ್ಥಾಯ ನೃಪತಿಃ ಸ್ವಯಂ |
ನನಾಮ ಭಕ್ತ್ಯಾ ಜಗತಾಂ ಸ್ರಷ್ಟಾರಂ ಚ ಪುರಃಸ್ಥಿತಂ || ೮ ||

---

೪. ಅವನು ನನ್ನನ್ನು ಕುರಿತು ತಪಸ್ಸುಮಾಡುತ್ತ, ಭರತಖಂಡದಲ್ಲೆಲ್ಲ ಮನೋಹರವಾದ ಈ ಮಲಯ ದ್ರೋಣಪರ್ವತಕ್ಕೆ ಬಂದನು.

೫. ಅಲ್ಲಿ ಆ ರಾಜೇಂದ್ರನು ಒಂದುಸಾವಿರ ವರ್ಷಗಳ ಕಾಲ ಕಠಿಣವಾದ ತಪಸ್ಸನ್ನಾಚರಿಸಿದನು. ಆ ಕಠಿಣತಪಸ್ಸಿನಿಂದ ಆ ತಪಸ್ವಿಯ ಶರೀರವು ಜೀರ್ಣವಾಯಿತು.

೬. ನಿಶ್ಚಲತಪಸ್ವಿಯಾದ ಅವನ ಶರೀರದ ಮೇಲೆ ಹುತ್ತಬೆಳೆದುದನ್ನು ಕಂಡು ದಯಾಮಯನಾದ ಬ್ರಹ್ಮನು ಅವನಿಗೆ ವರವನ್ನು ಕೊಡಲು ನಿರ್ಜನವಾದ ಆ ತಪೋವನಕ್ಕೆ ಬಂದನು.

೭ ಕೂಡಲೇ ನನ್ನ ದೇಹಸಂಭೂತವಾದ ಕಮಂಡಲುವಿನ ಜಲದಿಂದ ನಾನು ಉಪದೇಶಿಸಿದ ಮಂತ್ರೋಚ್ಚಾರಣಪೂರ್ವಕವಾಗಿ ಆ ಯೋಗಿಯಾದ ಬ್ರಹ್ಮನು ಅವನ ಮೇಲೆ ಪ್ರೋಕ್ಷಿಸಿದನು.

೮. ಕಮಂಡಲು ಜಲದ ಸ್ಪರ್ಶದಿಂದ ಆ ರಾಜನು ಮೇಲಕ್ಕೆ ಎದ್ದು ತನ್ನ ಮುಂದೆ ನಿಂತಿರುವ ಜಗತ್ಸೃಷ್ಟಿಕರ್ತನಾದ ಬ್ರಹ್ಮನನ್ನು ಪರಮಭಕ್ತಿಯಿಂದ ನಮಸ್ಕರಿಸಿದನು.

ಸ ತಂ ನಮಂತಂ ರಾಜಾನಮುವಾಚ ಕಮಲೋದ್ಭವಃ ।
ವರಂ ವೃಣ್ವಿತಿ ರಾಜೇಂದ್ರ ಯತ್ತೇ ಮನಸಿ ವಾಂಛಿತಂ ॥ ೯ ॥

ತಸ್ಯ ತದ್ವಚನಂ ಶ್ರುತ್ವಾ ವರಂ ವವ್ರೇ ಪರಾತ್ಪರಂ ।
ಮನ್ವೈವ ಚರಣೇ ಭಕ್ತಿಂ ಮದೀಯಂ ದಾಸ್ಯಮೇವ ಚ ॥ ೧೦ ॥

ಕೃಪಯಾ ಚ ವರಂ ಬ್ರಹ್ಮಾ ದತ್ತವಾನಭಿವಾಂಛಿತಂ ।
ಸ ಚ ತತ್ಪುರತಸ್ತಸ್ಥೌ ಕಾಮದೇವಸಮಪ್ರಭಃ ॥ ೧೧ ॥

ಏತಸ್ಮಿನ್ನಂತರೇ ರಾಜಾ ದದರ್ಶ ರಥಮುತ್ತಮಂ ।
ಆಕಾಶಾನ್ನಿಪತಂತಂ ವೈ ಶತಸೂರ್ಯಸಮಪ್ರಭಂ ॥ ೧೨ ॥

ತೇಜಸಾಚ್ಛಾದಿತಂ ಸರ್ವಂ ಸುಪ್ರದೀಪ್ತಂ ದಿಶೋ ದಶ ।
ರತ್ನೇಂದ್ರಸಾರನಿರ್ಮಾಣಂ ಶತಚಕ್ರಸಮನ್ವಿತಂ ॥ ೧೩ ॥

---

೯. ಈ ರೀತಿ ತನಗೆ ನಮಸ್ಕರಿಸುತ್ತಿರುವ ರಾಜೇಂದ್ರನನ್ನು ಕುರಿತು ನಿನ್ನ ಅಭೀಪ್ಸಿತವಾದ ವರವನ್ನು ಬೇಡೆಂದು ಬ್ರಹ್ಮನು ಹೇಳಿದನು.

೧೦. ಆ ಮಾತನ್ನು ಕೇಳಿ ಸುಚಂದ್ರನು ವಿಷ್ಣುವಿನ ಚರಣಗಳಲ್ಲಿ ಭಕ್ತಿಯೂ, ವಿಷ್ಣುವಿನ ನಿರಂತರ ದಾಸ್ಯವೂ ಲಭಿಸಿದರೆ ಪರಾತ್ಪರವಾದ ವರ ಲಭಿಸಿದಂತಾಗುವುದೆಂದು ಬೇಡಿಕೊಂಡನು.

೧೧. ದಯಾಮಯನಾದ ಬ್ರಹ್ಮನು ಅವನ ಅಭೀಪ್ಸಿತವಾದ ಆ ವರವನ್ನು ಅನುಗ್ರಹಿಸಿದನು. ಕೂಡಲೇ ಆ ರಾಜನು ಮನ್ಮಥನಿಗೆ ಸದೃಶವಾದ ದೇಹಕಾಂತಿಯಿಂದ ಬೆಳಗುತ್ತ ಬ್ರಹ್ಮನ ಮುಂದೆ ನಿಂತನು.

೧೨. ಈ ಸಮಯಕ್ಕೆ ಸರಿಯಾಗಿ ಆಕಾಶಮಾರ್ಗವಾಗಿ ಬರುತ್ತಿರುವ ಕೋಟಿ ಸೂರ್ಯಪ್ರಭೆಯುಳ್ಳ ರಥವೊಂದನ್ನು ಆ ರಾಜನು ನೋಡಿದನು.

೧೩. ಶ್ರೇಷ್ಠರತ್ನಗಳಿಂದ ನಿರ್ಮಿತವಾಗಿ, ನೂರುಚಕ್ರಗಳಿಂದ ಕೂಡಿದ ಆ ರಥದ ತೇಜಸ್ಸಿನಿಂದ ವ್ಯಾಪ್ತವಾದ ಹತ್ತು ದಿಕ್ಕುಗಳೂ ಬೆಳಗುತ್ತಿದ್ದವು.

ಅಮೂಲ್ಯರತ್ನರಚಿತಂ ವಿಚಿತ್ರಕಲಶೋಜ್ಜ್ವಲಂ ।
ಮುಕ್ತಾಮಾಣಿಕ್ಯಹೀರಾಣಾಂ ಮಾಲಾಜಾಲೈಶ್ಚ ರಾಜಿತಂ ॥ ೧೪ ॥

ಸದ್ರತ್ನದರ್ಪಣೈರ್ದೀಪ್ತೈರತೀವ ಸುಮನೋಹರಂ ।
ಭೂಷಿತಂ ದಿವ್ಯವಸ್ತ್ರೈಶ್ಚ ಶ್ವೇತಚಾಮರಕೋಟಿಭಿಃ ॥ ೧೫ ॥

ಪಾರಿಜಾತಪ್ರಸೂನಾನಾಂ ಮಾಲಾಜಾಲೈಃ ಸುಶೋಭಿತಂ ।
ಮನೋಯಾಯಿ ಮಹಾಶ್ಚರ್ಯಂ ನಾನಾಚಿತ್ರೇಣ ಚಿತ್ರಿತಂ ॥ ೧೬ ॥

ವೇಷ್ಟಿತಂ ಪಾರ್ಷದೈರ್ದಿವ್ಯೈ ರತ್ನಭೂಷಣಭೂಷಿತೈಃ ।
ಚತುರ್ಭುಜೈಃ ಶ್ಯಾಮಲೈಶ್ಚ ಜ್ವಲದ್ಭಿಃ ಸ್ಥಿರಯೌವನೈಃ ॥ ೧೭ ॥

ಪೀತವಸ್ತ್ರಪರೀಧಾನೈಶ್ಚಂದನಾಗುರುಚರ್ಚಿತೈಃ ।
ದೃಷ್ಟ್ವಾ ರಥಸ್ಥಾನ್ ದೇವಾಂಶ್ಚ ನನಾಮ ನೃಪತಿರ್ಮುದಾ ॥ ೧೮ ॥

---

೧೪. ಅನರ್ಘ್ಯರತ್ನಗಳಿಂದ ಖಚಿತವಾಗಿ ವಿಚಿತ್ರ ಕಲಶಗಳಿಂದ ಶೋಭಿಸುತ್ತಿದ್ದ ಆ ರಥವು ಮುತ್ತು ಮಾಣಿಕ್ಯ ಮತ್ತು ವಜ್ರಗಳ ಮಾಲೆಗಳಿಂದ ಅಲಂಕೃತವಾಗಿದ್ದಿತು.

೧೫ ಹೊಳಪಾದ ರತ್ನಕನ್ನಡಿಗಳಿಂದ ಶೋಭಿತವಾಗಿದ್ದ ಆ ರಥವು ಸೂಕ್ಷ್ಮವಸ್ತ್ರಗಳಿಂದಲೂ ಕೋಟ್ಯಾಂತರ ಶ್ವೇತ ಚಾಮರಗಳಿಂದಲೂ ಭೂಷಿತವಾಗಿದ್ದಿತು.

೧೬. ಪಾರಿಜಾತಪುಷ್ಪಗಳ ಮಾಲಾಸಮೂಹದಿಂದ ಶೋಭಿತವಾಗಿಯೂ, ನಾನಾ ಚಿತ್ರಗಳಿಂದ ಚಿತ್ರಿತವಾಗಿಯೂ ಇದ್ದ ಆ ರಥವು ಮನೋವೇಗದಿಂದ ಕೂಡಿ ಮಹದಾಶ್ಚರ್ಯಕರವಾಗಿದ್ದಿತು.

೧೭. ಆ ರಥವು ಚತುರ್ಭುಜರೂ, ಶ್ಯಾಮವರ್ಣರೂ, ಸ್ಥಿರಯೌವನಶೋಭಿತರೂ, ರತ್ನಾಭರಣಭೂಷಿತರೂ ಆದ ದಿವ್ಯಪಾರ್ಷದರಿಂದ ಪರಿವೃತವಾಗಿದ್ದಿತು

೧೮. ಆ ಪಾರ್ಷದರೆಲ್ಲರೂ ಚಂದನ ಅಗುರು ಮುಂತಾದ ಸುಗಂಧ ದ್ರವ್ಯಗಳನ್ನು ಲೇಪಿಸಿಕೊಂಡು ಪೀತಾಂಬರವನ್ನು ಧರಿಸಿದ್ದರು. ಆ ರಾಜೇಂದ್ರನು ರಥದಲ್ಲಿದ್ದ ದೇವತೆಗಳನ್ನೆಲ್ಲ ನೋಡಿ ಸಂತೋಷದಿಂದ ನಮಸ್ಕಾರಮಾಡಿದನು.

ಸಹಸಾ ತಸ್ಯ ಶಿರಸಿ ಪುಷ್ಪವೃಷ್ಟಿರ್ಬಭೂವ ಹ ।
ನೇದುರ್ದುಂದುಭಯಃ ಸ್ವರ್ಗೇ ಚಾಽನಕಾಶ್ಚ ಮನೋಹರಾಃ ॥ ೧೯ ॥

ಋಷಯೋ ಮುನಯಃ ಸಿದ್ಧಾಃ ಪ್ರಕುರ್ವಂತೋ ಮುದಾಽಽಶಿಷಂ ।
ಪ್ರಶಶಂಸುಃ ಸುರಾಃ ಸರ್ವೇ ರಾಜಾನಂ ಹರ್ಷನಿರ್ಭರಾಃ ॥ ೨೦ ॥

ರಾಜಾ ಚ ಪಾರ್ಷದಾನ್ ಧ್ಯಾತ್ವಾ ತದ್ರೂಪಶ್ಚ ಬಭೂವ ಹ ।
ಪಾರ್ಷದಾಸ್ತಂ ರಥೇ ಕೃತ್ವಾ ನೀತ್ವಾ ಜಗ್ಮುರ್ಮಮಾಲಯಂ ॥ ೨೧ ॥

ಮದೀಯಃ ಪಾರ್ಷದೋ ಭೂತ್ವಾ ಸ ಚ ತಸ್ಥೌ ಮಮಾಂತಿಕೇ ।
ತತಃ ಸ್ವಮಂದಿರಂ ಯಾಂತಂ ದದರ್ಶ ಮೋಹಿನೀ ವಿಧಿಂ ॥ ೨೨ ॥

ಪುಷ್ಪೋದ್ಯಾನೇ ಚ ರಮ್ಯೇ ಚ ಪುಷ್ಪಚಂದನವಾಯುನಾ ।
ಸದ್ಯೋ ಮುಮೋಹ ತಂ ದೃಷ್ಟ್ವಾ ಪ್ರದಗ್ಧಾ ಮದನಾನಲೈಃ ॥ ೨೩ ॥

---

೧೯. ಇದ್ದಕ್ಕಿದ್ದಂತೆಯೇ ಆ ರಾಜನ ತಲೆಯ ಮೇಲೆ ಹೂಮಳೆಗರೆಯಿತು ದೇವಲೋಕದಲ್ಲಿ ನಗಾರಿಗಳೂ, ಕಹಳೆಗಳೂ ಮನೋಹರವಾಗಿ ಮೊಳಗಿದವು.

೨೦. ಋಷಿಗಳು, ಮುನಿಗಳು, ಸಿದ್ಧರು ಮತ್ತು ದೇವತೆಗಳೂ ಕೂಡ ಸಂತೋಷದಿಂದ ಆ ರಾಜನಿಗೆ ಆಶೀರ್ವಾದವಮಾಡಿ ಸಂತೋಷಪರವಶರಾಗಿ ಆ ರಾಜೇಂದ್ರನನ್ನು ಹೊಗಳಿದರು.

೨೧. ರಾಜನು ತದೇಕಧ್ಯಾನದಿಂದ ಆ ಪಾರ್ಷದರನ್ನು ಧ್ಯಾನಿಸಿ ಅವರ ಸ್ವರೂಪವನ್ನೇ ಹೊಂದಿದನು. ಆಗ ಪಾರ್ಷದರೆಲ್ಲರೂ ಅವನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ನನ್ನ ಮಂದಿರಕ್ಕೆ ಕರೆತಂದರು.

೨೨. ಅವನು ನನ್ನ ಪಾರ್ಷದನಾಗಿ ನನ್ನ ಮಂದಿರದಲ್ಲಿ ನನ್ನ ಸಮೀಪದಲ್ಲಿಯೇ ನೆಲೆಸಿದನು. ಅನಂತರ ತನ್ನ ಮಂದಿರಕ್ಕೆ ತೆರಳುತ್ತಿದ್ದ ಬ್ರಹ್ಮನನ್ನು ಮೋಹಿನಿಯೆಂಬ ಅಪ್ಸರೆಯು ನೋಡಿದಳು.

೨೩. ಪ್ರೌಢೆಯಾದ ಆ ಮೋಹಿನಿಯು ಪುಷ್ಪ ಮತ್ತು ಚಂದನ ಸೌರಭ ಭರಿತವಾದ ಪುಷ್ಪೋದ್ಯಾನದಲ್ಲಿ ಬ್ರಹ್ಮನನ್ನು ನೋಡಿಮೋಹಿತಳಾಗಿ ಮದನ ಜ್ವರ ಪೀಡಿತಳಾದಳು.

ವಿಲೋಕ್ಯ ವಕ್ರನಯನಾ ಜುಗೋಪ ಸಸ್ಮಿತಂ ಮುಖಂ ।
ಸಿಂದೂರಬಿಂದುಂ ದಧತೀ ಕಸ್ತೂರೀಬಿಂದುನಾ ಸಹ ॥ ೨೪ ॥

ಚಾರುಚಂಪಕವರ್ಣಾಭಾ ಸತತಂ ಸ್ಥಿರಯೌವನಾ ।
ಬೃಹನ್ನಿತಂಬಯುಗಲಾ ಪೀನಶ್ರೋಣಿಪಯೋಧರಾ ॥ ೨೫ ॥

ಶರತ್ಪಾರ್ವಣಶುಭ್ರಾಂಶುಪ್ರಭಾಮುಷ್ಟಕರಾನನಾ ।
ಸೂಕ್ಷ್ಮವಸ್ತ್ರಪರೀಧಾನಾ ರತ್ನಾಲಂಕಾರಭೂಷಿತಾ ॥ ೨೬ ॥

ತ್ರೈಲೋಕ್ಯಂ ಮೋಹಿತುಂ ಶಕ್ತಾ ಕಟಾಕ್ಷೈರೇವ ಲೀಲಯಾ ।
ಅತೀವ ಕಾಮಿನೀ ಶಶ್ವದ್ಗಜೇಂದ್ರಮಂದಗಾಮಿನೀ ॥ ೨೭ ॥

ಪುಲಕಾಂಚಿತಸರ್ವಾಂಗೀ ಮೂರ್ಛಾಂ ಸಂಪ್ರಾಪ ವರ್ತ್ಮನಿ ।
ತನ್ನಿರೀಕ್ಷ್ಯ ಚ ತಾಂ ಬ್ರಹ್ಮಾ ಜಗಾಮ ಶ್ರೀಹರಿಂ ಸ್ಮರನ್ ॥ ೨೮ ॥

---

೨೪. ತನ್ನ ವಕ್ರಕಟಾಕ್ಷದಿಂದ ಬ್ರಹ್ಮನನ್ನು ನೋಡಿ ಮುಖದಲ್ಲಿ ಕಾಣಿಸಿಕೊಂಡ ಹುಸಿನಗೆಯನ್ನು ಮರೆಮಾಡಿಕೊಂಡಳು. ಆ ಮೋಹಿನಿಯು ಹಣೆಯಲ್ಲಿ ಕಸ್ತೂರೀ ತಿಲಕದೊಡನೆ ಸಿಂಧೂರದ ಬೊಟ್ಟನ್ನೂ ಧರಿಸಿದ್ದಳು.

೨೫. ಸುಂದರವಾದ ಸಂಪಿಗೆಯ ಬಣ್ಣದಿಂದ ಕಂಗೊಳಿಸುತ್ತಿದ್ದ ಆ ನವಯುವತಿಯು ವಿಸ್ತಾರವಾದ ನಿತಂಬದ್ವಯಗಳಿಂದಲೂ ದಪ್ಪವಾದ ಶ್ರೋಣಿ ಮತ್ತು ಸ್ತನಗಳಿಂದಲೂ ಶೋಭಿಸುತ್ತಿದ್ದಳು

೨೬. ಶರತ್ಪೂರ್ಣಿಮಾಚಂದ್ರನ ಶುಭ್ರ ಕಿರಣಗಳನ್ನು ಅಲ್ಲಗಳೆಯುತ್ತಿದ್ದ ಮುಖಕಾಂತಿಯಿಂದ ಬೆಳಗುತ್ತಿದ್ದ ಆ ಮೋಹಿನಿಯು ಸೂಕ್ಷ್ಮವಸ್ತ್ರವನ್ನು ಧರಿಸಿ ರತ್ನಾಲಂಕಾರಭೂಷಿತಳಾಗಿದ್ದಳು.

೨೭. ಗಜೇಂದ್ರನಂತೆ ಮಂದಗಮನೆಯಾದ ಆ ಕಾಮಿನಿಯು ತನ್ನ ಕಟಾಕ್ಷಗಳಿಂದ ಮೂರು ಲೋಕವನ್ನೂ ಮೋಹಗೊಳಿಸಬಲ್ಲವಳಾಗಿದ್ದಳು

೨೮. ಬ್ರಹ್ಮನನ್ನು ನೋಡಿ ರೋಮಾಂಚಿತ ಶರೀರಳಾಗಿ ಮಾರ್ಗಮಧ್ಯದಲ್ಲಿಯೇ ಮೋಹಿನಿಯು ಮೂರ್ಛೆಗೊಂಡಳು. ಬ್ರಹ್ಮನು ಆಕೆಯನ್ನು ನೋಡಿದರೂ ಶ್ರೀಹರಿಯನ್ನು ಸ್ಮರಿಸುತ್ತಾ ಮುಂದಕ್ಕೆ ಹೊರಟುಹೋದನು.

ನ ವಿಕಾರಂ ನ ಹಿ ಪ್ರಾಪ ಹ್ಯಾತ್ಮಾರಾಮೋ ಜಿತೇಂದ್ರಿಯಃ ।
ಬ್ರಹ್ಮಲೋಕಂ ಚ ಸಂಪ್ರಾಪ ಬ್ರಹ್ಮಾ ಚ ಜಗತಾಂ ಪತಿಃ ॥ ೨೯ ॥

ಸಕಾಮಾ ಸಾ ಚ ಕುಲಟಾ ಬಭೂವ ಹತಚೇತನಾ ।
ದಿವಾನಿಶಂ ಚಿಂತಯಂತೀ ಸ್ವಪ್ನೇ ಜ್ಞಾನೇ ಚತುರ್ಮುಖಂ ॥ ೩೦ ॥

ಸರ್ವಂ ಜಾರಂ ವಿಸಸ್ಮಾರ ತತ್ಯಾಜ ಹರಿಮೀಶ್ವರೀ ।
ಉತ್ತಿಷ್ಠಂತೀ ನಿವಸತೀ ಶಯನಂ ಕುರ್ವತೀ ಕ್ಷಣಂ ॥ ೩೧ ॥

ತಪ್ತಪಾತ್ರೇ ಯಥಾ ಸಸ್ಯಂ ಭ್ರಮತ್ಯೇವ ತಥಾ ಪಥಿ ।
ಏತಸ್ಮಿನ್ನಂತರೇ ರಂಭಾ ವಿದಗ್ಧಾಪ್ಸರಸಾಂ ವರಾ ॥ ೩೨ ॥

ಗಚ್ಛಂತೀ ಕಾಮಲೋಕಂ ಸಾ ಸಕಾಮಾ ತೇನ ವರ್ತ್ಮನಾ ।
ದೃಷ್ಟ್ವಾ ಸಹಚರೀಂ ತತ್ರ ಶುಷ್ಕಕಂಠೋಷ್ಠತಾಲುಕಾಂ ।
ಅಭಿಪ್ರಾಯೇಣ ಬುಬುಧೇ ಪಪ್ರಚ್ಛ ಸಸ್ಮಿತಂ ತದಾ ॥ ೩೩ ॥

---

೨೯. ಆತ್ಮಾರಾಮನೂ ಜಿತೇಂದ್ರಿಯನೂ, ಜಗದೊಡೆಯನೂ ಆದ ಬ್ರಹ್ಮನು ಆಕೆಯನ್ನು ನೋಡಿ ವಿಕಾರಗೊಳ್ಳದೆ ಬ್ರಹ್ಮಲೋಕಕ್ಕೆ ಹೊರಟುಹೋದನು.

೩೦. ಇತ್ತ ಕಾಮಾರ್ತಳಾದ ಆ ಮೋಹಿನಿಯು ಚೇತನರಹಿತಳಾದಳು. ಸ್ವಪ್ನದಲ್ಲಿಯೂ, ಜಾಗ್ರದವಸ್ಥೆಯಲ್ಲೂ ಹಗಲೂರಾತ್ರಿ ಚತುರ್ಮುಖನನ್ನು ಚಿಂತಿಸ ತೊಡಗಿದಳು.

೩೧. ಆ ಮೋಹಿನಿಯು ತನ್ನ ಉಪಪತಿಗಳನ್ನೆಲ್ಲಾ ಮರೆತಳು. ಅಷ್ಟೇಕೆ ಶ್ರೀಹರಿಯನ್ನೂ ಕೂಡ ತ್ಯಾಗಮಾಡಿದಳು. ಬ್ರಹ್ಮನಿಗಾಗಿ ತೊಳಲುತ್ತಾ ಒಮ್ಮೆ ಏಳುವಳು. ಮತ್ತೊಮ್ಮೆ ಕುಳಿತುಕೊಳ್ಳುವಳು ಇನ್ನೊಮ್ಮೆ ಮಲಗಿಕೊಳ್ಳುವಳು.

೩೨-೩೩. ಕಾದಿರುವ ಪಾತ್ರೆಯಲ್ಲಿ ಸಸ್ಯವನ್ನಿಟ್ಟರೆ ಬಾಡುವಂತೆ ಕ್ಷಣಮಾತ್ರ ದಲ್ಲಿ ಆ ಮೋಹಿನಿಯು ಬಾಡಿ ಬಸವಳಿದಳು. ಈ ಮಧ್ಯದಲ್ಲಿ ಅಪ್ಸರಸೆಯರಲ್ಲಿ ಶ್ರೇಷ್ಠಳೂ, ಪ್ರೌಢೆಯೂ ಆದ ರಂಭೆಯು ಕಾಮಾತುರಳಾಗಿ ಆ ಮಾರ್ಗವಾಗಿಯೇ ಕಾಮಲೋಕಕ್ಕೆ ಹೋಗುತ್ತಿದ್ದಳು. ಮಾರ್ಗಮಧ್ಯದಲ್ಲಿ ತನ್ನ ಗೆಳತಿಯಾದ ಮೋಹಿನಿಯ ಈ ದುಃಸ್ಥಿತಿಯನ್ನು ಕಂಡು ಅವಳ ಇಂಗಿತವನ್ನರಿತು ನಗುಮುಖ ದಿಂದ ಅವಳನ್ನು ಕೇಳಿದಳು.

|| ರಂಭೋವಾಚ ||

ಕಥಮೇವಂವಿಧಾ ತ್ವಂ ಹಿ ತ್ರೈಲೋಕ್ಯಚಿತ್ತಮೋಹಿನಿ || ೩೪ ||

ವದ ಶೀಘ್ರಂ ಮಹಾಭಾಗೇ ರಂಭಾಽಹಂ ಚೇತನಾಂ ಕುರು |
ಕಮುದ್ದಿಶ್ಯ ಸಕಾಮಾ ತ್ವಂ ಗಚ್ಛ ತ್ವಂ ಕಾಂತಮೀಪ್ಸಿತಮ್ || ೩೫ ||

ಕುಲಟಾ ಸರ್ವಸೌಭಾಗ್ಯಾ ನ ವಯಂ ಕುಲಪಾಲಿಕಾಃ |
ಸರ್ವೇಽವ್ಯಗ್ರಾ ಇಂದ್ರಿಯಾಣಾಂ ಸುಖಾಯ ಭುವನತ್ರಯೇ || ೩೬ ||

ಯಾಂತಿ ಪ್ರಾಣಾ ಯತಃ ಕಾಲೇ ಕಾ ಲಜ್ಜಾ ತತ್ರ ಜೀವಿನಾಮ್ |
ನ ಚಾಽಽತ್ಮನಃ ಪರಃ ಕಶ್ಚಿತ್ ಪ್ರಿಯೋಽಸ್ತಿ ಭುವನತ್ರಯೇ || ೩೭ ||

ಕಾಂತೇಽಪತ್ಯೇ ಚ ಬಂಧೌ ಚ ಸ್ನೇಹೋ ಯಃ ಸ್ವಾತ್ಮಹೇತುಕಃ |
ಸಂಬಂಧಃ ಸ್ವಾತ್ಮನೋ ಯಾವತ್ತಾವತ್ಸ್ನೇಹೋಽಸ್ತಿ ತತ್ರ ವೈ || ೩೮ ||

---

೩೪. ರಂಭೆ— ತ್ರಿಲೋಕದ ಜನರ ಮನಸ್ಸನ್ನೂ ಮೋಹಗೊಳಿಸಬಲ್ಲ ಎಲೌ ಮೋಹಿನಿಯೇ, ಇದೇನು ನೀನು ಈ ಸ್ಥಿತಿಯಲ್ಲಿದ್ದೀಯೆ ?

೩೫. ಎಲೌ ಮಹಾ ಭಾಗ್ಯಶಾಲಿನಿಯೇ ನಾನು ರಂಭೆ. ನೀನು ಚೇತನವನ್ನು ಹೊಂದಿ ನಾನು ಕೇಳುತ್ತಿರುವ ಪ್ರಶ್ನೆಗೆ ಉತ್ತರವನ್ನು ಜಾಗ್ರತೆಯಾಗಿ ಹೇಳು. ಕಾಮಪರವಶಳಾದ ನೀನು ನಿನಗೆ ಅಭೀಪ್ಸಿತನಾದ ಪತಿಯನ್ನು ಕುರಿತು ಹೋಗುವವಳಾಗು.

೩೬. ಕುಲಟೆಯರು ಎಲ್ಲ ರೀತಿಯ ಸೌಲಭ್ಯವನ್ನು ಪಡೆಯುವಂತೆ ಕುಲಪಾಲಿಕೆಯರು ಪಡೆಯಲಾರರು. ಭುವನತ್ರಯದಲ್ಲಿರುವ ಎಲ್ಲರೂ ತಮ್ಮ ಇಂದ್ರಿಯ ಸುಖಗಳಿಗಾಗಿ ಹಾತೊರೆಯುವುದು ಸ್ವಾಭಾವಿಕವಾಗಿರುವುದು.

೩೭. ಕಾಲಾಧೀನವಾಗಿ ಎಲ್ಲರ ಪ್ರಾಣವೂ ಹೋಗುವುದರಿಂದ ಜೀವಿಸಿರುವಾಗ ಇಂದ್ರಿಯ ಸುಖಗಳನ್ನು ಬಯಸುವುದರಲ್ಲಿ ಜೀವಿಗಳಿಗೆ ಲಜ್ಜೆಯೇಕೆ? ಮೂರು ಲೋಕದಲ್ಲೂ ತನ್ನ ಆತ್ಮಕ್ಕಿಂತ ಪ್ರಿಯವಾದುದು ಬೇರೊಂದಿಲ್ಲವಲ್ಲವೇ ?

೩೮. ಪತಿಯಲ್ಲಾಗಲೀ, ಪುತ್ರನಲ್ಲಾಗಲೀ, ಬಂಧುವಿನಲ್ಲಾಗಲೀ ಸ್ನೇಹವಿಡುವುದು ಆತ್ಮಸುಖಕ್ಕಾಗಿಯೇ ಅಲ್ಲವೇ? ಆತ್ಮಸುಖವುಂಟಾಗುವವರೆಗೆ ಅವರಲ್ಲಿ ಸ್ನೇಹವುಂಟಾಗಿರುವುದು.

ಯೇಷು ಯೆನ್ಮಾನಸಂ ಶಶ್ವತ್ತೇಷಾಂ ಪ್ರಾಣಾಸ್ತ ಏವ ಹಿ ।
ಗಚ್ಛಂತೀಂ ಕಾಮಲೋಕಂ ಚ ಸಕಾಮಾಂ ಪಶ್ಯ ಮಾಂ ಪ್ರಿಯೇ ॥ ೩೯ ॥

ಸಹ ಸಖ್ಯಾ ಸಮಾಲೋಚ್ಯ ಮನಸಾ ಗಚ್ಛ ತಂ ಪ್ರಿಯಂ ।
ನಿಬದ್ಧ್ಯ ನೀವೀಂ ಕೇಶಾಂಶ್ಚ ಕೃತ್ವಾ ವೇಷಮಭೀಪ್ಸಿತಂ ॥ ೪೦ ॥

ಮುನಿಮೋಹನಬೀಜಂ ಚ ತಂ ಮೋಹಂ ಕುರು ಮೋಹಿನಿ ।
ಕಥಯಸ್ವ ಮಹಾಭಾಗೇ ವಚನಂ ಹೃದಯಂಗಮಂ ॥ ೪೧ ॥

ರಕ್ಷಾಽತ್ಮಾನಂ ಪ್ರಭಾವಂ ಚ ಸ್ತ್ರೀಜಾತೀನಾಂ ಜಗತ್ತ್ರಯೇ ।
ಸ್ವಾಭಿಪ್ರಾಯಶ್ಚ ಸುರತೌ ನ ಪ್ರಕಾಶ್ಯಃ ಕದಾಚನ ॥ ೪೨ ॥

ಸ್ವಾಂತಂ ಕಾಂತಂ ಸ್ವಾನುರಕ್ತಂ ಋಜ್ವೀಂ ಸಹಚರೀಂ ವಿನಾ ।
ತಸ್ಮಾದ್ವ್ಯಕ್ತೇನ ಹೃದ್ವಾಕ್ಯಂ ಪ್ರಕಾಶ್ಯಂ ಚ ಪ್ರಿಯೇ ಪ್ರಿಯೇ ॥ ೪೩ ॥

---

೩೯. ಯಾರಲ್ಲಿ ಯಾರ ಮನಸ್ಸು ಸರ್ವದಾ ನೆಲೆಸಿರುವುದೋ ಅವರೇ ಅವರಿಗೆ ಪ್ರಾಣಸ್ವರೂಪರಾಗಿರುವರು. ಎಲೌ ಗೆಳತಿಯೇ ಕಾಮಾರ್ತಳಾದ ನಾನು ಕಾಮಲೋಕಕ್ಕೆ ಹೋಗುತ್ತಿರುವುದನ್ನು ನೋಡು.

೪೦. ಸಖಿಯಾದ ನನ್ನೊಡನೆ ಮನಸ್ಸಿನಲ್ಲಿ ಪರ್ಯಾಲೋಚಿಸಿ, ಸೀರೆಯ ಗಂಟನ್ನು ಸರಿಯಾಗಿ ಕಟ್ಟಿಕೊಂಡು ತಲೆಗೂದಲನ್ನು ಬಾಚಿಕೊಂಡು ಅಭೀಪ್ಸಿತವಾದ ವೇಷವನ್ನು ಧರಿಸಿ ನಿನ್ನ ಪ್ರಿಯನ ಸಮೀಪಕ್ಕೆ ಹೋಗು.

೪೧. ಎಲೌ ಮೋಹಿನಿಯೇ, ಮುನಿಗಳನ್ನೂ ಮೋಹಗೊಳಿಸಲು ಕಾರಣವಾದ ನಿನ್ನ ಬೆಡಗು ವೈಯ್ಯಾರಗಳನ್ನು ಪ್ರಕಟಿಸು. ಎಲೌ ಮಹಾಭಾಗ್ಯಶಾಲಿನಿಯೇ, ನಿನ್ನ ಕಾಂತನನ್ನು ಕುರಿತು ಹೃದಯಂಗಮವಾದ ವಚನಗಳನ್ನಾಡು.

೪೨. ನಿನ್ನ ಗೌರವವನ್ನೂ, ಮೂರು ಲೋಕದ ಸ್ತ್ರೀಯರ ಪ್ರಭಾವವನ್ನೂ ಕಾಪಾಡಿಕೋ. ಸುರತಕಾಲದಲ್ಲಿ ಹೆಂಗಸು ಎಂದಿಗೂ ತನ್ನ ಅಭಿಪ್ರಾಯವನ್ನು ಪ್ರಕಟಿಸಕೂಡದು.

೪೩. ತನ್ನ ಮನೋಭಿಪ್ರಾಯವನ್ನು ಋಜುಮಾರ್ಗದಲ್ಲಿರುವ ಸಹಚರಿಯ ಮೂಲಕ ತನ್ನ ಕಾಂತನಿಗೆ ವ್ಯಕ್ತಪಡಿಸಬೇಕೇ ವಿನಹ ತಾನಾಗಿಯೇ ಹೇಳಕೂಡದು. ಆದುದರಿಂದ ಮನಸ್ಸಿನ ಮಾತನ್ನು ಪ್ರಿಯನಲ್ಲಿ ಸ್ವಲ್ಪಸ್ವಲ್ಪವಾಗಿ ತಿಳಿಸಬೇಕು.

ಅನ್ಯಥಾ ಚೋಪಹಾಸಾಯ ಮರಣಾಯೈವ ಕಲ್ಪತೇ ।
ತಸ್ಯಾಶ್ಚ ವಚನಂ ಶ್ರುತ್ವಾ ಸಸ್ಮಿತಾ ಸಾ ಸುಲಜ್ಜಿತಾ ।
ಹೃದ್ಯಂ ಚ ಕಥಯಾಮಾಸ ಯದ್ಧೇತೋಸ್ತಾದೃಶೀ ಗತಿಃ ॥ ೪೪ ॥

॥ ಮೋಹಿನ್ಯುವಾಚ ॥

ಯಾವ ದೃಷ್ಟೋ ಮಯಾ ರಂಭೇ ನಿರ್ಜನೇ ಚತುರಾನನಃ ॥ ೪೫ ॥

ತಾವನ್ಮನೋ ಮೇಽತಿದಗ್ಧಂ ಶಶ್ವನ್ಮನಸಿಜಾನಲೈಃ ।
ನ ದತ್ತಮಾತ್ಮನೇ ಭಕ್ಷ್ಯಮಂತರೇ ನ ಹಿ ರೋಚತೇ ॥ ೪೬ ॥

ಜಾನಾಮಿ ನಾಹಮುದಯಂ ಯಾಮಿನೀಶದಿನೇಶಯೋಃ ।
ಅಧುನಾ ನ ಹಿ ಭೇದೋ ಮೇ ಸತತಂ ಸ್ವಪ್ನಜ್ಞಾನಯೋಃ ॥ ೪೭ ॥

ಮಮ ಪ್ರಾಣಾಃ ಪ್ರತೀಕ್ಷಂತೇ ತಸ್ಯಾಽಽಲಿಂಗನಮೇವ ಚ ।
ಕ್ಷಣಂ ವಿಜ್ಞಾಯ ನ ಚಿರಂ ಯಾಸ್ಯಂತಿ ನಾನ್ಯಥಾ ಪ್ರಿಯೇ ॥ ೪೮ ॥

---

೪೪. ಹಾಗಲ್ಲದಿದ್ದರೆ ಹಾಸ್ಯಾಸ್ಪದರಾಗುವರಲ್ಲದೆ ಮರಣಕ್ಕೂ ಗುರಿಯಾಗುತ್ತಾರೆ. ರಂಭೆಯಾಡಿದ ಈ ಮಾತುಗಳನ್ನು ಕೇಳಿ ಲಜ್ಜಿತಳಾಗಿ ಮೋಹಿನಿಯು ನಸುನಕ್ಕು, ಯಾವ ಕಾರಣದಿಂದ ತಾನು ಆ ದುಃಸ್ಥಿತಿಗೊಳಗಾಗಿದ್ದಾಳೆಂಬುದನ್ನು ಮನೋಹರವಾಗಿ ತಿಳಿಸಿದಳು.

೪೫-೪೬. ಮೋಹಿನಿ:—ಎಲೌ ರಂಭೆಯೇ, ನಾನು ನಿರ್ಜನಪ್ರದೇಶದಲ್ಲಿ ಚತುರ್ಮುಖನನ್ನು ನೋಡಿದಾರಭ್ಯ ನನ್ನ ಮನಸ್ಸು ಮದನಾನಲದಿಂದ ಬಹಳವಾಗಿ ದಹಿಸುತ್ತಿದೆ. ನನಗೆಂದು ಕೊಟ್ಟ ಯಾವ ಆಹಾರವೂ ನನಗೆ ರುಚಿಸುತ್ತಿಲ್ಲ.

೪೭. ಈಗ ನನಗೆ ಸೂರ್ಯೋದಯ ಚಂದ್ರೋದಯಗಳ ಅರಿವೇ ಆಗುತ್ತಿಲ್ಲ. ಜಾಗ್ರದವಸ್ಥೆಗೂ, ಸ್ವಪ್ನಾವಸ್ಥೆಗೂ ನನಗೆ ಭೇದಕಾಣುತ್ತಿಲ್ಲ.

೪೮. ನನ್ನ ಪ್ರಾಣಗಳು ಪ್ರಿಯನ ಆಲಿಂಗನೆಯನ್ನು ಮಾತ್ರ ನಿರೀಕ್ಷಿಸುತ್ತಿವೆ. ಅದು ದುರ್ಲಭವೆಂದು ತಿಳಿದ ಮರುಕ್ಷಣದಲ್ಲಿಯೇ ನನ್ನ ಪ್ರಾಣಗಳೆಲ್ಲವೂ ಹೊರಟು ಹೋಗುವುವು.

ಕಾಮಜ್ವಾಲಾಕಲಾಪೈಶ್ಚ ಸ್ವರ್ಣಾಕಾರಂ ಕಳೇವರಂ ।
ಅನಾಹಾರೇಣ ಚೇದಾನೀಂ ಬಭೂವ ದಗ್ಧಶೈಲವತ್ ॥ ೪೯ ॥

ಗಂತುಂ ಸ್ಥಾತುಂ ನ ಶಕ್ತಾಹಂ ಶಯನಂ ಕರ್ತುಮುದ್ಯತಾ ।
ಧಿಗಸ್ತು ಪುಂಶ್ಚಲೀಜಾತಿಂ ಮಾಮೇವ ಚ ವಿಶೇಷತಃ ॥ ೫೦ ॥

ಕಮುಪಾಯಂ ಕರಿಷ್ಯಾಮಿ ವದ ರಂಭೇಽತ್ರ ಸಾಂಪ್ರತಂ ।
ಲಜ್ಜಾಂ ವಾಽಪಿ ಶರೀರಂ ವಾ ವಿಸೃಜಾಮಿ ಚ ಕಿಂ ಪ್ರಿಯೇ ॥ ೫೧ ॥

ಮೋಹಿನೀವಚನಂ ಶ್ರುತ್ವಾ ಪ್ರಹಸ್ಯಾಪ್ಸರಸಾಂ ವರಾ ।
ತಾಮುವಾಚ ಹಿತಂ ನೀತಿಮುಪಾಯಂ ಶುಭಕಾರಣಂ ॥ ೫೨ ॥

॥ ರಂಭೋವಾಚ ॥

ಏವಮೇತದಹೋ ಭದ್ರೇ ಭದ್ರಸ್ಯ ಕಾರಣಂ ತವ ।
ಸರ್ವಂ ತ್ವಪನಯಿಷ್ಯಾಮಿ ಶೃಣೂಪಾಯಂ ಭಯಂ ತ್ಯಜ ॥ ೫೩ ॥

---

೪೯. ಮದನಾಗ್ನಿ ಜ್ವಾಲೆಗಳಿಂದ ತಪ್ತವಾದ ನನ್ನ ಶರೀರವು ಸುವರ್ಣದಂತೆ ಬೆಳುಪಾಗಿದೆ. ಆಹಾರವನ್ನು ಬಿಟ್ಟ ಮೇಲಂತೂ, ಸುಟ್ಟ ಬೆಟ್ಟದಂತೆ ಕಂಗೆಟ್ಟು ಹೋಗಿದೆ.

೫೦. ನಡೆಯುವುದಕ್ಕಾಗಲಿ, ನಿಲ್ಲುವುದಕ್ಕಾಗಲಿ, ಮಲಗುವುದಕ್ಕಾಗಲೀ, ನಾನು ಅಶಕ್ತಳಾಗಿದ್ದೇನೆ. ವೇಶ್ಯಾಜಾತಿಯನ್ನೂ ಅದರಲ್ಲಿಯೂ ನನ್ನನ್ನು ಸುಡಬೇಕು.

೫೧. ಎಲೌ ರಂಭೆಯೇ, ಈಗ ಯಾವ ಉಪಾಯವನ್ನು ಆಶ್ರಯಿಸಲಿ ಹೇಳು. ಶರೀರ ಮತ್ತು ನಾಚಿಕೆ ಇವೆರಡರಲ್ಲಿ ಯಾವುದನ್ನು ಬಿಟ್ಟುಬಿಡಲಿ ?

೫೨. ಮೋಹಿನಿಯ ಮಾತುಗಳನ್ನು ಕೇಳಿ ಅಪ್ಸರೆಯರಲ್ಲಿ ಶ್ರೇಷ್ಠಳಾದ ರಂಭೆಯು ನಸುನಕ್ಕು, ಹಿತವೂ, ನೀತಿಯುತವೂ, ಶುಭಕಾರಣವೂ ಆದ ಉಪಾಯವನ್ನು ಹೇಳಿದಳು.

೫೩. ರಂಭೆ:—ಎಲೌ ಮಂಗಳಾಂಗಿಯೇ, ಇದೆಲ್ಲ ನಿನ್ನ ಶುಭಕ್ಕೆ ಕಾರಣವಾಗಿದೆ. ಭಯವನ್ನು ದೂರಮಾಡಿ ನಾನು ಹೇಳುವ ಉಪಾಯವನ್ನು ಕೇಳು. ನಿನ್ನ ಕಷ್ಟವೆಲ್ಲವೂ ದೂರವಾಗುವುದು.

ಕೃತ್ವಾ ವೇಷಮಪೂರ್ವಂ ಚ ಪೂರ್ವಮಾರಾಧ್ಯ ಮನ್ಮಥಂ ।
ತೇನ ಸಾರ್ಧಂ ಸ್ವಯಂ ಗತ್ವಾ ಮೋಹಂ ಕುರು ಚ ಭಾಮಿನಿ ॥ ೫೪ ॥

ಜಿತೇಂದ್ರಿಯಾಣಾಂ ಪ್ರವರಂ ಸಾಕ್ಷಾನ್ನಾರಾಯಣಾತ್ಮಕಂ ।
ವಿನಾ ಕಾಮಸಹಾಯೇನ ಕಾ ಶಕ್ತಾ ಜೇತುಮೀಶ್ವರಂ ॥ ೫೫ ॥

ಭಜ ಕಾಮಂ ತಪಃ ಕೃತ್ವಾ ಪುಷ್ಕರೇ ವ್ರಜ ಮೋಹಿನಿ ।
ಸದ್ಯಃ ಸಾಕ್ಷಾತ್ಸಭವಿತಾ ದಯಾಲುರ್ಯೋಷಿತಾಂ ಪ್ರಭುಃ ॥ ೫೬ ॥

ಇತ್ಯುಕ್ತ್ವಾ ತಾಮಪ್ಸರಸಾಂ ಪ್ರವರಾ ಕಾಮಮಂತಿಕಂ ।
ಜಗಾಮೇಂದ್ರಿಯಶಾಂತ್ಯರ್ಥಂ ಸಾ ಜಗಾಮ ಚ ಪುಷ್ಕರಂ ॥ ೫೭ ॥

ಪುಷ್ಕರೇ ಚ ತಪಃ ಕೃತ್ವಾ ಕಾಮಂ ಸಂಪ್ರಾಪ್ಯ ಮೋಹಿನೀ ।
ಜಗಾಮ ತೇನ ಸಾರ್ಧಂ ಚ ಬ್ರಹ್ಮಲೋಕಮನಾಮಯಂ ॥ ೫೮ ॥

---

೫೪. ಎಲೌ ಭಾಮಿನಿಯೇ, ಮೊದಲು ಅತಿಸುಂದರವಾದ ವೇಷವನ್ನು ಧರಿಸಿ, ಮನ್ಮಥನನ್ನು ಆರಾಧಿಸಿ, ನೀನಾಗಿಯೇ ಚತುರ್ಮುಖನ ಸಮೀಪಕ್ಕೆ ಹೋಗಿ (ಅವನೊಡನೆ) ನಿನ್ನ ಮೋಹವನ್ನು ಪ್ರಕಟಿಸು.

೫೫. ಜಿತೇಂದ್ರಿಯರಲ್ಲಿ ಶ್ರೇಷ್ಠನೂ, ಸಾಕ್ಷಾನ್ನಾರಾಯಣಸ್ವರೂಪನೂ, ಆದ ಆ ಚತುರ್ಮುಖನನ್ನು ಜಯಿಸಲು ಮನ್ಮಥನ ಸಹಾಯವಿಲ್ಲದಿದ್ದರೆ ಯಾರಿಗೆ ಸಾಧ್ಯ ?

೫೬. ಎಲೌ ಮೋಹಿನಿಯೇ, ಪುಷ್ಕರಕ್ಷೇತ್ರಕ್ಕೆ ಹೋಗಿ ತಪಸ್ಸುಮಾಡಿ ಮನ್ಮಥನನ್ನು ಮೆಚ್ಚಿಸು. ದಯಾಳುವೂ ಸ್ತ್ರೀಯರಿಗೆ ಪ್ರಭುವೂ ಆದ ಆ ಮನ್ಮಥನು ಕೂಡಲೇ ಸಾಕ್ಷಾತ್ಕಾರ ಕೊಡುವನು.

೫೭. ಹೀಗೆ ಹೇಳಿ ಅಪ್ಸರಶ್ರೇಷ್ಠೆಯಾದ ಆ ರಂಭೆಯು ಇಂದ್ರಿಯಸುಖಕ್ಕಾಗಿ ಮನ್ಮಥನ ಸಮೀಪಕ್ಕೆ ಹೋದಳು. ಇತ್ತ ಆ ಮೋಹಿನಿಯೂ ಕೂಡ ಪುಷ್ಕರಕ್ಷೇತ್ರಕ್ಕೆ ತೆರಳಿದಳು.

೫೮. ಮೋಹಿನಿಯು ಪುಷ್ಕರಕ್ಷೇತ್ರದಲ್ಲಿ ತಪಸ್ಸುಮಾಡಿ ಮನ್ಮಥನ ಸಾಕ್ಷಾತ್ಕಾರಹೊಂದಿ ಅವನೊಡನೆ ನಿರಾಮಯವಾದ ಬ್ರಹ್ಮಲೋಕಕ್ಕೆ ತೆರಳಿದಳು.

ದದರ್ಶ ನಿರ್ಜನಸ್ಥಂ ಚ ಮೋಹಿನೀ ಕಮಲೋದ್ಭವಂ ।
ತಮೇವ ಮೋಹನಂ ಕರ್ತುಂ ಸಮಾರೇಭೇ ಪುರಃ ಸ್ಥಿತಾ ॥ ೫೯ ॥

ಕ್ಷಣಂ ನನರ್ತ ಸುಚಿರಂ ಸುಗಾನೇನ ಕ್ಷಣಂ ಜಗೌ ।
ಸಂಗೀತಂ ಮಮ ಸಂಬಂಧಿ ಭಕ್ತಾನಾಂ ಚಿತ್ತಮೋಹನಂ ॥ ೬೦ ॥

ವಿಧಾತಾ ಜಗತಾಂ ತಸ್ಯಾಃ ಶ್ರುತ್ವಾ ಸಂಗೀತಮೀಪ್ಸಿತಂ ।
ಪುಲಕಾಂಚಿತಸರ್ವಾಂಗೋ ಮುಮೋಹ ಸಾಶ್ರುಲೋಚನಃ ॥ ೬೧ ॥

ದೃಷ್ಟ್ವಾ ಮುಗ್ಧಂ ಚತುರ್ವಕ್ತ್ರಂ ಮೋಹಿನೀ ಹೃಷ್ಟಮಾನಸಾ ।
ಕಲಾಪ್ರಮಾಣಂ ಭಾವಂ ಚ ಚಕಾರ ತತ್ರ ಲೀಲಯಾ ॥ ೬೨ ॥

ಸ್ವಾಂಗಂ ಸಂದರ್ಶಯಾಮಾಸ ಸ್ಮೇರಭ್ರೂಭಂಗಪೂರ್ವಕಂ ।
ಕಾ ಲಜ್ಜಾ ತಸ್ಯ ಸಂಸಾರೇ ಯಃ ಕಾಮಹತಚೇತನಃ ॥ ೬೩ ॥

---

೫೯. ಅಲ್ಲಿ ನಿರ್ಜನಪ್ರದೇಶದಲ್ಲಿರುವ ಚತುರಾನನನನ್ನು ನೋಡಿ ಮೋಹಿನಿಯು, ಅವನ ಮುಂದೆ ನಿಂತು ಮೋಹಗೊಳಿಸಲಾರಂಭಿಸಿದಳು.

೬೦. ಸ್ವಲ್ಪಹೊತ್ತು ಮನೋಹರವಾಗಿ ನರ್ತನಮಾಡಿದಳು. ಸ್ವಲ್ಪಹೊತ್ತು ಇಂಪಾಗಿ ಹಾಡಿದಳು. ಭಕ್ತರ ಚಿತ್ತಾಕರ್ಷಕವಾದ ನನ್ನನ್ನು ಹೊಗಳುವ ಸ್ತೋತ್ರಗಳನ್ನು ಮಧುರವಾಗಿ ಹಾಡಿದಳು.

೬೧. ಜಗತ್ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನು ಆ ಮೋಹಿನಿಯ ಮನೋಹರವಾದ ಗಾನವನ್ನು ಕೇಳಿ, ರೋಮಾಂಚಿತ ಶರೀರನಾಗಿ ಕಣ್ಣುಗಳಲ್ಲಿ ಆನಂದಾಶ್ರುವನ್ನು ಸುರಿಸುತ್ತ ಮೋಹಗೊಂಡನು.

೬೨. ಈ ರೀತಿ ಮೋಹಗೊಂಡ ಚತುರ್ಮುಖನನ್ನು ನೋಡಿ ಮೋಹಿನಿಯು ಸಂತೋಷಗೊಂಡವಳಾಗಿ, ಕಲಾಚತುರತೆಯನ್ನೂ, ಭಾವವನ್ನೂ ಲೀಲೆಯಿಂದ ಪ್ರಕಟಿಸಲಾರಂಭಿಸಿದಳು.

೬೩. ಸ್ಮಿತಮುಖದಿಂದಲೂ, ಭ್ರೂಭಂಗದಿಂದಲೂ ಕೂಡಿ ತನ್ನ ಅವಯವಗಳನ್ನು ವ್ಯಕ್ತಪಡಿಸಿದಳು. ಯಾರು ಕಾಮಪೀಡಿತವಾದ ಮನಸ್ಸಿನಿಂದ ಕೂಡಿರುವರೋ ಅವರಿಗೆ ಲಜ್ಜೆಯೆಲ್ಲಿ ಬರಬೇಕು?

ವಿಜ್ಞಾಯ ಬ್ರಹ್ಮಾ ತದ್ಭಾವಂ ನತವಕ್ತ್ರೋ ಬಭೂವ ಹ ।
ಪ್ರದಾಯ ತಸ್ಯೈ ದಾನಂ ಚ ವಿರತಃ ಶ್ರೀಹರಿಂ ಸ್ಮರನ್ ॥ ೬೪ ॥

ವಿಜ್ಞಾಯ ಬ್ರಹ್ಮಣೋ ಭಾವಂ ಶುಷ್ಕಕಂಠೋಷ್ಠತಾಲುಕಾ ।
ಹತೋದ್ಯಮಾ ಸಾ ತುಷ್ಟಾವ ಕಾಮಂ ಕಾಮಪ್ರದಂ ವರಂ ॥ ೬೫ ॥

॥ ಮೋಹಿನ್ಯುವಾಚ ॥

ಸರ್ವೇಂದ್ರಿಯಾಣಾಂ ಪ್ರವರಂ ವಿಷ್ಣೋರಂಶಂ ಚ ಮಾನಸಂ ।
ತದೇವ ಕರ್ಮಣಾಂ ಬೀಜಂ ತದುದ್ಭವ ನಮೋಽಸ್ತು ತೇ ॥ ೬೬ ॥

ಸ್ವಯಮಾತ್ಮಾ ಹಿ ಭಗವಾನ್ ಜ್ಞಾನರೂಪೋ ಮಹೇಶ್ವರಃ ।
ನಮೋ ಬ್ರಹ್ಮನ್ ಜಗತ್ಸ್ರಷ್ಟಸ್ತದುದ್ಭವ ನಮೋಽಸ್ತು ತೇ ॥ ೬೭ ॥

---

೬೪. ಅವಳ ಮನೋಭಾವವನ್ನು ತಿಳಿದು ಬ್ರಹ್ಮನು ತಲೆಬಾಗಿದನು. ಅವಳ ವಿಲಾಸ ಚೇಷ್ಟೆಗಳಿಗೆ ಉಚಿತವಾದ ಬಹುಮಾನವನ್ನು ಕೊಟ್ಟು ಶ್ರೀಹರಿಯನ್ನು ಸ್ಮರಿಸಿದನು.

೬೫. ಬ್ರಹ್ಮನ ಮನೋಭಿಪ್ರಾಯವನ್ನು ತಿಳಿದು ಒಣಗಿದ ಗಂಟಲಿನಿಂದ ಕೂಡಿದ ಮೋಹಿನಿಯು, ತನ್ನ ಉದ್ಯೋಗವು ವ್ಯರ್ಥವಾಯಿತೆಂದು ಬಗೆದು, ಇಷ್ಟಾರ್ಥದಾಯಕನಾದ ಮನ್ಮಥನನ್ನು ಸ್ತುತಿಸಿದಳು.

೬೬. ಮೋಹಿನಿ :— ಮನಸ್ಸೆಂಬ ಇಂದ್ರಿಯವು ಎಲ್ಲ ಇಂದ್ರಿಯಗಳಿಗೆ ಮೇಲಾಗಿಯೂ, ಶ್ರೀವಿಷ್ಣುವಿನ ಅಂಶಸಂಭೂತವಾಗಿಯೂ ಇರುವುದು. ಕರ್ಮಗಳಿಗೆಲ್ಲ ಮನಸ್ಸೇ ಮೂಲಭೂತವಾದುದು. ಅಂಥ ಮನಸ್ಸಿನಿಂದ ಹುಟ್ಟಿದ ಮನ್ಮಥನಿಗೆ ನಮಿಸುವೆನು.

೬೭. ನೀನೇ ಷಡ್ಗುಣೈಶ್ವರ್ಯ ಪರಿಪೂರ್ಣನಾದ ಆತ್ಮನೂ, ಜ್ಞಾನಸ್ವರೂಪನಾದ ಮಹೇಶ್ವರನೂ, ಜಗತ್ಸೃಷ್ಟಿಕಾರಣನಾದ ಬ್ರಹ್ಮನೂ ಆಗಿರುವೆ. ಅವರೆಲ್ಲರಿಂದಲೂ ಉದ್ಭವಿಸಿದ ಮನ್ಮಥನೇ, ನಿನಗೆ ನಮಸ್ಕಾರಮಾಡುವೆನು.

ಸೃಷ್ಟಿಃ ಸರ್ವಶರೀರೇಷು ವೃಷ್ಟಿಶ್ಚ ಯೋಗಿನಾಮಪಿ ।
ಜಗತ್ಸಾಧ್ಯ ದುರಾರಾಧ್ಯ ದುರ್ನಿವಾರ ನಮೋಽಸ್ತು ತೇ ॥ ೭೮ ॥

ಸರ್ವಾಜಿತಜಗಜ್ಜೇತರ್ಜೀವ ಜೀವಮನೋಹರ ।
ರತಿಬೀಜ ರತಿಸ್ವಾಮಿನ್ ರತಿಪ್ರಿಯ ನಮೋಽಸ್ತು ತೇ ॥ ೭೯ ॥

ಶಶ್ವದ್ಯೋಷಿದಧಿಷ್ಠಾನ ಯೋಷಿತ್ಪ್ರಾಣಾಧಿಕಪ್ರಿಯ ।
ಯೋಷಿದ್ವಾಹನ ಯೋಷಾಸ್ತ್ರ ಯೋಷಿದ್ಬಂಧೋ ನಮೋಽಸ್ತುತೇ ॥ ೨೦ ॥

ಪತಿಸಾಧ್ಯಕರಾಶೇಷರೂಪಾಧಾರಗುಣಾಶ್ರಯ ।
ಸುಗಂಧಿವಾತಸಚಿವ ಮಧುಮಿತ್ರ ನಮೋಽಸ್ತು ತೇ ॥ ೨೧ ॥

ಶಶ್ವದ್ಯೋನಿಕೃತಾಧಾರ ಸ್ತ್ರೀಸಂದರ್ಶನವರ್ಧನ ।
ವಿದಗ್ಧಾನಾಂ ವಿರಹಿಣಾಂ ಪ್ರಾಣಾಂತಕ ನಮೋಽಸ್ತು ತೇ ॥ ೨೨ ॥

---

೭೮. ನೀನು ಎಲ್ಲ ಶರೀರದ ಸೃಷ್ಟಿಗೆ ಕಾರಣನಾಗಿರುವೆ. ಯೋಗಿಗಳ ವೃಷ್ಟಿಗೂ ಪಾತ್ರನಾಗಿರುವೆ. ನಿನ್ನಿಂದಲೇ ಜಗತ್ತು ಜೀವಿಸಿರಲು ಸಾಧ್ಯವಾಗುವುದು. ನಿನ್ನನ್ನು ಮೆಚ್ಚಿಸಲು ಯಾರಿಗೂ ಸಾಧ್ಯವಿಲ್ಲ. ನಿನ್ನನ್ನು ತಡೆಯಲೂ ಸಾಧ್ಯವಿಲ್ಲ. ನಿನಗೆ ವಂದನೆಗಳು.

೭೯. ಯಾರೂ ನಿನ್ನನ್ನು ಗೆಲ್ಲಲಾರರು. ನೀನು ಮಾತ್ರ ಜಗತ್ತನ್ನೇ ಜಯಿಸಿರುವೆ. ಎಲ್ಲರ ಜೀವಸ್ವರೂಪನೂ, ರತಿಸುಖಕ್ಕೆ ಕಾರಣನೂ, ರತಿಪ್ರಿಯನೂ ಆದ ನಿನಗೆ ನಮಸ್ಕರಿಸುವೆನು.

೨೦. ಸ್ತ್ರೀಯರಿಗೆ ಅಧಿಷ್ಠಾನಸ್ವರೂಪನೂ, ಸ್ತ್ರೀಯರ ಪ್ರಾಣಕ್ಕಿಂತ ಪ್ರಿಯತಮನೂ, ಸ್ತ್ರೀಯರೇ ಆಶ್ರಯವಾಗಿ ಉಳ್ಳವನೂ, ಸ್ತ್ರೀಯರನ್ನೇ ಅಸ್ತ್ರವಾಗಿ ಪಡೆದಿರುವವನೂ, ಸ್ತ್ರೀಯರ ಬಂಧುವೂ ಆದ ಮನ್ಮಥನೇ, ನಿನಗೆ ನಮಿಸುವೆನು.

೨೧. ಯೋಗ್ಯಪತಿಯನ್ನು ಸಾಧಿಸಿಕೊಡುವವನೂ, ಸಮಸ್ತವಾದ ರೂಪ ಮತ್ತು ಗುಣಗಳಿಗೆ ಆಧಾರಸ್ವರೂಪನೂ, ಸುಗಂಧವಾದ ವಾಯುವಿನ ಸಚಿವನೂ, ವಸಂತಮಿತ್ರನೂ, ಆದ ನಿನಗೆ ವಂದಿಸುವೆನು.

೨೨. ಯೋನಿಯೇ ಆಧಾರವಾಗಿ ಉಳ್ಳವನೇ, ಹೆಂಗಸನ್ನು ನೋಡಿದ ಮಾತ್ರದಿಂದ ವೃದ್ಧಿಗೊಳ್ಳುವವನೇ, ರಸಿಕರ ಮತ್ತು ವಿರಹಿಗಳ ಪ್ರಾಣಾಪಹಾರಕನೇ ನಿನಗೆ ನಮಸ್ಕಾರಮಾಡುವೆನು.

ಅಕೃಪಾ ಯೇಷು ತೇಽನರ್ಥಸ್ತೇಷಾಂ ಜ್ಞಾನವಿನಾಶನಂ ।
ಅನೂಹರೂಪಭಕ್ತೇಷು ಕೃಪಾಸಿಂಧೋ ನಮೋಽಸ್ತು ತೇ ॥ ೭೩ ॥

ತಪಸ್ವಿನಾಂ ಚ ತಪಸಾಂ ವಿಘ್ನಬೀಜಾವಲೀಲಯಾ ।
ಮನಃ ಸಕಾಮಂ ಮುಕ್ತಾನಾಂ ಕರ್ತುಂ ಶಕ್ತ ನಮೋಽಸ್ತು ತೇ ॥ ೭೪ ॥

ತಪಃಸಾಧ್ಯಾಶ್ಚಾಽರಾಧ್ಯಾಶ್ಚ ಸದೈವಂ ಪಾಂಚಭೌತಿಕಾಃ ।
ಪಂಚೇಂದ್ರಿಯಕೃತಾಧಾರ ಪಂಚಬಾಣ ನಮೋಽಸ್ತು ತೇ ॥ ೭೫ ॥

ಮೋಹಿನೀತ್ಯೇವಮುಕ್ತ್ವಾ ತು ಮನಸಾ ಸಾ ವಿಧೇಃ ಪುರಃ ।
ವಿರರಾಮಾಽನಮ್ರವಕ್ತ್ರಾ ಬಭೂವ ಧ್ಯಾನತತ್ಪರಾ ॥ ೭೬ ॥

ಉಕ್ತಂ ಮಾಧ್ಯಂದಿನೇ ಕಾಂತೇ ಸ್ತೋತ್ರಮೇತನ್ಮನೋಹರಂ ।
ಪುರಾ ದುರ್ವಾಸಸಾ ದತ್ತಂ ಮೋಹಿನ್ಯೈ ಗಂಧಮಾದನೇ ॥ ೭೭ ॥

---

೭೩. ನೀನು ಯಾರಲ್ಲಿ ದಯೆ ತೋರುವುದಿಲ್ಲವೋ ಅವರಿಗೆ ಅನರ್ಥವುಂಟಾಗುವುದಲ್ಲದೆ ಜ್ಞಾನವೂ ನಾಶವಾಗುವುದು. ಭಕ್ತರಿಂದ ಊಹಿಸಲಾಗದ ರೂಪವುಳ್ಳ ಕೃಪಾಸಮುದ್ರನೇ, ನಿನಗೆ ವಂದಿಸುವೆನು.

೭೪. ತಪಸ್ವಿಗಳ ತಪಸ್ಸಿಗೆ ಲೀಲಾಮಾತ್ರದಿಂದ ವಿಘ್ನಬೀಜವನ್ನು ಬಿತ್ತುವವನೇ, ವಿರಾಗಿಗಳ ಮನಸ್ಸನ್ನೂ ರಾಗಯುತವಾದ್ದನ್ನಾಗಿ ಮಾಡಲು ಶಕ್ತನಾದವನೇ, ನಿನಗೆ ಅಭಿವಂದಿಸುವೆನು.

೭೫. ಪಂಚಭೂತಗಳೆನಿಸಿಕೊಂಡ ಪೃಥಿವೀ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶಗಳು ತಪಸ್ಸಿನಿಂದ ಆರಾಧಿಸಲ್ಪಡತಕ್ಕವು. ಆ ಪಂಚಭೂತಗಳಿಂದ ಮಾಡಲ್ಪಟ್ಟ ಪಂಚೇಂದ್ರಿಯಗಳಿಗೆ ಆಧಾರಸ್ವರೂಪನೇ, ಪಂಚಬಾಣನೇ, ನಿನಗೆ ವಂದಿಸುವೆನು.

೭೬. ಮೋಹಿನಿಯು ಮನಸ್ಸಿನಲ್ಲೇ ಮನಸಿಜನನ್ನು ಈ ರೀತಿ ಸ್ತುತಿಸಿ ಧ್ಯಾನಾಸಕ್ತಳಾಗಿ ಚತುರ್ಮುಖನ ಮುಂದೆ ತಲೆಬಾಗಿ ನಿಂತಳು.

೭೭. ಎಲೌ ಕಾಂತೆಯೇ, ಮನೋಹರವಾದ ಈ ಸ್ತೋತ್ರವು ಮಾಧ್ಯಂದಿನ ಸಾಮದಲ್ಲಿ ಉಕ್ತವಾಗಿದೆ. ಪೂರ್ವದಲ್ಲಿ ದೂರ್ವಾಸಮಹರ್ಷಿಯು ಗಂಧಮಾದನ ಪರ್ವತದಲ್ಲಿ ಮೋಹಿನಿಗೆ ಇದನ್ನು ಉಪದೇಶಿಸಿದನು.

ಸ್ತೋತ್ರಮೇತನ್ಮಹಾಪುಣ್ಯಂ ಕಾಮೀ ಭಕ್ತ್ಯಾ ಯದಾಪಠೇತ್ ।
ಅಭೀಷ್ಟಂ ಲಭತೇ ನೂನಂ ನಿಷ್ಕಲಂಕೋ ಭವೇದ್ಧ್ರುವಂ ॥ ೭೮ ॥

ಚೇಷ್ಟಾಂ ನ ಕುರುತೇ ಕಾಮಃ ಕದಾಚಿದಪಿ ತಂ ಪ್ರಿಯಂ ।
ಭವೇದರೋಗೀ ಶ್ರೀಯುಕ್ತಃ ಕಾಮದೇವಸಮಪ್ರಭಃ ।
ವನಿತಾಂ ಲಭತೇ ಸಾಧ್ವೀಂ ಪತ್ನೀಂ ತ್ರೈಲೋಕ್ಯ ಮೋಹಿನೀಂ ॥ ೭೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣ ಜನ್ಮಖಂಡೇ
ನಾರಾಯಣನಾರದಸಂವಾದೇ ಮೋಹಿನೀಸ್ತೋತ್ರವರ್ಣನಂ
ನಾಮ ಏಕತ್ರಿಂಶೋಽಧ್ಯಾಯಃ

---

೭೮. ಕಾಮುಕನಾದವನು ಭಕ್ತಿಯಿಂದ ಮಹಾಪುಣ್ಯಕರವಾದ ಈ ಸ್ತೋತ್ರವನ್ನು ಯಾವಾಗ ಪಠಿಸಿದರೂ, ತನ್ನ ಇಷ್ಟಾರ್ಥವನ್ನು ಪಡೆಯುವುದಲ್ಲದೆ ನಿಷ್ಕಳಂಕನಾಗುವುದರಲ್ಲಿ ಸಂಶಯವಿಲ್ಲ.

೭೯. ಆ ಕಾಮಿಯನ್ನು ಕಾಮನು ಯಾವಾಗಲೂ ನಿರಾಶೆಗೊಳಿಸುವುದಿಲ್ಲ. ಅವನು ರೋಗರಹಿತನೂ, ಕಾಂತಿಯುತನೂ, ಮನ್ಮಥನಿಗೆ ಸದೃಶನೂ ಆಗುವನು. ಸಾಧ್ವಿಯೂ, ತ್ರಿಲೋಕ ಮೋಹಿನಿಯೂ ಆದ ಹೆಂಗುಸನ್ನು ಪತ್ನಿಯಾಗಿ ಪಡೆಯುವನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀ ಕೃಷ್ಣಜನ್ಮ ಖಂಡದಲ್ಲಿ
ಮೋಹಿನೀಸ್ತೋತ್ರವರ್ಣನೆಯೆಂಬ ಮೂವತ್ತೊಂದನೆಯ
ಅಧ್ಯಾಯವು ಮುಗಿದುದು.

ಮೂವತ್ತೊಂದನೆಯ ಅಧ್ಯಾಯದ ಸಾರಾಂಶ.

ತ್ರಿಲೋಕ ಸೃಷ್ಟಿಕರ್ತನೂ, ತಪಸ್ಸಿನ ಫಲದಾತೃವೂ ಆದ ಬ್ರಹ್ಮನು ಅಪ್ಸರೆಯ ಶಾಪದಿಂದ ಅಪೂಜ್ಯನಾದುದು ಹೇಗೆ? ಎಂದು ರಾಧೆಯು ಕೇಳಿದುದಕ್ಕೆ ಶ್ರೀಕೃಷ್ಣನು ಇಂತೆಂದನು. ಹಿಂದೆ ರೈವತಮನ್ವಂತರದಲ್ಲಿ ಸುಚಂದ್ರನೆಂಬ ರಾಜೇಂದ್ರನು ವಿಷ್ಣುಭಕ್ತರಲ್ಲಿ ಶ್ರೇಷ್ಠನೆನಿಸಿ ಮಲಯ ದ್ರೋಣಪರ್ವತದಲ್ಲಿ ತಪಸ್ಸು ಮಾಡುತ್ತಿದ್ದಾಗ ಚತುರ್ಮುಖಬ್ರಹ್ಮನು ಅಲ್ಲಿಗೆ ಬಂದು ಅವನ ಅಭೀಪ್ಸಿತವಾದ ವರವನ್ನು ಕೊಟ್ಟು ತನ್ನ ಲೋಕಕ್ಕೆ ಹಿಂತಿರುಗುತ್ತಿದ್ದನು. ಆಗ ಮೋಹಿನಿಯೆಂಬ ಅಪ್ಸರೆಯು ಬ್ರಹ್ಮನ ರೂಪವನ್ನು ನೋಡಿ ಮೋಹಗೊಂಡು ತನ್ನ ಹಾವಭಾವ ಗಳನ್ನು ವ್ಯಕ್ತಪಡಿಸಿದಳು ಆದರೆ ಜಿತೇಂದ್ರಿಯನಾದ ಬ್ರಹ್ಮನು ನಿಶ್ಚಲನಾಗಿ ಮುಂದಕ್ಕೆ ತೆರಳಿದನು. ಕಾಮಾತ್ಮಕಳಾದ ಮೋಹಿನಿಯು ಅಲ್ಲಿಯೇ ಮೂರ್ಛೆ ಬಿದ್ದಿರುವುದನ್ನು ಆ ಮಾರ್ಗವಾಗಿ ಬರುತ್ತಿದ್ದ ರಂಭೆಯು ಕಂಡು, ಕಾರಣವೇನೆಂದು ಕೇಳಿ ತಿಳಿದು ಮನ್ಮಥನ ಸಹಾಯದಿಂದ ಬ್ರಹ್ಮಲೋಕಕ್ಕೆ ಹೋಗುವಂತೆ ಅವಳಿಗೆ ಉಪದೇಶಿಸಿದಳು. ಅದರಂತೆ ಮೋಹಿನಿಯು ಮನ್ಮಥನನ್ನು ಸ್ತುತಿಸಿ ಮೆಚ್ಚಿಸಿ ಅವನೊಡನೆ ಬ್ರಹ್ಮಲೋಕಕ್ಕೆ ಬಂದು ಬ್ರಹ್ಮನ ಮುಂದೆ ಮಧುರವಾಗಿ ಹಾಡಿ ನರ್ತನ ಮಾಡಿದಳು. ಬ್ರಹ್ಮನು ಅವಳ ಕಲಾಚಾತುರ್ಯಕ್ಕೆ ಮೆಚ್ಚಿ ಅವಳಿಗೆ ಬಹುಮಾನ ವನ್ನು ಕೊಟ್ಟನೇ ಹೊರತು ಅವಳಿಗೆ ವಶನಾಗಲಿಲ್ಲ. ಆಗ ಮೋಹಿನಿಯು ನಿರಾಶ ಳಾಗಿ ಮನ್ಮಥನನ್ನು ಕುರಿತು ವಿಧವಿಧವಾಗಿ ಸ್ತುತಿಸಿದಳು. ಮೋಹಿನಿಯು ಪಠಿಸಿದ ಮನ್ಮಥನ ಸ್ತೋತ್ರವನ್ನು ಪಠಿಸುವವರು ತಮ್ಮ ಇಷ್ಟಾರ್ಥವನ್ನು ಹೊಂದುವರು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ದ್ವಾತ್ರಿಂಶೋಽಧ್ಯಾಯಃ ||

|| ಶ್ರೀಕೃಷ್ಣ ಉವಾಚ ||

ಮೋಹಿನೀಸ್ತವನೇನೈವ ಕಾಮಸ್ತುಷ್ಟೋ ಬಭೂವ ಹ |
ಚಕಾರ ಶರಸಂಧಾನಮಂತರಿಕ್ಷೇ ಸ್ಥಿತಃ ಸ್ವಯಂ || ೧ ||

ಮಂತ್ರಪೂತಂ ಮಹಾಸ್ತ್ರಂ ಚ ಚಿಕ್ಷೇಪ ಪಿತರಂ ಮುದಾ |
ಬಭೂವ ಚಂಚಲೋ ಬ್ರಹ್ಮಾ ಕಾಮಾಸ್ತ್ರೇಣ ಚ ಕಾಮುಕಃ || ೨ ||

ಕ್ಷಣಂ ನಿರೀಕ್ಷಣಂ ಚಕ್ರೇ ಮೋಹಿನ್ಯಾಸ್ಯೇ ಪುನಃಪುನಃ |
ಜ್ಞಾನಂ ಪ್ರಾಪ್ಯ ತದಾ ಧಾತಾ ವಿರರಾಮ ಹರಿಂ ಸ್ಮರನ್ || ೩ ||

ಮೂವತ್ತೆರಡನೆಯ ಅಧ್ಯಾಯ.

೧. ಶ್ರೀಕೃಷ್ಣ :—ಮೋಹಿನಿಯ ಸ್ತೋತ್ರದಿಂದ ಮನ್ಮಥನು ಸಂತುಷ್ಟನಾಗಿ ತಾನು ಅಂತರಿಕ್ಷದಲ್ಲಿ ಕುಳಿತು ಶರಸಂಧಾನಮಾಡಲುಪಕ್ರಮಿಸಿದನು.

೨ ಮಂತ್ರಪೂತವಾದ ಮಹಾಸ್ತ್ರವನ್ನು ಸೃಷ್ಟಿಕರ್ತನಾದ ಬ್ರಹ್ಮನ ಮೇಲೆ ಪ್ರಯೋಗಿಸಿದನು. ಕಾಮಾಸ್ತ್ರಹತನಾದ ಬ್ರಹ್ಮನು ಕೂಡಲೇ ಕಾಮುಕನೂ ಚಂಚಲನೂ ಆದನು.

೩. ಕ್ಷಣಕಾಲ ಮೋಹಿನಿಯ ಮುಖವನ್ನು ಸಕಾಮನಾಗಿ ನೋಡ ತೊಡಗಿದನು. ಪುನಃ ಶ್ರೀಹರಿಯ ಸ್ಮರಣೆಯಿಂದ ದಿವ್ಯಜ್ಞಾನವನ್ನು ಹೊಂದಿ ಮನಸ್ಸನ್ನು ಬಿಗಿ ಹಿಡಿದನು.

ಬುಬುಧೇ ಮನಸಾ ಸರ್ವಂ ಚರಿತಂ ಮನ್ಮಥಸ್ಯ ಚ ।
ಶಶಾಪ ತಂ ಸುತಮಪಿ ವಿಧಾತಾ ಕ್ರೋಧವಿಹ್ವಲಃ ॥ ೪ ॥

ಹೇ ಕಾಮ ಯೌವನೋನ್ಮತ್ತ ಮೂಢೈಶ್ವರ್ಯೇಣ ಗರ್ವಿತ ।
ಭವಿತಾ ದರ್ಪಭಂಗಸ್ತೇ ಗುರೋರ್ಮೇ ಹೇಲನಾದಿತಿ ॥ ೫ ॥

ಹತೋದ್ಯಮೋ ಜಗಾಮಾಽಶು ಮನ್ಮಥೋ ಮಧುನಾ ಸಹ ।
ಬ್ರಹ್ಮಣಃ ಶಾಪಭೀತಶ್ಚ ಶುಷ್ಕಕಂಠೋಷ್ಠತಾಲುಕಃ ॥ ೬ ॥

ಇತ್ಯುವಾಚ ಜಗದ್ಧಾತಾ ಮೋಹಿನೀಂ ಮದನಾತುರಾಂ ।
ಚತುರ್ವಕ್ತ್ರಂ ಚ ಪಶ್ಯಂತೀಂ ಸಸ್ಮಿತಂ ವಕ್ರಚಕ್ಷುಷಾ ॥ ೭ ॥

॥ ಬ್ರಹ್ಮೋವಾಚ ॥

ಮಾತರ್ಮೋಹಿನಿ ಗಚ್ಛ ತ್ವಂ ನಿಷ್ಫಲಂ ಕರ್ಮ ಚಾತ್ರ ತೇ ।
ಜ್ಞಾತಸ್ತವಾಭಿಪ್ರಾಯಶ್ಚ ನಾಹಂ ಯೋಗ್ಯೋಽಸ್ಯ ಕರ್ಮಣಃ ॥ ೮ ॥

---

೪. ಮನಸ್ಸಿನಲ್ಲೇ ಇದೆಲ್ಲವೂ ಮನ್ಮಥನ ಚೇಷ್ಟೆಯೆಂದು ತಿಳಿದನು. ಕುಪಿತನಾದ ಬ್ರಹ್ಮನು ಮಗನಾದರೂ ಮನ್ಮಥನನ್ನು ಅವನ ತಪ್ಪಿಗಾಗಿ ಶಪಿಸಿದನು.

೫. " ಪ್ರಾಯದಿಂದ ಮದಿಸಿದ ಎಲೈ ಮನ್ಮಥನೇ. ಚಂಚಲವಾದ ನಿನ್ನ ಸಂಪತ್ತಿನಿಂದ ಗರ್ವಗೊಂಡಿದ್ದೀಯೆ. ಗುರುವಾದ ನನ್ನನ್ನು ಅವಮಾನ ಪಡಿಸಿದುದರಿಂದ ನಿನ್ನ ಗರ್ವಭಂಗವಾಗುವುದರಲ್ಲಿ ಸಂಶಯವಿಲ್ಲ."

೬. ತನ್ನ ಪ್ರಯತ್ನವು ವ್ಯರ್ಥವಾದುದನ್ನು ತಿಳಿದು ಮನ್ಮಥನು ಬ್ರಹ್ಮನ ಶಾಪಕ್ಕೆ ಹೆದರಿ ಒಣಗಿದ ಗಂಟಲುಳ್ಳವನಾಗಿ ವಸಂತನೊಡನೆ ಜಾಗ್ರತೆ ಹೊರಟು ಹೋದನು.

೭. ಅನಂತರ ಬ್ರಹ್ಮನು ತನ್ನನ್ನೇ ವಕ್ರಕಟಾಕ್ಷದಿಂದ ನೋಡುತ್ತಿದ್ದ ಮದನಾತುರಳಾದ ಮೋಹಿನಿಯನ್ನು ಕುರಿತು ಇಂತೆಂದನು.

೮. ಬ್ರಹ್ಮಾ:—ಎಲೌ ಮಾತೆಯಾದ ಮೋಹಿನಿಯೇ, ನೀನು ಹೋಗು. ನಿನ್ನ ವಿಲಾಸವು ನನ್ನಲ್ಲಿ ವ್ಯರ್ಥವಾಗುವುದು. ನಿನ್ನ ಅಭಿಪ್ರಾಯವು ವ್ಯಕ್ತವಾಯಿತು ನಿನ್ನೊಡನೆ ವಿಲಾಸಮಾಡುವುದಕ್ಕೆ ನಾನು ಯೋಗ್ಯನಲ್ಲ.

ವೇದೇ ಜುಗುಪ್ಸಿತಂ ಕರ್ಮ ತದೇವ ಕರ್ತುಮಕ್ಷಮಃ ।
ವೇದಕರ್ತಾ ಸ್ವಯಮಹಂ ವ್ಯವಸ್ಥಾಕಾರಕೋ ಭವೇ ॥ ೯ ॥

ಅಕೀರ್ತಿರ್ವೇದ ವಕ್ತುಶ್ಚ ನಿಂದ್ಯಂ ಚ ಕಿಮತಃ ಪರಂ ।
ಉಪಸ್ಥಿತಾ ಚ ಯಾ ಯೋಷಿದತ್ಯಾಜ್ಯಾ ರಾಗಿಣಾಮಪಿ ॥ ೧೦ ॥

ಶ್ರುತೌ ಶ್ರುತಮಿತಿ ತ್ಯಾಜ್ಯಾ ಸರ್ವದೈವ ತಪಸ್ವಿನಾಂ ।
ಅಹೋ ಸರ್ವೈಃ ಪರಿತ್ಯಾಜ್ಯಾ ಪುಂಶ್ಚಲೀ ಚ ವಿಶೇಷತಃ ॥ ೧೧ ॥

ಧನಾಯುಃ ಪ್ರಾಣಯಶಸಾಂ ನಾಶಿನೀ ದುಃಖದಾಯಿನೀ ।
ಸ್ವಕಾರ್ಯತತ್ಪರಾ ಶಶ್ವತ್ ಪರಕಾರ್ಯವಿನಾಶಿನೀ ॥ ೧೨ ॥

ನಿಷ್ಠುರಾ ನವಘಾತಿಭ್ಯಃ ಸರ್ವಾಪದ್ಬೀಜರೂಪಿಣೀ ।
ವಿದ್ಯುದ್ದೀಪ್ತಿರ್ಜಲೇ ರೇಖಾ ಲೋಭಾನ್ಮೈತ್ರೀ ಯಥಾ ಭವೇತ್ ॥ ೧೩ ॥

---

೯. ವೇದದಲ್ಲಿ ನಿಕೃಷ್ಟಕರ್ಮವೆಂದು ಉಕ್ತವಾಗಿರುವುದನ್ನು ಸ್ವಯಂ ವೇದಕರ್ತೃವೂ, ಸಂಸಾರದ ಕಟ್ಟುನಿಟ್ಟುಗಳ ನಿರ್ಮಾಪಕನೂ ಆದ ನಾನು ಮಾಡಲು ಅಶಕ್ತನಾಗಿದ್ದೇನೆ.

೧೦. ವೇದಕರ್ತೃವಿಗೆ ಇದಕ್ಕಿಂತ ಅಪಕೀರ್ತಿಕರವೂ, ನಿಂದನೀಯವೂ ಆದ ಕರ್ಮ ಬೇರಾವುದಿರುವುದು. ಕಾಮಿಗಳು ತಮ್ಮನ್ನು ಕಾಮಿಸಿಬಂದ ಹೆಂಗಸನ್ನು ತ್ಯಜಿಸಿ ಬಿಡಬಾರದು.

೧೧. ಆದರೆ ತಪಸ್ವಿಗಳು ಅಂಥ ಸ್ತ್ರೀಯರನ್ನು ತ್ಯಜಿಸಬಹುದೆಂದು ವೇದೋಕ್ತವಾಗಿದೆ. ಅದರಲ್ಲೂ ವೇಶ್ಯೆಯನ್ನು ಕಾಮಿಗಳಾಗಲೀ, ತಪಸ್ವಿಗಳಾಗಲೀ ತ್ಯಜಿಸಿಯೇತೀರಬೇಕು.

೧೨. ವೇಶ್ಯೆಯು ಪುರುಷನ ಧನ, ಆಯುಸ್ಸು, ಪ್ರಾಣ, ಮತ್ತು ಕೀರ್ತಿಗಳನ್ನು ನಾಶಗೊಳಿಸುವಳಲ್ಲದೆ ಸರ್ವದಾ ದುಃಖದಾಯಿನಿಯಾಗಿ, ಸ್ವಾರ್ಥಪರಳಾಗಿ ಪರಾರ್ಥವನ್ನು ಕೆಡಿಸುವಳು.

೧೩. ವೇಶ್ಯೆಯು ಕಟುಕರಿಗಿಂತ ನಿಷ್ಠುರಳಾಗಿ ಎಲ್ಲ ಆಪತ್ತಿಗೂ ಬೀಜ ಸ್ವರೂಪಳಾಗಿರುವಳು. ಮಿಂಚಿನ ಕುಡಿಯಂತೆಯೂ, ನೀರಿನ ಗೆರೆಯಂತೆಯೂ ಚಂಚಲಳಾದ ವೇಶ್ಯೆಯ ಲೋಭದಿಂದ ಮೈತ್ರಿಯು ಹೇಗೆ ಉಂಟಾದೀತು ?

ಪರದ್ರೋಹಾದ್ಯಥಾ ಸಂಪತ್ ಕುಲಟಾ ಪ್ರೇಮ ತತ್ಸಮಂ ।
ಸರ್ವೇಭ್ಯೋ ಹಿಂಸ್ರಜಂತುಭ್ಯೋ ವಿಪದ್ವೀಜಾ ಸದೈವ ಹಿ ॥ ೧೪ ॥

ಯೋ ವಿಶ್ವಸೇತ್ತಾಂ ಸಂಮೂಢೋ ವಿಪತ್ತಸ್ಯ ಪದೇಪದೇ ।
ತ್ವಂ ಚ ರೂಪವತೀ ಧನ್ಯಾ ವಂಚಿತಾ ಕಾಮುಕೈಃ ಸದಾ ॥ ೧೫ ॥

ಯೂನಾಂ ಸಂಪತ್ ಸ್ವರೂಪಾ ಚ ವಿಷತುಲ್ಯಾ ತಪಸ್ವಿನಾಂ ।
ತ್ವಮೇವಾಪ್ಸರಸಾಂ ಶ್ರೇಷ್ಠಾ ಸರ್ವದಾ ಸ್ಥಿರಯೌವನಾ ॥ ೧೬ ॥

ತವೈವ ಕರ್ಮ ಯೋಗ್ಯಂ ಚ ಯುವಾನಂ ಪಶ್ಯ ಸುಂದರಿ ।
ತ್ವಂ ವಿದಗ್ಧಾ ಚ ಯೋಷಿತ್ಸು ವಿದಗ್ಧಾನ್ವೇಷಣಂ ಕುರು ॥ ೧೭ ॥

ವಿದಗ್ಧಾಯಾ ವಿದಗ್ಧೇನ ಸಂಗಮೋ ಗುಣವಾನ್ ಭವೇತ್ ।
ಜರಾತುರೋಽಹಂ ವೃದ್ಧಶ್ಚ ತಪಸ್ವೀ ವೈಷ್ಣವೋ ದ್ವಿಜಃ ॥ ೧೮ ॥

---

೧೪. ಇತರರಿಗೆ ಮೋಸಮಾಡಿ ಗಳಿಸಿದ ಸಂಪತ್ತೂ ವೇಶ್ಯೆಯ ಪ್ರೇಮವೂ ಸಮಾನವಾದುದು. ವೇಶ್ಯಾಪ್ರೇಮವೆಂಬುದು ಎಲ್ಲ ದುಷ್ಟ ಜಂತುಗಳಿಗಿಂತಲೂ ಹೆಚ್ಚಿನ ವಿಪತ್ತಿಗೆ ಕಾರಣವಾಗುವುದು.

೧೫. ವೇಶ್ಯೆಯಲ್ಲಿ ನಂಬಿಕೆಯಿಡುವ ಮೂಢನಿಗೆ ಕ್ಷಣಕ್ಷಣಕ್ಕೂ ವಿಪತ್ತು ಒದಗುವುದು. ರೂಪವತಿಯೂ ಧನ್ಯಳೂ ಆದ ನೀನೂ ಕೂಡ ಕಾಮುಕರಿಂದ ವಂಚಿತಳಾಗಿದ್ದೀಯೆ.

೧೬. ಅಪ್ಸರಸ್ತ್ರೀಯರಲ್ಲಿ ಶ್ರೇಷ್ಠಳೂ, ಸ್ಥಿರಯೌವನ ಉಳ್ಳವಳೂ ಆದ ನೀನು ಯುವಕರಿಗೆ ಸಂಪತ್ಸ್ವರೂಪಳೂ ತಪಸ್ವಿಗಳಿಗೆ ವಿಷಸ್ವರೂಪಳೂ ಆಗಿರುವೆ.

೧೭. ಎಲೌ ಸುಂದರಿಯೇ, ನಿನ್ನ ಕಾರ್ಯಕ್ಕೆ ಉಚಿತನಾದ ಯುವಕನನ್ನು ನೋಡಿಕೋ. ಸ್ತ್ರೀಯರಲ್ಲಿ ಪ್ರೌಢೆಯಾದ ನೀನು ಪ್ರೌಢನಾದ ಪುರುಷನನ್ನು ಹುಡುಕಿಕೋ.

೧೮. ಪ್ರೌಢಳಾದ ಸ್ತ್ರೀಯು ಪ್ರೌಢನಾದ ಪುರುಷನೊಡನೆ ಸೇರಿದರೆ ಉಚಿತವಾಗುವುದು. ಬ್ರಾಹ್ಮಣನೂ, ವಿಷ್ಣುಭಕ್ತನೂ, ತಪಸ್ವಿಯೂ ಆದ ನಾನು ಮುದಿತನದಿಂದ ಪೀಡಿತನಾಗಿದ್ದೇನೆ.

ಅಸ್ವತಂತ್ರಃ ಪರಾಧೀನಃ ಕಾ ರತಿಃ ಪುಂಶ್ಚಲೀಷು ಮೇ ।
ಅಯೇ ವತ್ಸೇ ಗಚ್ಛ ಶೀಘ್ರಂ ವಿಹಾಯ ಪಿತರಂ ಚ ಮಾಂ ॥ ೧೯ ॥

ನಾಮ್ನಾಽಹಂ ಚ ಜಗತ್ಸ್ರಷ್ಟಾ ತಸ್ಮಾತ್ತವ ಪಿತಾ ಸದಾ ।
ಮನ್ಮಥಂ ಚಂದ್ರಮಿತ್ರಂ ಚ ಜಯಂತಂ ನಲಕೂಬರಂ ॥ ೨೦ ॥

ಸ್ವರ್ವೈದ್ಯೌ ಚಂದ್ರತನಯಂ ದಿತಿಪುತ್ರಾಂಶ್ಚ ಸುಂದರಾನ್ ।
ಕಾಮಶಾಸ್ತ್ರೇಷು ನಿಷ್ಣಾತಾನ್ರತಿಕರ್ಮವಿಶಾರದಾನ್ ॥ ೨೧ ॥

ಯಾ ಮಾಂ ಯಾಸಿ ಹಿ ತಾಂ ಸ್ತ್ಯಕ್ತ್ವಾ ಸಾ ವಿದಗ್ಧಾ ಚ ಕಾಮುಕೀ ।
ಸದಾ ಸಂಭೋಗವಿಷಯೇ ಸ್ತ್ರಿಯಂ ಪ್ರಾರ್ಥಯತೇ ಪುಮಾನ್ ॥ ೨೨ ॥

ಸ್ತ್ರೀ ಚೇತ್ ಪ್ರಯಾತಿ ಪುರುಷಂ ವಿಪರೀತಂ ವಿಡಂಬನಂ ।
ಸರ್ವೇಷಾಂ ಚೈವ ರತ್ನಾನಾಂ ಸ್ತ್ರೀರತ್ನಂ ದುರ್ಲಭಂ ಪರಂ ॥ ೨೩ ॥

---

೧೯. ಪರಾಧೀನನೂ ಸ್ವತಂತ್ರರಹಿತನೂ ಆದ ನನಗೆ ವೇಶ್ಯೆಯಲ್ಲಿ ರತಿಯುಂಟಾಗುವುದೆಂತು? ಎಲೌ ಮಗಳೇ, ತಂದೆಗೆ ಸಮಾನನಾದ ನನ್ನನ್ನು ಬಿಟ್ಟು ಜಾಗ್ರತೆ ದೂರಹೋಗು.

೨೦. ನಾನು ಜಗತ್ಸ್ರಷ್ಟನೆನಿಸಿಕೊಂಡಿರುವುದರಿಂದ ನಿನಗೆ ತಂದೆಯ ಸಮಾನನಾಗಿರುವೆನು. ಮನ್ಮಥನನ್ನೂ, ಚಂದ್ರನನ್ನೂ, ಇಂದ್ರಪುತ್ರನಾದ ಜಯಂತನನ್ನೂ, ಕುಬೇರಪುತ್ರನಾದ ನಳಕೂಬರನನ್ನೂ ಬಿಟ್ಟು ನನ್ನನ್ನೇಕೆ ಪೀಡಿಸುವೆ.

೨೧. ಅಶ್ವಿನೀಕುಮಾರರನ್ನೂ, ಚಂದ್ರಪುತ್ರನಾದ ಬುಧನನ್ನೂ, ದಿತಿ ದೇವಿಯ ಸುಂದರ ಪುತ್ರರನ್ನೂ, ಕಾಮಶಾಸ್ತ್ರದಲ್ಲಿ ನಿಷ್ಣಾತರೂ, ರತಿಕರ್ಮ ವಿಶಾರದರೂ ಆದ ಸುಂದರಯುವಕರನ್ನೂ ಅನುಸರಿಸಿ ಹೋಗು.

೨೨. ಪ್ರೌಢೆಯೂ, ಕಾಮುಕಿಯೂ ಆದ ನೀನು ಅವರನ್ನೆಲ್ಲ ಬಿಟ್ಟು ನನ್ನನ್ನೇಕೆ ಅನುಸರಿಸಿ ಬಂದೆ? ನ್ಯಾಯವಾಗಿ ಪುರುಷನು ಸಂಭೋಗಸುಖಕ್ಕಾಗಿ ಸ್ತ್ರೀಯನ್ನು ಬಯಸಿ ಹುಡುಕಬೇಕು.

೨೩. ಹೆಂಗಸೇ ಪುರುಷನನ್ನು ಹುಡುಕಿಕೊಂಡು ಹೋಗುವುದೆಂಬುದು ವಿರುದ್ಧವಾದ ಅನುಕರಣೆಯಾಗಿದೆ. ಪ್ರಪಂಚದಲ್ಲಿ ಅತ್ಯುತ್ತಮವಾದ ರತ್ನಗಳಲ್ಲೆಲ್ಲ ಸ್ತ್ರೀರತ್ನವೆಂಬುದು ದುರ್ಲಭವಾದುದು.

ಸ್ವಯಂ ಪ್ರಾರ್ಥಯತೇ ಸ್ವಾಮೀ ನ ತು ಸ್ವಾಮಿನಮೇವ ಚ ।
ಯೋಷಿಜ್ಜಾತಿಷು ಧಿಕ್‌ತಾಶ್ಚ ಸ್ವಯಂ ಯಾಃ ಸಮುಪಸ್ಥಿತಾಃ ॥ ೨೪ ॥

ಭವೇದ್ದೂರಂ ಸ್ವಲ್ಪಮೂಲ್ಯಂ ರತ್ನಂ ಸ್ವಯಮುಪಸ್ಥಿತಂ ।
ನಿತ್ಯಂ ಪುಮಾನ್ ಸ್ತ್ರಿಯಂ ಯಾತಿ ಸ್ತ್ರೀ ವಾ ಯಾತಿ ಚ ನ ಪ್ರಿಯಂ ॥ ೨೫ ॥

ಲೋಕಾಚಾರೇಷು ವೇದೇಷು ನ ಸ್ತ್ರೀ ಯಾತಿ ಪರಪ್ರಿಯಂ ।
ಸ್ವವಸ್ತು ಭುಂಕ್ತೇ ಯಃ ಕಾಲೇ ಶಾಸ್ತ್ರೋಕ್ತವಿಧಿಪೂರ್ವಕಂ ॥ ೨೬ ॥

ಸ ಪೂಜ್ಯೋ ನ ಭವೇತ್ ಪೂಜ್ಯೋ ಯದ್ರತಿಃ ಪರವಸ್ತುಷು ।
ಕಃ ಕಸ್ಯ ಶತ್ರುರಬಲೇ ನಿಶಾಮಯ ಜಗತ್ರಯೇ ॥ ೨೭ ॥

---

೨೪. ಗಂಡಸಾದವನು ಹೆಂಗಸನ್ನು ಬಯಸಬೇಕೇ ಹೊರತು ಹೆಂಗಸು ಗಂಡಸನ್ನು ಬಯಸುವುದುಚಿತವಲ್ಲ. ಸ್ತ್ರೀಜಾತಿಯಲ್ಲಿ ತಾವಾಗಿಯೇ ಪುರುಷರನ್ನು ಅನುಸರಿಸಿಕೊಂಡು ಹೋಗುವ ಸ್ತ್ರೀಯರು ಗೌರವರಹಿತರಾಗುವರು.

೨೫. ತಾನಾಗಿಯೇ ಬಂದ ರತ್ನಕ್ಕೆ ಗೌರವ ಕಮ್ಮಿಯಾಗುವುದಲ್ಲದೆ ಬೆಲೆಯೂ ಕಮ್ಮಿಯಾಗುವುದು. ಯಾವಾಗಲೂ ಪುರುಷನು ಸ್ತ್ರೀಯನ್ನು ಹುಡುಕಿಕೊಂಡು ಹೋಗಬೇಕೇ ಹೊರತು ಸ್ತ್ರೀಯು ಪುರುಷನನ್ನು ಹುಡುಕಿಕೊಂಡು ಹೋಗಬಾರದು.

೨೬. ಲೋಕರೂಢಿಯಲ್ಲಾಗಲೀ ಶಾಸ್ತ್ರೋಕ್ತವಾಗಿಯಾಗಲೀ ಸ್ತ್ರೀಯು ಪುರುಷನನ್ನು ಅನುಸರಿಸಿ ಹೋಗಲು ಅವಕಾಶವಿಲ್ಲ. ಪ್ರತಿಯೊಬ್ಬ ಪುರುಷನೂ ತನ್ನ ಪದಾರ್ಥವನ್ನು ವಿಧಿಪೂರ್ವಕವಾಗಿ ಸಕಾಲದಲ್ಲಿ ಉಪಭೋಗಿಸುತ್ತಾನೆ.

೨೭. ಯಾರಿಗೆ ಪರರ ವಸ್ತುವಿನಲ್ಲಿ ಆಸಕ್ತಿಯುಂಟಾಗುವುದೋ ಅವನು ಪೂಜ್ಯನಾಗಿದ್ದರೂ ಅಪೂಜ್ಯನೆನಿಸುವನು. ಎಲೌ ಬಾಲಿಕೆಯೇ, ಲೋಕತ್ರಯದಲ್ಲಿ ಯಾರಿಗೆ ಯಾರೂ ಶತ್ರುವಲ್ಲ.

ಸ್ವೇಂದ್ರಿಯಾಃ ಶತ್ರವಃ ಸರ್ವೇ ಶತ್ರುತಾ ಯನ್ನಿಮಿತ್ತತಃ ।
ವೇದೋಕ್ತಾಚರಣೇ ಸರ್ವಂ ಮಿತ್ರಂ ಚ ಜಗತಾಂ ಜಗತ್ ॥ ೨೮ ॥

ಕೃತೇ ವೇದವಿರುದ್ಧೇ ಚ ಮಿತ್ರಂ ಶತ್ರುರ್ಭವೇದ್ಧ್ರುವಂ ।
ವೇದೋಕ್ತಂ ಕೃತವಂತಂ ಚ ಹರಿಸ್ತುಷ್ಟೋ ದಿವಾನಿಶಂ ॥ ೨೯ ॥

ಹರೌ ತುಷ್ಟೇ ಜಗತ್ತುಷ್ಟಂ ತಸ್ಮಿನ್ ರುಷ್ಟೇ ಭವೋ ರಿಪುಃ ।
ಕುತ್ರಾಸ್ತಿ ಕುಲಟಾಜಾತಿಃ ಸಾಧ್ವೀಜಾತಿಶ್ಚ ಕುತ್ರ ವಾ ॥ ೩೦ ॥

ಸ್ವಕೀಯಾಚರಣಾತ್ಸರ್ವಂ ಭವೇ ಭವತಿ ಕರ್ಮಣಃ ।
ಸ್ತ್ರೀಜಾತಿಃ ಪ್ರಕೃತೇರಂಶಾ ನಾರಾಯಣವಿನಿರ್ಮಿತಾ ॥ ೩೧ ॥

ದುಃಶೀಲಾ ಪುಂಶ್ಚಲೀ ನಿಂದ್ಯಾ ಸುಶೀಲಾ ಚ ಪತಿವ್ರತಾ ।
ಪತಿವ್ರತಾಸ್ತು ತ್ರಿವಿಧಾಃ ಪುಂಶ್ಚಲೀಷು ಚ ಯೋಷಿತಃ ॥ ೩೨ ॥

---

೨೮. ತನ್ನ ಸರ್ವೇಂದ್ರಿಯಗಳೂ ತನಗೆ ಶತ್ರುಗಳಾಗುವುವು. ಇಂದ್ರಿಯಗಳ ದೆಸೆಯಿಂದಲೇ ಶತ್ರುತ್ವವುಂಟಾಗುವುದು. ವೇದೋಕ್ತ ಕ್ರಮದಲ್ಲಿ ಆಚರಿಸಿಕೊಂಡಿದ್ದರೆ ಸಮಸ್ತ ಜಗತ್ತೂ ತನಗೆ ಮಿತ್ರನಾಗುವುದು.

೨೯. ವೇದವಿರುದ್ಧಾಚರಣೆಯುಳ್ಳವರಿಗೆ ಮಿತ್ರರೂ ಶತ್ರುಗಳಾಗುವುದರಲ್ಲಿ ಸಂದೇಹವಿಲ್ಲ. ವೇದೋಕ್ತ ಧರ್ಮಗಳನ್ನು ಆಚರಿಸುವವನ ವಿಷಯದಲ್ಲಿ ಶ್ರೀಹರಿಯು ಸರ್ವದಾ ಸಂತುಷ್ಟನಾಗುವನು.

೩೦. ಶ್ರೀಹರಿಯು ಸಂತುಷ್ಟನಾದರೆ ಜಗತ್ತೇ ಸಂತೋಷಗೊಳ್ಳುವುದು. ಅವನು ಕುಪಿತನಾದರೆ ಸಂಸಾರವೇ ನಮಗೆ ಶತ್ರುವಾಗುವುದು. ಪ್ರಪಂಚದಲ್ಲಿ ಪತಿವ್ರತೆಯರ ಜಾತಿಯಾಗಲೀ, ವೇಶ್ಯಾಜಾತಿಯಾಗಲೀ ಪ್ರತ್ಯೇಕವಾಗಿಲ್ಲ.

೩೧. ಸಂಸಾರದಲ್ಲಿ ಪ್ರತಿಯೊಂದೂ ತನ್ನ ಕರ್ಮಾಚರಣೆಗೆ ಅನುಗುಣವಾಗಿರುವುದು ಸ್ತ್ರೀಜಾತಿಯು ಶ್ರೀಮನ್ನಾರಾಯಣನಿಂದ ಪ್ರಕೃತಿಯ ಅಂಶದಿಂದ ನಿರ್ಮಿತವಾಗಿದೆ.

೩೨. ದುರ್ನಡತೆಯುಳ್ಳವಳು ವೇಶ್ಯೆಯೆನಿಸಿಕೊಂಡು ನಿಂದೆಗೆ ಅರ್ಹಳಾಗುವಳು. ಒಳ್ಳೆಯ ನಡತೆಯುಳ್ಳವಳು ಪತಿವ್ರತೆಯೆನಿಸಿಕೊಳ್ಳುವಳು. ಪತಿವ್ರತಾ ಸ್ತ್ರೀಯರಲ್ಲಿ ಮುಗ್ಧಾ, ಮಧ್ಯಾ ಮತ್ತು ಪ್ರೌಢಾ ಎಂದು ಮೂರು ವಿಧವುಂಟು.

ತಾಸಾಮೇವಂವಿಧಾ ನಾಸ್ತಿ ಸ್ವಯಂ ಯಾತಿ ಪರಪ್ರಿಯಂ ।
ಸ್ತ್ರೀಜಾತೀನಾಂ ಚ ಮಧ್ಯೇ ಚ ಕಾsಸ್ತ್ಯೇವಂ ಕುಲಕಜ್ಜಲಾ ॥ ೩೩ ॥

ಭವೇ ರತ್ಯೈ ಸ್ವಯಂ ದೃಷ್ಟ್ವಾ ವೇಷಂ ಕೃತ್ವಾ ಪ್ರಯಾತಿ ತಂ ।
ಕ್ಷೋಭಿತಾ ಯದಿ ಪಶ್ಯಂತೀ ಭಕ್ಷ್ಯದ್ರವ್ಯಮಸಾಧ್ಯಕಂ ॥ ೩೪ ॥

ನೈಕುಲ್ಯಾನ್ನಹಿ ತತ್ಸಾಧ್ಯಂ ಸಾಮಾನ್ಯಮೇವ ಕೇವಲಂ ।
ಇತ್ಯೇವಮುಕ್ತ್ವಾ ಜಗತಾಂ ವಿಧಾತಾ ವಿರರಾಮ ಚ ।
ವಕ್ತ್ರಂ ಸಮುದ್ಯತಾ ಸಾ ಚ ಕೋಪಪ್ರಸ್ಫುರಿತಾಧರಾ ॥ ೩೫ ॥

॥ ಮೋಹಿನ್ಯುವಾಚ ॥

ಜ್ಞಾತಂ ಸರ್ವಂ ಜಗದ್ಧಾತಶ್ಚರಿತಂ ತವ ಸಾಂಪ್ರತಂ ॥ ೩೬ ॥

---

೩೩. ವೇಶ್ಯೆಯರಲ್ಲಿ ಈ ಬೇಧಗಳಿಲ್ಲ. ಅವರು ತಾವಾಗಿಯೇ ಪುರುಷನೊಡನೆ ಸೇರುವರು. ಸ್ತ್ರೀಜಾತಿಯ ಮಧ್ಯದಲ್ಲಿ ಈ ರೀತಿ ಕುಲಕ್ಕೆ ಅಪಕೀರ್ತಿ ತರುವವಳು ಯಾವಳಿದ್ದಾಳೆ?

೩೪. ಈ ಸಂಸಾರದಲ್ಲಿ ವೇಶ್ಯೆಯು ರತಿಸುಖಕ್ಕಾಗಿ ತಾನಾಗಿಯೇ ವೇಷ ಧರಿಸಿಕೊಂಡು ತನ್ನ ಪ್ರಿಯತಮನ ಸಮೀಪಕ್ಕೆ ಹೋಗುವಳು. ಅವಳ ಚಂಚಲ ಕಟಾಕ್ಷಕ್ಕೆ ಪಾತ್ರನಾದವನು ಭಕ್ಷ್ಯದ್ರವ್ಯದಂತೆ ತಪ್ಪಿಸಿಕೊಳ್ಳಲಾರನು.

೩೫. ದುಷ್ಟಕುಲದಲ್ಲಿ ಹುಟ್ಟಿದವರಿಗಲ್ಲದೆ ಇತರರಿಗೆ ಆ ದುರ್ಗುಣಗಳಿರುವುದಿಲ್ಲ. ಸಾಮಾನ್ಯಗುಣಗಳೇ ಇರುವುವು. ಈ ರೀತಿಯಾಗಿ ಹೇಳಿ ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಸುಮ್ಮನಾಗಲು ಆ ಮೋಹಿನಿಯು ಕೋಪದಿಂದ ತುಟಿಗಳನ್ನು ನಡುಗಿಸುತ್ತ ಹೇಳಲುಪಕ್ರಮಿಸಿದಳು.

೩೬. ಮೋಹಿನಿ :—ಎಲೈ ಜಗತ್ಸೃಷ್ಟಿಕರ್ತನೇ, ಈಗ ನಿನ್ನ ಚರಿತ್ರೆಯು ತಿಳಿದಂತಾಯಿತು.

ತ್ವಯೋ ನಿಬೋಧಿತಾ ನೀತಿರ್ಮನೋ ಮೇ ನ ಸ್ಥಿರಂ ಭವೇತ್ ।
ಭೂತಂ ತ್ವಯಿ ವಿಶಿಷ್ಟಂ ಚ ಯಾವದ್ದೃಷ್ಟಃ ಕ್ಷಣೇ ಭವಾನ್ ॥ ೩೭ ॥

ತ್ವದ್ವಕ್ತ್ರದೃಷ್ಟಿಮಾತ್ರೇಣ ಸರ್ವೇ ಜಾರಾಶ್ಚ ವಿಸ್ಮೃತಾಃ ।
ದೇಹಂ ಕಾಮಾಗ್ನಿನಾ ದಗ್ಧಂ ಯದಾ ತ್ಯಕ್ತುಂ ಸಮುದ್ಯತಾ ॥ ೩೮ ॥

ನಿಷಿಷೇಧ ಚ ಮಾಂ ರಂಭಾ ಪ್ರದದೌ ಮಂತ್ರಮಿಾದೃಶಂ ।
ತದಾ ಕಾಮಸಹಾಯೇನ ತ್ವತ್ಸಮಿಾಪಂ ಸಮಾಗತಾ ॥ ೩೯ ॥

ಸಮಧುಸ್ತ್ವ ಶಾಪೇನ ಸ ಜಗಾಮ ಹತೋದ್ಯಮಃ ।
ಅಹೋ ಗಂತುಮಶಕ್ತಾऽಹಂ ತ್ವಯಾ ಯದ್ಯಪಿ ಭರ್ತ್ಸಿತಾ ॥ ೪೦ ॥

ಸರ್ವಾಂಗೇಷ್ವೇವ ಮೇ ಜಾಡ್ಯಂ ಬಭೂವ ಸಾಂಪ್ರತಂ ವಿಭೋ ।
ಕೃಪಾಂ ಕುರು ಕೃಪಾಸಿಂಧೋ ನ ಮಾಂ ಹಂತುಂ ತ್ವಮರ್ಹಸಿ ॥ ೪೧ ॥

---

೩೭. ನೀನೇನೋ ನೀತಿಯನ್ನು ಉಪದೇಶಿಸಿದೆ. ಆದರೆ ನನ್ನ ಮನಸ್ಸು ಸ್ಥಿರವಾಗಲೊಲ್ಲದು. ಯಾವ ಕ್ಷಣದಲ್ಲಿ ನೀನು ನನ್ನ ದೃಷ್ಟಿಗೆ ಬಿದ್ದೆಯೋ ಆ ಕ್ಷಣದಿಂದ ನನ್ನ ಮನಸ್ಸು ನಿನ್ನಲ್ಲಿ ಆಸಕ್ತವಾಯಿತು.

೩೮. ನಿನ್ನ ಮುಖವನ್ನು ನೋಡಿದ ಮಾತ್ರದಿಂದಲೇ ಎಲ್ಲ ಜಾರರೂ ಮರೆತುಹೋದರು. ನನ್ನ ಶರೀರವು ಕಾಮಾಗ್ನಿಯಿಂದ ದಗ್ಧವಾಗಿ ನಾನು ದೇಹ ತ್ಯಾಗ ಮಾಡುವುದರಲ್ಲಿದ್ದೆ.

೩೯. ಆಗ ರಂಭೆಯು ನನ್ನನ್ನು ತಡೆದು ಈ ಮಂತ್ರವನ್ನು ಉಪದೇಶಿಸಿದಳು. ಆಗ ಮನ್ಮಥನ ಸಹಾಯದಿಂದ ನಿನ್ನ ಸಮಿಾಪಕ್ಕೆ ಬಂದೆ.

೪೦ ವಸಂತನೊಡಗೂಡಿದ ಆ ಮನ್ಮಥನು ನಿನ್ನ ಶಾಪದಿಂದ ವ್ಯರ್ಥವಾದ ಪ್ರಯತ್ನವುಳ್ಳವನಾಗಿ ಹೊರಟುಹೋದನು. ನೀನು ನನ್ನನ್ನು ದೂಷಿಸಿದರೂ ನಾನು ಮಾತ್ರ ನಿನ್ನನ್ನು ಬಿಟ್ಟು ಹೋಗಲಾರೆನು.

೪೧. ಎಲೈ ಪ್ರಭುವೇ, ಈಗ ನನ್ನ ಅಂಗಾಂಗಗಳಿಗೂ ಜಡತ್ವವುಂಟಾಗಿದೆ. ಎಲೈ ದಯಾಸಾಗರನೇ, ನನ್ನಲ್ಲಿ ದಯೆತೋರು. ನನ್ನನ್ನು ನಾಶಗೊಳಿಸುವುದು ನಿನಗುಚಿತವಲ್ಲ.

ತವಾಽಽಶ್ಲೇಷಣಮಾತ್ರೇಣ ವಿಜ್ವರಾಽಹಂ ಸುನಿಶ್ಚಿತಂ ।
ತ್ವಮೇವ ಜಗತಾಂ ಧಾತಾ ಕುಲಟಾಽಹಂ ಚ ಕರ್ಮಣಾ ॥ ೪೨ ॥

ಸಂತೋ ಗರ್ವಂ ನ ಕುರ್ವಂತಿ ಕರ್ಮಸಾಧ್ಯಾಶ್ಚ ಜೀವಿನಃ ।
ಕಶ್ಚಿತ್ಪ್ರಯಾತಿ ಯಾನೇನ ವಹಂತಿ ತಂ ಚ ಕೇಚನ ॥ ೪೩ ॥

ಕರಂ ಗೃಹ್ಣಾತಿ ನೃಪತಿಃ ಕರ್ಮಣಾ ದದತಿ ಪ್ರಜಾಃ ।
ಕಶ್ಚಿತ್ ಸಿಂಹಾಸನಸ್ಥಶ್ಚ ನೃಪಮಾತ್ರಶ್ಚ ಕಶ್ಚನ ॥ ೪೪ ॥

ಕರ್ಮಣಾ ವಾಹಕಾಃ ಕೇಚಿತ್ ಕೇಚಿದ್ವಾಹನಪಾಲಕಾಃ ।
ಸೂಕರೀಜಠರಂ ಕಶ್ಚಿತ್ ಸಂಪ್ರಯಾತಿ ಸ್ವಕರ್ಮಣಾ ॥ ೪೫ ॥

ಕಶ್ಚಿಚ್ಛಚ್ಯಾಶ್ಚ ಜಠರಂ ತವ ಪುತ್ರಾಶ್ಚ ಕೇಚನ ।
ಕೇಚಿತ್ಕೃತ್ವಾ ಹರೇರ್ಭಕ್ತಿಂ ಕರ್ಮಣಾ ತಸ್ಯ ಪಾರ್ಷದಾಃ ॥ ೪೬ ॥

---

೪೨. ನಿನ್ನ ಆಲಿಂಗನೆಯೊಂದರಿಂದಲೇ ನಾನು ಕಾಮಜ್ವರದಿಂದ ನಿರ್ಮುಕ್ತಳಾಗುವುದರಲ್ಲಿ ಸಂಶಯವಿಲ್ಲ. ನೀನು ಜಗತ್ತಿನ ಸೃಷ್ಟಿಕರ್ತನಾಗಿರುವೆ. ನಾನು ಕರ್ಮದಿಂದ ಕುಲಟೆಯೆನಿಸಿದ್ದೇನೆ.

೪೩. ಸತ್ಪುರುಷರು ಎಂದಿಗೂ ಗರ್ವಪಡುವುದಿಲ್ಲ. ಜೀವಿಗಳು ಕರ್ಮಾನುಗುಣವಾದ ಫಲವನ್ನು ಹೊಂದುವರು. ಕೆಲವರು ವಾಹನದಲ್ಲಿ ಹೋದರೆ ಕೆಲವರು ಅದನ್ನು ಹೊರುವರು.

೪೪. ರಾಜನು ಕಪ್ಪವನ್ನು ಸ್ವೀಕರಿಸುತ್ತಾನೆ. ಪ್ರಜೆಗಳು ಕರ್ಮಾನುಸಾರವಾಗಿ ಕೊಡುತ್ತಾರೆ. ಕೆಲವರು ಸಿಂಹಾಸನದಲ್ಲಿ ಕುಳಿತರೆ ಮತ್ತೆ ಕೆಲವರು ಕೇವಲ ರಾಜನೆನಿಸಿಕೊಳ್ಳುತ್ತಾರೆ.

೪೫. ಕರ್ಮಾನುಗುಣವಾಗಿ ಕೆಲವರು ವಾಹಕರಾದರೆ ಮತ್ತೆ ಕೆಲವರು ವಾಹನರಕ್ಷಕರಾಗುತ್ತಾರೆ. ಕೆಲವರು ತಮ್ಮ ಕರ್ಮಫಲದಂತೆ ಹಂದಿಯ ಗರ್ಭವನ್ನು ಪ್ರವೇಶಿಸಬೇಕಾಗುವುದು.

೪೬. ಕೆಲವರು ಶಚಿಯ ಗರ್ಭವನ್ನು ಪ್ರವೇಶಿಸುವರು. ಮತ್ತೆ ಕೆಲವರು ನಿನ್ನ ಪುತ್ರರಾಗುವರು. ಕೆಲವರು ಶ್ರೀಹರಿಯಲ್ಲಿ ಭಕ್ತಿಯಿಟ್ಟು ತಮ್ಮ ಕರ್ಮಾನುಗುಣವಾಗಿ ಅವನ ಪಾರ್ಷದರಾಗುತ್ತಾರೆ.

ಕೇಚಿದ್ಭವಂತಿ ಕೃಮಯೋ ವಿಷ್ಠಾಯಾಂ ದೈವದೋಷತಃ ।
ಸ್ವರ್ಗಂ ಪ್ರಯಾಂತಿ ರಾಜೇಂದ್ರಾಃ ಕೇಚಿಚ್ಚ ಸ್ವಸ್ವಕರ್ಮಣಾ ॥ ೪೭ ॥

ಕೇಚಿತ್ಪ್ರಯಾಂತಿ ನರಕಂ ವಿಣ್ಮೂತ್ರೇ ತತ್ರ ಪಚ್ಯತೇ ।
ಕರ್ಮಣಾ ಕಶ್ಚಿದಿಂದ್ರೇಂದ್ರಃ ಸುರಾಣಾಂ ಪ್ರವರಃ ಸ್ವಯಂ ॥ ೪೮ ॥

ಕೇಚಿತ್ಸುರಾ ನರಾಃ ಕೇಚಿತ್‌ಕೇಚಿಚ್ಚ ಕ್ಷುದ್ರಜಂತವಃ ।
ಕೇಚಿಚ್ಚ ಕರ್ಮಣಾ ವಿಪ್ರಾ ವರ್ಣಶ್ರೇಷ್ಠಾ ಮಹೀತಲೇ ॥ ೪೯ ॥

ಕೇಚಿದ್ಭೂಪಾ ವೈಶ್ಯಶೂದ್ರಾಃ ಕೇಚಿಚ್ಚ ಮ್ಲೇಚ್ಛಜಾತಯಃ ।
ಕೇಚಿತ್‌ಸ್ವಕರ್ಮಣಾ ಪ್ರಾಜ್ಞಾ ಜ್ಞಾನೇನ ಸರ್ವದರ್ಶಿನಃ ॥ ೫೦ ॥

ಕೇಚಿನ್ಮೂರ್ಖಾಃ ಕೇಚಿದಂಧಾಃ ಸ್ವಾಂಗಹೀನಾಶ್ಚ ಕೇಚನ ।
ಕೇಚಿಚ್ಛಾಸ್ತ್ರಂ ಬೋಧಯಂತಿ ಶಿಷ್ಯವರ್ಗಾನ್ ಸ್ವಕರ್ಮಣಾ ॥ ೫೧ ॥

---

೪೭. ಕೆಲವರು ದುಷ್ಕರ್ಮ ಪರಿಪಾಕದಿಂದ ವಿಷ್ಠೆಯಲ್ಲಿ ಕ್ರಿಮಿಯಾಗಿ ಜನಿಸುವರು. ಕೆಲವರು ರಾಜೇಂದ್ರರು ತಮ್ಮ ತಮ್ಮ ಕರ್ಮದಿಂದ ಸ್ವರ್ಗಕ್ಕೆ ಹೋಗುವರು.

೪೮. ಕೆಲವರು ನರಕಕ್ಕೆ ಹೋಗಿ ಅಲ್ಲಿ ಮಲಮೂತ್ರದಲ್ಲಿ ನರಳುತ್ತಾರೆ. ಕೆಲವರು ಕರ್ಮಾನುಗುಣವಾಗಿ ಮಹೇಂದ್ರಾದಿ ಸುರೋತ್ತಮರಾಗುತ್ತಾರೆ.

೪೯. ಕೆಲವರು ದೇವತೆಗಳೂ, ಮತ್ತೆ ಕೆಲವರು ಮನುಷ್ಯರೂ ಇನ್ನು ಕೆಲವರು ಕ್ಷುದ್ರಜಂತುಗಳೂ ಆಗುವರು. ಕೆಲವರು ತಮ್ಮ ಕರ್ಮಾನುಗುಣವಾಗಿ ಭೂಮಂಡಲದಲ್ಲಿ ಬ್ರಾಹ್ಮಣರೇ ಮುಂತಾದ ಉತ್ತಮ ವರ್ಣದವರಾಗುತ್ತಾರೆ.

೫೦. ಕೆಲವರು ಕ್ಷತ್ರಿಯ, ವೈಶ್ಯ, ಶೂದ್ರ ಮುಂತಾದ ಯೋನಿಯಲ್ಲಿ ಜನಿಸುವರು. ಕೆಲವರು ಮ್ಲೇಚ್ಛಜಾತಿಯಲ್ಲಿ ಜನಿಸುವರು. ಕೆಲವರು ತಮ್ಮ ಕರ್ಮದಿಂದ ಪ್ರಾಜ್ಞರಾಗಿ ಜ್ಞಾನದೃಷ್ಟಿಯಿಂದ ಎಲ್ಲವನ್ನೂ ತಿಳಿಯುತ್ತಾರೆ.

೫೧. ಕೆಲವರು ಮೂರ್ಖರೂ, ಕೆಲವರು ಕುರುಡರೂ, ಮತ್ತೆ ಕೆಲವರು ಅಂಗಹೀನರೂ ಆಗುವರು. ಕೆಲವರು ತಮ್ಮ ಕರ್ಮಾನುಗುಣವಾಗಿ ಶಿಷ್ಯವೃಂದಕ್ಕೆ ಶಾಸ್ತ್ರವನ್ನು ಬೋಧಿಸುವರು.

ಕೇಚಿತ್ಪಠಂತಿ ಸರ್ವಾರ್ಥಂ ಜಾನಂತಿ ಗುರುವಕ್ತ್ರತಃ ।
ಭವಂತಿ ಕರ್ಮಣಾ ಕೇಚಿದ್ದೇಹೇ ಸ್ಥಾವರಜಂಗಮೇ ॥ ೫೨ ॥

ತಪಸ್ವೀ ನವಘಾತೀ ಚ ತ್ವಂ ಚ ಬ್ರಹ್ಮಾ ಚ ಕರ್ಮಣಾ ।
ಕಾಚಿತ್ ಸ್ವಕರ್ಮಣಾ ಸಾಧ್ವೀ ಪೂಜ್ಯೇಹ ಚ ಪರತ್ರ ಚ ॥ ೫೩ ॥

ಕಾಚಿದ್ವೇಶ್ಯಾ ತದಾಹಾರಂ ಭುಂಕ್ತೇ ಕೃತ್ವಾಂಗವಿಕ್ರಯಂ ।
ಸ್ವರ್ವೇಶ್ಯಾऽಹಂ ಸುರಪುರೇ ಸುರಭೋಗ್ಯಾ ಸುಪೂಜಿತಾ ॥ ೫೪ ॥

ಯೋಷಾಮಾಲಿಂಗನೇನೈವ ಕರ್ಮಣಾಂ ಖಂಡನಂ ಭವೇತ್ ।
ಮನಃಸ್ವಭಾವಬೀಜಂ ಚ ಸ್ವಭಾವಃ ಕರ್ಮ ಬೀಜಕಃ ॥ ೫೫ ॥

ತತ್ಕರ್ಮ ಫಲಬೀಜಂ ಚ ಸರ್ವೇಷಾಂ ಜನಕೋ ಹರಿಃ ।
ಫಲಂ ದದಾತಿ ನಿಯತಂ ಕರ್ಮದ್ವಾರಾ ವಿಭುಃ ಸ್ವಯಂ ॥ ೫೬ ॥

---

೫೨ ಜನ್ಮಾಂತರ ಕರ್ಮದ ಫಲವಾಗಿ ಕೆಲವರು ಓದುತ್ತಾರೆ. ಕೆಲವರು ಗುರುಮುಖೇನ ಎಲ್ಲ ವಿಷಯವನ್ನೂ ತಿಳಿಯುತ್ತಾರೆ. ಕೆಲವರು ಕರ್ಮದಿಂದ ಸ್ಥಾವರ ಜಂಗಮಾತ್ಮಕವಾದ ದೇಹವನ್ನು ಹೊಂದುತ್ತಾರೆ.

೫೩. ತಪಸ್ವಿಯೂ (ನವಘಾತಿಯೂ) ಆದ ನೀನೂ ಕೂಡ ಕರ್ಮಾನು ಗುಣವಾಗಿಯೇ ಬ್ರಹ್ಮನೆನಿಸಿರುವೆ. ಒಬ್ಬ ಹೆಂಗಸು ತನ್ನ ಕರ್ಮದಿಂದ ಪತಿವ್ರತೆ ಯೆನಿಸಿಕೊಂಡು ಇಹಪರದಲ್ಲಿ ಪೂಜ್ಯಳಾಗುವಳು.

೫೪. ಒಬ್ಬಳು ವೇಶ್ಯೆಯಾಗಿ ತನ್ನ ಅಂಗವಿಕ್ರಯಮಾಡಿಕೊಂಡು ಪುರುಷನು ಕೊಟ್ಟ ಆಹಾರವನ್ನು ತಿನ್ನುವಳು. ನಾನಾದರೋ ದೇವವೇಶ್ಯೆಯೆನಿಸಿ ದೇವಲೋಕದಲ್ಲಿ ದೇವಭೋಗ್ಯಳಾಗಿ ಪೂಜ್ಯಳಾಗಿದ್ದೇನೆ

೫೫. ದೇವತೆಗಳ ಆಲಿಂಗನೆಯಿಂದ ಜನ್ಮಾಂತರದ ದುಷ್ಕರ್ಮಗಳು ನಶಿಸಿ ಹೋಗುವುವು. ಮನಸ್ಸಿಗೆ ಸ್ವಭಾವವೂ, ಸ್ವಭಾವಕ್ಕೆ ಜನ್ಮಾಂತರಕರ್ಮವೂ ಮೂಲಕಾರಣವಾಗಿರುವುದು.

೫೬. ಕರ್ಮವು ಫಲಕ್ಕೆ ಮೂಲಕಾರಣವಾಗಿರುವುದು. ಸರ್ವಕಾರಣನೂ ಸರ್ವೇಶ್ವರನೂ ಆದ ಶ್ರೀಹರಿಯು ಕರ್ಮಾನುಗುಣವಾಗಿ ಫಲವನ್ನು ಕೊಡುತ್ತಾನೆ.

ಸರ್ವೇಭ್ಯೋ ಬಲವಾನ್ ನಿತ್ಯಂ ಕರ್ಮರೂಪೀ ಜನಾರ್ದನಃ |
ಕುತೋ ಹೇತೋರ್ನಿಂದಿತಾಽಹಂ ತ್ವಯೈವ ಭರ್ತ್ಸಿತಾ ಕಥಂ || ೫೭ ||

ಜಗತ್ಸ್ರಷ್ಟುರೀಶ್ವರಸ್ಯ ಪಾದಾಬ್ಜಂ ದ್ರಷ್ಟುಮಾಗತಾ |
ಸ್ವಪ್ನೇ ಯಸ್ಯ ಪದದ್ವಂದ್ವಂ ನ ಹಿ ಪಶ್ಯಂತಿ ಯೋಗಿನಃ || ೫೮ ||

ತಮೀಶ್ವರಂ ಪತಿಂ ಕರ್ತುಮಿಚ್ಛಯಾ ಸ್ವಯಮಾಗತಾ |
ಗತ್ವಾ ಹಿ ಕಸ್ಯಚಿತ್ ಸ್ಥಾನಂ ಅಸ್ಪೃಶ್ಯೇಹ ಪರತ್ರ ಚ || ೫೯ ||

ಕಸ್ಯಚಿತ್ ಪಾದರಜಸಾ ಯಶಸಾ ಭಾಂತಿ ಯೋಷಿತಃ |
ಇತ್ಯುಕ್ತ್ವಾ ಮೋಹಿನೀ ಶೀಘ್ರಂ ಗತ್ವೋವಾಸ ಹರೇಃ ಪುರಃ || ೬೦ ||

ಸ್ವಯಂ ವಿಧಾತಾ ಜಗತಾಂ ಚಕಂಪೇ ಕುಲಟಾಭಯಾತ್ |
ಸಸ್ಮಿತಾ ವಕ್ರನಯನಾ ಕಾಮಭಾವಂ ಚಕಾರ ಹ || ೬೧ ||

---

೫೭. ಕರ್ಮಸ್ವರೂಪಿಯಾದ ಜನಾರ್ದನನು ಎಲ್ಲಕ್ಕಿಂತಲೂ ಪ್ರಬಲನಾದವನು. ಹೀಗಿರುವಾಗ ನನ್ನನ್ನು ಯಾವ ಕಾರಣದಿಂದ ನೀನು ದೂಷಿಸಿ ಭಯಪಡಿಸುತ್ತೀಯೆ?

೫೮. ಯೋಗಿಗಳೂ ಕೂಡ ಯಾರ ಪಾದಾರವಿಂದಗಳನ್ನು ಸ್ವಪ್ನದಲ್ಲಿಯೂ ನೋಡಲಾರರೋ ಅಂಥ ಜಗತ್ಸೃಷ್ಟಿಕರ್ತನಾದ ಸರ್ವೇಶ್ವರನ ಪಾದ ಕಮಲಗಳನ್ನು ನೋಡಲು ನಾನು ಬಂದೆ.

೫೯. ಆ ಸರ್ವೇಶ್ವರನನ್ನು ಪತಿಯನ್ನಾಗಿ ವರಿಸಬೇಕೆಂಬ ಇಚ್ಛೆಯಿಂದ ನಾನಾಗಿಯೇ ಬಂದೆ. ಹೆಂಗಸು ಕೆಲವು ಪುರುಷರೊಡನೆ ಸೇರಿದರೆ ಇಹಪರದಲ್ಲಿ ಅಸ್ಪೃಶ್ಯಳಾಗುವಳು.

೬೦. ಮತ್ತೆ ಕೆಲವರ ಪಾದಧೂಳಿಯ ಸಂಪರ್ಕದಿಂದ ಸ್ತ್ರೀಯರು ಯಶೋವತಿಯರಾಗುವರು. ಮೋಹಿನಿಯು ಈ ರೀತಿಯಾಗಿ ಹೇಳಿ ಜಾಗ್ರತೆ ಶ್ರೀಹರಿಯ ಮುಂದೆ ಹೋಗಿ ಕುಳಿತಳು.

೬೧. ಜಗತ್ಸೃಷ್ಟಿಕರ್ತನಾದ ಸ್ವಯಂ ಬ್ರಹ್ಮನೂ ಕೂಡ ಕುಲಟೆಯಾದ ಆ ಮೋಹಿನಿಗೆ ಹೆದರಿ ನಡುಗಿದನು. ಆ ಮೋಹಿನಿಯು ವಕ್ರಕಟಾಕ್ಷವನ್ನೂ, ಮುಗುಳು ನಗೆಯನ್ನೂ ಬೀರಿ ಕಾಮವಿಕಾರವನ್ನೂ ಪ್ರಕಟಿಸಿದಳು.

ಸ್ವಾಂಗಂ ಚ ದರ್ಶಯಾಮಾಸ ಕಾಮಬಾಣಪ್ರಪೀಡಿತಾ ।
ಏತಸ್ಮಿನ್ನಂತರೇ ಕಾಮಃ ಸರ್ವಜ್ಞಃ ಸರ್ವಯೋಗವಿತ್ ॥ ೬೨ ॥

ಆವಿರ್ಭೂಯ ಪಂಚಬಾಣಾನ್ನಿಚಿಕ್ಷೇಪ ಚ ಬ್ರಹ್ಮಣಿ ।
ಸಮ್ಮೋಹನಂ ಸಮುದ್ವೇಗಂ ಬೀಜಸ್ತಂಭಿತಕಾರಣಂ ॥ ೬೩ ॥

ಉನ್ಮತ್ತಬೀಜಂ ಜ್ವಲದಂ ಶಶ್ವಚ್ಚೇತನಹಾರಕಂ ।
ಏತಾನ್ ಪ್ರಕ್ಷಿಪ್ಯ ಮದನೋಽಪ್ಯಂತರಿಕ್ಷಸ್ಥಿತಃ ಸ್ವಯಂ ॥ ೬೪ ॥

ಕಿಂಕರಾನ್ ಪ್ರೇಷಯಾಮಾಸ ಸಂಮೋಹಾಯ ಪಿತುರ್ಮುದಾ ।
ವಸಂತಂ ಕೋಕಿಲಾಲೀಶ್ಚ ಗಂಧವಾತಂ ಮನೋಹರಂ ॥ ೬೫ ॥

ನಿಯೋಜ್ಯಾಭ್ಯಂತರಂ ಗತ್ವಾ ತದ್ವಿಕಾರಂ ಚಕಾರ ಹ ।
ಪುಂಸ್ಕೋಕಿಲಃ ಕಲಂ ರಾವಮುವಾಚ ತತ್ಸಮೀಪತಃ ॥ ೬೬ ॥

೬೨–೬೪. ಕಾಮಬಾಣಪೀಡಿತಳಾದ ಮೋಹಿನಿಯು ತನ್ನ ಅವಯವಗಳನ್ನು ವಿಲಾಸದಿಂದ ವ್ಯಕ್ತಪಡಿಸಿದಳು. ಈ ಸಮಯಕ್ಕೆ ಸರಿಯಾಗಿ ಸರ್ವಜ್ಞನೂ, ಸಕಲಯೋಗಶಾಸ್ತ್ರಜ್ಞನೂ ಆದ ಮನ್ಮಥನು ಅಲ್ಲಿ ಕಾಣಿಸಿಕೊಂಡು ಬ್ರಹ್ಮನ ಮೇಲೆ ತನ್ನ ಪಂಚಬಾಣಗಳನ್ನೆಸೆದನು ಮೋಹಜನಕವೂ. ಉದ್ವೇಗಕಾರಕವೂ ಸ್ತಂಭ ಮತ್ತು ಉನ್ಮಾದಕ್ಕೆ ಕಾರಣವೂ, ಜ್ವರಜನಕವೂ, ಚೇತನನಾಶಕವೂ ಆದ ಐದು ಬಾಣಗಳನ್ನೆಸೆದು ಮನ್ಮಥನು ಅಂತರಿಕ್ಷದಲ್ಲಿಯೇ ಕುಳಿತನು.

೬೫. ತಂದೆಯಾದ ಬ್ರಹ್ಮನನ್ನು ಮೂರ್ಛೆಗೊಳಿಸಲು ಗೆಳೆಯನಾದ ವಸಂತನನ್ನೂ ಕಿಂಕರರಾದ ಕೋಗಿಲೆಗಳ ಗುಂಪು ಮತ್ತು ಮಲಯಾನಿಲವನ್ನೂ ತಂದೆಯ ಸಮೀಪಕ್ಕೆ ಕಳುಹಿಸಿದನು.

೬೬. ಇವರುಗಳನ್ನು ನಿಯಮಿಸಿದುದಲ್ಲದೆ ತಾನೂ ಮಧ್ಯೆ ಹೋಗಿ ಆ ಬ್ರಹ್ಮನನ್ನು ವಿಕಾರಗೊಳಿಸಿದನು. ಗಂಡು ಕೋಗಿಲೆಯು ಬ್ರಹ್ಮನ ಹತ್ತಿರ ಹೋಗಿ ಕಲರವದಿಂದ ಕೂಗಿತು.

ಷಟ್ಪದಃ ಸುಂದರಂ ಸೂಕ್ಷ್ಮಂ ಜುಗುಂಜೇ ಪುರತಃ ಸ್ಥಿತಃ ।
ಶಶ್ವದ್ವವೌ ಗಂಧವಹೋ ಮಂದೋಽತಿಶೀತಲಃ ಪ್ರಿಯೇ ॥ ೬೭ ॥

ಸತತಂ ಮುದಿತಸ್ತತ್ರ ಬಭ್ರಾಮ ಚ ಮಧುಃ ಸ್ವಯಂ ।
ಪುಲಕಾಂಚಿತಸರ್ವಾಂಗೋ ಬಭೂವ ಜಗತಾಂ ವಿಧಿಃ ॥ ೬೮ ॥

ದದರ್ಶ ಮೋಹಿನೀ ಭಾವಂ ಪ್ರಹಸ್ಯ ಚ ಪುನಃಪುನಃ ।
ಅತೀವವಕ್ರನಯನಾ ಕಾಮಾಸ್ತ್ರ ಹತಚೇತನಾ ॥ ೬೯ ॥

ವಿಧಾತಾ ಬುಬುಧೇ ಸರ್ವಂ ಸರ್ವಬಂಧನಿಬಂಧನಂ ।
ನಿಯಂತುಂ ನ ಮನಃ ಶಕ್ತಃ ಸಸ್ಮಾರ ಶ್ರೀಹರಿಂ ಭಿಯಾ ॥ ೭೦ ॥

ತುಷ್ಟಾವ ಮನಸಾ ಕೃಷ್ಣಂ ಶಾಂತಂ ಹೃತ್ಪಂಕಜಸ್ಥಿತಂ
ದ್ವಿಭುಜಂ ಮುರಲೀಹಸ್ತಂ ಹರಿಂ ಪಿತಾಂಬರಂ ಪರಂ ॥ ೭೧ ॥

---

೬೭. ದುಂಬಿಯು ಬ್ರಹ್ಮನ ಮುಂದೆ ಮನೋಹರವಾಗಿಯೂ, ಮಧುರವಾಗಿಯೂ ಝೇಂಕಾರಮಾಡಿತು. ಮಂದವೂ, ಅತ್ಯಂತ ಶೀತಲವೂ ಆದ ಮಲಯ ಮಾರುತವು ಎಡಬಿಡದೆ ಬೀಸಿತು.

೬೮. ಸರ್ವದಾ ಮುದಿತಮನಸ್ಕನಾಗಿ ವಸಂತನು ಅಲ್ಲಿಯೇ ನೆಲೆಸಿದನು. ಇದೆಲ್ಲವನ್ನೂ ನೋಡಿ ಜಗದ್ವಿಧಾತನಾದ ಬ್ರಹ್ಮನು ರೋಮಾಂಚಿತಶರೀರನಾದನು.

೬೯. ಇತ್ತ ಮೋಹಿನಿಯಾದರೋ ಕಾಮಬಾಣಪೀಡಿತಳಾಗಿ ಮತ್ತೆ ಮತ್ತೆ ನಸುನಗುತ್ತ, ತನ್ನ ವಕ್ರಕಟಾಕ್ಷಗಳಿಂದ ಬ್ರಹ್ಮನ ಮನೋಭಾವವನ್ನು ನೋಡುತ್ತಿದ್ದಳು.

೭೦. ಬ್ರಹ್ಮನು ಸಕಲ ಬಂಧನಗಳಿಗೂ ಸಿಲುಕಿಸುವ ಈ ಮನ್ಮಥನ ಚೇಷ್ಟೆಯನ್ನು ತಿಳಿದರೂ ಮನಸ್ಸನ್ನು ಬಿಗಿಹಿಡಿಯಲಾರದೆ ಶ್ರೀಹರಿಯನ್ನು ಸ್ಮರಿಸಿಕೊಂಡನು.

೭೧. ಶಾಂತಾಕಾರನೂ, ದ್ವಿಭುಜನೂ, ಮುರಳೀಧರನೂ, ಪೀತಾಂಬರಧಾರಿಯೂ, ಹೃತ್ಕಮಲವಾಸಿಯೂ ಆದ ಶ್ರೀಕೃಷ್ಣನನ್ನು ಬ್ರಹ್ಮನು ಸ್ಮರಿಸಿಕೊಂಡನು.

ಅತೀವ ಕಮನೀಯಂ ಚ ಕಿಶೋರಂ ಸ್ಥಿರಯೌವನಂ ।
ರತ್ನಾಲಂಕಾರಭೂಷಾಢ್ಯಂ ಸಸ್ಮಿತಂ ಶ್ಯಾಮಸುಂದರಂ ॥ ೭೨ ॥

॥ ಬ್ರಹ್ಮೋವಾಚ ॥

ರಕ್ಷ ರಕ್ಷ ಹರೇ ಮಾಂ ಚ ನಿಮಗ್ನಂ ಕಾಮಸಾಗರೇ ।
ದುಷ್ಕೀರ್ತಿಜಲಪೂರ್ಣೇ ಚ ದುಷ್ಪಾತೇ ಬಹುಸಂಕಟೇ ॥ ೭೩ ॥

ಭಕ್ತಿವಿಸ್ಮೃತಿಬೀಜೇ ಚ ವಿಪತ್ಸೋಪಾನದುಸ್ತರೇ ।
ಅತೀವ ನಿರ್ಮಲಜ್ಞಾನಚಕ್ಷುಃಪ್ರಚ್ಛನ್ನಕಾರಣೇ ॥ ೭೪ ॥

ಜನ್ಮೋರ್ಮಿಸಂಘಸಹಿತೇ ಯೋಷಿನ್ನಕ್ರೌಘಸಂಕುಲೇ ।
ರತಿಸ್ರೋತಃ ಸಮಾಯುಕ್ತೇ ಗಂಭೀರೇ ಘೋರ ಏವ ಚ ॥ ೭೫ ॥

---

೭೨. ಅತ್ಯಂತ ಮನೋಹರನೂ, ಸ್ಥಿರಯೌವನವುಳ್ಳವನೂ, ರತ್ನಾಲಂಕಾರ ಭೂಷಿತನೂ, ಶ್ಯಾಮಸುಂದರನೂ, ಸ್ಮಿತವದನನೂ ಆದ ಗೋಪಕಿಶೋರನನ್ನು ಬ್ರಹ್ಮನು ಮರೆಹೊಕ್ಕನು.

೭೩. ಬ್ರಹ್ಮ:—ಎಲೈ ಶ್ರೀಹರಿಯೇ ಅಪಕೀರ್ತಿಯೆಂಬ ನೀರಿನಿಂದ ತುಂಬಿ, ಅತಿಭಯಂಕರವೂ, ಅಪಾರವೂ ಆದ ಕಾಮಸಾಗರದಲ್ಲಿ ಮುಳುಗಿರುವ ನನ್ನನ್ನು ಉದ್ಧರಿಸು.

೭೪. ಭಗವದ್ಭಕ್ತಿಯನ್ನು ಮರೆಯಲು ಮೂಲಕಾರಣವೂ, ವಿಪತ್ತೆಂಬ ಸೋಪಾನಗಳಿಂದ ದಾಟಲಸಾಧ್ಯವೂ, ನಿರ್ಮಲವಾದ ಜ್ಞಾನದೃಷ್ಟಿಯನ್ನು ಮರೆ ಮಾಡಲು ಕಾರಣವೂ ಆದ ಕಾಮಸಾಗರದಲ್ಲಿ ಮುಳುಗಿದ್ದೇನೆ

೭೫. ಜನನವೆಂಬ ತೆರೆಗಳ ಸಮೂಹದಿಂದ ಕೂಡಿ, ಸ್ತ್ರೀಯರೆಂಬ ಮೊಸಳೆ ಗಳ ಗುಂಪಿನಿಂದ ಭಯಂಕರವಾಗಿ, ರತಿರಸಪ್ರವಾಹದಿಂದ ಕೂಡಿ ಗಂಭೀರವೂ, ಭಯಂಕರವೂ ಆದ ಕಾಮಸಾಗರದಲ್ಲಿ ಮುಳುಗಿದ್ದೇನೆ.

ಪ್ರಥಮಾಮೃತರೂಪೇ ಚ ಪರಿಣಾಮವಿಷಾಲಯೇ ।
ಯಮಾಲಯಪ್ರದೇಶಾಯ ಮುಕ್ತಿದ್ವಾರಾತಿವಿಸ್ಮೃತೇ ॥ ೭೬ ॥

ಬುದ್ಧ್ಯಾ ತರಣ್ಯಾ ವಿಜ್ಞಾನೈ ರುದ್ಧರಾಸ್ಮಾನತಃ ಸ್ವಯಂ ।
ಸ್ವಯಂ ಚ ತ್ವಂ ಕರ್ಣಧಾರಃ ಪ್ರಸೀದ ಮಧುಸೂದನ ॥ ೭೭ ॥

ಮದ್ವಿಧಾಃ ಕತಿಚಿನ್ನಾಥ ನಿಯೋಜ್ಯಾ ಭವಕರ್ಮಣಿ ।
ಸಂತಿ ವಿಶ್ವೇಶ ವಿಧಯೋ ಹೇ ವಿಶ್ವೇಶ್ವರ ಮಾಧವ ॥ ೭೮ ॥

ನ ಕರ್ಮಕ್ಷೇತ್ರಮೇವೇದಂ ಬ್ರಹ್ಮಲೋಕೋಽಯಮೀಪ್ಸಿತಃ ।
ತಥಾಪಿ ನಃ ಸ್ಪೃಹಾ ಕಾಮೇ ತ್ವದ್ಭಕ್ತಿವ್ಯವಧಾಯಕೇ ॥ ೭೯ ॥

ಹೇ ನಾಥ ಕರುಣಾ ಸಿಂಧೋ ದೀನಬಂಧೋ ಕೃಪಾಂ ಕುರು ।
ತ್ವಂ ಮಹೇಶ ಮಹಾಜ್ಞಾತಾ ದುಃಸ್ವಪ್ನಂ ಮಾಂ ನ ದರ್ಶಯ ॥ ೮೦ ॥

---

೭೬. ಮೊದಲು ಅಮೃತರೂಪದಲ್ಲಿದ್ದು ಪರಿಣಾಮದಲ್ಲಿ ವಿಷಸ್ವರೂಪವಾಗಿರುವ ಆ ಕಾಮಸಾಗರವು ಯಮಾಲಯದಂತೆ ಇದ್ದು ಮುಕ್ತಿಮಾರ್ಗವನ್ನು ಮರೆಸತಕ್ಕದ್ದಾಗಿದೆ.

೭೭. ಆದುದರಿಂದ ಎಲೈ ಶ್ರೀಹರಿಯೇ, ನೀನು ಬುದ್ಧಿಯೆಂಬ ದೋಣಿಯಿಂದ, ವಿಜ್ಞಾನವೆಂಬ ಹುಟ್ಟಿನಿಂದ ನನ್ನನ್ನು ದಾಟಿಸು. ಎಲೈ ಮಧುಸೂದನನೇ, ನೀನು ಪ್ರಸನ್ನನಾಗಿ ನನ್ನನ್ನು ದಾಟಿಸಲು ನಾವಿಕನಾಗು.

೭೮. ಸರ್ವೇಶ್ವರನೂ, ಲಕ್ಷ್ಮೀರಮಣನೂ ಆದ ಎಲೈ ಜಗನ್ನಾಥನೇ, ಈ ಸಂಸಾರದ ಸೃಷ್ಟಿಕ್ರಮದಲ್ಲಿ ತೊಡಗಿರುವ ಅನೇಕ ಬ್ರಹ್ಮರು ನಿನ್ನ ಅಧೀನರಾಗಿದ್ದಾರೆ.

೭೯. ಈ ಬ್ರಹ್ಮಲೋಕವು ಕರ್ಮಭೂಮಿಯೇನೂ ಅಲ್ಲ. ಹೀಗಿದ್ದರೂ ನಿನ್ನ ಭಕ್ತಿಗೆ ಪ್ರತಿಬಂಧಕವಾದ ಕಾಮಸುಖದಲ್ಲಿ ನನಗೆ ಆಸೆಯುಂಟಾಗುತ್ತಿದೆ

೮೦. ಕರುಣಾಸಮುದ್ರನೂ, ದೀನಬಂಧುವೂ ಆದ ಎಲೈ ನಾಥನೇ, ದಯೆ ತೋರು. ಮಹೇಶ್ವರನೂ, ಮಹಾಜ್ಞಾನಿಯೂ ಆದ ನೀನು ನನಗೆ ದುಃಸ್ವಪ್ನವನ್ನು ತೋರಿಸಬೇಡ.

ಇತ್ಯುಕ್ತ್ವಾ ಜಗತಾಂ ಧಾತಾ ವಿರರಾಮ ಸನಾತನಃ ।
ಧ್ಯಾಯಂಧ್ಯಾಯಂ ಮತ್ಪದಾಬ್ಜಂ ಶಶ್ವತ್ಸಸ್ಮಾರ ಮಾಮಿತಿ ॥ ೮೧ ॥

ಬ್ರಹ್ಮಣಾ ಚ ಕೃತಂ ಸ್ತೋತ್ರಂ ಭಕ್ತಿಯುಕ್ತಶ್ಚ ಯಃ ಪಠೇತ್ ।
ಸ ಚೈವಾಕರ್ಣ್ಯ ವಿಷಯೇ ನ ನಿಮಗ್ನೋ ಭವೇದ್ಧ್ರುವಂ ॥ ೮೨ ॥

ಮಮ ಮಾಯಾಂ ವಿನಿರ್ಜಿತ್ಯ ಸಂಜ್ಞಾನಂ ಲಭತೇ ಧ್ರುವಂ ।
ಇಹ ಲೋಕೇ ಭಕ್ತಿಯುಕ್ತೋ ಮದ್ಭಕ್ತಪ್ರವರೋ ಭವೇತ್ ॥ ೮೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ದ್ವಾತ್ರಿಂಶೋಽಧ್ಯಾಯಃ

---

೮೧. ಅನಾದಿಯಾದ ಜಗದ್ವಿಧಾತನು ಹೀಗೆ ಹೇಳಿ, ಮತ್ತೆ ಮತ್ತೆ ನನ್ನ ಚರಣಕಮಲಗಳನ್ನು ಧ್ಯಾನಿಸಿ ಸ್ಮರಿಸುತ್ತ ಸುಮ್ಮನಾದನು.

೮೨. ಬ್ರಹ್ಮನು ಹೇಳಿದ ಈ ಸ್ತೋತ್ರವನ್ನು ಯಾರು ಭಕ್ತಿಪೂರ್ವಕವಾಗಿ ಪಠಿಸುತ್ತಾರೋ ಮತ್ತು ಕೇಳುತ್ತಾರೋ ಅವರು ಎಂದಿಗೂ ವಿಷಯಾಭಿಲಾಷೆಗೊಳಗಾಗುವುದಿಲ್ಲ.

೮೩. ಅವನು ನನ್ನ ಮಾಯಾಶಕ್ತಿಯನ್ನು ಗೆದ್ದು ದಿವ್ಯಜ್ಞಾನವನ್ನು ಹೊಂದುವನು. ಈ ಲೋಕದಲ್ಲಿ ಭಕ್ತಿಶ್ರದ್ಧೆಗಳಿಂದ ಕೂಡಿದ್ದು ನನ್ನ ಭಕ್ತರಲ್ಲಿ ಶ್ರೇಷ್ಠನಾಗುವನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಬ್ರಹ್ಮ ಮತ್ತು ಮೋಹಿನಿಯರ ಪ್ರಶ್ನೋತ್ತರರೂಪವಾದ
ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

ಮೂವತ್ತೆರಡನೆಯ ಅಧ್ಯಾಯದ ಸಾರಾಂಶ.

ಮೋಹಿನಿಯ ಸ್ತೋತ್ರದಿಂದ ಸಂತುಷ್ಟನಾದ ಮನ್ಮಥನು ತನ್ನ ಪುಷ್ಪಬಾಣ ವನ್ನು ಬ್ರಹ್ಮನ ಮೇಲೆ ಪ್ರಯೋಗಿಸಲು ಕೂಡಲೇ ಚಂಚಲಮನಸ್ಕನಾದ ಬ್ರಹ್ಮನು ಮೋಹಿನಿಯನ್ನು ಮನಸ್ಸಿನಲ್ಲೇ ಮೋಹಿಸಿದನು. ಆದರೂ ಮನಸ್ಸನ್ನು ಸ್ಥಿರಪಡಿಸಿ ಕೊಂಡು ಮನ್ಮಥನನ್ನು ಶಪಿಸಿ, ಮೋಹಿನಿಯನ್ನು ಕುರಿತು " ನಾನು ನಿನ್ನ ತಂದೆಗೆ ಸಮಾನನೂ, ವೃದ್ಧನೂ ಆದುದರಿಂದ ನನ್ನನ್ನು ಬಿಟ್ಟು ಮನ್ಮಥ, ಚಂದ್ರ ಮುಂತಾದ ಸುಂದರಪುರುಷರನ್ನು ವರಿಸು ಹೋಗು" ಎಂದು ಹೇಳಿದನು. ಆದರೂ ಮೋಹಿನಿಯು ಒಪ್ಪದೇ, ಬ್ರಹ್ಮನನ್ನೇ ಒಲಿಸಿಕೊಳ್ಳಬೇಕೆಂದು ಹಟಹಿಡಿದು ಶ್ರೀಹರಿಯನ್ನು ಶರಣಾಗತಳಾದಳು. ಬ್ರಹ್ಮನೂ ಭಯದಿಂದ ಸುಮ್ಮನೇ ಕುಳಿತನು. ಆಗ ವಿಷ್ಣುವಿನಿಂದ ಪ್ರೇರಿತನಾದ ಮನ್ಮಥನು ತನ್ನ ಪರಿವಾರದೊಡನೆ ಮತ್ತೊಮ್ಮೆ ಬಂದು ಬ್ರಹ್ಮನ ಮೇಲೆ ತನ್ನ ಅಸ್ತ್ರಗಳನ್ನು ಪ್ರಯೋಗಿಸಿದನು. ಮನ್ಮಥಾಸ್ತ್ರಗಳ ಬಾಧೆಯನ್ನು ತಡೆಯಲಾರದೆ ಬ್ರಹ್ಮನು ವಿಷ್ಣುವನ್ನು ಮರೆಹೊಕ್ಕನು. ಮತ್ತು ಶ್ರೀಕೃಷ್ಣನ ಪಾದಕಮಲಗಳನ್ನು ಸ್ಮರಿಸುತ್ತ ಕುಳಿತನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ತ್ರಯಸ್ತ್ರಿಂಶೋಽಧ್ಯಾಯಃ ||

|| ಶ್ರೀ ಕೃಷ್ಣ ಉವಾಚ ||

ಕೃತ್ವಾ ಬ್ರಹ್ಮಾ ಹರೇಃ ಸ್ತೋತ್ರಂ ತಸ್ಥೌ ತಸ್ಯಾಃ ಸಮೀಪತಃ ।
ಮನೋಮತ್ತಗಜೇಂದ್ರಂ ಚ ಕಾಮಾಸಕ್ತಂ ನಿವಾರಯನ್ || ೧ ||

ದಿವ್ಯಜ್ಞಾನಾಂಕುಶೇನೈವ ಮಯಾ ದತ್ತೇನ ರಾಧಿಕೇ ।
ಉವಾಚ ಮೋಹಿನೀ ತಂ ಚ ಪರಿಹಾಸಪರಂ ವಚಃ || ೨ ||

|| ಮೋಹಿನ್ಯುವಾಚ ||

ಇಂಗಿತೇನೈವ ನಾರೀಣಾಂ ಸದ್ಯೋ ಮತ್ತಂ ಭವೇನ್ಮನಃ ।
ಕರೋತ್ಯಾಕೃಷ್ಯ ಸಂಭೋಗಂ ಯಃ ಸ ಏವೋತ್ತಮೋ ವಿಭೋ || ೩ ||

ಮೂವತ್ತಮೂರನೆಯ ಅಧ್ಯಾಯ.

೧. ಶ್ರೀಕೃಷ್ಣ :—ಈ ರೀತಿಯಾಗಿ ಬ್ರಹ್ಮನು ಶ್ರೀಹರಿಯನ್ನು ಸ್ತುತಿಸಿ, ಆಕೆಯ ಸಮೀಪದಲ್ಲಿ ನಿಂತುಕೊಂಡನು. ಮದಿಸಿದ ಆನೆಯಂತೆ ಕಾಮಾಸ್ತಕವಾದ ತನ್ನ ಮನಸ್ಸನ್ನು ತಡೆಯಲು ಪ್ರಯತ್ನಪಟ್ಟನು.

೨. ಎಲೌ ರಾಧೆಯೇ, ನಾನು ಬೋಧಿಸಿದ ದಿವ್ಯಜ್ಞಾನವೆಂಬ ಅಂಕುಶದಿಂದ ತನ್ನ ಮನೋಗಜವನ್ನು ನಿವಾರಿಸಲು ಪ್ರಯತ್ನಪಡುತ್ತಿದ್ದ ಆ ಬ್ರಹ್ಮನನ್ನು ಕುರಿತು ಮೋಹಿನಿಯು ಈ ರೀತಿ ಪರಿಹಾಸವಚನವನ್ನಾಡಿದಳು.

೩. ಮೋಹಿನಿ :—ಸ್ತ್ರೀಯರ ಇಂಗಿತವನ್ನು ತಿಳಿದ ಮಾತ್ರದಿಂದಲೇ ಮನಸ್ಸು ಮದಿಸಿಹೋಗುವುದು. ಯಾರು ಸ್ತ್ರೀಯನ್ನು ಬಲಾತ್ಕಾರದಿಂದ ಹಿಡಿದೆಳೆದು ಸಂಭೋಗಿಸುವರೋ ಅವರೇ ಉತ್ತಮಪುರುಷರೆನ್ನಿಸಿಕೊಳ್ಳುವರು.

ಜ್ಞಾತ್ವಾ ಸ್ಫುಟಮಭಿಪ್ರಾಯಂ ನಾರ್ಯಾ ಸಂಪ್ರೇಷಿತೋ ಹಿ ಯಃ ।
ಪಶ್ಚಾತ್ ಕರೋತಿ ಶೃಂಗಾರಂ ಪುರುಷಃ ಸ ಚ ಮಧ್ಯಮಃ ॥ ೪ ॥

ಪುನಃಪುನಃ ಪ್ರೇಷಿತಶ್ಚ ಸ್ತ್ರಿಯಾ ಕಾಮಾರ್ತಯಾ ಚ ಯಃ ।
ತಯಾ ನ ಲಿಪ್ತೋ ರಹಸಿ ಸ ಕ್ಲೀಬೋ ನ ಪುಮಾನಹೋ ॥ ೫ ॥

ಗೃಹೀ ತಪಸ್ವೀ ಕಾಮೀ ವಾ ತ್ಯಜೇತ್ ಸ್ತ್ರಿಯಮುಪಸ್ಥಿತಾಂ ।
ವ್ರಜೇತ್ ಪರತ್ರ ನರಕಮಪೂಜ್ಯಶ್ಚ ಭವೇದಿಹ ॥ ೬ ॥

ನಷ್ಟಶ್ರೀರ್ಭ್ರಷ್ಟರೂಪಶ್ಚ ಭ್ರಷ್ಟಬುದ್ಧಿರ್ಭವೇದ್ಧ್ರುವಂ ।
ಸ ಸದ್ಯಃ ಕ್ಲೀಬತಾಂ ಯಾತಿ ಬ್ರಹ್ಮನ್ ಶಾಪೇನ ಯೋಷಿತಃ ॥ ೭ ॥

ಉತ್ತಿಷ್ಠ ಜಗತೀನಾಥ ಪಾರಂ ಕುರು ಸ್ಮರಾರ್ಣವೇ ।
ನಿಮಗ್ನಾಂ ದುಸ್ತರೇ ಘೋರೇ ಕರ್ಣಧಾರ ಭಯಾನಕೇ ॥ ೮ ॥

---

೪. ಯಾರು ಸ್ಪಷ್ಟವಾಗಿ ಮನಸ್ಸಿನ ಅಭಿಪ್ರಾಯವನ್ನು ತಿಳಿದನಂತರ ಹೆಂಗಸಿನಿಂದ ಆಹ್ವಾನಿತನಾಗಿ ಶೃಂಗಾರಸುಖವನ್ನನುಭವಿಸುವನೋ ಅವನು ಮಧ್ಯಮವರ್ಗದ ಪುರುಷನೆನಿಸುವನು.

೫. ಕಾಮಾರ್ತಳಾದ ಹೆಂಗಸಿನಿಂದ ಅನೇಕಬಾರಿ ಕರೆಕಳುಹಿಸಲ್ಪಟ್ಟರೂ, ಅವಳೊಡನೆ ಏಕಾಂತದಲ್ಲಿ ಸೇರದಿರುವವನು ನಪುಂಸಕನೆನಿಸಿಕೊಳ್ಳುವನೇ ಹೊರತು ಪುರುಷನೆನಿಸಿಕೊಳ್ಳುವುದಿಲ್ಲ.

೬. ಗೃಹಸ್ಥನಾಗಲೀ, ತಪಸ್ವಿಯಾಗಲೀ, ಕಾಮಿಯಾಗಲೀ, ತನ್ನನ್ನು ಕಾಮಿಸಿ ಬಂದ ಸ್ತ್ರೀಯನ್ನು ತ್ಯಜಿಸಿದ್ದೇ ಆದರೆ, ಪರಲೋಕದಲ್ಲಿ ನರಕಕ್ಕೆ ಹೋಗುವು ದಲ್ಲದೆ ಇಹಲೋಕದಲ್ಲಿ ಗೌರವರಹಿತನಾಗುವನು

೭. ಅಂಥವನು, ಸಂಪತ್ತನ್ನೂ, ರೂಪವನ್ನೂ, ಬುದ್ಧಿಯನ್ನೂ ಕಳೆದು ಕೊಳ್ಳುವುದರಲ್ಲಿ ಸಂಶಯವಿಲ್ಲ. ಎಲೈ ಬ್ರಹ್ಮನೇ, ಅಂಥವನು ಹೆಂಗಸಿನ ಶಾಪದಿಂದ ಕೂಡಲೇ ನಪುಂಸಕನಾಗುವನು.

೮. ಎಲೈ ಜಗತ್ಪತಿಯೇ, ದಾಟಲಸಾಧ್ಯವೂ, ಭಯಂಕರವೂ, ಆದ ಮನ್ಮಥಸಾಗರದಲ್ಲಿ ಮುಳುಗಿರುವ ನನ್ನನ್ನು ದಾಟಿಸಲೋಸುಗ ನೀನು ನನಗ ನಾವಿಕನಾಗು. ಏಳು.

ಅತೀವ ನಿರ್ಜನಸ್ಥಾನೇ ಸರ್ವಜಂತುವಿವರ್ಜಿತೇ ।
ಸುಗಂಧಿವಾಯುನಾ ರಮ್ಯೇ ಪುಂಸ್ಕೋಕಿಲರುತಶ್ರುತೇ ॥ ೯ ॥

ಸತತಂ ತ್ವನ್ಮನಸ್ಕಾಂ ಮಾಂ ದಾಸೀಂ ಜನ್ಮನಿ ಜನ್ಮನಿ ।
ಕ್ರೀಣೀಹಿ ರತಿಪಣ್ಯೇನಾಮೂಲ್ಯರತ್ನೇನ ಸತ್ವರಂ ॥ ೧೦ ॥

ಇತ್ಯುಕ್ತ್ವಾ ಮೋಹಿನೀ ಸದ್ಯೋ ಜಗತ್ಸ್ರಷ್ಟುಶ್ಚ ಬ್ರಹ್ಮಣಃ ।
ವಿಚಕರ್ಷ ವರಂ ವಸ್ತ್ರಂ ಸಸ್ಮಿತಾ ಕಾಮವಿಹ್ವಲಾ ॥ ೧೧ ॥

ವಿಜ್ಞಾಯ ಸಮಯಂ ಧಾತಾ ತಾಮುವಾಚ ಭಯಾತುರಃ ।
ಪೀಯೂಷತುಲ್ಯಂ ವಚನಂ ವರಂ ವಿನಯಪೂರ್ವಕಂ ॥ ೧೨ ॥

॥ ಬ್ರಹ್ಮೋವಾಚ ॥

ಶೃಣು ಮೋಹಿನಿ ಮದ್ವಾಕ್ಯಂ ಸತ್ಯಸಾರಂ ಹಿತಂ ಸ್ಫುಟಂ ।
ನ ಕುರು ತ್ವಂ ಚ ತ್ರೈಲೋಕ್ಯೇ ಸ್ತ್ರೀಜಾತೀನಾಮಪತ್ರಪಾಂ ॥ ೧೩ ॥

೯-೧೦. ನಿರ್ಜನವೂ, ಸಕಲಜಂತುವಿವರ್ಜಿತವೂ, ಸುಗಂಧಿವಾಯುವಿನಿಂದ ಮನೋಹರವೂ, ಗಂಡುಕೋಗಿಲೆಯ ಇಂಚರದಿಂದ ಆಹ್ಲಾದಕವೂ ಆಗಿ ಇರುವ ಏಕಾಂತಪ್ರದೇಶದಲ್ಲಿ, ಸರ್ವದಾ ನಿನ್ನಲ್ಲಿ ಆಸಕ್ತಳೂ, ನಿನ್ನ ಅನೇಕ ಜನ್ಮಗಳ ದಾಸಿಯೂ ಆದ ನನ್ನನ್ನು ರತಿಸುಖವೆಂಬ ಅಮೂಲ್ಯರತ್ನವನ್ನು ಬೆಲೆಕೊಡುವುದರ ಮೂಲಕ ಕೊಂಡುಕೋ.

೧೧. ಮೋಹಿನಿಯು ಈ ರೀತಿಯಾಗಿ ಹೇಳಿ, ಮರುಕ್ಷಣದಲ್ಲಿಯೇ, ಕಾಮಾಭಿಲಾಷೆಯಿಂದ ನಸುನಗೆಯನ್ನು ತೋರುತ್ತ ಜಗತ್ಸೃಷ್ಟಿಕರ್ತನಾದ ಬ್ರಹ್ಮನ ಬಟ್ಟೆಯನ್ನು ಹಿಡಿದೆಳೆದಳು.

೧೨. ಬ್ರಹ್ಮನು ಆ ಮೋಹಿನಿಯ ಸಂಕೇತವನ್ನರಿತು ಭಯಗೊಂಡವನಾಗಿ, ನಮ್ರತೆಯನ್ನು ಪ್ರಕಟಿಸುತ್ತ ಅಮೃತೋಪಮವಾದ ಕೆಲವು ಮಾತುಗಳನ್ನು ಹೇಳಿದನು.

೧೩. ಬ್ರಹ್ಮಾ:—ಎಲೌ ಮೋಹಿನಿಯೇ, ಸತ್ಯದ ಸಾರವೂ, ಹಿತಕರವೂ ಆದ ನನ್ನ ಸ್ಪಷ್ಟನುಡಿಗಳನ್ನು ಕೇಳು. ನೀನು ತ್ರಿಲೋಕದಲ್ಲಿಯೂ ಸ್ತ್ರೀಜಾತಿಗೇ ಅಪಮಾನಗೊಳಿಸಬೇಡ.

ತ್ಯಜ ಮಾಮಂಬಿಕೇ ಪುತ್ರಂ ವೃದ್ಧಂ ನಿಷ್ಕಾಮಮೇವ ಚ ।
ತ್ವತ್ಕರ್ಮಯೋಗ್ಯರಸಿಕಂ ಯುವಾನಂ ಪಶ್ಯ ಸುಸ್ಮಿತೇ ॥ ೧೪ ॥

ನಿಷೇಕಾಲ್ಲಭತೇ ಪತ್ನೀ ಗುರುರ್ಭರ್ತುಃ ಶುಭಾಶುಭಂ ।
ಮಂತ್ರಶಿಲ್ಪಮಪತ್ಯಂ ಚ ಸರ್ವಮೇತನ್ನ ಯತ್ನತಃ ॥ ೧೫ ॥

ತ್ವಯಾ ಸಹ ಮಮ ರತೇರ್ನಿಬಂಧೋ ನಾಸ್ತಿ ಸುವ್ರತೇ ।
ಕ್ಷುದ್ರಂ ಮಹದ್ವಾ ಯತ್ಕರ್ಮ ಸರ್ವಂ ದೈವನಿಬಂಧಕಂ ॥ ೧೬ ॥

ಇತ್ಯುಕ್ತವಂತಂ ಬ್ರಹ್ಮಾಣಂ ಸ್ಮರಂತಂ ಮತ್ಪದಾಂಬುಜಂ ।
ವಿಚಕರ್ಷ ಪುನರ್ವೇಶ್ಯಾ ಕಾಮೇನ ಹತಚೇತನಾ ॥ ೧೭ ॥

ಏತಸ್ಮಿನ್ನಂತರೇ ಶೀಘ್ರಂ ಸ್ಥಾನಂ ತತ್ಸುಮನೋಹರಂ ।
ಆಜಗ್ಮುರ್ಮುನಯಃ ಸರ್ವೇ ಜ್ವಲಂತೋ ಬ್ರಹ್ಮತೇಜಸಾ ॥ ೧೮ ॥

---

೧೪. ಎಲೌ ಮಾತೆಯೇ, ನಿನಗೆ ಪುತ್ರಸದೃಶನೂ, ಮುದುಕನೂ, ಕಾಮೇಚ್ಛಾರಹಿತನೂ ಆದ ನನ್ನನ್ನು ಬಿಡು. ಎಲೌ ಸ್ಮಿತಮುಖಿಯೇ, ನಿನ್ನೊಡನೆ ರತಿಸುಖಕ್ಕೆ ಯೋಗ್ಯನೂ, ರಸಿಕನೂ ಆದ ಯುವಕನನ್ನು ನೋಡು.

೧೫. ಹೆಂಗಸಾದವಳು ತನಗೆ ಗುರುಸಮಾನನಾದ ಪತಿಯ ನಿಷೇಕರೂಪ ಸಂಬಂಧದಿಂದ ಶುಭಾಶುಭಕರಗಳಾದ ಮಂತ್ರಶಿಲ್ಪವನ್ನೂ, ಮಕ್ಕಳನ್ನೂ ಪಡೆಯುವಳು. ಇವೆಲ್ಲ ಯತ್ನಪೂರ್ವಕವಾಗಿ ಪಡೆಯುವುದಲ್ಲ.

೧೬. ಎಲೌ ವ್ರತಪರಳೇ, ನಿನ್ನೊಡನೆ ನಾನು ರತಿಸುಖವನ್ನನುಭವಿಸಬೇಕೆಂಬ ನಿಯಮವಿಲ್ಲ. ಸಣ್ಣದಾಗಲೀ, ದೊಡ್ಡದಾಗಲೀ ಎಲ್ಲ ಕಾರ್ಯವೂ ವಿಧಿನಿಯಮದಂತೆ ನಡೆಯಬೇಕು.

೧೭. ಹೀಗೆ ಹೇಳಿ ನನ್ನ ಪಾದಕಮಲಗಳನ್ನು ಸ್ಮರಿಸಿಕೊಳ್ಳುತ್ತಿದ್ದ ಬ್ರಹ್ಮನನ್ನು ಕಾಮಾತುರದಿಂದ ನಷ್ಟಚೇತನಳಾದ ಆ ವೇಶ್ಯೆಯು ಪುನಃ ಎಳೆಯಲು ಪ್ರಾರಂಭಿಸಿದಳು.

೧೮. ಈ ಸಮಯಕ್ಕೆ ಸರಿಯಾಗಿ ಆ ಮನೋಹರವಾದ ಸ್ಥಾನಕ್ಕೆ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಅನೇಕ ಮುನಿಗಳು ಬಂದರು.

ಅತ್ರಿಃ ಪುಲಸ್ತ್ಯಃ ಪುಲಹೋ ವಸಿಷ್ಠಃ ಕ್ರತುರಂಗಿರಾಃ ।
ಭೃಗುರ್ಮರೀಚಿಃ ಕಪಿಲೋ ವೋಢುಃ ಪಂಚಶಿಖೋ ರುಚಿಃ ॥ ೧೯ ॥

ಆಸುರಿಶ್ಚ ಪ್ರಚೇತಾಶ್ಚ ಸ್ವಯಂ ಶುಕ್ರೋ ಬೃಹಸ್ಪತಿಃ ।
ಉತಥ್ಯಃ ಕರಕಃ ಕಣ್ವಃ ಕಶ್ಯಪೋ ಗೌತಮಸ್ತಥಾ ॥ ೨೦ ॥

ಸನಕಶ್ಚ ಸನಂದನಶ್ಚ ಕರ್ದಮಶ್ಚ ಸನಾತನಃ ।
ಸನತ್ಕುಮಾರೋ ಭಗವಾನ್ ಯೋಗಿನಾಂ ಪರಮೋ ಗುರುಃ ॥ ೨೧ ॥

ಶಾತಾತಪಃ ಪಿಪ್ಪಲಶ್ಚ ಶಂಕುಃ ಶುಕ್ರಃ ಪರಾಶರಃ ।
ಮಾರ್ಕಂಡೇಯೋ ಲೋಮಶಶ್ಚ ಮೃಕಂಡುಶ್ಚ್ಯವನಸ್ತಥಾ ॥ ೨೨ ॥

ದುರ್ವಾಸಾಶ್ಚ ಜರತ್ಕಾರುರಾಸ್ತೀಕಶ್ಚ ವಿಭಾಂಡಕಃ ।
ಋಷ್ಯಶೃಂಗೋ ಭರದ್ವಾಜೋ ವಾಮದೇವಶ್ಚ ಕೌಶಿಕಃ ॥ ೨೩ ॥

ದೃಷ್ಟ್ವೈತಾಂಶ್ಚ ತಪೋನಿಷ್ಠಾನಾಗತಾಂಶ್ಚ ಮುನೀಶ್ವರಾನ್ ।
ತತ್ಯಾಜ ಮೋಹಿನೀ ಶೀಘ್ರಂ ವ್ರೀಡಯಾ ಕಮಲೋದ್ಭವಂ ॥ ೨೪ ॥

೧೯-೨೩. ಅತ್ರಿ, ಪುಲಸ್ತ್ಯ, ಪುಲಹ, ವಸಿಷ್ಠ, ಕ್ರತು ಮತ್ತು ಅಂಗಿರಸ್ಸು. ಭೃಗು, ಮರೀಚಿ, ಕಪಿಲ, ವೋಢು, ಪಂಚಶಿಖ ಮತ್ತು ರುಚಿ. ಆಸುರಿ, ಪ್ರಚೇತ. ಶುಕ್ರ ಮತ್ತು ಬೃಹಸ್ಪತಿ. ಉತಥ್ಯ. ಕರಕ, ಕಣ್ವ, ಕಶ್ಯಪ ಮತ್ತು ಗೌತಮ, ಸನಕ, ಸನಂದ, ಕರ್ದಮ, ಸನಾತನ, ಯೋಗಿಗಳಲ್ಲಿ ಪರಮಗುರುವಾದ ಸನತ್ಕುಮಾರ, ಶಾತಾತಪ, ಪಿಪ್ಪಲ, ಶಂಕು, ಶುಕ್ರ, ಪರಾಶರ, ಮಾರ್ಕಂಡೇಯ, ಲೋಮಶ, ಮೃಕಂಡು ಮತ್ತು ಚ್ಯವನ. ದುರ್ವಾಸ, ಜರತ್ಕಾರು, ಆಸ್ತೀಕ, ವಿಭಾಂಡಕ, ಋಷ್ಯಶೃಂಗ, ಭರದ್ವಾಜ, ವಾಮದೇವ ಮತ್ತು ಕೌಶಿಕ ಮುಂತಾದ ಅನೇಕ ಮುನಿಗಳು ಬಂದರು.

೨೪. ಈ ರೀತಿ ತಪೋನಿಷ್ಠರಾದ ಮುನಿಗಳನೇಕರು ಇಲ್ಲಿಗೆ ಬಂದುದನ್ನು ನೋಡಿ, ಮೋಹಿನಿಯು ಲಜ್ಜೆಗೊಂಡು ಬ್ರಹ್ಮನನ್ನು ಕೂಡಲೇ ಬಿಟ್ಟಳು.

ತತ್ರೋಪವಾಸ ಜಗದ್ಧಾತಾ ತದ್ವಾಮಪಾರ್ಶ್ವತಶ್ಚ ಸಾ ।
ಪ್ರಣೇಮುರ್ಮುನಯಸ್ತಂ ಚ ಭಕ್ತಿನಮ್ರಾತ್ಮಕಂಧರಾಃ ॥ ೨೫ ॥

ಆಶಿಷಂ ಯುಯುಜೇ ಬ್ರಹ್ಮಾ ವಾಸಯಾಮಾಸ ತಾನ್ವಿಭುಃ ।
ತೇಷಾಂ ಮಧ್ಯೇ ಪ್ರಜಜ್ವಾಲ ಯಥಾ ತಾರಾಸು ಚಂದ್ರಮಾಃ ॥ ೨೬ ॥

ಪಪ್ರಚ್ಛುರ್ಮುನಯೋ ದೇವಂ ಕಥಮೇಷಾ ತವಾಂತಿಕೇ ।
ಸ್ವರ್ವೇಶ್ಯಾನಾಂ ಚ ಪ್ರವರಾ ಮೋಹಿನೀತ್ಯೇವಮೇವ ಚ ॥ ೨೭ ॥

ಶ್ರುತ್ವಾ ಮುನೀನಾಂ ವಚನಮುವಾಚ ತಾನ್ ಪ್ರಜಾಪತಿಃ ।
ಸ್ತ್ರೀಜಾತೀನಾಂ ಚ ವಚನಂ ಲಜ್ಜಾಚ್ಛಾದನಮೇವ ಚ ॥ ೨೮ ॥

॥ ಬ್ರಹ್ಮೋವಾಚ ॥

ಅಪೂರ್ವಂ ನೃತ್ಯಗೀತಂ ಚ ಚಿರಂ ಕೃತ್ವಾ ಶುಭಾವಹಾ ।
ಉವಾಸೇಯಂ ಪರಿಶ್ರಾಂತಾ ಯಥಾ ಕನ್ಯಾ ಪಿತುಃ ಪುರಃ ।
ಇತ್ಯುಕ್ತ್ವಾ ಜಗತಾಂ ಧಾತಾ ಜಹಾಸ ಮುನಿ ಸಂಸದಿ ॥ ೨೯ ॥

---

೨೫. ಬ್ರಹನು ತನ್ನ ಪೀಠದಲ್ಲಿ ಕುಳಿತನು. ಅವನ ಪಕ್ಕದಲ್ಲೇ ಮೋಹಿನಿಯು ಕುಳಿತಳು. ಎಲ್ಲ ಮುನಿಗಳೂ ಭಕ್ತಿಯಿಂದ ತಲೆಬಾಗಿ ಅವನಿಗೆ ವಂದಿಸಿದರು.

೨೬. ವಿಶ್ವವ್ಯಾಪಕನಾದ ಬ್ರಹ್ಮನು ಆಶೀರ್ವಾದಮಾಡಿ ಎಲ್ಲರಿಗೂ ಕುಳಿತುಕೊಳ್ಳಲು ಹೇಳಿದನು. ನಕ್ಷತ್ರಗಳ ಮಧ್ಯದಲ್ಲಿ ಚಂದ್ರನಂತೆ ತಾನು ಬೆಳಗಿದನು.

೨೭. ಎಲೈ ದೇವನೇ, ದೇವ ವೇಶ್ಯೆಯರಲ್ಲಿ ಉತ್ತಮಳಾದ ಈ ಮೋಹಿನಿಯು ನಿನ್ನ ಸಮೀಪದಲ್ಲಿರಲು ಕಾರಣವೇನೆಂದು ಅವರು ಬ್ರಹ್ಮನನ್ನು ಕೇಳಿದರು.

೨೮. ಮುನಿಗಳ ಮಾತನ್ನು ಕೇಳಿ ಪ್ರಜಾಪತಿಯು ಇಂತೆಂದನು ? ಆ ಮಾತು ಸ್ತ್ರೀಜಾತಿಗೆ ಸಹಜವಾದ ಲಜ್ಜೆಯನ್ನು ಮರೆಮಾಡುವ ಮಾತಾಗಿತ್ತು.

೨೯. ಬ್ರಹ್ಮ:—ಈ ಮಂಗಳಾಂಗಿಯಾದ ಮೋಹಿನಿಯು ನನ್ನ ಮುಂದೆ ಅಪೂರ್ವವಾದ ನೃತ್ಯಗೀತೆಗಳ ಕೌಶಲವನ್ನು ಬಹಳಹೊತ್ತು ವ್ಯಕ್ತಗೊಳಿಸಿ ಬಳಲಿದವಳಾಗಿ ತಂದೆಯ ಪಕ್ಕದಲ್ಲಿ ಮಗಳು ಕುಳಿತುಕೊಳ್ಳುವಂತೆ ಕುಳಿತಿದ್ದಾಳೆ. ಜಗತ್ಸೃಷ್ಟಿಕರ್ತನು ಹೀಗೆ ಹೇಳಿ ಆ ಮುನಿಗಳ ಸಭೆಯಲ್ಲಿ ನಕ್ಕನು.

ಜಹಸುರ್ಮುನಯಃ ಸರ್ವೇ ಸರ್ವಜ್ಞಾಸ್ತತ್ರ ರಾಧಿಕೇ ।
ಸರ್ವಂ ರಹಸ್ಯಂ ವಿಜ್ಞಾಯ ಜಗತ್ಸ್ರಷ್ಟುಶ್ಚ ಮಾನಸಂ ॥ ೩೦ ॥

ಸದ್ಯಶ್ಚುಕೋಪ ಕುಲಟಾ ಹಾಸ್ಯವ್ಯಾಜೇನ ಸಂಸದಿ ।
ಸರ್ವಾಂಗಕಂಪಮಾನಾ ಸಾ ಕುಲಟಾ ಕುಟಿಲಾನನಾ ॥ ೩೧ ॥

ರಕ್ತಪಂಕಜನೇತ್ರಾ ಚ ಕೋಪಪ್ರಸ್ಫುರಿತಾಧರಾ ।
ಉತ್ಥಾಯ ಚ ಸಭಾಮಧ್ಯೇ ತೇಷಾಂ ಚ ಪುರತಃ ಸ್ಥಿತಾ ।
ಸಂಬೋಧ್ಯೋವಾಚ ಬ್ರಹ್ಮಾಣಂ ಮೃತ್ಯುಕನ್ಯಾ ಯಥಾ ರುಷಾ ॥ ೩೨ ॥

॥ ಮೋಹಿನ್ಯುವಾಚ ॥

ಅಯೇ ಬ್ರಹ್ಮನ್ ಜಗನ್ನಾಥ ವೇದಕರ್ತಾ ತ್ವಮೇವ ಚ ॥ ೩೩ ॥

ಕಿಂ ವಾ ವೇದಪ್ರಣಿಹಿತಂ ಕರ್ಮ ಕಿಂ ತದ್ವಿಪರ್ಯಯಂ ।
ವಿಚಾರಂ ಮನಸಾ ಸ್ವೇನ ಕುರು ವೇದವಿದಾಂ ಗುರೋ ॥ ೩೪ ॥

---

೩೦. ಆಗ ಸರ್ವಜ್ಞರಾದ ಆ ಮುನಿಗಳೆಲ್ಲರೂ ಜಗತ್ಸೃಷ್ಟಿಕರ್ತನ ಮನೋಗತವನ್ನರಿತು, ಆ ರಹಸ್ಯವನ್ನು ಹೊರಗೆಡಹದೆ ತಾವೂ ಸುಮ್ಮನೆ ನಕ್ಕುಬಿಟ್ಟರು.

೩೧. ಈ ರೀತಿ ಸಭೆಯವರೆಲ್ಲರೂ ಹಾಸ್ಯಮಾಡುವುದನ್ನು ನೋಡಿ ಕುಲಟೆಯಾದ ಆ ಮೋಹಿನಿಯು ಕುಪಿತಳಾಗಿ, ತನ್ನ ಸರ್ವಾಂಗಗಳನ್ನೂ ನಡುಗಿಸುತ್ತ ಮುಖವಿಕಾರಮಾಡಿಕೊಂಡಳು.

೩೨. ಕೆಂದಾವರೆಯಂತೆ ಕೆಂಪಾದ ಕಣ್ಣುಗಳಿಂದ ಕೂಡಿ ಕೆಳತುಟಿಯನ್ನು ನಡುಗಿಸುತ್ತ, ಮೇಲಕ್ಕೆದ್ದು ಸಭಾಮಧ್ಯದಲ್ಲಿ ಅವರೆಲ್ಲರ ಮುಂದೆ ನಿಂತಳು. ಅಲ್ಲದೆ ಕೋಪದಿಂದ ಮೃತ್ಯುಕನ್ಯೆಯಂತೆ ಕಾಣುತ್ತಿದ್ದ ಆಕೆಯು ಬ್ರಹ್ಮನನ್ನು ಕುರಿತು ಇಂತೆಂದಳು.

೩೩. ಮೋಹಿನಿ :–ಎಲೈ ಬ್ರಹ್ಮದೇವನೇ, ನೀನು ಜಗದೊಡೆಯನಾಗಿಯೂ, ಸ್ವತಃ ವೇದಕರ್ತೃವಾಗಿಯೂ ಇದ್ದೀಯೆ.

೩೪. ಎಲೈ ವೇದಜ್ಞರಲ್ಲಿ ಗುರುವೆನಿಸಿದವನೇ, ವೇದವಿಹಿತವಾದ ಕರ್ಮವಾವುದು ? ಅದಕ್ಕೆ ವಿರುದ್ಧವಾದುದಾವುದು ? ಎಂಬುದನ್ನು ನಿನ್ನ ಮನಸ್ಸಿನಲ್ಲಿಯೇ ಸಾವಧಾನದಿಂದ ಯೋಚನೆಮಾಡು.

ಸ್ವಕನ್ಯಾಯಾಂ ಯತ್ಸ್ಪೃಹಾ ಸ ಕಥಂ ಹಸಸಿ ನರ್ತಕೀಂ ।
ನಿರ್ಮಿತಾಹಮೀಶ್ವರೇಣ ಸ್ವರ್ವೇಶ್ಯಾ ಸರ್ವಗಾಮಿನೀ ॥ ೩೫ ॥

ಸತಾಂ ಕರ್ಮ ವಿರುದ್ಧಂ ಯತ್ತದತ್ಯಂತವಿಡಂಬನಂ ।
ದಾಸೀತುಲ್ಯಾಂ ವಿನೀತಾಂ ಚ ದೈವೇನ ಶರಣಾಗತಾಂ ॥ ೩೬ ॥

ಯತೋ ಹಸಸಿ ಗರ್ವೇಣ ತತೋಽಪೂಜ್ಯೋ ಭವಾಚಿರಂ ।
ಅಚಿರಾದ್ದರ್ಪಭಂಗಂ ತೇ ಕರಿಷ್ಯತಿ ಹರಿಃ ಸ್ವಯಂ ॥ ೩೭ ॥

ನಿಬೋಧ ವಚನಂ ಬ್ರಹ್ಮನ್ ವೇಶ್ಯಾಯಾಶ್ಚ ತು ಸಾಂಪ್ರತಂ ।
ತವೈವ ವಚನಂ ಸ್ತೋತ್ರಂ ಗೃಹ್ಣಾತಿ ಯೋ ನರಃ ಸದಾ ॥ ೩೮ ॥

---

೩೫. ನಿನ್ನ ಮಗಳಾದ ಸರಸ್ವತಿಯಲ್ಲಿಯೇ ಕಾಮಾಭಿಲಾಷೆಯನ್ನು ತೋರಿದ ನೀನು ನರ್ತಕಿಯಾದ ನನ್ನನ್ನು ಹಾಸ್ಯಮಾಡುವುದುಚಿತವೇ? ನಾನು ಸರ್ವೇಶ್ವರನಾದ ನಿನ್ನಿಂದಲೇ ಎಲ್ಲರೊಡನೆಯೂ ಬೆರೆಯಲು ಅರ್ಹವಾದ ದೇವ ವೇಶ್ಯೆಯಾಗಿ ನಿರ್ಮಿಸಲ್ಪಟ್ಟೆ

೩೬. ಸತ್ಪುರುಷರು ತಮಗೆ ವಿರುದ್ಧವಾದ ಕರ್ಮವನ್ನಾಚರಿಸುವುದೆಂದರೆ ಅದು ಅತ್ಯಂತ ಲಜ್ಜಾಸ್ಪದವಾಗಿರುವುದು. ವಿನೀತಳೂ, ನಿನಗೆ ದಾಸೀಸಮಾನಳೂ ಆದ ನಾನು ನಿನ್ನಲ್ಲಿ ಶರಣಾಗತಳಾಗಿದ್ದೇನೆ.

೩೭. ಹೀಗಿರುವ ನನ್ನನ್ನು ನೀನು ಗರ್ವದಿಂದ ಹಾಸ್ಯಮಾಡಿದ ಕಾರಣ ನೀನು ಜಗತ್ತಿನಲ್ಲಿ ಪೂಜಾರಹಿತನಾಗು. ಸ್ವಯಂ ಶ್ರೀಹರಿಯೇ ಜಾಗ್ರತೆಯಾಗಿ ನಿನ್ನ ಗರ್ವವನ್ನು ಭಂಗಗೊಳಿಸುವನು.

೩೮. ಎಲೈ ಬ್ರಹ್ಮನೇ. ವೇಶ್ಯೆಯಾದ ನನ್ನ ಈ ನುಡಿಗಳನ್ನು ಸಾವಧಾನದಿಂದ ಕೇಳು. ಯಾವ ಮನುಜನೂ ನಿನ್ನ ಪೂಜೆಯನ್ನಾಗಲೀ, ಸ್ತೋತ್ರವನ್ನಾಗಲೀ ಮಾಡಕೂಡದು.

ಭವಿತಾ ತಸ್ಯ ವಿಘ್ನಶ್ಚ ಸ ಯೋಸ್ಯತ್ಯುಪಹಾಸ್ಯತಾಂ ।
ಭವಿತಾ ವಾರ್ಷಿಕೀ ಪೂಜಾ ದೇವತಾನಾಂ ಯುಗೇ ಯುಗೇ ॥ ೩೯ ॥

ತವ ಮಾಘ್ಯಾಂ ಚ ಸಂಕ್ರಾಂತ್ಯಾಂ ನ ಭವಿಷ್ಯತಿ ಸಾ ಪುನಃ ।
ಕಲ್ಪಾಂತರೇಽತ್ರ ಕಲ್ಪೇ ವಾ ದೇಹೇ ದೇಹಾಂತರೇಽತ್ರ ವಾ ॥ ೪೦ ॥

ಪುನಃ ಪೂಜಾ ನ ಭವಿತಾ ಯಾ ಗತಾ ಸಾ ಗತೈವ ಚ ।
ಇತ್ಯುಕ್ತ್ವಾ ಮೋಹಿನೀ ಶೀಘ್ರಂ ಜಗಾಮ ಮದನಾಲಯಂ ॥ ೪೧ ॥

ತೇನ ಸಾರ್ಧಂ ರತಿಂ ಕೃತ್ವಾ ಬಭೂವ ವಿಜ್ವರಾ ಪುನಃ ।
ಪಶ್ಚಾತ್ತಾಪ ಚೇತನಾಂ ಪ್ರಾಪ್ಯ ವಿಲಲಾಪ ಭೃಶಂ ಪುನಃ ॥ ೪೨ ॥

ಅಯಂ ಕಥಂ ಮಯಾ ಶಪ್ತೋ ಜಗದ್ವಿಧಿರತಿಪ್ರಿಯಃ ।
ಸ್ವರ್ವೇಶ್ಯಾಯಾಂ ಗತಾಯಾಂ ಚ ಮುನಯೋ ದುಃಖಿತಾ ಭೃಶಂ ॥ ೪೩ ॥

---

೩೯. ಹಾಗೆ ಮಾಡುವವನಿಗೆ ಸಕಲ ಕಾರ್ಯಗಳಲ್ಲೂ ವಿಘ್ನವುಂಟಾಗುವುದಲ್ಲದೆ ಅವನು ಹಾಸ್ಯಾಸ್ಪದನಾಗುತ್ತಾನೆ. ಎಲ್ಲ ದೇವತೆಗಳಿಗೂ ಪ್ರತಿವರ್ಷದಲ್ಲೂ ಪೂಜೆಯುಂಟಾಗುವುದು.

೪೦. ಆದರೆ ಈ ಕಲ್ಪದಲ್ಲಾಗಲೀ, ಬೇರೆ ಕಲ್ಪದಲ್ಲಾಗಲೀ, ಈ ದೇಹದಲ್ಲಾಗಲೀ, ಬೇರೆ ದೇಹದಲ್ಲಾಗಲೀ, ಮಾಘಮಾಸದ ಸಂಕ್ರಾಂತಿಯಲ್ಲಿ ನಿನಗೆ ಪೂಜೆಯಾಗುವಂತಿಲ್ಲ

೪೧. ಪುನಃ ನಿನಗೆ ಪೂಜೆಯಾಗುವಂತಿಲ್ಲ. ತಪ್ಪಿದ್ದು ತಪ್ಪಿದಂತೆಯೇ, ಮೋಹಿನಿಯು ಈ ರೀತಿಯಾಗಿ ಹೇಳಿ ಜಾಗ್ರತೆ ಮನ್ಮಥನ ಮನೆಗೆ ಹೋದಳು

೪೨. ಅವನೊಡನೆ ರತಿಸುಖವನ್ನನುಭವಿಸಿದ ನಂತರ ಕಾಮಜ್ವರದಿಂದ ಮುಕ್ತಳಾದಳು. ಅನಂತರ ಜ್ಞಾನೋದಯವಾಗಿ ಬ್ರಹ್ಮನಿಗೆ ತಾನು ಶಾಪಕೊಟ್ಟದ್ದಕ್ಕಾಗಿ ಬಹಳ ಅತ್ತಳು.

೪೩. ಪ್ರಪಂಚಸೃಷ್ಟಿಕರ್ತನೂ, ಜನಪ್ರಿಯನೂ ಆದ ಬ್ರಹ್ಮನನ್ನು ನಾನು ಶಪಿಸಿದೆನಲ್ಲ ಇದೇನನ್ಯಾಯ ? ಅಂದುಕೊಂಡಳು. ದೇವವೇಶ್ಯೆಯು ಹೊರಟು ಹೋದ ನಂತರ ಇತ್ತ ಮುನಿಗಳೆಲ್ಲ ಬ್ರಹ್ಮನು ಶಾಪಗ್ರಸ್ತನಾದುದಕ್ಕೆ ವ್ಯಥೆಗೊಂಡರು.

ಸ್ವಯಂ ವಿಧಾತಾ ಜಗತಾಂ ಚಕಂಪೇ ನತಕಂಧರಃ ।
ಉಪಾಯಂ ಮುನಯಸ್ತಸ್ಮೈ ದದುಃ ಕಲ್ಯಾಣಕಾರಿಣಃ ॥ ೪೪ ॥

ಶರಣಂ ವ್ರಜ ವೈಕುಂಠಮಿತ್ಯುಕ್ತ್ವಾ ತೇ ಗೃಹಾನ್ಯಯುಃ ।
ಬ್ರಹ್ಮಾ ಜಗಾಮ ಶರಣಂ ಮಮ ಮೂರ್ತ್ಯಂತರಂ ಪರಂ ॥ ೪೫ ॥

ಶಾಂತಂ ತಂ ಕಮಲಾಕಾಂತಂ ಶ್ಯಾಮಂ ನಾರಾಯಣಾಭಿಧಂ ।
ಗತ್ವಾ ವಿಷಣ್ಣವದನಃ ಪ್ರಣಮ್ಯ ಚ ಚತುರ್ಭುಜಂ ॥ ೪೬ ॥

ತತ್ರೋವಾಸ ಜಗತ್ಕರ್ತಾ ನಾತಿದೂರೇ ಸಮೀಪತಃ ।
ರಹಸ್ಯಂ ಕಥಯಾಮಾಸ ಶುಷ್ಕಕಂಠೋಷ್ಠತಾಲುಕಃ ॥ ೪೭ ॥

ದೀನಬಂಧುಂ ದಯಾಸಿಂಧುಂ ವಿಪತ್ತಾರಣಕಾರಣಂ ॥
ಶ್ರುತ್ವಾ ರಹಸ್ಯಂ ತತ್ಸರ್ವಂ ಪ್ರಹಸ್ಯೋವಾಚ ತಂ ವಿಭುಃ ।
ಸತ್ಯಂ ಸಾರಂ ಹಿತಂ ವಾಕ್ಯಂ ಜಗತಾಂ ಚ ಸುಖಾವಹಂ ॥ ೪೮ ॥

---

೪೪. ಜಗದ್ವಿಧಾಯಕನಾದ ಬ್ರಹ್ಮನೂ ಕೂಡ ಶಾಪಕ್ಕೆ ನಡುಗಿ ತಲೆ ಬಾಗಿದನು. ಆಗ ಅವನಿಗೆ ಮಂಗಳವನ್ನು ಬಯಸುತ್ತಿದ್ದ ಮುನಿಗಳೆಲ್ಲರೂ ಉಪಾಯವನ್ನು ಹೇಳಿಕೊಟ್ಟರು.

೪೫. "ವೈಕುಂಠವಾಸಿಯಾದ ಶ್ರೀಮನ್ನಾರಾಯಣನನ್ನು ಮರೆಹೋಗು" ಎಂದು ಹೇಳಿ ಮುನಿಗಳೆಲ್ಲರೂ ಮನೆಗೆ ಹೋದರು. ಆಗ ಬ್ರಹ್ಮನು ನನ್ನ ಮತ್ತೊಂದು ಮೂರ್ತಿಯಾದ ಶ್ರೀಮನ್ನಾರಾಯಣನನ್ನು ಮರೆಹೊಕ್ಕನು.

೪೬. ಶಾಂತಾಕಾರನೂ, ಕಮಲಾಕಾಂತನೂ, ಶ್ಯಾಮಸುಂದರನೂ, ಚತುರ್ಭುಜನೂ ಆದ ಶ್ರೀಮನ್ನಾರಾಯಣನನ್ನು ಸಮೀಪಿಸಿ, ವಿಷಣ್ಣವದನನಾಗಿ ನಮಸ್ಕರಿಸಿದನು.

೪೭. ಜಗತ್ಕರ್ತನಾದ ಬ್ರಹ್ಮನು ಶ್ರೀಮನ್ನಾರಾಯಣನ ಸಮೀಪದಲ್ಲಿಯೇ ಕುಳಿತು, ಒಣಗಿದ ಗಂಟಲು ಮತ್ತು ತುಟಿಗಳಿಂದ ಮೆಲುನುಡಿಯಲ್ಲಿ ರಹಸ್ಯವಾಗಿ ಹೇಳಿದನು.

೪೮. ದೀನಬಂಧುವೂ, ದಯಾಸಾಗರನೂ, ವಿಪತ್ಪರಿಹಾರಕನೂ ಆದ ಆ ಪ್ರಭುವು ಬ್ರಹ್ಮನ ರಹಸ್ಯನುಡಿಯನ್ನು ಕೇಳಿ ನಸುನಕ್ಕು ಸತ್ಯವೂ, ಸಾರಭೂತವೂ, ಹಿತವೂ, ಜಗತ್ತಿಗೆಲ್ಲ ಮಂಗಳಕರವೂ ಆದ ವಾಕ್ಯವನ್ನು ಹೇಳಿದನು.

॥ ಶ್ರೀ ನಾರಾಯಣ ಉವಾಚ ॥

ಸ್ವಯಂ ತ್ವಂ ವೇದವಿದಸಿ ವಿದುಷಾಂ ಚ ಗುರೋರ್ಗುರುಃ ॥ ೪೯ ॥

ತ್ವಯಾ ಕೃತಂ ಚ ಯತ್ಕರ್ಮ ಇಹ ಕೇನ ನ ತತ್ಕೃತಂ ।
ಸ್ತ್ರೀ ಜಾತಿಃ ಪ್ರಕೃತೇರಂಶಾ ಜಗತಾಂ ಬೀಜರೂಪಿಣೀ ॥ ೫೦ ॥

ಸ್ತ್ರೀಣಾಂ ವಿಡಂಬನೇನೈವ ಪ್ರಕೃತೇಶ್ಚ ವಿಡಂಬನಂ ।
ನ ತದ್ಭಾರತವರ್ಷಂ ಚ ಪುಣ್ಯಕ್ಷೇತ್ರಮನುತ್ತಮಂ ॥ ೫೧ ॥

ಕ್ರೀಡಾಕ್ಷೇತ್ರೇ ಬ್ರಹ್ಮಲೋಕೇ ಕಸ್ತ್ವವೇಂದ್ರಿಯನಿಗ್ರಹಃ ।
ಯದಿ ತದ್ಭಾರತೇ ದೈವಾತ್ ಕಾಮಿನೀ ಸಮುಪಸ್ಥಿತಾ ॥ ೫೨ ॥

ಸ್ವಯಂ ರಹಸಿ ಕಾಮಾರ್ತಾ ನ ಸಾ ತ್ಯಾಜ್ಯಾ ಜಿತೇಂದ್ರಿಯೈಃ ।
ತ್ಯಕ್ತ್ವಾ ಪರತ್ರ ನರಕಂ ವ್ರಜೇದತಿವಿಡಂಬಿತಃ ॥ ೫೩ ॥

---

೪೯. ಶ್ರೀನಾರಾಯಣ:—ಎಲೈ ಬ್ರಹ್ಮನೇ ನೀನು ಸ್ವತಃ ವೇದವೇತ್ತೃವಾಗಿರುವುದಲ್ಲದೆ ವಿದ್ವಾಂಸರಿಗೂ, ಗುರುಗಳಿಗೂ ಗುರುವೆನಿಸಿದ್ದೀಯೆ.

೫೦. ನೀನು ಮಾಡುವ ಕರ್ಮವನ್ನು ಈ ಲೋಕದಲ್ಲಿ ಅನುಸರಿಸದಿರುವವರಾರು ? ಸ್ತ್ರೀಜಾತಿಯು ಪ್ರಕೃತಿಯ ಅಂಶದಿಂದ ಸಂಭವಿಸಿ ಜಗತ್ತಿಗೇ ಬೀಜಸ್ವರೂಪವಾಗಿದೆ.

೫೧. ಸ್ತ್ರೀಯರನ್ನು ತಿರಸ್ಕರಿಸಿದರೆ ಪ್ರಕೃತಿದೇವಿಯನ್ನೇ ತಿರಸ್ಕರಿಸಿದಂತಾಗುವುದು. ನೀನು ಈಗ ನೆಲಸಿರುವುದು ಪುಣ್ಯಕ್ಷೇತ್ರವೆನಿಸಿಕೊಂಡ ಭಾರತವರ್ಷದಲ್ಲಲ್ಲ.

೫೨-೫೩. ಕ್ರೀಡಾಕ್ಷೇತ್ರವೆನಿಸಿಕೊಂಡ ಈ ಬ್ರಹ್ಮಲೋಕದಲ್ಲಿ ನಿನಗೆ ಇಂದ್ರಿಯ ನಿಗ್ರಹವೆಂದರೇನು ? ಒಂದುವೇಳೆ ಭರತವರ್ಷದಲ್ಲೇ ದೈವಯೋಗದಿಂದ ತನ್ನನ್ನು ಕಾಮಿಸಿ ಬಂದ ಕಾಮಿನಿಯನ್ನು ಜಿತೇಂದ್ರಿಯರೂ ತ್ಯಜಿಸಬಾರದೆಂದಿರುವಾಗ ಇತರ ಕ್ಷೇತ್ರದಲ್ಲಿ ತ್ಯಾಗಮಾಡಿದರೆ ನರಕಕ್ಕೆ ಹೋಗುವರೆಂಬುದರಲ್ಲಿ ಸಂಶಯವಿಲ್ಲ.

ಭವೇದೇವ ಹಿ ದುಃಖಾರ್ತಾ ಶಾಪಂ ದದ್ಯಾಚ್ಚ ತಂ ಧ್ರುವಂ ।
ವಿಹಾಯ ಸ್ವಕಲತ್ರಂ ಚ ಯೋ ಗೃಹ್ಣಾತಿ ಪರಸ್ತ್ರಿಯಂ ॥ ೫೪ ॥

ಲೋಭಾತ್ಕಾಮಸುಖಾದ್ವಾಪಿ ಸೋಽಧಮೋ ನಾತ್ರ ಸಂಶಯಃ ।
ಪಾತಯಿತ್ವಾ ಸ ಚ ಪತೇದ್ಧಶಪೂರ್ವಾನ್ ದಶಾಪರಾನ್ ॥ ೫೫ ॥

ತ್ಯಕ್ತ್ವಾ ಸ್ವಸ್ವಾಮಿನಂ ಯಾ ಚ ಪರಂ ಗಚ್ಛತಿ ಕಾಮತಃ ।
ನ ಪುಮಾನ್ನ ಚ ವೇಶ್ಯಾ ಚ ಕುಲಸ್ತ್ರೀ ತತ್ರ ದುಷ್ಯತಿ ॥ ೫೬ ॥

ಉಪಾಯೇನ ಚ ಯಾ ಸಾಧ್ಯಂ ಕರೋತಿ ಪರಪೂರುಷಂ ।
ತಿಷ್ಠತ್ಯೇವಾಂಧಕೂಪೇ ಸಾ ಯಾವಚ್ಚಂದ್ರದಿವಾಕರೌ ॥ ೫೭ ॥

ಸ್ವರ್ವೇಶ್ಯಾ ಚ ದಿವಂ ಯಾತಿ ಸತತಂ ಕುಲಧರ್ಮತಃ ।
ಧ್ರುವಂ ಭವೇತ್ ಸೋಽಪರಾಧೀ ತಸ್ಯಾ ಅಪ್ಯವಮಾನತಃ ॥ ೫೮ ॥

೫೪-೫೫. ಅಂಥ ತ್ಯಕ್ತಳಾದ ಸ್ತ್ರೀಯು ದುಃಖಾರ್ತಳಾಗಿ ಶಾಪಕೊಡುವುದರಲ್ಲಿ ಸಂಶಯವಿಲ್ಲ. ಯಾವನಾದರೂ ಪುರುಷನು ಅತಿಲೋಭದಿಂದಾಗಲೀ, ಕಾಮಪೀಡೆಯಿಂದಾಗಲೀ ತನ್ನ ಪತ್ನಿಯನ್ನು ತ್ಯಜಿಸಿ, ಪರಸ್ತ್ರೀಗಮನಮಾಡಿದರೆ ಅವನು ಅಧಮನೆನಿಸುವುದರಲ್ಲಿ ಸಂಶಯವಿಲ್ಲ. ಅವನು ತನ್ನ ವಂಶದ ಹಿಂದಿನ ಮತ್ತು ಮುಂದಿನ ಹತ್ತು ಹತ್ತು ಪುರುಷರನ್ನು ನರಕದಲ್ಲಿ ನೂಕಿ ತಾನೂ ಬೀಳುವನು.

೫೬. ತನ್ನ ಪತಿಯನ್ನು ಬಿಟ್ಟು ಪರಪುರುಷನನ್ನು ಕಾಮಿಸಿ ಉಪಭೋಗಕ್ಕೆ ಕೊಡುವ ಕುಲಸ್ತ್ರೀಯು ದೂಷಿತಳಾಗುವಳೇ ಹೊರತು ಅವಳ ಸಹವಾಸ ಮಾಡಿದ ಪುರುಷನಾಗಲೀ, ಪರಪುರುಷರೊಡಗೂಡುವ ವೇಶ್ಯೆಯಾಗಲೀ ದೂಷಿತರಾಗುವುದಿಲ್ಲ.

೫೭. ಯಾವ ಕುಲಸ್ತ್ರೀಯು ಉಪಾಯದಿಂದ ಪರಪುರುಷನನ್ನು ತನ್ನ ವಶಪಡಿಸಿಕೊಳ್ಳುವಳೋ, ಅವಳು ಚಂದ್ರಸೂರ್ಯರಿರುವವರೆಗೆ ಅಂಧಕೂಪದಲ್ಲಿ ನರಳುವಳು.

೫೮. ಸ್ವರ್ವೇಶ್ಯೆಯಾದರೋ ಪರಪುರುಷನನ್ನು ಸೇರುವುದು ತನ್ನ ಕುಲ ಧರ್ಮವಾದುದರಿಂದ ಸ್ವರ್ಗವನ್ನೇ ಸೇರುವಳು. ಆದರೆ ಅವಳಿಗೆ ಅವಮಾನಮಾಡುವ ಪುರುಷನೇ ನಿಜವಾಗಿಯೂ ಅಪರಾಧಿಯಾಗುತ್ತಾನೆ.

ತದುಪಾಯಂ ಕರಿಷ್ಯಾಮಿ ಶಪ್ತೋ ಯತ್ರ ವಿಶುದ್ಧ್ಯತಿ ।
ಕ್ಷಣಂ ತಿಷ್ಠ ಜಗನ್ನಾಥ ಪಾಪಿನಶ್ಚ ಭವಾರ್ಣವೇ ॥ ೫೯ ॥

ಏತಸ್ಮಿನ್ನಂತರೇ ಕಶ್ಚಿದಾಜಗಾಮ ಹರೇಃ ಪುರಃ ।
ದ್ವಾರಪಾಲಃ ಶೀಘ್ರಗಾಮೀತ್ಯುವಾಚ ನತಕಂಧರಃ ॥ ೬೦ ॥

॥ ದ್ವಾರಪಾಲ ಉವಾಚ ॥

ಅನ್ಯಬ್ರಹ್ಮಾಂಡಾಧಿಪತಿರ್ಬ್ರಹ್ಮಾ ದಶಮುಖಃ ಸ್ವಯಂ ।
ದ್ವಾರೇ ತಿಷ್ಠನ್ ಮಹಾಭಕ್ತಃ ತ್ವಾಂ ದ್ರಷ್ಟುಂ ಸ್ವಯಮಾಗತಃ ॥ ೬೧ ॥

ದ್ವಾರಪಾಲವಚಃ ಶ್ರುತ್ವಾ ಸಚ್ಚೈವಾನುಮತಿಂ ದದೌ ।
ದ್ವಾರಪಾಲಾಜ್ಞಯಾ ಬ್ರಹ್ಮಾ ತುಷ್ಟಾವಾಗತ್ಯ ಭಕ್ತಿತಃ ॥ ೬೨ ॥

ಸ್ತೋತ್ರೈರತಿವಿಚಿತ್ರೈಶ್ಚ ಚತುರ್ವಕ್ತ್ರಾಶ್ರುತೈರಹೋ ।
ಸ್ತುತ್ವೋವಾಸಾಜ್ಞಯಾ ವಿಷ್ಣೋಃ ಕೃತ್ವಾ ಪಶ್ಚಾಚ್ಚತುರ್ಮುಖಂ ॥ ೬೩ ॥

೫೯–೬೦. ಆದುದರಿಂದ ಎಲೈ ಜಗದೊಡೆಯನೇ, ಕ್ಷಣಕಾಲ ಸುಮ್ಮನಿರು. ಸಂಸಾರಾರ್ಣವದಲ್ಲಿ ಶಾಪಗ್ರಸ್ತರಾದ ಪಾಪಿಗಳು ಪರಿಶುದ್ಧರಾಗುವ ಉಪಾಯವನ್ನು ಹೇಳುವೆನು ಕೇಳು. ಹೀಗೆನ್ನುವ ಸಮಯಕ್ಕೆ ಸರಿಯಾಗಿ ವೈಕುಂಠದ ದ್ವಾರಪಾಲಕ ನೊಬ್ಬನು ಬೇಗ ಬಂದು ಶ್ರೀಹರಿಯ ಮುಂದೆ ತಲೆಬಾಗಿ ನಿಂತು ಇಂತೆಂದನು.

೬೧. ದ್ವಾರಪಾಲಕ :—ಮತ್ತೊಂದು ಬ್ರಹ್ಮಾಂಡಕ್ಕೆ ಅಧಿಪತಿಯೂ ಅತ್ಯಂತ ಭಕ್ತನೂ ಆದ ದಶಮುಖಬ್ರಹ್ಮನು ನಿನ್ನನ್ನು ನೋಡಲು ಬಯಸಿ ಬಾಗಿಲಿಗೆ ಬಂದಿದ್ದಾನೆ.

೬೨. ದ್ವಾರಪಾಲನ ಮಾತನ್ನು ಕೇಳಿ ನಾರಾಯಣನು ಒಳಕ್ಕೆ ಬರಲು ಅನುಮತಿಕೊಟ್ಟನು. ದ್ವಾರರಕ್ಷಕನ ಮಾತಿನಂತೆ ದಶಮುಖಬ್ರಹ್ಮನು ಒಳಕ್ಕೆ ಬಂದು ಭಕ್ತಿಯಿಂದ ಸ್ತುತಿಸಿದನು.

೬೩. ಚತುರ್ಮುಖಬ್ರಹ್ಮನ ಬಾಯಿನಿಂದ ಎಂದೂ ಬರದಿರುವ ಅತಿ ವಿಚಿತ್ರ ವಾದ ಸ್ತೋತ್ರಗಳಿಂದ ಸ್ತುತಿಸಿ, ವಿಷ್ಣುವಿನ ಆಜ್ಞೆಯಂತೆ, ಚತುರ್ಮುಖನನ್ನು ಹಿಂದೆಮಾಡಿ ಕುಳಿತನು.

ನಾರಾಯಣೋ ದ್ವಾರಪಾಲಾನಿತ್ಯುವಾಚ ಚತುರ್ಭುಜಾನ್ ।
ಆಗಂತುಕಂ ಜನಮಪಿ ಪ್ರವೇಶಯತ ಸಾದರಂ || ೬೪ ||

ಏತಸ್ಮಿನ್ನಂತರೇ ತತ್ರ ವೃಂದಾವನವಿನೋದಿನಿ ।
ಅಜಗಾಮಾತಿಪ್ರಣತೋ ಬ್ರಹ್ಮಾ ಶತಮುಖಃ ಸ್ವಯಂ || ೬೫ ||

ದಿವ್ಯೈಃ ಸ್ತೋತ್ರೈಶ್ಚ ತುಷ್ಟಾವ ನಿಗೂಢಮತಿಸುಂದರೈಃ ।
ಸ್ತುತ್ವೋವಾಸ ವರೈಃ ಸ್ತೋತ್ರೈಃ ಸರ್ವೇಷಾಮಶ್ರುತೈರಹೋ || ೬೬ ||

ತದನಂತರಯೋರಗ್ರೇ ಭಕ್ತ್ಯಾ ಶತಮುಖಃ ಸ್ವಯಂ ।
ಜಗದ್ವಿಧೌ ಸಭಾಯಾಂ ಚ ತತ್ರ ತಿಷ್ಠತಿ ತತ್ ಕ್ಷಣೇ || ೬೭ ||

ಆಜಗಾಮಾನ್ಯಬ್ರಹ್ಮಾಂಡಾಧಿಪೋ ಬ್ರಹ್ಮಾ ಹರೇಃ ಪುರಃ ।
ಸಹಸ್ರವದನಃ ಶ್ರೀಮಾನ್ ಭಕ್ತ್ಯಾ ನಮ್ರಾತ್ಮಕಂಧರಃ || ೬೮ ||

---

೬೪. ಅನಂತರ ಶ್ರೀಮನ್ನಾರಾಯಣನು 'ಯಾರಾದರೂ ಆಗಂತುಕರಿದ್ದರೆ ಆದರದಿಂದ ಪ್ರವೇಶಮಾಡಿಸಿ' ಎಂದು ಚತುರ್ಭುಜರಾದ ದ್ವಾರಪಾಲಕರಿಗೆ ಹೇಳಿದನು

೬೫. ವೃಂದಾವನ ವಿನೋದಿನಿಯಾದ ಎಲೌ ರಾಧೆಯೇ, ಈ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಶತಮುಖ ಬ್ರಹ್ಮನು ಬಂದು ವಿನಯದಿಂದ ತಲೆಬಾಗಿದನು.

೬೬ ಯಾರೂ ಕೇಳದಿರುವ, ಅತಿಮನೋಹರವಾದ ಸ್ತೋತ್ರಗಳಿಂದ ಶ್ರೀಮನ್ನಾರಾಯಣನನ್ನು ಸ್ತುತಿಸಿ ಅವನ ಮುಂದೆ ಮಂಡಿಸಿದನು

೬೭. ಶತಮುಖಬ್ರಹ್ಮನು ಆ ಇಬ್ಬರು ಬ್ರಹ್ಮರ ಮುಂದೆ ಕುಳಿತುಕೊಂಡನು ಜಗದ್ವಿಧಿಯೂ ಕ್ಷಣಕಾಲ ಸಭೆಯಲ್ಲಿ ಸುಮ್ಮನೆ ಕುಳಿತಿದ್ದನು.

೬೮. ಆಗ ಮತ್ತೊಂದು ಬ್ರಹ್ಮಾಂಡಕ್ಕೆ ಅಧಿಪತಿಯಾದ ಸಹಸ್ರಮುಖ ಬ್ರಹ್ಮನು ಅಲ್ಲಿಗೆ ಬಂದು ಭಕ್ತಿಯಿಂದ ತಲೆಬಾಗಿ ವಂದಿಸಿದನು.

ಸ್ತುತಿಭ್ಯೋ ವಾಸ ವರ್ಯೈಃ ಸ್ತೋತ್ರೈಃ ಸರ್ವೇಷಾಮಶ್ರುತೈರಹೋ ।
ತಂ ಚ ಪಪ್ರಚ್ಛ ಸರ್ವೇಷಾಂ ಬ್ರಹ್ಮಾಂಡಾನಾಂ ಚ ಬ್ರಹ್ಮಣಾಂ ॥ ೬೯ ॥

ವಾರ್ತಾ ವಿಷಯಿಣಾಂ ಚೈವ ಸುರಾಣಾಂ ಚ ಕ್ರಮೇಣ ಚ ।
ಚತುರ್ಮುಖಸ್ಯ ತಾನ್ ದೃಷ್ಟ್ವಾ ದರ್ಪಭಂಗೋ ಬಭೂವ ಹ ॥ ೭೦ ॥

ಆತ್ಮಾನಂ ವಿಷ್ಣುಸದೃಶಂ ಮನ್ಯಮಾನಸ್ಯ ದರ್ಪತಃ ।
ಅನ್ಯಾನ್ನದರ್ಶಯಾಮಾಸ ಬ್ರಹ್ಮಾಂಡಸ್ಥಾನ್ವಿಧೀನ್ ಹರಿಃ ॥ ೭೧ ॥

ದೃಷ್ಟ್ವಾ ಚ ಕೃಪಯಾ ತತ್ರ ಮೃತತುಲ್ಯಂ ಚತುರ್ಮುಖಂ ।
ಯಾವಂತಿ ಗಾತ್ರಲೋಮಾನಿ ಸಂತಿ ನಾರಾಯಣಸ್ಯ ಮೇ ॥ ೭೨ ॥

ತತ್ಪ್ರಮಾಣಾಶ್ಚ ಬ್ರಹ್ಮಾಂಡಾ ಬ್ರಹ್ಮಾಣಃ ಸಂತಿ ಸಂತತಂ ।
ನಾರಾಯಣಂ ಪ್ರಣಮ್ಯಾಶು ಜಗ್ಮುಸ್ತೇ ಸ್ವಾಲಯಂ ಪ್ರತಿ ॥ ೭೩ ॥

೬೯–೭೦. ಯಾರೂ ಕೇಳದಿರುವ ಅಪೂರ್ವವಾದ ಶ್ಲೋಕಗಳಿಂದ ಶ್ರೀಮನ್ನಾರಾಯಣನನ್ನು ಸ್ತುತಿಸಿ ಕುಳಿತಿರುವ, ಎಲ್ಲಾ ಬ್ರಹ್ಮಾಂಡಗಳಿಗೂ, ಸಕಲಬ್ರಹ್ಮರಿಗೂ ಒಡೆಯನಾದ ಆ ಸಹಸ್ರಮುಖಬ್ರಹ್ಮನನ್ನು ಕುರಿತು ಕ್ರಮವಾಗಿ ಸಂಸಾರಿಗಳ ಮತ್ತು ದೇವತೆಗಳ ಯೋಗಕ್ಷೇಮವನ್ನು ನಾರಾಯಣನು ಕೇಳಿದನು. ಅವರೆಲ್ಲರನ್ನೂ ನೋಡಿ ಚತುರ್ಮುಖನ ದರ್ಪವು ಭಂಗವಾಯಿತು.

೭೧. ದರ್ಪದಿಂದ ತಾನೂ ವಿಷ್ಣುವಿಗೆ ಸಮಾನನೆಂದು ತಿಳಿದಿದ್ದ ಆ ಚತುರ್ಮುಖ ಬ್ರಹ್ಮನಿಗೆ ಇತರ ಬ್ರಹ್ಮಾಂಡಗಳಲ್ಲಿದ್ದ ಬ್ರಹ್ಮರನ್ನು ಶ್ರೀಹರಿಯು ತೋರಿಸಲಿಲ್ಲ

೭೨–೭೩. ಆಗ ಪೆಚ್ಚುಮೋರೆ ಮಾಡಿಕೊಂಡಿರುವ ಚತುರ್ಮುಖನನ್ನು ನೋಡಿ, ನಾರಾಯಣನ ರೋಮಕೂಪಗಳಷ್ಟು ಅಸಂಖ್ಯಾತವಾದ ಬ್ರಹ್ಮಾಂಡದ ಬ್ರಹ್ಮರುಗಳೆಲ್ಲ ದಯಾರ್ದ್ರರಾಗಿ, ನಾರಾಯಣನಿಗೆ ವಂದಿಸಿ ತಮ್ಮ ತಮ್ಮ ಮಂದಿರಕ್ಕೆ ತೆರಳಿದರು.

ಸ ಮೋನೇ ವಿಧಿಂಆತ್ಮಾನಂ ಅತ್ಯಲ್ಪ ವಿಷಯಾಧಿಪಂ ।
ಪಪ್ರಚ್ಛ ಪ್ರಣತಂ ವಿಷ್ಣುಃ ಲಜ್ಜಾನಮ್ರ ಚತುರ್ಮುಖಂ ॥ ೭೪ ॥

ವದ ತತ್ಕಿಮಿದಂ ದೃಷ್ಟಂ ಸ್ವಪ್ನವದ್ಭವತಾಧುನಾ ।
ನಾರಾಯಣ ವಚಃ ಶ್ರುತ್ವಾ ವಿಧಿರಿತ್ಯುಕ್ತವಾಂಸ್ತದಾ ॥ ೭೫ ॥

ಭೂತಂ ಭವ್ಯ ಭವಿಷ್ಯಂ ಚ ತವ ಮಾಯಾಸಮುದ್ಭವಂ ।
ಇತ್ಯೇವಮುಕ್ತ್ವಾ ಸ ವಿಧಿಃ ತಸ್ಥೌ ಸಂಸದಿ ಲಜ್ಜಯಾ ।
ಸರ್ವಾಂತರ್ಯಾಮಿ ಭಗವಾನ್ ತಸ್ಯೋಪಾಯಂ ವಿನಿರ್ಮಮೇ ॥ ೭೬ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಮೋಹಿನೀಶಾಪ ಬ್ರಹ್ಮದರ್ಪ
ಭಂಗೋನಾಮ ತ್ರಯಸ್ತ್ರಿಂಶೋಧ್ಯಾಯಃ

---

೭೪. ಆಗ ಚತುರ್ಮುಖಬ್ರಹ್ಮನು ತಾನು ಬಹಳ ಚಿಕ್ಕದಾದ ಬ್ರಹ್ಮಾಂಡಕ್ಕೆ ಅಧಿಪತಿಯೆಂಬುದನ್ನು ಅರಿತನು. ನಾಚಿಕೆಯಿಂದ ತಲೆಬಾಗಿ ನಿಂತಿರುವ ಚತುರ್ಮುಖನನ್ನು ವಿಷ್ಣುವು ಈ ರೀತಿ ಕೇಳಿದನು.

೭೫. ಎಲೈ ಬ್ರಹ್ಮನೇ, ನೀನು ಈಗ ನೋಡಿದ್ದು ಸ್ವಪ್ನವೋ ಏನು? ಹೇಳು. ಶ್ರೀಮನ್ನಾರಾಯಣನ ಮಾತುಗಳನ್ನು ಕೇಳಿ ಬ್ರಹ್ಮನು ಈ ರೀತಿ ಹೇಳಿದನು.

೭೬. ಎಲೈ ವಿಷ್ಣುವೇ, ಭೂತಭವಿಷ್ಯದ್ವರ್ತಮಾನಗಳೆಲ್ಲವೂ, ನಿನ್ನ ಮಾಯೆಗೆ ಅಧೀನವಾದವು. ಎಂದು ಹೇಳಿ ಬ್ರಹ್ಮನು ಲಜ್ಜೆಯಿಂದ ನಿಂತುಕೊಂಡನು. ಆಗ ಸರ್ವಾಂತರ್ಯಾಮಿಯಾದ ಶ್ರೀಮನ್ನಾರಾಯಣನು ಅವನ ಶಾಪವಿಮೋಚನೆಗೆ ಉಪಾಯವನ್ನು ಉಪದೇಶಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಮೋಹಿನೀ ಶಾಪ ಮತ್ತು ಬ್ರಹ್ಮನ ದರ್ಪಭಂಗವೆಂಬ
ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

ಮೂವತ್ತಮೂರನೆಯ ಅಧ್ಯಾಯದ ಸಾರಾಂಶ.

ಬ್ರಹ್ಮನು ಶ್ರೀಕೃಷ್ಣನು ಅನುಗ್ರಹಿಸಿದ್ದ ದಿವ್ಯಜ್ಞಾನದಿಂದ ತನ್ನ ಮನಸ್ಸನ್ನು ಬಿಗಿಹಿಡಿಯಲು ಪ್ರಯತ್ನಪಡುತ್ತಿದ್ದಂತೆಯೇ ಮೋಹಿನಿಯು ಇನ್ನೊಮ್ಮೆ ಅವನನ್ನು ಹಿಡಿವೆಳೆಯಲು ತೊಡಗಿದಳು. ಬ್ರಹ್ಮನು ಆಕೆಗೆ ಎಷ್ಟು ವಿವೇಕ ಹೇಳಿದರೂ ಬಿಡಲಿಲ್ಲ. ಆ ಸಮಯಕ್ಕೆ ಸರಿಯಾಗಿ ಅತ್ರಿ ಮುಂತಾದ ಅನೇಕ ಮುನಿಗಳು ಅಲ್ಲಿಗೆ ಬರಲು ಮೋಹಿನಿಯು ಬ್ರಹ್ಮನ ಸಮೀಪದಲ್ಲಿ ಸುಮ್ಮನೆ ಕುಳಿತಳು. ಅವಳು ಅಲ್ಲಿ ಕುಳಿತಿರಲು ಕಾರಣವೇನೆಂದು ಆ ಮುನಿಗಳು ಕೇಳಿದಾಗ ಬ್ರಹ್ಮನು ಅವಳು ನರ್ತನಮಾಡಿ ಆಯಾಸದಿಂದ ಕುಳಿತಿರುವುದಾಗಿ ಹೇಳಿದನು. ಇಂಗಿತಜ್ಞರಾದ ಆ ಮುನಿಗಳು ನಕ್ಕುಬಿಟ್ಟರು. ಆಗ ಕುಪಿತಳಾದ ಮೋಹಿನಿಯು ಬ್ರಹ್ಮನಿಗೆ ವಿಶ್ವದಲ್ಲೆಲ್ಲೂ ಪೂಜಾಗೌರವಗಳು ದೊರೆಯದಿರಲೆಂದು ಶಪಿಸಿ ಕಾಮಾಲಯಕ್ಕೆ ಹೊರಟುಹೋದಳು.

ಇತ್ತ ಬ್ರಹ್ಮನು ಚಿಂತಾಕ್ರಾಂತನಾಗಿ ಕುಳಿತುದನ್ನು ನೋಡಿ ಮುನಿಗಳೆಲ್ಲರೂ ಶ್ರೀಹರಿಯನ್ನು ಆಶ್ರಯಿಸುವಂತೆ ಬ್ರಹ್ಮನಿಗೆ ಹೇಳಿ ಹೊರಟುಹೋದರು. ಬ್ರಹ್ಮನು ಅವರ ಮಾತಿನಂತೆ ಶ್ರೀಮನ್ನಾರಾಯಣನನ್ನು ಮರೆಹೊಗಲು, ಶ್ರೀಮನ್ನಾರಾಯಣನು ಪ್ರತ್ಯಕ್ಷನಾಗಿ ಮೋಹಿನಿಯು ದೇವವೇಶ್ಯೆಯಾದುದರಿಂದ ಅವಳು ಬ್ರಹ್ಮನನ್ನು ವರಿಸಿ ಬಂದುದು ತಪ್ಪೇನಲ್ಲವೆಂದೂ, ಕ್ರೀಡಾಕ್ಷೇತ್ರವಾದ ಸ್ವರ್ಗದಲ್ಲಿ, ತಾನಾಗಿ ಒಲಿದುಬಂದ ಸ್ತ್ರೀಯನ್ನು ಪರಿತ್ಯಾಗಮಾಡಿದುದು ಬ್ರಹ್ಮನದೇ ತಪ್ಪೆಂದೂ ಹೇಳಿದನು. ಅಲ್ಲದೆ ಶತಮುಖ ಮತ್ತು ಸಹಸ್ರಮುಖ ಬ್ರಹ್ಮರನ್ನೆಲ್ಲ ಆ ಚತುರ್ಮುಖಬ್ರಹ್ಮನಿಗೆ ತೋರಿಸಿ ಅವನ ಗರ್ವಭಂಗಮಾಡಿದನು. ಅನಂತರ ಮೋಹಿನಿಯಿಂದ ಪ್ರಾಪ್ತವಾದ ಶಾಪದ ವಿಮೋಚನೆಯ ಮಾರ್ಗವನ್ನು ಬೋಧಿಸಲುಪಕ್ರಮಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಚತುಸ್ತ್ರಿಂಶೋಽಧ್ಯಾಯಃ ॥

॥ ಶ್ರೀಕೃಷ್ಣ ಉವಾಚ ॥

ಏತಸ್ಮಿನ್ನಂತರೇ ತತ್ರ ಶಂಕರಃ ಸಮುಪಸ್ಥಿತಃ ।
ಸಸ್ಮಿತೋ ವೃಷಭೇಂದ್ರಸ್ಥೋ ವಿಭೂತಿಭೂಷಣಃ ಸ್ವಯಂ ॥ ೧ ॥

ವ್ಯಾಘ್ರಚರ್ಮಾಂಬರಧರೋ'ನಾಗಯಜ್ಞೋಪವೀತಕಃ
ಸ್ವರ್ಣಾಕಾರಜಟಾಧಾರಮರ್ಧಚಂದ್ರಂ ಚ ಸಂದಧತ್ ॥ ೨ ॥

ಮೂವತ್ತನಾಲ್ಕನೆಯ ಅಧ್ಯಾಯ.

೧. ಶ್ರೀಕೃಷ್ಣ:—ಈ ಮಧ್ಯದಲ್ಲಿ ಅಲ್ಲಿಗೆ ವೃಷಭವಾಹನನೂ, ಭಸ್ಮಭೂಷಿತನೂ ಆದ ಶಂಕರನು ಸ್ಮಿತವದನನಾಗಿ ಬಂದನು

೨. ಆ ಶಂಕರನು ಹುಲಿದೊಗಲನ್ನು ಹೊದೆದು, ಸರ್ಪವನ್ನೇ ಯಜ್ಞೋಪವೀತವಾಗಿ ಮಾಡಿಕೊಂಡು ಸುವರ್ಣಸದೃಶವಾದ ಜಟೆಗಳಲ್ಲಿ ಅರ್ಧಚಂದ್ರನನ್ನು ಧರಿಸಿದ್ದನು.

ತ್ರಿಶೂಲಪಟ್ಟಿಶಕರೋ ಬಿಭ್ರತ್ಖಟ್ವಾಂಗಮುತ್ತಮಂ ।
ಸದ್ರತ್ನಸಾರರಚಿತಸ್ವರಯಂತ್ರಕರೋ ಮುದಾ ॥ ೩ ॥

ವಾಹನಾದವರುಹ್ಯಾಶು ಭಕ್ತಿನಮ್ರಾತ್ಮಕಂಧರಃ ।
ಪ್ರಣಮ್ಯ ಕಮಲಾಕಾಂತಂ ವಾಮೇ ಚೋವಾಸ ಭಕ್ತಿತಃ ॥ ೪ ॥

ಆಜಗ್ಮುರ್ಮುನಯಃ ಸರ್ವೇ ಸುರಾಃ ಶಕ್ರಾದಯಸ್ತಥಾ ।
ಆದಿತ್ಯಾ ವಸವೋ ರುದ್ರಾ ಮನವಃ ಸಿದ್ಧಚಾರಣಾಃ ॥ ೫ ॥

ಪುಲಕಾಂಚಿತಸರ್ವಾಂಗಾಃ ತುಷ್ಟುವುಃ ಪುರುಷೋತ್ತಮಂ ।
ಪ್ರಣಮ್ಯ ತಂ ಶಿವಂ ಸರ್ವೇ ಸುರಾಶ್ಚ ನಮ್ರಕಂಧರಾಃ ॥ ೬ ॥

ಏತಸ್ಮಿನ್ನಂತರೇ ತತ್ರ ಸಂಗೀತಂ ಶಂಕರೋ ಜಗೌ ।
ಕೃತ್ವಾತೀವ ಸುತಾಲಂ ಚ ಸ್ವರಯಂತ್ರಸಮನ್ವಿತಃ ॥ ೭ ॥

---

೩. ಕೈಗಳಲ್ಲಿ ಶ್ರೇಷ್ಠವಾದ ತ್ರಿಶೂಲ, ಪಟ್ಟಿಶ, ಖಟ್ವಾಂಗ ಮುಂತಾದ ಆಯುಧಗಳನ್ನೂ, ಶ್ರೇಷ್ಠರತ್ನಗಳಿಂದ ನಿರ್ಮಿತವಾದ ವೀಣೆ (ಸ್ವರಯಂತ್ರ) ಯೊಂದನ್ನೂ ಧರಿಸಿದ್ದನು.

೪. ಅವನು ವೃಷಭವಾಹನದಿಂದ ಜಾಗ್ರತೆ ಕೆಳಗಿಳಿದು, ಕಮಲಾಕಾಂತನಾದ ನಾರಾಯಣನಿಗೆ ಭಕ್ತಿಯಿಂದ ತಲೆಬಾಗಿ ವಂದಿಸಿ, ಅವನ ಎಡಭಾಗದಲ್ಲಿದ್ದ ಪೀಠದಲ್ಲಿ ಕುಳಿತುಕೊಂಡನು.

೫. ಅಷ್ಟುಹೊತ್ತಿಗೆ ಸಕಲಮುನಿಗಳೂ, ಇಂದ್ರಾದಿ ಸಮಸ್ತ ದೇವತೆಗಳೂ, ವಸುರುದ್ರಾದಿತ್ಯರೂ, ಚತುರ್ದಶಮನುಗಳೂ, ಸಿದ್ಧಚಾರಣಾದಿಗಳೂ ಅಲ್ಲಿಗೆ ಬಂದರು.

೬. ರೋಮಾಂಚಿತಶರೀರರಾಗಿ ಸರ್ವಮಂಗಳಸ್ವರೂಪನಾದ ನಾರಾಯಣನನ್ನು ಭಕ್ತಿಯಿಂದ ಸ್ತುತಿಸಿ, ತಲೆಬಾಗಿ ನಮಿಸಿದರು.

೭. ಆಗ ಶಂಕರನು ಸ್ವರಯಂತ್ರದ ಶ್ರುತಿಗೂ ಮತ್ತು ತಾಳಕ್ಕೂ ಅನುಗುಣವಾಗಿ ಮಧುರಗಾನವನ್ನು ಹಾಡಿದನು.

ಅವಯೋಶ್ಚ ಗುಣಾಖ್ಯಾನಂ ರಾಸಸಂಬಂಧಿ ಸುಂದರಂ ।
ಸಮಯೋಚಿತರಾಗೇಣ ಮನೋಮೋಹನಕಾರಿಣಾ ॥ ೮ ॥

ಯತ್ರ ಕಂಠ್ಯೈಕತಾನೇನ ಚೈಕಮಾನೇನ ಚಾರುಣಾ ।
ಪದಭೇದವಿರಾಮೇಣ ಗುರುಣಾ ಲಘುನಾ ಕ್ರಮಾತ್ ॥ ೯ ॥

ಗಮಕೇನಾತಿದೀರ್ಘೇಣ ಮದೇನ ಮಧುರೇಣ ಚ ।
ಭವೇಽತಿದುರ್ಲಭಂ ಸ್ವಸ್ಥಂ ಪ್ರೀತ್ಯಾ ಸ್ವೇನ ವಿನಿರ್ಮಿತಂ ॥ ೧೦ ॥

ಪುಲಕಾಂಚಿತಸರ್ವಾಂಗಃ ಸಾಶ್ರುನೇತ್ರಃ ಪುನಃಪುನಃ ।
ತದೇವ ಶ್ರುತಿಮಾತ್ರೇಣ ಮೂರ್ಛಾಂ ಪ್ರಾಪುರ್ವಿಚೇತನಾಃ ॥ ೧೧ ॥

ಬಭೂವು ರುದ್ರರೂಪಾಶ್ಚ ಮುನಯಃ ಪುರತಃ ಪ್ರಿಯೇ ।
ರುದ್ರರೂಪಾಃ ಸುರಾಃ ಸರ್ವೇ ವಿಧಾತ್ರೈಹರಿಪಾರ್ಷದಾಃ ॥ ೧೨ ॥

೮–೧೦. ಸಮಯೋಚಿತವೂ, ಮನೋಮೋಹಕವೂ ಆದ ರಾಗದಿಂದ ನಮ್ಮಿಬ್ಬರ ರಾಸಕ್ರೀಡಾಸಂಬಂಧವಾದ ಗುಣಗಳನ್ನು ಗಾನಮಾಡಿದನು. ಆ ಗಾನವು ಶ್ರುತಿ, ತಾಳ ಮತ್ತು ಲಯಬದ್ಧವಾಗಿದ್ದುದಲ್ಲದೆ ಉಚಿತವಾದ ಗುರುಲಘುಗಳ ವಿರಾಮದಿಂದಲೂ, ಅತಿದೀರ್ಘವಾದ ಗಮಕದಿಂದಲೂ, ಕೂಡಿ ಮಧುರವಾಗಿದ್ದಿತು. ಸ್ವಯಂ ನಿರ್ಮಿತವಾದ ಭೂಲೋಕದಲ್ಲಿ ಅತ್ಯಂತ ದುರ್ಲಭವಾದ ಆ ಗಾನವನ್ನು ಶಂಕರನು ಅನನ್ಯ ಭಕ್ತಿಪೂರ್ವಕವಾಗಿ ಹಾಡಿದನು.

೧೧. ರೋಮಾಂಚಿತಶರೀರನಾಗಿ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತ ಶಂಕರನು ಹಾಡುತ್ತಿರುವುದನ್ನು ಕೇಳಿದ ಮಾತ್ರದಿಂದಲೇ, ಸಭಿಕರೆಲ್ಲರೂ ಆನಂದಪರವಶತೆಯಿಂದ ಮೂರ್ಛಿತರಾದರು.

೧೨. ಎಲೌ ಪ್ರಿಯಳೇ, ಅಲ್ಲಿ ಕುಳಿತಿದ್ದ ಮುನಿಗಳೆಲ್ಲರೂ ಆನಂದಪರವಶತೆಯಿಂದ ರುದ್ರ (ದ್ರವ) ಸ್ವರೂಪರಾದರು. ಸಕಲ ದೇವತೆಗಳೂ, ಬ್ರಹ್ಮನೂ ಮತ್ತು ಶ್ರೀಹರಿಯ ಪಾರ್ಷದರೂ ಕೂಡ ರುದ್ರತಾದಾತ್ಮ್ಯವನ್ನು ತಾಳಿದರು.

ನಾರಾಯಣಶ್ಚ ಲಕ್ಷ್ಮೀಶ್ಚ ಗಾಯಕಶ್ಚ ಶಿವಃ ಸ್ವಯಂ ।
ಜಲಪೂರ್ಣಂ ಚ ವೈಕುಂಠಂ ದೃಷ್ಟ್ವಾ ತ್ರಸ್ತೋಽಹಮೀಶ್ವರಿ ॥ ೧೩ ॥

ಗತ್ವಾ ಮೂರ್ತೀರ್ವಿನಿರ್ಮಾಯ ಸರ್ವಾಶ್ಚ ತಾದೃಶೀರಿತಿ ।
ತತ್ತದ್ರೂಪಾಸ್ತದಸ್ತ್ರಾಶ್ಚ ತತ್ತದ್ವಾಹನಭೂಷಣಾಃ ॥ ೧೪ ॥

ತತ್ತದ್ಭಾವಾಸ್ತನ್ಮನಸ್ಕಾಃ ತತ್ತದ್ವಿಷಯಮಾನಸಾಃ ।
ಸ್ಥಾನಂ ನಿರ್ಮಾಯ ಪರಿತೋ ವೈಕುಂಠಸ್ಯ ಚತುರ್ದಿಶಿ ॥ ೧೫ ॥

ತದಧಿಷ್ಠಾತೃದೇವೀ ಚ ಆಜಗಾಮ ಸ್ವಮಾಲಯಂ ।
ಶರೀರಜಾ ಸುರಾಣಾಂ ಸಾ ಬಭೂವ ಸುರನಿಮ್ನಗಾ ॥ ೧೬ ॥

ಮುಕ್ತಿದಾ ಚ ಮುಮುಕ್ಷೂಣಾಂ ಭಕ್ತಾನಾಂ ಹರಿಭಕ್ತಿದಾ ।
ಕೋಟಿಜನ್ಮಾರ್ಜಿತಂ ಪಾಪಂ ವಿವಿಧಂ ಪಾಪಿನಾಮಹೋ ॥ ೧೭ ॥

---

೧೩. ನಾರಾಯಣನೂ, ಲಕ್ಷ್ಮಿಯೂ, ಗಾಯಕನಾದ ಶಿವನೂ ಕೂಡ ರುದ್ರಸ್ವರೂಪರಾದರು. ಎಲೌ ಜಗದೀಶ್ವರಿಯೇ, ವೈಕುಂಠವೆಲ್ಲವೂ ಹೀಗೆ ಜಲಪೂರ್ಣವಾದುದನ್ನು ನೋಡಿ ನಾನು ಭಯಗೊಂಡೆನು

೧೪. ಆಗ ನಾನು ಹೋಗಿ ಎಲ್ಲರನ್ನೂ ತಮ್ಮ ತಮ್ಮ ಹಿಂದಿನ ಸ್ವರೂಪವುಳ್ಳವರನ್ನಾಗಿಯೂ. ಆಯಾಯ ವಸ್ತ್ರಾಭರಣಭೂಷಿತರನ್ನಾಗಿಯೂ ಮಾಡಿದೆನು.

೧೫. ಅಷ್ಟೇ ಅಲ್ಲದೆ ಅದೇ ಸ್ವಭಾವ ಮತ್ತು ಅದೇ ಮನಸ್ಸುಳ್ಳವರನ್ನಾಗಿ ಮಾಡಿ, ವೈಕುಂಠದ ಸುತ್ತಲೂ ನಾಲ್ಕು ದಿಕ್ಕಿನಲ್ಲಿಯೂ, ಅವರಿಗೆ ಉಚಿತವಾದ ಸ್ಥಾನವನ್ನು ನಿರ್ಮಿಸಿದೆನು.

೧೬. ಆಯಾಯ ಸ್ಥಳದ ಅಧಿಷ್ಠಾತೃ ದೇವತೆಗಳನ್ನೂ ನಿರ್ಮಿಸಿ ನನ್ನ ಮಂದಿರಕ್ಕೆ ಬಂದೆನು. ದೇವತೆಗಳ ಶರೀರದಿಂದ ಉತ್ಪನ್ನವಾದ ಆ ಜಲವೇ ದೇವಗಂಗೆಯೆನಿಸಿತು.

೧೭. ಆ ಗಂಗೆಯು ಮುಕ್ತಿಯನ್ನು ಬಯಸುವವರಿಗೆ ಮುಕ್ತಿದಾಯಕಳೂ, ಭಕ್ತರಿಗೆ ಹರಿಭಕ್ತಿದಾಯಕಳೂ, ಆಗಿರುವುದಲ್ಲದೆ ಪಾಪಿಗಳ ಕೋಟಿಜನ್ಮಾರ್ಜಿತ ಪಾಪಗಳನ್ನೂ ಪರಿಹರಿಸುವಳು.

ಯಸ್ಯಾಶ್ಚ ಸ್ಪರ್ಶವಾಯೋಶ್ಚ ಸಂಪರ್ಕೇಣ ವಿನಶ್ಯತಿ ।
ಕಿಂ ವಾ ನ ಜಾನೇ ಸ್ನಾಣೇತಿ ಸ್ಪರ್ಶದರ್ಶನಯೋಃ ಫಲಂ ॥ ೧೮ ॥

ಕಿಮುತ ಸ್ನಾನಜನ್ಯಂ ಚ ಕಥಯಾಮಿ ನಿರೂಪಣಂ ।
ಸರ್ವತೀರ್ಥಾತ್ಪರಂ ಪೃಥ್ವ್ಯಾಂ ಪುಷ್ಕರಂ ಪರಿಕೀರ್ತಿತಂ ॥ ೧೯ ॥

ವೇದೋಕ್ತಂ ಚ ತದೇವಾಸ್ಯಾಃ ಕಲಾಂ ನಾರ್ಹತಿ ಷೋಡಶೀಂ ।
ಭಗೀರಥೇನ ಚಾನೀತಾ ತೇನ ಭಾಗೀರಥೀ ಸ್ಮೃತಾ ॥ ೨೦ ॥

ಗಾಮಾಗತಾ ಸ್ರೋತಸೋಽಂಶಾದ್ಗಂಗಾ ತೇನ ಪ್ರಕೀರ್ತಿತಾ ।
ಜಾನುದ್ವಾರಾ ಪುರಾ ದತ್ತಾ ಜಹ್ನುನಾಽಪೀಯ ಕೋಪತಃ ॥ ೨೧ ॥

ತಸ್ಯ ಕನ್ಯಾಸ್ವರೂಪಾ ಸಾ ಜಾಹ್ನವೀ ತೇನ ಕೀರ್ತಿತಾ ।
ಭೀಷ್ಮಃ ಸ್ವಯಂ ವಸುರ್ಜಾತಃ ತಸ್ಯಾಂಶಾತ್ತೇನ ಭೀಷ್ಮಸೂಃ ॥ ೨೨ ॥

---

೧೮. ಆ ಗಂಗೆಯನ್ನು ಸ್ಪರ್ಶಮಾಡಿದ ವಾಯುವಿನ ಸ್ಪರ್ಶಮಾತ್ರದಿಂದಲೇ ಪಾಪಗಳೆಲ್ಲ ಪರಿಹಾರವಾಗುವಾಗ ಸಾಕ್ಷಾತ್ ಆ ಗಂಗೆಯ ಸ್ಪರ್ಶ ಮತ್ತು ದರ್ಶನದ ಫಲವು ಎಷ್ಟೆಂಬುದನ್ನು ವರ್ಣಿಸಲಸದಳವು.

೧೯. ಹೀಗಿರುವಾಗ ಆ ಗಂಗೆಯಲ್ಲಿ ಸ್ನಾನಮಾಡಿದರೆ ಬರುವ ಫಲವನ್ನು ಎಷ್ಟೆಂದು ವರ್ಣಿಸಲಿ. ಪೃಥ್ವಿಯಲ್ಲಿ ಪುಷ್ಕರತೀರ್ಥವು ಸಕಲ ತೀರ್ಥಗಳಿಗಿಂತಲೂ ಶ್ರೇಷ್ಠವಾದುದೆಂದು ಹೆಸರುವಾಸಿಯಾಗಿದೆ.

೨೦. ವೇದೋಕ್ತವಾದ ಆ ತೀರ್ಥವೇ ಈ ಗಂಗೆಯ ಹದಿನಾರನೆಯ ಒಂದು ಭಾಗಕ್ಕೂ ಎಣೆಯಾಗುವುದಿಲ್ಲ. ಭಗೀರಥನು ದೇವಲೋಕದಿಂದ ತಂದುದರಿಂದ ಅದಕ್ಕೆ 'ಭಾಗೀರಥೀ' ಯೆಂಬ ಹೆಸರಾಯಿತು.

೨೧–೨೨. ಸಪ್ತವಿಧವಾದ ತನ್ನ ಪ್ರವಾಹದ ಒಂದು ಅಂಶದಿಂದ ಗಾಂ ಅಂದರೆ ಭೂಮಿಗೆ 'ಗಾ' ಎಂದರೆ ಇಳಿದುಬಂದುದರಿಂದ ಗಂಗಾ ಎನಿಸಿಕೊಂಡಳು. ಪೂರ್ವದಲ್ಲಿ ಜಹ್ನುಮಹರ್ಷಿಯು ಕೋಪದಿಂದ ಆ ಗಂಗೆಯನ್ನು ಕುಡಿದು. ಭಗೀರಥನ ಭಕ್ತಿಗೆ ಮೆಚ್ಚಿ ತನ್ನ ಜಾನು (ಮಂಡಿ) ಪ್ರದೇಶಗಳಿಂದ ಹೊರಕ್ಕೆ ಬಿಟ್ಟುದರಿಂದ, ಆ ಮಹರ್ಷಿಯ ಕನ್ಯಾಸ್ವರೂಪಳಾಗಿ ಜಾಹ್ನವಿಯೆನಿಸಿಕೊಂಡಳು. ಅಷ್ಟವಸುಗಳಲ್ಲಿ ಒಬ್ಬನಾದ ಭೀಷ್ಮನು ಆ ಗಂಗೆಯ ಅಂಶದಿಂದ ಹುಟ್ಟಿದುದರಿಂದ ಭೀಷ್ಮಸೂಃ ಎನ್ನುವರು.

ಧಾರಾಭಿಸ್ತಿಸೃಭಿಃ ಸ್ವರ್ಗಂ ಪೃಥಿವೀಮತಲಂ ತಥಾ ।
ಮಮಾಜ್ಞಯಾ ಚ ಗಚ್ಛಂತೀ ತೇನ ತ್ರಿಪಥಗಾಮಿನೀ ॥ ೨೩ ॥

ಪ್ರಧಾನಧಾರಯಾ ಸ್ವರ್ಗೇ ಸಾ ಚ ಮಂದಾಕಿನೀ ಸ್ಮೃತಾ ।
ಯೋಜನಾಯುತವಿಸ್ತೀರ್ಣಾ ಪ್ರಸ್ಥೇ ಚ ಯೋಜನಾ ಸ್ಮೃತಾ ॥ ೨೪ ॥

ಕ್ಷೀರತುಲ್ಯಜಲಾ ಶಶ್ವದತ್ಯುತ್ತುಂಗತರಂಗಿಣೀ ।
ವೈಕುಂಠಾದ್ಬ್ರಹ್ಮಲೋಕಂ ಚ ತತಃ ಸ್ವರ್ಗಂ ಸಮಾಗತಾ ॥ ೨೫ ॥

ಸ್ವರ್ಗಾದ್ಧಿಮಾದ್ರಿಮಾರ್ಗೇಣ ಪೃಥಿವೀಮಾಗತಾ ಮುದಾ ।
ಸಾಧಾರಾಽಲಕನಂದಾಖ್ಯಾ ಲವಣೋದೇನ ಮಿಶ್ರಿತಾ ॥ ೨೬ ॥

ಶುದ್ಧಸ್ಫಟಿಕಸಂಕಾಶಾ ಬಹುವೇಗವತೀ ಸತೀ ।
ಪಾಪಿನಾಂ ಪಾಪಶುಷ್ಕೇಂಧಂ ದಗ್ಧುಂ ಪಾವಕರೂಪಿಣೀ ॥ ೨೭ ॥

---

೨೩. ನನ್ನ ಆಜ್ಞೆಯಂತೆ ಮೂರು ಪ್ರವಾಹ ಹೊಂದಿ ಸ್ವರ್ಗ, ಮರ್ತ್ಯ ಮತ್ತು ಪಾತಾಳಲೋಕಗಳನ್ನು ಆಶ್ರಯಿಸಿದುದರಿಂದ ಆ ಗಂಗೆಯನ್ನು ತ್ರಿಪಥ ಗಾಮಿನಿಯೆನ್ನುವರು.

೨೪. ಹತ್ತುಸಾವಿರಯೋಜನ ದೀರ್ಘವಾಗಿಯೂ, ಒಂದುಯೋಜನ ಅಗಲ ವಾಗಿಯೂ, ಸ್ವರ್ಗದಲ್ಲಿ ಪ್ರಧಾನಧಾರೆಯು ಪ್ರವಹಿಸುತ್ತಿರುವುದರಿಂದ ಅದನ್ನು ಮಂದಾಕಿನೀಯೆನ್ನುವರು.

೨೫. ಹಾಲಿನಂತೆ ಸ್ವಚ್ಛವಾದ ಜಲವುಳ್ಳ ಆ ಶ್ರೇಷ್ಠವಾದ ನದಿಯು ವೈಕುಂಠ ದಿಂದ ಬ್ರಹ್ಮಲೋಕಕ್ಕೂ ಅಲ್ಲಿಂದ ಸ್ವರ್ಗಕ್ಕೂ ಹರಿದುಬಂದಿತು.

೨೬. ಅದರ ಒಂದು ಧಾರೆಯು ಸ್ವರ್ಗದಿಂದ ಹಿಮತ್ಪರ್ವತದ ಮಾರ್ಗವಾಗಿ ಸಂತೋಷದಿಂದ ಭೂಮಿಗೆ ಹರಿದುಬಂದಿತು ಲವಣಸಮುದ್ರದೊಡನೆ ಮಿಶ್ರಿತವಾದ ಆ ಧಾರೆಯನ್ನೇ ಅಲಕನಂದಾಯೆನ್ನುವರು.

೨೭. ಶುದ್ಧಸ್ಫಟಿಕದಂತೆ ಸ್ವಚ್ಛವಾದ ಆ ಗಂಗೆಯು ಬಹಳ ವೇಗದಿಂದ ಹರಿಯುತ್ತ ಪಾಪಿಗಳ ಪಾಪವೆಂಬ ಒಣಗಿದ ಕಟ್ಟಿಗೆಯನ್ನು ಸುಡಲು ಪಾವಕ ದಂತಿರುವಳು.

ಅಹೋ ಸಾಗರವಂಶೇಭ್ಯೋ ನಿರ್ವಾಣಮುಕ್ತಿದಾಯಿನೀ ।
ವೈಕುಂಠಗಾಮಿನೀ ಸಾ ಚ ಸೋಪಾನರೂಪಿಣೀ ವರಾ ॥ ೨೮ ॥

ಅತೋಽಪಿ ಮೃತ್ಯುಸಮಯೇ ಸತಾಂ ಪುಣ್ಯಸ್ವರೂಪಿಣಾಂ ।
ಆದೌ ಪಾದೌ ಚ ಸಂಕ್ಷಾಲ್ಯ ಮುಖೇ ತೋಯಂ ಪ್ರದೀಯತೇ ॥ ೨೯ ॥

ಗಂಗಾಸೋಪಾನಮಾರುಹ್ಯ ಸಂತೋ ಯಾಂತಿ ನಿರಾಮಯಂ ।
ಆಬ್ರಹ್ಮಲೋಕಂ ಸಂಲಂಘ್ಯ ರಥಸ್ಥಾಶ್ಚ ನಿರಾಪದಃ ॥ ೩೦ ॥

ದೈವಾತ್ಪ್ರಾಪ್ತೇನ ಮಗ್ನಂ ಚೇತ್ಕೃತಪಾತಕೈಃ ।
ಲೋಮಪ್ರಮಾಣವರ್ಷಂ ಚ ಮೋದಂತೇ ಹರಿಮಂದಿರೇ ॥ ೩೧ ॥

ತತೋ ಭೋಗೋ ಭವೇತ್ತೇಷಾಂ ನಿಶ್ಚಿತಂ ಪಾಪಪುಣ್ಯಯೋಃ ।
ಅತಿಸ್ವಲ್ಪೇನ ಕಾಲೇನ ಕಾಲವ್ಯೂಹಂ ಚ ಬಿಭ್ರತಾಂ ॥ ೩೨ ॥

---

೨೮. ಸಗರ ವಂಶದವರಿಗೆಲ್ಲ ಮುಕ್ತಿದಾಯಕಳಾದ ಆ ಗಂಗೆಯು ವೈಕುಂಠಕ್ಕೆ ಹೋಗುವವರಿಗೆ ಸೋಪಾನಸ್ವರೂಪಳಾಗಿದ್ದಾಳೆ.

೨೯. ಆದುದರಿಂದಲೇ ಪುಣ್ಯಶಾಲಿಗಳಾದ ಸತ್ಪುರುಷರಿಗೆ ಮರಣಕಾಲದಲ್ಲಿ ಮೊದಲು ಪಾದಪ್ರಕ್ಷಾಳನಮಾಡಿ ಬಾಯಿಗೆ ಗಂಗೋದಕವನ್ನು ಹಾಕುವರು.

೩೦. ಆ ಕೂಡಲೇ ಅವರು ದಿವ್ಯರಥದಲ್ಲಿ ಕುಳಿತು ಗಂಗೆಯೆಂಬ ಸೋಪಾನವನ್ನೇರಿ ಬ್ರಹ್ಮಲೋಕ ಪರ್ಯಂತವಾಗಿ ಎಲ್ಲವನ್ನೂ ದಾಟಿ ನಿರಾಮಯನಾಗ ವೈಕುಂಠಕ್ಕೆ ತೆರಳುವರು.

೩೧. ದೈವಯೋಗದಿಂದ ಗಂಗೆಯಲ್ಲಿ ಮುಳುಗಿದವರು ಜನ್ಮಾಂತರಕೃತವಾದ ಪಾಪಗಳಿಂದ ವಿನಿರ್ಮುಕ್ತರಾಗಿ ತಮ್ಮ ಶರೀರದಲ್ಲಿ ರೋಮಗಳೆಷ್ಟಿವೆಯೋ ಅಷ್ಟು ಕಾಲ ಶ್ರೀಹರಿಯ ಮಂದಿರದಲ್ಲಿ ಮೋದದಿಂದಿರುವರು.

೩೨. ಅನಂತರ ಕಾಲಚಕ್ರಕ್ಕೆ ಅನುಗುಣವಾಗಿ, ಅತಿಸ್ವಲ್ಪಕಾಲದಲ್ಲಿಯೇ ಅವರಿಗೆ ಪಾಪಪುಣ್ಯಗಳ ಫಲಾನುಭವವುಂಟಾಗುವುದು.

ತತಃ ಪುಣ್ಯವತಾಂ ಗೇಹೇ ಲಬ್ಧ್ವಾ ಜನ್ಮ ಚ ಭಾರತೇ ।
ಸಂಪ್ರಾಪ್ಯ ನಿಶ್ಚಲಾಂ ಭಕ್ತಿಂ ಭವಂತಿ ಹರಿರೂಪಿಣಃ ॥ ೩೩ ॥

ಮೃತದ್ವಿಜಾನಾಂ ದೇಹಾಂಶ್ಚ ದೈವಾಚ್ಛೂದ್ರಾ ವಹಂತಿ ಚೇತ್ ।
ಪದಪ್ರಮಾಣವರ್ಷಂ ಚ ತೇಷಾಂ ಚ ನರಕೇ ಸ್ಥಿತಿಃ ॥ ೩೪ ॥

ತತಸ್ತೇಷಾಂ ಚ ಸಾಹಾಯ್ಯಂ ಕರೋತಿ ಹರಿರೂಪಿಣೀ ।
ದದಾತಿ ಮುಕ್ತಿಂ ತೇಭ್ಯೋಽಪಿ ಕ್ರಮೇಣ ಚ ಕೃಪಾಮಯೀ ॥ ೩೫ ॥

ಜನ್ಮ ಪುಣ್ಯವತಾಂ ಗೇಹೇ ಕಾರಯಿತ್ವಾ ಚ ಭಾರತೇ ।
ಸ್ಥಲಂ ದದಾತಿ ವೈಕುಂಠೇ ನಿಶ್ಚಿತಂ ಜನ್ಮಭಿಸ್ತ್ರಿಭಿಃ । ೩೬ ॥

ಯಾತ್ರಾಂ ಕೃತ್ವಾ ತು ಯಃ ಶುದ್ಧ್ಯಾ ಸ್ನಾತುಂ ಯಾತಿ ಸುರೇಶ್ವರೀಂ ।
ಪದಪ್ರಮಾಣವರ್ಷಂ ಚ ವೈಕುಂಠೇ ಮೋದತೇ ಧ್ರುವಂ ॥ ೩೭ ॥

---

೩೩. ಅನಂತರ ಭರತಖಂಡದಲ್ಲಿ ಪುಣ್ಯಶಾಲಿಗಳ ಮನೆಯಲ್ಲಿ ಪುನಃ ಜನ್ಮವೆತ್ತಿ ಶ್ರೀಹರಿಯಲ್ಲಿ ನಿಶ್ಚಲವಾದ ಭಕ್ತಿಯನ್ನು ಪಡೆದು ಹರಿಸ್ವರೂಪವನ್ನು ಹೊಂದುವರು.

೩೪. ಸತ್ತ ಬ್ರಾಹ್ಮಣರ ಶವವನ್ನು ಶೂದ್ರರೇನಾದರೂ ಹೊತ್ತರೆ ದುರದೃಷ್ಟಶಾಲಿಗಳಾದ ಆ ಸತ್ತ ಬ್ರಾಹ್ಮಣರು ಪದಪ್ರಮಾಣಗಳಷ್ಟು ಕಾಲ ನರಕದಲ್ಲಿರುವರು.

೩೫. ಅನಂತರ ಅವರಿಗೆ ಕೃಪಾಮಯಿಯೂ, ಶ್ರೀಹರಿರೂಪಿಣಿಯೂ ಆದ ಗಂಗೆಯು ಸಹಾಯಕಳಾಗಿ ಮುಕ್ತಿಯನ್ನು ಕೊಡುವಳು.

೩೬. ಮೊದಲು ಭಾರತದಲ್ಲಿ ಪುಣ್ಯವಂತರ ಮನೆಯಲ್ಲಿ ಜನ್ಮವಿತ್ತು, ಅನಂತರ ಮೂರು ಜನ್ಮಗಳೊಳಗೆ ನಿಶ್ಚಯವಾಗಿಯೂ ವೈಕುಂಠದಲ್ಲಿ ಸ್ಥಳವನ್ನು ಕೊಡುವಳು.

೩೭. ತೀರ್ಥಯಾತ್ರೆಗಳನ್ನು ಮಾಡಿ, ಆತ್ಮಶುದ್ಧಿಗಾಗಿ ಯಾರು ಗಂಗೆಯಲ್ಲಿ ಸ್ನಾನಮಾಡುವರೋ, ಅವರು ಪದಪ್ರಮಾಣವರ್ಷಗಳಕಾಲ ವೈಕುಂಠದಲ್ಲಿ ಸುಖಿಗಳಾಗಿರುವರು.

ಗಂಗಾಂ ಪ್ರಾಪ್ಯಾನುಷಂಗೇಣ ಸ್ನಾತಿ ಚೇತ್ಸಮಲೋ ನರಃ ।
ಮುಚ್ಯತೇ ಸರ್ವಪಾಪೇಭ್ಯಃ ಪುನರ್ಯದಿ ನ ಲಿಪ್ಯತೇ ॥ ೩೮ ॥

ಕಲೌ ಪಂಚ ಸಹಸ್ರಾಬ್ದಂ ಸ್ಥಿತಿಸ್ತಸ್ಯಾಶ್ಚ ಭಾರತೇ ।
ತಸ್ಯಾಂ ಚ ವಿದ್ಯಮಾನಾಯಾಂ ಕಃ ಪ್ರಭಾವಃ ಕಲೇರಹೋ ॥ ೩೯ ॥

ಕಲೌ ದಶಸಹಸ್ರಾಣಿ ವರ್ಷಾಣಿ ಪ್ರತಿಮಾ ಮಮ ।
ತಿಷ್ಠಂತಿ ಚ ಪುರಾಣಾನಿ ಪ್ರಭಾವಸ್ತತ್ರ ಕಃ ಕಲೇಃ ॥ ೪೦ ॥

ಅತಲಂ ಯಾತಿ ಯಾ ಧಾರಾ ಸಾ ಚ ಭೋಗವತೀ ಸ್ಮೃತಾ ।
ಪಯಃಫೇನನಿಭಾ ಶಶ್ವದತಿವೇಗವತೀ ಸದಾ ॥ ೪೧ ॥

ಆಕರಾಮೂಲ್ಯರತ್ನಾನಾಂ ಮಣೀಂದ್ರಾಣಾಂ ಚ ಸಂತತಂ ।
ನಾಗಕನ್ಯಾಶ್ಚ ಯತ್ತೀರೇ ಕ್ರೀಡಂತಿ ಸ್ಥಿರಯೌವನಾಃ ॥ ೪೨ ॥

---

೩೮. ಪಾಪಿಯಾದ ಮನುಜನು ಅನಿರೀಕ್ಷಿತವಾಗಿಯಾದರೂ ಗಂಗೆಯಲ್ಲಿ ಸ್ನಾನಮಾಡಿದ್ದೇ ಆದರೆ, ಅವನು ಸಕಲ ಪಾಪಗಳಿಂದಲೂ ಮುಕ್ತನಾಗುವನು. ಆದರೆ ಮುಂದೆ ಅವನು ಪಾಪಕರ್ಮವನ್ನು ಮಾಡಕೂಡದು.

೩೯. ಗಂಗೆಯು ಕಲಿಯುಗದಲ್ಲಿ ಐದುಸಾವಿರ ವರ್ಷಗಳಕಾಲ ಭರತಖಂಡ ದಲ್ಲಿರುವಳು ಅವಳಿರುವವರೆಗೆ ಕಲಿಯ ಪ್ರಭಾವವೇನೂ ನಡೆಯುವುದಿಲ್ಲ.

೪೦. ಕಲಿಯುಗದಲ್ಲಿ ಹತ್ತುಸಾವಿರ ವರ್ಷಗಳಕಾಲ ನನ್ನ ಪ್ರತಿಮೆಯು ಎಲ್ಲೆಲ್ಲಿಯೂ ಇರುವುದು. ಅದು ಇರುವವರೆಗೆ ಕಲಿಯ ಪ್ರಭಾವವೇನೂ ಇರುವುದಿಲ್ಲ.

೪೧. ಪಾತಾಳಲೋಕದಲ್ಲಿ ಹರಿಯುವ ಗಂಗಾನದಿಯ ಮತ್ತೊಂದು ಧಾರೆ ಯನ್ನು ಭೋಗವತೀಯೆನ್ನುವರು. ನೊರೆಯಂತೆ ಸ್ವಚ್ಛವಾದ ನೀರಿನಿಂದ ಕೂಡಿ ಅದು ಸರ್ವದಾ ಬಹಳ ವೇಗವಾಗಿ ಹರಿಯುವುದು.

೪೨. ಆ ಭೋಗವತಿಯು ಅಮೂಲ್ಯ ರತ್ನಗಳಿಗೂ, ಶ್ರೇಷ್ಠವಾದ ಮಣಿಗಳಿಗೂ ಗಣಿಯಂತಿರುವುದು. ಸ್ಥಿರಯೌವನವುಳ್ಳ ನಾಗಕನ್ನಿಕೆಯರು ಅದರ ತೀರದಲ್ಲಿ ಸರ್ವದಾ ಕ್ರೀಡಿಸುವರು

ಸ್ವಯಂ ದೇವೀ ಚ ವೈಕುಂಠಂ ವೇಷ್ಟಯಿತ್ವಾ ಚ ಸಂತತಂ ।
ಸಹಸ್ರಯೋಜನಾ ಪ್ರಸ್ಥೇ ದೈರ್ಘ್ಯೇ ಚ ಲಕ್ಷಯೋಜನಾ ॥ ೪೩ ॥

ಅಸ್ಯಾ ವಿನಾಶಃ ಪ್ರಲಯೇ ನಾಸ್ತ್ಯೇವ ದುಹಿತುರ್ಮಮ ।
ನಾನಾರತ್ನಾಕರಂ ದಿವ್ಯಂ ತತ್ತೀರಂ ಸುಮನೋಹರಂ ॥ ೪೪ ॥

ಇತ್ಯೇವಂ ಕಥಿತಂ ಸರ್ವಂ ಜಾಹ್ನವೀಜನ್ಮ ಪುಣ್ಯದಂ ।
ಬ್ರಹ್ಮಣಶ್ಚ ಪ್ರತೀಕಾರೋ ಮೋಹಿನೀಶಾಪತಃ ಶೃಣು ॥ ೪೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಜಾಹ್ನವೀಜನ್ಮಪ್ರಸ್ತಾವೋ
ನಾಮ ಚತುಸ್ತ್ರಿಂಶೋಽಧ್ಯಾಯಃ

---

೪೩. ಅಲ್ಲದೆ ದೇವಲೋಕದಲ್ಲಿ ಈ ಗಂಗೆಯು ಸಹಸ್ರಯೋಜನ ಅಗಲವಾಗಿಯೂ, ಲಕ್ಷಯೋಜನ ದೀರ್ಘವಾಗಿಯೂ ವೈಕುಂಠವನ್ನು ಸರ್ವದಾ ಬಳಸಿಕೊಂಡಿರುವಳು.

೪೪. ನನ್ನ ಪುತ್ರಿಯಾದ ಈ ಗಂಗೆಗೆ ಪ್ರಳಯದಲ್ಲಿಯೂ ನಾಶವುಂಟಾಗುವುದಿಲ್ಲ. ಅದರ ತೀರವು ವಿವಿಧರತ್ನಗಳಿಗೆ ಆಕರವೂ, ಮನೋಹರವೂ ಆಗಿರುವುದು.

೪೫. ಈ ರೀತಿಯಾಗಿ ಪುಣ್ಯಕರವಾದ ಗಂಗೆಯ ಉತ್ಪತ್ತಿಯನ್ನು ತಿಳಿಸಿದೆನು. ಈಗ ಮೋಹಿನಿಯ ಶಾಪದಿಂದ ಬ್ರಹ್ಮನ ಪ್ರತೀಕಾರವನ್ನು ತಿಳಿಸುವೆನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಜಾಹ್ನವೀಜನ್ಮಪ್ರಸ್ತಾವವೆಂಬ ಮೂವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

ಮೂವತ್ತನಾಲ್ಕನೆಯ ಅಧ್ಯಾಯದ ಸಾರಾಂಶ.

ಶಂಕರನು ವೈಕುಂಠಲೋಕಕ್ಕೆ ಬಂದು ಶ್ರೀಮನ್ನಾರಾಯಣ ಮುಂದೆ ಕುಳಿತು ಅನನ್ಯ ಭಕ್ತಿಯಿಂದ ಅವನ ಗುಣಗಳನ್ನು ಹಾಡಿದನು. ಶಂಕರನ ಮಧುರ ಗಾನವನ್ನು ಕೇಳಿ ವೈಕುಂಠದಲ್ಲಿದ್ದ ದೇವತೆಗಳು, ಮುನಿಗಳು ಮುಂತಾಗಿ ಎಲ್ಲರೂ ಆನಂದಪರವಶರಾಗಿ ದ್ರವರೂಪರಾದರು. ಹೀಗೆ ವೈಕುಂಠವೆಲ್ಲವೂ ಜಲಮಯ ವಾದುದನ್ನು ಕಂಡು ಶ್ರೀಕೃಷ್ಣನು ಅಲ್ಲಿಗೆ ಬಂದು ಅಲ್ಲಿದ್ದ ದೇವತೆಗಳಿಗೆಲ್ಲ ಅವರವರ ಹಿಂದಿನ ರೂಪವನ್ನು ಅನುಗ್ರಹಿಸಿದನು. ಗಾನರಸಪ್ರವಾಹರೂಪಿಣಿಯಾದ ಆ ನದಿಯೇ :ಮಂದಾಕಿನೀ ಎನಿಸಿತು. ಅದು ಭಗೀರಥನ ಪ್ರಯತ್ನದಿಂದ ಭೂಲೋಕಕ್ಕೂ ಹರಿದು ಬಂದಿತು. ಈ ಗಂಗೆಯಲ್ಲಿ ಸ್ನಾನಮಾಡುವವರ ಮತ್ತು ಆ ಜಲವನ್ನು ಪಾನಮಾಡುವವರ ಸಮಸ್ತ ದುರಿತಗಳೂ ಪರಿಹಾರವಾಗುವುವು. ಈ ಗಂಗೆಯು ಸ್ವರ್ಗ, ಮರ್ತ್ಯ ಮತ್ತು ಪಾತಾಳಲೋಕಗಳಲ್ಲೂ ಪ್ರವಹಿಸುತ್ತಿರುವುದರಿಂದ ಇದನ್ನು 'ತ್ರಿಪಥಗಾ' ಎನ್ನುವರು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಪಂಚತ್ರಿಂಶೋಽಧ್ಯಾಯಃ ॥

॥ ಶ್ರೀ ಕೃಷ್ಣ ಉವಾಚ ॥

ನಾರಾಯಣಶ್ಚ ಬ್ರಹ್ಮಾಣಂ ಉವಾಚ ಕೃಪಯಾ ಪುನಃ ।
ದೃಷ್ಟ್ವಾ ಗಂಗಾಂ ಚ ಸರ್ವೇ ತಾಂ ಮಮ ಮಾಯಾಂ ಚ ಮೇನಿರೇ ॥ ೧ ॥

॥ ಶ್ರೀ ನಾರಾಯಣ ಉವಾಚ ॥

ಉತ್ತಿಷ್ಠ ಗಚ್ಛ ಭದ್ರಂ ತೇ ಭವಿಷ್ಯತಿ ಚತುರ್ಮುಖ ।
ಅತ್ರ ಸ್ನಾತ್ವಾಭಿಶಪ್ತಸ್ತ್ವಂ ಪೂತೋ ಭವ ಮಮಾಜ್ಞಯಾ ॥ ೨ ॥

ತ್ವಂ ಚೇತ್ಸತ್ಯಂ ಸ್ವಯಂ ಪೂತಃ ಸ್ಪರ್ಶಂ ವಾಂಛಂತಿ ತಾನಿ ತೇ ।
ವೈಷ್ಣವೇಶಸ್ಯ ತೀರ್ಥಾನಿ ಸರ್ವಾಣಿ ಸತತಂ ಮುನೇ ॥ ೩ ॥

ಮೂವತ್ತೈದನೆಯ ಅಧ್ಯಾಯ.

೧. ಶ್ರೀಕೃಷ್ಣ : ಶ್ರೀಮನ್ನಾರಾಯಣನು ಬ್ರಹ್ಮನನ್ನು ಕುರಿತು ಪುನಃ ಕರುಣೆಯಿಂದ ಹೇಳಿದನು. ಆ ಗಂಗೆಯನ್ನು ನೋಡಿ, ಎಲ್ಲರೂ ನನ್ನ ಮಾಯೆಯೆಂದು ತಿಳಿದರು.

೨. ಶ್ರೀನಾರಾಯಣ :—“ ಎಲೈ ಚತುರ್ಮುಖನೇ, ಏಳು. ಹಿಂತಿರುಗು. ನಿನಗೆ ಮಂಗಳವಾಗುವುದು. ಶಾಪಗ್ರಸ್ತನಾದ ನೀನು ಈ ಗಂಗೆಯಲ್ಲಿ ಸ್ನಾನಮಾಡಿ ನನ್ನ ಆಜ್ಞೆಯಂತೆ ಪವಿತ್ರನಾಗು.

೩. ಎಲೈ ಮುನಿಯೇ, ನೀನು ಸತ್ಯವಾಗಿಯೂ ಸ್ವತಃ ಪರಿಪೂತನಾಗಿರುವುದರಿಂದ ವೈಷ್ಣವೋತ್ತಮನಾದ ನಿನ್ನ ಸ್ಪರ್ಶವನ್ನು ಸಕಲ ಪುಣ್ಯತೀರ್ಥಗಳೂ ಸರ್ವದಾ ಬಯಸುವುವು.

ತಥಾಪಿ ಶಾಪಮುಕ್ತಸ್ತ್ವಮತ್ರ ಪ್ರಕೃತಿಹೇಲನಾತ್ ।
ಅಹಂಕಾರಶ್ಚ ಸರ್ವೇಷಾಂ ಪಾಪಬೀಜಮಮಂಗಲಂ ॥ ೪ ॥

ಶೀಘ್ರಂ ತ್ವಂ ಗಚ್ಛ ಗೋಲೋಕಂ ಮಮಾಲಯಂ ಪರಾತ್ಪರಂ ।
ಪ್ರಕೃತ್ಯಂಶಾಂ ಮಂಗಲದಾಂ ತತ್ರ ಪ್ರಾಪ್ಸ್ಯಸಿ ಭಾರತೀಂ ॥ ೫ ॥

ಪ್ರಕೃತಿಂ ಭಜ ಕಲ್ಯಾಣ ಸೃಷ್ಟಿಬೀಜಸ್ವರೂಪಿಣೀಂ ।
ಅಹೋ ಕಲ್ಪಾಂತಪರ್ಯಂತಂ ತಪಸ್ತಪ್ತಂ ತ್ವಯಾಧುನಾ ॥ ೬ ॥

ತವ ಮಂತ್ರಂ ನ ಗೃಹ್ಣಂತಿ ಕೇಪಿ ವೇಶ್ಯಾಭಿಶಾಪತಃ ।
ಯದನ್ಯದೇವಪೂಜಾಯಾಂ ತವ ಪೂಜಾ ಭವಿಷ್ಯತಿ ॥ ೭ ॥

ತ್ವಮೇವ ಜಗತಾಂ ಧಾತಾ ಸ್ವಾತ್ಮಾರಾಮಶ್ಚ ಯೋಷಿತಃ ।
ಸರ್ವರೂಪೀ ಚ ಪೂಜಾ ಚ ಸರ್ವದೇಹೇಷು ಸರ್ವತಃ ॥ ೮ ॥

---

೪ ಆದರೂ ಪ್ರಕೃತಿಸ್ವರೂಪಿಣಿಯಾದ ಸ್ತ್ರೀಯನ್ನು ಅವಹೇಳನಮಾಡಿ ಶಾಪಗ್ರಸ್ತನಾಗಿರುವ ನೀನು ಈಗ ಶಾಪವಿಮುಕ್ತನಾಗಬೇಕಾಗಿದೆ. ಅಹಂಕಾರವು ಎಲ್ಲರ ಪಾಪಕಾರ್ಯಗಳಿಗೆ ಮೂಲವೂ, ಅಮಂಗಳಕರವೂ ಆಗಿದೆ.

೫. ನೀನು ಜಾಗ್ರತೆಯಾಗಿ ಸರ್ವಶ್ರೇಷ್ಠವೂ, ನನ್ನ ಆವಾಸಸ್ಥಾನವೂ, ಆದ ಗೋಲೋಕಕ್ಕೆ ಹೋಗು. ಅಲ್ಲಿ ಪ್ರಕೃತ್ಯಂಶ ಸಂಭೂತಳೂ ಮಂಗಳಕರಳೂ ಆದ ಭಾರತಿಯನ್ನು ನೋಡುವೆ.

೬. ಎಲೈ ಕಲ್ಯಾಣರೂಪನೇ, ಸೃಷ್ಟಿಗೆ ಬೀಜರೂಪಿಣಿಯಾದ ಪ್ರಕೃತಿಯನ್ನು ಭಕ್ತಿಯಿಂದ ಭಜಿಸು. ನೀನು ಕಲ್ಪಾಂತದವರೆಗೆ ತಪಸ್ಸುಮಾಡಿರುತ್ತೀಯೆ.

೭ ವೇಶ್ಯೆಯಾದ ಮೋಹಿನಿಯ ಶಾಪದಿಂದ ಯಾರೂ ನಿನ್ನ ಮಂತ್ರೋಪದೇಶವನ್ನು ಸ್ವೀಕರಿಸುವುದಿಲ್ಲ. ಇತರ ದೇವತೆಗಳಿಗೆಲ್ಲ ಪೂಜೆಯಾದರೂ, ನಿನ್ನನ್ನು ಯಾರೂ ಪೂಜಿಸುವುದಿಲ್ಲ.

೮. ಜಗತ್ಸೃಷ್ಟಿಕರ್ತನಾದ ನೀನು ಆತ್ಮಾರಾಮನಾದುದರಿಂದ ಸ್ತ್ರೀಪುರುಷ ರೂಪಗಳಲ್ಲೆಲ್ಲ ಇದ್ದುಕೊಂಡು ಎಲ್ಲ ದೇಹಗಳಲ್ಲಿಯೂ ಸಕಲ ಪೂಜೆಯನ್ನು ಕೈಗೊಳ್ಳುವೆ." ಎಂದು ಶ್ರೀನಾರಾಯಣನು ಅನುಗ್ರಹಿಸಿದನು.

ತದಾ ಮಮಾಜ್ಞಯಾ ಬ್ರಹ್ಮಾ ಸ್ನಾತ್ವಾ ಚ ಜಾಹ್ನವೀಜಲೇ ।
ಶೀಘ್ರಂ ಜಗಾಮ ಗೋಲೋಕಂ ಮಾಂ ಪ್ರಣಮ್ಯ ಜಗದ್ಗುರುಃ ॥ ೯ ॥

ತೇ ದೇವಾ ಮುನಯಃ ಸರ್ವೇ ಪ್ರಜಗ್ಮುಃ ಸ್ವಾಲಯಂ ಮುದಾ ।
ಸುನಿರ್ಮಲಂ ಮಮ ಯಶೋ ಗಾಯಂತಶ್ಚ ಪುನಃಪುನಃ ॥ ೧೦ ॥

ವಿಧಿರಾಗತ್ಯ ಗೋಲೋಕಂ ಸಂಪ್ರಾಪ್ಯ ಭಾರತೀಂ ಸತೀಂ ।
ಸರ್ವವಿದ್ಯಾಧಿದೇವೀಂ ತಾಂ ಮದ್ವಕ್ತ್ರಾಬ್ಜವಿನಿರ್ಮಿತಾಂ ॥ ೧೧ ॥

ವಾಗೀಶ್ವರೀಂ ಚ ಸಂಪ್ರಾಪ್ಯ ಬ್ರಹ್ಮಾ ಪ್ರಮುದಿತಃ ಸ್ವಯಂ ।
ಕಾಮಾಸ್ತ್ರಾಣಾಂ ಚ ವ್ಯಾಪಾರಮನುಮೇನೇ ಸ್ವಯಂ ವಿಭುಃ ॥ ೧೨ ॥

ತತ ಆಗತ್ಯ ಮಾಂ ನತ್ವಾ ಪ್ರಾಪ್ಯ ತ್ರೈಲೋಕ್ಯಮೋಹಿನೀಂ ।
ಕ್ರೀಡಾಂ ಚಕಾರ ಭಗವಾನ್ ಸ್ಥಾನೇಸ್ಥಾನೇಽತಿ ನಿರ್ಜನೇ ॥ ೧೩ ॥

---

೯. ಆಗ ಜಗದ್ಗುರುವಾದ ಬ್ರಹ್ಮನು ನನ್ನ ಆಜ್ಞೆಯಂತೆ ಜಾಹ್ನವಿಯ ಜಲದಲ್ಲಿ ಸ್ನಾನಮಾಡಿ, ನನಗೆ ನಮಸ್ಕರಿಸಿ ಜಾಗ್ರತೆ ಗೋಲೋಕಕ್ಕೆ ತೆರಳಿದನು.

೧೦. ಅನಂತರ ಅಲ್ಲಿಗೆ ಬಂದಿದ್ದ ಮುನಿಗಳು ಮತ್ತು ದೇವತೆಗಳೆಲ್ಲರೂ, ನಿರ್ಮಲವಾದ ನನ್ನ ಕೀರ್ತಿಯನ್ನು ಗಾನಮಾಡುತ್ತ ತಮ್ಮ ತಮ್ಮ ಮಂದಿರಕ್ಕೆ ಹಿಂತಿರುಗಿದರು.

೧೧. ಇತ್ತ ಬ್ರಹ್ಮನಾದರೋ ಗೋಲೋಕಕ್ಕೆ ಬಂದು ನನ್ನ ಮುಖಕಮಲದಿಂದ ಆವಿರ್ಭೂತಳೂ, ಸಕಲ ವಿದ್ಯಾಧಿದೇವತೆಯೂ ಆದ ಭಾರತಿಯನ್ನು ದರ್ಶನ ಮಾಡಿದನು.

೧೨. ವಾಗೀಶ್ವರಿಯನ್ನು ಕಂಡು ಬ್ರಹ್ಮನು ಬಹಳ ಸಂತೋಷಗೊಂಡನು ಮತ್ತು ಮನ್ಮಥಾಸ್ತ್ರಗಳ ವ್ಯಾಪಾರದ ಮಹಿಮೆಯು ಅಸದಳವೆಂದು ಆಕೆಯ ಮುಂದೆ ಒಪ್ಪಿಕೊಂಡನು. ಕೂಡಲೇ ವಾಗೀಶ್ವರಿಯು ಮೋಹಿನಿಯ ದೇಹದಲ್ಲಿ ಸೇರಿಕೊಂಡಳು.

೧೩. ಅಲ್ಲಿಂದ ಬಂದು ನನಗೆ ನಮಸ್ಕರಿಸಿ ತ್ರಿಲೋಕ ಮೋಹಿನಿಯಾದ ಮೋಹಿನಿಯ ಸಮೀಪಕ್ಕೆ ಹೋಗಿ ಭಗವಾನ್ ಬ್ರಹ್ಮನು ನಿರ್ಜನಪ್ರದೇಶದಲ್ಲಿ ಆಕೆಯೊಡನೆ ರತಿಕ್ರೀಡೆಯಾಡಿದನು.

ರತಿಂ ಚಿರತರಂ ಕೃತ್ವಾ ವಿರರಾಮ ಸ್ವಯಂ ವಿಧಿಃ ।
ವಾಗೀಶ್ವರೀಮುವಾಚೇದಂ ತ್ವಂ ವೈ ಬ್ರಹ್ಮಾ ಚ ಕರ್ಮಣಾ । ೧೪ ॥

ಕಾಚಿತ್ಸ್ವಕರ್ಮಣಾ ಸಾಧ್ವೀ ಪೂಜ್ಯಾ ಚ ಸ್ಥಿರಯೌವನಾ ।
ತವೈವ ಕರ್ಮಯೋಗ್ಯಂ ಚ ಯುವಾನಂ ಪಶ್ಯ ಸುಂದರಿ ॥ ೧೫ ॥

ವಿದಗ್ಧಾಯಾ ವಿದಗ್ಧೇನ ಸಂಗಮೋ ಗುಣವಾನ್ ಭವೇತ್ ।
ಜರಾತುರೋಹಂ ವೃದ್ಧಶ್ಚ ತಪಸ್ವೀ ವೈಷ್ಣವೋ ದ್ವಿಜಃ ॥ ೧೬ ॥

ಅಸ್ವತಂತ್ರಃ ಪರಾಧೀನಃ ಕಾ ರತಿಃ ಪುಂಶ್ಚಲೀಷು ಮೇ ।
ಆಜಗಾಮ ಬ್ರಹ್ಮಲೋಕಂ ಪುನರೇವ ನಿಜಾಲಯಂ ॥ ೧೭ ॥

ದದೃಶುರ್ಬ್ರಹ್ಮಲೋಕಸ್ಥಾಸ್ತಾಂ ದೇವೀಂ ಕೌತುಕಾನ್ವಿತಾಃ ।
ಅತೀವ ಸುಂದರೀಂ ರಮ್ಯಾಂ ಶುಭ್ರವರ್ಣಾಂ ಚ ಸಸ್ಮಿತಾಂ ॥ ೧೮ ॥

---

೧೪. ಈ ರೀತಿಯಾಗಿ ಚಿರಕಾಲ ರತಿಸುಖವನ್ನನುಭವಿಸಿ ಬ್ರಹ್ಮನು ವಿಶ್ರಾಂತಿಗೊಂಡನು. ಮತ್ತು ಮೋಹಿನಿಯನ್ನು ಕುರಿತು ನೀನು ಸತ್ಕರ್ಮಗಳ ಫಲದಿಂದ ವಾಗ್ದೇವತೆಯಾಗಿರುವೆ.

೧೫. ಕೆಲವು ಸ್ತ್ರೀಯರು ತಮ್ಮ ಸತ್ಕರ್ಮಗಳ ಫಲದಿಂದ ಪೂಜ್ಯರೂ, ಸ್ಥಿರ ಯೌವನವತಿಯರೂ ಆಗುವರು. ಎಲೌ ಸುಂದರಿಯೇ, ನಿನ್ನ ಕರ್ಮಕ್ಕೆ ಉಚಿತನಾದ ಒಬ್ಬ ಯುವಕನನ್ನು ನೋಡಿಕೋ.

೧೬. ಕಾಮಕಲಾಚತುರೆಯಾದ ಯುವತಿಗೆ ಕಾಮಕಲಾಚತುರನಾದ ಯುವಕನೊಡನೆ ಸಮಾಗಮವಾದರೆ ಚೆನ್ನಾಗಿರುತ್ತದೆ. ನಾನಾದರೋ ಜರಾ ಪೀಡಿತನು, ತಪಸ್ವಿಯು, ಬ್ರಾಹ್ಮಣನು, ಮೇಲಾಗಿ ವಿಷ್ಣುಭಕ್ತನು.

೧೭. ಅಸ್ವತಂತ್ರನೂ, ಪರಾಧೀನನೂ ಆದ ನನಗೆ ವೇಶ್ಯೆಯರಲ್ಲಿ ಹೇಗೆ ರತಿಯುಂಟಾದೀತು ? ಹೀಗೆ ಹೇಳಿ ತನ್ನ ಮಂದಿರವಾದ ಬ್ರಹ್ಮಲೋಕಕ್ಕೆ ಹಿಂತಿರುಗಿ ಬಂದನು.

೧೮. ಇತ್ತ ಬ್ರಹ್ಮಲೋಕದಲ್ಲಿದ್ದವರೆಲ್ಲರೂ ಕುತೂಹಲಾನ್ವಿತರಾಗಿ ಆ ಸುಂದರಳೂ, ಮನೋಹರಳೂ, ಶುಭ್ರವರ್ಣಳೂ, ಸ್ಮಿತವದನೆಯೂ ಆದ ಸರಸ್ವತೀ ದೇವಿಯನ್ನು ನೋಡಿದರು.

ಶರಚ್ಛೀತಾಂಶುವದನಾಂ ಶರತ್ಪಂಕಜಲೋಚನಾಂ ।
ಪಕ್ವಬಿಂಬಪ್ರಭಾ ಮುಷ್ಟದೀಪ್ತ್ಯೋಷ್ಠಾಧರಪಲ್ಲವಾಂ ॥ ೧೯ ॥

ಮುಕ್ತಾಪಂಕ್ತಿವಿನಿಂದ್ಯೈಕದಂತಪಂಕ್ತಿಮನೋಹರಾಂ ।
ರತ್ನಕೇಯೂರವಲಯ ರತ್ನನೂಪುರ ಶೋಭಿತಾಂ ॥ ೨೦ ॥

ರತ್ನಕುಂಡಲಯುಗ್ಮೇನ ಕರ್ಣಮೂಲವಿರಾಜಿತಾಂ ।
ರತ್ನೇಂದ್ರಸಾರಹಾರೇಣ ವಕ್ಷಃಸ್ಥಲಸಮುಜ್ವಲಾಂ ॥ ೨೧ ॥

ವಹ್ನಿಶುದ್ಧಾಂಶುಕಂ ಸೂಕ್ಷ್ಮಂ ಬಿಭ್ರತೀಂ ನವಯೌವನಾಂ ।
ಅತೀವ ಕಮನೀಯಾಂ ಚ ಪೀನಶ್ರೋಣಿಪಯೋಧರಾಂ ॥ ೨೨ ॥

ವೀಣಾಪುಸ್ತಕಹಸ್ತಾಂ ಚ ವ್ಯಾಖ್ಯಾಮುದ್ರಾಕರಾಂ ವರಾಂ ।
ತೇ ಚ ನಿರ್ಮಂಛನಂ ಕೃತ್ವಾ ಚಕ್ರುಃ ಪರಮಮಂಗಲಂ ॥ ೨೩ ॥

---

೧೯. ಆ ದೇವಿಯ ಮುಖವು ಶರಚ್ಚಂದ್ರನಂತೆ ರಮ್ಯವಾಗಿಯೂ, ಕಣ್ಣುಗಳು ಶರದೃತುವಿನ ತಾವರೆಯಂತೆ ವಿಶಾಲವಾಗಿಯೂ, ತುಟಿಗಳು ಪಕ್ವವಾದ ತೊಂಡೆ ಹಣ್ಣುಗಳಂತೆ ಕೆಂಪಾಗಿಯೂ, ಮೃದುವಾಗಿಯೂ ಇದ್ದವು.

೨೦. ಮುತ್ತಿನಸಾಲುಗಳನ್ನು ಹಾಸ್ಯಮಾಡುವಂತಿರುವ ಹಲ್ಲಿನ ಸಾಲುಗಳಿಂದ ಮನೋಹರಳಾದ ಆ ದೇವಿಯು ರತ್ನದ ಭುಜಕೀರ್ತಿ, ಬಳೆ ಮತ್ತು ನೂಪುರಗಳಿಂದ ಶೋಭಿಸುತ್ತಿದ್ದಳು.

೨೧. ಆಕೆಯ ಎರಡು ಕಿವಿಗಳು ರತ್ನಕುಂಡಲಗಳಿಂದಲೂ, ವಕ್ಷಃಸ್ಥಲವು ದಿವ್ಯವಾದ ರತ್ನಹಾರದಿಂದಲೂ ವಿರಾಜಿಸುತ್ತಿದ್ದವು.

೨೨. ಅಗ್ನಿಯಂತೆ ಪರಿಶುದ್ಧವಾದ ಅಂಶುಕವನ್ನು ಧರಿಸಿರುವ ನವಯೌವನವತಿಯಾದ ಆ ದೇವಿಯು ಪರಿಪುಷ್ಟವಾದ ಶ್ರೋಣೀಬಿಂಬಗಳಿಂದಲೂ, ಸ್ತನದ್ವಯಗಳಿಂದಲೂ ಶೋಭಿಸುತ್ತಿದ್ದಳು.

೨೩. ವೀಣಾಪುಸ್ತಕಪಾಣಿಯೂ, ವ್ಯಾಖ್ಯಾಮುದ್ರಾಧರಳೂ ಆದ ಆ ದೇವಿಯನ್ನು ನೋಡಿ ಸಕಲ ದೇವತೆಗಳೂ ವಂದಿಸಿ ಪರಮ ಮಂಗಳಕಾರ್ಯಗಳನ್ನು ಮಾಡಿದರು.

ಪುರೀಂ ಪ್ರವೇಶಯಾಮಾಸುರ್ಬ್ರಹ್ಮಾಣಂ ಭಾರತೀಂ ಮುದಾ ।
ಬ್ರಹ್ಮಾ ತಯಾ ಸಹ ಕ್ರೀಡಾಂ ಚಕಾರ ಸ ದಿವಾನಿಶಂ ॥ ೨೪ ॥

ಅತೀವ ಸುಖಸಂಭೋಗೇ ನಿಮಗ್ನಃ ಸತತಂ ಮುದಾ ।
ಗೂಢಂ ಸರ್ವಪುರಾಣೇಷು ಕಿಂ ಪುನಃ ಶ್ರೋತುಮಿಚ್ಛಸಿ ॥ ೨೫ ॥

॥ ಶ್ರೀ ನಾರಾಯಣ ಉವಾಚ ॥

ಪ್ರಾಣೇಶವಚನಂ ಶ್ರುತ್ವಾ ಪ್ರಹಸ್ಯ ಪರಮೇಶ್ವರೀ ।
ಭೂಯೋಽಪಿ ಪರಿಪಪ್ರಚ್ಛ ಕೌತುಕಾನ್ ಮಾನಸಂ ಪುರಾ ॥ ೨೬ ॥

॥ ಶ್ರೀರಾಧಿಕೋವಾಚ ॥

ಬ್ರಹ್ಮಾ ಕಥಂ ನ ಜಗ್ರಾಹ ವೇಶ್ಯಾಂ ಸ್ವಯಮುಪಸ್ಥಿತಾಂ ।
ನ ಕರ್ಮಕ್ಷೇತ್ರೇ ರಹಸಿ ಫಲದಾತಾ ಚ ಕರ್ಮಣಾಂ ॥ ೨೭ ॥

---

೨೪. ಬ್ರಹ್ಮನನ್ನೂ, ಭಾರತೀದೇವಿಯನ್ನೂ ಸಹ ಸಂತೋಷದಿಂದ ನಗರಕ್ಕೆ ಪ್ರವೇಶಮಾಡಿಸಿದರು. ಬ್ರಹ್ಮನು ಅವಳೊಡನೆ ಹಗಲೂ ರಾತ್ರಿ ರತಿಕ್ರೀಡೆ ಯಾಡಿದನು.

೨೫. ಸಂತೋಷಭರಿತನಾಗಿ ನಿರಂತರವಾದ ಸುಖಸಂಭೋಗದಲ್ಲಿ ನಿರತ ನಾದನು. ಸಕಲ ಪುರಾಣಗಳಲ್ಲೂ ಗೂಢವಾದ ಈ ವಿಷಯವನ್ನು ತಿಳಿಸಿಯಾಯಿತು. ಪುನಃ ಏನನ್ನು ಕೇಳಲು ನೀನು ಬಯಸುವೆ?

೨೬. ಶ್ರೀನಾರಾಯಣ:—ಪ್ರಾಣೇಶ್ವರನ ಮಾತನ್ನು ಕೇಳಿ ಪರಮೇಶ್ವರಿ ಯಾದ ರಾಧಾದೇವಿಯು ನಸುನಕ್ಕು ಕುತೂಹಲದಿಂದ ಕೂಡಿದವಳಾಗಿ ತನ್ನ ಮನೋಭಿಲಾಷೆಯನ್ನು ಈ ರೀತಿ ಪ್ರಕಟಿಸಿದಳು.

೨೭. ಶ್ರೀರಾಧಿಕೆ:—ಎಲ್ಲರ ಕರ್ಮಗಳಿಗೂ ಫಲವನ್ನು ಕೊಡತಕ್ಕ ಬ್ರಹ್ಮನು ಕರ್ಮಕ್ಷೇತ್ರದಲ್ಲಿದ್ದುಕೊಂಡು ತಾನಾಗಿ ಒಲಿದು ಬಂದ ವೇಶ್ಯೆಯನ್ನು ಸ್ವೀಕರಿಸದೆ ಏಕೆ ತಿರಸ್ಕರಿಸಿದನು?

ಉಪಸ್ಥಿತಾಯಾ ಸ್ತ್ಯಾಗೇ ಚ ಮಹಾನ್ ದೋಷೋ ಹಿ ಯೋಷಿತಃ ।
ಜ್ಞಾತ್ವಾ ದೇವೋ ವಿಧಾತಾ ಸ ಕಥಂ ತತ್ಯಾಜ ಮೋಹಿನೀಂ ॥ ೨೮ ॥

॥ ಶ್ರೀ ನಾರಾಯಣ ಉವಾಚ ॥

ರಾಧಿಕಾವಚನಂ ಶ್ರುತ್ವಾ ಪ್ರಹಸ್ಯ ಮಧುಸೂದನಃ ।
ಪಾದ್ಮಕಲ್ಪಸ್ಯ ವೃತ್ತಾಂತಮುವಾಚ ಪರಮೇಶ್ವರೀಂ ॥ ೨೯ ॥

॥ ಶ್ರೀ ಕೃಷ್ಣ ಉವಾಚ ॥

ಶೃಣು ಕಾಂತೇ ಪ್ರವಕ್ಷ್ಯಾಮಿ ಪುರಾವೃತ್ತಾಂತಮೀಪ್ಸಿತಂ ।
ಅಕಥ್ಯಂ ಗೋಪನೀಯಂ ಚ ಮಹತಾಮಭಿನಿಂದಿತಂ ॥ ೩೦ ॥

ಏಕದಾ ಚ ಪ್ರಜಾಃ ಸ್ರಷ್ಟುಂ ವಿಧಾತಾ ಪ್ರೇರಿತೋ ಮಯಾ ।
ಸಸರ್ಜ ಮನಸಾ ಪುತ್ರಾನ್ ಜ್ವಲತೋ ಬ್ರಹ್ಮತೇಜಸಾ ॥ ೩೧ ॥

---

೨೮. ತಾನಾಗಿ ಒಲಿದು ಬಂದ ಹೆಂಗಸನ್ನು ತ್ಯಾಗಮಾಡುವುದು ಮಹಾ ಪಾಪವಲ್ಲವೇ? ಇದನ್ನು ತಿಳಿದೂ ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಮೋಹಿನಿಯನ್ನು ಹೇಗೆ ತ್ಯಾಗಮಾಡಿದನು?

೨೯. ಶ್ರೀನಾರಾಯಣ :— ಈ ರೀತಿಯಾದ ರಾಧಾದೇವಿಯ ಪ್ರಶ್ನೆಯನ್ನು ಕೇಳಿ ಮಧುಸೂದನನಾದ ಶ್ರೀಕೃಷ್ಣನು ನಸುನಕ್ಕು ಶ್ರೀ ರಾಧಾಪರಮೇಶ್ವರಿಯನ್ನು ಕುರಿತು ಪಾದ್ಮಕಲ್ಪದಲ್ಲಿ ನಡೆದ ಬ್ರಹ್ಮನ ವೃತ್ತಾಂತವನ್ನು ಹೇಳಲುಪಕ್ರಮಿಸಿದನು.

೩೦. ಶ್ರೀಕೃಷ್ಣ :— ಎಲೌ ಕಾಂತೆಯೇ, ನಿನಗಿಷ್ಟವಾದ ಪುರಾತನ ವೃತ್ತಾಂತವನ್ನು ಹೇಳುವೆನು ಕೇಳು ಮಹಾತ್ಮರಿಂದ ನಿಂದಿತವಾದ ಈ ವೃತ್ತಾಂತವು ಅತ್ಯಂತ ಗೋಪ್ಯವಾದುದರಿಂದ ಯಾರಿಗೂ ಹೇಳಬಾರದು

೩೧. ಒಮ್ಮೆ ಬ್ರಹ್ಮದೇವನು ಪ್ರಜೆಗಳನ್ನು ಸೃಷ್ಟಿಮಾಡುವಂತೆ ನನ್ನಿಂದ ಪ್ರೇರಿತನಾಗಿ, ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುವ ಕೆಲವು ಮಾನಸಪುತ್ರರನ್ನು ಸೃಷ್ಟಿಮಾಡಿದನು.

ಸನಕಂ ಚ ಸನಂದಂ ಚ ಸನಾತನಮನುತ್ತಮಂ ।
ಸನತ್ಕುಮಾರಂ ವೋಢುಂ ಚ ಕಪಿಂ ಪಂಚಶಿಖಂ ವಿಭುಂ ॥ ೩೨ ॥

ಅಸಿತಂ ಕಪಿಲಂ ಸಿದ್ಧಂ ಸಿದ್ಧಾನ್ ಮಮ ಕಲೋದ್ಭವಾನ್ ।
ತಾನ್ನಗ್ನಾನ್ ಪಂಚವರ್ಷೀಯಾನ್ ಪಿತಾ ಸ್ರಷ್ಟುಂ ಜಗಾದ ಹ ॥ ೩೩ ॥

ಪ್ರಜಾಃ ಸ್ರಷ್ಟುಂ ಪ್ರೇರಕಂ ಚ ಜನಕಂ ತೇವಮನ್ಯ ಚ ।
ಪ್ರಜಗ್ಮುಸ್ತಪಸೇ ತೂರ್ಣಂ ಮದಾರ್ಚನಪರಾಯಣಾಃ ॥ ೩೪ ॥

ತದಾ ರುಷ್ಟೋ ಜಗದ್ಧಾತಾ ಪುನಃ ಪುತ್ರಾನ್ ವಿನಿರ್ಮಮೇ ।
ರುದ್ರಾನೇಕಾದಶ ವರಾನ್ರುದತೋ ಭೀಮವಿಗ್ರಹಾನ್ ॥ ೩೫ ॥

ತಸ್ಮಿನ್ ಪ್ರಯುಜ್ಯ ತರಸಾ ಪುನಃ ಪುತ್ರಾನ್ ವಿನಿರ್ಮಮೇ ।
ಯೋಗೀ ಯೋಗೇನ ಮಾಂ ಧ್ಯಾತ್ವಾ ಸ್ವಾತ್ಮಾರಾಮಃ ಸ್ವವಿಗ್ರಹೇ ॥ ೩೬ ॥

೩೨–೩೩. ಸನಕ ಸನಂದನರನ್ನೂ, ಶ್ರೇಷ್ಠನಾದ ಸನಾತನನನ್ನೂ, ಸನತ್ಕುಮಾರ, ವೋಢು, ಕಪಿ, ಪಂಚಶಿಖ ಮತ್ತು ವಿಭುವನ್ನೂ, ಅಸಿತ, ಕಪಿಲ, ಮತ್ತು ಸಿದ್ಧನನ್ನೂ ನನ್ನ ಕಲೆಯಿಂದ ಬೆಳಗುವ ಅನೇಕ ಸಿದ್ಧಪುರುಷರನ್ನೂ ಬ್ರಹ್ಮನು ಮನಸ್ಸಿನಿಂದಲೇ ಸೃಷ್ಟಿಮಾಡಿ ಐದುವರ್ಷ ವಯಸ್ಸಿನವರೂ ನಗ್ನ (ಬೆತ್ತಲೆಯಾಗಿರುವವರು) ರೂ ಆದ ಆ ಪುತ್ರರನ್ನು ಕುರಿತು ಸೃಷ್ಟಿಯನ್ನು ಮುಂದುವರಿಸಲು ಹೇಳಿದನು.

೩೪. ಪ್ರಜೆಗಳನ್ನು ಸೃಷ್ಟಿಮಾಡಲು ಪ್ರೇರೇಪಿಸಿದ ತಮ್ಮ ತಂದೆಯನ್ನು ಆ ಸನಕಾದಿಗಳು ಧಿಕ್ಕರಿಸಿ, ನನ್ನ ಪೂಜಾಧ್ಯಾನಗಳಲ್ಲಿ ನಿರತರಾಗಿ ಜಾಗ್ರತೆ ತಪಸ್ಸಿಗೆ ಹೊರಟುಹೋದರು.

೩೫. ಆಗ ಕುಪಿತನಾದ ಬ್ರಹ್ಮದೇವನು ಪುನಃ ಸೃಷ್ಟಿಗೆ ತೊಡಗಿ ಏಕಾದಶ ರುದ್ರರನ್ನು ಸೃಷ್ಟಿಮಾಡಿದನು ಭಯಂಕರಸ್ವರೂಪಿಗಳಾದ ಆ ರುದ್ರರು ಅಳುತ್ತಲೇ ಜನಿಸಿದರು.

೩೬. ಅವರಿಗೂ ಸೃಷ್ಟಿಕಾರ್ಯವನ್ನು ನಿಯಮಿಸಿ, ಪರಮಯೋಗಿಯೂ, ಸ್ವಾತ್ಮಾರಾಮನೂ ಆದ ಬ್ರಹ್ಮನು ಯೋಗಬಲದಿಂದ ನನ್ನನ್ನು ಧ್ಯಾನಿಸಿ ತನ್ನ ಶರೀರದಿಂದಲೇ ಪುನಃ ಮುಂದೆ ಹೇಳುವ ಈ ಮಾನಸಪುತ್ರರನ್ನು ಸೃಷ್ಟಿಮಾಡಿದನು.

ವಸಿಷ್ಠಂ ಪುಲಹಂ ಚೈವ ಕ್ರತುಮಂಗಿರಸಂ ತಥಾ ।
ಭೃಗುಮತ್ರಿಂ ಪುಲಸ್ತ್ಯಂ ಚ ದಕ್ಷಂ ಕರ್ದಮಮೇವ ಚ ॥ ೩೭ ॥

ಮರೀಚಿಂ ಚ ವಿನಿರ್ಮಾಯ ಪ್ರಜಾಃ ಸ್ರಷ್ಟುಂ ನಿಯುಜ್ಯ ಚ ।
ಪ್ರಹೃಷ್ಟಮಾನಸಃ ಪುತ್ರಂ ಕನ್ಯಾಮೇಕಾಂ ಸಸರ್ಜ ಹ ॥ ೩೮ ॥

ಕೃಷ್ಣಸ್ಯ ಕಾಮಿನಃ ಪುತ್ರಃ ಕಾಮದೇವೋ ಬಭೂವ ಹ ।
ಕನ್ಯಾ ಷೋಡಶವರ್ಷೀಯಾ ರತ್ನಭೂಷಣಭೂಷಿತಾ ॥ ೩೯ ॥

ಉವಾಚ ಪುತ್ರಂ ಸ ವಿಧಿಃ ಸುದೀಪ್ತಂ ಪುರತಃ ಸ್ಥಿತಂ ।
ದುರ್ನಿವಾರ್ಯಂ ಮತ್ಕಲಾಂಶಂ ಸ್ವಾತ್ಮಾರಾಮಂ ಮನೋಹರಂ ॥ ೪೦ ॥

॥ ಬ್ರಹ್ಮೋವಾಚ ॥

ಸ್ತ್ರೀಪುಂಸೋಃ ಕ್ರೀಡನಾರ್ಥಾಯ ಮುದಾ ತ್ವಂ ಚ ವಿನಿರ್ಮಿತಃ ।
ಹೃದಿ ಯೋಗೇನ ಸರ್ವೇಷಾಮಧಿಷ್ಠಾನಂ ಕರಿಷ್ಯಸಿ ॥ ೪೧ ॥

೩೭-೩೮. ವಸಿಷ್ಠ, ಪುಲಹ, ಕ್ರತು, ಅಂಗಿರಸ, ಭೃಗು, ಅತ್ರಿ, ಪುಲಸ್ತ್ಯ, ದಕ್ಷ, ಕರ್ದಮ, ಮರೀಚಿ ಎಂಬ ಹತ್ತುಜನ ಮಾನಸಪುತ್ರರನ್ನು ಸೃಷ್ಟಿಮಾಡಿ ಅವರನ್ನು ಪ್ರಜಾಸೃಷ್ಟಿಯ ಕಾರ್ಯದಲ್ಲಿ ನಿಯಮಿಸಿ, ಪ್ರಹೃಷ್ಟಾಂತರಂಗನಾಗಿ ಮತ್ತೊಬ್ಬ ಯುವಕನನ್ನೂ, ಕನ್ಯೆಯನ್ನೂ ಸಹ ಸೃಷ್ಟಿಮಾಡಿದನು.

೩೯. ಕಾಮಿಯಾದ ಕೃಷ್ಣನ ಅಂಶದಿಂದ ಜನಿಸಿದ ಆ ಪುತ್ರನು ಕಾಮದೇವ ನೆನಿಸಿಕೊಂಡನು. ಸುಮಾರು ಹದಿನಾರು ವರ್ಷದ ಪ್ರಾಯವುಳ್ಳ ಆ ಕನ್ಯೆಯೂ ಸಹ ರತ್ನಾಲಂಕಾರಗಳಿಂದ ಶೋಭಿಸುತ್ತಿದ್ದಳು.

೪೦. ಅನಂತರ ಬ್ರಹ್ಮನು ತನ್ನ ಮುಂದೆ ನಿಂತಿರುವ ತೇಜಸ್ವಿಯೂ, ನನ್ನ ಕಲೆಯಿಂದ ಜನಿಸಿದವನೂ, ಸ್ವಾತ್ಮಾರಾಮನೂ, ಸುಂದರನೂ, ಅಪ್ರತಿಹತಪರಾಕ್ರಮಿಯೂ ಆದ ಕಾಮದೇವನನ್ನು ಕುರಿತು ಇಂತೆಂದನು.

೪೧. ಬ್ರಹ್ಮ:—ಸ್ತ್ರೀಪುರುಷರಿಗೆ ರತಿಕ್ರೀಡಾಸುಖವನ್ನುಂಟುಮಾಡಲೋಸುಗ ನೀನು ಸಂತೋಷದಿಂದ ಸೃಷ್ಟಿಮಾಡಲ್ಪಟ್ಟಿದ್ದೀಯೆ. ಯೋಗಶಕ್ತಿಯಿಂದ ಎಲ್ಲರ ಹೃದಯದಲ್ಲೂ ನೀನು ಅಧಿಷ್ಠಾನವನ್ನು ಹೊಂದುವೆ.

ಸಂಮೋಹನಂ ಸಮುದ್ವೇಗಂ ಬೀಜಸ್ತಂಭಿತಕಾರಣಂ ।
ಉನ್ಮತ್ತಬೀಜಂ ಜ್ವಲದಂ ಶಶ್ವಚ್ಚೇತನಹಾರಕಂ ॥ ೪೨ ॥

ಪ್ರಗೃಹ್ಯೈತಾನ್ ಮಯಾ ದತ್ತಾನ್ ಸರ್ವಾನ್ ಸಂಮೋಹನಂ ಕುರು ।
ದುರ್ನಿವಾರ್ಯೋ ಮಮ ವರಾದ್ಭವ ವತ್ಸ ಭವೇಷು ಚ ॥ ೪೩ ॥

ಬಾಣಾನ್ ದತ್ತ್ವೈವಮುಕ್ತ್ವಾ ಚ ಪ್ರಹೃಷ್ಟಶ್ಚ ಜಗದ್ವಿಧಿಃ ।
ದೃಷ್ಟ್ವೋವಾಚ ದುಹಿತರಂ ವರಂ ದಾತುಂ ಸಮುದ್ಯತಃ ॥ ೪೪ ॥

ಏತಸ್ಮಿನ್ನಂತರೇ ಕಾಮೋ ಮನಸಾಲೋಚ್ಯ ಮಂತ್ರಣಾಂ ।
ಕರ್ತುಂ ಶಸ್ತ್ರಪರೀಕ್ಷಾಂ ಚ ಬಾಣಾಂಶ್ಚಿಕ್ಷೇಪ ಬ್ರಹ್ಮಣಿ ॥ ೪೫ ॥

ಮಂತ್ರಪೂತೈಶ್ಚ ಬಾಣೈಶ್ಚ ದುರ್ವಾರ್ಯೈಃ ಸ್ಮರಣೇನ ಚ ।
ಅತಿವಿದ್ಧೋ ಮಹಾಯೋಗೀ ಮೂರ್ಛಿತೋ ಹತಚೇತನಃ ॥ ೪೬ ॥

೪೨-೪೩. ಸಕಲರಿಗೂ ಸಂಮೋಹಕವೂ, ಸಮುದ್ವೇಗಕರವೂ, ಸ್ತಂಭನ ಕಾರಕವೂ, ಉನ್ಮಾದಕಾರಕವೂ, ದಾಹದಿಂದ ಚೇತನಹಾರಕವೂ ಆದ ಈ ಬಾಣ ಗಳನ್ನು ನನ್ನಿಂದ ಸ್ವೀಕರಿಸಿ ಎಲ್ಲರನ್ನೂ ಸಂಮೋಹನಗೊಳಿಸು. ಎಲೈ ವತ್ಸನೇ, ನನ್ನ ವರದಿಂದ ನೀನು ಎಲ್ಲೆಲ್ಲಿಯೂ ಅಪ್ರತಿಹತ ಪರಾಕ್ರಮವುಳ್ಳವನಾಗು.

೪೪. ಈ ರೀತಿಯಾಗಿ ವಿಧಾತನು ತನ್ನ ಪುತ್ರನಾದ ಕಾಮದೇವನಿಗೆ ಪಂಚ ಬಾಣಗಳನ್ನು ಕೊಟ್ಟು ಆಶೀರ್ವದಿಸಿದುದಲ್ಲದೆ ತನ್ನ ಪುತ್ರಿಯನ್ನೂ ಸಹ ನೋಡಿ ವರವನ್ನು ಅನುಗ್ರಹಿಸಲುದ್ಯುಕ್ತನಾದನು.

೪೫. ಇಷ್ಟರೊಳಗೆ ಮನ್ಮಥನು ಮನಸ್ಸಿನೊಳಗೆ ಪರ್ಯಾಲೋಚನೆಮಾಡಿ ತನ್ನ ಶಸ್ತ್ರಸಾಮರ್ಥ್ಯವನ್ನು ಪರೀಕ್ಷಿಸಲೋಸುಗ ಬ್ರಹ್ಮನ ಮೇಲೆ ಬಾಣಗಳನ್ನು ಪ್ರಯೋಗಮಾಡಿದನು.

೪೬. ಮಂತ್ರಪೂತವೂ, ಅಪ್ರತಿಹತವೂ ಆದ ಮನ್ಮಥಬಾಣದಿಂದ ಹತನಾದ ಮಹಾಯೋಗಿಯಾದ ಬ್ರಹ್ಮನು ಹತಚೇತನನಾಗಿ ಮೂರ್ಛಾಕ್ರಾಂತನಾದನು.

ಕ್ಷಣೇನ ಚೇತನಾಂ ಪ್ರಾಪ್ಯ ದದರ್ಶಾಗ್ರೇ ಚ ಕನ್ಯಕಾಂ ।
ತಾಂ ಸಂಭೋಕ್ತುಂ ಮನಶ್ಚಕ್ರೇ ಸಾ ದುದ್ರಾವ ಭಿಯಾ ಸತೀ ॥ ೪೭ ॥

ದೃಷ್ಟ್ವಾ ಪಶ್ಚಾಚ್ಚ ಪಿತರಂ ಧಾವಂತಂ ಹತಚೇತನಂ ।
ಜಗಾಮ ಶರಣಂ ಶೀಘ್ರಂ ಭ್ರಾತೃಣಾಂ ಚ ತಪಸ್ವಿನಾಂ ॥ ೪೮ ॥

ತೇ ತಾಂ ಸಮೀಪೇ ಸಂಸ್ಥಾಪ್ಯ ತಮೂಚುಃ ಪಿತರಂ ಕ್ರುಧಾ ।
ಹಿತಂ ತಥ್ಯಂ ಚ ವೇದೋಕ್ತಂ ನೀತಿಸಾರಂ ಪರಂ ವಚಃ ॥ ೪೯ ॥

॥ ಋಷಯ ಊಚುಃ ॥

ಅಹೋ ಕಿಮೇತಜ್ಜನಕ ಕರ್ಮ ತೇऽತಿವಿಗರ್ಹಿತಂ ।
ನೀಚಾನಾಂ ಚರಿತಂ ಯತ್ತ್ವತ್ ಕರೋಷಿ ತ್ವಂ ಜಗದ್ವಿಧೇ ॥ ೫೦ ॥

---

೪೭ ಕ್ಷಣಕಾಲದಲ್ಲಿಯೇ ಚೇತನವನ್ನು ಹೊಂದಿ ತನ್ನ ಮುಂದಿರುವ ಸುಂದರಿಯಾದ ಕನ್ನಿಕೆಯನ್ನು ನೋಡಿ ಅವಳೊಡನೆ ಸುಖಸಂಭೋಗವನ್ನು ಬಯಸಲು ಆ ಕನ್ನಿಕೆಯು ಹೆದರಿ ಓಡಿಹೋದಳು.

೪೮. ಹತಚೇತನನಾಗಿ ತನ್ನ ಬೆನ್ನು ಹಿಂದೆಯೇ ಅಟ್ಟಿಸಿಕೊಂಡು ಬರುತ್ತಿದ್ದ ತನ್ನ ತಂದೆಯನ್ನು ನೋಡಿ ಆ ಕನ್ನಿಕೆಯು ತಪಸ್ವಿಗಳಾದ ತನ್ನ ಸಹೋದರರ ಮರೆಹೊಕ್ಕಳು.

೪೯. ಅವರು ತಮ್ಮ ಸಹೋದರಿಯನ್ನು ಹತ್ತಿರ ಕುಳ್ಳಿರಿಸಿಕೊಂಡು, ತಂದೆಯ ವಿಷಯದಲ್ಲಿ ಕುಪಿತರಾಗಿ ಹಿತವೂ, ಸತ್ಯವೂ, ವೇದೋಕ್ತವೂ ಆದ ಪರಮ ನೀತಿಯ ವಾಕ್ಯಗಳನ್ನು ತಂದೆಗೆ ಹೇಳಿದರು.

೫೦ ಋಷಿಗಳು :—ಎಲೈ ತಂದೆಯೇ, ನೀನು ಜಗತ್ಸೃಷ್ಟಿಕರ್ತನೆನಿಸಿಕೊಂಡು ಎಲ್ಲರಿಂದಲೂ ನಿಂದಿತವಾದ ಈ ನೀಚಕರ್ಮವನ್ನಾಚರಿಸಲು ತೊಡಗಿರುವೆಯಲ್ಲಾ ! ಇದು ನಿನಗುಚಿತವೇ ?

ಪಶ್ಯಂತಿ ಸತತಂ ಸಂತಃ ಪ್ರಸೂಮಿವ ಪರಸ್ತ್ರಿಯಂ ।
ಯೇ ತೇ ಸರ್ವತ್ರ ಪೂಜ್ಯಾಶ್ಚ ಪರತ್ರೇಹ ಜಿತೇಂದ್ರಿಯಾಃ ॥ ೫೧ ॥

ತ್ವಂ ಸ್ವಯಂ ವೇದಕರ್ತಾ ಚ ಕನ್ಯಾಂ ಸಂಭೋಕ್ತುಮಿಚ್ಛಸಿ ।
ಕನ್ಯಾ ಚ ಮಾತೃವರ್ಗೇಷು ಪ್ರವಿಷ್ಟಾ ಚ ಶ್ರುತೌ ಶ್ರುತಾ ॥ ೫೨ ॥

ಗುರೋಃ ಪತ್ನೀ ರಾಜಪತ್ನೀ ವಿಪ್ರಪತ್ನೀ ಚ ಯಾ ಸತೀ ।
ಪತ್ನೀ ಚ ಭ್ರಾತೃಸುತಯೋಃ ಮಿತ್ರಪತ್ನೀ ಚ ತತ್ಪ್ರಸೂಃ ॥ ೫೩ ॥

ಪ್ರಸೂಃ ಪಿತ್ರೋಸ್ತಥಾ ಭ್ರಾತುಃ ಪತ್ನೀ ಶ್ವಶ್ರೂಃ ಸ್ವಕನ್ಯಕಾಃ ।
ಜನನೀ ತತ್ಸಪತ್ನೀ ಚ ಭಗಿನೀ ಸುರಭೀ ತಥಾ ॥ ೫೪ ॥

ಸ್ವಾಭೀಷ್ಟಸುರಪತ್ನೀ ಚ ಧಾತ್ರಿಕಾನ್ನಪ್ರದಾಯಿಕಾ ।
ಗರ್ಭಧಾತ್ರೀ ಸ್ವನಾಮ್ನಾ ಚ ಭಯಾತ್ತ್ರಾತುಶ್ಚ ಕಾಮಿನೀ ॥ ೫೫ ॥

---

೫೧. ಯಾರು ಎಲ್ಲ ಕಡೆಯಲ್ಲೂ ಜಿತೇಂದ್ರಿಯರಾಗಿ ಪೂಜ್ಯರೆನಿಸಿಕೊಂಡಿರುವರೋ ಅಂಥ ಸತ್ಪುರುಷರು ಪರಸ್ತ್ರೀಯರನ್ನೂ ಸಹ ಸರ್ವದಾ ತಮ್ಮ ಹೆಣ್ಣುಮಗಳಂತೆ ಭಾವಿಸುತ್ತಾರೆ.

೫೨ ಹೀಗಿರುವಾಗ ನೀನು ಸ್ವತಃ ವೇದಕರ್ತೃವಾಗಿ ನಿನ್ನಲ್ಲಿ ಜನಿಸಿದ ಕನ್ಯೆಯೊಡನೆ ಸಂಭೋಗಿಸಲು ಇಚ್ಛಿಸುವೆಯಲ್ಲಾ! ಕನ್ಯೆಯೂ ಸಹ ಮಾತೃಸಮಾನಳೆಂದು ಶ್ರುತಿಯಲ್ಲಿ ಪ್ರತಿಪಾದಿಸಿಲ್ಲವೇ?

೫೩. ಗುರುಪತ್ನಿಯೂ, ರಾಜಪತ್ನಿಯೂ, ವಿಪ್ರಪತ್ನಿಯೂ, ಸಹೋದರ ಮತ್ತು ಸುತನ ಪತ್ನಿಯರೂ, ಮಿತ್ರನ ಪತ್ನಿಯರೂ ಅವನ ತಾಯಿಯೂ ಸಹ ಎಲ್ಲರಿಗೂ ತಾಯಿಗೆ ಸಮಾನರೆನಿಸುವರು.

೫೪. ತಂದೆತಾಯಿಯರ ತಾಯಿಯೂ, ಸಹೋದರನ ಪತ್ನಿಯೂ, ಅತ್ತೆ (ಹೆಂಡತಿಯ ತಾಯಿ) ಯೂ, ತನ್ನ ಹೆಣ್ಣುಮಕ್ಕಳೂ, ತಾಯಿ ಮತ್ತು ಆಕೆಯ ಸವತಿಯೂ, ಸಹೋದರಿಯೂ (ಸುರಭಿಯೂ) ಸಹ ತಾಯಿಗೆ ಸಮಾನರು.

೫೫. ತನಗೆ ಅಭಿಮತವಾದ ದೇವಪತ್ನಿಯೂ, ಅನ್ನದಾತೆಯೂ, ದಾದಿಯೂ, ಗರ್ಭದಲ್ಲಿ ಧರಿಸಿದವಳೂ ಭಯದಿಂದ ರಕ್ಷಣೆಮಾಡಿದವನ ಪತ್ನಿಯೂ, ಸಹ ತಾಯಿಗೆ ಸಮಾನರು.

ಏತಾ ವೇದಪ್ರಣೀತಾಶ್ಚ ಸರ್ವೇಷಾಂ ಮಾತರಃ ಸ್ಮೃತಾಃ ।
ಏತಾಸ್ವಪಿ ಚ ಸರ್ವಾಸು ನ್ಯೂನತಾ ನಾಸ್ತಿ ತಾಸು ಚ ॥ ೫೬ ॥

ಕನ್ಯಾದಾತಾನ್ನದಾತಾ ಚ ಜ್ಞಾನದಾತಾsಭಯಪ್ರದಃ ।
ಜನ್ಮದೋ ಮಂತ್ರದೋ ಜ್ಯೇಷ್ಠಭ್ರಾತಾ ಚ ಪಿತರಃ ಸ್ಮೃತಾಃ ॥ ೫೭ ॥

ಏತಾ ವಹಂತಿ ಯೇ ಮೂಢಾ ಯಾ ಏತಾನ್ ಜನಕಾನಪಿ ।
ಪಚ್ಯಂತೇ ನರಕೇ ತೇ ಚ ಯಾವದ್ವೈ ಬ್ರಹ್ಮಣೋ ವಯಃ ॥ ೫೮ ॥

ತಾನಂಧಕೂಪೇ ಸಂಸ್ಥಾಪ್ಯ ದೂರತೋ ಯಮಕಿಂಕರಾಃ ।
ಕುರ್ವಂತಿ ತಾಡನಂ ಶಶ್ವತ್ ಪುರೀಷಂ ಪಾಯಯಂತಿ ಚ ॥ ೫೯ ॥

ತ್ವಮೇವ ವಿಶ್ವಕರ್ತಾ ಚ ಶಾಸ್ತಾ ವೈ ಶಮನಸ್ಯ ಚ ।
ಸ್ವಯಂ ವಿಧಾತಾ ಜಗತಾಂ ತೇನ ಗೃಹ್ಣಾಸಿ ಕನ್ಯಕಾಂ ॥ ೬೦ ॥

---

೫೬. ಮೇಲೆ ಹೇಳಿದವರೆಲ್ಲರೂ ಎಲ್ಲರಿಗೂ ಮಾತೃಸಮಾನರೆಂದು ವೇದದಲ್ಲಿ ಉಕ್ತವಾಗಿದೆ. ಇವರೊಳಗೆ ನ್ಯೂನತೆಯಾಗಲೀ, ಆಧಿಕ್ಯವಾಗಲೀ ಇರುವುದಿಲ್ಲ.

೫೭. ಮಗಳನ್ನು ಕೊಟ್ಟ ಮಾವನೂ, ಅನ್ನದಾನಮಾಡಿದವನೂ, ಜ್ಞಾನ ದಾನ ಮಾಡಿದವನೂ, ಅಭಯಕೊಟ್ಟವನೂ, ಜನ್ಮಕಾರಣನಾದ ತಂದೆಯೂ, ಮಂತ್ರೋಪದೇಶಕನೂ, ಜ್ಯೇಷ್ಠಸಹೋದರನೂ ಸಹ ತಂದೆಗೆ ಸಮಾನರು.

೫೮. ಯಾವ ಮೂಢಮನುಜರು ಮೇಲೆ ಹೇಳಿದ ಸ್ತ್ರೀಯರನ್ನು ವರಿಸುವರೋ ಅದೇ ರೀತಿ ಯಾವ ಮೂಢ ಸ್ತ್ರೀಯರು ಮೇಲೆ ಹೇಳಿದ ಪುರುಷರನ್ನು ವರಿಸುವರೋ ಅವರೆಲ್ಲರೂ ಬ್ರಹ್ಮನ ಆಯುಃಪರಿಮಾಣದಷ್ಟು ಕಾಲ ಘೋರ ನರಕದಲ್ಲಿ ತೊಳಲುವರು.

೫೯. ಇವರೆಲ್ಲರನ್ನೂ ಯಮಕಿಂಕರರು ಅಂಧಕೂಪವೆಂಬ ನರಕದಲ್ಲಿರಿಸಿ ದೂರದಿಂದಲೇ ಇವರನ್ನು ಹೊಡೆಯುವುದಲ್ಲದೆ ಇವರೆಲ್ಲರಿಗೂ ಮಲಮೂತ್ರಗಳನ್ನು ಬಲಾತ್ಕಾರದಿಂದ ತಿನ್ನಿಸುತ್ತಾರೆ.

೬೦. ಎಲೈ ತಂದೆಯೇ, ನೀನು ಸೃಷ್ಟಿಕರ್ತನೂ, ಯಮನಿಗೆ ಶಾಸಕನೂ ಆಗಿರುವೆ. ಜಗತ್ಸೃಷ್ಟಿಕರ್ತನಾದ ನೀನೇ ನಿನ್ನ ಮಗಳನ್ನು ಬಯಸಿ ಸ್ವೀಕರಿಸುವುದುಚಿತವೇ?

ಅಸ್ಮಾಕಂ ಪುರತೋ ದೂರಂ ಗಚ್ಛ ಕಾಮಾರ್ತಮಾನಸ ।
ನ ಕುರ್ಮೋ ಭಸ್ಮಸಾತ್ಕರ್ತುಂ ಶಕ್ತಾಶ್ಚ ಜನಕಂ ವಯಂ ॥ ೬೧ ॥

ಗುರೋರ್ದೋಷಸಹಸ್ರಾಣಿ ಕ್ಷಂತುಮರ್ಹಂತಿ ಪಂಡಿತಾಃ ।
ಸರ್ವಘ್ನಂ ತಂ ವಿನಿಘ್ನಂತಿ ನೀತಿಜ್ಞಾಃ ಸ್ವಗುರುಂ ವಿನಾ ॥ ೬೨ ॥

ಗೃಹ್ಣಂತಂ ಯದಿ ಸರ್ವಸ್ವಂ ಶಪಂತಂ ನಿಷ್ಠುರಂ ಗುರುಂ ।
ಸಾಧವಸ್ತಂ ನ ನಿಂದಂತಿ ಪ್ರಣಮಂತಿ ಸ್ವಭಕ್ತಿತಃ ॥ ೬೩ ॥

ಯೇ ದ್ವಿಷಂತಿ ಚ ನಿಂದಂತಿ ಗುರುಮಿಷ್ಟಂ ಸುರಾತ್ಪರಂ ।
ಪಚ್ಯಂತೇ ತೇಽಂಧಕೂಪೇ ಚ ಯಾವಚ್ಚಂದ್ರದಿವಾಕರೌ ॥ ೬೪ ॥

ಪುರೀಷಂ ಭುಂಜತೇ ನಿತ್ಯಂ ಕ್ಷುಭಿತಾ ಯಮತಾಡನೈಃ ।
ಸರ್ಪಪ್ರಮಾಣಕೀಟೈಶ್ಚ ದಂಶಿತಾಶ್ಚ ದಿವಾನಿಶಂ ॥ ೬೫ ॥

---

೬೧. ಎಲೈ ಕಾಮಪೀಡಿತಮನಸ್ಕನೇ, ನಮ್ಮ ಮುಂದೆ ನಿಲ್ಲದೆ ದೂರಹೋಗು. ನಾವು ಶಾಪದಿಂದ ಬೂದಿಮಾಡಬಲ್ಲ ಶಕ್ತಿಯನ್ನು ಹೊಂದಿದ್ದರೂ ನಮ್ಮ ಜನಕನಾದ ನಿನ್ನನ್ನು ಭಸ್ಮಮಾಡಲು ಇಚ್ಛಿಸುವುದಿಲ್ಲ.

೬೨. ಪಂಡಿತರಾದವರು ತಮ್ಮ ಗುರುವಿನ (ತಂದೆಯ) ಸಾವಿರ ದೋಷಗಳನ್ನಾದರೂ ಸಹಿಸಬೇಕು. ನೀತಿಶಾಸ್ತ್ರವಿಶಾರದರು ತಮ್ಮ ಗುರುವನ್ನು ಬಿಟ್ಟು ಧರ್ಮಬಾಹಿರರಾದ ಇತರರೆಲ್ಲರನ್ನೂ ನಾಶಗೊಳಿಸುವರು

೬೩. ಆದರೆ ತಮ್ಮ ಸರ್ವಸ್ವವನ್ನೂ ಕಿತ್ತುಕೊಳ್ಳುವ ಮತ್ತು ನಿಷ್ಠುರವಾಗಿ ಶಾಪಕೊಡುವ ಗುರುವನ್ನು ಸಾಧುಗಳು ನಿಂದಿಸುವುದಿಲ್ಲ. ಅಷ್ಟೇ ಅಲ್ಲ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತಾರೆ.

೬೪. ದೇವತೆಗಿಂತಲೂ ಮೇಲೆನಿಸಿದ ತನ್ನ ಗುರು (ತಂದೆ, ವನ್ನು ಯಾರು ದ್ವೇಷಿಸುವರೋ ಮತ್ತು ನಿಂದಿಸುವರೋ ಅವರು ಚಂದ್ರಸೂರ್ಯರಿರುವವರೆಗೂ ಅಂಧಕೂಪವೆಂಬ ನರಕದಲ್ಲಿ ತೊಳಲುವರು.

೬೫. ಅಲ್ಲಿ ಯಮಕಿಂಕರರ ಪೆಟ್ಟಿನಿಂದ ವ್ಯಥೆಗೊಂಡವರಾಗಿ ನಿತ್ಯವೂ ಮಲಭಕ್ಷಕರಾಗಿರುವರಲ್ಲದೆ ಹಗಲೂ ರಾತ್ರಿ ಸರ್ಪಪ್ರಮಾಣದ ಕೀಟಗಳಿಂದ ಕಚ್ಚಲ್ಪಟ್ಟು ದುಃಖಿತರಾಗುವರು.

ಇತ್ಯೇವಮುಕ್ತ್ವಾ ಮುನಯಃ ಪ್ರಣೇಮುಸ್ತತ್ಪದಾಂಬುಜಂ ।
ಸರ್ವಂ ಭವತಿ ದೈವೇನ ಪ್ರಶಾಂತಮನಸಾ ಧ್ರುವಂ ॥ ೬೬ ॥

ಉನ್ಮುಖಾ ಮುನಯಃ ಸರ್ವೇ ಬಭೂವುಶ್ಚ ಸ್ವಕರ್ಮಣಿ ।
ಬ್ರಹ್ಮಾ ಶರೀರಂ ಸಂತ್ಯಕ್ತುಂ ವ್ರೀಡಯಾ ಚ ಸಮುದ್ಯತಃ ॥ ೬೭ ॥

ಯೋಗೇನ ಭಿತ್ವಾ ಷಟ್ ಚಕ್ರಂ ಸರ್ವಾನ್ ಪ್ರಾಣಾನ್ನಿರುಧ್ಯ ಚ ।
ಬ್ರಹ್ಮರಂಧ್ರಂ ಸಮಾನೀಯ ತತ್ಯಾಜ ಸ್ತೇನ ವರ್ತ್ಮನಾ ॥ ೬೮ ॥

ಮನಸಾ ಶ್ರೀಹರಿಂ ಸ್ಮೃತ್ವಾ ನಮಸ್ಕಾರಂ ಚಕಾರ ಹ ।
ನ ಮೇ ಮನಃ ಪರದ್ರವ್ಯೇ ಭವಿತಾ ಸ್ತ್ರೋತ್ರೀಕವಿಮಾಶ್ವರ ॥ ೬೯ ॥

ಪ್ರಾಣತ್ಯಾಗಾತ್ಪರಂ ದುಃಖಮಯಶಶ್ಚ ಯಶಸ್ವಿನಾಂ ।
ಬಭೂವ ಹೃದಿ ಕೃತ್ವೈಕಂ ಬ್ರಹ್ಮಾ ಲೀನಶ್ಚ ಬ್ರಹ್ಮಣಿ ॥ ೭೦ ॥

---

೬೬. ಋಷಿಗಳೆಲ್ಲರೂ ಈ ರೀತಿಯಾಗಿ ಹೇಳಿ ಬ್ರಹ್ಮನ ಪಾದಕಮಲಗಳಿಗೆ ನಮಸ್ಕರಿಸಿದರು. ಅಲ್ಲದೆ ಎಲ್ಲವೂ ದೈವೇಚ್ಛೆಯಂತೆ ನಡೆಯುವುದೆಂದು ಹೇಳಿ ಪ್ರಶಾಂತಮನಸ್ಕರಾದರು.

೬೭. ಈ ರೀತಿಯಾಗಿ ಹೇಳಿ ಋಷಿಗಳೆಲ್ಲರೂ ತಮ್ಮ ತಮ್ಮ ಕಾರ್ಯದಲ್ಲಿ ನಿರತರಾದರು. ಇತ್ತ ಬ್ರಹ್ಮನು ಲಜ್ಜೆಯಿಂದ ಕೂಡಿ ತನ್ನ ಶರೀರವನ್ನು ತ್ಯಾಗ ಮಾಡಲುದ್ಯುಕ್ತನಾದನು.

೬೮. ಯೋಗಬಲದಿಂದ ಮೂಲಾಧಾರವೇ ಮುಂತಾದ ಷಟ್ಚಕ್ರಗಳನ್ನು ಭೇದಿಸಿಕೊಂಡು ಪಂಚಪ್ರಾಣವಾಯುವನ್ನು ಬಿಗಿಹಿಡಿದು ಬ್ರಹ್ಮರಂಧ್ರಕ್ಕೆ ತಂದು ತನ್ಮೂಲಕವಾಗಿ ಪ್ರಾಣತ್ಯಾಗ ಮಾಡಿದನು.

೬೯. ಆ ಸಮಯದಲ್ಲಿ ಬ್ರಹ್ಮನು ಮನಸ್ಸಿನಲ್ಲಿಯೇ ಶ್ರೀಹರಿಯನ್ನು ಧ್ಯಾನ ಮಾಡಿ ನಮಸ್ಕರಿಸಿದುದಲ್ಲದೆ, " ಎಲೈ ಸರ್ವೇಶ್ವರನೇ, ನಿನ್ನ ಅನುಗ್ರಹದಿಂದ ನನ್ನ ಮನಸ್ಸು ಪರದ್ರವ್ಯದಲ್ಲಿ ಆಸಕ್ತವಾಗದಿರಲಿ " ಎಂದು ಬೇಡಿದನು.

೭೦. ' ಕೀರ್ತಿಶಾಲಿಗಳಿಗೆ ಪ್ರಾಣತ್ಯಾಗಕ್ಕಿಂತ ದುಃಖವೂ ಅಪಕೀರ್ತಿ ದಾಯಕವೂ ಬೇರೊಂದಿಲ್ಲ " ಎಂಬುದಾಗಿ ಮನಸ್ಸಿನಲ್ಲಿಯೇ ಧ್ಯಾನಿಸುತ್ತ ಬ್ರಹ್ಮನು ಪರಬ್ರಹ್ಮದಲ್ಲಿ ಲೀನನಾದನು.

ಕನ್ಯಾ ತಾತಂ ಮೃತಂ ದೃಷ್ಟ್ವಾ ವಿಲಪ್ಯ ಚ ಭೃಶಂ ಮುಹುಃ ।
ಯೋಗೇನ ದೇಹಂ ತತ್ಯಾಜ ಸಾ ಪ್ರಲೀನಾ ಚ ಬ್ರಹ್ಮಣಿ ॥ ೭೧ ॥

ಮೃತಂ ತಾತಂ ಚ ಭಗಿನೀಂ ದೃಷ್ಟ್ವಾ ಚ ಮುನಿಪುಂಗವಾಃ ।
ಸಸ್ಮರುಃ ಶ್ರೀಹರಿಂ ಕೋಪಾತ್ ಸ್ವಾತ್ಮಾರಾಮಂ ವಿಲಪ್ಯ ಚ ॥ ೭೨ ॥

ನಾರಾಯಣೋ ಮದಂಶಶ್ಚ ಕೃಪಯಾಗತ್ಯ ಸತ್ವರಂ ।
ಬ್ರಹ್ಮಾಣಂ ಜೀವಯಾಮಾಸ ಬ್ರಹ್ಮಜ್ಞಾನಾತ್ಮಜಾಂ ಚ ತಾಂ ॥ ೭೩ ॥

ಬ್ರಹ್ಮಾ ಪುರೋ ಹರಿಂ ದೃಷ್ಟ್ವಾ ವರಂ ವವ್ರೇ ಸ್ಮ ವಾಂಛಿತಂ ।
ಭಕ್ತಿಂ ತ್ವಚ್ಚರಣೇ ಶಶ್ವನ್ನಿಶ್ಚಲಾಮನಪಾಯಿನೀಂ ॥ ೭೪ ॥

ಬ್ರಹ್ಮಾಣಂ ವಿರಸಂ ದೃಷ್ಟ್ವಾ ತಮುವಾಚ ಕೃಪಾನಿಧಿಃ ।
ಪ್ರಬೋಧವಚನಂ ಸತ್ಯಂ ನೀತಿಸಾರಂ ಮನೋಹರಂ ॥ ೭೫ ॥

---

೭೧. ಇತ್ತ ಬ್ರಹ್ಮನ ಕನ್ಯೆಯೂ ಸಹ ತಂದೆಯು ಮೃತನಾದುದನ್ನು ಕಂಡು ಬಾರಿಬಾರಿಗೂ ಗೋಳಾಡಿ, ಯೋಗಬಲದಿಂದ ದೇಹತ್ಯಾಗಮಾಡಿ ತಾನೂ ಬ್ರಹ್ಮನಲ್ಲಿ ಐಕ್ಯಳಾದಳು.

೭೨. ಅನಂತರ ಆ ಋಷಿಗಳೆಲ್ಲರೂ ತಮ್ಮ ತಂದೆಯೂ ಮತ್ತು ಸಹೋದರಿಯೂ ಸತ್ತುದನ್ನು ನೋಡಿ ದುಃಖಿತರಾದುದಲ್ಲದೆ ಕೋಪಗೊಂಡವರಾಗಿ ಸ್ವಾತ್ಮಾರಾಮನಾದ ಶ್ರೀಹರಿಯನ್ನು ಸ್ಮರಿಸಿಕೊಂಡರು.

೭೩. ಆಗ ನನ್ನ ಅಂಶಸಂಭೂತನಾದ ಶ್ರೀಮನ್ನಾರಾಯಣನು ದಯೆಯಿಂದ ಜಾಗ್ರತೆಬಂದು, ಬ್ರಹ್ಮಜ್ಞಾನಿಗಳಾದ ಆ ಬ್ರಹ್ಮ ಮತ್ತು ಅವನ ಕನ್ಯೆ ಇಬ್ಬರನ್ನೂ ಪ್ರತ್ಯುಜ್ಜೀವಗೊಳಿಸಿದನು.

೭೪. ಪ್ರತ್ಯುಜ್ಜೀವಿತನಾದ ಬ್ರಹ್ಮನು ತನ್ನ ಮುಂದೆ ಶ್ರೀಹರಿಯನ್ನು ನೋಡಿ "ನಿನ್ನ ಪಾದಕಮಲಗಳಲ್ಲಿ ನಿಶ್ಚಲವಾಗಿರುವ ಶಾಶ್ವತಭಕ್ತಿಯನ್ನು ನನಗೆ ಅನುಗ್ರಹಿಸು" ಎಂದು ವರವನ್ನು ಬೇಡಿಕೊಂಡನು.

೭೫. ಈ ರೀತಿ ಬ್ರಹ್ಮನು ದೈನ್ಯದಿಂದ ಬೇಡುತ್ತಿರುವುದು ನೋಡಿ ಕೃಪಾನಿಧಿಯಾದ ಶ್ರೀಮನ್ನಾರಾಯಣನು, ಸತ್ಯವೂ, ನೀತಿಯುತವೂ, ಮನೋಹರವೂ ಆದ ಕೆಲವು ಉಪದೇಶ ವಚನಗಳನ್ನು ಹೇಳಿದನು.

|| ಶ್ರೀ ನಾರಾಯಣ ಉವಾಚ ||

ಶೃಣು ಬ್ರಹ್ಮನ್ ಪ್ರವಕ್ಷ್ಯೇಹಂ ಮುಖಮುತ್ತೋಲ್ಯ ಸಾಂಪ್ರತಂ |
ತ್ಯಜ ಲಜ್ಜಾಂ ಜಗನ್ನಾಥ ಹೃದಯೆಜ್ವರರೂಪಿಣೀಂ || ೭೬ ||

ಸತ್ಕೀರ್ತಿರಪಕೀರ್ತಿರ್ವಾ ಸುಪ್ರತಿಷ್ಠಾಪ್ಯುಪದ್ರವಃ |
ಕ್ಷುದ್ರಾಣಾಂ ಚೈವ ಮಹತಾಂ ಭವತ್ಯೇವ ಸ್ವಕರ್ಮಣಾ || ೭೭ ||

ಸರ್ವೇಷಾಮಪಿ ಸರ್ವೇಭ್ಯಃ ಸ್ವಕರ್ಮ ಬಲವತ್ತರಂ |
ತಸ್ಮಾತ್ ಸಂತಃ ಪ್ರಕುರ್ವಂತಿ ನಿತ್ಯಂ ಸತ್ಕರ್ಮ ಸಂತತಂ || ೭೮ ||

ಕೇಚಿತ್ಕುರ್ವಂತಿ ನಿರ್ಮೂಲಂ ಸರ್ವೇಷಾಮಪಿ ಕರ್ಮಣಾಂ |
ಕೃತಂ ಕರ್ಮ ಪರಂ ಭುಕ್ತ್ವಾ ಹರಿಪದಾಬ್ಜ ಚೇತಸಃ || ೭೯ ||

---

೭೬. ಶ್ರೀನಾರಾಯಣ :—ಎಲೈ ಬ್ರಹ್ಮನೇ, ಮುಖವನ್ನು ಮೇಲಕ್ಕೆ ಎತ್ತಿ ನಾನು ಹೇಳುವುದನ್ನು ಆಲಿಸು. ಎಲೈ ಜಗದೊಡೆಯನೇ, ಮನೋರೋಗಕ್ಕೆ ಸಮಾನವಾದ ಈ ಲಜ್ಜೆಯನ್ನು ದೂರಮಾಡು.

೭೭. ನೀಚರಾಗಲೀ ಮಹಾತ್ಮರಿಗಾಗಲೀ ತಮ್ಮ ಜನ್ಮಾಂತರ ಕರ್ಮಾನುಗುಣವಾಗಿ ಸತ್ಕೀರ್ತಿಯೋ, ಅಪಕೀರ್ತಿಯೋ, ಸುಪ್ರತಿಷ್ಠೆಯೋ ಅಥವಾ ಉಪದ್ರವವೋ ಉಂಟಾಗುವುದರಲ್ಲಿ ಸಂಶಯವಿಲ್ಲ.

೭೮. ಎಲ್ಲರಿಗೂ ಎಲ್ಲಕ್ಕಿಂತಲೂ ಜನ್ಮಾಂತರದ ತಮ್ಮ ಕರ್ಮವೇ ಬಲಿಷ್ಠವಾದುದು. ಆದ್ದರಿಂದ ಸತ್ಪುರುಷರು ನಿತ್ಯವೂ ಸತ್ಕರ್ಮಾಚರಣೆಯಲ್ಲಿ ನಿರತರಾಗುವರು.

೭೯. ಕೆಲವರು ಹಿಂದೆ ಮಾಡಿದ ಕರ್ಮಫಲವನ್ನು ಅನುಭವಿಸಿ ಶ್ರೀಹರಿಯ ಪಾದಕಮಲಗಳ ಧ್ಯಾನದಲ್ಲಿ ನಿರತರಾಗಿ ತಾವು ಆಗಮಾಡುವ ಕರ್ಮಗಳನ್ನು ನಿರ್ಮೂಲಗೊಳಿಸುವರು. (ಅಂದರೆ ನಿಷ್ಕಾಮ ಕರ್ಮಮಾಡುವರು.)

ಕುಕರ್ಮಣಶ್ಚಾಪಕೀರ್ತಿಃ ತತೋ ಲಜ್ಜಾ ಭವೇದ್ಧ್ರುವಂ ।
ಸುಕರ್ಮಣಃ ಸುಪ್ರತಿಷ್ಠಾ ಸರ್ವತ್ರ ನಿರ್ಮಲಂ ಯಶಃ ॥ ೮೦ ॥

ಕಾಲೇನ ಜರಸಾ ದೇಹೋ ಬಲಂ ರೂಪಂ ಶುಭಾಶುಭಂ ।
ಕೀರ್ತಿರ್ಯೋ ತ್ರಿಗುಣಾ ಚೈವ ಮೋಹಶ್ಚಾಪಯಶೋ ವಿಧೇ ॥ ೮೧ ॥

ಋಣವ್ರಣಾಪವಾದಾಶ್ಚ ಜಂತೂನಾಂ ಯಾಂತಿ ಕಾಲತಃ ।
ಮಹತಾಂ ತೌ ಚ ಪೂರ್ವೋಕ್ತೌ ನೇತರಶ್ಚ ಕದಾಚನ ॥ ೮೨ ॥

ಸದಾಪಕೀರ್ತಿರ್ವಸತಿ ಪರಸ್ತ್ರೀಷು ಚ ವಸ್ತುಷು ।
ತಸ್ಮಾತ್ತೇ ನೈವ ಗೃಹ್ಣಂತಿ ಸಂತಃ ಸ್ವಕ್ಲೇಶಕಾರಣೇ ॥ ೮೩ ॥

---

೮೦. ನೀಚಕರ್ಮಾಚರಣೆಯಿಂದ ಅಪಕೀರ್ತಿಯೂ, ಲಜ್ಜೆಯೂ ಉಂಟಾಗುವುದರಲ್ಲೂ ಸಂಶಯವಿಲ್ಲ. ಅದರಂತೆಯೇ ಸತ್ಕರ್ಮದಿಂದ ಸುಪ್ರತಿಷ್ಠೆಯೂ ಎಲ್ಲೆಡೆಯಲ್ಲಿ ಸತ್ಕೀರ್ತಿಯೂ ಲಭಿಸುವುದರಲ್ಲಿ ಸಂಶಯವಿಲ್ಲ.

೮೧ ಎಲೈ ವಿಧಿಯೇ, ಕಾಲ ಮತ್ತು ವಯಸ್ಸಿಗನುಗುಣವಾಗಿ ದೇಹಿಗೆ ಬಲ, ರೂಪ ಮತ್ತು ಶುಭಾಶುಭಗಳಾದ ಕೀರ್ತಿಯುಂಟಾಗುವುದಲ್ಲದೆ, ಸತ್ವ ರಜಸ್ಸು ಮತ್ತು ತಮಸ್ಸಿಗನುಗುಣವಾಗಿ ಪ್ರಪಂಚದಲ್ಲಿ ಭ್ರಾಂತಿಯೂ ಅಪಯಶಸ್ಸೂ ಉಂಟಾಗುವುದು.

೮೨. ಋಣಬಾಧೆ, ವ್ರಣಬಾಧೆ ಮತ್ತು ಅಪವಾದಗಳೂ ಸಹ ಪ್ರಾಣಿಗಳಿಗೆ ಕಾಲಾನುಗುಣವಾಗಿ ಬಂದೇ ಬರುವವು. ಆದರೆ ಮಹಾತ್ಮರಿಗೆ ಸತ್ಕೀರ್ತಿ ಮತ್ತು ಅಪಕೀರ್ತಿಗಳು ಬರುವವೇ ಹೊರತು ಉಳಿದವುಗಳ ಬಾಧೆ ಇರುವುದಿಲ್ಲ.

೮೩. ಪರಸ್ತ್ರೀಯರಲ್ಲಿಯೂ, ಪರದ್ರವ್ಯಗಳಲ್ಲಿಯೂ ಅಪಕೀರ್ತಿಯು ನೆಲೆಸಿರುವುದರಿಂದ ಸತ್ಪುರುಷರು ತಮ್ಮ ಕ್ಲೇಶಕ್ಕೆ ಕಾರಣಗಳಾದ ಪರಸ್ತ್ರೀ ಮತ್ತು ಪರದ್ರವ್ಯಗಳನ್ನು ಎಂದೆಂದಿಗೂ ಬಯಸುವುದಿಲ್ಲ.

ಸ್ಮರ ಮಾಮಂತರೇ ಬ್ರಾಹ್ಮೇ ಮದೀಯಂ ವಿಷಯಂ ಕುರು ।
ಇತಸ್ತೇ ನ ಮನೋ ಲೋಲಂ ಭವಿತಾ ಪರವಸ್ತುಷು ॥ ೮೪ ॥

ಯೋಷಿದ್ರೂಪಾ ಚ ಮೇ ಮಾಯಾ ಸರ್ವೇಷಾಂ ಮೋಹಕಾರಿಣೀ ।
ಲೀಲಯಾ ಕುರುತೇ ಮೋಹಂ ಸ್ವಾತ್ಮಾರಾಮಸ್ಯ ಸಂತತಂ ॥ ೮೫ ॥

ನಾನಾಮುದ್ರಾಶ್ರಯೇ ದೇಹೇ ರಾಗಿಣಾಂ ಸತತಂ ರತಿಃ ।
ಸ್ತನಾಭಿಧೇ ಮಾಂಸಪಿಂಡೇಽಧರೇ ಲಾಲಾಲಯೇಽಶುಚೌ ॥ ೮೬ ॥

ಶ್ರೋಣಿವಕ್ತ್ರಸ್ತನಂ ತಾಸಾಂ ಕಾಮದೇವಾಲಯಂ ಸದಾ ।
ತಸ್ಮಾತ್ತೇ ನ ಹಿ ಪಶ್ಯಂತಿ ಸಂತೋ ಹಿ ಧರ್ಮಭೀರವಃ ॥ ೮೭ ॥

---

೮೪. ಎಲೈ ಬ್ರಹ್ಮದೇವನೇ, ನೀನು ಅನನ್ಯಭಕ್ತಿಯಿಂದ ಬಾಹ್ಯಾಭ್ಯಂತರಗಳಲ್ಲಿ ನನ್ನನ್ನು ಸ್ಮರಿಸುತ್ತ ಇತರ ಪ್ರಾಪಂಚಿಕ ವಿಷಯಗಳನ್ನು ದೂರಮಾಡು ಆಗ ನಿನ್ನ ಮನಸ್ಸು ಪರವಸ್ತುಗಳಿಗಾಗಿ ಚಂಚಲವಾಗುವುದಿಲ್ಲ.

೮೫. ಸ್ತ್ರೀರೂಪದಲ್ಲಿರುವ ನನ್ನ ಮಾಯೆಯು ಎಲ್ಲರಿಗೂ ಮೋಹವನ್ನುಂಟು ಮಾಡುವಳು. ಅಷ್ಟೇಕೆ ಆತ್ಮಾರಾಮನಿಗೂ ಸಹ ಲೀಲಾಮಾತ್ರದಿಂದ ಸರ್ವದಾ ತನ್ನಲ್ಲಿ ಮೋಹವುಂಟಾಗುವಂತೆ ಮಾಡುವಳು

೮೬. ರಜೋಗುಣ ಪ್ರಧಾನರಾದ ರಾಗಿಗಳಿಗೆ, ವಿವಿಧಾವಯವಗಳಿಗೆ ಆಶ್ರಯವಾದ ಸ್ತ್ರೀದೇಹದಲ್ಲಿ ಸರ್ವದಾ ರತಿಯುಂಟಾಗುವುದು. ಅದರಲ್ಲಿಯೂ ಸ್ತನಗಳೆಂಬ ಮಾಂಸಪಿಂಡಗಳಲ್ಲಿಯೂ, ಜೊಲ್ಲಿಗೆ ಆಧಾರವಾಗಿ ಅಶುಚಿಯಾಗಿರುವ ಕೆಳತುಟಿಯಲ್ಲಿಯೂ ವಿಶೇಷ ರತಿಯುಂಟಾಗುವುದು.

೮೭. ಸ್ತ್ರೀಯರ ನಿತಂಬಬಿಂಬವೂ, ಮುಖ ಮತ್ತು ಸ್ತನಗಳೂ ಮನ್ಮಥನಿಗೆ ಆವಾಸಸ್ಥಾನವಾಗಿರುವುದು. ಆದುದರಿಂದ ಧರ್ಮಪಾರಾಯಣರಾದ ಸತ್ಪುರುಷರು ಅವುಗಳ ಕಡೆಗೆ ಕತ್ತೆತ್ತಿಯೂ ನೋಡುವುದಿಲ್ಲ.

ಕೋ ಧರ್ಮಃ ಕಿಂ ಯಶಸ್ತೇಷಾಂ ಕಾ ಪ್ರತಿಷ್ಠಾ ಚ ಕಿಂ ತಪಃ ।
ಕಿಂ ಬುದ್ಧಿರ್ವಿದ್ಯಾದಾನಂ ಚ ಪರಸ್ತ್ರೀಷು ಚ ಯನ್ಮನಃ ॥ ೮೮ ॥

ಇಹಾಪ್ಯಪಯಶೋ ದುಃಖಂ ನರಕೇಷು ಪರತ್ರ ಚ ।
ವಾಸಃ ಪ್ರಹಾರಸ್ತೇಷಾಂ ಚ ತಾಡನೈಃ ಕ್ರಿಮಿಭಕ್ಷಣೈಃ ॥ ೮೯ ॥

ದುಃಖಬೀಜಂ ಸುಖಂ ಮತ್ವಾ ಮೂಢಾಶ್ಚ ದೈವದೋಷತಃ ।
ಪರಸ್ತ್ರೀಸೇವನಂ ಪ್ರೀತ್ಯಾ ಕುರ್ವಂತಿ ಸತತಂ ಮುದಾ ॥ ೯೦ ॥

ಉತ್ತಮಾ ಮತ್ಪದಾಂಭೋಜಂ ಸತ್ಕರ್ಮ ಮಧ್ಯಮಾಃ ಸದಾ ।
ಸ್ಮರಂತಿ ಶಶ್ವದಧಮಾಃ ಪರಸ್ತ್ರೀಸೇವನಂ ಮುದಾ ॥ ೯೧ ॥

---

೮೮. ಯಾರ ಮನಸ್ಸು ಸ್ತ್ರೀಯರಲ್ಲಿ ಆಸಕ್ತವಾಗುವುದೋ ಅವರ ಧರ್ಮಾಚರಣೆಯಿಂದಲೂ, ಕೀರ್ತಿಪ್ರತಿಷ್ಠೆಗಳಿಂದಲೂ, ತಪಸ್ಸಿನಿಂದಲೂ, ವಿದ್ಯಾಬುದ್ಧಿಯಿಂದಲೂ, ದಾನಾದಿಗಳಿಂದಲೂ ಪ್ರಯೋಜನವೇನು?

೮೯. ಅವರಿಗೆ ಇಹಲೋಕದಲ್ಲಿ ಅಪಕೀರ್ತಿಯೂ ಮತ್ತು ದುಃಖವೂ ಲಭಿಸುವುದಲ್ಲದೆ ಪರಲೋಕದಲ್ಲಿ ನರಕವಾಸವೂ, ಯಮಕಿಂಕರರಿಂದ ತಾಡನೆಯೂ ಒದಗಿ ಕ್ರಿಮಿಗಳನ್ನು ಭಕ್ಷಿಸಬೇಕಾಗುವುದು.

೯೦. ಸುಖವು ದುಃಖಕ್ಕೆ ಮೂಲಕಾರಣವೆಂದು ತಿಳಿದಿದ್ದರೂ ಸಹ ಮೂಢರು ದುರ್ದೈವದಿಂದ ಮೋಹಿತರಾಗಿ ಪರಸ್ತ್ರೀಸಂಗದಲ್ಲಿ ಪ್ರೀತ್ಯಾದರವುಳ್ಳವರಾಗುವರು.

೯೧. ಮನುಜರಲ್ಲಿ ಉತ್ತಮರು ನನ್ನ ಪಾದಕಮಲಗಳನ್ನು ಸರ್ವದಾ ಸ್ಮರಿಸುವರು. ಮಧ್ಯಮರು ಸರ್ವದಾ ಸತ್ಕರ್ಮಗಳನ್ನಾಚರಿಸುವರು. ಆದರೆ ಅಧಮರು ಸರ್ವದಾ ಪರಸ್ತ್ರೀಸೇವೆಯಲ್ಲಿಯೇ ನಿರತರಾಗುವರು.

ವಿಪತ್ತಿಃ ಸತತಂ ತಸ್ಯ ಪರವಸ್ತುಷು ಯನ್ಮನಃ ।
ವಿಶೇಷತಃ ಪರಸ್ತ್ರೀಷು ಸುವರ್ಣೇಷು ಚ ಭೂಮಿಷು ॥ ೯೨ ॥

ದೈವಾತ್ಪರಸ್ತ್ರಿಯಂ ದೃಷ್ಟ್ವಾ ವಿರಮೇದ್ಯೋ ಹರಿಂ ಸ್ಮರನ್ ।
ದೃಷ್ಟ್ವಾ ಪರಸುವರ್ಣಂ ಚ ಹಸ್ತಪ್ರಕ್ಷಾಲನಾಚ್ಛುಚಿಃ ॥ ೯೩ ॥

ಸತತಂ ನೈವ ಸಂಸಕ್ತಾಃ ಸಂತಃ ಸ್ವಸ್ತ್ರೀಷು ಕಾಮತಃ ।
ಯಕ್ಷ್ಮವ್ಯಾಧಿಜ್ಞಾನಹಾನಿಲೋಕನಿಂದಾಭಯೇನ ಚ ॥ ೯೪ ॥

ತಪಸ್ವಿನಸ್ತಪಸ್ಯಾಯಾಂ ಶಾಸ್ತ್ರಚಿಂತಾಸು ಪಂಡಿತಾಃ ।
ಯೋಗಿನೋ ಯೋಗಚಿಂತಾಸು ವೇದಾರ್ಥೇಷು ಚ ವೈದಿಕಾಃ ॥ ೯೫ ॥

---

೯೨. ಯಾರ ಮನಸ್ಸು ಪರವಸ್ತುಗಳಲ್ಲಿ ಆಸಕ್ತವಾಗಿರುವುದೋ ಅವರಿಗೆ ನಿರಂತರವಾದ ವಿಪತ್ತು ತಪ್ಪಿದುದಲ್ಲ. ಅದರಲ್ಲಿಯೂ ಪರಸ್ತ್ರೀಯರನ್ನೂ ಪರರ ಸುವರ್ಣವನ್ನೂ ಮತ್ತು ಭೂಮಿಯನ್ನೂ ಬಯಸುವವರಿಗೆ ವಿಪತ್ಪರಂಪರೆಗಳುಂಟಾಗುವುವು.

೯೩ ಯಾರು ಪರಸ್ತ್ರೀಯರನ್ನೂ ಪರರ ಸುವರ್ಣವನ್ನೂ ನೋಡಿದರೂ ಸಹ ದೈವಯೋಗದಿಂದ ಅವುಗಳ ಆಸೆಯನ್ನು ತೊಳೆದುಕೊಳ್ಳುವರೋ ಅವರು ಶುಚಿಯಾಗಿಯೇ ಇರುವರು.

೯೪. ಸತ್ಪುರುಷರು, ಕ್ಷಯ ಮುಂತಾದ ರೋಗಭಯದಿಂದಲೂ, ಜ್ಞಾನಹಾನಿ ಮತ್ತು ಲೋಕನಿಂದೆಯ ಭಯದಿಂದಲೂ ತಮ್ಮ ತಮ್ಮ ಸ್ತ್ರೀಯರಲ್ಲಿಯೂ ಮನಃಪೂರ್ವಕವಾಗಿ ಅನುರಕ್ತರಾಗಿರುವುದಿಲ್ಲ

೯೫. ತಪಸ್ವಿಗಳು ತಪಸ್ಸನ್ನು ಆಚರಿಸುವುದರಲ್ಲಿಯೂ, ಪಂಡಿತರು ಶಾಸ್ತ್ರಚಿಂತನೆಯಲ್ಲಿಯೂ, ಯೋಗಿಗಳು ಯೋಗಾಭ್ಯಾಸದಲ್ಲಿಯೂ, ವೈದಿಕರು ವೇದಾರ್ಥ ವಿಚಾರಗಳಲ್ಲಿಯೂ ನಿರತರಾಗಿರುವರು.

ಸಾಧ್ವ್ಯಶ್ಚ ಪತಿಸೇವಾಸು ಗೃಹಸ್ಥಾ ಗೃಹಕರ್ಮಸು ।
ವಿಷಯೇಷು ವಿಷಯಿಣೋ ಮದ್ಭಕ್ತಾ ಮಮ ಸೇವನೇ ॥ ೯೬ ॥

ಏತೇ ನಿಯುಕ್ತಾ ಏತೇಷು ಸಭಾಸು ಚ ಪ್ರಶಂಸಿತಾಃ ।
ವೇದೋಕ್ತಾಚರಣೇನೈವ ತದ್ವಿರುದ್ಧೇನ ನಿಂದಿತಾಃ ॥ ೯೭ ॥

ಸರ್ವೇ ನಿತ್ಯಂ ಪ್ರಶಂಸಂತಿ ಶಶ್ವತ್ಸನ್ಮಾರ್ಗಗಾಮಿನಂ ।
ಹಾಲಿಕಾ ಅಪಿ ನಿಂದಂತಿ ಕುವರ್ತ್ಮಗಾಮಿನಂ ವಿಧೇ ॥ ೯೮ ॥

ಭವಿತಾ ನ ಪರಸ್ತ್ರೀಷು ಪರವಸ್ತುಷು ತೇ ಮನಃ ।
ಅದ್ಯಪ್ರಭೃತಿ ಜೀವಂತಂ ನಿವಿಷ್ಟಂ ಮದ್ವರೇಣ ಚ ॥ ೯೯ ॥

ಮದೀಯವಿಷಯೇ ಬ್ರಾಹ್ಮೇ ಮಯಾ ದತ್ತಂ ಕುರು ಪ್ರಿಯಂ ।
ಅಂತರಾ ಮತ್ಪದಾಂಭೋಜಚಿಂತಾಂ ವಿಘ್ನವಿನಾಶಿನೀಂ ॥ ೧೦೦ ॥

---

೯೬. ಅಂತೆಯೇ ಪತಿವ್ರತೆಯರು ಪತಿಸೇವೆಯಲ್ಲಿಯೂ, ಗೃಹಸ್ಥರು ಗೃಹ ಕರ್ಮಗಳಲ್ಲಿಯೂ, ವಿಷಯಾಸಕ್ತರು ವಿಷಯಸುಖಗಳಲ್ಲಿಯೂ, ನನ್ನ ಭಕ್ತರು ನನ್ನ ಸೇವೆಯಲ್ಲಿಯೂ ನಿರತರಾಗಿರುವರು.

೯೭. ಈ ಮೇಲೆ ಹೇಳಿದವರು ತಮ್ಮ ತಮ್ಮ ಕರ್ತವ್ಯಗಳಲ್ಲಿ ನಿರತರಾಗಿದ್ದರೆ ಸಭೆಗಳಲ್ಲಿ ಎಲ್ಲರಿಂದಲೂ ಹೊಗಳಿಸಿಕೊಳ್ಳುವರು. ವೇದೋಕ್ತಧರ್ಮವನ್ನು ಆಚರಿಸುವುದರಿಂದ ಪ್ರಶಂಸೆಯೂ, ಆಚರಿಸದಿರುವುದರಿಂದ ನಿಂದೆಯೂ ಉಂಟಾಗುವುದು.

೯೮. ಸದಾ ಸದಾಚಾರಪರನನ್ನು ಎಲ್ಲರೂ ಯಾವಾಗಲೂ ಹೊಗಳುವರು. ಎಲೈ ಬ್ರಹ್ಮನೇ, ದುರ್ಮಾರ್ಗಗಾಮಿಯನ್ನು ಕೃಷಕರೂ ಸಹ ನಿಂದಿಸುವರು.

೯೯. ಎಲೈ ಬ್ರಹ್ಮದೇವನೇ, ನನ್ನ ವರದಿಂದ ಜೀವಿತನಾದ ನನ್ನ ಭಕ್ತನಾದ ನಿನ್ನ ಮನಸ್ಸು ಇಂದಿನಿಂದ ಪರಸ್ತ್ರೀಯರಲ್ಲಿಯೂ, ಪರರ ವಸ್ತುವಿನಲ್ಲಿಯೂ ಆಸಕ್ತವಾಗುವುದಿಲ್ಲ.

೧೦೦. ನಾನು ಅನುಗ್ರಹಿಸಿರುವ ಬ್ರಹ್ಮಜ್ಞಾನವನ್ನು ಹೊಂದಿ, ಮನಸ್ಸಿನಲ್ಲಿ ಸರ್ವದಾ ವಿಘ್ನನಾಶಕವಾದ ನನ್ನ ಪಾದಕಮಲಗಳನ್ನು ಸ್ಮರಿಸುತ್ತ ನನ್ನ ಧ್ಯಾನದಲ್ಲಿಯೇ ಆಸಕ್ತನಾಗು.

ಕನ್ಯಾ ಭವತು ತೇ ಬ್ರಹ್ಮನ್ ಕಾಮದೇವಸ್ಯ ಕಾಮಿನೀ ।
ರತಿರ್ನಾಮ ಪರಿಖ್ಯಾತ್ಯಾ ರತ್ಯಧಿಷ್ಠಾತೃದೇವತಾ ॥ ೧೦೧ ॥

ಇತ್ಯೇವಮುಕ್ತ್ವಾ ಬ್ರಹ್ಮಾಣಮಾಶ್ವಾಸ್ಯ ಕಮಲಾಪತಿಃ ।
ಜಗಾಮ ನಿತ್ಯಂ ವೈಕುಂಠಂ ವೃಂದಾವನವಿನೋದನಃ ॥ ೧೦೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ರಾಧಾಕೃಷ್ಣಸಂವಾದೋ
ನಾಮ ಪಂಚತ್ರಿಂಶೋಽಧ್ಯಾಯಃ

---

೧೦೧. ಎಲೈ ಬ್ರಹ್ಮನೇ, ನಿನ್ನ ಮಗಳು ನಿನ್ನಿಂದ ಪರಿತ್ಯಕ್ತಳಾಗಿ ಕಾಮದೇವನನ್ನು ಕಾಮಿಸುವವಳಾಗಿ ರತಿ ಎಂಬ ಹೆಸರಿನಿಂದ ಪ್ರಖ್ಯಾತಳಾಗಿ ಎಲ್ಲರ ರತಿಸುಖಕ್ಕೂ ಅಧಿಷ್ಠಾತೃದೇವತೆಯಾಗಲಿ.

೧೦೨. ವೃಂದಾವನವಿನೋದಿಯಾದ ಶ್ರೀಮನ್ನಾರಾಯಣನು ಬ್ರಹ್ಮನನ್ನು ಕುರಿತು ಈ ರೀತಿಯಾಗಿ ಆಶ್ವಾಸನೆಮಾಡಿ, ಶಾಶ್ವತವಾದ ವೈಕುಂಠಲೋಕಕ್ಕೆ ಹಿಂತಿರುಗಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಶ್ರೀ ರಾಧಾಕೃಷ್ಣರ ಸಂವಾದನೆಂಬ ಮೂವತ್ತೈದನೆಯ
ಅಧ್ಯಾಯವು ಮುಗಿದುದು.

ಮೂವತ್ತೈದನೆಯ ಅಧ್ಯಾಯದ ಸಾರಾಂಶ.

ಮೋಹಿನಿಯ ಶಾಪದಿಂದ ಅಪವಿತ್ರನಾಗಿದ್ದ ಬ್ರಹ್ಮನು ಶ್ರೀಮನ್ನಾರಾಯಣನ ಪ್ರೇರಣೆಯಂತೆ ಗಂಗೆಯಲ್ಲಿ ಮಿಂದು ಪರಮಪವಿತ್ರನಾದನು. ಅನಂತರ ಗೋಲೋಕಕ್ಕೆ ಹೋಗಿ ಪ್ರಕೃತ್ಯಂಶಸಂಭೂತಳಾದ ಭಾರತಿಯನ್ನು ಅನನ್ಯ ಭಕ್ತಿಯಿಂದ ಭಜಿಸಿದನು. ಮತ್ತು ಮನ್ಮಥಾಸ್ತ್ರಗಳ ಪ್ರಭಾವವನ್ನು ಆಕೆಗೆ ವಿವರಿಸಿದನು. ಕೂಡಲೇ ವಾಗೀಶ್ವರಿಯು ಮೋಹಿನಿಯ ಶರೀರದಲ್ಲಿ ಸೇರಿಕೊಂಡಳು. ಬ್ರಹ್ಮನು ಆಕೆಯೊಡನೆ ಚಿರಕಾಲ ರತಿಸುಖವನ್ನನುಭವಿಸಿ, ಆಕೆಯ ಇಷ್ಟಾರ್ಥವನ್ನೂ ಪೂರ್ಣಗೊಳಿಸಿ, ಅವಳನ್ನು ಬಿಟ್ಟು ತನ್ನ ಲೋಕಕ್ಕೆ ಬಂದನು. ಅಲ್ಲಿ ಪರಮಸುಂದರಿಯೂ ಲೋಕಕಲ್ಯಾಣಕಾರಣಳೂ ಆದ ಭಾರತೀದೇವಿಯೊಡನೆ ಸುಖವಾಗಿದ್ದನು.

ಹಿಂದೆ ಪಾದ್ಮಕಲ್ಪದಲ್ಲಿ ಬ್ರಹ್ಮನು ಶ್ರೀಕೃಷ್ಣನ ಪ್ರೇರಣೆಯಂತೆ ಸೃಷ್ಟಿಕಾರ್ಯದಲ್ಲಿ ತೊಡಗಿದನು. ಸನಕಾದಿ ದೇವತೆಗಳನ್ನೆಲ್ಲ ಸೃಷ್ಟಿಮಾಡಿದ ನಂತರ ಕಾಮದೇವನನ್ನೂ, ತ್ರಿಲೋಕಸುಂದರಿಯಾದ ಕನ್ಯೆಯೊಬ್ಬಳನ್ನೂ ಸೃಷ್ಟಿಮಾಡಿದನು. ಆ ಕಾಮದೇವನಿಗೆ ಎಲ್ಲರ ಹೃದಯದಲ್ಲೂ ನೆಲೆಸುವಂತೆ ಅನುಗ್ರಹಿಸಿ ಪಂಚ ಬಾಣಗಳನ್ನು ಕೊಟ್ಟನು. ಆ ಮನ್ಮಥನು ಆ ಬಾಣಗಳ ಶಕ್ತಿಯನ್ನು ಪರೀಕ್ಷಿಸಲೋಸುಗ ಬ್ರಹ್ಮನ ಮೇಲೇ ಅವುಗಳನ್ನು ಪ್ರಯೋಗಿಸಿದನು. ಕೂಡಲೇ ಬ್ರಹ್ಮನು ಕಾಮಿಯಾಗಿ ತಾನು ಸೃಷ್ಟಿಮಾಡಿದ ಕನ್ಯೆಯನ್ನೇ ಕಾಮಿಸಿಬರಲು ಆಕೆಯು ಓಡಿಹೋಗಿ ಸನಕಾದಿ ಮಹರ್ಷಿಗಳ ಮರೆಹೊಕ್ಕಳು. ಆಗ ಆ ಋಷಿಗಳೆಲ್ಲರೂ ಕಾಮಿಯಾದ ಬ್ರಹ್ಮನಿಗೆ ವಿವೇಕವನ್ನು ಹೇಳಿ ಸುಮ್ಮನಾದರು. ಅಪಮಾನಿತನಾದ ಬ್ರಹ್ಮನು ಯೋಗಬಲದಿಂದ ದೇಹತ್ಯಾಗಮಾಡಿದನು. ತಂದೆಯು ದೇಹತ್ಯಾಗಮಾಡಿದುದನ್ನು ನೋಡಿ ಆ ಕನ್ಯೆಯೂ ದೇಹತ್ಯಾಗಮಾಡಿ ಬ್ರಹ್ಮನಲ್ಲೇ ಐಕ್ಯವಾದಳು. ಅದನ್ನು ನೋಡಿದ ಸನಕಾದಿಗಳೆಲ್ಲ ಶ್ರೀಹರಿಯನ್ನು ಭಕ್ತಿಯಿಂದ ಭಜಿಸಲು ಶ್ರೀಹರಿಯು ಪ್ರಸನ್ನನಾಗಿ ಬ್ರಹ್ಮನನ್ನೂ ಆ ಕನ್ಯೆಯನ್ನೂ ಪ್ರತ್ಯುಜ್ಜೀವಗೊಳಿಸಿದನು. ಆಗ ಬ್ರಹ್ಮನು ಶ್ರೀಕೃಷ್ಣನ ಪಾದಕಮಲಗಳಲ್ಲಿ ಅನನ್ಯಭಕ್ತಿಯೊಂದನ್ನು ಮಾತ್ರ ಅನುಗ್ರಹಿಸಬೇಕೆಂದು ಬೇಡಿಕೊಂಡನು. ಶ್ರೀಕೃಷ್ಣನು ಹಾಗೆಯೇ ಆಗಲೆಂದು ಅನುಗ್ರಹಿಸಿ, ಬ್ರಹ್ಮನ ಕನ್ಯೆಗೆ ರತಿ ಎಂದು ಹೆಸರಿಟ್ಟು ಆ ರತಿದೇವಿಯು ಮನ್ಮಥನನ್ನು ವರಿಸಿ ಸುಖವಾಗಿರುವಂತೆ ಹೇಳಿ ವೈಕುಂಠ ಲೋಕಕ್ಕೆ ತೆರಳಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಷಟ್ತ್ರಿಂಶೋಽಧ್ಯಾಯಃ ||

|| ರಾಧಿಕೋವಾಚ ||

ಏತೇನ ನಿಯಮೇನೈವ ಬ್ರಹ್ಮಾ ತತ್ಯಾಜ ಮೋಹಿನೀಂ ।
ಕಥಂ ಸ ಕುಲಟಾಶಾಪಾದಪೂಜ್ಯಃ ಸಂಬಭೂವ ಹ || ೧ ||

ಕಥಂ ತಸ್ಯ ದರ್ಪಭಂಗಂ ಚಕಾರ ಕಮಲಾಪತಿಃ ।
ಕಥಯಸ್ವ ಸರ್ವಬೀಜಂ ಸರ್ವೇಷಾಮೀಶ್ವರಃ ಸ್ವಯಂ || ೨ ||

|| ನಾರಾಯಣ ಉವಾಚ ||

ರಾಸೇಶ್ವರೀವಚಃ ಶ್ರುತ್ವಾ ಪ್ರಹಸ್ಯ ರಸಿಕೇಶ್ವರಃ ।
ನಿಗೂಢಮಿತಿಹಾಸಂ ಚ ತಾಂ ವಕ್ತುಮುಪಚಕ್ರಮೇ || ೩ ||

ಮೂವತ್ತಾರನೆಯ ಅಧ್ಯಾಯ.

೧-೨. ರಾಧಿಕೆ :—ಈ ಹಿಂದಿನ ಅಧ್ಯಾಯದಲ್ಲಿ ಹೇಳಿದ ಕಾರಣದಿಂದಲೇ ಬ್ರಹ್ಮನು ಮೋಹಿನಿಯನ್ನು ತ್ಯಜಿಸಿದನಲ್ಲವೇ ? ಅದು ಸರಿ. ಬ್ರಹ್ಮನು ಕುಲಟೆಯಾದ ಆ ಮೋಹಿನಿಯ ಶಾಪದಿಂದ ಅಪೂಜ್ಯನಾದುದು ಹೇಗೆ? ಶ್ರೀಮನ್ನಾರಾಯಣನು ಅವನ ದರ್ಪವನ್ನು ಭಂಗಗೊಳಿಸಿದುದು ಹೇಗೆ? ಸರ್ವೇಶ್ವರನಾದ ನೀನು ಇವೆಲ್ಲದರ ಕಾರಣವನ್ನು ವಿಸ್ತಾರವಾಗಿ ತಿಳಿಸುವವನಾಗು.

೩. ನಾರಾಯಣ :—ರಾಸೇಶ್ವರಿಯಾದ ರಾಧೆಯ ಮಾತನ್ನು ಕೇಳಿ ರಸಿಕರೊಡೆಯನಾದ ಶ್ರೀಕೃಷ್ಣನು, ಆಕೆಯನ್ನು ಕುರಿತು ಗೂಢವಾದ ಇತಿಹಾಸವನ್ನು ಹೇಳಲುಪಕ್ರಮಿಸಿದನು.

॥ ಶ್ರೀಕೃಷ್ಣ ಉವಾಚ ॥

ಬ್ರಹ್ಮಾ ಚಿರಂ ತಪಸ್ತಪ್ತ್ವಾ ಮತ್ತೋ ಲಬ್ಧ್ವಾ ಪರಂ ವರಂ ।
ಸೃಷ್ಟಿಂ ನಾನಾವಿಧಾಂ ಕೃತ್ವಾ ವಿಧಾತಾ ಸ ಬಭೂವ ಹ ॥ ೪ ॥

ತಪಸಾಂ ಫಲದಾತಾ ಚ ಸರ್ವೇಷಾಂ ಶಾಸ್ತಿಕೃತ್ಪ್ರಭುಃ ।
ಆತ್ಮಾನಮೀಶ್ವರಂ ಜ್ಞಾತ್ವಾ ಮಹಾಗರ್ವೋ ಬಭೂವ ಹ ॥ ೫ ॥

ಬ್ರಹ್ಮಾಂಡೇಷು ಚ ಸರ್ವೇಷು ಗರ್ವಪರ್ಯಂತಮುನ್ನತಿಃ ।
ಇತಿ ಮತ್ವಾ ಬ್ರಹ್ಮಣಶ್ಚ ದರ್ಪಭಂಗಃ ಕೃತೋ ಮಯಾ ॥ ೬ ॥

ಯೇಷಾಂ ಯೇಷಾಂ ಭವೇದ್ದರ್ಪೋ ಬ್ರಹ್ಮಾಂಡೇಷು ಪರಾತ್ಪರಃ ।
ವಿಜ್ಞಾಯ ಸರ್ವಂ ಸರ್ವಾತ್ಮಾ ತೇಷಾಂ ಶಾಸ್ತ್ಯಹಮೇವ ಚ ॥ ೭ ॥

---

೪. ಶ್ರೀಕೃಷ್ಣ :—ಚತುರ್ಮುಖಬ್ರಹ್ಮನು ಚಿರಕಾಲ ತಪಸ್ಸುಮಾಡಿ ನನ್ನಿಂದ ಉತ್ತಮವಾದ ವರವನ್ನು ಪಡೆದು ವಿವಿಧಸೃಷ್ಟಿಯನ್ನು ಮಾಡಿ ಜಗದ್ವಿಧಾತನೆನೆಸಿದನು.

೫. ತಾನು ಮನುಜರ ತಪಸ್ಸಿನ ಫಲದಾತೃವೂ, ದುಷ್ಟಶಿಕ್ಷಕನೂ ಆಗಿರು ವುದರಿಂದ ತಾನೇ ಸರ್ವೇಶ್ವರನೆಂಬ ಭಾವನೆಯು ಬ್ರಹ್ಮನಿಗೆ ಬಂದು ಬಹಳ ಗರ್ವಿಷ್ಠನಾದನು.

೬. ನಿಖಿಲಬ್ರಹ್ಮಾಂಡದಲ್ಲಿಯೂ ಮಾನವನ ಉನ್ನತಿಯೆಂಬುದು ಗರ್ವ ಪರ್ಯಂತವಾದುದು. ಅಂದಮೇಲೆ ಗರ್ವಿತನಾದವನು ಮುಂದೆ ಏಳಿಗೆಯನ್ನು ಹೊಂದಲಾರನು. ಆ ಕಾರಣದಿಂದ ನಾನು ಬ್ರಹ್ಮನ ಗರ್ವಭಂಗವನ್ನು ಮಾಡಿದೆನು.

೭. ಬ್ರಹ್ಮಾಂಡದಲ್ಲಿ ಯಾರ್ಯಾರಿಗೆ ದರ್ಪವುಂಟಾದರೂ ಸರ್ವಾಂತರ್ಯಾಮಿ ಯಾದ ನಾನು ಅದೆಲ್ಲವನ್ನೂ ಅರಿತು ಅವರೆಲ್ಲರನ್ನೂ ಶಿಕ್ಷಿಸಿ ಪರಾತ್ಪರನೆನಿಸಿ ಕೊಂಡಿರುವೆನು.

ಪ್ರಥಮೋ ಬ್ರಹ್ಮಣೋ ಗರ್ವೋ ಮಯಾ ಚೂರ್ಣೀಕೃತಃ ಶ್ರುತಃ ।
ಶಂಕರಸ್ಯ ಚ ಪಾರ್ವತ್ಯಾಶ್ಚಂದ್ರಸ್ಯ ಚ ರವೇಸ್ತಥಾ ॥ ೮ ॥

ವಹ್ನೇರ್ದುರ್ವಾಸಸಶ್ಚೈವ ತಥಾ ಧನ್ವಂತರೇಃ ಪ್ರಿಯೇ ।
ಕ್ರಮೇಣ ದರ್ಪಭಂಗಂ ಚ ಕಥಯಾಮಿ ನಿಶಾಮಯ ॥ ೯ ॥

ಕ್ಷುದ್ರಾಣಾಂ ಮಹತಾಂ ಚೈವ ಯೇಷಾಂ ಗರ್ವೋ ಭವೇತ್ಪ್ರಿಯೇ ।
ಏವಂವಿಧಮಹಂ ತೇಷಾಂ ಚೂರ್ಣೀಭೂತಂ ಕರೋಮಿ ಚ ॥ ೧೦ ॥

॥ ನಾರಾಯಣ ಉವಾಚ ॥

ಶ್ರೀಕೃಷ್ಣಸ್ಯ ವಚಃ ಶ್ರುತ್ವಾ ಶುಷ್ಕಕಂಠೋಷ್ಠತಾಲುಕಾ ।
ಪಪ್ರಚ್ಛ ರಾಧಾ ಯತ್ನೇನ ಸಂತಪ್ತಾ ಭಯವಿಹ್ವಲಾ ॥ ೧೧ ॥

---

೮. ಮೊತ್ತಮೊದಲು ನಾನು ಬ್ರಹ್ಮನ ಗರ್ವವನ್ನು ಧ್ವಂಸಮಾಡಿದೆನೆಂಬುದು ಲೋಕವಿಖ್ಯಾತವಾಗಿದೆ. ಅನಂತರ ಕ್ರಮವಾಗಿ ಶಂಕರ, ಪಾರ್ವತಿ, ಚಂದ್ರ ಮತ್ತು ಸೂರ್ಯರ ಗರ್ವವನ್ನೂ ಭಂಗಗೊಳಿಸಿರುತ್ತೇನೆ.

೯. ಎಲೌ ಪ್ರಿಯಳೇ, ಅಗ್ನಿದೇವ, ದೂರ್ವಾಸಮುನಿ ಮತ್ತು ಧನ್ವಂತರಿಗಳ ದರ್ಪಭಂಗಮಾಡಿದುದನ್ನೂ ನಿನಗೆ ಕ್ರಮವಾಗಿ ಹೇಳುವೆನು ಸಾವಧಾನದಿಂದ ಕೇಳುವವಳಾಗು.

೧೦. ಎಲೌ ಪ್ರಿಯಳೇ, ನೀಚರಿಗಾಗಲೀ ಮಹಾತ್ಮರಿಗಾಗಲೀ ಯಾರಿಗೆ ಗರ್ವವುಂಟಾದರೂ ಸಹ ನಾನು ಅವರ ಗರ್ವವನ್ನು ಪುಡಿಪುಡಿಮಾಡುವುದರಲ್ಲಿ ಸಂಶಯವಿಲ್ಲ.

೧೧. ನಾರಾಯಣ:—ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿ ಬತ್ತಿಹೋದ ಕಂಠತಾಲುಗಳುಳ್ಳ ರಾಧೆಯು ಭಯವಿಹ್ವಲಳಾಗಿ ಶ್ರೀಕೃಷ್ಣನನ್ನು ಕುರಿತು ಈ ರೀತಿ ಕೇಳಿದಳು.

॥ ರಾಧಿಕೋವಾಚ ॥

ಕಸ್ಯ ಕೇನ ಪ್ರಭಾವೇಣ ಮಹಾದರ್ಪೋ ಬಭೂವ ಹ ।
ತ್ವಯಾ ಕೇನ ಪ್ರಭಾವೇಣ ತಸ್ಯ ಭಂಗಃ ಕೃತಃ ಪುರಾ ॥ ೧೨ ॥

ಕಥಯಸ್ವ ಪ್ರಾಣನಾಥ ಸರ್ವೇಷಾಂ ದರ್ಪಭಂಜನ ।
ದರ್ಪದಾಭಯದ ಪ್ರಾಣದಾನೈಕಕಾರಣೇಶ್ವರ ॥ ೧೩ ॥

॥ ಶ್ರೀ ಕೃಷ್ಣ ಉವಾಚ ॥

ಯೇನ ಭೂತಂ ಗರ್ವಚೂರ್ಣಂ ಕೃತಂ ತ್ರಿಜಗತಾಂ ವಿಧೇಃ ।
ಅನ್ಯೇಷಾಂ ಶ್ರೂಯತಾಂ ರಾಧೇ ವ್ಯಾಸೇನ ಕಥಯಾಮಿ ತೇ ॥ ೧೪ ॥

ಸ್ವಯಂ ಶಿವೋ ಮದಂಶಶ್ಚ ಸಂಹರ್ತಾ ಜಗತಾಂ ಚ ಯಃ ।
ತೇಜಸಾ ಮತ್ಸಮಃ ಪೂರ್ಣೋ ಜ್ಞಾನೇನ ಚ ಗುಣೇನ ಚ ॥ ೧೫ ॥

---

೧೨. ರಾಧಿಕೆ :—ಎಲೈ ಪ್ರಭುವೇ, ಪೂರ್ವದಲ್ಲಿ ಯಾರಿಗೆ ಏತರ ಪ್ರಭಾವದಿಂದ ಮಹದ್ದರ್ಪವುಂಟಾಯಿತು ? ನೀನು ಏತರ ಪ್ರಭಾವದಿಂದ ಅವರ ದರ್ಪವನ್ನು ಭಂಗಗೊಳಿಸಿದೆ ?

೧೩. ಎಲೈ ಪ್ರಾಣನಾಥನೇ, ಸಕಲರ ದರ್ಪವನ್ನೂ ಭಂಗಗೊಳಿಸಿದವನೇ, ಜೀವಿಗಳಿಗೆ ದರ್ಪವನ್ನೂ ಪ್ರಾಣವನ್ನೂ ಸಹ ಕೊಡಬಲ್ಲ ಮೂಲಕಾರಣನೇ, ನನ್ನ ಪ್ರಶ್ನೆಗೆ ಉತ್ತರವನ್ನು ವಿಶದವಾಗಿ ಹೇಳು.

೧೪. ಶ್ರೀಕೃಷ್ಣ :—ಎಲೌ ರಾಧೆಯೇ, ತ್ರಿಲೋಕಾಧಿಪತಿಯಾದ ಬ್ರಹ್ಮನಿಗೆ ಯಾವ ರೀತಿಯಲ್ಲಿ ಗರ್ವಭಂಗವುಂಟಾಯಿತೆಂಬುದನ್ನೂ ಹಾಗೆಯೇ ಶಂಕರನೇ ಮುಂತಾದವರ ಗರ್ವಭಂಗವಾದುದನ್ನೂ ವಿಸ್ತರವಾಗಿ ಹೇಳುವೆನು, ಕೇಳು.

೧೫. ನನ್ನ ಅಂಶಸಂಭೂತನೂ ಜಗತ್ಸಂಹಾರಕರ್ತನೂ ಆದ ಶಿವನೂ ಸಹ ತೇಜಸ್ಸಿನಿಂದಲೂ, ಪರಿಪೂರ್ಣಜ್ಞಾನದಿಂದಲೂ, ದಿವ್ಯಗುಣಗಳಿಂದಲೂ ನನಗೆ ಸಮಾನನೆನಿಸಿರುವನು.

ಧ್ಯಾಯಂತಿ ಯೋಗಿನೋ ಯಂ ಸ ಯೋಗೀಂದ್ರಾಣಾಂ ಗುರೋರ್ಗುರುಃ ।
ಜ್ಞಾನಾನಂದಸ್ವರೂಪೋsಯಂ ತಸ್ಯಾಖ್ಯಾನಂ ಶೃಣು ಪ್ರಿಯೇ ॥ ೧೭ ॥

ಯುಗಷಷ್ಟಿಸಹಸ್ರಾಣಿ ತಪಸ್ತಪ್ತ್ವಾ ದಿವಾನಿಶಂ ।
ಭೂತ್ವಾ ಚ ಮತ್ಕಲಾಪೂರ್ಣೋ ಬಭೂವ ಮತ್ಸಮೋ ವಿಭುಃ ॥ ೧೭ ॥

ತಪಸಾ ತೇಜಸಾ ಶಶ್ವತ್ತೇಜೋರಾಶಿರ್ಬಭೂವ ಹ ।
ಸೂರ್ಯಕೋಟಿಪ್ರಭಾವಶ್ಚ ಭಕ್ತಾನಾಂ ಕಲ್ಪಪಾದಪಃ । ೧೮ ॥

ಧ್ಯಾಯಂ ಧ್ಯಾಯಂ ಚ ಯೋಗೀಂದ್ರಾಸ್ತತ್ತೇಜೋ ಬಹುಕಾಲತಃ ।
ತದಂತರೇ ಚ ಪಶ್ಯಂತಿ ಸ್ವರೂಪಮತಿಸುಂದರಂ ॥ ೧೯ ॥

ಶುದ್ಧಸ್ಫಟಿಕಸಂಕಾಶಂ ಪಂಚವಕ್ತ್ರಂ ತ್ರಿಲೋಚನಂ ।
ತ್ರಿಶೂಲಪಟ್ಟಿಶಕರಂ ವ್ಯಾಘ್ರಚರ್ಮಾಂಬರಂ ವರಂ ॥ ೨೦ ॥

---

೧೬. ಯಾರನ್ನು ಯೋಗಿಗಳು ಅನನ್ಯಭಕ್ತಿಯಿಂದ ಧ್ಯಾನಮಾಡುವರೋ ಯಾವನು ಯೋಗಿಶ್ರೇಷ್ಠರಿಗೂ ಗುರುವೆನಿಸುವನೋ, ಯಾವನು ಜ್ಞಾನಾನಂದ ಸ್ವರೂಪನೋ ಅಂಥ ಶಂಕರನ ಕಥೆಯೊಂದನ್ನು ಹೇಳುವೆನು. ಎಲೌ ಪ್ರಿಯಳೇ, ಸಾವಧಾನದಿಂದ ಕೇಳು.

೧೭. ಶಂಕರನು ಅರವತ್ತು ಸಾವಿರ ವರ್ಷಗಳು ಹಗಲೂ ರಾತ್ರಿ ನನ್ನನ್ನು ಕುರಿತು ತಪಸ್ಸುಮಾಡಿ ನನ್ನ ಕಲೆಯಿಂದ ಪರಿಪೂರ್ಣನಾಗಿ ಎಲ್ಲವಿಷಯದಲ್ಲಿಯೂ ನನಗೆ ಸಮಾನನೆನಿಸಿದನು.

೧೮. ತಪಸ್ಸಿನಿಂದ ದಿವ್ಯತೇಜಸ್ಸನ್ನು ಪಡೆದು ತೇಜೋರಾಶಿ ಎನಿಸಿದು ದಲ್ಲದೆ ಕೋಟಿಸೂರ್ಯರ ಪ್ರಭಾವದಿಂದ ಕೂಡಿ ಭಕ್ತರಿಗೆ ಕಲ್ಪವೃಕ್ಷದಂತೆ ಇಷ್ಟಾರ್ಥದಾಯಕನಾದನು.

೧೯. ಯೋಗಿಶ್ರೇಷ್ಠರು ಆ ದಿವ್ಯತೇಜಸ್ಸನ್ನು ಬಹಳಕಾಲದವರೆಗೆ ಧ್ಯಾನಮಾಡಿ ಅದರೊಳಗಡೆ ಪರಮಾತ್ಮನ ದಿವ್ಯಸುಂದರ ವಿಗ್ರವನ್ನು ಕಂಡು ಆನಂದಿಸುವರು.

೨೦. ಶುದ್ಧಸ್ಫಟಿಕದಂತೆ ನಿರ್ಮಲನೂ, ಪಂಚಮುಖಿಯೂ ತ್ರಿಲೋಚನನೂ ಆದ ಆ ಪರಶಿವನು ಕೈಯ್ಯಲ್ಲಿ ತ್ರಿಶೂಲಪಟ್ಟಿಶಗಳನ್ನು ಧರಿಸಿ ಮೈಮೇಲೆ ವ್ಯಾಘ್ರ ಚರ್ಮವನ್ನು ಹೊದೆದಿರುವನು.

ಜಪಂತಂ ಸ್ವಾತ್ಮನಾऽऽತ್ಮಾನಂ ಶ್ವೇತಾಬ್ಜಬೀಜಮಾಲಯಾ ।
ಈಷದ್ಧಾಸ್ಯಪ್ರಸನ್ನಾಸ್ಯಂ ಚಂದ್ರಚೂಡಂ ಪರಾತ್ಪರಂ ॥ ೨೧ ॥

ಸ್ವರ್ಣಾಕಾರಂ ಜಟಾಭಾರಂ ದಧತಂ ಶಿರಸಾ ಮುದಾ ।
ಶಾಂತಂ ಕಾಂತಂ ತ್ರಿಜಗತಾಂ ಭಕ್ತಾನುಗ್ರಹಕಾರಕಂ ॥ ೨೨ ॥

ಅಥ ಸ್ವಮೀಶ್ವರಂ ಮತ್ವಾ ಪ್ರದಾತಾ ಸರ್ವಸಂಪದಾಂ ।
ದದಾತಿ ಸರ್ವಂ ಸರ್ವೇಭ್ಯೋ ವಾಂಛಿತಂ ಕಲ್ಪಪಾದಪಃ ॥ ೨೩ ॥

ಯೋ ಯಂ ವಾಂಛತಿ ತಂ ತಸ್ಮೈ ವರಂ ದತ್ವಾ ವರೇಶ್ವರಃ ।
ಬಭೂವ ಗರ್ವಸಂಯುಕ್ತಃ ಸ್ವಾತ್ಮಾರಾಮಃ ಸ್ವಲೀಲಯಾ ॥ ೨೪ ॥

ಏಕದಾ ಚ ವೃಕೋ ದೈತ್ಯಸ್ತಪಸ್ತೇಪೇ ಶಿವಸ್ಯ ಚ ।
ಕೇದಾರೇ ಚ ಕಠೋರೇಣ ವರ್ಷಮೇಕಂ ದಿವಾನಿಶಂ ॥ ೨೫ ॥

---

೨೧. ಕೈಯ್ಯಲ್ಲಿ ಬಿಳಿದಾವರೆ ಬೀಜಗಳ ಮಾಲೆಯನ್ನು ಹಿಡಿದು ತನ್ನೊಳಗೆ ತನ್ನನ್ನೇ ಧ್ಯಾನಮಾಡುತ್ತಿರುವ ಆ ಪರಾತ್ಪರನಾದ ಚಂದ್ರಶೇಖರನು ಮುಗುಳು ನಗೆಯಿಂದ ಪ್ರಸನ್ನವದನನಾಗಿರುವನು.

೨೨. ತಲೆಯಲ್ಲಿ ಸುವರ್ಣವರ್ಣದ ಜಟಾಭಾರವನ್ನು ಧರಿಸಿ ಪ್ರಶಾಂತಾಕಾರದಿಂದ ಮೆರೆಯುವ ಆ ತ್ರಿಲೋಕಾಧಿಪತಿಯು ಭಕ್ತರಿಗೆ ಅನುಗ್ರಹಮಾಡುವುದರಲ್ಲಿ ನಿರತನಾಗಿರುವನು.

೨೩. ಈ ರೀತಿಯಾದ ಶಂಕರನು ಸಕಲರಿಗೂ ಸರ್ವಸಂಪತ್ಪ್ರದಾತೃವಾದ ಕಾರಣ ತಾನೇ ಸರ್ವೇಶ್ವರನೆಂದು ಬಗೆದು ಕಲ್ಪವೃಕ್ಷದಂತೆ ಸಕಲರ ಇಷ್ಟಾರ್ಥವನ್ನೂ ನೆರವೇರಿಸುತ್ತಿದ್ದನು.

೨೪. ವರಪ್ರದನಾದ ಆ ಶಂಕರನು ಭಕ್ತರಿಗೆ ಅವರವರು ಬಯಸಿದ ವರವನ್ನು ಕೊಟ್ಟು ಸ್ವಾತ್ಮಾರಾಮನಾಗಿ ತನಗೆ ಸಮರಾರೂ ಇಲ್ಲವೆಂದು ಗರ್ವಿತನಾದನು.

೨೫. ಹೀಗಿರುವಾಗ ಒಮ್ಮೆ ವೃಕನೆಂಬ ದೈತ್ಯನು ಕೇದಾರಕ್ಷೇತ್ರದಲ್ಲಿ ಒಂದುವರ್ಷಗಳಕಾಲ ಶಿವನನ್ನು ಕುರಿತು ಹಗಲೂ ರಾತ್ರಿ ತಪಸ್ಸುಮಾಡಿದನು.

ನಿತ್ಯಂ ಯಾತಿ ತತ್ಸಮೀಪಂ ಕೃಪಯಾ ಚ ಕೃಪಾನಿಧಿಃ ।
ವರಂ ದಾತುಂ ಯಥಾಭೀಷ್ಟಂ ನ ಜಗ್ರಾಹಾಸುರೋ ವರಂ ॥ ೨೬ ॥

ವರ್ಷಾಂತೇ ಶಂಕರಃ ಶಶ್ವತ್ತಸ್ಥೌ ತತ್ಪುರತಃ ಸ್ವಯಂ ।
ವರದೋ ಭಕ್ತಿಪಾಶೇನ ಕ್ಷಣಂ ಗಂತುಂ ನ ಸ ಕ್ಷಮಃ ॥ ೨೭ ॥

ಸರ್ವೈಶ್ವರ್ಯಂ ಸರ್ವಸಿದ್ಧಿಂ ಭುಕ್ತಿಂ ಮುಕ್ತಿಂ ಹರೇಃ ಪದಂ ।
ದೈತ್ಯಃ ಕಿಂಚಿನ್ನ ಗೃಹ್ಣಾತಿ ಪ್ರೇರಿತಃ ಶೂಲಪಾಣಿನಾ ॥ ೨೮ ॥

ಧ್ಯಾಯಮಾನಂ ತತ್ಪದಾಬ್ಜಂ ದೃಷ್ಟ್ವಾ ತ್ರಸ್ತೋ ಮಹೇಶ್ವರಃ ।
ಅಯಾಚಿತಾರಂ ನಿಶ್ಚೇಷ್ಟಂ ರುರೋದ ಪ್ರೇಮವಿಹ್ವಲಃ ॥ ೨೯ ॥

ಅತೀವ ರೋದನಾತ್ತಸ್ಯ ಧ್ಯಾನಭಂಗೋ ಬಭೂವ ಹ ।
ದದರ್ಶ ಪುರತಃ ಸಾಕ್ಷಾದ್ದಾತಾರಂ ಸರ್ವಸಂಪದಾಂ ॥ ೩೦ ॥

೨೬. ಆಗ ಕೃಪಾನಿಧಿಯಾದ ಶಂಕರನು ಆ ದೈತ್ಯನಿಗೆ ಅಭೀಷ್ಟವಾದ ವರವನ್ನು ಕೊಡಲು ಪ್ರತಿದಿನವೂ ಅವನ ಸಮೀಪಕ್ಕೆ ಹೋಗುತ್ತಿದ್ದರೂ ಸಹ ಆ ದೈತ್ಯೇಂದ್ರನು ಶಂಕರನಿಂದ ವರವನ್ನು ಸ್ವೀಕರಿಸಲಿಲ್ಲ.

೨೭. ಆದರೂ ವರಪ್ರದನಾದ ಶಂಕರನು ಅವನ ಭಕ್ತಿಪಾಶದಿಂದ ಬದ್ಧನಾಗಿ ವರ್ಷ ಮುಗಿದ ಕೂಡಲೇ ಅವನಿಗೆ ವರವನ್ನು ಕೊಡಲು ಅವನ ಮುಂದೆ ಬಂದು ನಿಂತನು.

೨೮. ಶೂಲಪಾಣಿಯು ಸರ್ವೈಶ್ವರ್ಯವನ್ನೂ, ಸರ್ವಸಿದ್ಧಿಯನ್ನೂ, ಭುಕ್ತಿ ಮುಕ್ತಿಯನ್ನೂ ಕಡೆಗೆ ಶ್ರೀಹರಿಯ ಪದವಿಯನ್ನೂ ಕೊಡುವುದಾಗಿ ಹೇಳಿದರೂ ಆ ದೈತ್ಯನು ಯಾವುದನ್ನೂ ಸ್ವೀಕರಿಸಲಿಷ್ಟಪಡಲಿಲ್ಲ.

೨೯. ಈ ರೀತಿ ಯಾವ ವರವನ್ನೂ ಯಾಚಿಸದೆ ನಿಶ್ಚೇಷ್ಟನಾಗಿ ತನ್ನ ಪಾದಕಮಲಗಳನ್ನು ಧ್ಯಾನಮಾಡುತ್ತಿರುವ ಆ ದೈತ್ಯನನ್ನು ನೋಡಿ ಮಹೇಶ್ವರನು ಭೀತನಾಗಿ ಭಕ್ತವಾತ್ಸಲ್ಯದಿಂದ ಅಳಲಾರಂಭಿಸಿದನು.

೩೦. ಈ ರೀತಿ ಶಂಕರನು ಗಟ್ಟಿಯಾಗಿ ಅತ್ತುದರಿಂದ ಆ ದೈತ್ಯನ ಧ್ಯಾನ ಭಂಗವುಂಟಾಯಿತು. ಆಗ ಆ ದೈತ್ಯನು ತನ್ನ ಮುಂದೆ ಸರ್ವಸಂಪತ್ಪ್ರದಾತೃವಾದ ಪರಶಿವನನ್ನು ಕಂಡನು.

ಮನ್ಮಾಯಯಾ ವರಂ ವವ್ರೇ ದೈತ್ಯೇಂದ್ರೋ ಭಕ್ತಿಪೂರ್ವಕಂ ।
ಹಸ್ತಂ ದಧೇ ಚ ಯನ್ಮೂರ್ಧ್ನಿ ಸ ಭಸ್ಮ ಭವಿತೇತಿ ಚ ॥ ೩೧ ॥

ಓಮಿತ್ಯುಕ್ತ್ವಾ ಪ್ರಯಾಂತಂ ತಂ ದುದ್ರಾವ ದೈತ್ಯಪುಂಗವಃ ।
ಮೃತ್ಯುಂಜಯೋ ಮೃತ್ಯುಭಯಾದ್ದುದ್ರಾವ ತ್ರಾಸವಿಹ್ವಲಃ ॥ ೩೨ ॥

ಪಪಾತ ಡಮರುಸ್ತಸ್ಯ ವ್ಯಾಘ್ರಚರ್ಮ ಮನೋಹರಂ ।
ದಿಗಂಬರೋ ದಶ ದಿಶೋ ಭೇಜೇ ದಾನವಭೀತಯೇ ॥ ೩೩ ॥

ನ ಹಂತಿ ತಂ ಚ ಕೃಪಯಾ ಭಕ್ತಂ ಚ ಭಕ್ತವತ್ಸಲಃ ।
ದುಷ್ಟಾನುಸಾರಂ ಸಾಧುಶ್ಚ ನ ಕರೋತಿ ಕದಾಚನ ॥ ೩೪ ॥

ಸಾಧವೋ ಘ್ನಂತಿ ಘ್ನಂತಂ ಚ ಭೃತ್ಯಂ ಪುತ್ರಂ ಪ್ರಿಯಾಂ ವಿನಾ ।
ಪ್ರಬೋಧಿತುಂ ನ ಶಕ್ತಶ್ಚ ಸ್ವಾತ್ಮಾನಂ ಕೃಪಯಾ ಸಮಂ ॥ ೩೫ ॥

---

೩೧. ಕೂಡಲೇ ಆ ದೈತ್ಯೇಂದ್ರನು ನನ್ನ ಮಾಯೆಗೊಳಗಾಗಿ ಪರಶಿವನನ್ನು ಕುರಿತು 'ನಾನು ಯಾರ ತಲೆಯಮೇಲೆ ಕೈ ಇಡುವೆನೋ ಅವನು ಬೂದಿಯಾಗುವಂತೆ ಅನುಗ್ರಹಿಸು' ಎಂದು ಭಕ್ತಿಯಿಂದ ವರವನ್ನು ಬೇಡಿದನು.

೩೨. ಹಾಗೆಯೇ ಆಗಲೆಂದು ಹೇಳಿ ಹಿಂದಕ್ಕೆ ಹೋಗುತ್ತಿದ್ದ ಆ ಶಿವನನ್ನು ದೈತ್ಯೇಶ್ವರನಾದ ಆ ವೃಕನು ಅಟ್ಟಿಸಿಕೊಂಡುಹೋದನು. ಮೃತ್ಯುಂಜಯನೂ ಸಹ ಮೃತ್ಯುಭೀತನಾಗಿ ಭಯದಿಂದ ಓಡಿದನು.

೩೩. ಆಗ ಶಿವನ ಡಮರುಗವೂ, ಮನೋಹರವಾದ ಹುಲಿಯ ಚರ್ಮವೂ, ಕೆಳಕ್ಕೆ ಬಿದ್ದಿತು. ಶಿವನು ದಿಗಂಬರನಾಗಿ (ವಸ್ತ್ರರಹಿತನಾಗಿ) ದಾನವನ ಭಯದಿಂದ ದಶದಿಕ್ಕುಗಳಿಗೂ ಓಡಿದನು.

೩೪. ಆದರೆ ಭಕ್ತವತ್ಸಲನೂ, ದಯಾಮಯನೂ ಆದ ಶಂಕರನು ಭಕ್ತನಾದ ಆ ರಾಕ್ಷಸನನ್ನು ನಿಗ್ರಹಿಸಲು ಇಷ್ಟಪಡಲಿಲ್ಲ. ಯಾವಾಗಲೂ ಸಾಧುಗಳು ದುಷ್ಟರಂತೆ ದುಷ್ಟತನವನ್ನಾಚರಿಸುವುದಿಲ್ಲ.

೩೫. ಸಾಧುಗಳು ತಮ್ಮ ಸೇವಕ, ಮಗ ಮತ್ತು ಪತ್ನಿಯನ್ನು ಬಿಟ್ಟು ತಮ್ಮನ್ನು ಹಿಂಸಿಸುವ ಇತರರನ್ನು ಹಿಂಸಿಸುವರು. ಆದರೆ ಆ ರಾಕ್ಷಸನು ತನ್ನ ಭಕ್ತನಾದುದರಿಂದ ಶಿವನು ದಯೆಯಿಂದ ಅವನನ್ನು ಹಿಂಸಿಸಲಿಷ್ಟಪಡಲಿಲ್ಲ. ಅವನಿಗೆ ಬುದ್ಧಿ ಹೇಳಲೂ ಸಾಧ್ಯವಾಗಲಿಲ್ಲ.

ಶಿವಃ ಸ್ವಮೃತ್ಯುಂ ಮತ್ವಾ ಚ ಭೀತಶ್ಚ ನಿರಹಂಕೃತಃ ।
ಸ್ಮಾರಂ ಸ್ಮಾರಂ ಚ ಮಾಂ ಭದ್ರೇ ಮಾಮೇವ ಶರಣಂ ಯಯೌ ॥ ೩೬ ॥

ದೃಷ್ಟ್ವಾ ಸ್ವಾಶ್ರಯಮಾಯಾಂತಂ ಶುಷ್ಕಕಂಠೋಷ್ಠತಾಲುಕಂ ।
ಹೇ ಹರೇ ರಕ್ಷ ರಕ್ಷೇತಿ ಜಪಂತಂ ಭಯವಿಹ್ವಲಂ ॥ ೩೭ ॥

ಸಂಸ್ಥಾಪ್ಯ ತತ್ಸಮೀಪೇ ಚ ಸ ದೈತ್ಯೋ ಬೋಧಿತೋ ಮಯಾ ।
ಪೃಷ್ಟಶ್ಚ ಸರ್ವವೃತ್ತಾಂತಮುವಾಚ ಮಾಂ ಕ್ರಮೇಣ ಚ ॥ ೩೮ ॥

ತದಾ ಮಮಾಽಜ್ಞಯಾ ತೂರ್ಣಂ ವಂಚಿತೋ ಮಾಯಯಾಽಸುರಃ ।
ದತ್ವಾ ಸ್ವಮೂರ್ಧ್ನಿ ಹಸ್ತಂ ಚ ಸದ್ಯೋ ಭಸ್ಮ ಬಭೂವ ಹ ॥ ೩೯ ॥

ತದಾ ಸಿದ್ಧಾಃ ಸುರೇಂದ್ರಾಶ್ಚ ಮುನೀಂದ್ರಾ ಮನವೋ ಮುದಾ ।
ತುಷ್ಟುವುರ್ಮಾಂ ಸುಭಕ್ತ್ಯಾ ಚ ಲಜ್ಜಯಾ ಲಜ್ಜಿತಃ ಶಿವಃ ॥ ೪೦ ॥

---

೩೬. ಎಲೌ ಮಂಗಳಾಂಗಿಯೇ, ಈ ರೀತಿ ಶಿವನು ತನಗೆ ಮೃತ್ಯು ಒದಗಿರುವುದನ್ನು ನೋಡಿ ಭೀತನಾಗಿ ನನ್ನನ್ನೇ ಸ್ಮರಿಸುತ್ತ ನನ್ನ ಪಾದಗಳಲ್ಲಿ ಶರಣು ಹೊಂದಿದನು.

೩೭-೩೮. ಈ ರೀತಿ ಭಯಭ್ರಾಂತನಾಗಿ ನನ್ನನ್ನು ಮರೆಹೊಕ್ಕು, ಒಣಗಿದ ಕಂಠ ತಾಲುಗಳುಳ್ಳವನಾಗಿ 'ಶ್ರೀಹರಿಯೇ, ರಕ್ಷಿಸು! ರಕ್ಷಿಸು!' ಎಂದು ಜಪಿಸುತ್ತಿದ್ದ ಶಂಕರನನ್ನು ಸಮಾಧಾನಪಡಿಸಿ ಅವನ ಸಮೀಪದಲ್ಲಿದ್ದ ಆ ರಾಕ್ಷಸನಿಗೆ ನಾನು ವಿವೇಕವನ್ನು ಹೇಳಿದೆನು. ಆಗ ಆ ದೈತ್ಯೇಂದ್ರನು ಕ್ರಮವಾಗಿ ನಡೆದ ಸಮಾಚಾರವನ್ನೆಲ್ಲ ನನ್ನಲ್ಲಿ ಅರುಹಿದನು.

೩೯. ಆಗ ನನ್ನ ಮಾಯೆಯಿಂದ ವಂಚಿತನಾದ ಆ ಅಸುರನು ನನ್ನ ಅಪ್ಪಣೆಯಂತೆ ತನ್ನ ತಲೆಯ ಮೇಲೇ ತನ್ನ ಕೈಯನ್ನಿಟ್ಟುಕೊಂಡು ಕೂಡಲೇ ಭಸ್ಮವಾದನು.

೪೦. ಆಗ ಸಿದ್ಧರೂ, ಸುರಶ್ರೇಷ್ಠರೂ, ಮುನೀಂದ್ರರೂ, ಮನುಗಳೂ ಸಹ ಸಂತುಷ್ಟರಾಗಿ ಭಕ್ತಿಯಿಂದ ನನ್ನನ್ನು ಸ್ತುತಿಸಲಾರಂಭಿಸಿದರು. ಶಂಕರನಾದರೋ ಲಜ್ಜೆಯಿಂದ ಕೂಡಿ ತಲೆತಗ್ಗಿಸಿಕೊಂಡು ನಿಂತನು.

ಬಭೂವ ಚೂರ್ಣಸ್ತದ್ಗರ್ವೋ ಜಗಾಮ ಬೋಧಿತೋ ಮಯಾ ।
ವರಂ ದದಾತಿ ವರದಸ್ತತೋ ಬೋಧ್ಯೋ ಹ್ಯಹಂ ಶಿವಃ ॥ ೪೧ ॥

ಅಥ ಗರ್ವಾನ್ವಿತೋ ರುದ್ರೋ ಹಂತುಂ ತ್ರಿಪುರಮುಲ್ಬಣಂ ।
ಮತ್ವಾ ಮನಸಿ ಸಂಹರ್ತಾ ಸರ್ವೇಷಾಂ ಜಗತಾಮಿತಿ ॥ ೪೨ ॥

ಕೋಽಯಂ ಪತಂಗವದ್ದೈತ್ಯ ಇತಿ ಮತ್ವಾ ಯಯೌ ರಣಂ ।
ವಿಹಾಯ ಶೂಲಂ ಮದ್ದತ್ತಂ ಮದೀಯಕವಚಂ ಪರಂ ॥ ೪೩ ॥

ಚಿರಂ ಬಭೂವ ಸಮರಂ ವರ್ಷಮೇಕಂ ದಿವಾನಿಶಂ ।
ನ ಕೋಽಪಿ ಜೇತುಂ ಕಂ ಶಕ್ತೋ ದ್ವೌ ಸಮೌ ಸಮರೇ ತದಾ ॥ ೪೪ ॥

ಪೃಥಿವ್ಯಾಂ ಚ ರಣಂ ಕೃತ್ವಾ ದೈತ್ಯೇಂದ್ರೋ ಮಾಯಯಾ ಪ್ರಿಯೇ ।
ಆಶ್ಯೋರ್ಧ್ವಂ ಚ ಸಮುತ್ತಸ್ಥೌ ಪಂಚಾಶತ್ಕೋಟಿಯೋಜನಂ ॥ ೪೫ ॥

---

೪೧. ಆಗ ನನ್ನ ಬೋಧನೆಯಿಂದ ಗರ್ವರಹಿತನಾಗಿ ಶಿವನು ಹೊರಟು ಹೋದನು. ವರಪ್ರದನಾದ ಆ ಶಿವನು ವರವನ್ನು ಕೊಡಬಲ್ಲನೇ ಹೊರತು ಅದನ್ನು ಹಿಂದಕ್ಕೆ ತೆಗೆದುಕೊಳ್ಳಲಾರನು.

೪೨. ಅನಂತರ ಶಿವನು ಮತ್ತೊಮ್ಮೆ ಗರ್ವಿತನಾಗಿ, ತಾನೇ ಜಗತ್ತಿನ ಸಂಹಾರಕರ್ತನೆಂದು ಭಾವಿಸಿ ಅತ್ಯುಲ್ಬಣನಾದ ತ್ರಿಪುರಾಸುರನನ್ನು ಸಂಹರಿಸಲುದ್ಯುಕ್ತನಾದನು.

೪೩. 'ಪತಂಗ (ದೀಪದ ಹುಳು) ದಂತಿರುವ ಈ ದೈತ್ಯನು ನನ್ನ ಮುಂದೆ ಎಷ್ಟರವನು?' ಎಂದು ಗರ್ವಿತನಾದ ರುದ್ರನು ನಾನು ಅನುಗ್ರಹಿಸಿದ್ದ ದಿವ್ಯ ಕವಚವನ್ನೂ, ಶೂಲಾಯುಧವನ್ನೂ ಬಿಟ್ಟು ಬರಿಗೈಯ್ಯಲ್ಲಿ ಆ ಅಸುರನೊಡನೆ ಯುದ್ಧಮಾಡಲು ಹೋದನು.

೪೪. ಒಂದು ವರ್ಷಕಾಲ ಹಗಲೂ ರಾತ್ರಿ ಅವರಿಬ್ಬರಿಗೂ ದೀರ್ಘ ಯುದ್ಧವಾಯಿತು. ಇಬ್ಬರೂ ಸಮಾನಬಲದವರಾದುದರಿಂದ ಯಾರನ್ನು ಯಾರೂ ಗೆಲ್ಲಲು ಸಮರ್ಥರಾಗಲಿಲ್ಲ.

೪೫. ಎಲೌ ಪ್ರಿಯಳೇ, ಈ ರೀತಿ ತ್ರಿಪುರಾಸುರನು ಶಂಕರನೊಡನೆ ಭೂಮಿಯಲ್ಲಿ ಯುದ್ಧವನ್ನು ಮಾಡಿ ತನ್ನ ಮಾಯಾಬಲದಿಂದ ಆಕಾಶದಲ್ಲಿ ಐವತ್ತು ಕೋಟಿ ಯೋಜನ ದೂರಹೋಗಿ ಯುದ್ಧಮಾಡಲಾರಂಭಿಸಿದನು.

ಉತ್ತಸ್ಥೌ ಶಂಕರಸ್ತೂರ್ಣಂ ಹಂತುಂ ದೈತ್ಯಂ ಜಗತ್ಪ್ರಭುಃ ।
ಬಭೂವ ತತ್ರ ಯುದ್ಧಂ ಚ ಮಾಸಮೇಕಂ ನಿರಾಶ್ರಯೇ ॥ ೪೬ ॥

ಅಸ್ತ್ರಾಣಿ ಚಾಪಂ ಚಿಚ್ಛೇದ ಶಂಕರಸ್ಯಾಸುರೋ ಬಲೀ ।
ರಥಂ ಬಭಂಜ ದೈತ್ಯೇಂದ್ರಶ್ಚಾಪಮಸ್ತ್ರಾಣಿ ಶಂಕರಾತ್ ॥ ೪೭ ॥

ಜಘಾನ ಮುಷ್ಟಿನಾ ರುದ್ರೋ ದಾನವೇಂದ್ರಂ ಪ್ರಕೋಪಿತಃ ।
ವಜ್ರಮುಷ್ಟಿಪ್ರಹಾರೇಣ ಸದ್ಯೋ ಮೂರ್ಛಾಮವಾಪ ಸಃ ॥ ೪೮ ॥

ಕ್ಷಣೇನ ಚೇತನಾಂ ಪ್ರಾಪ್ಯ ಕೋಪಾದ್ದಾನವಪುಂಗವಃ ।
ಶಿವಂ ಸಯಾನಮುತ್ತೋಲ್ಯ ಪಾತಯಾಮಾಸ ಭೂತಲೇ ॥ ೪೯ ॥

ಸರಥೇ ಪಾತಿತೇ ರುದ್ರೇ ದೇವಾ ದೇವರ್ಷಯೋ ಭಿಯಾ ।
ತುಷ್ಟುವುರ್ಮಾಂ ಪರಿತ್ರಾಹಿ ಕೃಷ್ಣೇತ್ಯುಕ್ತ್ವಾ ಪುನಃ ಪುನಃ ॥ ೫೦ ॥

---

೪೬. ಜಗತ್ಪ್ರಭುವಾದ ಶಂಕರನೂ ಸಹ ಜಾಗ್ರತೆಯಾಗಿ ಆಕಾಶಕ್ಕೆ ಹಾರಿ ದೈತ್ಯೇಂದ್ರನನ್ನು ಕೊಲ್ಲಲುದ್ಯುಕ್ತನಾದನು. ನಿರಾಶ್ರಯವಾದ ಆಕಾಶದಲ್ಲಿ ಒಂದು ತಿಂಗಳುಕಾಲ ಅವರಿಬ್ಬರಿಗೂ ಯುದ್ಧವಾಯಿತು.

೪೭. ಬಲಿಷ್ಠನಾದ ಆ ರಾಕ್ಷಸನು ಶಂಕರನ ದಿವ್ಯಾಸ್ತ್ರಗಳನ್ನೂ, ಧನುಸ್ಸನ್ನೂ ಸಹ ಕತ್ತರಿಸಿದನು. ಅಲ್ಲದೆ ಅವನ ರಥವನ್ನು ಪುಡಿಪುಡಿಮಾಡಿ ಅವನಿಂದ ತನ್ನ ಧನುರ್ಬಾಣಗಳನ್ನೂ ಕತ್ತರಿಸಿಕೊಂಡನು.

೪೮. ಕುಪಿತನಾದ ರುದ್ರನು ದಾನವೇಂದ್ರನನ್ನು ಮುಷ್ಟಿಯಿಂದ ಹೊಡೆದನು. ಆ ವಜ್ರಮುಷ್ಟಿಪ್ರಹಾರದಿಂದ ದಾನವೇಂದ್ರನು ಕೂಡಲೇ ಮೂರ್ಛೆಹೊಂದಿದನು.

೪೯. ಕ್ಷಣಕಾಲದಲ್ಲಿಯೇ ಚೇತನಹೊಂದಿದ ಆ ದಾನವೇಂದ್ರನು ಕುಪಿತನಾಗಿ ರಥಸಹಿತವಾಗಿ ಶಿವನನ್ನು ಎತ್ತಿಕೊಂಡು ಭೂಮಿಯ ಮೇಲೆ ಕೆಡವಿದನು.

೫೦. ಈರೀತಿ ರುದ್ರನು ರಥದೊಡನೆ ಕೆಳಗೆ ಬಿದ್ದುದನ್ನು ನೋಡಿ ಭಯಗ್ರಸ್ಥರಾದ ದೇವತೆಗಳೂ ಮತ್ತು ದೇವರ್ಷಿಗಳೂ ಸಹ 'ಕೃಷ್ಣಾ, ಕೃಷ್ಣಾ, ಕಾಪಾಡು ಕಾಪಾಡು' ಎಂದು ಹೇಳಿ ನನ್ನನ್ನು ಸ್ತುತಿಸಿದರು.

ಹರಃ ಸಸ್ಮಾರ ಮಾಮೇವ ನಿರ್ಭಯೋ ಭಯಕಾರಣಂ ।
ತುಷ್ಟಾವ ಭಕ್ತ್ಯಾ ಸ್ತೋತ್ರೇಣ ಮಯಾ ದತ್ತೇನ ಸಂಕಟೇ　　|| ೫೧ ||

ತದಾಽಹಂ ಕಲಯಾ ಶೀಘ್ರಂ ವೃಷರೂಪಂ ವಿಧಾಯ ಚ
ತಯಾನಂ ಶಂಕರಂ ಧೃತ್ವಾ ವಿಷಾಣಾಭ್ಯಾಮುರುಕ್ರಮಃ　　|| ೫೨ ||

ದದೌ ತಸ್ಮೈ ಸ್ವಕವಚಂ ಸ್ವಶೂಲಮರಿಮರ್ದನಂ ।
ಪ್ರಾಪ್ಯ ತದ್ದಾನವಸ್ಥಾನಮತ್ಯೂರ್ಧ್ವಂ ಚ ನಿರಾಶ್ರಯಂ　　|| ೫೩ ||

ಮಯಾ ದತ್ತೇನ ಶೂಲೇನ ಜಘಾನ ತ್ರಿಪುರಂ ಹರಃ ।
ಮಾಮೇವ ದರ್ಪಹಂತಾರಂ ತುಷ್ಟಾವ ವ್ರೀಡಿತಃ ಪುನಃ　　|| ೫೪ ||

ಸದ್ಯಃ ಪಪಾತ ದೈತ್ಯೇಂದ್ರಶ್ಚೂರ್ಣೀಭೂತಶ್ಚ ಭೂತಲೇ ।
ದೇವತಾ ಮುನಯಃ ಸರ್ವೇ ತುಷ್ಟುವುಃ ಶಂಕರಂ ಮುದಾ　　|| ೫೫ ||

---

೫೧. ಹರನೂ ಸಹ ನಿರ್ಭಯನಾಗಲು ಭಯಕಾರಣನಾದ ನನ್ನನ್ನು ಸ್ಮರಿಸಿದನು. ನಾನು ಅವನಿಗೆ ಅನುಗ್ರಹಿಸಿದ ದಿವ್ಯಸ್ತೋತ್ರದಿಂದ ಸಂಕಟ ಒದಗಿದಾಗ ನನ್ನನ್ನು ಸ್ತುತಿಸಿದನು.

೫೨–೫೪. ಆಗ ನಾನು ಜಾಗ್ರತೆಯಾಗಿ ನನ್ನ ಕಲಾಂಶದಿಂದ ವೃಷಭರೂಪವನ್ನು ಧರಿಸಿದವನಾಗಿ, ನನ್ನ ಎರಡು ಕೊಂಬುಗಳಿಂದ ಮಲಗಿರುವ ಶಂಕರನನ್ನು ಎತ್ತಿಕೊಂಡು ನನ್ನ ಅಭೇದ್ಯವಾದ ಕವಚವನ್ನೂ, ಶತ್ರುನಾಶಕವಾದ ಶೂಲಾಯುಧವನ್ನೂ ಅವನಿಗೆ ಅನುಗ್ರಹಿಸಿದೆನು. ಆಗ ಶಂಕರನು ಬಹಳ ಮೇಲುಭಾಗದಲ್ಲಿ ಆ ದಾನವನಿರುವ ನಿರಾಶ್ರಯಪ್ರದೇಶಕ್ಕೆ ಹೋಗಿ ನಾನು ಕೊಟ್ಟ ಶೂಲಾಯುಧದಿಂದ ಆ ತ್ರಿಪುರಾಸುರನನ್ನು ನಿಗ್ರಹಿಸಿದನು. ಪುನಃ ಲಜ್ಜೆಗೊಂಡು ದರ್ಪನಾಶಕನಾದ ನನ್ನನ್ನೇ ಮತ್ತೆಮತ್ತೆ ಸ್ತುತಿಸಲಾರಂಭಿಸಿದನು.

೫೫. ಇತ್ತ ಆ ತ್ರಿಪುರಾಸುರನೂ ಸಹ ಚೂರ್ಣಿತನಾಗಿ ಕೂಡಲೇ ಭೂಮಿಯ ಮೇಲೆ ಬಿದ್ದನು. ಆಗ ದೇವತೆಗಳು, ಮುನಿಗಳು ಮುಂತಾದವರೆಲ್ಲರೂ ಸಂತುಷ್ಟರಾಗಿ ಶಂಕರನನ್ನು ಸ್ತುತಿಸಿದರು.

ತತ್ಯಾಜ ಶಂಕರೋ ದರ್ಪಂ ವಿಶ್ವಬೀಜಂ ತತೋ ವಿಭುಃ ।
ಜ್ಞಾನಾನಂದಸ್ವರೂಪಶ್ಚ ನಿರ್ಲಿಪ್ತಃ ಸರ್ವಕರ್ಮಸು ॥ ೫೬ ॥

ತತೋಽಹಂ ವೃಷರೂಪೇಣ ವಹಾಮಿ ತೇನ ತಂ ಪ್ರಿಯಂ ।
ಮಮ ಪ್ರಿಯತಮೋ ನಾಸ್ತಿ ತ್ರೈಲೋಕ್ಯೇಷು ಶಿವಾತ್ಪರಃ ॥ ೫೭ ॥

ಮನಃಸ್ವರೂಪೋ ಬ್ರಹ್ಮಾ ಮೇ ಜ್ಞಾನರೂಪೋ ಮಹೇಶ್ವರಃ ।
ಬುದ್ಧಿರ್ಭಗವತೀ ದುರ್ಗಾ ಮೂಲಪ್ರಕೃತಿರೀಶ್ವರೀ ॥ ೫೮ ॥

ನಿದ್ರಾದಯಃ ಶಕ್ತಯೋ ಯಾಸ್ತಾಃ ಸರ್ವಾಃ ಪ್ರಕೃತೇಃ ಕಲಾಃ ।
ವಾಗಧಿಷ್ಠಾತೃದೇವೀ ಯಾ ಸಾ ಸ್ವಯಂ ಚ ಸರಸ್ವತೀ ॥ ೫೯ ॥

ಮಮ ಕಲ್ಯಾಣಾಧಿದೇವೋ ಹರ್ಷರೂಪೋ ಗಣೇಶ್ವರಃ ।
ಪರಮಾರ್ಥಃ ಸ್ವಯಂ ಧರ್ಮೋ ಮಮ ಭಕ್ತೋ ಹುತಾಶನಃ ॥ ೬೦ ॥

---

೫೬. ಅನಂತರ ವಿಶ್ವವ್ಯಾಪಿಯಾದ ಆ ಶಂಕರನು ವಿಶ್ವಕ್ಕೆ ಬೀಜದಂತಿರುವ ತನ್ನ ದರ್ಪವನ್ನು ಬಿಟ್ಟು, ಜ್ಞಾನಾನಂದಮಯನಾಗಿ ಸಕಲ ಕರ್ಮಗಳಲ್ಲೂ ಮಮತಾಭಿಮಾನವನ್ನು ಬಿಟ್ಟು ನಿರ್ಲಿಪ್ತನಾದನು.

೫೭. ಈ ರೀತಿ ಶಂಕರನು ನನಗೆ ಪ್ರಿಯನಾದುದರಿಂದಲೇ ಅವನನ್ನು ನಾನು ವೃಷಭರೂಪದಿಂದ ಹೊರುತ್ತೇನೆ. ಮೂರು ಲೋಕಗಳಲ್ಲಿಯೂ ಸಹ ನನಗೆ ಶಿವನಿಗಿಂತ ಪ್ರಿಯರಾದವರು ಬೇರಾರೂ ಇಲ್ಲ.

೫೮. ಬ್ರಹ್ಮನು ನನ್ನ ಮನಃಸ್ವರೂಪನಾಗಿಯೂ, ಮಹೇಶ್ವರನು ಜ್ಞಾನಸ್ವರೂಪನಾಗಿಯೂ, ಮೂಲಪ್ರಕೃತಿಯೂ, ಸರ್ವೇಶ್ವರಿಯೂ ಆದ ದುರ್ಗೆಯು ನನ್ನ ಬುದ್ಧಿಸ್ವರೂಪಿಣಿಯಾಗಿಯೂ ಇದ್ದಾರೆ.

೫೯. ನಿದ್ರಾದಿ ಸಕಲ ಶಕ್ತಿಗಳೂ ಸಹ ಪ್ರಕೃತಿಯ ಕಲೆಗಳು. ವಾಗಧಿಷ್ಠಾತೃದೇವತೆಯಾದ ಸಾಕ್ಷಾತ್ ಸರಸ್ವತೀದೇವಿಯೂ ಸಹ ಮೂಲಪ್ರಕೃತಿಯ ಕಲಾಸಂಭೂತಳು.

೬೦. ಮಂಗಳಗಳಿಗೆಲ್ಲ ಅಧಿದೇವತೆಯಾದ ಶ್ರೀ ಗಣೇಶ್ವರನೂ ಸಹ ನನ್ನ ಹರ್ಷಸ್ವರೂಪನು. ಸ್ವಯಂ ಧರ್ಮದೇವನೂ, ಅಗ್ನಿದೇವನೂ ಸಹ ನನ್ನ ಪರಮ ಭಕ್ತರು.

ಸರ್ವೈಶ್ವರ್ಯಾಧಿದೇವೀ ಮೇ ಸರ್ವಗೋಲೋಕವಾಸಿನಃ ।
ಪ್ರಾಣಾಧಿಷ್ಠಾತೃದೇವೀ ತ್ವಂ ಸದಾ ಪ್ರಾಣಾಧಿಕಾ ಮಮ ॥ ೬೧ ॥

ಗೋಪಾಂಗನಾಸ್ತವ ಕಲಾ ಅತ ಏವ ಮಮ ಪ್ರಿಯಾಃ ।
ಮಲ್ಲೋಮಕೂಪಜಾ ಗೋಪಾಃ ಸರ್ವೇ ಗೋಲೋಕವಾಸಿನಃ ॥ ೬೨ ॥

ತೇಜಃಸ್ವರೂಪಃ ಸೂರ್ಯಶ್ಚ ಪ್ರಾಣಾ ಮೇ ವಾಯವಃ ಸ್ಮೃತಾಃ ।
ಜಲಾಧಿದೇವೋ ವರುಣಃ ಪೃಥಿವೀ ಮೇ ಮಲೋದ್ಭವಾ ॥ ೬೩ ॥

ಮಮ ಶೂನ್ಯೋ ಮಹಾಕಾಶೋ ಮದನೋ ಮಾನಸೋದ್ಭವಃ ।
ಇಂದ್ರಾದಯಃ ಸುರಾಃ ಸರ್ವೇ ಮತ್ಕಲಾಂಶಾಂಶಸಂಭವಾಃ ॥ ೬೪ ॥

ಏತಾನಿ ಸೃಷ್ಟಿಬೀಜಾನಿ ಮಹದಾದೀನಿ ಚೈವ ಹಿ ।
ಸರ್ವೇಷಾಂ ಬೀಜರೂಪೋಽಹಂ ಸ್ವಯಮಾತ್ಮಾ ನಿರಾಶ್ರಯಃ ॥ ೬೫ ॥

---

೬೧. ಗೋಲೋಕವಾಸಿಯಾದ ನನ್ನ ಸಕಲೈಶ್ವರ್ಯಗಳಿಗೂ ಅಧಿದೇವತೆಯೂ ನನ್ನ ಪ್ರಾಣಾಧಿಷ್ಠಾತೃದೇವತೆಯೂ ಆದ ನೀನು ಸರ್ವದಾ ನನ್ನ ಪ್ರಾಣಕ್ಕಿಂತ ಪ್ರಿಯಳಾಗಿರುವೆ-

೬೨. ಗೋಪಾಂಗನೆಯರೆಲ್ಲರೂ ನಿನ್ನ ಕಲಾಸಂಭೂತರಾದುದರಿಂದ ನನಗ ಪ್ರಿಯರಾಗಿರುವರು. ಗೋಲೋಕವಾಸಿಗಳಾದ ಗೋಪರೂ ಸಹ ನನ್ನ ಲೋಮ ಕೂಪದಿಂದ ಜನಿಸಿದವರು.

೬೩. ಸೂರ್ಯದೇವನು ನನ್ನ ತೇಜಃಸ್ವರೂಪನು. ನನ್ನ ಪ್ರಾಣಗಳೇ ವಾಯುರೂಪದಿಂದಿರುವುವು. ವರುಣನು ಜಲಾಧಿದೇವತೆಯಾಗಿಯೂ, ಪೃಥಿವಿಯು ನನ್ನ ಮಲದಿಂದ ಸಂಭೂತವಾದುದಾಗಿಯೂ ಇರುವುದು.

೬೪. ಮಹಾಕಾಶವು ನನ್ನ ಶೂನ್ಯಸ್ವರೂಪದಿಂದ ಇರುವುದು. ಮನ್ಮಥನು ನನ್ನ ಮನಸ್ಸಿನಿಂದ ಸಂಭೂತನೂ, ಇಂದ್ರಾದಿ ಸಕಲ ದೇವತೆಗಳೂ ನನ್ನ ಕಲಾಂಶ ಸಂಭೂತರೂ ಆಗಿರುವರು.

೬೫. ಸೃಷ್ಟಿಗೆ ಮೂಲಕಾರಣವಾದ ಮಹತ್ತತ್ತ್ವ, ಅಹಂಕಾರ ತತ್ತ್ವಾದಿ ಗಳಿಗೂ ಸಹ ಬೀಜರೂಪನಾಗಿರುವ ನಾನು ನಿರಾಶ್ರಯನೂ ಸ್ವಯಂ ಪರಿಪೂರ್ಣನೂ ಆಗಿರುವೆನು.

ಜೀವೋ ಮೇ ಪ್ರತಿಬಿಂಬಶ್ಚ ಕರ್ಮಭೋಗಾದಿಕಾರಕಃ ।
ಅಹಂ ಸಾಕ್ಷೀ ನಿರೀಹಶ್ಚ ನ ಭೋಗೀ ಸರ್ವಕರ್ಮಸು ॥ ೬೬ ॥

ಭಕ್ತಧ್ಯಾನಾರ್ಥದೇಹೋಽಯಂ ಮಮ ಸ್ವೇಚ್ಛಾಮಯಸ್ಯ ಚ ।
ಪ್ರಕೃತಿಃ ಪುರುಷೋಽಹಂ ಚ ಏಕ ಏವ ಪರಾತ್ಪರಃ ॥ ೬೭ ॥

ಇತ್ಯೇವಂ ಕಥಿತಂ ರಾಧೇ ಶಿವದರ್ಪವಿಮೋಚನಂ ।
ಸೃಷ್ಟಿಬೀಜಂ ಚ ಶೃಣು ಮೇ ಪಾರ್ವತೀದರ್ಪಮೋಚನಂ ॥ ೬೮ ॥

॥ ಶ್ರೀ ನಾರಾಯಣ ಉವಾಚ ॥

ಇತ್ಯುಕ್ತವಂತಂ ಶ್ರೀಕೃಷ್ಣಂ ಪರಮಾತ್ಮಾನಮೀಶ್ವರಂ ।
ಪಪ್ರಚ್ಛ ರಾಧಿಕಾ ದೇವೀ ನಿಗೂಢಮಭಿವಾಂಛಿತಂ ॥ ೬೯ ॥

---

೬೬. ಕರ್ಮಭೋಗಾದಿಗಳನ್ನು ಅನುಭವಿಸುವ ಜೀವವು ನನ್ನ ಪ್ರತಿಬಿಂಬವಾಗಿರುವುದು. ಸಾಕ್ಷಿಸ್ವರೂಪನೂ, ಇಚ್ಛಾರಹಿತನೂ ಆದ ನಾನು ಯಾವ ಕರ್ಮಗಳ ಫಲವನ್ನೂ ಅನುಭವಿಸುವವನಲ್ಲ.

೬೭. ಸ್ವೇಚ್ಛಾಮಯನಾದ ನಾನು ಭಕ್ತರ ಧ್ಯಾನಕ್ಕಾಗಿ ದಿವ್ಯಸುಂದರ ವಿಗ್ರಹಧಾರಿಯಾಗುವೆನು. ಪರಾತ್ಪರನಾದ ನಾನೊಬ್ಬನೇ ಪ್ರಕೃತಿರೂಪದಿಂದಲೂ ಪುರುಷರೂಪದಿಂದಲೂ ತೋರುವೆನು.

೬೮. ಎಲೌ ರಾಧೆಯೇ, ಈ ರೀತಿ ಶಿವನ ದರ್ಪವಿಮೋಚನೆಮಾಡಿದ ಕಥೆಯನ್ನು ಹೇಳಿದೆನು ಈಗ ಸೃಷ್ಟಿಗೆ ಮೂಲಕಾರಣವಾದ ಪಾರ್ವತಿಯ ದರ್ಪ ವಿಮೋಚನೆಮಾಡಿದುದನ್ನು ಹೇಳುವೆನು ಕೇಳು.

೬೯. ನಾರಾಯಣ—ಈ ರೀತಿಯಾಗಿ ಹೇಳಿದ ಸರ್ವೇಶ್ವರನಾದ ಶ್ರೀಕೃಷ್ಣ ಪರಮಾತ್ಮನನ್ನು ಕುರಿತು ರಾಧಾದೇವಿಯು ತನಗೆ ಅಭೀಷ್ಟವಾದ ಗೂಢತರ ವಿಷಯವನ್ನು ಹೇಳಬೇಕೆಂದು ಕೇಳಿದಳು.

|| ರಾಧಿಕೋವಾಚ ||

ಭಗವನ್ಸರ್ವತತ್ತ್ವಜ್ಞ ಸರ್ವಬೀಜ ಸನಾತನ |
ವದ ಮೇ ವಾಂಛಿತಂ ಪ್ರಶ್ನಂ ಸರ್ವಸಂದೇಹಭಂಜನಂ || ೭೦ ||

ಸರ್ವಜ್ಞಾನಾಧಿದೇವಶ್ಚ ಶಂಕರಃ ಸರ್ವತತ್ತ್ವವಿತ್ |
ಮೃತ್ಯುಂಜಯಃ ಕಾಲಕಾಲೋ ಭಗವಾಂಸ್ತ್ವತ್ಸಮೋ ಮಹಾನ್ || ೭೧ ||

ಕಥಂ ವಿಭೂತಿಗಾತ್ರಶ್ಚ ಪಂಚವಕ್ತ್ರಸ್ತ್ರಿಲೋಚನಃ |
ದಿಗಂಬರೋ ಜಟಾಧಾರೀ ನಾಗಸಂಘಾತಭೂಷಣಃ || ೭೨ ||

ವೃಷೇಣಾಟತಿ ದೇವೇಂದ್ರೋ ವಿಹಾಯ ವರವಾಹನಂ |
ನ ಬಿಭರ್ತಿ ಕಥಂ ರತ್ನಂ ಸಾರನಿರ್ಮಾಣಭೂಷಣಂ || ೭೩ ||

---

೭೦. ರಾಧಿಕಾ :—ಸಕಲ ತತ್ವಗಳನ್ನೂ ಬಲ್ಲ ಸರ್ವಕಾರಣನೂ, ಸನಾತನನೂ ಆದ ಎಲೈ ಭಗವಂತನೇ, ಸಕಲರ ಸಂದೇಹಭಂಜಕವಾದ ನನ್ನ ಪ್ರಶ್ನೆಗೆ ಉತ್ತರವನ್ನು ಹೇಳುವವನಾಗು.

೭೧. ನಿಖಿಲಜ್ಞಾನಾಧಿದೇವತೆಯೂ, ಸಕಲತತ್ತ್ವವಿಶಾರದನೂ, ಮೃತ್ಯುಂಜಯನೂ, ಕಾಲಕಾಲನೂ ಆದ ಭಗವಾನ್ ಶಂಕರನು ನಿನಗೆ ಸದೃಶನಾದ ಮಹಾತ್ಮನೆನಿಸಿರುವನು.

೭೨. ಇಂಥ ಮಹಾತ್ಮನು ಪಂಚಮುಖಗಳಿಂದಲೂ, ತ್ರಿನಯನಗಳಿಂದಲೂ, ಶೋಭಿತನಾಗಿ, ಮೈಗೆಲ್ಲ ವಿಭೂತಿಯನ್ನು ಲೇಪಿಸಿಕೊಂಡು, ದಿಗಂಬರನೂ, ಜಟಾಧಾರಿಯೂ ಆಗಿ ನಾಗಭೂಷಣನಾಗಲು ಕಾರಣವೇನು ?

೭೩. ದೇವದೇವೋತ್ತಮನಾದ ಆ ಶಂಕರನು ಶ್ರೇಷ್ಠವಾದ ವಾಹನಗಳನ್ನು ಬಿಟ್ಟು ವೃಷಭಾರೂಢನಾಗಿ ಸಂಚರಿಸಲು ಕಾರಣವೇನು ? ಅತ್ಯಂತ ಸಾರತರವಾದ ರತ್ನಾಭರಣಗಳನ್ನು ಧರಿಸದಿರುವುದೇಕೆ?

ವಹ್ನಿಶುದ್ಧಾಂಶುಕಂ ತ್ಯಕ್ತ್ವಾ ಧತ್ತೇ ಶಾರ್ದೂಲಚರ್ಮಕಂ |
ಧತ್ತೇ ಧತ್ತೂರಕುಸುಮಂ ಪಾರಿಜಾತಂ ವಿಹಾಯ ಚ || ೭೪ ||

ನಾಸ್ತಿ ರತ್ನಕಿರೀಟೇಚ್ಛಾ ಜಟಾಯಾಂ ಪ್ರೀತಿರುತ್ತಮಾ |
ದಿವ್ಯಲೋಕಂ ಪರಿತ್ಯಜ್ಯ ಸ್ಮಶಾನೇಷು ಸ್ಪೃಹಾ ವಿಭೋಃ || ೭೫ ||

ಚಂದನಾಗರುಕಸ್ತೂರೀಸುಗಂಧಿಕುಸುಮಾನಿ ಚ |
ತ್ಯಕ್ತ್ವಾ ಸ್ಪೃಹಾ ಬಿಲ್ವಪತ್ರೇ ಬಿಲ್ವಕಾಷ್ಠಾನುಲೇಪನೇ || ೭೬ ||

ಏತದ್ವೇದಿತುಮಿಚ್ಛಾಮಿ ವ್ಯಾಸೇನ ಕಥಯ ಪ್ರಭೋ |
ಶ್ರೋತುಂ ಕೌತೂಹಲಂ ನಾಥ ವರ್ಧತೇ ಮೇ ಮನಃಸ್ಪೃಹಾ || ೭೭ ||

ರಾಧಿಕಾವಚನಂ ಶ್ರುತ್ವಾ ಪ್ರಹಸ್ಯ ಮಧುಸೂದನಃ |
ಕಥಾಂ ಕಥಿತುಮಾರೇಭೇ ಕೃತ್ವಾ ರಾಧಾಂ ಸ್ವವಕ್ಷಸಿ || ೭೮ ||

---

೭೪. ಅಗ್ನಿಯಂತೆ ಪರಿಶುದ್ಧವಾದ ವಸ್ತ್ರವನ್ನು ಬಿಟ್ಟು ಶಾರ್ದೂಲಚರ್ಮವನ್ನು ಹೊವೆಯಲು ಕಾರಣವೇನು? ಪಾರಿಜಾತಪುಷ್ಪವನ್ನು ಬಿಟ್ಟು ದತ್ತೂರಪುಷ್ಪವನ್ನು ಏಕೆ ಧರಿಸುವನು?

೭೫. ಆ ಶಂಕರನಿಗೆ ಜಟಾಧಾರಣೆಯಲ್ಲಿರುವಷ್ಟು ಅಕ್ಕರೆಯು ರತ್ನಕಿರೀಟ ಧಾರಣೆಯಲ್ಲಿಲ್ಲವಲ್ಲ! ವಿಶ್ವವ್ಯಾಪಿಯಾದ ಆತನು ದಿವ್ಯಲೋಕವನ್ನು ಬಿಟ್ಟು ಸ್ಮಶಾನವಾಸಿಯಾಗಲು ಕಾರಣವೇನು?

೭೬. ಚಂದನ, ಅಗುರು, ಕಸ್ತೂರಿ, ಮುಂತಾದ ಸುಗಂಧದ್ರವ್ಯಗಳಲ್ಲಿಯೂ, ಗಮಗಮಿಸುವ ಹೂವುಗಳಲ್ಲಿಯೂ ಆತನಿಗೆ ಆಸೆಯಿಲ್ಲ. ಬಿಲ್ವಪತ್ರೆಯಲ್ಲಿಯೂ, ಬಿಲ್ವಕಾಷ್ಠವನ್ನು ಅರೆದು ಲೇಪನಮಾಡಿಕೊಳ್ಳುವುದರಲ್ಲಿಯೂ ಆತನಿಗೇಕೆ ಅಷ್ಟು ಅಭಿಮಾನ?

೭೭. ಎಲೈ ಪ್ರಭುವೇ, ಇವೆಲ್ಲವನ್ನೂ ತಿಳಿದುಕೊಳ್ಳಬೇಕೆಂದು ನನಗೆ ಮಹದಾಶೆಯಿದೆ. ಎಲೈ ನಾಥನೇ, ಇದನ್ನು ವಿಸ್ತರಿಸಿ ಹೇಳಿ ನನ್ನ ಮನೋಭಿಲಾಷೆಯನ್ನು ಪೂರ್ಣಗೊಳಿಸು.

೭೮. ಈ ರೀತಿಯಾದ ರಾಧಾದೇವಿಯ ಮಾತುಗಳನ್ನು ಕೇಳಿ ಮಧುಸೂದನನಾದ ಶ್ರೀಕೃಷ್ಣನು ನಸುನಕ್ಕು ರಾಧೆಯನ್ನು ತನ್ನ ವಕ್ಷಃಸ್ಥಳದಲ್ಲಿ ಅಪ್ಪಿಕೊಂಡು ಕಥೆಯನ್ನು ಹೇಳಲು ಮೊದಲುಮಾಡಿದನು

॥ ಶ್ರೀಕೃಷ್ಣ ಉವಾಚ ॥

ಯುಗಷಷ್ಟಿಸಹಸ್ರಾಣಿ ತಪಃ ಕೃತ್ವಾ ಮಹೇಶ್ವರಃ ।
ವಿರರಾಮ ಪೂರ್ಣತಮೋ ಧ್ಯಾತ್ವಾ ಮಾಂ ಮನಸಾ ಮುದಾ ॥ ೭೯ ॥

ಏತಸ್ಮಿನ್ನಂತರೇ ಮಾಂ ಚ ದದರ್ಶ ಪುರತಃ ಸ್ಥಿತಂ ।
ಅತೀವ ಕಮನೀಯಾಂಗಂ ಕಿಶೋರಂ ಶ್ಯಾಮಸುಂದರಂ ॥ ೮೦ ॥

ಅಹೋಽನಿರ್ವಚನೀಯಂ ಚ ದೃಷ್ಟ್ವಾ ರೂಪಮನುತ್ತಮಂ ।
ನ ಬಭೂವ ವಿತೃಷ್ಣಶ್ಚ ಲೋಚನಾಭ್ಯಾಂ ತ್ರಿಲೋಚನಃ ॥ ೮೧ ॥

ಪಶ್ಯನ್ನಿಮೇಷರಹಿತ ಇತಿ ಮತ್ವಾ ಸ್ವಮಾನಸೇ ।
ಭಕ್ತ್ಯುದ್ರೇಕಾನ್ಮಹಾಭಕ್ತೋ ರುರೋದ ಪ್ರೇಮವಿಹ್ವಲಃ ॥ ೮೨ ॥

ಸಹಸ್ರವದನೋಽನಂತೋ ಭಾಗ್ಯವಾಂಶ್ಚ ಚತುರ್ಮುಖಃ ।
ಬಹುಭಿರ್ಲೋಚನೈರ್ದೃಷ್ಟ್ವಾ ತುಷ್ಟಾವ ಬಹುಭಿರ್ಮುಖೈಃ ॥ ೮೩ ॥

---

೭೯. ಶ್ರೀಕೃಷ್ಣ:—ಮಹೇಶ್ವರನು ಅರವತ್ತು ಸಾವಿರ ವರ್ಷಗಳಕಾಲ ನನ್ನನ್ನೇ ಕುರಿತು ಮನಸ್ಸಿನಲ್ಲಿ ಧ್ಯಾನಮಾಡುತ್ತ ತಪಿಸಿ ಪರಿಪೂರ್ಣವಾಗಿ ವಿಶ್ರಾಂತನಾದನು.

೮೦. ಅನಂತರ ಶ್ಯಾಮಸುಂದರನೂ, ಕಿಶೋರಾಕಾರನೂ, ಮನೋಹರನೂ ಆದ ನಾನು ಅವನ ಮುಂದೆ ನಿಂತಿರುವುದನ್ನು ಕಣ್ದೆರೆದು ನೋಡಿದನು.

೮೧. ವರ್ಣಿಸಲಸದಳವಾದ ನನ್ನ ಆ ದಿವ್ಯರೂಪವನ್ನು ಎರಡು ಕಣ್ಣುಗಳಿಂದ ನೋಡುತ್ತಿದ್ದ ಆ ಮಹೇಶ್ವರನಿಗೆ ಎಷ್ಟು ನೋಡಿದರೂ ತೃಪ್ತಿಯುಂಟಾಗಲಿಲ್ಲ.

೮೨. ನನ್ನ ಪರಮಭಕ್ತನಾದ ಆ ಶಿವನು ರೆಪ್ಪೆಗಳನ್ನೂ ಬಡಿಯದೆ ನನ್ನನ್ನು ದಿಟ್ಟಿಸಿ ನೋಡುತ್ತ ಭಕ್ತ್ಯುದ್ರೇಕದಿಂದ ಈ ರೀತಿ ಗೋಳಾಡಲಾರಂಭಿಸಿದನು.

೮೩. ಸಾವಿರಮುಖವುಳ್ಳ ಆದಿಶೇಷನೂ, ಚತುರ್ಮುಖನಾದ ಬ್ರಹ್ಮದೇವನೂ, ಧನ್ಯತಮರು. ಅವರು ಅನೇಕ ಲೋಚನಗಳಿಂದ ಪರಮಾತ್ಮನನ್ನು ನೋಡಿ ಬಹುಮುಖಗಳಿಂದ ಸ್ತುತಿಸಬಲ್ಲರು.

ಪಶ್ಯಾಮಿ ಕಿಂವಾ ಕಿಂ ಸ್ತೌಮಿ ಸಂಪ್ರಾಪ್ಯ ನಾಥಮೀದೃಶಂ ।
ಆಸ್ಯೇನೈಕೇನ ನೇತ್ರಾಭ್ಯಾಂ ಚತುರ್ಧಾ ಸ ಪುನಃ ಪುನಃ ॥ ೮೪ ॥

ಸ್ವಮಾನಸೇ ಕುರ್ವತೀದಂ ಶಂಕರೇ ಚ ತಪಸ್ವಿನಿ ।
ತದ್ಬಭೂವ ಚತುರ್ವಕ್ತ್ರಂ ಪೂರ್ವೇಣ ಸಹ ಪಂಚಮಂ ॥ ೮೫ ॥

ಏಕೈಕವಕ್ತ್ರಂ ಶುಶುಭೇ ಲೋಚನೈಶ್ಚ ತ್ರಿಭಿಸ್ತ್ರಿಭಿಃ ।
ಬಭೂವ ತೇನ ತನ್ನಾಮ ಪಂಚವಕ್ತ್ರಸ್ತ್ರಿಲೋಚನಃ ॥ ೮೬ ॥

ಸ್ತವನಾದಧಿಕಪ್ರೀತಿಃ ಶಿವಸ್ಯ ದರ್ಶನೇ ಮಮ ।
ತೇನಾಧಿಕಾನಿ ತಸ್ಯೈವಂ ಬಭೂವುರ್ಲೋಚನಾನಿ ಚ ॥ ೮೭ ॥

ಚಕ್ಷೂಂಷಿ ಗುಣರೂಪಾಣಿ ತಸ್ಯ ಬ್ರಹ್ಮಸ್ವರೂಪಿಣಃ ।
ಸತ್ತ್ವಂ ರಜಸ್ತಮ ಇತಿ ತಸ್ಯ ಹೇತುಂ ನಿಶಾಮಯ ॥ ೮೮ ॥

---

೮೪. ನಾನಾದರೋ ಪರಮಾತ್ಮನ ದಿವ್ಯಸುಂದರಾಕಾರವನ್ನು ಎರಡು ಕಣ್ಣುಗಳಿಂದ ನೋಡಿ ಒಂದು ಬಾಯಿನಿಂದ ಎಂತು ಸ್ತುತಿಸಲಿ? ಎಂದು ಶಿವನು ನಾಲ್ಕು ಕಡೆಗೂ ನಾಲ್ಕುಸಾರಿ ನೋಡಿದನು.

೮೫. ತಪಸ್ವಿಯಾದ ಶಂಕರನು ಈ ರೀತಿ ಮನಸ್ಸಿನಲ್ಲಿ ಚಿಂತಿಸಿದುದೇ ತಡ ನನ್ನ ಅನುಗ್ರಹದಿಂದ ಅವನಿಗೆ ಮೊದಲಿನ ಮುಖದ ಜತೆಗೆ ನಾಲ್ಕು ಮುಖಗಳುದ್ಭವಿಸಲು ಅವನು ಪಂಚಮುಖಿಯಾದನು.

೮೬. ಅವನ ಒಂದೊಂದು ಮುಖವೂ ಮೂರು ಮೂರು ಕಣ್ಣುಗಳಿಂದ ಕಂಗೊಳಿಸಿತು. ಆದುದರಿಂದಲೇ ಶಿವನಿಗೆ 'ಪಂಚವಕ್ತ್ರ' 'ತ್ರಿನೇತ್ರ' ಎಂಬ ಹೆಸರುಗಳು ಬಂದುವು.

೮೭. ಶಿವನಿಗೆ ನನ್ನನ್ನು ಹೊಗಳುವುದಕ್ಕಿಂತಲೂ ನೋಡುವುದೆಂದರೆ ಬಹಳ ಇಷ್ಟ. ಆದುದರಿಂದಲೇ ಅವನಿಗೆ ಬಾಯಿಗಿಂತಲೂ ಕಣ್ಣುಗಳು ಅಧಿಕವಾದವು.

೮೮. ಪರಬ್ರಹ್ಮಸ್ವರೂಪಿಯಾದ ಆ ಶಿವನ ಕಣ್ಣುಗಳು ತ್ರಿಗುಣಾತ್ಮಕವಾದುವು. ಆ ಕಣ್ಣುಗಳ ಸತ್ವರಜಸ್ತಮೋಗುಣಗಳ ಪ್ರಭಾವಗಳನ್ನು ವರ್ಣಿಸುವೆನು ಕೇಳು.

ಸತ್ತ್ವಾಂಶೇನ ದೃಶಾ ಶಂಭುಃ ಪಶ್ಯನ್ಪಾತಿ ಚ ಸಾತ್ತ್ವಿಕಾನ್ ।
ರಾಜಸೇನ ರಾಜಸಿಕಾಂಸ್ತಾಮಸೇನ ಚ ತಾಮಸಾನ್ ॥ ೮೯ ॥

ಚಕ್ಷುಷಸ್ತಾಮಸಾತ್ಪಶ್ಚಾಲ್ಲಲಾಟಸ್ಥಾದ್ಧರಸ್ಯ ಚ ।
ಸಂಹಾರಕಾಲೇ ಸಂಹರ್ತುರಗ್ನಿರಾವಿರ್ಭವೇತ್ಕ್ರುಧಾ ॥ ೯೦ ॥

ಕೋಟಿತಾಲಪ್ರಮಾಣಶ್ಚ ಸೂರ್ಯಕೋಟಿಸಮಪ್ರಭಃ ।
ಲೇಲಿಹಾನೋ ದೀರ್ಘಶಿಖಸ್ತ್ರೈಲೋಕ್ಯಂ ದಗ್ಧುಮೀಶ್ವರಃ ॥ ೯೧ ॥

ವಿಭೂತಿಗಾತ್ರಃ ಸ ವಿಭುಃ ಸತೀಸಂಸ್ಕಾರಭಸ್ಮನಾ ।
ಧತ್ತೇ ತಸ್ಯಾ ಅಸ್ಥಿಮಾಲಾಂ ಪ್ರೇಮಭಾವೇನ ಭಸ್ಮ ಚ ॥ ೯೨ ॥

ಸ್ವಾತ್ಮಾರಾಮೋ ಯದ್ಯಪೀಶಸ್ತಥಾಽಪಿ ಪೂರ್ಣಮಬ್ದಕಂ ।
ಸತೀಶವಂ ಗೃಹೀತ್ವಾ ಚ ಭ್ರಾಮಂ ಭ್ರಾಮಂ ರುರೋದ ಹ ॥ ೯೩ ॥

---

೮೯. ಶಂಭುವು ಸತ್ವಗುಣಪ್ರಧಾನವಾದ ದೃಷ್ಟಿಯಿಂದ ಸಾತ್ವಿಕರನ್ನು ನೋಡಿ ಪರಿಪಾಲಿಸುತ್ತಾನೆ. ಅಂತೆಯೇ ರಾಜಸದೃಷ್ಟಿಯಿಂದ ರಾಜಸಿಕರನ್ನೂ, ತಾಮಸಿಕದೃಷ್ಟಿಯಿಂದ ತಾಮಸಿಕರನ್ನೂ ನೋಡುವನು.

೯೦. ಜಗತ್ಸಂಹಾರಕನಾದ ಹರನ ಲಲಾಟಪ್ರದೇಶದಲ್ಲಿರುವ ತಮೋಗುಣ ಪ್ರಧಾನವಾದ ದೃಷ್ಟಿಯಿಂದ ಪ್ರಳಯಕಾಲದಲ್ಲಿ ಚಂಡಾಗ್ನಿಯು ಹೊರ ಹೊಮ್ಮುವುದು.

೯೧. ಕೋಟಿಸೂರ್ಯರ ತೇಜಸ್ಸಿನಿಂದ ಕೂಡಿದ ಆ ಅಗ್ನಿಯು ಕೋಟಿ ತಾಲವೃಕ್ಷಗಳಷ್ಟು ಉನ್ನತವಾಗೆದ್ದು ತನ್ನ ದೀರ್ಘಜ್ವಾಲೆಗಳಿಂದ ತ್ರಿಲೋಕವನ್ನೂ ಭಸ್ಮಮಾಡಲು ಸಮರ್ಥವಾಗುವುದು.

೯೨ ಆ ಶಂಕರನು ಸತೀದೇವಿಯನ್ನು ಸಂಸ್ಕಾರಮಾಡಿದ ಭಸ್ಮದಿಂದ ಅನುಲಿಪ್ತಾಂಗನಾಗಿ 'ವಿಭೂತಿಗಾತ್ರ' ನೆನಿಸಿಕೊಂಡಿರುವನು. ಸತೀದೇವಿಯ ಪ್ರೇಮದಿಂದ ಆಕೆಯ ಅಸ್ಥಿಗಳನ್ನೂ ಸಹ ಮಾಲೆಯಾಗಿ ಮಾಡಿಕೊಂಡಿರುವನು.

೯೩. ಶಂಕರನು ಆತ್ಮಜ್ಞಾನಿಯಾದರೂ ಸಹ ಒಂದು ವರ್ಷಕಾಲ ಸತೀ ದೇವಿಯ ಶವವನ್ನು ಕೈಯಲ್ಲಿ ಎತ್ತಿಕೊಂಡು ಗೋಳಾಡುತ್ತಾ ಅಲೆದಾಡಿದನು.

ಪ್ರತ್ಯಂಗಂ ಚಾಪಿ ತಸ್ಯಾಶ್ಚ ಪಪಾತ ಯತ್ರ ಯತ್ರ ಹ ।
ಸಿದ್ಧಪೀಠಸ್ತತ್ರ ತತ್ರ ಬಭೂವ ಮಂತ್ರಸಿದ್ಧಿಕೃತ್ ॥ ೯೪ ॥

ತ(ಯ)ದಾ ಶವಾವಶೇಷಂ ಚ ಕೃತ್ವಾ ವಕ್ಷಸಿ ಶಂಕರಃ ।
ಪಪಾತ ಮೂರ್ಛಿತೋ ಭೂತ್ವಾ ಸಿದ್ಧಿಕ್ಷೇತ್ರೇ ಚ ರಾಧಿಕೇ ॥ ೯೫ ॥

ತದಾ ಗತ್ವಾ ಮಹೇಶಂ ತಂ ಕೃತ್ವಾ ಕ್ರೋಡೇ ಪ್ರಬೋಧ್ಯ ಚ ।
ಅದದಾಂ ದಿವ್ಯತತ್ತ್ವಂ ಚ ತಸ್ಮೈ ಶೋಕಹರಂ ಪರಂ ॥ ೯೬ ॥

ತದಾ ಶಿವಶ್ಚ ಸಂತುಷ್ಟಃ ಸ್ವಂ ಲೋಕಂ ಚ ಜಗಾಮ ಹ ।
ಮೂರ್ತ್ಯಂತರೇಣ ಕಾಲೇನ ತಾಂ ಸಂಪ್ರಾಪ ಪ್ರಿಯಾಂ ಸತೀಂ ॥ ೯೭ ॥

ದಿಗ್ವಸ್ತ್ರಧಾರೀ ಯೋಗೇನ ನೇಚ್ಛಾಽನಿತ್ಯೇಽಪರೇ ವಿಭೋಃ ।
ಜಟಾಂ ತಪಸ್ಯಾಕಾಲೀನಾಂ ಧತ್ತೇಽದ್ಯಾಪಿ ವಿವೇಕತಃ ॥ ೯೮ ॥

---

೯೪. ಆಕೆಯ ಪ್ರತ್ಯವಯವಗಳೂ ಎಲ್ಲೆಲ್ಲಿ ಬಿದ್ದವೋ ಆಯಾಯ ಸ್ಥಳಗಳು ಮಂತ್ರಸಿದ್ಧಿಯನ್ನುಂಟುಮಾಡುವ ‘ ಸಿದ್ಧಪೀಠ ’ಗಳೆನಿಸಿಕೊಂಡವು.

೯೫. ಎಲೌ ರಾಧಿಕೆಯೇ, ಈ ರೀತಿ ಶಂಕರನು ಅವಶಿಷ್ಟವಾದ ಶವವನ್ನು ತನ್ನ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು ಸಿದ್ಧಿಕ್ಷೇತ್ರದಲ್ಲಿ ಮೂರ್ಛಿತನಾಗಿ ಬಿದ್ದನು.

೯೬. ಆಗ ನಾನು ಮಹೇಶನ ಸಮೀಪಕ್ಕೆ ಹೋಗಿ ಅವನನ್ನು ಅಪ್ಪಿಕೊಂಡು ಎಚ್ಚರಿಸಿ ಶೋಕನಾಶಕವಾದ ದಿವ್ಯತತ್ತ್ವವನ್ನು ಅವನಿಗೆ ಉಪದೇಶಮಾಡಿದೆನು.

೯೭. ಆಗ ಶಿವನು ಸಂತುಷ್ಟನಾಗಿ ತನ್ನ ಲೋಕಕ್ಕೆ ಹಿಂತಿರುಗಿದನು. ಕಾಲಾಂತರದಲ್ಲಿ ತನ್ನ ಪ್ರಿಯಳಾದ ಸತೀದೇವಿಯನ್ನು ಪಾರ್ವತೀರೂಪದಿಂದ ಹೊಂದಿ ಸಂತುಷ್ಟನಾದನು.

೯೮. ಆ ಶಂಕರನು ಯೋಗಬಲದಿಂದ ದಿಗಂಬರನಾಗಿ ಇತರವಾದ ಅನಿತ್ಯ ವಸ್ತ್ರಗಳಲ್ಲಿ ಇಚ್ಛಾರಹಿತನಾಗಿದ್ದಾನೆ. ವಿವೇಕಿಯಾದುದರಿಂದ ತಪಸ್ಸಿನ ಕಾಲದಲ್ಲಿ ಬೆಳೆಸಿದ್ದ ಜಟೆಗಳನ್ನು ಈಗಲೂ ಧರಿಸಿದ್ದಾನೆ.

ನ ಚೇಚ್ಛಾ ಕೇಶಸಂಸ್ಕಾರೇ ಸ್ವಾಂಗೇ ವೇಷೇ ಚ ಯೋಗಿನಃ ।
ಸಮತಾ ಚಂದನೇ ಪಂಕೇ ಲೋಷ್ಟೇ ರತ್ನೇ ಮಣೀಶ್ವರೇ || ೯೯ ||

ಗರುಡದ್ವೇಷಿಣೋ ನಾಗಾಃ ಶಂಕರಂ ಶರಣಂ ಯಯುಃ ।
ಬಿಭರ್ತಿ ಕೃಪಯಾ ಸ್ವಾಂಗೇ ತಾನೇವ ಶರಣಾಗತಾನ್ || ೧೦೦ ||

ವಾಹನಂ ವೃಷರೂಪೋಽಹಮನ್ಯಸ್ತಂ ವೋಢುಮಕ್ಷಮಃ ।
ತ್ರಿಪುರಸ್ಯ ವಧೇ ಪೂರ್ವಂ ಮತ್ಕಲಾಂಶಸಮುದ್ಭವಃ || ೧೦೧ ||

ಪಾರಿಜಾತಾದಿಕಂ ಪುಷ್ಪಂ ಸುಗಂಧಿಚಂದನಾದಿಕಂ ।
ಮಯಿ ಸಂನ್ಯಸ್ಯ ತೇಷ್ವೇವಂ ಪ್ರೀತಿರ್ನಾಸ್ತಿ ಕದಾಚನ || ೧೦೨ ||

ಧತ್ತೂರೇ ತಸ್ಯ ಸದಾ ಪ್ರೀತಿರ್ಬಿಲ್ವಪತ್ರಾನುಲೇಪನೇ ।
ಗಂಧಹೀನೇ ಸುಗಂಧೇ ಚ ಯೋಗೀಷ್ಟೇ ವ್ಯಾಘ್ರಚರ್ಮಣಿ || ೧೦೩ ||

---

೯೯. ಯೋಗಿಯಾದ ಆ ಶಂಕರನಿಗೆ ಕೇಶಸಂಸ್ಕಾರದಲ್ಲಾಗಲೀ ವೇಷ ಭೂಷಗಳಲ್ಲಾಗಲೀ ಅಭಿಮಾನವಿಲ್ಲ. ಚಂದನಗಂಧದಲ್ಲಿಯೂ, ಕೆಸರಿನಲ್ಲಿಯೂ, ಮಣ್ಣುಹೆಂಟೆಯಲ್ಲಿಯೂ ಮತ್ತು ಶ್ರೇಷ್ಠಮಣಿಗಳಲ್ಲಿಯೂ ಸಹ ಅವನಿಗೆ ಸಮಭಾವ ವಿರುವುದು.

೧೦೦. ಗರುಡನ ದ್ವೇಷಿಗಳಾದ ಸರ್ಪಗಳು ಶಂಕರನನ್ನು ಮರೆಹೊಕ್ಕವು. ಕೃಪಾಮಯನಾದ ಶಂಕರನು ಶರಣಾಗತವಾದ ಆ ಸರ್ಪಗಳನ್ನು ತನ್ನ ಅಂಗ ಗಳಲ್ಲಿಯೇ ಧರಿಸಿಕೊಂಡನು.

೧೦೧. ಆ ಶಿವನನ್ನು ಮತ್ತಾರೂ ಹೊರಲಾಗದಿರುವುದರಿಂದ ನಾನೇ ವೃಷಭ ರೂಪದಿಂದ ಅವನ ವಾಹನವಾಗಿ ಹೊರುತ್ತಿದ್ದೇನೆ. ಆ ವೃಷಭವು ಹಿಂದೆ ತ್ರಿಪುರಾ ಸುರನ ವಧೆಯ ಕಾಲದಲ್ಲಿ ನನ್ನ ಕಲಾಂಶದಿಂದ ಜನಿಸಿತು.

೧೦೨. ಪಾರಿಜಾತಾದಿ ದಿವ್ಯಪುಷ್ಪಗಳನ್ನೂ, ಸುಗಂಧವಾದ ಚಂದನಾದಿ ಗಳನ್ನೂ ನನಗೇ ಅರ್ಪಿಸಿರುವುದರಿಂದ ಆ ಶಂಕರನಿಗೆ ಅವುಗಳಲ್ಲಿ ಯಾವಾಗಲೂ ಪ್ರೀತಿಯುಂಟಾಗುವುದಿಲ್ಲ.

೧೦೩. ಯೋಗಿಗಳಿಗೆ ಇಷ್ಟವಾದ ದತ್ತೂರಪುಷ್ಪದಲ್ಲಿಯೂ, ಬಿಲ್ವಪತ್ರ ದಲ್ಲಿಯೂ ಸುಗಂಧರಹಿತವಾದ ಬಿಲ್ವಗಂಧದಲ್ಲಿಯೂ, ವ್ಯಾಘ್ರಚರ್ಮದಲ್ಲಿಯೂ, ಆ ಪರಮಯೋಗಿಯಾದ ಶಂಕರನಿಗೆ ಬಹಳ ಪ್ರೀತಿ.

ದಿವ್ಯಲೋಕೇ ದಿವ್ಯತಲ್ಪೇ ಜನತಾಯಾಂ ನ ತನ್ಮನಃ ।
ಶ್ಮಶಾನೇಽತೀವ ರಹಸಿ ಧ್ಯಾಯತೇ ಮಾಮಹರ್ನಿಶಂ ॥ ೧೦೪ ॥

ಆಬ್ರಹ್ಮಸ್ತಂಬಪರ್ಯಂತಂ ಸಮಂ ಚ ಮನ್ಯತೇ ಶಿವಃ ।
ಮಮಾನಿರ್ವಚನೀಯೇಽತ್ರ ರೂಪೇ ತನ್ಮಗ್ನಮಾನಸಂ ॥ ೧೦೫ ॥

ಬ್ರಹ್ಮಣಃ ಪತನೇನಾಪಿ ಶೂಲಪಾಣೇಃ ಕ್ಷಣೋ ಭವೇತ್ ।
ತಸ್ಯಾಽಽಯುಷಃ ಪ್ರಮಾಣಂ ಚ ನಾಹಂ ಜಾನಾಮಿ ಕಾ ಶ್ರುತಿಃ ॥ ೧೦೬ ॥

ಜ್ಞಾನಂ ಮೃತ್ಯುಂಜಯಃ ಶೂಲಂ ಧತ್ತೇ ಮತ್ತೇಜಸಾ ಸಮಂ ।
ವಿನಾ ಮಯಾ ನ ಕಶ್ಚಿತ್ತಂ ಶಂಕರಂ ಜೇತುಮೀಶ್ವರಃ ॥ ೧೦೭ ॥

ಶಂಕರಃ ಪರಮಾತ್ಮಾ ಮೇ ಪ್ರಾಣೇಭ್ಯೋಽಪಿ ಪರಃ ಶಿವಃ ।
ತ್ರ್ಯಂಬಕೇ ಮನ್ಮನಃ ಶಶ್ವನ್ನ ಪ್ರಿಯೋ ಮೇ ಭವಾತ್ಪರಃ ॥ ೧೦೮ ॥

---

೧೦೪. ಜನಸಾಮಾನ್ಯರು ಬಯಸುವ ದಿವ್ಯಲೋಕದಲ್ಲಿಯೂ ದಿವ್ಯವಾದ ಶಯನಾಸನಾದಿಗಳಲ್ಲಿಯೂ ಅವನಿಗೆ ಮನಸ್ಸಿಲ್ಲ. ಏಕಾಂತವಾದ ಶ್ಮಶಾನದಲ್ಲಿದ್ದುಕೊಂಡು ಹಗಲು ರಾತ್ರಿ ನನ್ನನ್ನು ಸ್ಮರಿಸುತ್ತಿರುವನು.

೧೦೫. ಆ ಶಿವನು ಬ್ರಹ್ಮನಿಂದ ಮೊದಲಾಗಿ ಒಂದು ತೃಣದ ವರೆಗಿರುವ ಸಕಲ ವಸ್ತುಗಳನ್ನೂ ಸಮಾನ ದೃಷ್ಟಿಯಿಂದ ನೋಡುತ್ತಾನೆ. ಅವನ ಮನಸ್ಸು ನನ್ನ ಅನಿರ್ವಚನೀಯವಾದ ರೂಪದಲ್ಲಿ ಸದಾ ಮಗ್ನವಾಗಿರುತ್ತದೆ.

೧೦೬. ಚತುರ್ಮುಖಬ್ರಹ್ಮನ ಆಯುಃಪ್ರಮಾಣಕಾಲವು ಶೂಲಪಾಣಿಗೆ ಒಂದು ಕ್ಷಣವೆನಿಸುವುದು. ಆ ಶಿವನ ಆಯುಃಪ್ರಮಾಣವನ್ನು ನಾನೇ ಅರಿಯೆನು. ಇನ್ನು ವೇದವು ತಿಳಿಸಬಲ್ಲುದೇ?

೧೦೭. ಮೃತ್ಯುಂಜಯನು ತನ್ನ ತೇಜಸ್ಸಿಗೆ ಸಮಾನವಾದ ಮತ್ತು ಜ್ಞಾನರೂಪವಾದ ಶೂಲಾಯುಧವನ್ನು ಧರಿಸಿರುವನು. ನನ್ನ ಬಲವಿಲ್ಲದೆ ಯಾರೊಬ್ಬನೂ ಆ ಶಂಕರನನ್ನು ಜಯಿಸಲಾರನು.

೧೦೮. ನನಗೆ ಶಂಕರನೇ ಪರಮಪ್ರಿಯನು. ನನ್ನ ಪ್ರಾಣಗಳಿಗಿಂತಲೂ ಶಿವನು ಮೇಲಾದವನು. ನನ್ನ ಮನಸ್ಸು ಯಾವಾಗಲೂ ತ್ರ್ಯಂಬಕನಲ್ಲಿರುವುದು. ಭವನಿಗಿಂತಲೂ ಹೆಚ್ಚು ಪ್ರಿಯನಾರೂ ನನಗಿಲ್ಲ.

ಬ್ರಹ್ಮಾಂಡನಿಕರಂ ಛನ್ನಂ ಮಯಾ ಮನ್ಮಾಯಯಾ ಸದಾ ।
ಸಾ ಕಂಪತೇ ಹರಂ ಶಶ್ವನ್ನ ಚ ತಂ ಮೋಹಿತುಂ ಕ್ಷಮಾ ॥ ೧೦೯ ॥

ನ ಸಂವಸಾಮಿ ಗೋಲೋಕೇ ವೈಕುಂಠೇ ತವ ವಕ್ಷಸಿ ।
ಸದಾ ಶಿವಸ್ಯ ಹೃದಯೇ ನಿಬದ್ಧಾ ಪ್ರೇಮಪಾಶತಃ ॥ ೧೧೦ ॥

ಸ್ವರಸಿದ್ಧಾಂ ಸುತಾನೇನ ಪಂಚವಕ್ತ್ರೇಣ ಶಂಕರಃ ।
ಶಶ್ವದ್ಗಾಯತಿ ಮದ್ಗಾಥಾಂ ತೇನಾಹಂ ತತ್ಸಮೀಪತಃ ॥ ೧೧೧ ॥

ಸ್ರಷ್ಟುಂ ಶಕ್ತೋ ಹಿ ನಷ್ಟುಂ ಚ ಭ್ರೂಭಂಗಲೀಲಯಾಽಪಿ ಯಃ ।
ಬ್ರಹ್ಮಾಂಡನಿಕರಂ ಯೋಗಾನ್ನ ಯೋಗೀ ಶಂಕರಾತ್ಪರಃ ॥ ೧೧೨ ॥

ದಿವ್ಯಜ್ಞಾನೇನ ಯಃ ಸ್ರಷ್ಟುಂ ನಷ್ಟುಂ ಭ್ರೂಭಂಗಲೀಲಯಾ ।
ಮೃತ್ಯುಂ ಕಾಲಾದಿಕಂ ಶಕ್ತೋ ನ ಜ್ಞಾನೀ ಶಂಕರಾತ್ಪರಃ ॥ ೧೧೩ ॥

---

೧೦೯. ಬ್ರಹ್ಮಾಂಡವೆಲ್ಲವೂ ನನ್ನ ಮಾಯಾಶಕ್ತಿಯಿಂದ ಸರ್ವದಾ ಆಚ್ಛಾದಿತವಾಗಿರುವುದು ಅಂಥ ಮಾಯೆಯೂ ಸಹ ಹರನನ್ನು ನೋಡಿ ಹೆದರುವಳೇ ಹೊರತು ಅವನನ್ನು ಮೋಹಗೊಳಿಸಲಾರಳು.

೧೧೦. ನಾನು ಗೋಲೋಕದಲ್ಲಾಗಲೀ, ವೈಕುಂಠದಲ್ಲಾಗಲೀ, ನಿನ್ನ ವಕ್ಷಃಸ್ಥಳದಲ್ಲಾಗಲೀ ನಿಜವಾಗಿಯೂ ವಾಸಿಸುತ್ತಿಲ್ಲ. ಶಿವನ ಪ್ರೇಮಪಾಶಕ್ಕೆ ಒಳಗಾಗಿ ಯಾವಾಗಲೂ ಅವನ ಹೃದಯದಲ್ಲಿ ನೆಲೆಸಿದ್ದೇನೆ.

೧೧೧. ಶಂಕರನು ದಿವ್ಯಸ್ವರದಿಂದಲೂ ಮತ್ತು ತಾನದಿಂದಲೂ ನನ್ನ ದಿವ್ಯ ಗಾಥೆಯನ್ನು ಪಂಚಮುಖಗಳಿಂದ ಸರ್ವದಾ ಹಾಡುವುದರಿಂದ ನಾನು ಅವನ ಸಮೀಪದಲ್ಲಿಯೇ ಇರುವೆನು.

೧೧೨. ಯೋಗೀಶ್ವರನಾದ ಶಂಕರನು ತನ್ನ ಭ್ರೂಭಂಗ ಲೀಲಾಮಾತ್ರದಿಂದ ಜಗತ್ತನ್ನು ಸೃಜಿಸಲೂ ಮತ್ತು ನಾಶಗೊಳಿಸಲೂ ಶಕ್ತನಾಗಿರುವನು. ಆ ಶಂಕರನಿಗಿಂತ ಮೇಲಾದ ಯೋಗಿಯು ಮತ್ತಾರೂ ಇಲ್ಲ.

೧೧೩. ಅಷ್ಟೇಕೆ! ಶಂಕರನು ತನ್ನ ದಿವ್ಯಜ್ಞಾನದಿಂದ ಮೃತ್ಯುದೇವತೆಯನ್ನೂ ಕಾಲಪುರುಷಾದಿಗಳನ್ನೂ ಭ್ರೂಭಂಗಲೀಲಾಮಾತ್ರದಿಂದ ಸೃಜಿಸಲು ಶಕ್ತನಾದುದರಿಂದ ಅವನಿಗಿಂತ ದಿವ್ಯಜ್ಞಾನಿಯು ಮತ್ತಾರೂ ಇಲ್ಲ.

ಮಮ ಭಕ್ತಿಂ ಚ ದಾಸ್ಯಂ ಚ ಮುಕ್ತಿಂ ಚ ಸರ್ವಸಂಪದಃ ।
ಸರ್ವಸಿದ್ಧಿಂ ದಾತುಮೀಶೋ ನ ದಾತಾ ಶಂಕರಾತ್ಪರಃ ॥ ೧೧೪ ॥

ಪಂಚವಕ್ತ್ರೇಣ ಮನ್ನಾಮ ಯೋ ಹಿ ಗಾಯೇತ್ಯಹರ್ನಿಶಂ ।
ಮದ್ರೂಪಂ ಧ್ಯಾಯತೇ ಶಶ್ವನ್ನ ಭಕ್ತಃ ಶಂಕರಾತ್ಪರಃ ॥ ೧೧೫ ॥

ಅಹಂ ಸುದರ್ಶನಂ ಶಂಭುಸ್ತೇಜಸಾ ಚ ವಯಂ ಸಮಾಃ ।
ಬ್ರಹ್ಮಾ ಸ್ರಷ್ಟಾ ಚ ಯೋಗೇನ ನಾಸ್ಮಾಭಿಸ್ತೇಜಸಾ ಸಮಃ ॥ ೧೧೬ ॥

ಇತ್ಯೇವಂ ಕಥಿತಂ ಸರ್ವಂ ಶಂಕರಸ್ಯ ಯಶೋಽಮಲಂ ।
ತಥಾಽಪ್ಯಸ್ಯ ದರ್ಪಭಂಗಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೧೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಶ್ರೀಕೃಷ್ಣಕೃತಶಂಕರಪ್ರಶಂಸಾ
ನಾಮ ಷಟ್ತ್ರಿಂಶೋಽಧ್ಯಾಯಃ

---

೧೧೪. ನನ್ನ ಭಕ್ತಿಯನ್ನೂ ದಾಸ್ಯವನ್ನೂ, ಮುಕ್ತಿಯನ್ನೂ, ಸಕಲಸಂಪತ್ತುಗಳನ್ನೂ ಸಕಲಸಿದ್ಧಿಗಳನ್ನೂ ಶಂಕರನು ಕೊಡಬಲ್ಲನಾದುದರಿಂದ ಅವನಿಗಿಂತ ಮೇಲಾದ ದಾನಿಯು ಮತ್ತೊಬ್ಬನಿಲ್ಲ.

೧೧೫. ಯಾವನು ತನ್ನ ಪಂಚಮುಖಗಳಿಂದ ಹಗಲೂ ರಾತ್ರಿ ನನ್ನ ದಿವ್ಯ ನಾಮಗಳನ್ನು ಹಾಡುವನೋ ಮತ್ತು ನನ್ನ ದಿವ್ಯರೂಪವನ್ನೂ ಮನಸ್ಸಿನಲ್ಲಿಯೇ ಧ್ಯಾನಿಸುವನೋ ಅಂಥ ಶಂಕರನಿಗಿಂತ ಮೇಲಾದ ಭಕ್ತನಾರಿರುವನು?

೧೧೬. ನಾನು, ಸುದರ್ಶನಚಕ್ರ ಮತ್ತು ಶಂಕರ ಈ ಮೂವರು ತೇಜಸ್ಸಿನಲ್ಲಿ ಒಂದೇ ಸಮರು. ಬ್ರಹ್ಮನು ಯೋಗಬಲದಿಂದ ಸೃಷ್ಟಿಮಾಡಬಲ್ಲವನಾದರೂ ತೇಜಸ್ಸಿನಲ್ಲಿ ನಮಗೆಣೆಯಾಗಲಾರನು.

೧೧೭. ಈ ರೀತಿ ಶಂಕರನ ಅಮಲಕೀರ್ತಿಯನ್ನೂ ಮತ್ತು ಅವನ ದರ್ಪಭಂಗವನ್ನೂ ವಿಸ್ತಾರವಾಗಿ ಹೇಳಿದುದಾಯಿತು. ಎಲೌ ರಾಧೆಯೇ ಇನ್ನೇನನ್ನು ಕೇಳಲು ನಿನಗಿಷ್ಟವಿದೆ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಶಂಕರಪ್ರಶಂಸೆಯನ್ನು ತಿಳಿಸುವ ಮೂವತ್ತಾರನೆಯ
ಅಧ್ಯಾಯವು ಮುಗಿದುದು.

ಮೂವತ್ತಾರನೆಯ ಅಧ್ಯಾಯದ ಸಾರಾಂಶ.

ಬ್ರಹ್ಮನು ಮೋಹಿನಿಯ ಶಾಪದಿಂದ ಅಪೂಜ್ಯನಾಗಲು ಕಾರಣವನ್ನೂ ಅವನ ದರ್ಪಭಂಗವನ್ನೂ ವಿವರವಾಗಿ ತಿಳಿಸಬೇಕೆಂದು ರಾಧೆಯು ಕೇಳಲು ಶ್ರೀಕೃಷ್ಣನು ಅದನ್ನು ತಿಳಿಸುವುದಾಗಿ ಹೇಳಿ ಮೊದಲು ಶಂಕರನ ಗರ್ವಭಂಗವನ್ನು ಈ ರೀತಿ ವಿವರಿಸಿದನು.

ಶಂಕರನು ಶ್ರೀಕೃಷ್ಣನನ್ನು ಕುರಿತು ಬಹುಕಾಲ ತಪಸ್ಸು ಮಾಡಿ ಮೆಚ್ಚಿಸಿ ಎಲ್ಲವಿಧದಲ್ಲಿಯೂ ಅವನಿಗೆ ಸಮಾನನೆನಿಸಿದನು. ಕಲ್ಪವೃಕ್ಷದಂತೆ ಭಕ್ತರ ಇಷ್ಟಾರ್ಥ ಪ್ರದನಾದುದರಿಂದ ತಾನೇ ಸರ್ವೇಶ್ವರನೆಂದು ತಿಳಿದು ಗರ್ವಿತನಾದನು. ಹೀಗಿರಲು, ಒಮ್ಮೆ ವೃಕನೆಂಬದೈತ್ಯನು ಕೇದಾರಕ್ಷೇತ್ರದಲ್ಲಿ ತಪಸ್ಸುಮಾಡುತ್ತಿರಲು ಶಂಕರನು ಅವನ ಸಮೀಪಕ್ಕೆ ಹೋಗಿ ನಿನ್ನ ಇಷ್ಟಾರ್ಥವನ್ನು ಬೇಡೆಂದನು. ಆಗ ಆ ದೈತ್ಯನು ನಾನು ಯಾರ ತಲೆಯ ಮೇಲೆ ಕೈ ಇಡುವೆನೋ ಅವನು ಬೂದಿಯಾಗುವಂತೆ ವರವನ್ನು ಕೊಡು ಎಂದನು. ಶಿವನು ಹಾಗೆಯೇ ಆಗಲೆಂದು ಹೇಳಿ ಹಿಂತಿರುಗಲು ಆ ದೈತ್ಯನು ಶಿವನ ತಲೆಯ ಮೇಲೇ ತನ್ನ ಕೈಯ್ಯನ್ನಿಡಲು ಅವನನ್ನು ಅಟ್ಟಿಸಿ ಕೊಂಡು ಹೋದನು. ಆಗ ಶಿವನು ಗತ್ಯಂತರವಿಲ್ಲದೆ ನನ್ನನ್ನೇ ಮರೆಹೊಕ್ಕು ತನ್ನ ಗರ್ವಕ್ಕೆ ಕ್ಷಮೆ ಬೇಡಿದನು. ಆಗ ನಾನು ನನ್ನ ಮಾಯಾಬಲದಿಂದ ಆ ದೈತ್ಯ ನನ್ನು ವಂಚಿಸಿ ಅವನ ತಲೆಯ ಮೇಲೇ ಅವನ ಕೈಯ್ಯನ್ನಿಟ್ಟುಕೊಂಡು ಭಸ್ಮವಾಗು ವಂತೆ ಮಾಡಿದೆನು.

ಮತ್ತೊಮ್ಮೆ ಬಲಗರ್ವಿತನಾದ ಶಂಕರನು ನಾನು ಅನುಗ್ರಹಿಸಿದ್ದ ಅಭೇದ್ಯ ಕವಚವನ್ನೂ, ಶೂಲಾಯುಧವನ್ನೂ ಬಿಟ್ಟು ಬರಿಗೈಯಲ್ಲಿ ತ್ರಿಪುರಾಸುರನೊಡನೆ ಯುದ್ಧಕ್ಕೆ ಹೋಗಿ ಅವನಿಂದ ಪೆಟ್ಟುತಿಂದು ನೆಲಕ್ಕುರುಳಿದನು. ಅನಂತರ ದಿವ್ಯ ಸ್ತೋತ್ರದಿಂದ ನನ್ನನ್ನು ಮೆಚ್ಚಿಸಲು ನಾನು ವೃಷಭರೂಪದಿಂದ ಹೋಗಿ ಅವನನ್ನು ಎತ್ತಿಕೊಂಡುಬಂದು ಅವನಿಗೆ ಅಭೇದ್ಯವಾದ ಕವಚವನ್ನೂ, ತ್ರಿಶೂಲವನ್ನೂ ಕೊಟ್ಟು ಅದರ ಮೂಲಕ ತ್ರಿಪುರಾಸುರನ ನಿಗ್ರಹಮಾಡಿಸಿದೆನು. ಈ ರೀತಿ ಎರಡು ಸಾರಿ ದರ್ಪಭಂಗವಾದನಂತರ ಶಿವನು ಅಹಂಕಾರವನ್ನು ಬಿಟ್ಟು ನನ್ನ ಭಕ್ತಿಯಲ್ಲಿಯೇ ನಿರತನಾದನು.

ಶಂಕರನು ನನ್ನ ದಿವ್ಯ ಸುಂದರರೂಪವನ್ನು ಅನೇಕ ಕಣ್ಣುಗಳಿಂದ ನೋಡಿ ಹಲವು ಬಾಯಿಗಳಿಂದ ವರ್ಣಿಸಲು ಬಯಸಿದನು. ಆದುದರಿಂದ ನಾನು ಅವನಿಗೆ ಪಂಚಮುಖಗಳನ್ನೂ, ಪ್ರತಿಯೊಂದು ಮುಖದಲ್ಲೂ ಮೂರು ಮೂರು ಕಣ್ಣುಗಳನ್ನೂ ಅನುಗ್ರಹಿಸಿದೆನು. ಸತ್ವ, ರಜಸ್ಸು, ಮತ್ತು ತಮೋಗುಣಗಳೇ ಪ್ರಧಾನವಾದ ಆ ಮೂರು ಕಣ್ಣುಗಳೂ ಜಗತ್ತಿನ ಸೃಷ್ಟಿಸ್ಥಿತಿಲಯಗಳಿಗೆ ಕ್ರಮವಾಗಿ ಕಾರಣ ಗಳಾಗಿರುವುವು. ಅವನು ದಾಕ್ಷಾಯಣಿಯ ಪ್ರೇಮದಿಂದ ಚಿತಾಭಸ್ಮಧರನಾಗಿಯೂ, ನಿರ್ಮಮನಾದುದರಿಂದ ದಿಗಂಬರನಾಗಿಯೂ ಇರುವನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಸಪ್ತತ್ರಿಂಶೋಽಧ್ಯಾಯಃ ||

|| ರಾಧಿಕೋವಾಚ ||

ಏವಂಭೂತಸ್ಯ ಚ ವಿಭೋಃ ಸರ್ವೇಶಸ್ಯ ಮಹಾತ್ಮನಃ |
ನ ಶಸ್ತಂ ಕಥಮುಚ್ಛಿಷ್ಟಂ ಬ್ರೂಹಿ ಸಂದೇಹಭಂಜನ || ೧ ||

|| ಶ್ರೀಕೃಷ್ಣ ಉವಾಚ ||

ಶೃಣು ದೇವಿ ಪ್ರವಕ್ಷ್ಯೇಽಹಮಿತಿಹಾಸಂ ಪುರಾತನಂ |
ಪಾಪೇಂಧನಾನಾಂ ದಹನೇ ಜ್ವಲದಗ್ನಿಶಿಖೋಪಮಂ || ೨ ||

ಸನತ್ಕುಮಾರೋ ವೈಕುಂಠಮೇಕದಾ ಚ ಜಗಾಮ ಹ |
ದದರ್ಶ ಭುಕ್ತವಂತಂ ಚ ನಾಥಂ ನಾರಾಯಣಂ ದ್ವಿಜಃ || ೩ ||

ಮೂವತ್ತೇಳನೆಯ ಅಧ್ಯಾಯ.

೧. ರಾಧಿಕೆ :—ಎಲೈ ಸರ್ವಸಂದೇಹಭಂಜಕನೇ, ಈ ರೀತಿ ವಿಶ್ವವಿಖ್ಯಾತನೂ ಮಹಾತ್ಮನೂ ಆದ ಪರಮೇಶ್ವರನ ಉಚ್ಛಿಷ್ಟ (ಎಂಜಲು) ವು ಎಲ್ಲರಿಂದಲೂ ತ್ಯಾಜ್ಯವಾಗಲು ಕಾರಣವೇನೆಂಬುದನ್ನು ನನಗೆ ವಿಸ್ತರಿಸಿ ಹೇಳು.

೨. ಶ್ರೀಕೃಷ್ಣ:—ಎಲೌ ದೇವಿಯೇ. ಪಾಪವೆಂಬ ಕಟ್ಟಿಗೆಗಳನ್ನು ಸುಡಲು ಉರಿಯುವ ಅಗ್ನಿಶಿಖೆಯಂತಿರುವ ಪುರಾತನವಾದ ಇತಿಹಾಸವನ್ನು ಹೇಳುವೆನು. ಸಾವಧಾನದಿಂದ ಕೇಳು.

೩. ಒಮ್ಮೆ ದ್ವಿಜೋತ್ತಮನಾದ ಸನತ್ಕುಮಾರನು ವೈಕುಂಠಕ್ಕೆ ಹೋದನು. ಅಲ್ಲಿ ಊಟಮಾಡಿ ಸುಖಾಸೀನನಾಗಿರುವ ಜಗದೊಡೆಯನಾದ ಶ್ರೀಮನ್ನಾರಾಯಣನನ್ನು ಕಂಡನು.

ತುಷ್ಟಾವ ಗೂಢ್ಯೈಃ ಸ್ತೋತ್ರೈಶ್ಚ ಪ್ರಣಮ್ಯ ಭಕ್ತಿತೋ ಮುದಾ ।
ಅವಶೇಷಂ ದದೌ ತಸ್ಮೈ ಸಂತುಷ್ಟೋ ಭಕ್ತವತ್ಸಲಃ ॥ ೪ ॥

ಪ್ರಾಪ್ತಮಾತ್ರೇಣ ತತ್ರೈವ ಭುಕ್ತಂ ತೇನೈವ ಕಿಂಚನ ।
ಕಿಂಚಿದ್ರರಕ್ಷ ಬಂಧೂನಾಂ ಭಕ್ಷಣಾಯ ಚ ದುರ್ಲಭಂ ॥ ೫ ॥

ಸಿದ್ಧಾಶ್ರಮೇ ಚ ಯದ್ದತ್ತಂ ಗುರವೇ ಶೂಲಪಾಣಿನೇ ।
ಭಕ್ತ್ಯುದ್ರೇಕಾಚ್ಚ ತತ್ಸರ್ವಂ ಭುಕ್ತಂ ಚ ಪ್ರಾಪ್ತಿಮಾತ್ರತಃ ॥ ೬ ॥

ಭುಕ್ತ್ವಾ ಸುದುರ್ಲಭಂ ವಸ್ತು ನನರ್ತ ಪ್ರೇಮವಿಹ್ವಲಃ ।
ಪುಲಕಾಂಕಿತಸರ್ವಾಂಗಃ ಸಾಶ್ರುನೇತ್ರೋ ಮುದಾನ್ವಿತಃ ॥ ೭ ॥

ಗಾಯನ್ನಮು ಗುಣಾನ್ಭಕ್ತ್ಯಾ ಸುಕಂಠಃ ಪಂಚವಕ್ತ್ರತಃ ।
ರಾಗಭೇದೈಕತಾನೇನ ತಾಲಮಾನೇನ ಸುಂದರಂ ॥ ೮ ॥

---

೪. ಕೂಡಲೇ ಭಕ್ತಿಪೂರ್ವಕವಾಗಿ ಅವನಿಗೆ ವಂದಿಸಿ ದಿವ್ಯಸ್ತೋತ್ರಗಳಿಂದ ಅವನನ್ನು ಸ್ತುತಿಸಿದನು. ಭಕ್ತವತ್ಸಲನಾದ ಶ್ರೀಹರಿಯು ಸಂತುಷ್ಟನಾಗಿ ಅವನಿಗೆ ತನ್ನ ಭುಕ್ತಶೇಷವನ್ನು ಕೊಟ್ಟನು.

೫. ಆ ಕ್ಷಣದಲ್ಲಿಯೇ ಸನತ್ಕುಮಾರನು ಅದರಲ್ಲಿ ಸ್ವಲ್ಪಭಾಗವನ್ನು ತಾನು ಅಲ್ಲಿಯೇ ತಿಂದು, ದುರ್ಲಭವಾದ ಆ ಪ್ರಸಾದವನ್ನು ತನ್ನ ಬಂಧುಗಳಿಗಾಗಿ ಸ್ವಲ್ಪ ಇಟ್ಟುಕೊಂಡನು.

೬. ಅವನು ಹಿಂತಿರುಗಿ ಬರುತ್ತ ಸಿದ್ಧಾಶ್ರಮದಲ್ಲಿ ತನ್ನ ಗುರುವಾದ ಶೂಲಪಾಣಿಗೆ ಆ ಪ್ರಸಾದವನ್ನು ಕೊಡಲು, ಶಂಕರನು ಅದರಲ್ಲಿ ಪಾರ್ವತಿಗೂ ಸಹ ಸ್ವಲ್ಪವಿಡದೆ ಭಕ್ತ್ಯುದ್ರೇಕದಿಂದ ಎಲ್ಲವನ್ನೂ ತಿಂದುಬಿಟ್ಟನು.

೭. ದುರ್ಲಭವಾದ ಆ ಪ್ರಸಾದವನ್ನು ತಿಂದು ಸಂತೋಷಭರಿತನಾಗಿ ಕುಣಿದಾಡಿದನು. ಅವನ ಅಂಗಾಂಗಗಳೆಲ್ಲವೂ ರೋಮಾಂಚಿತವಾಗಿ ಕಣ್ಣುಗಳಿಂದ ಆನಂದಬಾಷ್ಪಗಳುರುಳಿದವು.

೮. ಆ ಪಂಚಮುಖಿಯಾದ ಶಂಕರನು ತನ್ನ ಮಧುರವಾದ ಕಂಠದಿಂದ ನನ್ನ ದಿವ್ಯಗುಣಗಳನ್ನು ಭಿನ್ನ ಭಿನ್ನ ರಾಗಗಳಲ್ಲಿ ತಾಲಾನುಗುಣವಾಗಿ ಹಾಡಿ ಭಕ್ತಿಯಿಂದ ನರ್ತನಮಾಡಿದನು.

ಪಪಾತ ಡಮರುರ್ಹಸ್ತಾಚ್ಛೃಂಗಂ ಚ ವ್ಯಾಘ್ರಚರ್ಮ ಚ ।
ಸ್ವಯಂ ನಿಪತ್ಯ ಪಶ್ಚಾಚ್ಚ ರುದನ್ಮೂರ್ಛಾಮವಾಪ ಹ ॥ ೯ ॥

ಅತೀವ ಕಮನೀಯಂ ತದ್ರೂಪಂ ಧ್ಯಾತ್ವೈಕಮಾನಸಃ ।
ಸಹಸ್ರದಲಮಧ್ಯಸ್ಥಂ ಮಾಂ ಪಶ್ಯನ್ಹೃತ್ಸರೋರುಹೇ ॥ ೧೦ ॥

ಏತಸ್ಮಿನ್ನಂತರೇ ದೇವೀ ದುರ್ಗಾ ದುರ್ಗತಿನಾಶಿನೀ ।
ಮುದಾಽಽಜಗಾಮ ಶೀಘ್ರಂ ತತ್ಪ್ರಸನ್ನವದನೇಕ್ಷಣಾ ॥ ೧೧ ॥

ರುದಂತಂ ಮೂರ್ಛಿತಂ ದೃಷ್ಟ್ವಾ ನಿಪತಂತಂ ಚ ಭಕ್ತಿತಃ ।
ಪ್ರಹಸ್ಯ ವಾರ್ತಾಂ ಪಪ್ರಚ್ಛ ಕುಮಾರಂ ಶೂಲಪಾಣಿನಃ ॥ ೧೨ ॥

ಸರ್ವಂ ತಾಂ ಕಥಯಾಮಾಸ ಕುಮಾರಃ ಸಂಪುಟಾಂಜಲಿಃ ।
ಶ್ರುತ್ವಾ ಚುಕೋಪ ಸಾ ದೇವೀ ಶಿವಾಯ ಸ್ಫುರಿತಾಧರಾ ॥ ೧೩ ॥

---

೯. ಈ ರೀತಿ ನರ್ತನಮಾಡುತ್ತಿದ್ದ ಶಿವನ ಕೈಯಿಂದ ಡಮರುಗವೂ ಶೃಂಗವೂ ಕೆಳಗೆ ಬಿದ್ದುದಲ್ಲದೆ ಅವನು ಧರಿಸಿದ್ದ ವ್ಯಾಘ್ರಚರ್ಮವೂ ಕಳಚಿಬಿದ್ದಿತು. ಶಿವನೂ ಸಹ ಕೆಳಗೆ ಬಿದ್ದು ಮೂರ್ಛೆಗೊಂಡನು.

೧೦. ಈ ರೀತಿ ಮೂರ್ಛಾವಸ್ಥೆಯಲ್ಲಿದ್ದರೂ ಶಿವನು ತನ್ನ ಸಹಸ್ರದ[ಳ]ವುಳ್ಳ) ಹೃತ್ಕಮಲದ ಮಧ್ಯೆ ಕುಳಿತಿರುವ ನನ್ನ ದಿವ್ಯಸುಂದರ ವಿಗ್ರಹವನ್ನು ಕಂಡು ಆನಂದಪರವಶನಾದನು.

೧೧. ಆ ಸಮಯಕ್ಕೆ ಸರಿಯಾಗಿ ಸಕಲರ ದುರ್ಗತಿನಾಶಕಳಾದ ದುರ್ಗಾ ದೇವಿಯು ಸಂತೋಷದಿಂದ ಅರಳಿದ ಮುಖ ಮತ್ತು ಕಣ್ಣುಳ್ಳವಳಾಗಿ ಜಾಗ್ರತೆ ಅಲ್ಲಿಗೆ ಬಂದಳು.

೧೨. ಅಲ್ಲಿ ಭಕ್ತ್ಯುದ್ರೇಕದಿಂದ ಮೂರ್ಛಿತನಾಗಿ ಬಿದ್ದಿರುವ ಶಿವನ ಸ್ಥಿತಿಯನ್ನು ನೋಡಿ ನಸುನಕ್ಕು ಷಣ್ಮುಖನನ್ನು ಕುರಿತು ಸಮಾಚಾರವೇನೆಂದು ಕೇಳಿದಳು.

೧೩. ಕೂಡಲೇ ಷಣ್ಮುಖನು ಕೈ ಮುಗಿದುಕೊಂಡು ನಡೆದ ಸಮಾಚಾರವನ್ನೆಲ್ಲ ವಿಸ್ತರಿಸಿ ಹೇಳಿದನು. ಪಾರ್ವತಿಯು ಕೇಳಿ ಶಿವನ ವಿಷಯದಲ್ಲಿ ಕುಪಿತಳಾಗಿ ತುಟಿಗಳನ್ನು ಅದುರಿಸುತ್ತ ನಿಂತಳು.

ತಾಂ ಶಪ್ತುಮುದ್ಯತಾಂ ದೇವೀಮುತ್ಥಾಯ ಚ ತ್ರಿಲೋಚನಃ ।
ಬೋಧಯಾಮಾಸ ವಿವಿಧಂ ತುಷ್ಟಾವ ಸಂಪುಟಾಂಜಲಿಃ ॥ ೧೪ ॥

ಶ್ರುತ್ವಾ ಮನೋಹರಂ ಸ್ತೋತ್ರಂ ನ ಶಶಾಪ ಶಿವಂ ಶಿವಾ ।
ದುಷ್ಟಂ ಚಕ್ರೇ ತದುಚ್ಛಿಷ್ಟಮಭಕ್ಷ್ಯಂ ವಿದುಷಾಮಪಿ ॥ ೧೫ ॥

ನ ಲೋಕಾನಾಂ ಪ್ರಭಾವಶ್ಚ ತಪಃಸೌಭಾಗ್ಯತೇಜಸಾಂ ।
ಬ್ರಹ್ಮಾಂಡೇ ಸರ್ವಸಂಹರ್ತಾ ಚಕಂಪೇ ಪಾರ್ವತೀಭಯೇ ॥ ೧೬ ॥

ಉವಾಚ ತಂ ಜಗನ್ಮಾತಾ ನೀತಿಸಾರಂ ಪರಂ ವಚಃ ।
ಗಣಪ್ರಸೂಃ ಸಕೋಪಾ ಚ ರಕ್ತಪಂಕಜಲೋಚನಾ ॥ ೧೭ ॥

ಅಹೋ ತಪಃಪ್ರಭಾವಶ್ಚ ತೇಜಸಶ್ಚ ನ ಜೀವಿನಾಂ ।
ಸ ಬ್ರಹ್ಮಾಂಡಸ್ಯ ಸಂಹರ್ತಾ ಚಕಂಪೇ ಪಾರ್ವತೀಭಯಾತ್ ॥ ೧೮ ॥

---

೧೪. ಈ ರೀತಿ ಕೋಪದಿಂದ ಶಾಪಕೊಡಲುದ್ಯುಕ್ತಳಾದ ದೇವಿಯನ್ನು ನೋಡಿ ತ್ರಿಲೋಚನನು ಹೆದರಿ ಕೈಮುಗಿದುಕೊಂಡು ಅವಳನ್ನು ಸ್ತುತಿಸಿ ಸಮಾಧಾನ ಪಡಿಸಿದನು.

೧೫. ಆ ಮನೋಹರವಾದ ಸ್ತೋತ್ರಗಳನ್ನು ಕೇಳಿ ಪಾರ್ವತಿಯು ಶಂಕರನನ್ನು ಶಪಿಸಲಿಲ್ಲ. ಆದರೆ ಆ ಶಿವನ ಉಚ್ಛಿಷ್ಟ (ಎಂಜಲು) ವು ದುಷ್ಟವಾಗುವಂತೆಯೂ ಅದನ್ನು ಯಾರೂ ಭಕ್ಷಿಸದಂತೆಯೂ ಮಾಡಿದಳು.

೧೬. ಸೌಭಾಗ್ಯವತಿಯರ ತೇಜಸ್ಸಿನ ಪ್ರಭಾವವು ಲೋಕಸಾಮಾನ್ಯವಾದುದಲ್ಲ. ವಿಶ್ವಸಂಹಾರಕನಾದ ಶಿವನೂ ಸಹ ಆ ಪಾರ್ವತಿಯ ಭಯದಿಂದ ನಡುಗಿಹೋದನು.

೧೭. ಆಗ ಪ್ರಮಥಗಣಗಳ ಮಾತೆಯಾದ ಪಾರ್ವತಿಯು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಶಿವನನ್ನು ಕುರಿತು ನೀತಿಸಾರವಾದ ಕೆಲವು ಹಿತನುಡಿಗಳನ್ನಾಡಿದಳು.

೧೮. ಜೀವಿಗಳ ತಪಸ್ಸಿನ ಪ್ರಭಾವವೂ, ತೇಜಸ್ಸೂ ಪತಿವ್ರತೆಯರ ತೇಜಸ್ಸಿನ ಮುಂದೆ ನಿಷ್ಫಲವಾದುದು. ಏಕೆಂದರೆ ಬ್ರಹ್ಮಾಂಡ ಸಂಹಾರಕನಾದ ಶಿವನೂ ಸಹ ಪಾರ್ವತಿಯ ಭಯದಿಂದ ನಡುಗಿದನು.

॥ ಪಾರ್ವತ್ಯುವಾಚ ॥

ತ್ವಂ ಪೋಷ್ಟಾ ಜಗತಾಂ ಪಾತಾ ಮಮೈವ ಚ ವಿಶೇಷತಃ ।
ವಕ್ತಾ ಚತುರ್ಣಾಂ ವೇದಾನಾಂ ಜನಕಶ್ಚ ಸ್ವಯಂ ವಿಭುಃ ॥ ೧೯ ॥

ಮುಕ್ತಿಪ್ರದಾತಾ ಭಕ್ತಾನಾಂ ದಾತಾ ಚ ಸರ್ವಸಂಪದಾಂ ।
ತ್ವಂ ಚೇತ್ಕರೋಷಿ ದುರ್ನೀತಿಂ ಕೋ ವಾ ಧರ್ಮಂ ಚ ಪಾತಿ ವೈ ॥ ೨೦ ॥

ಸದಾ ತೇ ಪರಿಪಾಲ್ಯಾಽಹಂ ಪೋಷ್ಯಾ ಭಕ್ತ್ಯಾ ಚ ಕಿಂಕರೀ ।
ವಂಚಿತಾ ಕರ್ಮದೋಷೇಣ ಹರಿನಿರ್ಮಾಲ್ಯಭಕ್ಷಣೇ ॥ ೨೧ ॥

ಕಿಂಚಿಚ್ಛುದ್ಧಂ ಹಿರಣ್ಯೇನ ಕಿಂಚಿದ್ವಸ್ತು ಚ ವಾಯುನಾ ।
ಕಿಂಚಿತ್ಪ್ರಕ್ಷಾಲನೇನೈವ ಸರ್ವಂ ವಿಷ್ಣೋರ್ನಿವೇದನಾತ್ ॥ ೨೨ ॥

---

೧೯. ಪಾರ್ವತೀ:—ಎಲೈ ಶಂಕರನೇ, ನೀನು ಜಗದ್ರಕ್ಷಕನೂ ವಿಶೇಷವಾಗಿ ನನ್ನನ್ನು ಕಾಪಾಡುವವನೂ ಆಗಿದ್ದೀಯೆ. ವಿಶ್ವವ್ಯಾಪಿಯಾದ ನೀನು ಸ್ವಯಂ ಚತುರ್ವೇದಗಳ ಜನಕನೂ ಮತ್ತು ವಕ್ತೃವೂ ಆಗಿದ್ದೀಯೆ.

೨೦. ಭಕ್ತರಿಗೆ ಮುಕ್ತಿಪ್ರದಾಯಕನೂ, ಸರ್ವಸಂಪತ್ಪ್ರದಾತೃವೂ ಆಗಿರುವೆ. ನಿನ್ನಂಥವನೇ ಅನೀತಿಯನ್ನು ಆಚರಿಸಿದರೆ ಧರ್ಮವನ್ನು ರಕ್ಷಿಸುವವರು ಮತ್ತಾರಿದ್ದಾರೆ?

೨೧ ನಿನ್ನ ಭಕ್ತಳೂ, ಸೇವಕಿಯೂ ಆದ ನಾನು ಸರ್ವದಾ ನಿನ್ನಿಂದ ಪೋಷ್ಯಳೂ, ಕಾಪಾಡಲ್ಪಡಲು ಯೋಗ್ಯಳೂ ಆಗಿರುವೆನು. ಇಂಥ ನನಗೆ ಕರ್ಮದೋಷದಿಂದ ಶ್ರೀಹರಿಯ ಪ್ರಸಾದವನ್ನು ಕೊಡದೆ ವಂಚಿಸಿದೆಯಲ್ಲ.

೨೨. ಕೆಲವು ವಸ್ತುಗಳು ಹಿರಣ್ಯದಿಂದಲೂ, ಮತ್ತೆ ಕೆಲವು ವಾಯುಸ್ಪರ್ಶದಿಂದಲೂ ಮತ್ತೆ ಕೆಲವು ನೀರಿನಿಂದ ತೊಳೆಯುವುದರಿಂದಲೂ ಶುದ್ಧವಾಗುವುವು. ಆದರೆ ವಿಷ್ಣುವಿನ ನಿವೇದನದಿಂದ ಸಕಲ ವಸ್ತುಗಳೂ ಶುದ್ಧವಾಗುವುವು.

ವಿಷ್ಣೋರ್ನಿವೇದಿತಾನ್ನೇನ ಯಷ್ಟವ್ಯಾಃ ಸರ್ವದೇವತಾಃ ।
ಪಿತರೋಽತಿಥಯಶ್ಚೈವಮಿತಿ ವೇದೇಷು ನಿಶ್ಚಿತಂ ॥ ೨೩ ॥

ಅನಿವೇದ್ಯಮಭಕ್ಷ್ಯಂ ಚ ನೈವೇದ್ಯಮುದರೇ ಹರೇಃ ।
ತ್ಯಕ್ತ್ವಾ ಕರೋತಿ ಯೋ ಭಕ್ತ್ಯಾ ಪಾರ್ಷದಪ್ರವರೋ ಭವೇತ್ ॥ ೨೪ ॥

ಅಮೃತಂ ಸರ್ವವಸ್ತೂನಾಮಿಷ್ಟಂ ಸಾರಂ ಸುದುರ್ಲಭಂ ।
ವಿಷ್ಣೋರ್ನಿವೇದಿತಾನ್ನಸ್ಯ ಕಲಾಂ ನಾರ್ಹತಿ ಷೋಡಶೀಂ ॥ ೨೫ ॥

ಹಂತ್ಯಕಾಲಿಕಮೃತ್ಯುಂ ತದಮೃತಂ ಮೂಢರಂಜನಂ ।
ನೈವೇದ್ಯಂ ಚ ಹರೇರೇವ ಹರಿತುಲ್ಯಂ ಕರೋತ್ಯಹೋ ॥ ೨೬ ॥

ಯದೃಚ್ಛಯಾ ತನ್ನೈವೇದ್ಯಂ ಯೋ ಭುಂಕ್ತೇ ಸಾಧುಸಂಗತಃ ।
ಷಷ್ಟಿವರ್ಷಸಹಸ್ರಾಣಾಂ ಪ್ರಾಪ್ನೋತಿ ತಪಸಃ ಫಲಂ ॥ ೨೭ ॥

---

೨೩. ಸಕಲ ದೇವತೆಗಳನ್ನೂ, ಪಿತೃಗಳನ್ನೂ, ಅತಿಥಿಗಳನ್ನೂ ಸಹ ವಿಷ್ಣುವಿಗೆ ನಿವೇದಿಸಿದ ಅನ್ನದಿಂದ ತೃಪ್ತಿಪಡಿಸಬೇಕೆಂದು ವೇದಶಾಸ್ತ್ರಗಳಲ್ಲಿ ಹೇಳಿದೆ.

೨೪. ಯಾರು ಶ್ರೀಹರಿಗೆ ನಿವೇದಿಸದಿರುವುದನ್ನು ಅಭಕ್ಷ್ಯವೆಂದು ತಿಳಿದು ಎಲ್ಲವನ್ನೂ ಶ್ರೀಹರಿಗೆ ನಿವೇದಿಸಿ ಭುಜಿಸುವರೋ ಅವರೆಲ್ಲರೂ ಶ್ರೀಹರಿಯ ಪಾರ್ಷದ ಪ್ರವರರಾಗುವುದರಲ್ಲಿ ಸಂಶಯವಿಲ್ಲ.

೨೫. ಅಮೃತವು ಸಕಲ ವಸ್ತುಗಳಲ್ಲಿಯೂ ಸಾರತರವಾದುದು. ಎಲ್ಲರಿಗೂ ಇಷ್ಟವಾದುದು ಮತ್ತು ಎಲ್ಲರಿಗೂ ದುರ್ಲಭವಾದುದು. ಅಂಥ ಅಮೃತವೂ ಸಹ ಯೋಗ್ಯತೆಯಲ್ಲಿ ವಿಷ್ಣುವಿಗೆ ನಿವೇದಿಸಿದ ಅನ್ನದ ಹದಿನಾರನೆಯ ಒಂದು ಭಾಗವನ್ನೂ ಹೋಲುವುದಿಲ್ಲ.

೨೬. ಮೂಢರಿಗೆ ಮಾತ್ರ ಆನಂದದಾಯಕವಾದ ಅಮೃತವು ಅಕಾಲ ಮರಣವನ್ನು ಪರಿಹರಿಸುವುದಾದರೆ, ಶ್ರೀಹರಿಯ ನೈವೇದ್ಯವು ಭುಜಿಸಿದವರನ್ನು ಶ್ರೀಹರಿಗೆ ಸಮನಾಗಿಯೇ ಮಾಡಬಲ್ಲದು.

೨೭. ಯಾವನು ಸತ್ಪುರುಷರ ಸಹವಾಸವನ್ನು ಹೊಂದಿ ಅನಿರೀಕ್ಷಿತವಾಗಿ ಯಾದರೂ ಶ್ರೀಹರಿಯ ನೈವೇದ್ಯವನ್ನು ಭುಜಿಸುವನೋ ಅವನು ಅರವತ್ತುಸಾವಿರ ವರ್ಷಗಳಕಾಲ ಮಾಡಿದ ತಪಸ್ಸಿನ ಫಲವನ್ನು ಹೊಂದುವನು.

ಯೋ ನಿವೇದ್ಯ ಹವಿರ್ಭುಂಕ್ತೇ ಭಕ್ತ್ಯಾ ಭಕ್ತಶ್ಚ ನಿತ್ಯಶಃ ।
ಕಿಂವಾ ತಪಸಿ ತಸ್ಯಾಪಿ ಚ ಸ ಹರೇಸ್ತೇಜಸಾ ಸಮಃ ॥ ೨೮ ॥

ಶ್ರುತಂ ಪುರಾ ತ್ವನ್ಮುಖತಃ ಪುಷ್ಕರೇ ಮುನಿಸಂಸದಿ ।
ಅಹಂ ವೇದವಿಧಾತಾ ನ ಕಿಮಹಂ ವಕ್ತುಮೀಶ್ವರೀ ॥ ೨೯ ॥

ಸುಚಿರಂ ಚ ತಪಸ್ತಪ್ತ್ವಾ ಮಯಾ ಲಬ್ಧಸ್ತ್ವಮೀಶ್ವರಃ ।
ತ್ವಯಾ ವಿಷ್ಣೋಃ ಪ್ರಸಾದೇನ ವಂಚಿತಾಽಹಂ ಕಥಂ ಪ್ರಭೋ ॥ ೩೦ ॥

ಯತೋ ನ ದತ್ತಂ ನೈವೇದ್ಯಂ ವಿಷ್ಣೋರ್ಮಹ್ಯಂ ತ್ವಯಾಽಧುನಾ ।
ಅತೋ ಮತ್ತೋ ಗೃಹಾಣೈತತ್ಫಲಮೇವ ಮಹೇಶ್ವರ ॥ ೩೧ ॥

ಅದ್ಯಪ್ರಭೃತಿ ಯೇ ಲೋಕಾ ನೈವೇದ್ಯಂ ಭುಂಜತೇ ತವ ।
ತೇ ಜನ್ಮೈಕಂ ಸಾರಮೇಯಾ ಭವಿಷ್ಯಂತ್ಯೇವ ಭಾರತೇ ॥ ೩೨ ॥

---

೨೮. ಯಾವ ಭಕ್ತನು ಪ್ರತಿದಿನವೂ ಶ್ರೀಹರಿಗೆ ನಿವೇದಿಸಿದ ಹವಿಷ್ಯಾನ್ನವನ್ನು ಭಕ್ತಿಪೂರ್ವಕವಾಗಿ ಭುಜಿಸುವನೋ ಅವನಿಗೆ ತಪಸ್ಸಿನಿಂದಾಗಬೇಕಾದುದೇನು? ಅವನು ತೇಜಸ್ಸಿನಲ್ಲಿ ಶ್ರೀಹರಿಗೆ ಸಮನಾಗುವನು.

೨೯. ಈ ವಿಷಯವನ್ನು ಪೂರ್ವದಲ್ಲಿ ಪುಷ್ಕರಕ್ಷೇತ್ರದಲ್ಲಿದ್ದ ಮುನಿಗಳ ಸಭೆಯಲ್ಲಿ ನಿನ್ನ ಬಾಯಿಂದಲೇ ನಾನು ಕೇಳಿದ್ದೆನು. ನಾನೇನೂ ವೇದವಿಧಾತೃವಲ್ಲ. ಸ್ವತಃ ನಾನೇನು ಹೇಳಬಲ್ಲೆನು?

೩೦. ನಾನು ಬಹುಕಾಲ ತಪಸ್ಸುಮಾಡಿ ಸರ್ವೇಶ್ವರನಾದ ನಿನ್ನನ್ನು ಪತಿಯನ್ನಾಗಿ ಪಡೆದೆ. ಎಲೈ ಪ್ರಭುವೇ, ನೀನು ನನಗೆ ವಿಷ್ಣುವಿನ ಪ್ರಸಾದವನ್ನು ವಂಚಿಸಿದುದು ನ್ಯಾಯವೇ ?

೩೧ ಈಗ ನೀನು ಯಾವಕಾರಣದಿಂದ ವಿಷ್ಣುವಿನ ನೈವೇದ್ಯವನ್ನು ನನಗೆ ಕೊಡಲಿಲ್ಲವೋ ಆದುದರಿಂದ ಅದಕ್ಕೆ ಪ್ರತಿಫಲವಾಗಿ ಈ ನನ್ನ ಶಾಪವನ್ನು ಸ್ವೀಕರಿಸು.

೩೨. ಇಂದಿನಿಂದ ಯಾರು ನಿನ್ನ ನೈವೇದ್ಯವನ್ನು ಭುಜಿಸುವರೋ ಅಂಥವರು ಭರತಖಂಡದಲ್ಲಿ ಬೇಟೆನಾಯಿಯಾಗಿ ಜನ್ಮವೆತ್ತಿ ನರಳುವರು.

ಇತ್ಯುಕ್ತ್ವಾ ಪಾರ್ವತೀಮಾತಾ ರುರೋದ ಪುರತೋ ವಿಭೋಃ ।
ದೃಷ್ಟಿಃ ಪಪಾತ ತತ್ಕಂಠೇ ನೀಲಕಂಠೋ ಬಭೂವ ಹ ॥ ೩೩ ॥

ತದಾ ಶಿವಃ ಶಿವಾಂ ಭಕ್ತ್ಯಾ ಕೃತ್ವಾ ವಕ್ಷಸಿ ಸಾದರಂ ।
ತನ್ಮಾನಭಂಗಂ ಸ್ತೋತ್ರೇಣ ವಿನಯೇನ ಚಕಾರ ಹ ॥ ೩೪ ॥

ಕರೇಣ ಚಕ್ಷುಷೋರ್ನೀರಂ ಸಂಮೃಜ್ಯ ಚ ಪುನಃ ಪುನಃ ।
ಬೋಧಯಾಮಾಸ ವಿವಿಧೈರ್ನೀತಿವಾಕ್ಯೈರ್ಮನೋಹರೈಃ ॥ ೩೫ ॥

ಪರಿತುಷ್ಟಾ ಚ ಸಾ ದೇವೀ ಭರ್ತಾರಂ ಸಮುವಾಚ ಹ ।
ಕಲೇವರಂ ಚ ತ್ಯಕ್ಷ್ಯಾಮಿ ನೈವೇದ್ಯೇನ ವಿನಾ ಹರೇಃ ॥ ೩೬ ॥

ಬಿಭರ್ತಿ ದೇಹಂ ಸತತಂ ಭವಾನ್ ಸೌಭಾಗ್ಯವರ್ಧನಂ ।
ಕಥಂ ವಹಾಮಿ ಸೌಭಾಗ್ಯರಹಿತಂ ಚ ಕಲೇವರಂ ॥ ೩೭ ॥

---

೩೩. ಹೀಗೆ ಹೇಳಿ ಲೋಕಮಾತೆಯಾದ ಪಾರ್ವತಿಯು ಶಿವನ ಮುಂದೆ ರೋದಿಸಲುಪಕ್ರಮಿಸಿದಳು. ಈಶ್ವರನ ಕಂಠದಲ್ಲಿ ಪಾರ್ವತಿಯ ಕ್ರೂರದೃಷ್ಟಿಯು ಬಿದ್ದುದರಿಂದ ಅವನು ನೀಲಕಂಠನಾದನು.

೩೪. ಆಗ ಶಿವನು ಪಾರ್ವತಿಯನ್ನು ಆದರಪೂರ್ವಕವಾಗಿ ವಕ್ಷಃಸ್ಥಲದಲ್ಲಿ ಅಪ್ಪಿಕೊಂಡು, ಅವಳನ್ನು ವಿನಯದಿಂದ ಸ್ತುತಿಸಿ ಅವಳ ಕೋಪವನ್ನು ಶಾಂತಗೊಳಿಸಿದನು.

೩೫. ತನ್ನ ಕರಕಮಲದಿಂದ ಆಕೆಯ ಕಣ್ಣೀರನ್ನು ಮತ್ತೆ ಮತ್ತೆ ಒರೆಸಿ ಮನೋಹರವಾದ ವಿವಿಧ ನೀತಿವಾಕ್ಯಗಳಿಂದ ಅವಳನ್ನು ಸಾಂತ್ವನಗೊಳಿಸಿದನು.

೩೬. ಆಗ ಪ್ರಸನ್ನಳಾದ ಪಾರ್ವತಿಯು ತನ್ನ ಪತಿಯನ್ನು ಕುರಿತು ಈ ರೀತಿ ಹೇಳಿದಳು. ಶ್ರೀಹರಿಯ ನೈವೇದ್ಯವು ನನಗೆ ದೊರಕಲಿಲ್ಲವಾದುದರಿಂದ ನನ್ನ ಶರೀರವನ್ನು ತ್ಯಜಿಸುವೆನು.

೩೭. ನೀನು ವಿಷ್ಣುವಿನ ಪ್ರಸಾದವನ್ನು ತಿಂದು ಸೌಭಾಗ್ಯವರ್ಧಕವಾದ ದೇಹವನ್ನು ಧರಿಸಿರುವಾಗ, ನಾನು ಸೌಭಾಗ್ಯರಹಿತವಾದ ಈ ಶರೀರವನ್ನು ಹೇಗೆ ಧರಿಸಿಕೊಂಡಿರಲಿ ?

ಅಪೂರ್ವಂ ತವ ನೈವೇದ್ಯಂ ಜನ್ಮಮೃತ್ಯುಜರಾಹರಂ ।
ಕೃತಂ ದುಷ್ಟಂ ಚ ಯತ್ತಸ್ಮಾತ್ತಸ್ಯ ದೇಹಂ ತ್ಯಜಾಮಿ ಚ ॥ ೩೮ ॥

ಲಿಂಗೋಪರಿ ಚ ಯದ್ದತ್ತಂ ತದೇವಾಗ್ರಾಹ್ಯಮೀಶ್ವರ ।
ಸುಪವಿತ್ರಂ ಭವೇತ್ತಸ್ಯ ವಿಷ್ಣೋರ್ನೈವೇದ್ಯಮಿಶ್ರಿತಂ ॥ ೩೯ ॥

ಇತ್ಯೇವಮುಕ್ತ್ವಾ ಸಾ ದೇವೀ ದೇಹಂ ತ್ಯಕ್ತುಂ ಸಮುದ್ಯತಾ ।
ತ್ರಸ್ತೋ ಹರಸ್ತತ್ಪುರತಃ ಸ್ತುತ್ವಾ ಚ ಸ್ವೀಚಕಾರ ಹ ॥ ೪೦ ॥

॥ ಶಂಕರ ಉವಾಚ ॥

ಸ್ಥಿರಾ ಭವ ಮಹಾದೇವಿ ಚಂಡಿಕೇ ಜಗದಂಬಿಕೇ ।
ಮಮಾಪರಾಧಮಖಿಲಂ ಕ್ಷಂತುಮರ್ಹಸಿ ಸುಂದರಿ ॥ ೪೧ ॥

---

೩೮. ತಿಂದವರ ಜನ್ಮಜರಾಮರಣಗಳನ್ನು ಪರಿಹರಿಸುತ್ತಿದ್ದ ನಿನ್ನ ನೈವೇದ್ಯವು ದುಷ್ಟವಾಗುವಂತೆ ನಾನು ಶಪಿಸಿದುದರಿಂದ ಈಗ ನಾನು ನನ್ನ ದೇಹತ್ಯಾಗ ಮಾಡುವೆನು.

೩೯. ಎಲೈ ಈಶ್ವರನೇ, ನಿನ್ನ ಲಿಂಗದಮೇಲೆ ಅರ್ಪಿಸಿದ ನೈವೇದ್ಯವನ್ನು ಯಾರೂ ಸ್ವೀಕರಿಸಕೂಡದು. ಅದಕ್ಕೆ ವಿಷ್ಣುವಿನ ನೈವೇದ್ಯವನ್ನು ಮಿಶ್ರಮಾಡಿದರೆ ಅದು ಪವಿತ್ರವಾಗುವುದು.

೪೦. ಹೀಗೆಂದು ಹೇಳಿ ಪಾರ್ವತಿಯು ತನ್ನ ದೇಹವನ್ನು ತ್ಯಜಿಸಲುದ್ಯುಕ್ತಳಾದಳು. ಆಗ ಹರನು ಹೆದರಿ ಪಾರ್ವತಿಯನ್ನು ತಡೆದು ಆಕೆಯನ್ನು ಸ್ತುತಿಸಲಾರಂಭಿಸಿದನು.

೪೧. ಶಂಕರ:—ಎಲೌ ಮಹಾದೇವಿ, ಚಂಡಿಕೆ, ಜಗನ್ಮಾತೆ ನೀನು ಸ್ಥಿರಬುದ್ಧಿಯುಳ್ಳವಳಾಗು. ಎಲೌ ಸುಂದರಿಯೇ, ನನ್ನ ಅಪರಾಧಗಳನ್ನೆಲ್ಲಾ ಕ್ಷಮಿಸುವವಳಾಗು.

ಮಾಂ ಭೃತ್ಯಂ ತಪಸಾ ಕ್ರೀತಂ ಕೃಪಾಂ ಕುರು ಮಮೋಪರಿ ।
ಬ್ರಹ್ಮವಿಷ್ಣುಮಹೇಶಾನಾಂ ಬೀಜಭೂತೇ ಸನಾತನಿ ॥ ೪೨ ॥

ಅಹೋ ಗೋಲೋಕನಾಥಸ್ಯ ಗುಣಾತೀತಸ್ಯ ನಿರ್ಗುಣೇ ।
ಸರ್ವಶಕ್ತಿಸ್ವರೂಪೇ ಚ ಸದೈವ ಸಹಚಾರಿಣಿ ॥ ೪೩ ॥

ಸಾಕಾರೇ ಚ ನಿರಾಕಾರೇ ನಿತ್ಯೇ ಸ್ವೇಚ್ಛಾಮಯೇ ಪ್ರಿಯೇ ।
ಕೃಪಯಾ ತದ್ವಿಭೋರೇವ ಮಮ ವಕ್ಷಸಿ ಸಾಂಪ್ರತಂ ॥ ೪೪ ॥

ಸರ್ವಬೀಜಸ್ವರೂಪೇ ಚ ಮಹಾಮಾಯೇ ಮನೋಹರೇ ।
ಸರ್ವಸಿದ್ಧಿಪ್ರದೇ ದೇವಿ ಮುಕ್ತಿದೇ ಕೃಷ್ಣಭಕ್ತಿದೇ ॥ ೪೫ ॥

ಇಚ್ಛೈವಂ ಶ್ರೀಹರೇಃ ಸಾಕ್ಷಾನ್ನಾಹಂ ದಾತುಮಪಿ ಕ್ಷಮಃ ।
ತದಾ ದೇಹಂ ಪರಿತ್ಯಜ್ಯ ನಿರ್ಗುಣಂ ವ್ರಜ ನಿರ್ಗುಣೇ ॥ ೪೬ ॥

---

೪೨. ಬ್ರಹ್ಮವಿಷ್ಣುಮಹೇಶ್ವರರಿಗೆ ಬೀಜರೂಪಿಣಿಯಾದ ಎಲೌ ಪುರಾತನಳೇ, ನಿನ್ನ ತಪಸ್ಸಿಗೆ ಒಲಿದು ನಿನ್ನ ಅಧೀನನಾಗಿರುವ ಸೇವಕನಾದ ನನ್ನ ಮೇಲೆ ದಯೆಯನ್ನು ತೋರು.

೪೩. ಎಲೌ ನಿರ್ಗುಣಳೇ, ತ್ರಿಗುಣಾತೀತನೂ, ಗೋಲೋಕನಾಥನೂ ಆದ ಶ್ರೀಕೃಷ್ಣನ ಸರ್ವಶಕ್ತಿಸ್ವರೂಪಿಣಿಯಾದ ನೀನು ಸರ್ವದಾ ಅವನ ಸಹಚಾರಿಣಿಯಾಗಿರುವೆ.

೪೪. ಸಾಕಾರಳೂ ನಿರಾಕಾರಳೂ ನಿತ್ಯಳೂ ಸ್ವೇಚ್ಛಾಮಯಳೂ ಆದ ನೀನು ಶ್ರೀಕೃಷ್ಣಪರಮಾತ್ಮನ ಅನುಗ್ರಹದಿಂದಲೇ ನನಗೆ ಪ್ರಿಯಳಾಗಿ ನನ್ನ ವಕ್ಷಃಸ್ಥಲದಲ್ಲಿ ನೆಲೆಸಿರುವೆ.

೪೫. ಸರ್ವಬೀಜಸ್ವರೂಪಳೂ, ಮಹಾಮಾಯೆಯೂ, ಮನೋಹರಳೂ ಸರ್ವಸಿದ್ಧಿಪ್ರದಳೂ ಆದ ಎಲೌ ದೇವಿಯೇ, ನೀನು ಭಕ್ತರಿಗೆ ಶ್ರೀಕೃಷ್ಣಭಕ್ತಿಯನ್ನೂ ಮುಕ್ತಿಯನ್ನೂ ಅನುಗ್ರಹಿಸುವೆ.

೪೬. ನೀನು ಶ್ರೀಹರಿಯ ಸಾಕ್ಷಾದ್ದರ್ಶನವನ್ನು ಪಡೆಯಲಿಚ್ಛಿಸುವುದಾದರೆ ನಾನು ಅದನ್ನು ಅನುಗ್ರಹಿಸಲಾರೆ. ಎಲೌ ನಿರ್ಗುಣಳೇ, ನೀನು ದೇಹತ್ಯಾಗಮಾಡಿ ನಿರ್ಗುಣನಾದ ಶ್ರೀಹರಿಯನ್ನು ಹೊಂದು.

ಇತ್ಯೇವಮುಕ್ತ್ವಾ ಪುರತಸ್ತಸ್ಥೌ ಚ ಚಂದ್ರಶೇಖರಃ ।
ಬಭೂವ ಸುಪ್ರಸನ್ನಾ ಸಾ ಪ್ರಣನಾಮ ಹರಂ ಪರಂ ॥ ೪೭ ॥

ಇತ್ಯೇವಂ ಪಾರ್ವತೀಸ್ತೋತ್ರಂ ಶಂಕರೇಣ ಕೃತಂ ಪುರಾ ।
ಯಃ ಪಠೇದ್ವಿಪದಾಗ್ರಸ್ತಃ ಸ ಭಯಾದೇವ ಮುಚ್ಯತೇ ॥ ೪೮ ॥

ಮಿತ್ರಭೇದೋ ಭವೇದ್ದೂರಂ ತತ್ಸಂಪ್ರೀತಿರ್ಭವೇತ್ಪರಾ ।
ಪಾರ್ವತೀ ಪರಿತುಷ್ಟಾ ಚ ನ ತ್ಯಜೇತ್ತಸ್ಯ ಮಂದಿರಂ ॥ ೪೯ ॥

॥ ಶ್ರೀಕೃಷ್ಣ ಉವಾಚ ॥

ಶ್ರುತ್ವಾ ಪ್ರತಿಜ್ಞಾಂ ನಾಥಸ್ಯ ಪರಿತುಷ್ಟಾ ಬಭೂವ ಸಾ ।
ಜಗಾಮ ಸ್ವರ್ಣದೀಂ ತೂರ್ಣಂ ಸ್ನಾನಾರ್ಥಂ ಶಂಕರಾಜ್ಞಯಾ ॥ ೫೦ ॥

ಸ್ನಾತ್ವಾ ಸಂಪೂಜ್ಯ ಭಕ್ತ್ಯಾ ಚ ಸುರಮಿಷ್ಟಂ ಚ ನಿರ್ಗುಣಂ ।
ಚಕಾರ ಪ್ರಸ್ತುತಂ ಶೀಘ್ರಂ ಮಿಷ್ಟಾನ್ನಂ ವ್ಯಂಜನಾನಿ ಚ ॥ ೫೧ ॥

---

೪೭. ಹೀಗೆ ಹೇಳಿ ಚಂದ್ರಶೇಖರನು ಆ ದೇವಿಯ ಮುಂದೆ ಸುಮ್ಮನೆ ನಿಂತುಕೊಂಡನು. ಆಗ ಪಾರ್ವತೀದೇವಿಯು ಪ್ರಸನ್ನಳಾಗಿ ಪರಮೇಶ್ವರನಿಗೆ ನಮಸ್ಕರಿಸಿದಳು.

೪೮. ಈ ರೀತಿ ಪೂರ್ವದಲ್ಲಿ ಶಂಕರನು ಮಾಡಿದ ಪಾರ್ವತೀಸ್ತೋತ್ರವನ್ನು ವಿಪತ್ತಿಗೊಳಗಾದವರು ಭಕ್ತಿಯಿಂದ ಪಠಿಸಿದರೆ ಅವರು ವಿಪತ್ತಿನಿಂದ ಪಾರಾಗು ವುದರಲ್ಲಿ ಸಂಶಯವಿಲ್ಲ.

೪೯. ಅವರ ಮಿತ್ರರಲ್ಲಿದ್ದ ಪರಸ್ಪರ ವೈಷಮ್ಯವು ದೂರವಾಗಿ ಸ್ನೇಹವು ಗಾಢವಾಗಿ ವೃದ್ಧಿಹೊಂದುವುದು. ಅಲ್ಲದೆ ಪಾರ್ವತಿಯು ಸಂತುಷ್ಟಳಾಗಿ ಅವರ ಮನೆಯಲ್ಲಿಯೇ ನೆಲೆಸಿರುವಳು.

೫೦. ಶ್ರೀಕೃಷ್ಣ :—ತನ್ನ ಪ್ರಾಣನಾಥನ ಪ್ರತಿಜ್ಞೆಯನ್ನು ಕೇಳಿ ಪಾರ್ವತಿಯು ಸಂತುಷ್ಟಳಾದಳು. ಅಲ್ಲದೆ ಶಂಕರನ ಆಜ್ಞೆಯಂತೆ ಸ್ನಾನಕ್ಕಾಗಿ ದೇವಗಂಗೆಗೆ ಜಾಗ್ರತೆ ತೆರಳಿದಳು.

೫೧. ಅಲ್ಲಿ ಸ್ನಾನಮಾಡಿ ನಿರ್ಗುಣನಾದ ತನ್ನ ಇಷ್ಟದೇವತೆಯನ್ನು ಭಕ್ತಿಯಿಂದ ಪೂಜೆಮಾಡಿ ಪ್ರಸ್ತುತವಾದ ಮಿಷ್ಟಾನ್ನವನ್ನೂ, ವ್ಯಂಜನವನ್ನೂ ಸಿದ್ಧಗೊಳಿಸಿದಳು.

ಶಿವಃ ಸ್ನಾತ್ವಾ ಚ ಸಂಪೂಜ್ಯ ಬ್ರಹ್ಮಜ್ಯೋತಿಃ ಸನಾತನಂ ।
ತುಷ್ಟಾವ ಪರಯಾ ಭಕ್ತ್ಯಾ ಮಾಮೇವ ಹೃದಯಸ್ಥಿತಂ ॥ ೩೨ ॥

ಗತ್ವಾ ಸರ್ವಮಹಂ ಭುಕ್ತ್ವಾ ತಸ್ಮೈ ದತ್ವಾಽಭಿವಾಂಛಿತಂ ।
ನೈವೇದ್ಯಂ ಪಾರ್ವತೀ ಲೇಭೇ ತವ ಮೂಲಂ ಸಮಾಗತಾ ॥ ೩೩ ॥

ಭುಕ್ತ್ವಾಽವಶೇಷಂ ಸಾ ದೇವೀ ಸಹ ಭರ್ತ್ರಾ ಮುದಾಽನ್ವಿತಾ ।
ತುಷ್ಟಾವ ಶಂಕರಂ ಭಕ್ತ್ಯಾ ಪ್ರಣನಾಮ ಮುಹುರ್ಮುಹುಃ ॥ ೩೪ ॥

ಇತ್ಯೇವಂ ಕಥಿತಂ ಸರ್ವಂ ತ್ವಯಾ ಪೃಷ್ಟಂ ಸುರೇಶ್ವರಿ ।
ಅಭಿಶಪ್ತಂ ಶಂಕರಸ್ಯ ನಿರ್ಮಾಲ್ಯಂ ಯೇನ ಹೇತುನಾ ॥ ೩೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರದನಾರಾಯಣಸಂವಾದೇ ಹರನಿರ್ಮಾಲ್ಯಶಾಪಪ್ರಸಂಗೋ ನಾಮ ಸಪ್ತತ್ರಿಂಶೋಽಧ್ಯಾಯಃ

---

೩೨. ಶಿವನೂ ಕೂಡ ಸ್ನಾನಮಾಡಿ ಹೃದಯಸನ್ನಿಹಿತನಾದ ಬ್ರಹ್ಮಜ್ಯೋತಿಃಸ್ವರೂಪನೂ, ಸನಾತನನೂ ಆದ ನನ್ನನ್ನು ಭಕ್ತಿಯಿಂದ ಪೂಜಿಸಿ ಸ್ತುತಿಸಿದನು.

೩೩. ಆಗ ನಾನು ಅಲ್ಲಿಗೆ ಹೋಗಿ ನೈವೇದ್ಯವನ್ನು ಭುಜಿಸಿ ಶಿವನ ಇಷ್ಟಾರ್ಥವನ್ನು ಅನುಗ್ರಹಿಸಿದೆನು. ಅನಂತರ ಪಾರ್ವತಿಯೂ ಕೂಡ ನನ್ನ ನೈವೇದ್ಯವನ್ನು ಪಡೆದು ನಿನ್ನ ಸಮೀಪಕ್ಕೆ ಬಂದಳು.

೩೪. ಆ ದೇವಿಯು ಸಂತುಷ್ಟಳಾಗಿ ಪತಿಯೊಡನೆ ಶ್ರೀಹರಿಗೆ ನಿವೇದಿಸಿ ಉಳಿದ ವಸ್ತುಗಳನ್ನು ಭುಜಿಸಿ ಶಂಕರನನ್ನು ಭಕ್ತಿಯಿಂದ ಸ್ತುತಿಸಿ ಮತ್ತೆಮತ್ತೆ ನಮಸ್ಕಾರಮಾಡಿದಳು.

೩೫. ಎಲೌ ಸುರೇಶ್ವರಿಯೇ, ಈ ರೀತಿಯಾಗಿ ಶಿವನ ನಿರ್ಮಾಲ್ಯವು ಯಾವ ಕಾರಣದಿಂದ ಅಪರಿಶುದ್ಧವಾಯಿತೆಂಬುದನ್ನು ನಿನಗೆ ವಿಸ್ತಾರವಾಗಿ ಹೇಳಿರುವೆನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ಹರನಿರ್ಮಾಲ್ಯಶಾಪಪ್ರಸಂಗವನ್ನು ತಿಳಿಸುವ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

ಮೂವತ್ತೇಳನೆಯ ಅಧ್ಯಾಯದ ಸಾರಾಂಶ.

ಪರಮೇಶ್ವರನ ಉಚ್ಛಿಷ್ಟವು ಎಲ್ಲರಿಂದಲೂ ತ್ಯಾಜ್ಯವಾಗಲು ಕಾರಣವೇನೆಂದು ಪ್ರಶ್ನಿಸಿದ ರಾಧಾದೇವಿಗೆ ಶ್ರೀಕೃಷ್ಣನು ಇಂತು ಉತ್ತರವಿತ್ತನು.

ಒಮ್ಮೆ ಸನತ್ಕುಮಾರನು ವೈಕುಂಠಕ್ಕೆ ಹೋಗಿ ಶ್ರೀಹರಿಯನ್ನು ಭಕ್ತಿಯಿಂದ ಭಜಿಸಿದನು. ಪ್ರಸನ್ನನಾದ ಶ್ರೀಹರಿಯು ತನ್ನ ಭುಕ್ತಶೇಷವನ್ನು (ಎಂಜಲನ್ನು) ಅವನಿಗೆ ಅನುಗ್ರಹಿಸಿದನು. ಸನತ್ಕುಮಾರನು ಅದರಲ್ಲಿ ಸ್ವಲ್ಪಭಾಗವನ್ನು ತಾನು ಭಕ್ತಿಯಿಂದ ತಿಂದು ಉಳಿದುದನ್ನು ತನ್ನ ಬಂಧುಗಳಿಗಾಗಿ ಇಟ್ಟುಕೊಂಡು ಬರುತ್ತಾ ದಾರಿಯಲ್ಲಿ ಸಿದ್ಧಾಶ್ರಮದಲ್ಲಿದ್ದ ಶಂಕರನನ್ನು ಕಂಡು ಅವನಿಗೆ ಆ ಪ್ರಸಾದವನ್ನು ಕೊಡಲು ಶಂಕರನು ಅದರಲ್ಲಿ ಸ್ವಲ್ಪವನ್ನೂ ಉಳಿಸದೆ ತಾನೇ ತಿಂದು ನರ್ತನ ಮಾಡಿದನು. ಈ ವಿಷಯವನ್ನು ತಿಳಿದ ಪಾರ್ವತಿಯು ತನಗೆ ಶ್ರೀಹರಿಯ ಪ್ರಸಾದವು ದೊರಕದಿದ್ದುದರಿಂದ ಕುಪಿತಳಾಗಿ, ಶಿವನ ಉಚ್ಛಿಷ್ಟವು ಎಲ್ಲರಿಂದಲೂ ತ್ಯಾಜ್ಯವಾಗುವಂತೆ ಶಪಿಸಿದಳು. ಅಲ್ಲದೆ ಶ್ರೀಹರಿಯ ಪ್ರಸಾದವು ತನಗೆ ಲಭಿಸದಿದ್ದುದರಿಂದ ದೇಹತ್ಯಾಗಮಾಡುವುದಾಗಿ ಹೇಳಿದಳು. ಆಗ ಶಿವನು ಆಕೆಯನ್ನು ಸ್ತುತಿಸಿ ಪ್ರಸನ್ನಗೊಳಿಸಲು, ಆಕೆಯು ದೇವಗಂಗೆಯಲ್ಲಿ ಮಿಂದು ವಿಧವಿಧ ಮಿಷ್ಟಾನ್ನ ಪಾಯಸಾದಿಗಳನ್ನು ಮಾಡಿ ಶಂಕರನೊಡನೆ ಶ್ರೀಹರಿಯನ್ನು ಪೂಜಿಸಿ ಭಕ್ತಿಯಿಂದ ಅವೆಲ್ಲವನ್ನೂ ನಿವೇದನಮಾಡಿ ಪ್ರಸಾದವನ್ನು ತಿಂದು ತೃಪ್ತಳಾದಳು. ಅಲ್ಲದೆ ವಿಷ್ಣುವಿನ ಪ್ರಸಾದದೊಡನೆ ಮಿಶ್ರಿತವಾದ ಶಿವನ ಉಚ್ಛಿಷ್ಟವು ಎಲ್ಲರಿಂದಲೂ ಗ್ರಾಹ್ಯವಾಗುವಂತೆಯೂ ಹೇಳಿದಳು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಅಷ್ಟಾತ್ರಿಂಶೋಽಧ್ಯಾಯಃ ॥

॥ ಶ್ರೀಕೃಷ್ಣ ಉವಾಚ ॥

ದರ್ಪಭಂಗಃ ಶ್ರುತೋ ದೇವಿ ಶಂಕರಸ್ಯ ಜಗದ್ಗುರೋಃ ।
ಅಧುನಾ ಶ್ರೂಯತಾಂ ಮತ್ತೋ ದುರ್ಗಾದರ್ಪವಿಮೋಚನಂ ॥ ೧ ॥

ತೇಜಸಾ ಸರ್ವದೇವಾನಾಮಾವಿರ್ಭೂಯ ಜಗತ್ಪ್ರಸೂಃ ।
ದಧಾರ ಕಾಮಿನೀರೂಪಂ ಕಮನೀಯಂ ಮನೋಹರಂ ॥ ೨ ॥

ನಿಹತ್ಯ ದಾನವೇಂದ್ರಾಂಶ್ಚ ರರಕ್ಷ ದೇವತಾಕುಲಂ ।
ಲೇಭೇ ಜನ್ಮ ತತೋ ದೇವೀ ಜಠರೇ ದಕ್ಷಯೋಷಿತಃ ॥ ೩ ॥

ಮೂವತ್ತೆಂಟನೆಯ ಅಧ್ಯಾಯ.

೧. ಶ್ರೀಕೃಷ್ಣ :—ಎಲೌ ರಾಧಾದೇವಿಯೇ, ಜಗದ್ಗುರುವಾದ ಶಂಕರನ ದರ್ಪಭಂಗವನ್ನು ನೀನು ನನ್ನಿಂದ ಕೇಳಿ ತಿಳಿದೆ. ಈಗ ದುರ್ಗಾದೇವಿಯ ದರ್ಪಭಂಗದ ವಿಚಾರವನ್ನು ಹೇಳುವೆನು ಕೇಳು.

೨. ಜಗನ್ಮಾತೆಯಾದ ದುರ್ಗೆಯು ಸಕಲ ದೇವತೆಗಳ ತೇಜಸ್ಸಿನಿಂದ ಆವಿರ್ಭವಿಸಿ ಅತ್ಯಂತ ಸುಂದರವೂ, ಮನೋಹರವೂ ಆದ ಕಾಮಿನೀರೂಪವನ್ನು ಧರಿಸಿದಳು.

೩. ಆಗ ದುಷ್ಟರಾಕ್ಷಸರನ್ನೆಲ್ಲ ಧ್ವಂಸಮಾಡಿ ದೇವತೆಗಳನ್ನೆಲ್ಲ ರಕ್ಷಿಸಿದಳು. ಅನಂತರ ಆ ದೇವಿಯು ದಕ್ಷಬ್ರಹ್ಮನ ಪತ್ನಿಯ ಗರ್ಭದಲ್ಲಿ ಜನ್ಮವೆತ್ತಿ ದಾಕ್ಷಾಯಿಣಿಯೆನಿಸಿದಳು.

ಪಿನಾಕಪಾಣಿಂ ಜಗ್ರಾಹ ಸಾ ದೇವೀ ಸುರಸಾಧನಂ ।
ಶಶ್ವತ್ಪರಮಭಕ್ತ್ಯಾ ಚ ಸಿಷೇವೇ ಸ್ವಾಮಿನಂ ಸತೀ ॥ ೪ ॥

ದಕ್ಷೇಣ ಸಾರ್ಧಂ ದೇವೇನ ಬಭೂವ ಶಿವಶತ್ರುತಾ ।
ನಿರರ್ಥಕಂ ದೈವಯೋಗಾತ್ಪುರಾ ವೈ ಸುರಸಂಸದಿ ॥ ೫ ॥

ದಕ್ಷಶ್ಚಕಾರ ಯಜ್ಞಂ ಚ ತತ ಆಗತ್ಯ ಕೋಪತಃ ।
ಸರ್ವಾನ್ನಿಜ್ಞಾಪಯಾಮಾಸ ತತ್ರೈವ ಶಂಕರಂ ವಿನಾ ॥ ೬ ॥

ಸಸ್ತ್ರೀಕಾ ದೇವತಾ ಸರ್ವಾ ಆಜಗ್ಮುರ್ದಕ್ಷಮಂದಿರಂ ।
ಸಗಣಃ ಶಂಕರಃ ಕೋಪಾನ್ನಾಽಽಜಗಾಮಾಭಿಮಾನತಃ ॥ ೭ ॥

ಸತೀ ಪತಿಂ ಚ ಮೋಹೇನ ಬೋಧಯಾಮಾಸ ಯತ್ನತಃ ।
ನ ತಂ ಚಾಲಯಿತುಂ ಶಕ್ತಾ ಬಭೂವ ಚಂಚಲಾ ಸ್ವಯಂ ॥ ೮ ॥

---

೪. ಸತೀದೇವಿಯೆಂಬ ಹೆಸರಿನಿಂದ ಪ್ರಖ್ಯಾತಳಾದ ಆ ದಾಕ್ಷಾಯಣಿಯು ದೇವತೆಗಳಲ್ಲೆಲ್ಲ ಉತ್ತಮನಾದ ಪಿನಾಕಧರನನ್ನು ಪತಿಯನ್ನಾಗಿ ವರಿಸಿ ಪರಮ ಭಕ್ತಿಯಿಂದ ತನ್ನ ಸ್ವಾಮಿಯನ್ನು ಸೇವಿಸುತ್ತಿದ್ದಳು.

೫. ಹೀಗಿರುವಾಗ ಒಮ್ಮೆ ಅಕಾರಣವಾಗಿ ದಕ್ಷಬ್ರಹ್ಮನು ದೇವತೆಗಳ ಸಭೆಯಲ್ಲಿ ಶಿವನ ಮೇಲೆ ತನ್ನ ದ್ವೇಷವನ್ನು ಪ್ರಕಟಿಸಿದನು. ಅಂದಿನಿಂದ ದಕ್ಷಬ್ರಹ್ಮನ ದ್ವೇಷವು ಹೆಚ್ಚುತ್ತಲೇ ಬಂದಿತು.

೬. ದಕ್ಷಬ್ರಹ್ಮನು ಯಾಗವೊಂದನ್ನು ಮಾಡಿ ದೇವತೆಗಳಿಗೆಲ್ಲ ಆಹ್ವಾನವನ್ನು ಕೊಟ್ಟನು. ಆದರೆ ಶಂಕರನ ಮೇಲಿನ ಕೋಪದಿಂದ ಅವನನ್ನು ಯಾಗಕ್ಕೆ ಆಹ್ವಾನಿಸಲಿಲ್ಲ.

೭ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ತ್ರೀಪರಿವಾರದೊಡನೆ ದಕ್ಷಬ್ರಹ್ಮನ ಮಂದಿರಕ್ಕೆ ಬಂದರು. ಅಭಿಮಾನಿಯಾದ ಶಂಕರನಾದರೋ ತನಗೆ ಆಹ್ವಾನವಿಲ್ಲ ವೆಂಬ ಕೋಪದಿಂದ ತನ್ನ ಪ್ರಮಥಗಣದೊಡನೆ ಬರದೆ ನಿಂತನು.

೮. ಸತೀದೇವಿಯಾದರೋ ತಂದೆಯು ಮಾಡುವ ಯಜ್ಞಕ್ಕೆ (ಪತಿಯನ್ನೂ ಕರೆದುಕೊಂಡು) ಹೋಗಬೇಕೆಂಬ ಅಭಿಲಾಷೆಯಿಂದ ಪತಿಗೆ ಬಹಳವಾಗಿ ಬೋಧಿಸಿ ದಳು. ಆದರೆ ಸ್ವಯಂ ಚಂಚಲೆಯಾದ ಆಕೆಯು ಶಿವನ ದೃಢಮನಸ್ಸನ್ನು ಚಲಿಸ ಲಶಕ್ತಳಾದಳು.

ಆಜಗಾಮ ಪಿತುರ್ಗೇಹಂ ದರ್ಪಾತ್ತಸ್ಯ ವಿನಾಽಽಜ್ಞಯಾ ।
ತಸ್ಯ ಶಾಪೇನ ತಸ್ಯಾಶ್ಚ ದರ್ಪಭಂಗೋ ಬಭೂವ ಹ ॥ ೯ ॥

ನ ಹಿ ಸಂಭಾಷಣಂ ಚಕ್ರೇ ವಾಙ್ಮಾತ್ರೇಣ ಪಿತಾ ಚ ತಾಂ ।
ಶ್ರುತ್ವಾ ಚ ನಿಂದಾಂ ಭರ್ತುಶ್ಚ ದೇಹಂ ತತ್ಯಾಜ ಮಾನತಃ ॥ ೧೦ ॥

ಏವಂ ಪ್ರಿಯೇ ನಿಗದಿತಂ ಸತೀದರ್ಪವಿಮೋಚನಂ ।
ತಸ್ಯಾ ಜನ್ಮಾಂತರಂ ನಿತ್ಯಂ ದರ್ಪಭಂಗಶ್ಚ ಶ್ರೂಯತಾಂ ॥ ೧೧ ॥

ಲೇಭೇ ಜನ್ಮ ಸತೀ ಶೀಘ್ರಂ ಜಠರೇ ಶೈಲಯೋಷಿತಃ ।
ಶಿವಸ್ತಸ್ಯಾಶ್ಚಿತಾಭಸ್ಮ ಚಾಸ್ಥಿ ಜಗ್ರಾಹ ಭಕ್ತಿತಃ ॥ ೧೨ ॥

ಚಕಾರ ಮಾಲಾಮಸ್ಥ್ನಾಂ ಚ ಭಸ್ಮನಾ ತನುಲೇಪನಂ ।
ಸ್ಮಾರಂ ಸ್ಮಾರಂ ಸತೀಂ ಪ್ರೇಮ್ಣಾ ಭ್ರಾಮಂ ಭ್ರಾಮಂ ಪುನಃಪುನಃ ॥ ೧೩ ॥

---

೯. ದರ್ಪದಿಂದ ಕೂಡಿದ ಆ ಸತೀದೇವಿಯು ಪತಿಯ ಅನುಜ್ಞೆ ದೊರೆಯದಿದ್ದರೂ ತಂದೆಯ ಯಾಗಕ್ಕೆ ಹೊರಟುಹೋದಳು. ಅದರ ಪರಿಣಾಮವಾಗಿ ಶಿವನಿಂದ ಶಪ್ತಳಾಗಿ ದರ್ಪಭಂಗವನ್ನು ಹೊಂದಿದಳು.

೧೦. ತಂದೆಯು ಯಾಗಕ್ಕೆಂದು ಬಂದ ಮಗಳನ್ನು ಮಾತಿನಿಂದಲೂ ಗೌರವಿಸಲಿಲ್ಲ. ಅಲ್ಲದೆ ಆಕೆಯ ಪತಿಯನ್ನು ನಿಂದಿಸಿದನು. ಆ ಮಾನಿನಿಯು ಪತಿಯ ನಿಂದೆಯನ್ನು ಕೇಳಿ ದೇಹತ್ಯಾಗ ಮಾಡಿದಳು.

೧೧. ಎಲೌ ಪ್ರಿಯಳೇ, ಈ ರೀತಿಯಾಗಿ ಸತೀದೇವಿಯ ದರ್ಪವಿಮೋಚನೆ ಯಾದುದನ್ನು ತಿಳಿಸಿಯಾಯಿತು. ಈಗ ಆಕೆಯ ಜನ್ಮಾಂತರವನ್ನು ಆಗ ಉಂಟಾದ ದರ್ಪಭಂಗವನ್ನೂ ವಿವರಿಸುವೆನು ಕೇಳು.

೧೨. ಹೀಗೆ ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ದೇಹತ್ಯಾಗಮಾಡಿದ ಸತಿಯು ಮುಂದೆ ಹಿಮವಂತನ ಪತ್ನಿಯಾದ ಮೇನೆಯ ಗರ್ಭದಲ್ಲಿ ಜನ್ಮವೆತ್ತಿದಳು. ಇತ್ತ ಶಿವನು ಆ ಸತಿಯ ಚಿತಾಭಸ್ಮವನ್ನೂ, ಮೂಳೆಯನ್ನೂ ಪ್ರೇಮದಿಂದ ಸ್ವೀಕರಿಸಿದನು.

೧೩. ಆ ಮೂಳೆಗಳನ್ನು ಮಾಲೆಯಾಗಿ ಧರಿಸಿ ಭಸ್ಮವನ್ನು ಶರೀರಕ್ಕೆಲ್ಲ ಲೇಪಿಸಿಕೊಂಡನು. ಸತೀದೇವಿಯನ್ನು ಪ್ರೇಮದಿಂದ ಸ್ಮರಿಸಿಕೊಳ್ಳುತ್ತ ಎಲ್ಲೆಲ್ಲೂ ಅಲೆಯುತ್ತಿದ್ದನು.

ಸುಷಾವ ಮೇನಾ ತಾಂ ದೇವೀಮತೀವ ಸುಮನೋಹರಾಂ ।
ಸೃಷ್ಟೌ ವಿಧಾತುಸ್ತಸ್ಯಾಶ್ಚ ಹ್ಯುಪಮಾ ನಾಸ್ತಿ ಕುತ್ರ ಚ ॥ ೧೪ ॥

ಗುಣಪ್ರಸೂರ್ಗುಣಾನ್ಸರ್ವಾನ್ಸರ್ವರೂಪಾನ್ಬಿಭರ್ತಿ ಸಾ ।
ಸರ್ವಾಶ್ಚ ದೇವಪತ್ನ್ಯಸ್ತತ್ಕಲಾಂ ನಾರ್ಹಂತಿ ಷೋಡಶೀಂ ॥ ೧೫ ॥

ಬಭೂವ ವರ್ಧಮಾನಾ ಸಾ ಶುಕ್ಲೇ ಚಂದ್ರಕಲಾ ಯಥಾ ।
ಅತೀವ ಯೌವನಸ್ಥಾ ಚ ಶೈಲಗೇಹೇ ದಿನೇ ದಿನೇ ॥ ೧೬ ॥

ಬಭೂವಾಽಽಕಾಶವಾಣೀ ಚ ತಾಂ ಸಂಬೋಧ್ಯ ಜಗತ್ಪ್ರಸೂಂ ।
ಶಿವೇ ಶಿವಂ ಚ ತಪಸಾ ಕಠೋರೇಣ ಲಭೇತಿ ಚ ॥ ೧೭ ॥

ವಿನೇಶ್ವರಂ ನ ತಪಸಾ ಪ್ರಾಪ್ನೋಷ್ಯಗರ್ಭಸಂಭವಂ ।
ಪ್ರಹಸ್ಯ ತಸ್ಥೌ ಶ್ರುತ್ವೇತಿ ಸಾ ಚ ಯೌವನಗರ್ವಿತಾ ॥ ೧೮ ॥

---

೧೪. ಇತ್ತ ಮೇನೆಯು ಮನೋಹರವಾದ ಸ್ತ್ರೀ ಶಿಶುವನ್ನು ಪ್ರಸುವಿಸಿದಳು. ಬ್ರಹ್ಮನ ಸೃಷ್ಟಿಯಲ್ಲಿ ಆ ಕನ್ನಿಕೆಗೆ ಸದೃಶವಾದುದು ಮತ್ತಾವುದೂ ಇರಲಿಲ್ಲ.

೧೫. ಗುಣಗಳ ಗಣಿಯಂತಿದ್ದ ಆ ಕನ್ನಿಕೆಯು ಸಕಲ ಗುಣಗಳನ್ನೂ, ರೂಪಗಳನ್ನೂ ಪಡೆದಿದ್ದಳು. ಸಮಸ್ತರಾದ ದೇವತಾಸ್ತ್ರೀಯರೂ ಸಹ ಆ ಕನ್ನಿಕೆಯ ಹದಿನಾರನೆಯ ಒಂದಂಶವನ್ನೂ ಹೋಲುತ್ತಿರಲಿಲ್ಲ.

೧೬. ಆ ಬಾಲೆಯು ಶುಕ್ಲಪಕ್ಷದ ಚಂದ್ರನಂತೆ ದಿನದಿನಕ್ಕೂ ಅಭಿವೃದ್ಧಿಗೊಂಡಳು. ಹೀಗೆ ಹಿಮವಂತನ ಗೃಹದಲ್ಲಿ ಬೆಳೆದ ಆ ಬಾಲೆಯು ಯೌವನವತಿಯಾದಳು.

೧೭. '<u>ಪಾರ್ವತಿ</u>' ಎಂದು ಪ್ರಖ್ಯಾತಿಹೊಂದಿದ ಆ ಕನ್ನಿಕೆಯನ್ನು ಕುರಿತು 'ಎಲೌ ಶಿವೆಯೇ, ನೀನು ಶಿವನನ್ನು ಕುರಿತು ಘೋರವಾದ ತಪಸನ್ನಾಚರಿಸು' ಎಂದು ಆಕಾಶವಾಣಿಯಾಯಿತು.

೧೮. 'ಸ್ವಯಂಭುವನಾದ ಈಶ್ವರನನ್ನು ತಪಸ್ಸಿನಿಂದಲ್ಲದೆ ಬೇರಾವ ಮಾರ್ಗದಿಂದಲೂ ನೀನು ಪಡೆಯಲಾರೆ" ಎಂಬ ಅಶರೀರವಾಣಿಯನ್ನು ಕೇಳಿ ಯೌವನಗರ್ವಿತಳಾದ ಪಾರ್ವತಿಯು ನಗುತ್ತ ನಿಂತಳು.

ಮಮ ಜನ್ಮಾಂತರೀಯಂ ಚ ಭಸ್ಮಾಸ್ಥಿ ಚ ಬಿಭರ್ತಿ ಯಃ ।
ಸ ಮಾಂ ಪ್ರೌಢಾಂ ಕಥಂ ದೃಷ್ಟ್ವಾ ನ ಗೃಹ್ಣಾತ್ಯತ್ರ ಜನ್ಮನಿ ॥ ೧೯ ॥

ಯೋ ವಿದಗ್ಧಶ್ಚ ಬ್ರಹ್ಮಾಂಡಂ ಬಭ್ರಾಮ ಮಮ ಶೋಕತಃ ।
ಸ ಕಥಂ ಮಾಂ ನ ಗೃಹ್ಣಾತಿ ದೃಷ್ಟ್ವಾ ಪರಮಸುಂದರೀಂ ॥ ೨೦ ॥

ದಕ್ಷಯಜ್ಞಂ ಯೋ ಬಭಂಜ ಮಮ ಹೇತೋಃ ಕೃಪಾನಿಧಿಃ ।
ಸ ಕಥಂ ಮಾಂ ನ ಗೃಹ್ಣಾತಿ ಪತ್ನೀಂ ಜನ್ಮನಿ ಜನ್ಮನಿ ॥ ೨೧ ॥

ಯಾ ಯಸ್ಯ ಪತ್ನೀ ಯೋ ಯಸ್ಯಾ ಭರ್ತಾ ಸ್ಯಾತ್ಕರ್ಮತಃ ಪುರಾ ।
ಕುತೋ ವಿಶ್ವೇ ತಯೋರ್ಭೇದೋ ನಿಷೇಕೋ ನಾನ್ಯಥಾ ಭವೇತ್ ॥ ೨೨ ॥

ಸರ್ವರೂಪಗುಣಾಧಾರಂ ಮತ್ವಾ ಸ್ವಮತಿಮಾನತಃ ।
ನ ಚಕಾರ ತಪಃ ಸಾಧ್ವೀ ಸ ವಿಜ್ಞಾಯ ತಮೀಶ್ವರಂ ॥ ೨೩ ॥

---

೧೯. ಯಾವ ಶಿವನು ನನ್ನ ಜನ್ಮಾಂತರದ ಭಸ್ಮವನ್ನು ಮತ್ತು ಮೂಳೆಯನ್ನೂ ಧರಿಸಿರುವನೋ ಅಂಥವನು ಈ ಜನ್ಮದಲ್ಲಿ ಪ್ರೌಢಳಾಗಿರುವ ನನ್ನನ್ನು ವರಿಸದೆ ಹೇಗಿದ್ದಾನು ?

೨೦. ಕಾಮಕಲಾಚತುರನಾದ ಯಾವ ಶಿವನು ನನ್ನ ವಿರಹದುಃಖದಿಂದ ಬ್ರಹ್ಮಾಂಡದಲ್ಲೆಲ್ಲಾ ಸುತ್ತಾಡಿದನೋ ಅಂಥವನು ಪರಮಸುಂದರಿಯಾದ ನನ್ನನ್ನು ಸ್ವೀಕರಿಸದೆ ಏನುಮಾಡಿಯಾನು ?

೨೧. ಯಾವ ದಯಾಮಯನು ನನ್ನ ಸಲುವಾಗಿ ದಕ್ಷಯಜ್ಞವನ್ನು ಭಂಗಪಡಿಸಿದನೋ ಆ ಪರಶಿವನು ಜನ್ಮಜನ್ಮದಲ್ಲಿಯೂ ನನ್ನನ್ನು ಪತ್ನಿಯನ್ನಾಗಿ ಸ್ವೀಕರಿಸದೆ ಹೇಗಿದ್ದಾನು ?

೨೨. ಜನ್ಮಾಂತರ ಕರ್ಮಾನುಗುಣವಾಗಿ ಯಾರು ಯಾವನ ಪತ್ನಿಯಾಗಬೇಕೋ ಮತ್ತು ಯಾವನು ಯಾರ ಪತಿಯಾಗಬೇಕೋ ಆ ನಿಯಮವು ಪ್ರಪಂಚದಲ್ಲಿ ಬದಲಾಗುವಂತಿಲ್ಲ. ನಿಷೇಕವು ಎಂದೆಂದಿಗೂ ವ್ಯತ್ಯಾಸ ಹೊಂದುವಂತಿಲ್ಲ.

೨೩. ಈ ರೀತಿಯಾಗಿ ಪಾರ್ವತಿಯು ಅತ್ಯಭಿಮಾನದಿಂದ ತಾನೇ ಸರ್ವರೂಪಗಳಿಗೂ, ಗುಣಗಳಿಗೂ ಮೂಲಾಧಾರಳೆಂದು ಬಗೆದು ಈಶ್ವರನ ಮಹಿಮೆಯನ್ನರಿಯದೆ ತಪಸ್ಸನ್ನಾಚರಿಸಲಿಲ್ಲ.

ಸುಂದರೀಷು ಚ ಸರ್ವಾಸು ಮತ್ತೋ ನಾಸ್ತ್ಯೇವ ಸುಂದರೀ ।
ಹೃದೀತಿ ಮತ್ವಾ ಗರ್ವೇಣ ನ ಚಕಾರ ತಪಃ ಶಿವಾ ॥ ೨೪ ॥

ರೂಪಯೌವನವೇಷಾಣಾಂ ಪುಮಾನ್ಗ್ರಾಹೀ ಸ್ವಯೋಷಿತಾಂ ।
ಶಿವೋ ಮಚ್ಛ್ರುತಿಮಾತ್ರೇಣ ಮಾಂ ಗೃಹ್ಣಾತಿ ವಿನಾ ತಪಃ ॥ ೨೫ ॥

ಹೃದೀತಿ ಮತ್ವಾ ಗಿರಿಜಾ ತಸ್ಥೌ ಹಿಮಗಿರೇರ್ಗೃಹೇ ।
ಶಶ್ವತ್ಸಹಚರೀಮಧ್ಯೇ ಕ್ರೀಡೋನ್ಮತ್ತಾ ದಿವಾನಿಶಂ ॥ ೨೬ ॥

ಏತಸ್ಮಿನ್ನಂತರೇ ತೂರ್ಣಂ ದೂತಃ ಶೈಲೇಂದ್ರಸಂಸದಿ ।
ಉವಾಚಾಽಽಗತ್ಯ ಮಧುರಂ ತತ್ಪುರಃ ಸಂಪುಟಾಂಜಲಿಃ ॥ ೨೭ ॥

---

೨೪. "ಸುಂದರಸ್ತ್ರೀಯರಲ್ಲೆಲ್ಲ ನಾನೇ ಅತ್ಯಂತ ಸುಂದರಿಯು. ನನಗಿಂತ ಮೇಲಾದವರು ಮತ್ತಾರೂ ಇಲ್ಲ" ಎಂಬ ಗರ್ವದಿಂದ ಪಾರ್ವತಿಯು ಈಶ್ವರನಿಗಾಗಿ ತಪಸ್ಸನ್ನಾಚರಿಸದೆ ಮನೆಯಲ್ಲಿಯೇ ಇದ್ದಳು.

೨೫. ಗಂಡಸು ಸಾಮಾನ್ಯವಾಗಿ ಹೆಂಗಸಿನ ರೂಪು, ಯೌವನ ಮತ್ತು ವೇಷಭೂಷಗಳಿಗೆ ಮರುಳಾಗುತ್ತಾನೆ. ಅಂತೆಯೇ ಶಿವನೂ ಸಹ ನನ್ನ ರೂಪ ಯೌವನಗಳನ್ನು ಕೇಳಿದ ಮಾತ್ರದಿಂದಲೇ ನಾನು ತಪಸ್ಸು ಮಾಡದಿದ್ದರೂ ನನ್ನನ್ನು ಸ್ವೀಕರಿಸುತ್ತಾನೆ.

೨೬. ಗಿರಿಜೆಯು ಈ ರೀತಿಯಾಗಿ ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಹಗಲೂ ರಾತ್ರಿ ಗೆಳತಿಯರೊಡನೆ ಆಟದಲ್ಲಿ ಮಗ್ನಳಾಗಿ ಹಿಮವಂತನ ಗೃಹದಲ್ಲಿ ನೆಮ್ಮದಿಯಿಂದಿದ್ದಳು.

೨೭. ಈ ಸಮಯಕ್ಕೆ ಸರಿಯಾಗಿ ದೂತನೊಬ್ಬನು ಶೈಲರಾಜನಾದ ಹಿಮವಂತನ ಸಭೆಗೆ ಬಂದು ಅವನ ಮುಂದೆ ಕೈ ಮುಗಿದುಕೊಂಡು ನಿಂತು ಈ ರೀತಿ ಹೇಳಲಾರಂಭಿಸಿದನು.

॥ ದೂತ ಉವಾಚ ॥

ಉತ್ತಿಷ್ಠೋತ್ತಿಷ್ಠ ಶೈಲೇಂದ್ರ ಗಚ್ಛಾಕ್ಷಯವಟಾಂತಿಕಂ ।
ಆಜಗಾಮ ಮಹಾದೇವಃ ಸಗಣೋ ವೃಷವಾಹನಃ ॥ ೨೮ ॥

ಮಧುಪರ್ಕಾದಿಕಂ ದತ್ತ್ವಾ ಭಕ್ತಿನಮ್ರಾತ್ಮಕಂಧರಃ ।
ಪೂಜನಂ ಕುರು ಶೈಲೇಂದ್ರ ದೇವೇಂದ್ರಂ ತಮತೀಂದ್ರಿಯಂ ॥ ೨೯ ॥

ಸಿದ್ಧಿಸ್ವರೂಪಂ ಸಿದ್ಧೇಶಂ ಯೋಗೀಂದ್ರಾಣಾಂ ಗುರೋರ್ಗುರುಂ ।
ಮೃತ್ಯುಂಜಯಂ ಕಾಲಕಾಲಂ ಬ್ರಹ್ಮಜ್ಯೋತಿಃ ಸನಾತನಂ ॥ ೩೦ ॥

ಪರಮಾತ್ಮಸ್ವರೂಪಂ ಚ ಸಗುಣಂ ನಿರ್ಗುಣಂ ವಿಭುಂ ।
ಭಕ್ತಧ್ಯಾನಾರ್ಥಮಮಲಂ ದಧಾನಂ ದೇಹಮೀಶ್ವರಂ ॥ ೩೧ ॥

ಶೈಲೋ ದೂತವಚಃ ಶ್ರುತ್ವಾ ಸಮುತ್ತಸ್ಥೌ ಮುದಾನ್ವಿತಃ ।
ಮಧುಪರ್ಕಾದಿಕಂ ನೀತ್ವಾ ಜಗಾಮ ಶಂಕರಾಂತಿಕಂ ॥ ೩೨ ॥

---

೨೮. ದೂತ :—ಎಲೈ ಶೈಲರಾಜನೇ, ಏಳು ಏಳು ವೃಷಭವಾಹನನಾದ ಮಹಾದೇವನು ಅಕ್ಷಯವಟದ ಸಮೀಪಕ್ಕೆ ತನ್ನ ಪ್ರಮಥಗಣದೊಡನೆ ಬಂದಿದ್ದಾನೆ. ನೀನು ಅಲ್ಲಿಗೆ ಹೋಗು.

೨೯. ಅತೀಂದ್ರಿಯನಾದ ಆ ದೇವದೇವನಿಗೆ ಮಧುಪರ್ಕಾದಿಗಳನ್ನು ಸಮರ್ಪಿಸಿ, ಭಕ್ತಿಯಿಂದ ತಲೆಬಾಗಿ ಅವನಿಗೆ ಷೋಡಶೋಪಚಾರ ಪೂಜೆಯನ್ನು ಮಾಡು.

೩೦. ಸಿದ್ಧಿಸ್ವರೂಪನೂ, ಸಿದ್ಧೇಶನೂ, ಯೋಗಿಗಳ ಗುರುಗಳಿಗೂ ಗುರುವೂ, ಮೃತ್ಯುಂಜಯನೂ, ಕಾಲಕಾಲನೂ, ಬ್ರಹ್ಮಜ್ಯೋತಿಸ್ಸ್ವರೂಪನೂ ಅನಾದಿಯೂ ಆದ ಆ ಶಂಕರನನ್ನು ಪೂಜಿಸು.

೩೧. ಪರಮಾತ್ಮಸ್ವರೂಪನೂ, ನಿರ್ಗುಣನೂ, ವಿಶ್ವವ್ಯಾಪಿಯೂ ಆದ ಆ ಶಂಕರನು ಭಕ್ತರ ಧ್ಯಾನಕ್ಕೆ ಅವಲಂಬನಾರ್ಥವಾಗಿ ಸಗುಣಾತ್ಮಕವಾದ ಶರೀರವನ್ನು ಧರಿಸಿರುವನು.

೩೨. ಹಿಮವಂತನು ದೂತನ ಮಾತನ್ನು ಕೇಳಿ ಸಂತುಷ್ಟನಾಗಿ ಮೇಲಕ್ಕೆ ಎದ್ದನು. ಕೂಡಲೇ ಮಧುಪರ್ಕಾದಿ ಪೂಜಾದ್ರವ್ಯಗಳನ್ನು ತೆಗೆದುಕೊಂಡು ಶಂಕರನ ಸಮೀಪಕ್ಕೆ ಹೋದನು.

ದೇವೀ ದೂತವಚಃ ಶ್ರುತ್ವಾ ಪ್ರಸನ್ನವದನೇಕ್ಷಣಾ ।
ಹೃದೀತಿ ಮೇನೇ ಮದ್ಧೇತೋರಾಜಗಾಮ ಮಹೇಶ್ವರಃ ॥ ೩೩ ॥

ಚಕಾರ ವೇಷಮತುಲಂ ದಧಾರ ವಸ್ತ್ರಮುತ್ತಮಂ ।
ರತ್ನೇಂದ್ರಸಾರಾಲಂಕಾರಾನ್ರತ್ನಮಾಲಾಂ ಮನೋಹರಾಂ ॥ ೩೪ ॥

ಪಾರಿಜಾತಪ್ರಸೂನಾನಾಂ ಮಾಲಾಂ ಚಂದನಸಂಯುತಾಂ ।
ಚಕಾರ ಶಂಕರಾರ್ಥಂ ಚ ಮತ್ವಾ ಮಾಲಾಂ ಮನೋಹರಾಂ ॥ ೩೫ ॥

ರತ್ನಸಿಂಹಾಸನಸ್ಥಾ ಸಾ ದದರ್ಶ ದರ್ಪಣೇ ಮುಖಂ ।
ಕಸ್ತೂರೀಬಿಂದುನಾ ಸಾರ್ಧಂ ಸಿಂದೂರಬಿಂದುಭೂಷಿತಂ ॥ ೩೬ ॥

ಆರಕ್ತನೇತ್ರಯುಗಲಂ ನಿರ್ಮಲಾಂಜನಸಂಯುತಂ ।
ಶರನ್ಮಧ್ಯಾಹ್ನಕಮಲಂ ಯಥಾಲಿಪಂಕ್ತಿವೇಷ್ಟಿತಂ ॥ ೩೭ ॥

---

೩೩. ಪಾರ್ವತೀದೇವಿಯು ದೂತನ ಮಾತನ್ನು ಕೇಳಿ ಪ್ರಸನ್ನವಾದ ಮುಖ ಮತ್ತು ಕಣ್ಣುಳ್ಳವಳಾಗಿ, ತನ್ನ ಸಲುವಾಗಿಯೇ ಮಹೇಶ್ವರನು ಬಂದಿರುವನೆಂದು ಮನಸ್ಸಿನಲ್ಲಿ ತಿಳಿದುಕೊಂಡಳು.

೩೪. ಕೂಡಲೇ ಅಸದೃಶವೇಷಧಾರಿಣಿಯಾಗಿ, ಉತ್ತಮವಾದ ವಸ್ತ್ರವನ್ನುಟ್ಟು, ಶ್ರೇಷ್ಠವಾದ ರತ್ನಾಲಂಕಾರಗಳನ್ನೂ, ರತ್ನಮಾಲೆಯನ್ನೂ ಅಲಂಕರಿಸಿಕೊಂಡಳು.

೩೫. ಪಾರಿಜಾತಪುಷ್ಪಗಳ ಮಾಲೆಯನ್ನು ಮುಡಿದು, ದಿವ್ಯಚಂದನವನ್ನು ಲೇಪಿಸಿಕೊಂಡು, ಶಂಕರನಿಗೂ ಸಹ ಮನೋಹರವಾದ ಮಾಲೆಯೊಂದನ್ನು ಪೋಣಿಸಿದಳು.

೩೬. ರತ್ನಸಿಂಹಾಸನದಲ್ಲಿ ಕುಳಿತು ಕಸ್ತೂರೀ ತಿಲಕದಿಂದಲೂ ಸಿಂಧೂರ ಬಿಂದುಗಳಿಂದಲೂ ಶೋಭಿತವಾದ ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಂಡಳು.

೩೭. ಕಪ್ಪಾದ ಕಾಡಿಗೆಯಿಂದ ಅನುಲಿಪ್ತವಾದ ಆ ಪಾರ್ವತಿಯ ಸ್ವಲ್ಪ ಕೆಂಪಾದ ಕಣ್ಣುಗಳು, ದುಂಬಿಗಳ ಸಾಲಿನಿಂದ ಕೂಡಿಕೊಂಡಿರುವ ಶರದೃತುವಿನ ಮಧ್ಯಾಹ್ನದ ಕಮಲಗಳನ್ನು ಹೋಲುತ್ತಿದ್ದವು.

ಸುಕೋಮಲೌಷ್ಠಯುಗಲಂ ತಾಂಬೂಲರಾಗಸಂಯುತಂ |
ಅತೀವ ಸುಂದರಂ ರಮ್ಯಂಪಕ್ವಬಿಂಬಫಲಂ ಯಥಾ || ೩೮ ||

ರತ್ನಕುಂಡಲದೀಪ್ತ್ಯಾ ಚ ಗಂಡಸ್ಥಲವಿರಾಜಿತಂ |
ಸೂರ್ಯೋದಯೇನ ಜ್ವಲಿತಂ ಸುಮೇರುಶಿಖರಂ ಯಥಾ || ೩೯ ||

ಅತ್ಯನಿರ್ವಚನೀಯಂ ಚ ದಂತಪಂಕ್ತಿಮನೋಹರಂ |
ಯಥಾ ಮುಕ್ತಾಸಮೂಹಂ ಚ ಸಜಲಂ ಜಲದಾಗಮೇ || ೪೦ ||

ಗಜಮುಕ್ತಾಸಮಾಯುಕ್ತಂ ಸುಚಾರುನಾಸಿಕೋತ್ತಮಂ |
ಸುಶೋಭಿತಂ ಯಥಾ ಮೇರುಂ ಸ್ವರ್ಣದೀಜಲಧಾರಯಾ || ೪೧ ||

ಮಾಲತೀಮಾಲ್ಯಸಂಯುಕ್ತ ಕಬರೀಭಾರಸಂಯುತಂ |
ಬಕಪಂಕ್ತಿಸುಶೋಭಾಢ್ಯಂ ನವೀನಂ ಜಲದಂ ಯಥಾ || ೪೨ ||

---

೩೮. ತಾಂಬೂಲರಾಗದಿಂದ ಶೋಭಿತವಾದ ಆಕೆಯ ಎರಡು ತುಟಿಗಳು ಚೆನ್ನಾಗಿ ಮಾಗಿದ ತೊಂಡೆಯ ಹಣ್ಣುಗಳಂತೆ ಅತ್ಯಂತ ಸುಂದರವೂ ರಮ್ಯವೂ ಆಗಿದ್ದವು.

೩೯. ರತ್ನಕುಂಡಲಗಳ ಕಾಂತಿಯಿಂದ ಪರಿಶೋಭಿಸುತ್ತಿದ್ದ ಆಕೆಯ ಮನೋಹರವಾದ ಕಪೋಲಸ್ಥಳಗಳು, ಸೂರ್ಯೋದಯಕಾಲದಲ್ಲಿ ಪ್ರಜ್ವಲಿಸುವ ಮೇರುಶಿಖರದಂತೆ ಮಿರುಗುತ್ತಿದ್ದವು.

೪೦. ಆಕೆಯ ದಂತಪಂಕ್ತಿಗಳು ಮುತ್ತಿನಮಣಿಗಳ ಸಾಲಿನಂತೆಯೂ ವರ್ಷಾಕಾಲದ ಜಲಕಣಗಳಂತೆಯೂ ಅನಿರ್ವಚನೀಯವಾದ ಸೌಂದರ್ಯದಿಂದ ಶೋಭಿಸುತ್ತಿದ್ದವು.

೪೧. ಮೇರುಪರ್ವತವು ದೇವಗಂಗೆಯ ಜಲಧಾರೆಯಿಂದ ಶೋಭಿಸುವಂತೆ ಆಕೆಯ ಸುಂದರವಾದ ನಾಸಿಕವು ಆನೆಯ ಕುಂಭಸ್ಥಳದ ಮುತ್ತಿನ ಬುಲಾಕಿನಿಂದ ಶೋಭಿಸುತ್ತಿದ್ದಿತು.

೪೨. ಜಾಜೀಹೂಮಾಲೆಯಿಂದ ಅಲಂಕೃತವಾದ ಆಕೆಯ ಕೇಶಪಾಶಗಳು, ಬಕಪಕ್ಷಿಗಳ ಸಾಲಿನಿಂದಲಂಕೃತವಾದ ನವಮೇಘಮಾಲೆಯಂತೆ ಮನೋಹರವಾಗಿದ್ದುವು.

ತಪ್ತಕಾಂಚನವರ್ಣಾಭಂ ಚಾರುವಕ್ಷಃಸ್ಥಲೋಜ್ಜ್ವಲಂ ।
ರತ್ನೇಂದ್ರಸಾರಹಾರಾಕ್ತಂ ಕಸ್ತೂರೀಕುಂಕುಮಾನ್ವಿತಂ ॥ ೪೩ ॥

ಚಾರುಚಂಪಕವರ್ಣಾಭಂ ಸ್ತನಯುಗ್ಮಂ ಮನೋಹರಂ ।
ಬದರೀಫಲತುಲ್ಯಂ ಚ ಚಾರುಪತ್ರಕಶೋಭಿತಂ ॥ ೪೪ ॥

ಮಧ್ಯಂ ಮನೋಹರಂ ಕ್ಷೀಣಂ ನಿಮ್ನನಾಭಿಸ್ಥಲೋಜ್ಜ್ವಲಂ ।
ಅತೀವ ಸುಂದರಂ ರಮ್ಯಮುದರಂ ವರ್ತುಲಾಕೃತಿ ॥ ೪೫ ॥

ರಂಭಾಸ್ತಂಭವಿನಿಂದ್ಯೈಕಮೂರುಯುಗ್ಮಂ ಮನೋಹರಂ ।
ಕಾಮಾಲಯಂ ಸುಕಠಿನಂ ನಿಗೂಢಮಂಶುಕೇನ ಚ ॥ ೪೬ ॥

ಸ್ಥಲಪದ್ಮಪ್ರಭಾಮುಷ್ಯಪದಯುಗ್ಮಂ ಮನೋಹರಂ ।
ರತ್ನಪಾಶಕಸಂಯುಕ್ತಂ ಸಿದ್ಧಾಲಕ್ತಕಭೂಷಿತಂ ॥ ೪೭ ॥

---

೪೩. ಪುಟಕ್ಕೆಹಾಕಿದ ಚಿನ್ನದಂತೆ ಮನೋಹರವಾದ ಆಕೆಯ ವಕ್ಷಸ್ಥಲವು ಶ್ರೇಷ್ಠವಾದ ರತ್ನಹಾರದಿಂದಲೂ, ಕಸ್ತೂರಿ ಕುಂಕುಮಗಳಿಂದಲೂ ಅಲಂಕೃತವಾಗಿದ್ದಿತು.

೪೪. ಸುಂದರವಾದ ಸಂಪಿಗೆಯ ವರ್ಣದಂತೆ ಮನೋಹರವಾದ ಆಕೆಯ ಸ್ತನದ್ವಯವು ಚಿತ್ರಪತ್ರಗಳಿಂದಲಂಕೃತವಾಗಿ ಬದರೀಫಲಗಳಂತೆ ಮನೋಹರವಾಗಿದ್ದವು.

೪೫. ಸೂಕ್ಷ್ಮವೂ, ಮನೋಹರವೂ ಆದ ಆಕೆಯ ಮಧ್ಯಪ್ರದೇಶವು ಗಂಭೀರವಾದ ನಾಭಿಯಿಂದ ಶೋಭಿಸುತ್ತಿತ್ತು. ಆಕೆಯ ವರ್ತುಳಾಕಾರವಾದ ಉದರವು ಸುಂದರವೂ, ಮನೋಹರವೂ ಆಗಿದ್ದಿತು.

೪೬. ಎರಡುತೊಡೆಗಳು ಬಾಳೆಯಕಂಭಗಳನ್ನು ಅಲ್ಲಗಳೆಯುವಷ್ಟು ಮನೋಹರವಾಗಿದ್ದುವು. ಕಠಿಣವಾದ ಜಘನಪ್ರದೇಶವು ಸೂಕ್ಷ್ಮವಸ್ತ್ರದಿಂದ ಆಚ್ಛಾದಿತವಾಗಿದ್ದಿತು.

೪೭. ಆಕೆಯ ಎರಡು ಪಾದಗಳು ಸ್ಥಲಪದ್ಮಗಳ ಕಾಂತಿಯನ್ನು ಮೀರಿ ಮನೋಹರವಾಗಿದ್ದುವು. ಅಲ್ಲದೆ ರತ್ನನಿರ್ಮಿತವಾದ ಗೋಲಸುಗಳಿಂದಲೂ. ಅರಗಿನ ರಸದಿಂದಲೂ ಅಲಂಕೃತವಾಗಿದ್ದುವು.

ದಧತೆಂ ರತ್ನಮಂಜೀರಂ ರಾಜಹಂಸಾನುಕಾರಿ ಚ ।
ರತ್ನೇಂದ್ರಸಾರಾಭರಣಂ ನಿರ್ಮಿತಂ ವಿಶ್ವಕರ್ಮಣಾ ॥ ೪೮ ॥

ಕರಂ ಸುಕೋಮಲತರಂ ಸುಂದರಂ ಕನಕಪ್ರಭಂ ।
ರತ್ನಕಂಕಣಕೇಯೂರ ಶಂಖಭೂಷಣಭೂಷಿತಂ ॥ ೪೯ ॥

ಬಿಭ್ರತ್ ಸದ್ರತ್ನಮುಕುರಂ ಲೀಲಾಕಮಲಮುಜ್ಜ್ವಲಂ ।
ರತ್ನಾಂಗುಲೀಯಮತುಲಂ ದಧತಂ ಸುಮನೋಹರಂ ॥ ೫೦ ॥

ದೃಷ್ಟ್ವಾಸ್ವರೂಪಮತುಲಂ ದಧ್ಯೌ ಶಂಕರವಿಗ್ರಹಂ ।
ವಿಶಿಷ್ಯ ಮನಸಾ ಶಶ್ವದ್ಭರ್ತುಶ್ಚರಣಪಂಕಜಂ ॥ ೫೧ ॥

ಪಿತರಂ ಮಾತರಂ ಬಂಧುಂ ಸಾಧ್ವೀವರ್ಗಂ ಸಹೋದರಂ ।
ಅಂತರೇ ಸಾ ನ ಸಸ್ಮಾರ ಕಿಂಚಿದೇವ ಶಿವಂ ವಿನಾ ॥ ೫೨ ॥

---

೪೮. ರಾಜಹಂಸಪಕ್ಷಿಯ ಧ್ವನಿಯನ್ನು ಅನುಕರಣೆಮಾಡುವ ರತ್ನನೂಪುರಗಳಿಂದಲೂ, ವಿಶ್ವಕರ್ಮನಿಂದ ನಿರ್ಮಿತವಾದ ಶ್ರೇಷ್ಠವಾದ ರತ್ನಾಭರಣಗಳಿಂದಲೂ ಆಕೆಯ ಪಾದಗಳು ಅಲಂಕೃತವಾಗಿದ್ದವು.

೪೯. ಅತ್ಯಂತ ಕೋಮಲವೂ, ಸುಂದರವೂ, ಸುವರ್ಣವೂ ಆದ ಆಕೆಯ ಕೈಗಳು ರತ್ನಕಂಕಣಗಳಿಂದಲೂ ಭುಜಕೀರ್ತಿ ಮತ್ತು ಶಂಖಭೂಷಣಗಳಿಂದಲೂ ಅಲಂಕೃತವಾಗಿದ್ದವು.

೫೦. ರತ್ನದ ಉಂಗುರಗಳಿಂದ ಮನೋಹರವಾದ ಒಂದುಕೈಯ್ಯಲ್ಲಿ ರನ್ನಗನ್ನಡಿಯನ್ನೂ ಮತ್ತೊಂದು ಕೈಯ್ಯಲ್ಲಿ ಉಜ್ಜ್ವಲವಾದ ಲೀಲಾಕಮಲವನ್ನೂ ಹಿಡಿದು ಶೋಭಿಸುತ್ತಿದ್ದಳು.

೫೧. ಪಾರ್ವತಿಯು ಈ ರೀತಿ ಅಸಮಾನಲಾವಣ್ಯವುಳ್ಳ ತನ್ನ ಸುಂದರ ರೂಪವನ್ನು ಧ್ಯಾನಮಾಡಿ ಅವನ ಪಾದಕಮಲಗಳನ್ನು ಮನಸ್ಸಿನಲ್ಲೇ ಸ್ಮರಿಸಿಕೊಂಡಳು.

೫೨. ಆ ಸಮಯದಲ್ಲಿ ಶಿವನೊಬ್ಬನನ್ನು ಬಿಟ್ಟು ಪಾರ್ವತಿಯು ತಂದೆ ತಾಯಿಯನ್ನಾಗಲೀ, ಬಂಧುಗಳನ್ನಾಗಲೀ, ಸಾಧ್ವೀಮಣಿಯನ್ನಾಗಲೀ, ಸಹೋದರನನ್ನಾಗಲೀ ಸ್ವಲ್ಪವೂ ಸ್ಮರಿಸಿಕೊಳ್ಳಲಿಲ್ಲ.

ಅಥ ಶೈಲೇಶ್ವರಸ್ತತ್ರ ದದರ್ಶ ಚಂದ್ರಶೇಖರಂ ।
ಸ್ವರ್ಣದೀಪುಲಿನಾದ್ರಮ್ಯಾದುತ್ಪತಂತಂ ಚ ಸಸ್ಮಿತಂ ॥ ೫೩ ॥

ದಧತಂ ಸಂಸ್ಕೃತಾಂ ಮಾಲಾಂ ಜಪಂತಂ ಮಮ ನಾಮಕಂ ।
ತಪ್ತಸ್ವರ್ಣಪ್ರಭಾಜುಷ್ಟ ಜಟಾರಾಶಿವಿರಾಜಿತಂ ॥ ೫೪ ॥

ವೃಷಭಸ್ಥಂ ಶೂಲಪಾಣಿಂ ಸರ್ವಭೂಷಣರಾಜಿತಂ ।
ನಾಗಯಜ್ಞೋಪವೀತಂ ಚ ಸರ್ಪಭೂಷಣಭೂಷಿತಂ ॥ ೫೫ ॥

ಶುದ್ಧಸ್ಫಟಿಕಸಂಕಾಶಂ ವ್ಯಾಘ್ರಚರ್ಮಧರಂ ಪರಂ ।
ವಿಭೂತಿಭೂಷಿತಾಂಗಂ ತಮಸ್ಥಿಮಾಲಂ ದಿಗಂಬರಂ ॥ ೫೬ ॥

ಪಂಚವಕ್ತ್ರಂ ತ್ರಿನಯನಂ ಸೂರ್ಯಕೋಟಿಸಮಪ್ರಭಂ ।
ದದರ್ಶ ರುದ್ರಾನ್ ಪರಿತೋ ಜ್ವಲತೋ ಬ್ರಹ್ಮತೇಜಸಾ ॥ ೫೭ ॥

---

೫೩. ಇತ್ತ ಪರ್ವತರಾಜನು ದೇವಗಂಗೆಯ ರಮ್ಯವಾದ ಮರಳುರಾಶಿಯಿಂದ ಎದ್ದು ಬರುತ್ತಿದ್ದ ಸ್ಮಿತವದನನಾದ ಚಂದ್ರಶೇಖರನನ್ನು ನೋಡಿ ಆನಂದ ಪರವಶನಾದನು

೫೪. ಆ ಚಂದ್ರಶೇಖರನು ಸುಸಂಸ್ಕೃತವಾದ ಜಪಮಾಲೆಯೊಂದನ್ನು ಧರಿಸಿ ನನ್ನ ದಿವ್ಯನಾಮಗಳನ್ನು ಜಪಿಸುತ್ತಿದ್ದನು. ಅವನ ಜಟಾಜೂಟವು ಪುಟಕ್ಕೆ ಹಾಕಿದ ಚಿನ್ನದಂತೆ ಹೊಂಬಣ್ಣವಾಗಿದ್ದಿತು.

೫೫. ವೃಷಭವಾಹನನೂ, ಶೂಲಪಾಣಿಯೂ, ಸರ್ವಾಲಂಕಾರಭೂಷಿತನೂ ನಾಗಯಜ್ಞೋಪವೀತಧಾರಿಯೂ ಆದ ಆ ಶಂಕರನು ಸರ್ಪಭೂಷಣಭೂಷಿತನಾಗಿದ್ದನು.

೫೬. ಶುದ್ಧಸ್ಫಟಿಕಮಣಿಯಂತೆ ಪರಿಶುದ್ಧನೂ, ವ್ಯಾಘ್ರಚರ್ಮಾಂಬರನೂ ವಿಭೂತಿಯಿಂದ ಅನುಲಿಪ್ತನೂ ಆದ ಆ ಮಹೇಶ್ವರನು ಅಸ್ಥಿಮಾಲೆಯನ್ನು ಧರಿಸಿ ದಿಗಂಬರನಾಗಿ ಶೋಭಿಸುತ್ತಿದ್ದನು.

೫೭. ಪಂಚಮುಖಿಯೂ, ತ್ರಿಲೋಚನನೂ, ಕೋಟಿಸೂರ್ಯಸಮಪ್ರಭನೂ ಆದ ಆ ಪರಶಿವನನ್ನು ನೋಡಿದುದಲ್ಲದೆ ಅವನ ಸುತ್ತಲೂ ಬ್ರಹ್ಮತೇಜಸ್ಸಿನಿಂದ ಪ್ರಜ್ವಲಿಸುವ ಏಕಾದಶರುದ್ರರನ್ನೂ ಪರ್ವತರಾಜನು ನೋಡಿದನು.

ಶಿವವಾಮೇ ಮಹಾಕಾಲಂ ದಕ್ಷಿಣೇ ನಂದಿಕೇಶ್ವರಂ ।
ಭೂತಪ್ರೇತಪಿಶಾಚಾಂಶ್ಚ ಕೂಷ್ಮಾಂಡಾನ್ಬ್ರಹ್ಮರಾಕ್ಷಸಾನ್ ॥ ೫೮ ॥

ವೇತಾಲಾನ್ ಕ್ಷೇತ್ರಪಾಲಾಂಶ್ಚ ಭೈರವಾನ್ ಭೀಮವಿಕ್ರಮಾನ್ ।
ಸನಕಂ ಚ ಸನಂದಂ ಚ ಕುಮಾರಂ ಚ ಸನಾತನಂ ॥ ೫೯ ॥

ಜೈಗೀಷವ್ಯಂ ದೇವಲಂಚ ಕಾಣಾದಂ ಗೌತಮಂ ತಥಾ ।
ಪಿಪ್ಪಲಾದಂ ಕಣನಖಂ ವೋಢುಂ ಪಂಚಶಿಖಂ ಕಠಂ ॥ ೬೦ ॥

ಜಾಜಲಿಂ ಕರಖಂ ಕರ್ಣಂ ಲೋಮಶಂ ಸೂರ್ಯವರ್ಚಸಂ ।
ಕಾತ್ಯಾಯೆನಂ ಪಾಣಿನಿಂ ಚ ಶಂಖಂ ದುರ್ವಾಸಸಂ ತತಃ ॥ ೬೧ ॥

ಶತಾತಪಂ ಪಾರಿಭದ್ರಮಷ್ಟಾವಕ್ರಂ ಮರುದ್ಭವಂ ।
ಏತಾತ್ಪರೋಗಮಾನ್ನತ್ವಾ ಪ್ರಣನಾಮ ಶಿವಂ ಗಿರಿಃ ॥ ೬೨ ॥

---

೫೮. ಶಿವನ ವಾಮಭಾಗದಲ್ಲಿ ಮಹಾಕಾಳೇಶ್ವರನನ್ನೂ, ದಕ್ಷಿಣಭಾಗದಲ್ಲಿ ನಂದಿಕೇಶ್ವರನನ್ನೂ, ಸುತ್ತಲೂ ಭೂತಪ್ರೇತಪಿಶಾಚಗಳನ್ನೂ, ಕೂಷ್ಮಾಂಡ ಬ್ರಹ್ಮರಾಕ್ಷಸರನ್ನೂ ಕಂಡನು.

೫೯. ಭೇತಾಳರನ್ನೂ, ಕ್ಷೇತ್ರಪಾಲರನ್ನೂ, ಅತುಲಪರಾಕ್ರಮಿಗಳಾದ ಭೈರವರನ್ನೂ, ಸನಕ, ಸನಂದ, ಸನಾತನ ಮತ್ತು ಸನತ್ಕುಮಾರನನ್ನೂ ಪರ್ವತರಾಜನು ನೋಡಿದನು.

೬೦. ಜೈಗೀಷವ್ಯ, ದೇವಲ, ಕಾಣಾದ ಮತ್ತು ಗೌತಮನನ್ನೂ, ಪಿಪ್ಪಲಾದ, ಕಣನಖ, ವೋಢು, ಪಂಚಶಿಖ ಮತ್ತು ಕಠ ಮುಂತಾದ ಮಹರ್ಷಿಗಳನ್ನೂ ಶಿವನ ಸಮೀಪದಲ್ಲಿ ಹಿಮವಂತನು ನೋಡಿದನು.

೬೧. ಹಾಗೆಯೇ ಜಾಜಲಿ, ಕರಖ, ಕರ್ಣ, ಲೋಮಶ, ಸೂರ್ಯವರ್ಚಸ, ಕಾತ್ಯಾಯನ, ಪಾಣಿನಿ, ಶಂಖ ಮತ್ತು ದೂರ್ವಾಸಋಷಿಯನ್ನೂ ಸಹ ಗಿರೀಂದ್ರನು ಕಂಡನು.

೬೨. ಶತಾತಪ, ಪಾರಿಭದ್ರ, ಅಷ್ಟಾವಕ್ರ, ಮರುದ್ಭವ, ಮುಂತಾದ ಶಿವನ ಪರಿವಾರದವರಿಗೆಲ್ಲ ವಂದಿಸಿ, ಗಿರಿರಾಜನು ಮಹೇಶ್ವರನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು.

ಮೂರ್ಧ್ನಾ ನಿಪತ್ಯ ಭೂಮೌ ಸ ದಂಡವತ್ ಸಂಪುಟಾಂಜಲಿಃ ।
ಅಥೋ ಅನಲ್ಪಯಾ ಭಕ್ತ್ಯಾ ಧೃತ್ವಾ ತಚ್ಚರಣಾಂಬುಜಂ ।
ನನಾಮ ಚಾಶ್ರುನೇತ್ರಃ ಸ ಪುಲಕಾಂಚಿತವಿಗ್ರಹಃ ॥ ೭೩ ॥

ಧರ್ಮದತ್ತೇನ ಸ್ತೋತ್ರೇಣ ತುಷ್ಟಾವ ಪರಮೇಶ್ವರಂ ।
ತುಷ್ಟೇ ಬ್ರಾಹ್ಮೇ ದಿನೇಽತೀತೇ ಪುಷ್ಕರೇ ಸೂರ್ಯಪರ್ವಣಿ ॥ ೭೪ ॥

॥ ಹಿಮಾಲಯ ಉವಾಚ ॥

ತ್ವಂ ಬ್ರಹ್ಮಾ ಸೃಷ್ಟಿಕರ್ತಾ ಚ ತ್ವಂ ವಿಷ್ಣುಃ ಪರಿಪಾಲಕಃ ।
ತ್ವಂ ಶಿವಃ ಶಿವದೋಽನಂತಃ ಸರ್ವಸಂಹಾರಕಾರಕಃ ॥ ೭೫ ॥

ತ್ವಮೀಶ್ವರೋ ಗುಣಾತೀತೋ ಜ್ಯೋತೀ ರೂಪಃ ಸನಾತನಃ ।
ಪ್ರಕೃತಃ ಪ್ರಕೃತೀಶಶ್ಚ ಪ್ರಾಕೃತಃ ಪ್ರಕೃತೇಃ ಪರಃ ॥ ೭೬ ॥

---

೭೩. ಆ ಹಿಮವಂತನು ಕೈಗಳನ್ನು ಜೋಡಿಸಿಕೊಂಡು ಭೂಮಿಯ ಮೇಲೆ ತಲೆಬಾಗಿ ದಂಡಪ್ರಮಾಣಮಾಡಿದನು. ಅಲ್ಲದೆ ವಿಶೇಷಭಕ್ತಿಯಿಂದ ಶಿವನ ಪಾದ ಕಮಲಗಳನ್ನು ಹಿಡಿದು ನಮಿಸಿ, ರೋಮಾಂಚಿತಶರೀರನಾಗಿ ಕಣ್ಣುಗಳಲ್ಲಿ ಆನಂದ ಬಾಷ್ಪವನ್ನು ಸುರಿಸುತ್ತ ನಿಂತೆನು.

೭೪. ಹಿಂದೆ ಬ್ರಾಹ್ಮಕಲ್ಪದಲ್ಲಿ ಧರ್ಮಪುರುಷನು ಪುಷ್ಕರಕ್ಷೇತ್ರದಲ್ಲಿ ಸೂರ್ಯೋಪರಾಗದ ಸಮಯದಲ್ಲಿ ಉಪದೇಶಮಾಡಿದ ದಿವ್ಯಸ್ತೋತ್ರದಿಂದ ಪರಮೇಶ್ವರನನ್ನು ಸ್ತುತಿಸಿದನು.

೭೫. ಹಿಮಾಲಯ :—ಎಲೈ ಪರಮೇಶ್ವರನೇ, ನೀನೇ ಸೃಷ್ಟಿಕರ್ತನಾದ ಬ್ರಹ್ಮನು. ಜಗತ್ಪರಿಪಾಲಕನಾದ ವಿಷ್ಣುವು ಮತ್ತು ಮಂಗಳಪ್ರದನೂ ಅನಂತನೂ ಸರ್ವಸಂಹಾರಕಾರಕನೂ ಆದ ಶಿವನೂ ನೀನೆ.

೭೬. ಸರ್ವೇಶ್ವರನೂ ತ್ರಿಗುಣಾತೀತನೂ ಆದ ನೀನೇ ಜ್ಯೋತಿಃಸ್ವರೂಪನೂ ಸನಾತನನೂ ಆಗಿರುವೆ. ಪ್ರಕೃತಿಗೆ ಒಡೆಯನಾದ ನೀನೇ ಪ್ರಾಕೃತನೂ ಪ್ರಕೃತಿಗಿಂತ ಮೇಲಾದವನೂ ಆಗಿರುವೆ.

ನಾನಾರೂಪ ವಿಧಾತಾ ತ್ವಂ ಭಕ್ತಾನಾಂ ಧ್ಯಾನಹೇತವೇ ।
ಯೇಷು ರೂಪೇಷು ಯತ್ಪ್ರೀತಿಸ್ತತ್ತದ್ರೂಪಂ ಬಿಭರ್ಷಿ ಚ ॥ ೬೭ ॥

ಸೂರ್ಯಸ್ತ್ವಂ ಸೃಷ್ಟಿಜನಕ ಆಧಾರಃ ಸರ್ವತೇಜಸಾಂ ।
ಸೋಮಸ್ತ್ವಂ ಸಸ್ಯಪಾತಾ ಚ ಸತತಂ ಶೀತರಶ್ಮಿನಾ ॥ ೬೮ ॥

ವಾಯುಸ್ತ್ವಂ ವರುಣಸ್ತ್ವಂ ಚ ತ್ವಮಗ್ನಿಃ ಸರ್ವದಾಹಕಃ ।
ಇಂದ್ರಸ್ತ್ವಂ ದೇವರಾಜಶ್ಚ ಕಾಲೋ ಮೃತ್ಯುರ್ಯಮಸ್ತಥಾ ॥ ೬೯ ॥

ಮೃತ್ಯುಂಜಯೋ ಮೃತ್ಯುಮೃತ್ಯುಃ ಕಾಲಕಾಲೋ ಯಮಾಂತಕಃ ।
ವೇದಸ್ತ್ವಂ ವೇದಕರ್ತಾ ಚ ವೇದವೇದಾಂಗ ಪಾರಗಃ ॥ ೭೦ ॥

ವಿದುಷಾಂ ಜನಕಸ್ತ್ವಂ ಚ ವಿದ್ವಾಂಶ್ಚ ವಿದುಷಾಂ ಗುರುಃ ।
ಮಂತ್ರಸ್ತ್ವಂ ಹಿ ಜಪಸ್ತ್ವಂ ಹಿ ತಪಸ್ತ್ವಂ ತತ್ಫಲಪ್ರದಃ ॥ ೭೧ ॥

---

೬೭. ಭಕ್ತರ ಧ್ಯಾನಾರ್ಥವಾಗಿ ನೀನು ನಾನಾವಿಧರೂಪಧಾರಿಯಾಗಿರುವೆ. ಯಾರಿಗೆ ಯಾವ ರೂಪದಲ್ಲಿ ಭಕ್ತಿಯುಂಟೋ ಆಯಾಯ ರೂಪವನ್ನು ನೀನು ಧರಿಸುವೆ.

೬೮. ಸಕಲ ತೇಜಸ್ಸುಗಳಿಗೂ ಮೂಲಾಧಾರನೂ, ಸೃಷ್ಟಿದ್ಯೋತಕನೂ ಆದ ಸೂರ್ಯನೂ ನೀನೇ. ಸದಾ ಶೀತಕಿರಣದಿಂದ ಸಸ್ಯಗಳನ್ನು ಪೋಷಿಸತಕ್ಕ ಚಂದ್ರನೂ ನೀನೇ.

೬೯. ವಾಯುವೇವನೂ, ವರುಣದೇವನೂ, ಸರ್ವದಾಹಕನಾದ ಅಗ್ನಿಯೂ ನೀನೇ ಆಗಿರುವೆ.

೭೦. ಮೃತ್ಯುಂಜಯನೂ, ಮೃತ್ಯುವಿಗೂ ಮೃತ್ಯುದಾಯಕನೂ, ಕಾಲಕಾಲನೂ, ಯಮಾಂತಕನೂ ನೀನೇ ಆಗಿರುವೆ. ವೇದಸ್ವರೂಪನೂ, ವೇದಕರ್ತೃವೂ ವೇದವೇದಾಂಗ ಪಾರಗನೂ ನೀನೇ ಆಗಿರುವೆ.

೭೧. ನೀನು ವಿದ್ವಾಂಸರ ಜನಕನೂ, ಸ್ವಯಂ ಸರ್ವಜ್ಞನೂ ವಿದ್ವಾಂಸರ ಗುರುವೂ ಆಗಿರುವೆ. ಮಂತ್ರಸ್ವರೂಪನೂ, ಜಪಸ್ವರೂಪನೂ, ತಪಸ್ವರೂಪನೂ ಆದ ನೀನೇ ಅವುಗಳ ಫಲಪ್ರದನಾಗಿರುವೆ.

ವಾಕ್ ತ್ವಂ ವಾಗಧಿದೇವೀ ತ್ವಂ ತತ್ಕರ್ತಾ ತದ್ಗುರುಃ ಸ್ವಯಂ ।
ಅಹೋ ಸರಸ್ವತೀಬೀಜಂ ಕಸ್ತ್ವಾಂ ಸ್ತೋತುಮಿಹೇಶ್ವರಃ || ೭೨ ||

ಇತ್ಯೇವಮುಕ್ತ್ವಾ ಶೈಲೇಂದ್ರಸ್ತಸ್ಥೌ ಧೃತ್ವಾ ಪದಾಂಬುಜಂ ।
ತತ್ರೋವಾಸ ತಮಾಬೋಧ್ಯ ಚಾವರುಹ್ಯ ವೃಷಾಚ್ಛಿವಃ || ೭೩ ||

ಸ್ತೋತ್ರಮೇತಂ ಮಹಾಪುಣ್ಯಂ ತ್ರಿಸಂಧ್ಯಂ ಯಃ ಪಠೇನ್ನರಃ ।
ಮುಚ್ಯತೇ ಸರ್ವಪಾಪೇಭ್ಯೋ ಭಯೇಭ್ಯಶ್ಚ ಭವಾರ್ಣವೇ || ೭೪ ||

ಅಪುತ್ರೋ ಲಭತೇ ಪುತ್ರಂ ಮಾಸಮೇಕಂ ಪಠೇದ್ಯದಿ ।
ಭಾರ್ಯಾಹೀನೋ ಲಭೇದ್ಭಾರ್ಯಾಂ ಸುಶೀಲಾಂ ಸುಮನೋಹರಾಂ ||

ಚಿರಕಾಲಗತಂ ವಸ್ತು ಲಭತೇ ಸಹಸಾ ಧ್ರುವಂ ।
ರಾಜ್ಯಭ್ರಷ್ಟೋ ಲಭೇದ್ರಾಜ್ಯಂ ಶಂಕರಸ್ಯ ಪ್ರಸಾದತಃ || ೭೬ ||

---

೭೨. ವಾಕ್ಸ್ವರೂಪನೂ ವಾಗಧಿದೇವತೆಯೂ ಆದ ನೀನೇ ಶಬ್ದಕರ್ತೃವೂ ಅದನ್ನು ಬೋಧಿಸುವ ಗುರುವೂ ಆಗಿರುವೆ. ಸರಸ್ವತೀದೇವಿಗೇ ಮೂಲಪುರುಷನಾದ ನಿನ್ನನ್ನು ಹೊಗಳಲು ಸಮರ್ಥರಾರು ?

೭೩. ಗಿರಿರಾಜನು ಈ ರೀತಿಯಾಗಿ ಸ್ತುತಿಸಿ ಶಂಕರನ ಚರಣಕಮಲಗಳನ್ನು ಹಿಡಿದುನಿಂತನು. ಶಂಕರನೂ ಕೂಡ ವೃಷಭವಾಹನದಿಂದ ಕೆಳಗಿಳಿದು ಗಿರಿರಾಜನನ್ನು ಸಮಾಧಾನಪಡಿಸಿದನು.

೭೪. ಮಹಾಪುಣ್ಯಕರವಾದ ಈ ಸ್ತೋತ್ರವನ್ನು ಮೂರು ಸಂಧ್ಯಾಕಾಲದಲ್ಲೂ ಯಾವ ಮನುಜನು ಪಠಿಸುವನೋ, ಅವನು ಸಕಲ ಪಾಪಗಳಿಂದಲೂ ವಿಮುಕ್ತನಾಗುವನಲ್ಲದೆ ಸಂಸಾರಭಯದಿಂದ ಬಿಡುಗಡೆಹೊಂದುವನು.

೭೫. ಒಂದು ತಿಂಗಳಕಾಲ ಇದನ್ನು ಪಠಿಸಿದವನು ಪುತ್ರರಹಿತನಾಗಿದ್ದರೆ ಸತ್ಪುತ್ರನನ್ನು ಪಡೆಯುವನು. ಭಾರ್ಯಾಹೀನನು ಸುಶೀಲೆಯೂ ರೂಪವತಿಯೂ ಆದ ಭಾರ್ಯೆಯನ್ನು ಹೊಂದುವನು.

೭೬. ಶಂಕರನ ಅನುಗ್ರಹದಿಂದ ಬಹುಕಾಲದ ಹಿಂದೆ ಕಳೆದುಹೋದ ವಸ್ತುವನ್ನೂ ಇದ್ದಕ್ಕಿದ್ದಂತೆಯೇ ಹೊಂದುವನು. ರಾಜ್ಯಭ್ರಷ್ಟನು ಪುನಃ ರಾಜ್ಯವನ್ನು ಪಡೆಯುವನು.

ಕಾರಾಗಾರೇ ಶ್ಮಶಾನೇ ಚ ಶತ್ರುಗ್ರಸ್ತೇಽತಿಸಂಕಟೇ ।
ಗಭೀರೇಽತಿ ಜಲಾಕೀರ್ಣೇ ಭಗ್ನಪೋತೇ ವಿಷಾದನೇ ॥ ೭೭ ॥

ರಣಮಧ್ಯೇ ಮಹಾಭೀತೌ ಹಿಂಸ್ರಜಂತುಸಮನ್ವಿತೇ ।
ಸರ್ವತೋ ಮುಚ್ಯತೇ ಸ್ತುತ್ವಾ ಶಂಕರಸ್ಯ ಪ್ರಸಾದತಃ ॥ ೭೮ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಪೂರ್ವಾರ್ಧೇ ನಾರದನಾರಾಯಣಸಂವಾದೇ
ಪಾರ್ವತೀಗರ್ವಭಂಗಪ್ರಸ್ತಾವೇ
ಅಷ್ಟಾತ್ರಿಂಶೋಽಧ್ಯಾಯಃ

೭೭-೭೮. ಕಾರಾಗೃಹದಲ್ಲಿರುವಾಗಲೂ, ಶ್ಮಶಾನದಲ್ಲಿರುವಾಗಲೂ, ಶತ್ರುವಿನ ಕೈಗೆ ಸಿಲುಕಿ ಸಂಕಟಕ್ಕೊಳಗಾದಾಗಲೂ, ಹಡಗು ಮುಳುಗಿ ಅತಿ ಗಂಭೀರವಾದ ನೀರಿನಲ್ಲಿ ಮುಳುಗಿದಾಗಲೂ, ವಿಷಗ್ರಸ್ತನಾದಾಗಲೂ, ಯುದ್ಧಮಧ್ಯದಲ್ಲಿ ಸಿಲುಕಿದಾಗಲೂ, ಮಹಾಭೀತಿಯಲ್ಲೂ, ದುಷ್ಟಪ್ರಾಣಿಗಳ ಮಧ್ಯೆ ಸಿಲುಕಿದಾಗಲೂ ಈ ಸ್ತೋತ್ರವನ್ನು ಭಕ್ತಿಯಿಂದ ಪಠಿಸಿದರೆ ಪರಮೇಶ್ವರನ ಅನುಗ್ರಹದಿಂದ ಸಕಲ ಕಷ್ಟಗಳಿಂದಲೂ ಪಾರಾಗುವುದರಲ್ಲಿ ಸಂದೇಹವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಪಾರ್ವತೀಗರ್ವಭಂಗವೆಂಬ ಮೂವತ್ತೆಂಟನೆಯ
ಅಧ್ಯಾಯವು ಮುಗಿದುದು.

ಮೂವತ್ತೆಂಟನೆಯ ಅಧ್ಯಾಯದ ಸಾರಾಂಶ.

ಹಿಂದಿನ ಅಧ್ಯಾಯದಲ್ಲಿ ಶಂಕರನ ಗರ್ವಭಂಗವನ್ನು ವಿವರಿಸಿ, ಈ ಅಧ್ಯಾಯ ದಲ್ಲಿ ಪಾರ್ವತಿಯ ಗರ್ವಭಂಗವನ್ನು ನಿರೂಪಿಸಿದ್ದಾರೆ.

ಜಗನ್ಮಾತೆಯಾದ :ದುರ್ಗಾದೇವಿಯು ಸಕಲ ದೇವತೆಗಳ ತೇಜಸ್ಸಿನಿಂದ ಆವಿರ್ಭವಿಸಿ ದುಷ್ಟರಾಕ್ಷಸರನ್ನೆಲ್ಲ ಸಂಹರಿಸಿದ ನಂತರ ದಕ್ಷಬ್ರಹ್ಮನ ಪತ್ನಿಯಲ್ಲಿ ಜನ್ಮ ವೆತ್ತಿ ದಾಕ್ಷಾಯಣಿ ಎನಿಸಿಕೊಂಡಳು. ಆ ದಾಕ್ಷಾಯಣಿಯು ಪರಶಿವನನ್ನು ವರಿಸಿ ಪತಿಸೇವಾಪರಾಯಣೆಯಾಗಿದ್ದಳು. ಹೀಗಿರಲು ಒಮ್ಮೆ ದಕ್ಷಬ್ರಹ್ಮನು ಅಕಾರಣ ವಾಗಿ ಶಿವನ ಮೇಲೆ ಕೋಪಗೊಂಡು ತಾನು ಮಾಡಿದ ಯಾಗಕ್ಕೆ ಅವನನ್ನು ಆಹ್ವಾನಿಸಲಿಲ್ಲ. ದಾಕ್ಷಾಯಿಣಿಯಾದರೋ ತಂದೆಯು ಮಾಡುವ ಯಜ್ಞಕ್ಕೆ ಶಿವನನ್ನು ಕರೆದೊಯ್ಯಬೇಕೆಂದು ಪ್ರಯತ್ನಪಟ್ಟು ಸಫಲಳಾಗದೆ, ಶಿವನ ಮಾತನ್ನು ಧಿಕ್ಕರಿಸಿ ತಾನೊಬ್ಬಳೇ ಯಾಗಕ್ಕೆ ಹೋಗಿ ಅಲ್ಲಿ ಪತಿನಿಂದೆಯನ್ನು ಕೇಳಿ ಯಜ್ಞ ಕುಂಡದಲ್ಲೇ ದೇಹತ್ಯಾಗ ಮಾಡಿದಳು.

ಮುಂದೆ ಹಿಮವಂತನ ಪತ್ನಿಯಾದ ಮೇನೆಯ ಗರ್ಭದಲ್ಲಿ ಜನಿಸಿ ಪಾರ್ವತಿ ಎಂದು ಪ್ರಖ್ಯಾತಳಾದ ಈಕೆಯು ತನ್ನ ಸೌಂದರ್ಯಕ್ಕೆ ಗರ್ವಪಟ್ಟು, ಶಿವನು ತನಗಾಗಿ ತಪಸ್ಸುಮಾಡುತ್ತಿದ್ದರೂ, ತಾನೂ ಶಿವನಿಗಾಗಿ ತಪಸ್ಸುಮಾಡಬೇಕೆಂದು ಅಶರೀರವಾಣಿಯಾದರೂ ಸಹ ತಪಸ್ಸಿಗೆ ಹೋಗದೆ ಮನೆಯಲ್ಲಿಯೇ ಇದ್ದಳು.

ಅತ್ತ ಶಿವನು ತನ್ನ ಪರಿವಾರದೊಡನೆ ಅಕ್ಷಯವಟದ ಸಮೀಪಕ್ಕೆ ಬಂದಿರುವು ದನ್ನು ಕೇಳಿ ಹಿಮವಂತನು ಪರಿವಾರದೊಡನೆ ಅಲ್ಲಿಗೆ ಹೋಗಿ ಶಿವನಿಗೆ ಉಚಿತವಾದ ಸತ್ಕಾರವನ್ನು ಮಾಡಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಏಕೋನಚತ್ವಾರಿಂಶೋಽಧ್ಯಾಯಃ ||

|| ಶ್ರೀ ಕೃಷ್ಣ ಉವಾಚ ||

ಇತಿ ಸ್ತುತ್ವಾ ಹಿಮಗಿರಿರ್ನತಃ ಶಂಕರಸ್ಯ ಚ |
ಉವಾಸ ಪುರತೋ ದೂರೇ ಲಬ್ಧಾಜ್ಞಃ ಸರ್ವಸಂಮತಃ || ೧ ||

ಮಧುಪರ್ಕಾದಿಕಂ ತಸ್ಮೈ ಪ್ರದದೌ ಭಕ್ತಿಪೂರ್ವಕಂ |
ಮುನೀನ್ ಸಂಪೂಜಯಾಮಾಸ ತತಃ ಶಂಕರ ಪಾರ್ಷದಾನ್ || ೨ ||

ಮೂವತ್ತೊಂಭತ್ತನೆಯ ಅಧ್ಯಾಯ.

೧. ಶ್ರೀಕೃಷ್ಣ :—ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಹಿಮವಂತನು ಶಂಕರನನ್ನು ಸ್ತೋತ್ರಮಾಡಿ, ಅವನ ಅನುಜ್ಞೆಯನ್ನು ಪಡೆದು ಮುಂದೆ ಸ್ವಲ್ಪ ದೂರದಲ್ಲಿ ನಿಂತುಕೊಂಡನು.

೨. ಹಿಮವಂತನು ಶಂಕರನಿಗೆ ಮಧುಪರ್ಕ ಮುಂತಾದವುಗಳನ್ನು ಭಕ್ತಿಯಿಂದ ಸಮರ್ಪಿಸಿದನು. ಅನಂತರ ಆ ಶಂಕರನ ಪಾರ್ಶ್ವದಲ್ಲಿದ್ದ ಮುನಿಗಳನ್ನು ಪೂಜಿಸಿದನು.

ತದಾ ತತ್ರ ಸಮಾಗತ್ಯ ಮೇನಕಾ ಸ್ತ್ರೀಗಣೈಃ ಸಹ ।
ದದರ್ಶ ವಟಮೂಲಸ್ಥಂ ಶಂಕರಂ ಚಂದ್ರಶೇಖರಂ ॥ ೩ ॥

ಈಷದ್ಧಾಸ್ಯ ಪ್ರಸನ್ನಾಸ್ಯಂ ವಸಂತಂ ವ್ಯಾಘ್ರಚರ್ಮಣಿ ।
ಮಧ್ಯೇ ಮುನಿಗಣಾನಾಂ ಚ ಜ್ವಲಂತಂ ಬ್ರಹ್ಮತೇಜಸಾ ॥ ೪ ॥

ಯಥಾಕಾಶೇ ತಾರಕಾಣಾಂ ದ್ವಿಜರಾಜಂ ವಿರಾಜಿತಂ ।
ಪರಮಾಹ್ಲಾದಕಂ ರೂಪಂ ಕಂದರ್ಪಕೋಟಿಸನ್ನಿಭಂ ॥ ೫ ॥

ವಿಹಾಯ ವಾರ್ಧಕಾವಸ್ಥಾಂ ದಧತಂ ನವಯೌವನಂ ।
ಅತೀವಸುಂದರಂ ರಮ್ಯಂ ಚಿತ್ತಚೋರಂ ಚ ಯೋಷಿತಾಂ ॥ ೬ ॥

ಕಾಮಂ ಕಾಮಾತುರಾಣಾಂ ಚ ಸತೀನಾಂ ಚ ಸುತಂ ಯಥಾ ।
ವೈಷ್ಣವಾನಾಂ ಮಹಾವಿಷ್ಣುಂ ಶೈವಾನಾಂ ಚ ಸದಾಶಿವಂ ॥ ೭ ॥

ಶಕ್ತಿಸ್ವರೂಪಂ ಶಾಕ್ತಾನಾಂ ಸೌರಾಣಾಂ ಸೂರ್ಯರೂಪಿಣಂ ।
ಕಾಲಸ್ವರೂಪಂ ದುಷ್ಟಾನಾಂ ಶಿಷ್ಟಾನಾಂ ಪರಿಪಾಲಕಂ ॥ ೮ ॥

೩–೭. ಆಗ ಮೇನಕೆಯು ಸ್ತ್ರೀಸಮೂಹದಿಂದೊಡಗೂಡಿದಳಾಗಿ ಅಲ್ಲಿಗೆ ಬಂದು, ಆಲದಮರದ ಬುಡದಲ್ಲಿ ಮುಗುಳುನಗೆಯಿಂದ ಕೂಡಿದ ಪ್ರಸನ್ನವಾದ ಮುಖವುಳ್ಳ ಹುಲಿಯ ಚರ್ಮದ ಮೇಲೆ ಕುಳಿತಿರುವ, ಮಹರ್ಷಿಗಳ ಗುಂಪಿನ ಮಧ್ಯದಲ್ಲಿ ಬ್ರಹ್ಮತೇಜಸ್ಸಿನಿಂದ ಪ್ರಕಾಶಮಾನನಾಗಿರುವ ಆಕಾಶದಲ್ಲಿ ನಕ್ಷತ್ರಗಳ ಮಧ್ಯದಲ್ಲಿ ಪ್ರಕಾಶಿಸುವ ಚಂದ್ರನಂತಿರುವ ಅತ್ಯಂತ ಸಂತೋಷವನ್ನುಂಟು ಮಾಡುವ ರೂಪವುಳ್ಳ, ಕೋಟಿಮನ್ಮಥಸಮಾನನಾದ ಮುಪ್ಪಿಲ್ಲದೆ ನವಯೌವನಾವಸ್ಥೆಯಲ್ಲಿರುವ, ಅತ್ಯಂತ ಸುಂದರನಾದ, ಹೆಂಗಸರ ಮನಸ್ಸನ್ನಪಹರಿಸುವ, ಕಾಮುಕಿಯರಿಗೆ ಮನ್ಮಥನಂತೆಯೂ, ಪತಿವ್ರತೆಯರಿಗೆ ಮಗನಂತೆಯೂ, ವೈಷ್ಣವರಿಗೆ ವಿಷ್ಣುವಿನಂತೆಯೂ, ಶಿವಭಕ್ತರಿಗೆ ಸದಾಶಿವನಂತೆಯೂ ಇರುವ ಶಂಕರನನ್ನು ನೋಡಿದಳು.

೮–೧೨ ಮತ್ತು ಶಾಕ್ತರಿಗೆ ಶಕ್ತಿಸ್ವರೂಪನಾಗಿಯೂ, ಸೌರರಿಗೆ ಸೂರ್ಯರೂಪನಾಗಿಯೂ, ದುಷ್ಟರಿಗೆ ಮೃತ್ಯುರೂಪನಾಗಿಯೂ, ಶಿಷ್ಟರನ್ನು ರಕ್ಷಿಸುವವ

ಕಾಲಕಾಲಸಮಂ ಮೃತ್ಯೋರ್ಮೃತ್ಯುಮೃತ್ಯುಂ ಭಯಾನಕಂ ।
ವ್ಯಾಘ್ರಚರ್ಮಂ ಚಾರುವಸ್ತ್ರಂ ಬಭೂವ ಭಸ್ಮಚಂದನಂ ॥ ೯ ॥

ಸರ್ಪಾಃ ಸುಂದರಮಾಲ್ಯಾನಿ ಕಸ್ತೂರೀ ಯಾ ವಿಷಪ್ರಭಾ ।
ಜಟಾ ಸುಲಲಿತಾ ಚೂಡಾ ಚಂದ್ರಸ್ತ್ವಲಿಕಚಂದನಂ ॥ ೧೦ ॥

ಸುಚಾರ್ವೀ ಮಾಲತೀ ಮಾಲಾ ಗಂಗಾಧಾರಾ ಮನೋಹರಾ ।
ಅಸ್ಥಿಮಾಲಾ ರತ್ನಮಾಲಾ ಧತ್ತೂರಂ ಚಾರುಚಂಪಕಂ ॥ ೧೧ ॥

ಏಕೀಭೂತಂ ಪಂಚವಕ್ತ್ರಂ ನೇತ್ರಯುಗ್ಮಾಬ್ಜಶೋಭಿತಂ ।
ಶರತ್ಪಾರ್ವಣಚಂದ್ರಾಭಂ ಪ್ರಚ್ಛಾದ್ಯ ದೀಪ್ತಮುತ್ತಮಂ ॥ ೧೨ ॥

ಬಂಧುಜೀವವಿನಿಂದ್ಯೈಕಮೋಷ್ಠಾಧರ ಮನೋಹರಂ ।
ಶ್ವೇತಶ್ಚಂದ್ರೋ ವೃಷೇಂದ್ರಶ್ಚ ಭೂತಾದ್ಯಾ ನರ್ತಕಾ ಇವ ॥ ೧೩ ॥

ನಾಗಿಯೂ, ಯಮನಿಗೆ ಯಮನಾಗಿಯೂ, ಮೃತ್ಯುವಿಗೆ ಮೃತ್ಯುವಾಗಿಯೂ, ಮಹಾಭಯಂಕರನಾಗಿಯೂ, ಹುಲಿಯ ಚರ್ಮದ ಉಡಿಗೆ ಯುಳ್ಳವನೂ, ಬೂದಿಯನ್ನು ಗಂಧವಾಗಿಟ್ಟುಕೊಂಡವನೂ, ಸರ್ಪಗಳನ್ನುಸುಂದರವಾದ ಹಾರವನ್ನಾಗಿ ಧರಿಸಿರುವವನೂ, ವಿಷವನ್ನು ಕಸ್ತೂರಿಯಂತೆ ಧರಿಸಿರುವವನೂ, ಜಟೆಯನ್ನು ಕಟ್ಟಿಕೊಂಡಿರುವವನೂ, ಚಂದ್ರನನ್ನು ಮುಂಗುರುಳ ಗಂಧವನ್ನಾಗಿ ಮಾಡಿಕೊಂಡಿರುವವನೂ, ಗಂಗಾಪ್ರವಾಹವನ್ನು ಮಾಲತೀಪುಷ್ಪದ ಹಾರದಂತೆ ಧರಿಸಿರುವವನೂ, ಎಲುಬುಗಳ ಮಾಲೆಯನ್ನು ರತ್ನಹಾರದಂತೆ ಧರಿಸಿರುವವನೂ, ದತ್ತೂರಪುಷ್ಪವನ್ನು ಸಂಪಿಗೆಹೂವಿನಂತೆ ಧರಿಸಿರುವವನೂ, ಐದುಮುಖಗಳನ್ನು ಧರಿಸಿರುವವನೂ, ಶರತ್ಕಾಲದ ಚಂದ್ರನಂತೆ ಪ್ರಕಾಶಮಾನನೂ, ತನ್ನ ಪ್ರತಾಪವನ್ನು ಅಡಗಿಸಿಕೊಂಡಿರುವವನೂ ಆದ ಶಂಕರನನ್ನು ನೋಡಿದಳು.

೧೩. ಬಂದುಗೆಯ ಹೂವನ್ನು ಹೀಯಾಳಿಸುವ ಕೆಳತುಟಿಯಿಂದ ಸುಂದರನಾದ, ಆ ಶಂಕರನ ಸುತ್ತಲೂ ಶೋಭಿಸುವ ಚಂದ್ರ, ನಂದಿ ಮತ್ತು ಪ್ರಮಥಗಣಗಳು ನರ್ತಕರಂತಿರುವುದನ್ನು ನೋಡಿದಳು.

ಸದ್ಯೋ ವ್ಯತಿಕ್ರಮಂ ಸರ್ವಂ ಮಹೇಶಸ್ಯ ಮಹೇಶ್ವರಿ ।
ದೃಷ್ಟ್ವೈವಂ ಶಿವರೂಪಂ ಚ ಮೇನಾ ತುಷ್ಟಾ ಬಭೂವ ಹ ॥ ೧೪ ॥

ಕಾಶ್ಚಿನ್ನಿಮೇಷರಹಿತಾಃ ಕಾಮೇನ ಪುಲಕಾಂಚಿತಾಃ ।
ಅತಿಕಾಮಾತುರಾಃ ಸತ್ಯಃ ಪ್ರಾಪುರ್ಮೂರ್ಛಾಂ ಚ ಕಾಶ್ಚನ ॥ ೧೫ ॥

ಕಾಶ್ಚಿದ್ವಿನಿಂದ್ಯ ಕಾಂತಾಂಶ್ಚ ಪ್ರಶಶಂಸುರ್ಮಹೇಶ್ವರಂ ।
ಮನೋರಥೇನ ಮನಸಾ ಸಮಾಶ್ಲಿಷ್ಯಂತಿ ಕಾಶ್ಚನ ॥ ೧೬ ॥

ಕಾಚಿನ್ಮಾನಸಿಕಂ ಕಾಮಾತ್ ಕುರ್ವಂತೀ ಚುಂಬನಂ ಮುದಾ ।
ಧ್ರುವಂ ಕಾಮಂ ಕರಿಷ್ಯಾಮೋ ವಯಂ ಚ ಕಾಮಸಾಗರೇ ॥ ೧೭ ॥

ಅಸ್ಮಾಕಮೇವಂ ಭರ್ತಾ ಚೇತ್ ಪರತ್ರ ಚ ಯತೋ ಭವೇತ್ ।
ಇಹೈವಂ ಕಿಂ ಕರಿಷ್ಯಾಮೋ ವಯಂ ಕಾಂತೈ ರತೈರಲಂ ॥ ೧೮ ॥

ದೃಷ್ಟ್ವಾ ತಮೇವಂ ಸುಚಿರಮಿತಿ ಜಲ್ಪಂತಿ ಕಾಶ್ಚನ ॥ ೧೯ ॥

---

೧೪. ಎಲೈ ಮಹೇಶ್ವರಿಯೇ ಈ ರೀತಿಯಾದ ಈಶ್ವರನ ಸಮಗ್ರ ರೂಪವನ್ನು ನೋಡಿ ಮೇನಾದೇವಿಯು ಸಂತೋಷಗೊಂಡಳು.

೧೫. ಕೆಲವರು ಹೆಂಗಸರು ಎವೆಯಿಕ್ಕದವರಾಗಿ ಕಾಮದಿಂದ ರೋಮಾಂಚಗೊಂಡವರಾಗಿ ಹೆಚ್ಚಾದ ಕಾಮಕ್ಕೆ ಸಿಲುಕಿದವರಾಗಿ ಮೂರ್ಛೆಯನ್ನು ಹೊಂದಿದರು.

೧೬. ಕೆಲವರು ಸ್ತ್ರೀಯರು ಮನಸ್ಸಿನಲ್ಲಿಯೇ ತಮ್ಮ ಪತಿಗಳನ್ನು ನಿಂದಿಸುತ್ತ ಪರಮೇಶ್ವರನನ್ನು ಹೊಗಳಿದರು. ಮತ್ತೆ ಕೆಲವರು ಅವನನ್ನು ಮನಸ್ಸಿನಿಂದಲೇ ಅಪ್ಪಿಕೊಂಡರು.

೧೭-೧೯. ಇನ್ನು ಕೆಲವರು ಕಾಮವಶರಾಗಿ ಮನಸ್ಸಿನಲ್ಲೇ ಚುಂಬನವನ್ನು ಮಾಡಿದರು. ಮತ್ತೆ ಕೆಲವರು ಆ ಶಂಕರನನ್ನು ನೋಡಿ ಕಾಮಸಮುದ್ರದಂತಿರುವ ಇವನನ್ನು ನಾವು ಕಾಮಿಸುತ್ತೇವೆ, ಮುಂದಿನ ಜನ್ಮದಲ್ಲಾದರೂ ನಮಗೆ ಇಂತಹ ಪತಿಯು ದೊರೆಯಲಿ, ಈ ಲೋಕದಲ್ಲಿ ನಾವೇನು ಮಾಡೋಣ, ನಮಗೆ ನಮ್ಮ ಪತಿಗಳ ರತಿಯು ಸಾಕು. ಎಂದು ನುಡಿದರು.

ಕಾಶ್ಚಿತ್ ದೃಷ್ಟ್ವಾ ಕಿಂಚಿನ್ಮುಖಮಾಚ್ಛಾದ್ಯ ವಾಸಸಾ ।
ಸಸ್ಮಿತಾ ವಕ್ರನಯನಾಃ ಪಶ್ಯಂತ್ಯೇವಂ ಪುನಃ ಪುನಃ ॥ ೨೦ ॥

ವಯಂ ಗೃಹಂ ನಯಾಸ್ಯಾಮೋ ಯಾಸ್ಯಾಮಃ ಶಿವಸನ್ನಿಧಿಂ ।
ಶರಚ್ಛುಧಾಂಶುವದನಂ ದ್ರಕ್ಷ್ಯಾಮೋಽಹರ್ನಿಶಂ ಮುದಾ ॥ ೨೧ ॥

ಸಂಸಾರಂ ನ ಕರಿಷ್ಯಾಮಃ ಪ್ರವಿಶಾಮೋ ಹುತಾಶನಂ ।
ಭವಿತಾ ನಃ ಶಿವಃ ಸ್ವಾಮೀತ್ಯೇವಂ ಜಲ್ಪಂತಿ ಕಾಶ್ಚನ ॥ ೨೨ ॥

ಅಹೋ ಪುಣ್ಯವತೀ ದುರ್ಗಾ ಶ್ಲಾಘ್ಯತೇ ಜನ್ಮ ಭಾರತೇ ।
ಯಸ್ಯಾ ಅಯಂ ಶಿವಃ ಸ್ವಾಮೀತ್ಯೇವಂ ಜಲ್ಪಂತಿ ಕಾಶ್ಚನ ॥ ೨೩ ॥

ಮುದಾ ಮೇನಾ ಶಿವಂ ದೃಷ್ಟ್ವಾ ಗೃಹಂ ತಾಭಿರ್ಜಗಾಮ ಹ ।
ಶಿವಂ ಸಂಪೂಜ್ಯ ಶೈಲೇಂದ್ರಃ ಪ್ರಣಮ್ಯ ಸ್ವಗೃಹಂ ಯಯೌ ॥ ೨೪ ॥

---

೨೦. ಬೇರೆ ಕೆಲವರು ಸ್ತ್ರೀಯರು ಈಶ್ವರನನ್ನು ನೋಡಿ ಸೆರಗಿನಿಂದ ಮುಖವನ್ನು ಸ್ವಲ್ಪ ಮುಚ್ಚಿಕೊಂಡು ಮುಗುಳು ನಗೆಯನ್ನು ಬೀರುತ್ತ ಓರೆಗಣ್ಣಿನಿಂದ ಮತ್ತೆ ಮತ್ತೆ ನೋಡುತ್ತಿದ್ದರು.

೨೧–೨೨. ಕೆಲವರು, ನಾವು ಮನೆಗೆ ಹೋಗುವುದಿಲ್ಲ, ಈಶ್ವರನ ಸಮೀಪಕ್ಕೆ ಹೋಗುತ್ತೇವೆ. ಹಗಲು ರಾತ್ರಿಗಳಲ್ಲಿಯೂ ಶರತ್ಕಾಲದ ಚಂದ್ರನಂತೆ ಸುಂದರವಾದ ಮುಖವುಳ್ಳ ಶಂಕರನನ್ನು ಆನಂದದಿಂದ ನೋಡುವೆವು. ನಾವು ಈ ಸಂಸಾರವನ್ನು ಮಾಡುವುದಿಲ್ಲ. ಅಗ್ನಿಯನ್ನು ಪ್ರವೇಶಿಸುತ್ತೇವೆ. ಮುಂದಾದರೂ ನಮಗೆ ಶಿವನೇ ಪತಿಯಾಗುವನು ಎಂಬುದಾಗಿ ಹೇಳಿಕೊಂಡರು.

೨೩. ಇನ್ನೂ ಕೆಲವರು, ದುರ್ಗಾದೇವಿಯು (ಪಾರ್ವತಿಯು) ಬಹಳ ಪುಣ್ಯವಂತಳು. ಆವಳು ಈ ಶಿವನನ್ನು ಪತಿಯನ್ನಾಗಿ ಪಡೆದು ಭರತಖಂಡದಲ್ಲಿ ತನ್ನ ಜನ್ಮವನ್ನು ಹೊಗಳಿಸಿಕೊಳ್ಳುತ್ತಲಿದ್ದಾಳೆ ಎಂದು ಹೇಳಿದರು.

೨೪. ಮೇನಾದೇವಿಯು ಈಶ್ವರನನ್ನು ಸಂದರ್ಶನಮಾಡಿ ಆ ಸ್ತ್ರೀಯರಿಂದೊಡಗೂಡಿದವಳಾಗಿ ಮನೆಗೆಹೋದಳು. ಹಿಮವಂತನೂ ಸಹ ಈಶ್ವರನನ್ನು ಪೂಜಿಸಿ ನಮಸ್ಕಾರಮಾಡಿ ತನ್ನ ಮನೆಗೆ ಬಂದನು.

ಕೃತ್ವಾನುಮಾನಂ ರಹಸಿ ಗಿರೀಶೋ ಮೇನಯಾ ಸಹ ।
ದುರ್ಗಾಂ ಪ್ರಸ್ಥಾಪಯಾಮಾಸ ಶಿವಾಯ ಶಿವಸನ್ನಿಧಿಂ ॥ ೨೫ ॥

ಪಾರ್ವತೀ ಸಖಿಭಿಃ ಸಾರ್ಧಂ ವೇಷಂ ಕೃತ್ವಾ ಮನೋಹರಂ ।
ಭಾವಾನುರಕ್ತಾ ಹರ್ಷೇಣ ಜಗಾಮ ಶಿವಸನ್ನಿಧಿಂ ॥ ೨೬ ॥

ದೃಷ್ಟ್ವಾ ಶಿವಾ ಶಿವಂ ಶಾಂತಂ ಪ್ರಸನ್ನವದನೇಕ್ಷಣಂ ।
ಸಪ್ತಪ್ರದಕ್ಷಿಣಂ ಕೃತ್ವಾ ಸಸ್ಮಿತಾ ಪ್ರಣನಾಮ ಸಾ ॥ ೨೭ ॥

ಅನನ್ಯಭಾವಂ ಗುಣಿನಮಪರಂ ಜ್ಞಾನಿನಾಂ ವರಂ ।
ಸುಂದರಂ ಲಭ ಭರ್ತಾರಂ ಸುಂದರೀತ್ಯಾಶಿಷಂ ದದೌ ॥ ೨೮ ॥

ಭವಿತಾ ತವ ಸೌಭಾಗ್ಯಂ ಶುಭೇ ಸ್ವಾಮಿನಿ ಸಂತತಂ ।
ಪುತ್ರಸ್ತೇ ಭವಿತಾ ಸಾಧ್ವೀ ನಾರಾಯಣಸಮೋ ಗುಣೈಃ ॥ ೨೯ ॥

---

೨೫. ಪರ್ವತರಾಜನಾದ ಹಿಮವಂತನು ಏಕಾಂತದಲ್ಲಿ ಮೇನಾದೇವಿಯೊಡನೆ ಸಮಾಲೋಚಿಸಿ ಪಾರ್ವತಿಯನ್ನು ಈಶ್ವರನ ಸನ್ನಿಧಿಗೆ ಕಳುಹಿಸಿದನು.

೨೬. ಪಾರ್ವತಿಯು ತನ್ನ ಗೆಳತಿಯರೊಡನೆ, ಚೆನ್ನಾಗಿ ಅಲಂಕಾರವನ್ನು ಮಾಡಿಕೊಂಡು ಶೃಂಗಾರಭಾವದಿಂದ ಅನುರಾಗ ಹೊಂದಿದವಳಾಗಿ ಸಂತೋಷದಿಂದ ಈಶ್ವರನಿದ್ದಲ್ಲಿಗೆ ಹೊರಟಳು.

೨೭. ಪಾರ್ವತಿಯು ಶಾಂತನಾಗಿಯೂ, ಶಾಂತಿಯಿಂದ ಕೂಡಿದ ಮುಖ ಮತ್ತು ನೋಟವುಳ್ಳವನಾಗಿಯೂ ಇರುವ ಶಿವನನ್ನು ನೋಡಿ ಮುಗುಳು ನಗೆಯನ್ನು ಬೀರುತ್ತ ಏಳು ಪ್ರದಕ್ಷಿಣೆಗಳನ್ನು ಮಾಡಿ ನಮಸ್ಕರಿಸಿದಳು.

೨೮. ಎಲೈ ಸುಂದರಿಯೇ, ನನ್ನಲ್ಲಿಯೇ ಅನುರಾಗವುಳ್ಳ ಗುಣವಂತನೂ ತನಗೆಣೆಯಿಲ್ಲದವನೂ, ಜ್ಞಾನಿಗಳಲ್ಲಿ ಶ್ರೇಷ್ಠನೂ, ಸುಂದರನೂ ಆದ ಗಂಡನನ್ನು ಹೊಂದು. ಎಂಬುದಾಗಿ ಶಿವನು ಆಶೀರ್ವಾದವನ್ನು ಮಾಡಿದನು.

೨೯–೩೨. ಎಲೈ ಮಂಗಳಕರಳೇ, ನಿನಗೆ ಯಾವಾಗಲೂ ಸೌಭಾಗ್ಯವುಂಟಾಗುವುದು. ಎಲೈ ಪತಿವ್ರತಾಶಿರೋಮಣಿಯೇ, ನಿನಗೆ ಸದ್ಗುಣಗಳಿಂದ ನಾರಾಯಣ

ಭವಿತಾ ತೇ ಪರಾ ಪೂಜಾ ತ್ರೈಲೋಕ್ಯೇ ಜಗದಂಬಿಕೇ ।
ಬ್ರಹ್ಮಾಂಡೇಷು ಚ ಸರ್ವೇಷು ಸರ್ವೇಷಾಂ ಚ ಪರಾ ಭವ ॥ ೩೦ ॥

ಸಪ್ತಪ್ರದಕ್ಷಿಣಾಃ ಕೃತ್ವಾ ಯತೋ ಭಕ್ತ್ಯಾ ತ್ವಯಾ ನತಂ ।
ಸಪ್ತಜನ್ಮನಿ ತುಷ್ಟೋಽಹಂ ತತ್ಫಲಂ ಲಭ ಸುಂದರಿ ॥ ೩೦ ॥

ತೀರ್ಥೇ ಕಾಂತೇಽಭೀಷ್ಟದೇವೇ ಗುರೌ ಮಂತ್ರೇ ತಥೌಷಧೇ ।
ಆಸ್ಥಾ ಚ ಯಾದೃಶೀ ಯಾಸಾಂ ಸಿದ್ಧಿಸ್ತಾಸಾಂ ಚ ತಾದೃಶೀ ॥ ೩೨ ॥

ಇತ್ಯುಕ್ತ್ವಾ ಶಂಕರಸ್ತೂರ್ಣಂ ಬ್ರಹ್ಮಜ್ಯೋತಿಃ ಪರಂ ಚ ಮಾಂ ।
ದಧ್ಯೌ ಯೋಗಾಸನಂ ಕೃತ್ವಾ ಯೋಗೀಶೋ ವ್ಯಾಘ್ರಚರ್ಮಣಿ ॥ ೩೩ ॥

ಪ್ರಕ್ಷಾಲ್ಯ ಚರಣೌ ದೇವೀ ಪಪೌ ತಚ್ಚರಣೋದಕಂ ।
ಚಕಾರ ಮಾರ್ಜನಂ ಭಕ್ತ್ಯಾ ವಹ್ನಿಶೌಚೇನ ವಾಸಸಾ ॥ ೩೪ ॥

ನಿಗೆ ಸಮನಾದ ಮಗನು ಹುಟ್ಟುವನು. ಎಲೌ ಲೋಕಮಾತೆಯೇ, ನಿನಗೆ ಮೂರು ಲೋಕಗಳಲ್ಲಿಯೂ ಶ್ರೇಷ್ಠವಾದ ಪೂಜೆಯು ದೊರೆಯುವುದು. ನೀನು ಸಕಲ ಬ್ರಹ್ಮಾಂಡಗಳಲ್ಲಿಯೂ ಎಲ್ಲರಿಗಿಂತಲೂ ಶ್ರೇಷ್ಠಳಾಗು. ನೀನು ನನಗೆ ಏಳು ಪ್ರದಕ್ಷಿಣೆಗಳನ್ನು ಮಾಡಿ ಭಕ್ತಿಯಿಂದ ನಮಸ್ಕಾರಮಾಡಿರುವೆಯಾದಕಾರಣ ನಾನು ಸಂತೋಷಗೊಂಡಿರುವೆನು. ಎಲೈ ಸುಂದರಿಯೇ, ಅದರ ಫಲವನ್ನು ನೀನು ಏಳು ಜನ್ಮಗಳಲ್ಲಿ ಹೊಂದು. ಉತ್ತಮ ತೀರ್ಥದಲ್ಲಿಯೂ, ಪತಿಯಲ್ಲಿಯೂ, ಮನದೇವರಲ್ಲಿಯೂ, ಗುರುವಿನಲ್ಲಿಯೂ, ಮಂತ್ರದಲ್ಲಿಯೂ ಮತ್ತು ಔಷಧದಲ್ಲಿಯೂ ಯಾರಿಗೆ ಯಾವ ವಿಧವಾದ ನಂಬಿಕೆಯು ಇರುತ್ತದೆಯೋ ಅವರಿಗೆ ಅದಕ್ಕೆ ತಕ್ಕಂತೆ ಸಿದ್ಧಿಯು ದೊರೆಯುವುದು.

೩೩. ಹೀಗೆಂದು ಹೇಳಿ ಪರಂಜ್ಯೋತಿಸ್ವರೂಪನೂ ಯೋಗೀಶ್ವರನೂ ಆದ ಶಂಕರನು ಹುಲಿಯ ಚರ್ಮದ ಮೇಲೆ ಯೋಗಾಸನವನ್ನು ಹಾಕಿಕೊಂಡು ನನ್ನನ್ನು ಧ್ಯಾನಮಾಡಿದನು.

೩೪. ಪಾರ್ವತಿಯು ಶಂಕರನ ಕಾಲುಗಳನ್ನು ತೊಳೆದು ಆ ಪಾದೋದಕವನ್ನು ಕುಡಿದಳು. ಮತ್ತು ಶುದ್ಧವಾದ ಬಟ್ಟೆಯಿಂದ ಅವನ ಕಾಲುಗಳನ್ನೊರಸಿದಳು.

ರತ್ನಸಿಂಹಾಸನಂ ರಮ್ಯಂ ವಿಶ್ವಕರ್ಮಾದಿನಿರ್ಮಿತಂ ।
ಅಪೂರ್ವಂ ಕಾಂಸ್ಯಪಾತ್ರಸ್ಥಂ ನೈವೇದ್ಯಂ ಪ್ರದದೌ ಕಿಲ || ೩೫ ||

ಅರ್ಘ್ಯಂ ಮಂದಾಕಿನೀ ತೋಯಸಂಯುಕ್ತಂ ಚರಣೇ ದದೌ ।
ಸುಗಂಧಿಚಂದನಂ ಚಾರು ಕಸ್ತೂರೀಕುಂಕುಮಾನ್ವಿತಂ ।
ಪ್ರದದೌ ಮಾಲತೀಮಾಲಾಂ ಗಲೇ ಗರಲಸುಂದರೇ || ೩೬ ||

ಭಕ್ತ್ಯಾ ಪೂಜಾಂ ಚಕಾರಾಥ ಪುಷ್ಪವೃಷ್ಟಿಂ ಚ ತುಷ್ಟಯೇ ।
ಪೀಯೂಷಂ ಸ್ವರ್ಣಪಾತ್ರಸ್ಥಂ ಪ್ರದದೌ ಮಧುರಂ ಮಧು || ೩೭ ||

ರತ್ನಪ್ರದೀಪಶತಕಂ ಸಮಂತಾದ್ಧೂಪಮುತ್ತಮಂ ।
ತ್ರೈಲೋಕ್ಯದುರ್ಲಭಂ ವಸ್ತ್ರಂ ಸ್ವರ್ಣಯಜ್ಞೋಪವೀತಕಂ || ೩೮ ||

ಸುಗಂಧಿಶೀತತೋಯಂ ಚ ಪಾನಾರ್ಥಂ ಪಾರ್ವತೀ ದದೌ ।
ಅತೀವ ಸುಂದರಂ ರಮ್ಯಂ ರತ್ನಸಾರೇಂದ್ರಭೂಷಣಂ || ೩೯ ||

---

೩೫. ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಮನೋಹರವಾದ ರತ್ನಸಿಂಹಾಸನವನ್ನೂ, ಕಂಚಿನ ಪಾತ್ರೆಯಲ್ಲಿರಿಸಿದ ಉತ್ತಮವಾದ ನೈವೇದ್ಯವನ್ನೂ ಕೂಡ ಅರ್ಪಿಸಿದಳು.

೩೬. ಗಂಗಾಜಲದಿಂದ ಮಿಶ್ರಿತವಾದ ಅರ್ಘ್ಯವನ್ನು ಅವನ ಕಾಲುಗಳಲ್ಲಿ ಅರ್ಪಿಸಿದಳು. ಕೇಸರಿ ಮತ್ತು ಕಸ್ತೂರಿಗಳಿಂದ ಕೂಡಿದ ಮನೋಹರವಾದ ಗಂಧವನ್ನೂ, ಮಾಲತೀ ಹೂವಿನ ಹಾರವನ್ನೂ ಸಹ ವಿಷದಿಂದ ಸುಂದರವಾದ ಶಿವನ ಕತ್ತಿನಲ್ಲಿ ಸಮರ್ಪಿಸಿದಳು.

೩೭. ಭಕ್ತಿಯಿಂದ ಪೂಜೆಮಾಡಿ ಹೂವಿನ ಮಳೆಯನ್ನು ಕರೆದು ಸ್ತೋತ್ರ ಮಾಡಿದಳು. ಚಿನ್ನದ ಪಾತ್ರೆಯಲ್ಲಿ ರುಚಿಯಾದ ಅಮೃತವನ್ನು ಇಟ್ಟು ಮಧು ಸಮರ್ಪಣೆಯನ್ನು ಮಾಡಿದಳು.

೩೮-೩೯. ನೂರಾರು ರತ್ನಮಯವಾದ ದೀಪಗಳನ್ನೂ, ಎಲ್ಲೆಡೆಯಲ್ಲಿಯೂ ಉತ್ತಮವಾದ ಧೂಪವನ್ನೂ, ಮೂರು ಲೋಕದಲ್ಲಿಯೂ ದೊರೆಯದ ಉತ್ತಮವಾದ ವಸ್ತ್ರವನ್ನೂ, ಚಿನ್ನದ ಜನಿವಾರವನ್ನೂ, ಸಮರ್ಪಿಸಿ ಕುಡಿಯಲು ಸುವಾಸನೆಯಾಗಿಯೂ ತಣ್ಣಗೂ ಇರುವ ನೀರನ್ನು ಪಾರ್ವತಿಯು ಕೊಟ್ಟಳು. ಮತ್ತು ಅತಿಸುಂದರವೂ, ಮನೋಹರವೂ ಆದ ಶ್ರೇಷ್ಠ ರತ್ನಾಭರಣವನ್ನು ಅರ್ಪಿಸಿದಳು.

ಮುಲ್ಲಭಾಂ ಕಾಮಧೇನುಂ ಚ ಸ್ವರ್ಣಶೃಂಗಸಮನ್ವಿತಾಂ ।
ಸ್ನಾನೀಯಂ ತೀರ್ಥತೋಯಂ ಚ ತಾಂಬೂಲಂ ಚ ಮನೋಹರಂ ॥ ೪೦ ॥

ದತ್ತ್ವಾ ಷೋಡಶೋಪಚಾರಂ ಪ್ರಣನಾಮ ಪುನಃ ಪುನಃ ।
ಸಂಪೂಜ್ಯ ಶೂಲಿನಂ ಭಕ್ತ್ಯಾ ಯಯೌ ನಿತ್ಯಂ ಪಿತುರ್ಗೃಹಂ ॥ ೪೧ ॥

ಶುಶ್ರಾವಾಪ್ಸರಸಾಂ ವಕ್ತ್ರಾದ್ದೇವೀಮಿಂದ್ರೋ ಮಹೇಶ್ವರಃ ।
ಶ್ರುತ್ವಾ ವಾರ್ತಾಂ ಶುನಾಸೀರೋ ನನರ್ತ ಹರ್ಷಸಂಯುತಃ ॥ ೪೨ ॥

ದೂತದ್ವಾರಾ ಕಾಮದೇವಮಾನಿನಾಯ ತ್ವರಾನ್ವಿತಃ ।
ಇಂದ್ರಾಜ್ಞಯಾ ಕಾಮದೇವಃ ಪ್ರಜಗಾಮಾಮರಾವತೀಂ ॥ ೪೩ ॥

ತೂರ್ಣಂ ಪ್ರಸ್ಥಾಪಯಾಮಾಸ ತಂ ಚ ಯತ್ರ ಶಿವಃ ಶಿವಾ ।
ಪಂಚಸಾಯಕಸಂಯುಕ್ತೋ ಜಗಾಮ ಪಂಚಸಾಯಕಃ ॥ ೪೪ ॥

೪೦–೪೧. ಚಿನ್ನದ ಕೊಂಬುಗಳುಳ್ಳ ಕಾಮಧೇನುವನ್ನೂ, ಸ್ನಾನಕ್ಕೆ ಯೋಗ್ಯವಾದ ತೀರ್ಥಜಲವನ್ನೂ, ಮನೋಹರವಾದ ತಾಂಬೂಲವನ್ನೂ ಕೊಟ್ಟು ಮತ್ತೆ ನಮಸ್ಕಾರಮಾಡಿದಳು. ಹೀಗೆ ಭಕ್ತಿಯಿಂದ ಪರಮೇಶ್ವರನಿಗೆ ನಿತ್ಯವೂ ಷೋಡಶೋಪಚಾರ ಪೂಜೆಯನ್ನು ಮಾಡಿ ತಂದೆಯ ಮನೆಗೆ ಬರುತ್ತಿದ್ದಳು.

೪೨–೪೩. ಮಹೇಂದ್ರನು ಅಪ್ಸರೆಯರಿಂದ ಪಾರ್ವತಿಯು ಈಶ್ವರನನ್ನು ಸೇವಿಸುತ್ತಿರುವುದನ್ನು ಕೇಳಿ ಆನಂದದಿಂದ ಕುಣಿದನು. ದೂತರನ್ನು ಕಳುಹಿಸಿ ಕಾಮದೇವನನ್ನು ಕರೆಯಿಸಿದನು. ಇಂದ್ರನ ಅಪ್ಪಣೆಯಿಂದ ಕಾಮದೇವನು ಜಾಗ್ರತೆಯಾಗಿ ಅಮರಾವತಿಗೆ ಬಂದನು.

೪೪. ಹೀಗೆ ಬಂದ ಕಾಮದೇವನನ್ನು ಇಂದ್ರನು ಈಶ್ವರ ಮತ್ತು ಪಾರ್ವತಿಯರಿರುವ ಪ್ರದೇಶಕ್ಕೆ ಜಾಗ್ರತೆಯಾಗಿ ಕಳುಹಿದನು. ಮನ್ಮಥನು ಐದು ಬಾಣಗಳನ್ನು ಧರಿಸಿದವನಾಗಿ ಹೊರಟನು.

ಪ್ರಸನ್ನವದನಃ ಶ್ರೀಮಾನ್ಯತ್ರ ಶಕ್ತಿಯುತಃ ಶಿವಃ ।
ಗತ್ವಾ ದದರ್ಶ ಮದನಃ ಶಿವಾಯುಕ್ತಂ ಶಿವಂ ವಿಭುಂ ॥ ೪೫ ॥

ಶಾಂತಂ ತ್ರೈಲೋಕ್ಯಕಾಂತಂ ಚ ಪ್ರಸನ್ನವದನೇಕ್ಷಣಂ ।
ಕಾಮಃ ಸ್ಥಿತೋಽಂತರಿಕ್ಷೇ ಚ ಧೃತ್ವಾ ಚ ಸಶರಂ ಧನುಃ ॥ ೪೬ ॥

ಚಿಕ್ಷೇಪಾಸ್ತ್ರಂ ದುರ್ನಿವಾರ್ಯಮಮೋಘಂ ಶಂಕರೇ ಮುದಾ ।
ಬಭೂವಾಮೋಘಮಸ್ತ್ರಂ ಚ ಮೋಘಂ ತತ್ಪರಮಾತ್ಮನಿ ॥ ೪೭ ॥

ಆಕಾಶ ಇವ ನಿರ್ಲಿಪ್ತೇ ನಿರ್ಲಿಪ್ತೇ ಪರಮಾತ್ಮನಿ ।
ಮೋಘೀಭೂತೇ ಚ ಶಸ್ತ್ರೇ ಚ ಭಯಮಾಪ ಚ ಮನ್ಮಥಃ ॥ ೪೮ ॥

ಚಕಂಪೇ ಪುರತಃ ಸ್ಥಿತ್ವಾ ದೃಷ್ಟ್ವಾ ಮೃತ್ಯುಂಜಯಂ ವಿಭುಂ ।
ಸಸ್ಮಾರ ತ್ರಿದಶಾನ್ ಕಾಮಃ ಶಕ್ರಾದೀನ್ ಭಯವಿಹ್ವಲಃ ॥ ೪೯ ॥

೪೫-೪೬. ಪ್ರಶಾಂತವಾದ ಮುಖವುಳ್ಳವನಾಗಿ ಕಾಂತಿಯಿಂದ ಕೂಡಿದ ಶಕ್ತಿವಿಶಿಷ್ಟನಾದ ಶಿವಸಿದ್ದೆಡೆಗೆ ಮನ್ಮಥನು ಹೋಗಿ ಪಾರ್ವತೀಸಮೇತನೂ, ಜಗದೊಡೆಯನೂ, ಶಾಂತನೂ, ಮೂರುಲೋಕದಲ್ಲಿಯೂ ಸುಂದರನೂ, ಪ್ರಶಾಂತವಾದ ನೋಟವುಳ್ಳವನೂ ಆದ ಶಿವನನ್ನು ಕಂಡನು. ಮತ್ತು ಮನ್ಮಥನು ಆಕಾಶದಲ್ಲಿಯೇ ಬಾಣಗಳಿಂದ ಕೂಡಿದ ಬಿಲ್ಲನ್ನು ಹಿಡಿದು ನಿಂತನು.

೪೭. ಮನ್ಮಥನು ಸಂತೋಷದಿಂದ ಯಾರಿಂದಲೂ ತಡೆಯಲಸಾಧ್ಯವಾದ ಮತ್ತು ವ್ಯರ್ಥವಾಗದ ಅಸ್ತ್ರವನ್ನು ಶಂಕರನ ಮೇಲೆ ಎಸೆದನು. ಅಮೋಘವಾದ ಅಸ್ತ್ರವೂ ಕೂಡ ಪರಮಾತ್ಮನಲ್ಲಿ ವ್ಯರ್ಥವಾಯಿತು.

೪೮-೪೯. ಆಕಾಶದಂತೆ ನಿರ್ಲಿಪ್ತನಾದ ಪರಮಾತ್ಮನಲ್ಲಿ ತನ್ನ ಶಸ್ತ್ರವು ವ್ಯರ್ಥವಾದುದನ್ನು ನೋಡಿ ಮನ್ಮಥನು ಭಯಗೊಂಡನು. ಮತ್ತು ಎದುರಿನಲ್ಲಿ ನಿಂತಿದ್ದ ಮೃತ್ಯುಂಜಯನನ್ನು ನೋಡಿ ಭಯದಿಂದ ನಡುಗಿದವನಾಗಿ ಇಂದ್ರನೇ ಮೊದಲಾದ ದೇವತೆಗಳನ್ನು ನೆನೆದನು.

ಆಯಯುರ್ದೇವತಾಃ ಸರ್ವಾಃ ಶಂಭುಕೋಪೇನ ವೇಪಿತಾಃ ।
ಚಕ್ರುಃ ಸ್ತುತಿಂ ಚ ಸ್ತೋತ್ರೇಣ ಶಂಕರಂ ತ್ರಿದಶೇಶ್ವರಂ ॥ ೫೦ ॥

ಕೋಪಾಗ್ನಿಮುದ್ಗಿರಂತಂ ತಂ ಕಪಾಲಲೋಚನಾದಹೋ ।
ಸ್ತುತಿಂ ಕುರ್ವತ್ಸು ದೇವೇಷು ಸ ವಹ್ನಿಃ ಶಂಭುಸಂಭವಃ ॥ ೫೧ ॥

ಜಜ್ವಾಲೋರ್ಧ್ವಶಿಖೋ ದೀಪ್ತಃ ಪ್ರಲಯಾಗ್ನಿಶಿಖೋಪಮಃ ।
ಉತ್ಪತ್ಯ ಗಗನೇ ಘೂರ್ಣನ್ನಿಪತ್ಯ ಧರಣೀತಲೇ ॥ ೫೨ ॥

ಭ್ರಾಮಂ ಭ್ರಾಮಂ ಚ ಪರಿತಃ ಪಪಾತ ಮದನೋಪರಿ ।
ಬಭೂವ ಭಸ್ಮಸಾತ್ಕಾಮಃ ಕ್ಷಣೇನ ಹರಕೋಪತಃ ॥ ೫೩ ॥

ವಿಷಣ್ಣಾ ದೇವತಾಃ ಸರ್ವಾಃ ನತವಕ್ತ್ರಾ ಚ ಪಾರ್ವತೀ ।
ವಿಲಲಾಪ ಬಹುತರಂ ಹರಸ್ಯ ಪುರತೋ ರತಿಃ ॥ ೫೪ ॥

---

೫೦. ದೇವತೆಗಳೆಲ್ಲರೂ ಈಶ್ವರನ ಕೋಪದಿಂದ ನಡುಗಿದವರಾಗಿ ಓಡಿ ಬಂದರು. ದೇವದೇವನಾದ ಆ ಶಂಕರನನ್ನು ನಾನಾಬಗೆಯಾಗಿ ಸ್ತೋತ್ರಮಾಡಿದರು.

೫೧-೫೩. ಹಣೆಗಣ್ಣಿನಿಂದ ಕೋಪಾಗ್ನಿಯನ್ನು ಉಗುಳುತ್ತಿರುವ ಆ ಶಂಕರನನ್ನು, ದೇವತೆಗಳು ಸ್ತೋತ್ರಮಾಡುತ್ತಿರಲು ಈಶ್ವರನ ಫಾಲನೇತ್ರದಿಂದ ಹುಟ್ಟಿದ ಆ ಬೆಂಕಿಯು ಪ್ರಳಯಕಾಲದ ಬೆಂಕಿಯ ಜ್ವಾಲೆಯಂತೆ ಮೇಲ್ಮುಖವಾಗಿ ಉರಿಯಿತು. ಮತ್ತು ಧಗಧಗಿಸುತ್ತ ಆಕಾಶಕ್ಕೆ ಹಾರಿ ಭೂಮಿಯ ಮೇಲೆ ಬಿದ್ದು ಸುತ್ತಲೂ ಸುಳಿಯುತ್ತ ಸುಳಿಯುತ್ತ ಮನ್ಮಥನ ಮೇಲೆ ಬಿದ್ದಿತು. ಆ ಕ್ಷಣವೇ ಮನ್ಮಥನು ಈಶ್ವರನ ಕೋಪದಿಂದ ಸುಟ್ಟು ಬೂದಿಯಾದನು.

೫೪. ಆಗ ದೇವತೆಗಳೆಲ್ಲರೂ ವ್ಯಥೆಗೊಂಡರು. ಪಾರ್ವತಿಯು ತಲೆಯನ್ನು ಬಾಗಿಸಿ ನಿಂತಳು. ರತೀದೇವಿಯು ಪರಮೇಶ್ವರನ ಮುಂದೆ ನಾನಾರೀತಿಯಿಂದ ದುಃಖಪಟ್ಟಳು.

ತುಷ್ಟುವುರ್ದೇವತಾಃ ಸರ್ವಾಃ ಕಂಪಿತಾಶ್ಚಂದ್ರಶೇಖರಂ |
ರತಿಮೂಚುಃ ಸುರಾಃ ಸರ್ವೇ ರುರುದುಶ್ಚ ಮುಹುರ್ಮುಹುಃ || ೫೫ ||

ಕಿಂಚಿದ್ಭಸ್ಮ ಗೃಹೀತ್ವಾ ಚ ರಕ್ಷ ಮಾತರ್ಭಯಂ ತ್ಯಜ |
ವಯಂ ತಂ ಜೀವಯಿಷ್ಯಾಮೋ ಲಭಿಷ್ಯಸಿ ಪ್ರಿಯಂ ಪುನಃ || ೫೬ ||

ಹರಕೋಪಾಪನಯನೇ ಸುಪ್ರಸನ್ನೇ ದಿನೇ ತಥಾ |
ದೃಷ್ಟ್ವಾ ರತೇರ್ವಿಲಾಪಂ ಚ ಮೂರ್ಛಾಂ ಸಂಪ್ರಾಪ ಪಾರ್ವತೀ || ೫೭ ||

ಅತೀಂದ್ರಿಯಂ ಗುಣಾತೀತಂ ತುಷ್ಟಾವ ಚಂದ್ರಶೇಖರಂ |
ರುದಂತೀಂ ಪಾರ್ವತೀಂ ತ್ಯಕ್ತ್ವಾ ಸ್ವಸ್ಥಾನಂ ಪ್ರಯಯೌ ಶಿವಃ || ೫೮ ||

ಸದ್ಯೋ ಬಭೂವ ತತ್ರೈವ ಪಾರ್ವತೀ ದರ್ಪಮೋಕ್ಷಣಂ |
ರೂಪಯೌವನಯೋರ್ಗರ್ವಂ ತತ್ಯಾಜ ಶೈಲಕನ್ಯಕಾ || ೫೯ ||

೫೫-೫೭. ದೇವತೆಗಳೆಲ್ಲರೂ ನಡುಗುತ್ತ ಚಂದ್ರಶೇಖರನನ್ನು ಸ್ತೋತ್ರ ಮಾಡಿ ಮತ್ತೆ ಮತ್ತೆ ಅತ್ತರು. ಕೊನೆಗೆ ರತಿಯನ್ನು ಕುರಿತು 'ತಾಯಿಯೇ ಹೆದರಬೇಡ, ಇದರಲ್ಲಿ ಸ್ವಲ್ಪ ಬೂದಿಯನ್ನು ತೆಗೆದುಕೊಂಡು ಕಾಪಾಡುತ್ತಿರು. ಕೆಲವು ದಿನಗಳು ಕಳೆದನಂತರ ಪರಮೇಶ್ವರನ ಕೋಪವು ಶಾಂತವಾಗಲು ನೀನು ಮತ್ತೆ ನಿನ್ನ ಪತಿಯನ್ನು ಪಡೆಯುವೆ. ನಾವು ಅವನನ್ನು ಬದುಕಿಸುತ್ತೇವೆ' ಎಂದು ಹೇಳಿದರು. ರತಿಯು ಗೋಳಾಡುತ್ತಿರುವುದನ್ನು ಕಂಡು ಪಾರ್ವತಿಯು ಮೂರ್ಛೆ ಹೊಂದಿದಳು.

೫೮. ಪಾರ್ವತಿಯು ಇಂದ್ರಿಯಗಳಿಗೆ ಗೋಚರಿಸದವನೂ, ನಿರ್ಗುಣನೂ ಆದ ಚಂದ್ರಶೇಖರನನ್ನು ಸ್ತೋತ್ರಮಾಡಿದಳು. ಅಳುತ್ತಿರುವ ಪಾರ್ವತಿಯನ್ನು ಬಿಟ್ಟು ಈಶ್ವರನು ತನ್ನ ವಾಸಸ್ಥಾನವನ್ನು ಸೇರಿದನು.

೫೯-೬೦. ಆಗಲೇ ಪಾರ್ವತಿಯ ಅಹಂಕಾರವೂ ನಾಶವಾಯಿತು. ಪಾರ್ವತಿಯು ತನ್ನ ಸೌಂದರ್ಯ ಮತ್ತು ಯೌವನಗಳ ವಿಷಯದಲ್ಲಿ ತನಗಿದ್ದ ಗರ್ವವನ್ನು ಆಕ್ಷಣವೇ ಬಿಟ್ಟಳು. ಅವಳಿಗೆ ತನ್ನ ಮುಖವನ್ನು ಸಖಿಯರಿಗೆ ತೋರಿಸ

ಮುಖಂ ದರ್ಶಯಿತುಂ ಲಜ್ಜಾ ತದ್ಬಭೂವ ಸಖೀಗಣೇ ।
ಸುರಾಶ್ಚ ರತಿಮಾಶ್ವಾಸ್ಯ ಸರ್ವೇ ಜಗ್ಮುಃ ಸ್ವಮಂದಿರಂ ॥ ೬೦ ॥

ಪ್ರಣಮ್ಯ ದಂಡವದ್ರುದ್ರಂ ಶೋಕಾದುದ್ವಿಗ್ನಮಾನಸಾಃ ।
ಸ್ತುತ್ವಾ ರುದಿತ್ವಾ ಶೋಕೇನ ಭಯೇನ ಕಾಮಕಾಮಿನೀ ॥ ೬೧ ॥

ಕೋಪರಕ್ತೇಕ್ಷಣಂ ರುದ್ರಂ ರಾಧಿಕೇ ಸ್ವಾಲಯಂ ಯಯೌ ।
ನ ಜಗಾಮ ಪಿತುರ್ಗೇಹಂ ಪಾರ್ವತೀ ಸಾತು ಲಜ್ಜಯಾ ॥ ೬೨ ॥

ಸ್ವಾಲಿಭಿರ್ವಾರ್ಯಮಾಣಾಪಿ ಜಗಾಮ ತಪಸೇ ವನಂ ।
ಪ್ರಜಗ್ಮುಃ ಸಹಚಾರಿಣ್ಯಸ್ತತ್ಪಶ್ಚಾಚ್ಛೋಕವಿಹ್ವಲಾಃ ॥ ೬೩ ॥

ಮಾತೃಭಿರ್ವಾರ್ಯಮಾಣಾ ಸಾ ಸ್ವರ್ಣದೀತೀರಜಂ ವನಂ ।
ಸುಚಿರಂ ಚ ತಪಸ್ತಪ್ತ್ವಾ ಸಾ ಸಂಪ್ರಾಪ ತ್ರಿಲೋಚನಂ ॥ ೬೪ ॥

ಲಾಗದಷ್ಟು ನಾಚಿಕೆಯಾಯಿತು. ದೇವತೆಗಳೆಲ್ಲರೂ ರತಿಯನ್ನು ಸಮಾಧಾನಮಾಡಿ ಈಶ್ವರನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ದುಃಖದಿಂದ ಖಿನ್ನರಾಗಿ ತಮ್ಮ ಸ್ಥಳಗಳಿಗೆ ಹೊರಟುಹೋದರು. ಎಲೌ ರಾಧೆಯೇ, ರತೀದೇವಿಯು ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ರುದ್ರನನ್ನು ಸ್ತೋತ್ರಮಾಡಿ ದುಃಖದಿಂದ ಅಳುತ್ತ ಭಯಗೊಂಡವಳಾಗಿ ತನ್ನ ಮನೆಯನ್ನು ಸೇರಿದಳು. ಪಾರ್ವತಿಯಾದರೋ ನಾಚಿಕೆಯಿಂದ ತಂದೆಯ ಮನೆಗೆ ಹೋಗಲಿಲ್ಲ.

೬೩. ತನ್ನ ಸಖಿಯರು ಎಷ್ಟು ತಡೆದರೂ ಕೇಳದೆ ತಪಸ್ಸನ್ನು ಮಾಡುವುದಕ್ಕಾಗಿ ಕಾಡಿಗೆ ಹೋದಳು. ಸಖಿಯರು ದುಃಖಗೊಂಡವರಾಗಿ ಅವಳ ಹಿಂದೆಯೇ ಹೊರಟರು.

೬೪. ತಾಯಿಯು ತಡೆದರೂ ಕೇಳದೆ ಆ ಪಾರ್ವತಿಯು ದೇವಗಂಗಾ ನದಿಯ ದಡದಲ್ಲಿರುವ ವನವನ್ನು ಸೇರಿ ಅಲ್ಲಿ ಬಹಳಕಾಲ ತಪಸ್ಸನ್ನು ಮಾಡಿ ತ್ರಿಲೋಚನನಾದ ಶಂಕರನನ್ನು ಪಡೆದಳು.

ರತಿಃ ಸಂಪ್ರಾಪ ಮದನಂ ಶಂಕರಸ್ಯ ವರೇಣ ಚ ।
ಇತ್ಯೇವಂ ಕಥಿತಂ ಸರ್ವಂ ಪಾರ್ವತೀ ದರ್ಪಮೋಕ್ಷಣಂ ।
ನಿಗೂಢಚರಿತಂ ರಾಧೇ ಕಿಂ ಭೂಯಃ ಶ್ರೋತುಮಿಚ್ಛಸಿ　　॥ ೬೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ಪೂರ್ವಾರ್ಧೇ ನಾರದನಾರಾಯಣ ಸಂವಾದೇ ಪಾರ್ವತೀದರ್ಪಭಂಗೋ ನಾಮೈಕೋನ ಚತ್ವಾರಿಂಶೋಽಧ್ಯಾಯಃ

---

೬೫. ಶಂಕರನ ವರಪ್ರಸಾದದಿಂದ ರತಿಯೂ ಸಹ ಮನ್ಮಥನನ್ನು ಹೊಂದಿದಳು. ಎಲೌ ರಾಧೆಯೇ, ಈ ಪ್ರಕಾರವಾಗಿ ಪಾರ್ವತಿಯ ದರ್ಪಭಂಗದ ವಿಷಯವಾದ ರಹಸ್ಯಚರಿತ್ರೆಯನ್ನೆಲ್ಲವನ್ನೂ ಹೇಳಿರುವೆನು. ಮತ್ತೆ ಏನನ್ನು ಕೇಳಲಪೇಕ್ಷಿಸುತ್ತೀಯೆ ಎಂದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ರಾಧಾಕೃಷ್ಣಸಂವಾದದಲ್ಲಿ ಪಾರ್ವತೀದರ್ಪಭಂಗವೆಂಬ
ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

ಮೂವತ್ತೊಂಭತ್ತನೆಯ ಅಧ್ಯಾಯದ ಸಾರಾಂಶ.

ಇತ್ತ ಹಿಮವಂತನ ಪತ್ನಿಯಾದ ಮೇನೆಯೂ ಸಹ ತನ್ನ ಪರಿವಾರದೊಡನೆ ಶಂಕರನ ಸಮೀಪಕ್ಕೆ ಹೋಗಿ ಭಕ್ತಿಯಿಂದ ಪೂಜಿಸಿ ಸತ್ಕರಿಸಿದಳು. ಅನಂತರ ಹಿಮವಂತನೂ ಮೇನೆಯೂ ಮನೆಗೆ ಹಿಂತಿರುಗಿ ಪರಮೇಶ್ವರನ ಸೇವೆಗಾಗಿ ಪಾರ್ವತಿಯನ್ನು ಕಳುಹಿಸಿದರು. ಈ ಸುಸಂಧಿಯನ್ನರಿತ ದೇವೇಂದ್ರನು ಶಿವನ ಮನಸ್ಸನ್ನು ಚಂಚಲಗೊಳಿಸಲು ಕಾಮದೇವನನ್ನು ಕಳುಹಿಸಿದನು. ಆ ಮನ್ಮಥನು ಸಮಯವರಿತು ತನ್ನ ಪುಷ್ಪಬಾಣವನ್ನು ಶಿವನ ಮೇಲೆ ಪ್ರಯೋಗಿಸಲು ಕುಪಿತನಾದ ಶಿವನು ತನ್ನ ಫಾಲನೇತ್ರವನ್ನು ತೆರೆದು ಅದರಿಂದ ಹೊರಬಂದ ಅಗ್ನಿಯಿಂದ ಮನ್ಮಥನನ್ನು ಭಸ್ಮಮಾಡಿದನು. ಸೌಂದರ್ಯಗರ್ವಿತಳಾದ ಪಾರ್ವತಿಯ ಅಭಿಮಾನ ಭಂಗವಾಯಿತು. ಶಿವನು ಆ ಪ್ರದೇಶದಿಂದ ಅಂತರ್ಧಾನನಾಗಲು ಪಾರ್ವತಿಯು ದುಃಖಿತಳಾಗಿ, ಉಗ್ರವಾದ ತಪಸ್ಸನ್ನು ಕೈಗೊಂಡು ಶಿವನನ್ನು ಒಲಿಸಿಕೊಂಡಳು. ಶಿವನೂ ಸಹ ಪಾರ್ವತಿಯ ಮನೋದಾರ್ಢ್ಯವನ್ನು ಮೆಚ್ಚಿ ಆಕೆಗೆ ತನ್ನ ಅರ್ಧಶರೀರವನ್ನು ಅನುಗ್ರಹಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಚತ್ವಾರಿಂಶೋಽಧ್ಯಾಯಃ ॥

॥ ರಾಧಿಕೋವಾಚ ॥

ಅಹೋ ವಿಚಿತ್ರಂ ಚರಿತಮಪೂರ್ವಂ ಕಿಂ ಶ್ರುತಂ ವಿಭೋ ।
ಸುಂದರಂ ಶ್ರುತಿಪೀಯೂಷಂ ನಿಗೂಢಂ ಜ್ಞಾನಕಾರಣಂ ॥ ೧ ॥

ನ ವಿಶೇಷಂ ಸಮಾಸಂ ಚ ಶ್ರುತಂ ನ ವ್ಯಾಸಮೀಪ್ಸಿತಂ ।
ಅಧುನಾ ಶ್ರೋತುಮಿಚ್ಛಾಮಿ ವಿಸ್ತೀರ್ಣಂ ಕಥಯ ಪ್ರಭೋ ॥ ೨ ॥

ಕಿಂ ಕಿಂ ತಪಃ ಕಠೋರಂ ಚ ಚಕಾರ ಪಾರ್ವತೀ ಸ್ವಯಂ ।
ಕಂ ಕಂ ವರಂ ವಾ ಸಂಪ್ರಾಪ್ಯ ಕಥಮಾಪ ಮಹೇಶ್ವರಂ ॥ ೩ ॥

ನಲವತ್ತನೆಯ ಅಧ್ಯಾಯ.

೧-೨. ರಾಧೆಯು :—ಎಲೈ ಪ್ರಭುವೇ ಆಶ್ಚರ್ಯವೂ, ವಿಚಿತ್ರವೂ, ಅಪೂರ್ವವೂ, ಮನೋಹರವೂ, ಕಿವಿಗೆ ಇಂಪಾಗಿಯೂ, ರಹಸ್ಯವಾಗಿಯೂ, ಜ್ಞಾನವನ್ನುಂಟುಮಾಡುವುದಾಗಿಯೂ ಇರುವ ಕಥೆಯನ್ನು ಕೇಳಿದೆನು. ಆದರೆ ಸಂಕ್ಷೇಪವಾಗಿ ಕೇಳಿದೆನು. ನನ್ನ ಇಷ್ಟದಂತೆ ವಿಸ್ತಾರವಾಗಿ ಕೇಳಲಿಲ್ಲ.

೩-೪. ಪಾರ್ವತಿಯು ಯಾವ ಯಾವ ರೀತಿಯ ಕಠಿನತಪಸ್ಸನ್ನು ಮಾಡಿದಳು? ಯಾವ ಯಾವ ವರವನ್ನು ಪಡೆದಳು? ಪರಮೇಶ್ವರನನ್ನು ಹೇಗೆ ಪಡೆದಳು? ರತಿಯು

ರತಿಃ ಕೇನ ಪ್ರಕಾರೇಣ ಜೀವಯಾಮಾಸ ಮನ್ಮಥಂ ।
ಪಾರ್ವತೀಶಿವಯೋಃ ಕೃಷ್ಣ ವಿವಾಹಂ ವರ್ಣಯ ಪ್ರಭೋ ॥ ೪ ॥

ತಯೋ ರಹಸಿ ಸಂಭೋಗಂ ಪಾಪಿನಾಂ ಪಾಪಮೋಚನಂ ।
ಕಥ್ಯತಾಂ ಕರುಣಾಸಿಂಧೋ ದುಃಖಿನಾಂ ದುಃಖಮೋಚನಂ ॥ ೫ ॥

ದಂಪತೀ ವಿರಹೋಕ್ತಿಶ್ಚ ಕರ್ಣಜ್ವಾಲಾ ಚ ಯೋಷಿತಃ ।
ಶ್ರೋತುಂ ಕೌತೂಹಲಂ ಕೃಷ್ಣ ಪುನಃ ಸಂಮೇಲನಂ ತಯೋಃ ॥ ೬ ॥

ಅಗ್ನಿಜ್ವಾಲಾ ವಿಷಜ್ವಾಲಾ ಕ್ಷಮಾ ಸೋಢುಂ ಚ ಯೋಷಿತಃ ।
ದಂಪತೀ ವಿರಹಜ್ವಾಲಾ ನ ಶ್ರೋತುಂ ಚ ಕ್ಷಣಂ ಕ್ಷಮಾ ॥ ೭ ॥

ರಾಧಿಕಾ ವಚನಂ ಶ್ರುತ್ವಾ ವಿಸ್ಮಯಶ್ಚ ಕಿತಾನನಃ ।
ನಿಸ್ತೀರ್ಣಂ ವಕ್ತುಮಾರೇಭೇ ಹೃದಯೇನ ವಿದೂಯತಾ ॥ ೮ ॥

ಯಾವ ರೀತಿಯಿಂದ ಮನ್ಮಥನನ್ನು ಬದುಕಿಸಿಕೊಂಡಳು ? ಎಲೈ ಕೃಷ್ಣನೇ, ಶಿವ ಪಾರ್ವತಿಯರ ವಿವಾಹವನ್ನು ವಿವರಿಸುವವನಾಗು.

೫. ಪಾಪಿಗಳ ಪಾಪಗಳನ್ನು ಪರಿಹರಿಸುವ ದುಃಖಿತರ ದುಃಖವನ್ನು ಹೋಗಲಾಡಿಸುವ ಆ ಶಿವಪಾರ್ವತಿಯರ ಸಂಭೋಗವನ್ನೂ, ಎಲೈ ದಯಾ ಸಮುದ್ರನೇ ನನಗೆ ವಿವರಿಸು.

೬. ಎಲೈ ಕೃಷ್ಣನೇ, ದಂಪತಿಗಳ ಅಗಲುವಿಕೆಯ ಮಾತು ಕೂಡ ಸ್ತ್ರೀಯರಿಗೆ ಕಿವಿಯಲ್ಲಿ ಬೆಂಕಿಯ ಜ್ವಾಲೆಯು ಹೊಕ್ಕಂತಾಗುತ್ತದೆ. ಆ ಶಿವ ಪಾರ್ವತಿಯರ ಪುನಃ ಸಮಾಗಮವನ್ನ ಕೇಳಲು ಕುತೂಹಲವುಳ್ಳವಳಾಗಿರುವೆನು.

೭. ಸ್ತ್ರೀಯರು ಅಗ್ನಿಜ್ವಾಲೆಯನ್ನಾಗಲೀ ವಿಷಜ್ವಾಲೆಯನಾಗಲೀ ಸಹಿಸ ಬಲ್ಲರು. ದಂಪತಿಗಳ ವಿರಹ-ಜ್ವಾಲೆಯನ್ನು ಕೇಳಲೂ ಸಹ ಸಮರ್ಥರಾಗುವುದಿಲ್ಲ.

೮. ರಾಧೆಯ ಮಾತನ್ನು ಕೇಳಿ ಆಶ್ಚರ್ಯದಿಂದ ಕೂಡಿದ ಮುಖವುಳ್ಳ ಕೃಷ್ಣನು ವ್ಯಥೆಗೊಂಡ ಮನಸ್ಸಿನಿಂದ ವಿಸ್ತಾರವಾಗಿ ಹೇಳತೊಡಗಿದನು.

ದಂಪತೀ ವಿರಹೋಕ್ತಿಂ ಚ ಯೋ ರಾಧಾ ಶ್ರೋತುಮಕ್ಷಮಾ ।
ವಿಚ್ಛೇದೇ ಶತವರ್ಷೀಯೇ ಕಿಮಸ್ಯಾ ಭವಿತಾ ಮಮ ॥ ೯ ॥

ಇತ್ಯೇವಂ ಮಾನಸೇ ಕೃತ್ವಾ ಮಾಯೇಶೋ ಮಾಯಯಾನ್ವಿತಃ ।
ಕೃಪಾಸಿಂಧುಶ್ಚ ಕೃಪಯಾ ಕಥಾಂ ಕಥಿತುಮುದ್ಯತಃ ॥ ೧೦ ॥

॥ ಶ್ರೀಕೃಷ್ಣ ಉವಾಚ ॥

ಪ್ರಾಣಾಧಿಕೇ ರಾಧಿಕೇ ತ್ವಂ ಶ್ರೂಯತಾಂ ಪ್ರಾಣವಲ್ಲಭೇ ।
ಪ್ರಾಣಾಧಿದೇವಿ ಪ್ರಾಣೇಶಿ ಪ್ರಾಣಾಧಾರೇ ಮನೋಹರೇ ॥ ೧೧ ॥

ವಟಮೂಲಾದ್ಗತೇ ರುದ್ರೇ ಪಾರ್ವತೀ ತಪಸೇ ಯಯೌ ।
ಪುನಃ ಪುನಃ ಸ್ವಮಾತ್ರಾ ಚ ಪಿತ್ರಾ ಚ ವಿನಿವಾರಿತಾ ॥ ೧೨ ॥

ಗತ್ವಾ ಸಾ ಸ್ವರ್ಣದೀತೀರಂ ಸ್ನಾತ್ವಾ ತ್ರಿಷವಣಂ ಮುದಾ ।
ಸಂದೇಶೇ ಚ ಮಯಾ ದತ್ತಂ ಜಜಾಪ ತಂ ಮನುಂಮುದಾ ॥ ೧೩ ॥

೯–೧೦. ದಂಪತಿಗಳ ವಿರಹದ ಮಾತನ್ನೂ ಕೂಡ ಯಾವ ರಾಧೆಯು ಕೇಳಲಸಮರ್ಥಳೋ ಅಂಥವಳಿಗೆ ನೂರು ವರುಷಗಳು ನನ್ನ ಅಗಲಿಕೆಯುಂಟಾದರೆ ಏನು ಆಗುವುದೋ ಎಂದು ಮನಸ್ಸಿನಲ್ಲಿ ಯೋಚಿಸಿಕೊಂಡು ಕರುಣಾಸಮುದ್ರನೂ ಮಾಯಾಧಿಪತಿಯೂ ಆದ ಕೃಷ್ಣನು ಮಾಯೆಯಿಂದ ಕೂಡಿದವನಾಗಿ ದಯೆಯಿಂದ ಕಥೆಯನ್ನು ಹೇಳತೊಡಗಿದನು.

೧೧. ಶ್ರೀಕೃಷ್ಣನು :—ಪ್ರಾಣಪ್ರಿಯಳೂ, ಪ್ರಾಣಕ್ಕಿಂತ ಉತ್ತಮಳೂ, ನನ್ನ ಪ್ರಾಣಗಳಿಗೆ ಅಧಿದೇವತೆಯೂ ನನ್ನ ಮನಸ್ಸನ್ನು ಅಪಹರಿಸುವವಳೂ ಆದ ರಾಧೆಯೇ, ನೀನು ಕೇಳುವವಳಾಗು.

೧೨. ಆಲದಮರದ ಬುಡದಲ್ಲಿದ್ದ ಶಂಕರನು ಅಲ್ಲಿಂದ ಹೊರಟುಹೋಗಲು ಪಾರ್ವತಿಯು ಮತ್ತೆ ಮತ್ತೆ ತನ್ನ ತಾಯಿಯಿಂದಲೂ, ತಂದೆಯಿಂದಲೂ ತಡೆಯಲ್ಪಟ್ಟವಳಾದರೂ ಕೂಡ ತಪಸ್ಸನ್ನು ಮಾಡಲು ಹೊರಟಳು.

೧೩. ಆ ಪಾರ್ವತಿಯು ದೇವಗಂಗಾ ನದಿಯ ದಡವನ್ನು ಸೇರಿ ಅಲ್ಲಿ ಮೂರು ಕಾಲದಲ್ಲಿಯೂ ಸ್ನಾನಮಾಡಿ ಉತ್ತಮವಾದ ಸ್ಥಳದಲ್ಲಿ ಕುಳಿತು ನನ್ನಿಂದ ಉಪದೇಶಿಸಲ್ಪಟ್ಟ ಆ ಮಂತ್ರವನ್ನು ಸಂತೋಷದಿಂದ ಜಪಿಸಿದಳು

ವರ್ಷಮೇಕಂ ಚ ಸಂಪೂರ್ಣಮನಾಹಾರಾ ಸ್ವಭಕ್ತಿತಃ ।
ತಪ್ತ್ವಾ ತಪಃ ಕಠೋರಂ ಚ ಚಕಾರ ಜಗದಂಬಿಕಾ ॥ ೧೪ ॥

ಗ್ರೀಷ್ಮೇ ಚ ಪರಿತೋ ವಹ್ನಿಂ ಪ್ರಜ್ವಲಂತಂ ದಿವಾನಿಶಂ ।
ಕೃತ್ವಾ ಪ್ರತಸ್ಥೌ ತನ್ಮಧ್ಯೇ ಸಂತತಂ ಜಪತೀ ಮನುಂ ॥ ೧೫ ॥

ಶಶ್ವತ್ ಸ್ಮಶಾನೇ ವರ್ಷಾಸು ಕೃತ್ವಾ ಯೋಗಾಸನಂ ಶಿವಾ ।
ಶಿಲಾಂ ದೃಷ್ಟ್ವಾ ಚ ಸಂಸಿಕ್ತಾಂ ಬಭೂವ ಜಲಧಾರಯಾ ॥ ೧೬ ॥

ಶೀತೇ ಜಲಾಂತರೇ ಶಶ್ವತ್ ಪ್ರತಸ್ಥೌ ಭಕ್ತಿಪೂರ್ವಕಂ ।
ಅನಾಹಾರಾ ಶರದ್ರೌದ್ರನೀಹಾರಾಸು ನಿಶಾಸು ಚ ॥ ೧೭ ॥

ಏವಂ ಕೃತ್ವಾ ಪರಂ ವರ್ಷಮಪ್ರಾಪ್ಯ ಶಂಕರಂ ಸತೀ ।
ಶುಚಾ ಕೃತ್ವಾಽಗ್ನಿಕುಂಡಂ ಚ ಪ್ರವೇಷ್ಟುಂ ಸಾ ಸಮುದ್ಯತಾ ॥ ೧೮ ॥

---

೧೪. ಒಂದು ವರುಷ ಪೂರ್ತಿಯಾಗಿ ಆಹಾರವಿಲ್ಲದವಳಾಗಿ ಜಗನ್ಮಾತೆಯಾದ ಪಾರ್ವತಿಯು ಕಷ್ಟತರವಾದ ತಪಸ್ಸನ್ನು ಭಕ್ತಿಯಿಂದ ಮಾಡಿದಳು.

೧೫. ಗ್ರೀಷ್ಮಕಾಲದಲ್ಲಿ ಸುತ್ತಲೂ ಬೆಂಕಿಯನ್ನು ಹಾಕಿಕೊಂಡು ಹಗಲು ರಾತ್ರಿಯಲ್ಲೂ ಉರಿಯುತ್ತಿರುವ ಆ ಬೆಂಕಿಯ ಮಧ್ಯದಲ್ಲಿ ಯಾವಾಗಲೂ ಮಂತ್ರವನ್ನು ಜಪಮಾಡುತ್ತ ನಿಂತುಕೊಂಡಿರುತ್ತಿದ್ದಳು.

೧೬. ಮಳೆಗಾಲದಲ್ಲಿ ಶ್ಮಶಾನದಲ್ಲಿ ಕಲ್ಲುಬಂಡೆಯ ಮೇಲೆ ಯೋಗಾಸನವನ್ನು ಹಾಕಿಕೊಂಡು ಕುಳಿತು ಮಳೆಯ ನೀರಿನಿಂದ ಸಂಪೂರ್ಣವಾಗಿ ನೆನೆಯಿಸಸಲ್ಪಟ್ಟವಳಾಗಿ ತಪಸ್ಸನ್ನು ಮಾಡಿದಳು.

೧೭. ಶೀತಕಾಲದಲ್ಲಿ ಶರದೃತುವಿನ ಹಿಮದಿಂದ ಭಯಂಕರವಾದ ರಾತ್ರಿಗಳಲ್ಲಿಯೂ ಕೂಡ ಆಹಾರವಿಲ್ಲದವಳಾಗಿ ನೀರಿನಲ್ಲಿ ಮುಳುಗಿಕೊಂಡು ಭಕ್ತಿಯಿಂದ ತಪಸ್ಸನ್ನು ಮಾಡಿದಳು.

೧೮. ಸಾಧ್ವಿಯಾದ ಆ ಪಾರ್ವತಿಯು ಒಂದು ವರುಷ ಹೀಗೆ ಉತ್ತಮವಾದ ತಪಸ್ಸನ್ನು ಮಾಡಿ ಪರಮೇಶ್ವರನನ್ನು ಹೊಂದದೆ ದುಃಖದಿಂದ ಅಗ್ನಿಕುಂಡವನ್ನು ಮಾಡಿಕೊಂಡು ಅದರಲ್ಲಿ ಬೀಳಲು ಸಿದ್ಧಳಾದಳು.

ತಾಮಗ್ನಿಕುಂಡಂ ವಿಶತೀಂ ತಪಸಾತಿಕೃಶಾಂ ಸತೀಂ ।
ದೃಷ್ಟ್ವಾ ಶಿವಃ ಕೃಪಾಸಿಂಧುಃ ಕೃಪಯಾ ತಾಂ ಜಗಾದ ಹ ॥ ೧೯ ॥

ಅತೀವ ವಾಮನೋ ಬಾಲೋ ವಿಪ್ರರೂಪೀ ಸ್ವತೇಜಸಾ ।
ಪ್ರಜ್ವಲನ್ಮನಸಾ ಹೃಷ್ಟೋ ದಂಡೀ ಛತ್ರೀ ಜಟಾಧರಃ ॥ ೨೦ ॥

ಶುಕ್ಲಯಜ್ಞೋಪವೀತೀ ಚ ಶುಕ್ಲವಾಸಾಶ್ಚ ಸಸ್ಮಿತಃ ।
ಶ್ವೇತಾಬ್ಜಬೀಜಮಾಲಾಂ ಚ ಬಿಭ್ರತ್ತಿಲಕಮುಜ್ಜ್ವಲಂ ॥ ೨೧ ॥

ನಿರ್ಜನೇ ಬಾಲಕಂ ದೃಷ್ಟ್ವಾ ಸ್ನಿಗ್ಧಾ ಸಾಪಿ ಜಗಾದ ಹ ।
ತತ್ತೇಜಸಾಽತಿ ಪ್ರಚ್ಛನ್ನಾ ತತ್ಯಾಜ ಚ ತಪಃ ಸ್ವಯಂ ॥ ೨೨ ॥

ಕೋಭವಾನಿತಿ ಪಪ್ರಚ್ಛ ತಂ ಶಿಶುಂ ಪುರತಃ ಸ್ಥಿತಂ ।
ಮನಸಾಽಽಲಿಂಗನಂ ಕರ್ತುಮಿಚ್ಛಂತೀ ಪರಮಾದರಂ ॥ ೨೩ ॥

---

೧೯. ಹೀಗೆ ಅಗ್ನಿಕುಂಡವನ್ನು ಪ್ರವೇಶಮಾಡುತ್ತಿರುವ ತಪಸ್ಸನ್ನು ಮಾಡಿ ಬಹಳ ಕೃಶಳಾಗಿರುವ ಆ ಪಾರ್ವತಿಯನ್ನು ನೋಡಿ ಕರುಣಾಸಮುದ್ರನಾದ ಶಂಕರನು ದಯೆಯಿಂದ ಕೂಡಿದವನಾಗಿ ಆ ಪಾರ್ವತಿಯೊಡನೆ ಮಾತನಾಡಿದನು.

೨೦-೨೨. ಅತ್ಯಂತ ವಾಮನನೂ, ಬ್ರಾಹ್ಮಣರೂಪನೂ, ತನ್ನ ತೇಜಸ್ಸಿನಿಂದ ಬೆಳಗುವವನೂ, ಮನಸ್ಸಿನಲ್ಲಿಯೇ ಸಂತೋಷಗೊಂಡವನೂ, ದಂಡವನ್ನೂ, ಛತ್ರಿಯನ್ನೂ, ಜಟೆಯನ್ನೂ ಧರಿಸಿದವನೂ, ಬಿಳಿಯ ಜನಿವಾರವನ್ನು ಧರಿಸಿದವನೂ, ಬಿಳಿಯ ಬಟ್ಟೆಯನ್ನುಟ್ಟವನೂ, ಬಿಳಿಯ ತಾವರೆಯ ಬೀಜದ ಜಪಸರವನ್ನು ಕೈಯಲ್ಲಿ ಹಿಡಿದವನೂ, ಹಣೆಯಲ್ಲಿ ಪ್ರಕಾಶಮಾನವಾದ ತಿಲಕವನ್ನು ಧರಿಸಿದವನೂ ಆದ ಆ ಬಾಲಕನನ್ನು ನಿರ್ಜನಪ್ರದೇಶದಲ್ಲಿ ನೋಡಿ ಆ ಪಾರ್ವತಿಯು ಅವನ ತೇಜಸ್ಸಿನಿಂದ ವ್ಯಾಪ್ತಳಾಗಿ ತಪಸ್ಸನ್ನು ಬಿಟ್ಟಳು. ಮತ್ತು ಪ್ರೀತಿಯಿಂದ ಮಾತನಾಡಿದಳು.

೨೩. ಪಾರ್ವತಿಯು ತನ್ನೆದುರಿನಲ್ಲಿ ನಿಂತಿರುವ ಆ ಬಾಲಕನನ್ನು ನೋಡಿ ಮನಸ್ಸಿನಿಂದಲೇ ಆಲಿಂಗಿಸಿಕೊಳ್ಳಲಿಷ್ಟವುಳ್ಳವಳಾಗಿ ಅತ್ಯಂತ ವಿಶ್ವಾಸದಿಂದ 'ನೀನು ಯಾರು? ಎಂದು ಕೇಳಿದಳು.

ಶ್ರುತ್ವಾ ಶೈಲಸುತಾ ಪ್ರಶ್ನಂ ಪ್ರಹಸ್ಯ ಪರಮೇಶ್ವರಃ ।
ಉವಾಚಾತೀವಮಧುರಂ ಕರ್ಣಪೀಯೂಷಮೀಶ್ವರೀ ॥ ೨೪ ॥

॥ ಶಂಕರ ಉವಾಚ ॥

ಇಚ್ಛಾಗಾಮೀ ವಟುರಹಂ ತಪಸ್ವೀ ವಿಪ್ರಬಾಲಕಃ ।
ಕಾ ತ್ವಂ ಕಾಂತಾತಿಕಾಂತಾರೇ ತಪಶ್ಚರಸಿ ಸುಂದರಿ ॥ ೨೫ ॥

ವದ ಕಸ್ಯ ಕುಲೇ ಜಾತಾ ಕಸ್ಯ ಕನ್ಯಾ ಚ ಕಾಽಭಿಧಾ ।
ತಪಸಃ ಫಲದಾತ್ರೀ ತ್ವಂ ಕಸ್ಮಾದ್ಧೇತೋಸ್ತಪಸ್ತವ ॥ ೨೬ ॥

ಅಹೋ ವಾ ತಪಸಾಂ ರಾಶಿಃ ಸ್ವಯಂ ಮೂರ್ತಿಮತೀ ಸತೀ ।
ತಪೋವಾ ಲೋಕಶಿಕ್ಷಾರ್ಥಂ ಕರೋಷಿ ಕಮಲೇಕ್ಷಣೇ ॥ ೨೭ ॥

ಸ್ವಯಂ ತೇಜಃಸ್ವರೂಪಾ ವಾ ಮೂಲಪ್ರಕೃತಿರೀಶ್ವರೀ ।
ವಿಧಾಯ ಭಕ್ತಧ್ಯಾನಾರ್ಥಂ ವಿಗ್ರಹಂ ಭಾರತೇ ಜನುಃ ॥ ೨೮ ॥

---

೨೪. ಪರ್ವತಪುತ್ರಿಯ ಮಾತನ್ನು ಕೇಳಿ ಪರಮೇಶ್ವರನು ನಕ್ಕು ಪಾರ್ವತಿಯನ್ನು ಕುರಿತು ಕಿವಿಗಳಿಗೆ ಅಮೃತದಂತೆ ಮಧುರವಾದ ಮಾತನ್ನಾಡಿದನು.

೨೫. ಶಂಕರನು :— ನಾನು ಇಷ್ಟಬಂದೆಡೆಯಲ್ಲಿ ಸಂಚರಿಸುವ, ತಪಸ್ವಿಯಾದ ಬ್ರಾಹ್ಮಣನಮಗನಾದ ಬ್ರಹ್ಮಚಾರಿಯು. ಅತಿಸುಂದರಳಾದ ನೀನು ಈ ಘೋರಾರಣ್ಯದಲ್ಲಿ ತಪಸ್ಸುಮಾಡುತ್ತಿರುವಿ. ನೀನಾರು?

೨೬. ನೀನು ಯಾರ ವಂಶದಲ್ಲಿ ಹುಟ್ಟಿದವಳು. ಯಾರ ಮಗಳು, ನಿನ್ನ ಹೆಸರೇನು? ತಪಸ್ಸಿನ ಫಲವನ್ನು ಕೊಡುವವಳಾದ ನೀನು ಯಾವ ಕಾರಣದಿಂದ ತಪಸ್ಸನ್ನು ಮಾಡುತ್ತಿರುವಿ ಹೇಳು.

೨೭. ಎಲೈ ಕಮಲದಂತೆ ಕಣ್ಣುಳ್ಳ ಪಾರ್ವತಿಯೇ, ನೀನು ತಪಸ್ಸಿನ ರಾಶಿಯು ತಾನೇ ಶರೀರವನ್ನು ಧರಿಸಿಕೊಂಡು ಬಂದಿರುವಂತಿರುವಿ. ಜನರಿಗೆ ಬೋಧಿಸಲೋಸ್ಕರ ನೀನು ತಪಸ್ಸುಮಾಡುತ್ತಿರುವೆಯೋ! ಆಶ್ಚರ್ಯವು.

೨೮. ನೀನು ಮೂಲಪ್ರಕೃತಿ ರಾಣಿಯಾಗಿದ್ದು ತೇಜೋರೂಪಳಾಗಿ ಭಕ್ತರು ಧ್ಯಾನಮಾಡಲನುಕೂಲವಾದ ಶರೀರವನ್ನು ತೆಗೆದುಕೊಂಡು ಭರತಖಂಡದಲ್ಲಿ ಹುಟ್ಟಿರುವಿಯೋ!

ಕಿಂ ವಾ ತ್ರಿಲೋಕೇ ಲಕ್ಷ್ಮೀಸ್ತ್ವಂ ಸಂಪದ್ರೂಪಾ ಸನಾತನೀ ।
ರಕ್ಷಾಂ ವಿಧಾತುಂ ಜಗತಾಮಾಗತಾ ಧಾತುರಂತಿಕೇ ॥ ೨೯ ॥

ಕಿಂ ವಾಽಂಬಿಕಾ ತ್ವಂ ದೇವಾನಾಂ ಸ್ವಯಂ ಮೂರ್ತಿಮತೀ ಸತೀ ।
ಸಾವಿತ್ರೀ ಭಾರತೇ ಜನ್ಮ ಸ್ವೇಚ್ಛಯಾ ಲಬ್ಧುಮಾಗತಾ ॥ ೩೦ ॥

ರಾಗಾಧಿಷ್ಠಾತೃದೇವೀ ವಾ ಸ್ವಯಂ ಸಾಕ್ಷಾತ್ ಸರಸ್ವತೀ ।
ಸರ್ವವಿದ್ಯಾಃ ಪ್ರಕಟಿತುಂ ಸ್ವೇಚ್ಛಯಾ ಜನ್ಮ ಭಾರತೇ ॥ ೩೧ ॥

ಏತಾಸು ಮಧ್ಯೇ ಕಾ ವಾ ತ್ವಂ ನಾಹಂ ತರ್ಕಿತುಮೀಶ್ವರಃ ।
ಯಾ ಸಾ ಭವತಿ ಕಲ್ಯಾಣಿ ಪರಿತುಷ್ಟಾ ಚ ಮಾಂ ಭವ ॥ ೩೨ ॥

ಸತಿ ತ್ವಯಿ ಪ್ರಸನ್ನಾಯಾಂ ಪ್ರಸನ್ನಃ ಪರಮೇಶ್ವರಃ ।
ಪತಿವ್ರತಾಯಾಂ ತುಷ್ಟಾಯಾಂ ತುಷ್ಟೋ ನಾರಾಯಣಃ ಸ್ವಯಂ ॥ ೩೩ ॥

---

೨೯. ಅಥವಾ ಮೂರು ಲೋಕದಲ್ಲಿಯೂ ಸಂಪದ್ರೂಪಳೂ, ಪುರಾತನಳೂ ಆದ ಲಕ್ಷ್ಮಿಯು ನೀನಾಗಿ ಜಗತ್ತನ್ನು ರಕ್ಷಿಸುವುದಕ್ಕೋಸ್ಕರ ಬ್ರಹ್ಮನ ಸಮೀಪಕ್ಕೆ ಬಂದಿರುವಿಯೋ ?

೩೦. ಅಥವಾ ದೇವತೆಗಳಿಗೆಲ್ಲಾ ತಾಯಿಯೆಂತಿರುವ ನೀನು ಸ್ವೇಚ್ಛೆಯಿಂದ ಶರೀರವನ್ನು ಧರಿಸಿಕೊಂಡಿರುವಿಯೋ? ಅಥವಾ ಸಾವಿತ್ರಿಯಾದ ನೀನು ಭಾರತ ದೇಶದಲ್ಲಿ ಜನ್ಮತಾಳಬೇಕೆಂದು ಬಯಸಿ ಬಂದಿರುವಿಯೋ ?

೩೧. ರಾಗಾಭಿಮಾನಿ ದೇವತೆಯಾದ ಸರಸ್ವತಿಯು ನೀನಾಗಿ ಸಕಲ ವಿದ್ಯೆಗಳನ್ನೂ ಪ್ರಕಟಪಡಿಸಲೋಸ್ಕರ ಸ್ವೇಚ್ಛೆಯಿಂದ ಭಾರತದಲ್ಲಿ ಜನ್ಮವನ್ನು ಹೊಂದಿರುವಿಯೋ ?

೩೨. ಈ ಮೇಲೆ ಹೇಳಿರುವವರಲ್ಲಿ ನೀನು ಯಾರೆಂಬುದನ್ನು ನಾನು ಊಹಿಸಲು ಸಮರ್ಥನಲ್ಲ. ಎಲೈ ಮಂಗಳಕರಳೇ, ನೀನು ಯಾರಾದರೂ ಸರಿ ನನ್ನ ವಿಷಯದಲ್ಲಿ ಸಂತೋಷವನ್ನು ಹೊಂದು.

೩೩. ಎಲೈ ಸಾಧ್ವಿಯೇ, ನೀನು ಸಂತೋಷಗೊಂಡರೆ ಪರಮೇಶ್ವರನು ಸಂತೋಷಗೊಳ್ಳುತ್ತಾನೆ. ಪತಿವ್ರತೆಯು ಸಂತೋಷಗೊಂಡರೆ ಶ್ರೀಮನ್ನಾರಾಯಣನು ಸಂತೋಷಗೊಳ್ಳುತ್ತಾನೆ.

ತುಷ್ಟೇ ನಾರಾಯಣೇ ದೇವಿ ಶಶ್ವತ್ತುಷ್ಟಂ ಜಗತ್ತ್ರಯಂ ।
ತರುಮೂಲೇಷು ಸಿಕ್ತೇಷು ಶಾಖಾಃ ಸಿಕ್ತಾ ಯಥಾ ಪ್ರಿಯೇ ॥ ೩೪ ॥

ಶಿಶೋಸ್ತದ್ವಚನಂ ಶ್ರುತ್ವಾ ಪ್ರಹಸ್ಯ ಪರಮೇಶ್ವರೀ ।
ಉವಾಚ ವಚನಂ ಚಾರು ಕರ್ಣಪೀಯೂಷಮೀಶ್ವರೀ ॥ ೩೫ ॥

॥ ಪಾರ್ವತ್ಯುವಾಚ ॥

ನಾಹಂ ವೇದಪ್ರಸೂರ್ಲಕ್ಷ್ಮೀರ್ವಾಗಧಿಷ್ಠಾತೃದೇವತಾ ।
ಜನ್ಮ ಮೇ ಭಾರತೇ ವರ್ಷೇ ಸಾಂಪ್ರತಂ ಶೈಲಕನ್ಯಕಾ ॥ ೩೬ ॥

ಪೂರ್ವಂ ಜನ್ಮ ದಕ್ಷಗೇಹೇ ಸತೀ ಶಂಕರಕಾಮಿನೀ ।
ಯೋಗೇನ ತ್ಯಕ್ತದೇಹಾಽಹಂ ತಾತಭರ್ತೃವಿನಿಂದಯಾ ॥ ೩೭ ॥

ಅತ್ರ ಜನ್ಮನಿ ಪುಣ್ಯೇನ ಸಂಪ್ರಾಪ್ತೇ ಶಂಕರೇ ದ್ವಿಜ ।
ಮಾಂ ತ್ಯಕ್ತ್ವಾ ಭಸ್ಮಸಾತ್ ಕೃತ್ವಾ ಮನ್ಮಥಂ ಸ ಜಗಾಮಹ ॥ ೩೮ ॥

---

೩೪. ನಾರಾಯಣನು ತೃಪ್ತನಾದರೆ, ಮರದ ಬುಡವು ನೆನೆದರೆ ರೆಂಬೆಗಳು ತಂಪಾಗುವಂತೆ ಮೂರು ಲೋಕವೂ ತೃಪ್ತಿಯನ್ನು ಹೊಂದುವುದು.

೩೫. ಪರಮೇಶ್ವರಿಯು ಬಾಲಕನ ಆ ಮಾತನ್ನು ಕೇಳಿ ನಗುತ್ತ ಕಿವಿಗೆ ಅಮೃತದಂತಿರುವ ಮನೋಹರವಾದ ಮಾತನ್ನಾಡಿದಳು.

೩೬. ಪಾರ್ವತಿ—ನಾನು ಸಾವಿತ್ರಿಯಾಗಲೀ, ಲಕ್ಷ್ಮಿಯಾಗಲೀ, ಸರಸ್ವತಿಯಾಗಲೀ ಅಲ್ಲ. ಈಗ ನಾನು ಭರತವರ್ಷದಲ್ಲಿ ಪರ್ವತರಾಜನ ಮಗಳಾಗಿ ಹುಟ್ಟಿರುವೆನು.

೩೭. ಹಿಂದಿನ ಜನ್ಮದಲ್ಲಿ ದಕ್ಷಬ್ರಹ್ಮನ ಮಗಳಾಗಿ ಸತಿಯೆಂಬ ಹೆಸರಿನಿಂದ ಜನ್ಮಪಡೆದು ಶಂಕರನ ಪತ್ನಿಯಾಗಿದ್ದೆನು. ನಮ್ಮ ತಂದೆಯು ನನ್ನ ಪತಿಯನ್ನು ನಿಂದಿಸಿದುದರಿಂದ ನಾನು ಯೋಗದಿಂದ ಶರೀರವನ್ನು ಬಿಟ್ಟೆನು.

೩೮. ಎಲೈ ಬ್ರಾಹ್ಮಣನೇ, ಈ ಜನ್ಮದಲ್ಲಿ ಪುಣ್ಯವಶದಿಂದ ಶಂಕರನ ಸನ್ನಿಧಿಯನ್ನು ಪಡೆದಿರಲು ಆ ಶಂಕರನು ಮನ್ಮಥನನ್ನು ಸುಟ್ಟು ಬೂದಿಮಾಡಿ ನನ್ನನ್ನೂ ಬಿಟ್ಟು ಹೊರಟುಹೋದನು.

ಪ್ರಯಾತೇ ಶಂಕರೇ ತಾಪಾದ್ವ್ರೀಡಯಾಽಹಂ ಪಿತುರ್ಗೃಹಾತ್ ।
ಆಗಮತ್ತಪಸೇ ಚಿತ್ರಂ ಮನೋದಂ ಸ್ವರ್ಣದೀತಟೇ ॥ ೩೯ ॥

ತಪಃ ಕೃತ್ವಾ ಕಠೋರಂ ಚ ಸುಚಿರಂ ಪ್ರಾಣವಲ್ಲಭಂ ।
ಅಪ್ರಾಪ್ಯಾಗ್ನಿಂ ಪ್ರವೇಷ್ಟುಂ ಚ ತ್ವಾಂ ಚ ದೃಷ್ಟ್ವಾ ಕ್ಷಣಂ ಸ್ಥಿತಾ ॥ ೪೦ ॥

ಗಚ್ಛ ತ್ವಂ ಪ್ರವಿಶಾಮ್ಯಗ್ನೌ ಪ್ರಲಯಾಗ್ನಿಶಿಖೋಪಮೇ ।
ಕೃತ್ವಾ ಸ್ವಕಾಮಾನಾಂ ವಿಪ್ರ ಹರಪ್ರಾಪ್ತಿಮನೀಷಿತಾಂ ॥ ೪೧ ॥

ಯತ್ರ ಯತ್ರ ಜನುರ್ಲಬ್ಧ್ವಾ ಲಭಿಷ್ಯಾಮಿ ಶಿವಂ ಪರಂ ।
ಪ್ರಾಣಾಧಿಕಂ ಪ್ರಿಯಂ ಕಾಂತಂ ವಿಭುಂ ಜನ್ಮನಿ ಜನ್ಮನಿ ॥ ೪೨ ॥

ಸರ್ವಾಹಿ ಸ್ವಪ್ರಿಯಂ ಲಬ್ಧುಂ ಲಭಂತಿ ಜನ್ಮ ವಾಂಛಿತಂ ।
ತಜ್ಜನ್ಮ ಪತಿಲಾಭಾರ್ಥಂ ಸರ್ವಾಸಾಂ ಚ ಶ್ರುತೌ ಶ್ರುತಂ ॥ ೪೩ ॥

---

೩೯. ಶಂಕರನು ಹೊರಟುಹೋದ ಮೇಲೆ ನಾನು ದುಃಖದಿಂದಲೂ ನಾಚಿಕೆಯಿಂದಲೂ ತಂದೆಯ ಮನೆಯನ್ನು ಬಿಟ್ಟು ನನ್ನ ಮನವೊಪ್ಪಿದ ಈ ದೇವಗಂಗಾ ನದಿಯ ತೀರಕ್ಕೆ ತಪಸ್ಸುಮಾಡಲು ಬಂದೆನು.

೪೦. ಕಠಿನವಾದ ತಪಸ್ಸನ್ನು ಬಹಳಕಾಲಮಾಡಿದರೂ ನನ್ನ ಪ್ರಾಣವಲ್ಲಭನನ್ನು ಹೊಂದದವಳಾಗಿ ಅಗ್ನಿಯನ್ನು ಪ್ರವೇಶಮಾಡಲು ಸಿದ್ಧಳಾದ ನಾನು ನಿನ್ನನ್ನು ನೋಡಿ ಸ್ವಲ್ಪ ಸಾವಕಾಶಮಾಡಿದೆನು.

೪೧-೪೨. ನೀನು ಹೊರಡು. ನಾನು ಪ್ರಳಯಾಗ್ನಿ ಜ್ವಾಲೆಯಂತಿರುವ ಈ ಅಗ್ನಿಯಲ್ಲಿ ಬೀಳುತ್ತೇನೆ. ನನ್ನ ಇಷ್ಟವನ್ನು ನೆರವೇರಿಸಿಕೊಂಡು ಪರಮೇಶ್ವರನನ್ನು ಹೊಂದಬೇಕೆಂಬ ಅಪೇಕ್ಷೆಯಿಂದ ಯಾವ ಯಾವ ಸ್ಥಳದಲ್ಲಿ ಹುಟ್ಟುವೆನೋ ಅಲ್ಲಲ್ಲಿ ಪ್ರಾಣಕ್ಕಿಂತಲೂ ಹೆಚ್ಚಾದ ಪ್ರಿಯತಮನೂ, ಜಗತ್ತಿಗೆ ಒಡೆಯನೂ, ಸುಂದರನೂ ಆದ ಈಶ್ವರನನ್ನು ಪ್ರತಿಜನ್ಮದಲ್ಲೂ ಹೊಂದುವೆನು.

೪೩. ಲೋಕದಲ್ಲಿ ಎಲ್ಲಾ ಸ್ತ್ರೀಯರೂ ತಮ್ಮ ಪ್ರಿಯತಮನನ್ನು ಪಡೆಯುವ ಆಶೆಯಿಂದ ಜನ್ಮವನ್ನು ಪಡೆಯುತ್ತಾರೆ. ಅವರ ಜನ್ಮವು ಪತಿಯನ್ನು ಹೊಂದುವುದಕ್ಕಾಗಿಯೇ ಎಂದು ಶ್ರುತಿಯು ಹೇಳಿದೆ.

ಪ್ರಾಕ್ತನೀಯೋ ಹಿ ಯೋ ಭರ್ತಾ ಸ ತಾಸಾಂ ಪ್ರತಿಜನ್ಮನಿ ।
ಯಾ ಸ್ತ್ರೀ ಯೇಷಾಂ ಸುನಿಯತಾ ಸಾ ತೇಷಾಂ ಜನ್ಮಜನ್ಮನಿ ॥ ೪೪ ॥

ತದ್ದೇಹಮಿಹ ನ ಪ್ರಾಪ್ಯ ಕೃತ್ವಾ ಘೋರತರಂ ತಪಃ ।
ಕೃತ್ವಾಗ್ನಿಕುಂಡೇ ಕಾಮ್ಯಂ ಚ ಲಭಿಷ್ಯಾಮಿ ಪರತ್ರ ತಂ ॥ ೪೫ ॥

ಇತ್ಯುಕ್ತ್ವಾ ಪಾರ್ವತೀ ತತ್ರ ತತ್ಪುರಃ ಪ್ರವಿವೇಶ ಹ ।
ನಿಷಿಧ್ಯಮಾನಾ ಪುರತೋ ಬ್ರಾಹ್ಮಣೇನ ಪುನಃ ಪುನಃ ॥ ೪೬ ॥

ವಹ್ನಿಪ್ರವೇಶಂ ಕುರ್ವಂತ್ಯಾಃ ಪಾರ್ವತ್ಯಾಃ ಪರಮೇಶ್ವರಿ ।
ಬಭೂವ ತಪಸಾ ಸದ್ಯೋ ವಹ್ನಿಶ್ಚಂದನವದ್ಧ್ರುವಂ ॥ ೪೭ ॥

ಕ್ಷಣಂ ತದಂತರೇ ಸ್ಥಿತ್ವಾ ಚೋತ್ಪತಂತೀಂ ಶಿವಾಂ ಶಿವಃ ।
ಪುನಃ ಪಪ್ರಚ್ಛ ಸಹಸಾ ವೃಂದಾವನವಿನೋದಿನಿ ॥ ೪೮ ॥

---

೪೪. ಯಾವ ನಾರಿಯರು ತಮ್ಮ ಪತಿಯಲ್ಲಿ ಸರ್ವದಾ ಭಕ್ತಿಯಿಂದ ನಡೆದುಕೊಳ್ಳುತ್ತಾರೆಯೋ ಅವರಿಗೆ ಪ್ರತಿಜನ್ಮದಲ್ಲಿಯೂ ಅವನೇ ಪತಿಯಾಗುವನು ಮತ್ತು ಯಾವ ಸ್ತ್ರೀಯು ಯಾವ ಪತಿಗೆ ಪ್ರಿಯಳಾಗಿರುವಳೋ ಅವನಿಗೆ ಪ್ರತಿಜನ್ಮದಲ್ಲಿಯೂ ಅವಳೇ ಪತ್ನಿಯಾಗುವಳು.

೪೫. ಆದುದರಿಂದ ಘೋರವಾದ ತಪಸ್ಸನ್ನು ಮಾಡಿಯೂ ಇಷ್ಟವನ್ನು ಪಡೆಯದ ನಾನು, ಈ ದೇಹವನ್ನು ಅಗ್ನಿಕುಂಡದಲ್ಲಿ ಸಮರ್ಪಣೆಮಾಡಿ ಆ ನನ್ನ ಇಷ್ಟವನ್ನು ಮುಂದಿನ ಜನ್ಮದಲ್ಲಿ ಪಡೆಯುವೆನು.

೪೬. ಈ ಪ್ರಕಾರ ಹೇಳಿ ಪಾರ್ವತಿಯು ಆ ಬ್ರಾಹ್ಮಣನು ಎದುರಿನಲ್ಲಿ ನಿಂತು ಬೇಡಬೇಡವೆಂದು ಮತ್ತೆ ಮತ್ತೆ ಹೇಳುತ್ತಿದ್ದಾಗ್ಯೂ ಅವನು ನೋಡುತ್ತಿರುವಂತೆಯೇ ಅಗ್ನಿಯಲ್ಲಿ ಬಿದ್ದಳು.

೪೭. ಎಲೈ ಅಷ್ಟೈಶ್ವರ್ಯವಂತಳಾದ ರಾಧೆಯೇ, ಹೀಗೆ ಅಗ್ನಿಯನ್ನು ಪ್ರವೇಶಮಾಡುತ್ತಿರಲು ಆ ಪಾರ್ವತಿಯ ತಪಸ್ಸಿನ ಮಹಿಮೆಯಿಂದ ಆ ಕ್ಷಣವೇ ಬೆಂಕಿಯು ಗಂಧದಂತೆ ತಣ್ಣಗಾಯಿತು.

೪೮. ಎಲೈ ಬೃಂದಾವನದಲ್ಲಿ ಸಂತೋಷಪಡುವ ರಾಧೆಯೇ, ಒಂದು ಕ್ಷಣಕಾಲ ಅಗ್ನಿಕುಂಡದ ಮಧ್ಯದಲ್ಲಿದ್ದು ಮೇಲಕ್ಕೆ ಬರುತ್ತಿರುವ ಪಾರ್ವತಿಯನ್ನು ಕುರಿತು ಶಂಕರನು ಮತ್ತೆ ಪ್ರಶ್ನೆಮಾಡಿದನು.

|| ಮಹಾದೇವ ಉವಾಚ ||

ಅಹೋ ತಪಸ್ತೇ ಕಿಂ ಭದ್ರೇ ನ ಬುದ್ಧಂ ಕಿಂಚಿದೇವ ಹಿ |
ನ ದಗ್ಧೋ ವಹ್ನಿನಾ ದೇಹೋ ನ ಚ ಪ್ರಾಪ್ತೋ ಮನೀಷಿತಃ || ೪೯ ||

ಶಿವಂ ಕಲ್ಯಾಣರೂಪಂ ಚ ಭರ್ತಾರಂ ಕರ್ತುಮಿಚ್ಛಸಿ |
ಅವಿಗ್ರಹಂ ಪತಿಂ ಕೃತ್ವಾ ಕಿಂ ವಾ ತೇ ವಾಂಛಿತಂ ಭವೇತ್ || ೫೦ ||

ಸಂಹರ್ತಾರಂ ಚ ಭರ್ತಾರಂ ಯದೀಚ್ಛಸಿ ಶುಚಿಸ್ಮಿತೇ |
ಕಾಂತಮಿಚ್ಛತಿ ಕಾ ವಾ ಸ್ತ್ರೀ ಸರ್ವಸಂಹಾರಕಾರಣಂ || ೫೧ ||

ಮೋಕ್ಷಂ ವಾಂಛಸಿ ಚೇದ್ದೇವಿ ಕೃತ್ವಾ ಕಾಂತಂ ಸ್ವರೂಪಿಣಂ |
ಸರ್ವಮುಕ್ತಿಪ್ರದಾ ತ್ವಂ ಚ ತಪಸ್ಯಾ ವಿಫಲಾ ತವ || ೫೨ ||

---

೪೯. ಮಹಾದೇವನು:—ಎಲೈ ಮಂಗಳಕರಳೇ, ನಿನ್ನ ತಪಸ್ಸು ಬಹಳ ಆಶ್ಚರ್ಯಕರವಾದುದು. ಅದರ ಪ್ರಭಾವವು ಸ್ವಲ್ಪವೂ ತಿಳಿಯದಾಗಿದೆ. ಬೆಂಕಿಯಿಂದ ನಿನ್ನ ಶರೀರವು ಕೂಡ ಸುಡಲಿಲ್ಲ. ನೀನು ಇಷ್ಟಪಟ್ಟ ವರನೂ ಕೂಡ ಸಿಕ್ಕಲಿಲ್ಲ.

೫೦. ನೀನು ಮಂಗಳಸ್ವರೂಪನಾದ ಶಿವನನ್ನು ಮದುವೆಯಾಗಬೇಕೆಂದು ಇಷ್ಟಪಡುತ್ತಿರುವಿ. ಶರೀರವೇ ಇಲ್ಲದ ಗಂಡನನ್ನು ಹೊಂದಿದರೆ ಅವನಿಂದ ನಿನ್ನ ಯಾವ ಅಭಿಲಾಷೆಯು ಪೂರ್ತಿಯಾಗುತ್ತದೆ.

೫೧. ಸಂಹಾರಮಾಡುವ ಗಂಡನನ್ನು ನೀನು ಬಯಸುವುದಾದರೆ ಎಲೈ ಶುಭ್ರವಾದ ನಗೆಯುಳ್ಳವಳೇ, ಲೋಕದಲ್ಲಿ ಸಕಲ ಸಂಹಾರಕ್ಕೂ ಕಾರಣನಾದವನನ್ನು ಯಾವ ಸ್ತ್ರೀಯು ತಾನೇ ಗಂಡನನ್ನಾಗಿ ಪಡೆಯಲಪೇಕ್ಷಿಸುತ್ತಾಳೆ.

೫೨. ಎಲೈ ದೇವಿಯೇ, ಸುಂದರನಾದ ಪತಿಯನ್ನು ಪಡೆದು ಆ ಮೂಲಕ ಮೋಕ್ಷವನ್ನು ಪಡೆಯಬೇಕೆಂದು ಯೋಚಿಸುವಿಯಾದರೆ ಸಕಲರಿಗೂ ಮುಕ್ತಿಯನ್ನು ಕೊಡುವವಳು ನೀನೇ ಆಗಿರುವುದರಿಂದ ನಿನ್ನ ತಪಸ್ಸು ವ್ಯರ್ಥವು.

ಶಿವಶ್ಚ ಮಂಗಲೇ ಮೋಕ್ಷೇ ಸಂಹರ್ತಾ ನ ಚ ದೃಶ್ಯತೇ ।
ಶಿವ ಶಬ್ದಸ್ಯ ಚಾನ್ಯೋಽರ್ಥೋ ನಹಿ ವೇದೇ ನಿರೂಪಿತಃ ॥ ೫೩ ॥

ತಂ ಚ ಸಂಹಾರಕರ್ತಾರಂ ಯದಿ ವಾಂಛಸಿ ಸುಂದರಿ ।
ಲಭಿಷ್ಯಸೇ ತಂ ರುದ್ರಂ ಸರ್ವಲೋಕಭಯಂಕರಂ ॥ ೫೪ ॥

ನ ಭವಿಷ್ಯತಿ ಮೋಕ್ಷಸ್ತೇ ಸ್ವಾಭೀಷ್ಟಂ ದೇವಸೇವನಂ ।
ಹರಿಸ್ಮೃತಿರಮೋಘಾ ಚ ಸರ್ವಮಂಗಲದಾ ಸದಾ ॥ ೫೫ ॥

ಶೀಘ್ರಂ ಪಿತುರ್ಗೃಹಂ ಗಚ್ಛ ತತ್ರ ದ್ರಕ್ಷ್ಯಸಿ ಶಂಕರಂ ।
ಮಮಾಽಶಿಷಾ ಸ್ವತಪಸಾಂ ಫಲೇನ ಚ ಸುದುರ್ಲಭಂ ॥ ೫೬ ॥

ಇತ್ಯುಕ್ತ್ವಾ ಪಾರ್ವತೀಂ ವಿಪ್ರಸ್ತತ್ರೈವಾಂತರಧೀಯತ ।
ದುರ್ಗಾ ಯಯೌ ಪಿತುರ್ಗೇಹಂ ಮಹಾದೇವೇತಿ ವಾದಿನೀ ॥ ೫೭ ॥

---

೫೩. ಮಂಗಳಸ್ವರೂಪನೂ, ಸಂಹಾರಕಾರಣನೂ ಆದ ಶಿವನು ಮೋಕ್ಷ ಕಾರಣನೆಂದು ಕಾಣುವುದಿಲ್ಲ. ಶಿವನೆಂಬ ಶಬ್ದಕ್ಕೆ ವೇದದಲ್ಲಿಯೂ ಕೂಡ ಬೇರೆಯಾದ ಅರ್ಥವು ಹೇಳಲ್ಪಟ್ಟಿಲ್ಲ.

೫೪. ಎಲೈ ಸುಂದರಿಯೇ, ಸಂಹಾರಮಾಡುವ ಆ ಶಂಕರನನ್ನು ನೀನು ಅಪೇಕ್ಷಿಸುವುದಾದರೆ ಸಕಲ ಲೋಕಗಳಿಗೂ ಭಯವನ್ನುಂಟುಮಾಡುವ ಆ ರುದ್ರನನ್ನು ಪಡೆಯುವಿ.

೫೫. ನಿನಗೆ ಮೋಕ್ಷವಾಗಲೀ ಇಷ್ಟವಾದ ದೇವತಾ ಸೇವೆಯಾಗಲೀ, ಸಫಲವೂ, ಯಾವಾಗಲೂ ಸರ್ವಮಂಗಳವೂ ಆದ ಹರಿಸ್ಮರಣೆಯಾಗಲೀ ದೊರೆಯಲಾರವು.

೫೬. ನೀನು ಬೇಗನೆ ನಿನ್ನ ತಂದೆಯ ಮನೆಗೆ ಹೋಗು. ನನ್ನ ಆಶೀರ್ವಾದದಿಂದಲೂ ನೀನು ಮಾಡಿದ ತಪಸ್ಸಿನ ಫಲದಿಂದಲೂ ಅಲ್ಲಿ ಇತರರಿಗೆ ದುರ್ಲಭನಾದ ಶಂಕರನನ್ನು ನೋಡುವಿ.

೫೭. ಬ್ರಾಹ್ಮಣನು ಪಾರ್ವತಿಯನ್ನು ಕುರಿತು ಈ ಪ್ರಕಾರವಾಗಿ ಹೇಳಿ ಅಲ್ಲಿಯೇ ಮಾಯವಾದನು. ಪಾರ್ವತಿಯು ಮಹಾದೇವ ಎಂದು ನುಡಿಯುತ್ತ ತಂದೆಯ ಮನೆಗೆ ಹೋದಳು.

ಪಾರ್ವತ್ಯಾಗಮನಂ ಶ್ರುತ್ವಾ ಮೇನಕಾ ಚ ಹಿಮಾಲಯಃ ।
ದಿವ್ಯಂ ಯಾನಂ ಪುರಸ್ಕೃತ್ಯ ಪ್ರಯಯೌ ಹರ್ಷವಿಹ್ವಲಃ ॥ ೫೮ ॥

ಸಂಸ್ಥಾಪ್ಯ ಮಂಗಲಘಟಾನ್ ರಾಜವರ್ತ್ಮನಿ ರಾಧಿಕೇ ।
ಚಂದನಾಗುರುಕಸ್ತೂರೀ ಫಲಶಾಖಾಸಮನ್ವಿತಾನ್ ॥ ೫೯ ॥

ಪಟ್ಟಸೂತ್ರಸನ್ನಿಬದ್ಧರಸಾಲಪಲ್ಲವಾನ್ವಿತೈಃ ।
ಪರಿತಃ ಪರಿತೋ ರಂಭಾಸ್ತಂಭವೃಂದಸಮನ್ವಿತೇ ॥ ೬೦ ॥

ಪತಿಪುತ್ರವತೀಯೋಷಿತ್ಸಮೂಹೈರ್ದೀಪಹಸ್ತಕೈಃ ।
ಪೂರ್ಣೈರ್ಲಾಜಾಧಾನ್ಯದೂರ್ವಾ ಫಲಪುಷ್ಪಸಮನ್ವಿತೈಃ ॥ ೬೧ ॥

ಸುಪುಣ್ಯೈರ್ಬ್ರಾಹ್ಮಣೈಶ್ಚಾಪಿ ಮುನಿಭಿರ್ಬ್ರಹ್ಮಚಾರಿಭಿಃ ।
ನಟೀಭಿರ್ನರ್ತಕೀಭಿಶ್ಚ ಗಜೇಂದ್ರೈಃ ಪರಿಶೋಭಿತೇ ॥ ೬೨ ॥

ಪುರೋಹಿತೈಶ್ಚ ಸಂಯುಕ್ತೈಃ ಕುರ್ವದ್ಭಿರ್ಮಂಗಲಧ್ವನಿಂ ।
ಸುಚಾರುಮಾಲತೀಮಾಲಾಹಸ್ತೈಃ ಶಸ್ತೈಃ ಪ್ರಶಂಸಿತೈಃ ॥ ೬೩ ॥

೫೮–೬೦. ಎಲೈ ರಾಧೆಯೇ, ಪಾರ್ವತಿಯ ಆಗಮನವನ್ನು ಕೇಳಿ ಆನಂದದಿಂದ ಮೇನಕೆಯೂ ಹಿಮವಂತನೂ ಸಹ ಉತ್ತಮವಾದ ಪಲ್ಲಕ್ಕಿಯನ್ನು ತೆಗೆದುಕೊಂಡು, ಮಂಗಳ ಕಲಶಗಳನ್ನಿಟ್ಟುಕೊಂಡು, ರಾಜಬೀದಿಯಲ್ಲಿ ಕಸ್ತೂರಿ ಮುಂತಾದ ಗಂಧಗಳನ್ನೆರಚಿ, ಹಣ್ಣುಗಳಿಂದ ಕೂಡಿದ ಮರದ ರೆಂಬೆಗಳನ್ನು ಕಟ್ಟಿಸಿ, ಪಟ್ಟೆಯ ದಾರದಲ್ಲಿ ಕಟ್ಟಿದ ಮಾವಿನ ಚಿಗುರುಗಳ ತೋರಣಗಳನ್ನು ಮಾಡಿಸಿ, ಎಲ್ಲೆಡೆಗಳಲ್ಲಿಯೂ ಬಾಳೆಯ ಕಂಬಗಳನ್ನು ಕಟ್ಟಿಸಿ, ಅಲಂಕಾರವನ್ನು ಮಾಡಿಸಿ, ಹೊರಟರು.

೬೧–೬೪. ದೀಪಗಳನ್ನು ಕೈಯಲ್ಲಿ ಹಿಡಿದಿರುವ ಪುತ್ರವತಿಯರಾದ ಸುಮಂಗಲಿಯರಿಂದೊಡಗೂಡಿ, ಸಂಪೂರ್ಣವಾದ ಅರಳು, ಧಾನ್ಯ, ಹಣ್ಣು ಹೂವುಗಳನ್ನು ತೆಗೆದುಕೊಂಡು, ಪುಣ್ಯವಂತರಾದ ಬ್ರಾಹ್ಮಣರಿಂದಲೂ ಮುನಿಗಳಿಂದಲೂ ಬ್ರಹ್ಮಚಾರಿಗಳಿಂದಲೂ ಕೂಡಿದವರಾಗಿ ನಟಿಯರಿಂದಲೂ ಅಲಂಕರಿಸಲ್ಪಟ್ಟ ಆನೆಗಳಿಂದಲೂ ಮಂಗಳ ಶಬ್ದಗಳನ್ನು ಹೇಳುತ್ತಿರುವ ಪುರೋಹಿತರುಗಳಿಂದಲೂ ಕೂಡಿದವರಾಗಿ, ಉತ್ತಮವಾದ ಮಾಲತೀ ಮಾಲಿಕೆಯನ್ನು ಕೈಯಲ್ಲಿ ಹಿಡಿದುಕೊಂಡು

ನಾನಾಪ್ರಕಾರವಾದ್ಯೈಶ್ಚ ಶಂಖಧ್ವನಿಸುನಾದಿತೈಃ ।
ಸಿಂದೂರರೇಣುಭಿಶ್ಚಾರುಚಂದನದ್ರವಪಂಕಿಲಂ ॥ ೬೪ ॥

ಪ್ರವಿಶ್ಯ ನಗರಂ ದುರ್ಗಾ ದದರ್ಶ ಪಿತರೌ ಪುರಃ ।
ಸುಪ್ರಸನ್ನೌ ಪ್ರಧಾವಂತೌ ಹರ್ಷಾಶ್ರುಪುಲಕಾನ್ವಿತೌ ॥ ೬೫ ॥

ಪ್ರಸನ್ನವದನಾ ದೇವೀ ಚಾಽಽಲಿಭಿಃ ಪ್ರಣನಾಮ ತೌ ।
ಸಂಯುಜ್ಯಾಥಾಽಽಶಿಷಂ ತೌ ಚ ಚಕ್ರತುಸ್ತಾಂ ಚ ವಕ್ಷಸಿ ॥ ೬೬ ॥

ಹೇ ವತ್ಸೇ ವತ್ಸೇತ್ಯುಚ್ಚಾರ್ಯ ರುದಂತೌ ಪ್ರೇಮವಿಹ್ವಲೌ ।
ತದಾ ತಾಂ ಚ ರಥೇ ಕೃತ್ವಾ ಜಗ್ಮತುರ್ನಿಜಮಂದಿರಂ ॥ ೩೭ ॥

ಸ್ತ್ರಿಯೋ ನಿರ್ಮಂಛನಂ ಚಕ್ರುರ್ವಿಪ್ರಾ ಯುಯುಜುರಾಶಿಷಂ ।
ಬ್ರಾಹ್ಮಣೇಭ್ಯಶ್ಚ ಬಂದಿಭ್ಯಃ ಪರ್ವತೇಂದ್ರೋ ಧನಂ ದದೌ ॥ ೬೮ ॥

ಹೊಗಳುತ್ತಿರುವ ಹೊಗಳುಭಟರಿಂದೊಡಗೂಡಿದವರಾಗಿ ನಾನಾವಿಧಗಳಾದ ವಾದ್ಯ ಗಳಿಂದಲೂ ಶಂಖಧ್ವನಿಗಳಿಂದಲೂ ಮನೋಹರವಾಗಿರುವ, ದಿವ್ಯಸಿಂಧೂರದ ಪುಡಿಗಳನ್ನು ಗಂಧದ ನೀರಿನಲ್ಲಿ ಕಲಸಿ ಚೆಲ್ಲಿರುವುದರಿಂದ ಸುಗಂಧಯುಕ್ತವಾದ ರಾಜಬೀದಿಯಲ್ಲಿ ಮೇನಕಾ ಹಿಮವಂತರು ಹೊರಟರು.

೬೫-೬೭. ಪಾರ್ವತಿಯು ಮೇಲೆ ಹೇಳಿದ ಸಂಭ್ರಮಗಳಿಂದ ಕೂಡಿದ ನಗರ ವನ್ನು ಪ್ರವೇಶಮಾಡಿ, ಶಾಂತರಾಗಿ ಆನಂದಾಶ್ರುಧಾರೆಯನ್ನು ಸುರಿಸುತ್ತ ರೋಮಾಂಚಗೊಂಡು ತನ್ನೆದುರಾಗಿ ಓಡಿಬರುತ್ತಿರುವ, ತಂದೆತಾಯಿಗಳನ್ನು ನೋಡಿದಳು. ಮತ್ತು ಸಖಿಯರೊಡನೆ ಶಾಂತವಾದ ಮುಖವುಳ್ಳವಳಾಗಿ ಅವರೀ ರ್ವರಿಗೂ ನಮಸ್ಕಾರಮಾಡಿದಳು. ಅನಂತರ ಆ ಮೇನಾಹಿಮವಂತರು ಆಶೀರ್ವಾದ ವನ್ನು ಮಾಡಿ ಆ ಪಾರ್ವತಿಯನ್ನು ಎದೆಯಿಂದ ಅಪ್ಪಿಕೊಂಡು ಮಗಳೇ, ಮಗಳೇ, ಎಂದು ಸಂತೋಷಾಧಿಕ್ಯದಿಂದ ಅಳುತ್ತಾ ಅವಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ತಮ್ಮ ಮನೆಗೆ ನಡೆದರು.

೬೮-೬೯. ಸ್ತ್ರೀಯರು ದೃಷ್ಟಿಯನ್ನು ತೆಗೆದರು ಬ್ರಾಹ್ಮಣರು ಆಶೀರ್ವಾದ ವನ್ನು ಮಾಡಿದರು ಪರ್ವತರಾಜನು ಬ್ರಾಹ್ಮಣರಿಗೂ ಹೊಗಳುಭಟ್ಟರಿಗೂ ಧನವನ್ನು

ಮಂಗಲಂ ಕಾರಯೋಮಾಸ ಪಾಠಯೋಮಾಸ ಛಾಂದಸಂ ।
ಏವಂ ಸ್ವಕನ್ಯಯಾ ಸಾರ್ಧಂ ತಸ್ಥತುಸ್ತೌ ಸ್ವಮಂದಿರೇ　　॥ ೬೯ ॥

ಸುಖೇನ ವಸತೌ ತೌ ಹಿ ಹರ್ಷನಿರ್ಭರಮಾನಸೌ ।
ಏಕದಾ ಚ ತಪಃ ಕರ್ತುಂ ಜಗಾಮ ಸ್ವರ್ಣದೀಂ ಗಿರಿಃ　　॥ ೭೦ ॥

ಮೇನಕಾ ಕನ್ಯಯಾ ಸಾರ್ಧಮುವಾಸ ಪ್ರಾಂಗಣೇ ಮುದಾ ।
ಏತಸ್ಮಿನ್ನಂತರೇ ಭಿಕ್ಷುರ್ನರ್ತಕಶ್ಚ ಸುಗಾಯನಃ　　॥ ೭೧ ॥

ಸಹಸೈಕ ಆಜಗಾಮ ಮೇನಕಾಸನ್ನಿಧಿಂ ಮುದಾ ।
ಶೃಂಗವಾದ್ಯಂ ವಾಮಹಸ್ತೇ ಡಮರುಂ ದಕ್ಷಿಣೇ ತಥಾ　　॥ ೭೨ ॥

ಕೃತ್ವಾ ವಿಭೂತಿಗಾತ್ರೋಽತಿವೃದ್ಧೋಽತೀವ ಜರಾತುರಃ ।
ಪೃಷ್ಠಕಂಥೋ ರಕ್ತವಾಸಾಃ ಸುಕಂಠೋಽತಿಮನೋಹರಃ　　॥ ೭೩ ॥

ಕೊಟ್ಟನು. ದಿವ್ಯಮಂಗಲ ಮಹೋತ್ಸವವನ್ನೂ ಮಾಡಿಸಿದನು. ವೇದ ಘೋಷಣೆಯನ್ನು ಮಾಡಿದನು. ಹೀಗೆ ಆ ಮೇನಾಹಿಮವಂತರು ಮಗಳೊಡನೆ ತಮ್ಮ ಮನೆಯಲ್ಲಿರುತ್ತಿದ್ದರು.

೭೦. ಹೀಗೆ ಆ ಮೇನಾಹಿಮವಂತರು ಸುಖವಾಗಿ ವಾಸಮಾಡುತ್ತ ಸಂತೋಷದಿಂದಿರುತ್ತಿರಲು, ಒಂದಾನೊಂದು ದಿನ ಹಿಮವಂತನು ತಪಸ್ಸನ್ನು ಮಾಡುವುದಕ್ಕಾಗಿ ದೇವಗಂಗಾನದಿಯ ತೀರಕ್ಕೆ ಹೋದನು.

೭೧. ಮೇನಕೆಯು ಮಗಳೊಂದಿಗೆ ಮನೆಯ ಮುಂಭಾಗದಲ್ಲಿದ್ದಳು. ಈ ಮಧ್ಯದಲ್ಲಿ ಹಾಡುವ ಮತ್ತು ಕುಣಿಯುವ ಭಿಕ್ಷುವೊಬ್ಬನು ಮೇನಕೆಯ ಸಮೀಪಕ್ಕೆ ಬಂದನು.

೭೨-೭೪. ಎಡದ ಕೈಯಲ್ಲಿ ಕೊಂಬಿನ ವಾದ್ಯವನ್ನೂ, ಬಲದ ಕೈಯಲ್ಲಿ ಡಮರುವನ್ನೂ, ಹಿಡಿದುಕೊಂಡ, ಮೈಯಲ್ಲಿ ವಿಭೂತಿಯನ್ನು ಧರಿಸಿರುವ, ಬಹಳ ಮುದುಕನಾದ, ಬೆನ್ನಿನ ಮೇಲೆ ಕಂತೆಯನ್ನು ಹೊತ್ತಿರುವ, ಮಧುರವಾದ ಕಂಠ

ಜಗೌ ಮಮ ಗುಣಾಖ್ಯಾನಂ ಕೃತ್ವಾ ನೃತ್ಯಂ ಮನೋಹರಂ ।
ನಾದಯಾಮಾಸ ಶೃಂಗಂ ಚ ಕ್ಷಣಂ ಡಮರುಕಂ ತಥಾ ॥ ೭೪ ॥

ಆಜಗ್ಮುರ್ನಾಗರಾ ಬಾಲಾ ಬಾಲಿಕಾ ಹರ್ಷವಿಹ್ವಲಾಃ ।
ವೃದ್ಧಾ ಯುವಾನೋ ಯುವತೀಸಮೂಹೋ ವೃದ್ಧಯೋಷಿತಃ ॥ ೭೫ ॥

ಶ್ರುತ್ವಾ ತು ಸುಂದರಂ ಗೀತಂ ಸುತಾನಸ್ವರಸಂಯುತಂ ।
ಸಹಸಾ ಮುಮುಹುಃ ಸರ್ವೇ ತೇನ ಮೂರ್ಛಾಮವಾಪ್ನುವನ್ ॥ ೭೬ ॥

ಮೂರ್ಛಾಂ ಸಂಪ್ರಾಪ ಸಾ ದುರ್ಗಾ ದದರ್ಶ ಹೃದಿ ಶಂಕರಂ ।
ತ್ರಿಶೂಲಪಟ್ಟಿಶಕರಂ ವ್ಯಾಘ್ರಚರ್ಮಧರಂ ಪರಂ ॥ ೭೭ ॥

ವಿಭೂತಿಭೂಷಣಂ ರಮ್ಯಮಸ್ಥಿಮಾಲಂ ಸುನಿರ್ಮಲಂ ।
ಈಷದ್ಧಾಸ್ಯಪ್ರಸನ್ನಾಸ್ಯಂ ಸುಪ್ರಸನ್ನಂ ತ್ರಿಲೋಚನಂ ॥ ೭೮ ॥

ಧ್ವನಿಯುಳ್ಳ ಮನೋಹರನಾದ ಆ ಭಿಕ್ಷುಕನು ನರ್ತನವನ್ನು ಮಾಡುತ್ತ ನನ್ನ ಗುಣಗಳನ್ನು ಹಾಡಿದನು. ಸ್ವಲ್ಪಕಾಲ ಕೊಂಬಿನ ವಾದ್ಯವನ್ನೂ, ಡಮರುವನ್ನೂ ಬಾರಿಸಿದನು.

೭೫. ನಗರದಲ್ಲಿದ್ದ ಬಾಲಕರು, ಬಾಲಿಕೆಯರು, ಮುದುಕರು, ಯುವಕರು, ಮುದುಕಿಯರು ಎಲ್ಲರೂ ಅತ್ಯಂತ ಸಂತೋಷಗೊಂಡವರಾಗಿ ಬಂದರು.

೭೬. ಇಂಪಾಗಿ ತಾಳ, ಸ್ವರ, ಲಯಗಳಿಂದ ಕೂಡಿದ ಆ ಗಾನವನ್ನು ಕೇಳಿ ಎಲ್ಲರೂ ಮೋಹಗೊಂಡರು. ಮತ್ತು ಮೂರ್ಛೆಯನ್ನು ಹೊಂದಿದರು.

೭೭-೭೯. ಆ ಪಾರ್ವತಿಯೂ ಮೂರ್ಛೆ ಹೊಂದಿದವಳಾಗಿ ತನ್ನ ಹೃದಯದಲ್ಲಿ ತ್ರಿಶೂಲ, ಪಟ್ಟಿಶಗಳನ್ನು ಕೈಯಲ್ಲಿ ಧರಿಸಿರುವ, ಹುಲಿಯ ಚರ್ಮವನ್ನುಟ್ಟಿರುವ, ವಿಭೂತಿಯಿಂದ ಅಲಂಕೃತನಾದ, ಮನೋಹರವೂ, ಸುಂದರವೂ ಆದ ಅಸ್ಥಿಮಾಲಿಕೆಯನ್ನು ಧರಿಸಿದ, ಮುಗುಳುನಗೆಯಿಂದ ಪ್ರಸನ್ನವಾದ ಮುಖವುಳ್ಳ, ಮೂರು

ಮಾಲಾಹಸ್ತಂ ಪಂಚವಕ್ತ್ರಂ ನಾಗಯಜ್ಞೋಪವೀತಕಂ ।
ವರಂ ವೃಣ್ವಿತ್ಯುಕ್ತವಂತಂ ಸುಂದರಂ ಚಂದ್ರಶೇಖರಂ ॥ ೭೯ ॥

ಹೃದಯಸ್ಥಂ ಹರಂ ದೃಷ್ಟ್ವಾ ಮನಸಾ ತಂ ನನಾಮ ಸಾ ।
ವರಂ ವವ್ರೇ ಮಾನಸೇ ಸಾ ತ್ವಂ ಪತಿರ್ಮೇ ಭವೇತಿ ಚ ॥ ೮೦ ॥

ಏವಂ ದತ್ತ್ವಾ ಶಿವಸ್ತಸ್ಯೈ ಚಾಂತರ್ಧಾನಂ ಚಕಾರ ಸಃ ।
ನ ದೃಷ್ಟ್ವಾ ಹೃದಿ ತಂ ದುರ್ಗಾ ಸಂಪ್ರಾಪ್ಯ ಚೇತನಾಂ ಪುನಃ ॥ ೮೧ ॥

ದದರ್ಶ ಚಕ್ಷುರುನ್ಮೀಲ್ಯ ಭಿಕ್ಷುಕಂ ಗಾಯಕಂ ಪುರಃ ।
ನೃತ್ಯಸಂಗೀತತಃ ಸಾ ತು ಭಿಕ್ಷುಕಸ್ಯ ಚ ಮೇನಕಾ ॥ ೮೨ ॥

ದಾತುಂ ಯಯೌ ಸಾ ರತ್ನಾನಿ ಸ್ವರ್ಣಪಾತ್ರಸ್ಥಿತಾನಿ ಚ ।
ಭಿಕ್ಷಾಂ ಯಯಾಚೇ ಭಿಕ್ಷುಸ್ತಾಂ ದುರ್ಗಾಂ ನಾನ್ಯಾಂ ಗೃಹೀತವಾನ್ ॥

ಕಣ್ಣುಗಳುಳ್ಳ, ಜಪಮಾಲಿಕೆಯನ್ನು ಕೈಯಲ್ಲಿ ಧರಿಸಿರುವ, ಐದು ಮುಖಗಳುಳ್ಳ, ಹಾವನ್ನು ಜನಿವಾರವಾಗಿ ಮಾಡಿಕೊಂಡಿರುವ, ತಲೆಯಲ್ಲಿ ಚಂದ್ರನನ್ನು ಧರಿಸಿರುವ, 'ವರವನ್ನು ಬೇಡು' ಎಂದು ಹೇಳುತ್ತಿರುವ ಸುಂದರನಾದ ಶಂಕರನನ್ನು ನೋಡಿದಳು.

೮೦. ಆ ಪಾರ್ವತಿಯು ತನ್ನ ಹೃದಯದಲ್ಲಿರುವ ಈಶ್ವರನನ್ನು ನೋಡಿ ಮನಸ್ಸಿನಲ್ಲಿಯೇ ಆವನಿಗೆ ನಮಸ್ಕಾರಮಾಡಿದಳು. ಮತ್ತು 'ನೀನು ನನಗೆ ಪತಿಯಾಗು' ಎಂದು ಮನಸ್ಸಿನಲ್ಲಿಯೇ ವರವನ್ನು ಬೇಡಿದಳು.

೮೧–೮೩. ಹಾಗೆಯೇ ಆಗಲೆಂದು ಈಶ್ವರನು ಪಾರ್ವತಿಗೆ ವರವನ್ನು ಕೊಟ್ಟು ಅಲ್ಲಿಯೇ ಮಾಯವಾದನು. ಪಾರ್ವತಿಯು ಹೃದಯದಲ್ಲಿ ಶಂಕರನನ್ನು ಕಾಣದೆ ಮೂರ್ಛೆ ತಿಳಿದವಳಾಗಿ ಕಣ್ಣುಗಳನ್ನು ತೆರೆದು ಎದುರಿನಲ್ಲಿರುವ ಭಿಕ್ಷುಕನನ್ನು ಕಂಡಳು. ಮೇನಕೆಯು ನರ್ತನ ಮತ್ತು ಸಂಗೀತಕ್ಕಾಗಿ ಭಿಕ್ಷುಕನಿಗೆ ಕೊಡುವುದಕ್ಕೋಸ್ಕರ ಚಿನ್ನದ ಪಾತ್ರೆಯಲ್ಲಿ ರತ್ನಗಳನ್ನಿಟ್ಟುಕೊಂಡು ಹೊರಟಳು ಭಿಕ್ಷುಕನು ಆ ಪಾರ್ವತಿಯನ್ನು ಭಿಕ್ಷವಾಗಿ ಕೊಡುವಂತೆ ಕೇಳಿದನು ಬೇರೆ ಯಾವ ಪದಾರ್ಥವನ್ನೂ ತೆಗೆದುಕೊಳ್ಳಲಿಲ್ಲ.

ಪುನಶ್ಚ ನರ್ತನಂ ಕರ್ತುಮುದ್ಯತಃ ಕೌತುಕೇನ ಚ ।
ಮೇನಾ ತದ್ವಚನಂ ಶ್ರುತ್ವಾ ಚುಕೋಪ ವಿಸ್ಮಯಂ ಯಯೌ ॥ ೮೪ ॥

ಭಿಕ್ಷುಕಂ ಭರ್ತ್ಸಯಾಮಾಸ ಬಹಿಃ ಕರ್ತುಮುವಾಚ ತಂ ।
ಪತ್ನೀ ತ್ರಿಲೋಕನಾಥಸ್ಯ ಶಿವಸ್ಯ ಪರಮಾತ್ಮನಃ ॥ ೮೫ ॥

ಯಾಚ್ನಾಮಿಮಾಂ ಪ್ರಕುರ್ವಂತಂ ದೂರಂ ಕುರು ಕುಭಾಷಣಂ ।
ಏತಸ್ಮಿನ್ನಂತರೇ ತಪ್ತ್ವಾ ಗಿರಿಃ ಸ್ವಾಲಯಮಾಯಯೌ ॥ ೮೬ ॥

ದದರ್ಶ ಪುರತೋ ಭಿಕ್ಷುಂ ಪ್ರಾಂಗಣಸ್ಥಂ ಮನೋಹರಂ ।
ಕೃತ್ವಾ ನಾರಾಯಣಾರ್ಚಾಂ ಚ ಗಂಗಾತೀರೇ ಮನೋಹರೇ ॥ ೮೭ ॥

ತನ್ಮೂರ್ತಿಧ್ಯಾನವಿಶ್ಲೇಷಶೋಕಾದುದ್ವಿಗ್ನಮಾನಸಃ ।
ಶ್ರುತ್ವಾ ಮೇನಾಮುಖಾದ್ವಾರ್ತಾಂ ಜಹಾಸ ಚ ಚುಕೋಪ ಸಃ ॥ ೮೮ ॥

೮೪-೮೬. ಮತ್ತೆ ಭಿಕ್ಷುಕನು ಕುತೂಹಲದಿಂದ ಕುಣಿಯಲು ಪ್ರಾರಂಭಿಸಿದನು. ಮೇನಾದೇವಿಯು ಅವನ ಮಾತನ್ನು ಕೇಳಿ ಬಹಳ ಆಶ್ಚರ್ಯವನ್ನು ಹೊಂದಿದಳು. ಮತ್ತು ಕೋಪಗೊಂಡವಳಾಗಿ ಭಿಕ್ಷುಕನನ್ನು ಗದರಿಸಿಕೊಂಡಳು. ಮೂರು ಲೋಕಗಳಿಗೂ ಒಡೆಯನಾದ ಪರಮಾತ್ಮನಾದ ಶಿವನ ಪತ್ನಿಯನ್ನು ಹೀಗೆ ಬೇಡುತ್ತಿರುವ ಅಯೋಗ್ಯವಾದ ಮಾತನ್ನಾಡಿದ ಇವನನ್ನು ದೂರಮಾಡಬೇಕೆಂಬುದಾಗಿ ಅವನನ್ನು ಹೊರಕ್ಕೆ ಕಳುಹಿಸಲು ಅಪ್ಪಣೆಮಾಡಿದಳು. ಈ ಸಮಯದಲ್ಲಿ ಹಿಮವಂತನು ತಪಸ್ಸನ್ನು ಮಾಡಿಕೊಂಡು ತನ್ನ ಮನೆಗೆ ಬಂದನು.

೮೭-೮೮ ಮನೆಯ ಮುಂಭಾಗದಲ್ಲಿ ನಿಂತಿರುವ ಸುಂದರನಾದ ಭಿಕ್ಷುವನ್ನು ನೋಡಿದನು. ಮನೋಹರವಾದ ಗಂಗಾತೀರದಲ್ಲಿ ನಾರಾಯಣನ ಪೂಜೆಯನ್ನು ಮಾಡಿ ಆ ಪರಮಾತ್ಮನ ಮೂರ್ತಿಧ್ಯಾನದ ಅಗಲುವಿಕೆಯ ದುಃಖದಿಂದ ಉದ್ವೇಗಗೊಂಡ ಮನಸ್ಸುಳ್ಳ ಹಿಮವಂತನು ಮೇನಾದೇವಿಯಿಂದ ಅಲ್ಲಿ ನಡೆದ ಸಮಾಚಾರಗಳನ್ನು ಕೇಳಿ ನಕ್ಕನು ಮತ್ತು ಕೋಪಗೊಂಡನು.

ಆಜ್ಞಾಂ ಚಕಾರ ಸ್ವಚರಂ ಬಹಿಃ ಕರ್ತುಂ ಚ ಭಿಕ್ಷುಕಂ ।
ಆಕಾಶಮಿವ ದುಃಸ್ಪರ್ಶಂ ಪ್ರಜ್ವಲಂತಂ ಸ್ವತೇಜಸಾ ॥ ೮೯ ॥

ನ ಶಶಾಕ ಬಹಿಃ ಕರ್ತುಂ ಸಮೀಪಂ ಗಂತುಮಕ್ಷಮಃ ।
ದದರ್ಶ ಭಿಕ್ಷುಕಂ ಶೈಲಃ ಕ್ಷಣಂ ಚಾರುಚತುರ್ಭುಜಂ ॥ ೯೦ ॥

ಕಿರೀಟಿನಂ ಕುಂಡಲಿನಂ ಪೀತಾಂಬರಧರಂ ಪರಂ ।
ಸುವೇಷಂ ಸುಂದರಂ ಶ್ಯಾಮಮೀಷದ್ಧಾಸ್ಯಂ ಮನೋಹರಂ ॥ ೯೧ ॥

ಚಂದನೋಕ್ಷಿತಸರ್ವಾಂಗಂ ಭಕ್ತಾನುಗ್ರಹಕಾರಕಂ ।
ಯದ್ಯತ್ಪುಷ್ಪಂ ಪ್ರದತ್ತಂ ಚ ಪೂಜಾಕಾಲೇ ಗದಾಭೃತೇ ॥ ೯೨ ॥

ಗಾತ್ರೇ ಶಿರಸಿ ತತ್ಸರ್ವಂ ಭಿಕ್ಷುಕಸ್ಯ ದದರ್ಶ ಹ ।
ಧೂಪಃ ಪ್ರದೀಪೋ ಯೋ ದತ್ತೋ ನೈವೇದ್ಯಂ ವಾ ಮನೋಹರಂ ॥ ೯೩ ॥

೮೯–೯೨. ತನ್ನ ಸೇವಕನನ್ನು ಕರೆದು ಆ ಭಿಕ್ಷುಕನನ್ನು ಹೊರಕ್ಕೆ ಕಳುಹಿಸಲು ಅಪ್ಪಣೆಮಾಡಿದನು. ಆಕಾಶದಂತೆ ಸ್ಪರ್ಶಮಾಡಲಸಾಧ್ಯನಾಗಿ ದಿವ್ಯ ತೇಜಸ್ಸಿನಿಂದ ಪ್ರಕಾಶಮಾನವಾಗಿರುವ ಆ ಭಿಕ್ಷುಕನ ಸಮೀಪಕ್ಕೆ ಹೋಗುವುದಕ್ಕೂ ಸಾಧ್ಯವಿಲ್ಲದೆ ಅವನನ್ನು ಕಳುಹಿಸಲಸಮರ್ಥನಾದನು. ಸ್ವಲ್ಪ ಹೊತ್ತು ಹಿಮವಂತನು ಆ ಭಿಕ್ಷುಕನನ್ನು ಸುಂದರವಾದ ನಾಲ್ಕು ತೋಳುಗಳುಳ್ಳವನಾಗಿಯೂ, ಕಿರೀಟ ಕುಂಡಲ ಪೀತಾಂಬರಗಳನ್ನು ಧರಿಸಿದವನಾಗಿಯೂ, ಉತ್ತಮವಾದ ಅಲಂಕಾರ ವನ್ನು ಮಾಡಿಕೊಂಡು ಸುಂದರನಾಗಿ ಕಪ್ಪುಬಣ್ಣದಿಂದ ಕೂಡಿ ಮುಗುಳು ನಗೆಯು ಳ್ಳವನನ್ನಾಗಿಯೂ, ಭಕ್ತರ ಮೇಲೆ ದಯೆದೋರುವವನನ್ನಾಗಿಯೂ ನೋಡಿದನು. ತಾನು ನಾರಾಯಣನನ್ನು ಪೂಜಿಸುವಾಗ ಯಾವ ಯಾವ ಹೂಗಳನ್ನು ಪೂಜೆಮಾಡಿ ದ್ದನೋ ಅವುಗಳನ್ನೆಲ್ಲ ಈ ಭಿಕ್ಷುಕನ ಮೈಮೇಲೂ ತಲೆಯ ಮೇಲೂ ಕಂಡನು.

೯೩–೯೫. ತಾನು ನಾರಾಯಣನಿಗೆ ಸಮರ್ಪಿಸಿದ ಧೂಪ, ದೀಪ, ನೈವೇದ್ಯ ಮುಂತಾದುವುಗಳು ಆ ಭಿಕ್ಷುಕನ ಮುಂದಿರುವುದನ್ನು ಹಿಮವಂತನು ಕಂಡನು.

ದದರ್ಶ ಶೈಲಸ್ತತ್ರೈವರ್ಣಂ ಭಿಕ್ಷುಕಸ್ಯ ಪುರಃ ಸ್ಥಿತಂ |
ಕ್ಷಣಂ ದದರ್ಶ ದ್ವಿಭುಜಂ ವಿನೋದಮುರಲೀಕರಂ || ೯೪ ||

ಗೋಪವೇಷಂ ಕಿಶೋರಂ ಚ ಸಸ್ಮಿತಂ ಶ್ಯಾಮಸುಂದರಂ |
ಮಯೂರಪಿಚ್ಛಚೂಡಂ ಚ ರತ್ನಾಲಂಕಾರ ಭೂಷಿತಂ || ೯೫ ||

ಚಂದನೋಕ್ಷಿತಸರ್ವಾಂಗಂ ವನಮಾಲಾವಿಭೂಷಿತಂ |
ಕ್ಷಣಂ ದದರ್ಶ ಸ್ವಚ್ಛಂ ಚ ಶಂಕರಂ ಚಂದ್ರಶೇಖರಂ || ೯೬ ||

ತ್ರಿಶೂಲಪಟ್ಟಿಶಕರಂ ವ್ಯಾಘ್ರಚರ್ಮಾಂಬರಂ ಪರಂ |
ವಿಭೂತಿಗಾತ್ರಮಮಲಮಸ್ಥಿಮಾಲಾ ವಿಭೂಷಿತಂ || ೯೭ ||

ನಾಗಯಜ್ಞೋಪವೀತಂ ಚ ತಪ್ತಸ್ವರ್ಣಜಟಾಧರಂ |
ಡಮರುಶೃಂಗಹಸ್ತಂ ಚ ಸುಪ್ರಶಸ್ತಂ ಮನೋಹರಂ || ೯೮ ||

ಪ್ರಜಪಂತಂ ಹರೇರ್ನಾಮ ಶ್ವೇತಾಬ್ಜಬೀಜಮಾಲಯಾ |
ಈಷದ್ಧಾಸ್ಯಪ್ರಸನ್ನಾಸ್ಯಂ ಭಕ್ತಾನುಗ್ರಹಕಾರಕಂ || ೯೯ ||

ಒಂದು ಕ್ಷಣಕಾಲ ಎರಡು ತೋಳುಗಳುಳ್ಳ ವಿನೋದದಿಂದ ಮುರಳಿಯನ್ನು ಕೈಯಲ್ಲಿ ಹಿಡಿದಿರುವ ನವಿಲಿನ ಗರಿಯನ್ನು ತಲೆಗೆ ಕಟ್ಟಿಕೊಂಡಿರುವ ಗೊಲ್ಲರ ವೇಷವನ್ನು ಧರಿಸಿರುವ ಮಂದಹಾಸವನ್ನು ಬೀರುತ್ತಿರುವ ಕಪ್ಪುಬಣ್ಣದಿಂದ ಸುಂದರನಾದ ಯೌವನವಂತನಾದ ಅವನ ರತ್ನಾಲಂಕಾರಭೂಷಿತವಾದ ರೂಪವನ್ನು ನೋಡಿದನು.

೯೬-೯೯. ಒಂದು ಕ್ಷಣಕಾಲ ಶುಭ್ರನಾದ ಚಂದ್ರನನ್ನು ತಲೆಯಲ್ಲಿ ಮುಡಿದಿರುವ, ತ್ರಿಶೂಲ ಮತ್ತು ಪಟ್ಟಿಶಗಳನ್ನು ಕೈಯಲ್ಲಿ ಹಿಡಿದಿರುವ, ಹುಲಿಯ ಚರ್ಮವನ್ನುಟ್ಟಿರುವ, ಶುದ್ಧವಾದ ವಿಭೂತಿಯನ್ನು ಶರೀರಕ್ಕೆ ಲೇಪಿಸಿಕೊಂಡಿರುವ, ಅಸ್ಥಿಮಾಲಿಕೆಯನ್ನು ಧರಿಸಿರುವ, ಸರ್ಪಗಳನ್ನು ಜನಿವಾರವನ್ನಾಗಿ ಮಾಡಿಕೊಂಡಿರುವ, ಕಾಯಿಸಿದ ಚಿನ್ನದಂತಿರುವ ಜಟೆಯನ್ನು ಧರಿಸಿರುವ, ಡಮರುಗವನ್ನೂ ಕೊಂಬನ್ನೂ ಹಿಡಿದಿರುವ, ಬಿಳಿಯ ತಾವರೆಯ ಬೀಜದ ಜಪಮಾಲೆಯನ್ನು ಹಿಡಿದು ಹರಿನಾಮವನ್ನು ಜಪಮಾಡುತ್ತಿರುವ, ಮುಗುಳುನಗೆಯಿಂದ ಗಂಭೀರವಾದ ಮುಖವುಳ್ಳ, ಭಕ್ತರಲ್ಲಿ ದಯೆಯನ್ನು ಬೀರುತ್ತಿರುವ, ತನ್ನ ತೇಜಸ್ಸಿನಿಂದ ಜಾಜ್ವಲ್ಯಮಾನನಾದ ಐದು ಮುಖಗಳುಳ್ಳ, ಮೂರು ಕಣ್ಣುಗಳನ್ನು ಪಡೆದಿರುವ, ಶಂಕರನ ರೂಪವನ್ನು ಆ ಭಿಕ್ಷುಕನಲ್ಲಿ ಕಂಡನು.

ಸ್ವತೇಜಸಾ ಪ್ರಜ್ವಲಂತಂ ಪಂಚವಕ್ತ್ರಂ ತ್ರಿಲೋಚನಂ ।
ಕ್ಷಣಂ ದದರ್ಶ ಜಗತಾಂ ಸ್ರಷ್ಟಾರಂ ಚ ಚತುರ್ಮುಖಂ ॥ ೧೦೦ ॥

ಜಪಂತಂ ಶ್ರೀಹರೇರ್ನಾಮ ಸ್ವಚ್ಛಸ್ಫಟಿಕಮಾಲಯಾ ।
ಕ್ಷಣಂ ಸೂರ್ಯಸ್ವರೂಪಂ ಚ ದದರ್ಶ ತ್ರಿಗುಣಾತ್ಮಕಂ ॥ ೧೦೧ ॥

ದದರ್ಶ ತಮತೀವ್ರಂ ತು ಜ್ವಲಂತಂ ಬ್ರಹ್ಮತೇಜಸಾ ।
ಕ್ಷಣಮಗ್ನಿಸ್ವರೂಪಂ ಚ ಜ್ವಲಂತಮತಿತೇಜಸಾ ॥ ೧೦೨ ॥

ಕ್ಷಣಮಾಹ್ಲಾದಜನಕಂ ಚಂದ್ರರೂಪಂ ದದರ್ಶ ಹ ।
ಕ್ಷಣಂ ತೇಜಃಸ್ವರೂಪಂ ಚ ನಿರಾಕಾರಂ ನಿರಂಜನಂ ॥ ೧೦೩ ॥

ನಿರ್ಲಿಪ್ತಂ ಚ ನಿರೀಹಂ ಚ ಪರಮಾತ್ಮಸ್ವರೂಪಿಣಂ ।
ಏವಂ ಸ್ವೇಚ್ಛಾಮಯಂ ದೃಷ್ಟ್ವಾ ನಾನಾರೂಪಧರಂ ಪರಂ ॥ ೧೦೪ ॥

ಹರ್ಷಾಶ್ರುಪುಲಕಃ ಶೈಲೋ ದಂಡವತ್ ಪ್ರಣನಾಮ ತಂ ।
ಭಕ್ತ್ಯಾ ಪ್ರದಕ್ಷಿಣೀಕೃತ್ಯ ಪ್ರಣಮ್ಯ ಚ ಪುನಃ ಪುನಃ ॥ ೧೦೫ ॥

೧೦೦–೧೦೨. ಒಂದು ಕ್ಷಣಕಾಲ ಶುಭ್ರವಾದ ಸ್ಫಟಿಕದ ಜಪಮಾಲೆಯನ್ನು ಹಿಡಿದು ಶ್ರೀಹರಿಯ ನಾಮವನ್ನು ಜಪಿಸುತ್ತಿರುವ, ಜಗತ್ತನ್ನು ಸೃಷ್ಟಿಮಾಡುವ ನಾಲ್ಕು ಮುಖವುಳ್ಳ ಬ್ರಹ್ಮನ ರೂಪವನ್ನು ಅವನಲ್ಲಿ ಕಂಡನು. ಮತ್ತೊಂದು ಕ್ಷಣದಲ್ಲಿ ಸತ್ವರಜಸ್ತಮೋ ಗುಣಸ್ವರೂಪನಾದ ಬ್ರಹ್ಮತೇಜಸ್ಸಿನಿಂದ ಉರಿಯುತ್ತಿರುವ, ಅತಿತೀಕ್ಷ್ಣನಲ್ಲದ ಸೂರ್ಯನ ರೂಪವನ್ನೂ, ಮತ್ತೆ ಸ್ವಲ್ಪಕಾಲ ತನ್ನ ಕಾಂತಿಯಿಂದ ಬೆಳಗುತ್ತಿರುವ ಅಗ್ನಿಯ ರೂಪವನ್ನೂ ಕಂಡನು.

೧೦೩–೧೦೫. ಮತ್ತೆ ಕೆಲಕಾಲ ಆಹ್ಲಾದವನ್ನುಂಟುಮಾಡುವ ಚಂದ್ರನಂತೆಯೂ, ಇನ್ನು ಸ್ವಲ್ಪಕಾಲ ತೇಜೋಮಯನೂ, ಆಕಾರವಿಲ್ಲದವನೂ, ನಿರ್ಲಿಪ್ತನೂ, ಆಶಾರಹಿತನೂ ಆದ ಪರಮಾತ್ಮಸ್ವರೂಪದಂತೆಯೂ, ಕಂಡನು. ಹೀಗೆ ತನ್ನ ಇಷ್ಟಬಂದಂತೆ ನಾನಾರೂಪಗಳನ್ನು ಧರಿಸುತ್ತಿರುವ ಆ ಪರಮಾತ್ಮನನ್ನು ನೋಡಿ ಹಿಮವಂತನು ಆನಂದದಿಂದ ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಮೈಯೆಲ್ಲಾ ರೋಮಾಂಚವಾಗಿರಲು ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು ಹೀಗೆ ಭಕ್ತಿಯಿಂದ ಪ್ರದಕ್ಷಿಣೆಯನ್ನು ಮಾಡಿ ಮತ್ತೆ ಮತ್ತೆ ನಮಸ್ಕಾರಮಾಡಿ ಸಂತೋಷದಿಂದ ಮೇಲಕ್ಕೆದ್ದು ಮತ್ತೆ ನಿಜವಾದ ಭಿಕ್ಷುಕನನ್ನು ನೋಡಿದನು.

ಸಮುತ್ಪತ್ಯ ಹರ್ಷಯುಕ್ತೋ ದದರ್ಶ ಪುನರೇವ ತಂ ।
ವಾಸ್ತವಂ ಭಿಕ್ಷುಕಂ ದೃಷ್ಟ್ವಾ ಶೈಲೇಂದ್ರೋ ವಿಷ್ಣುಮಾಯಯಾ ॥ ೧೦೬ ॥

ವಿಸಸ್ಮಾರ ಚ ತತ್ಸರ್ವಂ ನಾನಾರೂಪಧರಂ ಪರಂ ।
ಭಿಕ್ಷಾಂ ಯಯಾಚೇ ಭಿಕ್ಷುಸ್ತಂ ಭಿಕ್ಷಾಸ್ಥಾಲೀ ಸ್ವಪಾರ್ಶ್ವಕಃ ॥ ೧೦೭ ॥

ರಕ್ತಾಂಬರಃ ಶೃಂಗವಾದ್ಯವಿಚಿತ್ರಡಮರುಃ ಕರೇ ।
ಆದಾತುಮುತ್ಸುಕೋ ದುರ್ಗಾಂ ನಾನ್ಯಾಂ ಭಿಕ್ಷುಃ ಕದಾಚನ ॥ ೧೦೮ ॥

ಸ ಸ್ವೀಚಕಾರ ಶೈಲೇಂದ್ರೋ ಮೋಹಿತೋ ವಿಷ್ಣುಮಾಯಯಾ ।
ಭಿಕ್ಷುಃ ಕಿಂಚಿನ್ನ ಜಗ್ರಾಹ ತತ್ರೈವಾಂತರಧೀಯತ ॥ ೧೦೯ ॥

ತದಾ ಬಭೂವ ಜ್ಞಾನಂ ಚ ಮೇನಕಾಶೈಲಯೋಃ ಪ್ರಿಯೇ ।
ಅಹೋ ದೃಷ್ಟೋ ಜಗನ್ನಾಥ ಆವಾಭ್ಯಾಂ ಸ್ವಪ್ನವದ್ದಿನೇ ॥ ೧೧೦ ॥

ಆವಾಂ ಶಿವೋ ವಂಚಯಿತ್ವಾ ಸ್ವಸ್ಥಾನಂ ಗತವಾನ್ವಿಭುಃ ।
ತಯೋರ್ಭಕ್ತಿಂ ಶಿವೇ ದೃಷ್ಟ್ವಾ ಸರ್ವೇ ದೇವಾಶ್ಚ ಚಿಂತಿತಾಃ ॥ ೧೧೧ ॥

೧೦೬-೧೦೯ ಪರ್ವತರಾಜನು ನಿಜವಾದ ಭಿಕ್ಷುಕನನ್ನು ನೋಡಿ ವಿಷ್ಣುವಿನ ಮಾಯೆಯಿಂದ ನಾನಾರೂಪಧಾರಿಯಾದ ಪರಮಾತ್ಮನ ವಿಷಯವನ್ನೆಲ್ಲ ಮರೆತನು. ಆ ಭಿಕ್ಷುಕನು ಕೆಂಪುಬಟ್ಟೆಯನ್ನುಟ್ಟು ವಿಚಿತ್ರವಾದ ಕೊಂಬಿನ ವಾದ್ಯವನ್ನೂ ಡಮರುಗವನ್ನೂ ಕೈಯಲ್ಲಿ ಹಿಡಿದು, ಪಕ್ಕದಲ್ಲಿ ಭಿಕ್ಷಾಪಾತ್ರೆಯನ್ನಿಟ್ಟುಕೊಂಡು ಆ ಹಿಮವಂತನನ್ನು ಭಿಕ್ಷೆಯನ್ನು ಬೇಡಿದನು. ಭಿಕ್ಷುಕನು ಪಾರ್ವತಿಯನ್ನು ಸ್ವೀಕರಿಸಲಿಷ್ಟವುಳ್ಳವನಾಗಿ ಬೇರೆಯಾವುದನ್ನೂ ಮುಟ್ಟಲಿಲ್ಲ. ಹಿಮವಂತನಾದರೋ ವಿಷ್ಣುಮಾಯೆಯಿಂದ ಮೋಹಿತನಾದನು. ಭಿಕ್ಷುಕನು ಏನನ್ನೂ ಸ್ವೀಕರಿಸದೆ ಹಾಗೆಯೇ ಅಲ್ಲಿಯೇ ಮಾಯವಾದನು

೧೧೦-೧೧೧. ಎಲೈ ಪ್ರಿಯಳೇ, ಆಗ ಮೇನಕಾ ಹಿಮವಂತರಿಗೆ ಜ್ಞಾನೋದಯವಾಯಿತು. ಅಯ್ಯೋ ನಮ್ಮಿಂದ ಹಗಲುಗನಸಿನಂತೆ ಪರಮಾತ್ಮನು ನೋಡಲ್ಪಟ್ಟನು. ಆ ಶಿವನು ನಮ್ಮನ್ನು ವಂಚನೆಮಾಡಿ ಸ್ವಸ್ಥಾನವನ್ನು ಕುರಿತು ತೆರಳಿದನು, ಎಂದು ವ್ಯಥೆಪಟ್ಟರು. ಈಶ್ವರನಲ್ಲಿ ಆ ಮೇನಕಾ ಹಿಮವಂತರಿಗಿರುವ ಭಕ್ತಿಯನ್ನು ಕಂಡು ಸಕಲ ದೇವತೆಗಳೂ ಯೋಚಿಸಿದರು.

ಚಕ್ರುಃ ಶಕ್ರಾದಯೋ ಯುಕ್ತಿಂ ಸುಮೇರೋ ರಕ್ಷಣೇ ಭರಾತ್ ।
ಏಕಾಂತಭಕ್ತ್ಯಾ ಶೈಲಶ್ಚೇತ್ಕನ್ಯಾಂ ತಸ್ಮೈ ಪ್ರದಾಸ್ಯತಿ ॥ ೧೧೨ ॥

ಧ್ರುವಂ ನಿರ್ವಾಣತಾಂ ಸದ್ಯಃ ಸಂಪ್ರಾಪ್ನೋತ್ಯೇವ ಭಾರತೇ ।
ಅನಂತರತ್ನಾಧಾರಶ್ಚೇತ್ ಪೃಥ್ವೀಂ ತ್ಯಕ್ತ್ವಾ ಪ್ರಯಾಸ್ಯತಿ ॥ ೧೧೩ ॥

ರತ್ನಗರ್ಭಾಭಿಧಾ ಭೂಮೇರ್ಮಿಥ್ಯೈವ ಭವಿತಾ ಧ್ರುವಂ ।
ಸ್ಥಾವರತ್ವಂ ಪರಿತ್ಯಜ್ಯ ದಿವ್ಯರೂಪಂ ವಿಧಾಯ ಸಃ ॥ ೧೧೪ ॥

ಕನ್ಯಾಂ ಶೂಲಭೃತೇ ದತ್ವಾ ವಿಷ್ಣುಲೋಕಂ ಗಮಿಷ್ಯತಿ ।
ನಾರಾಯಣಸ್ಯ ಸಾರೂಪ್ಯಂ ಭವಿಷ್ಯತ್ಯೇವ ಲೀಲಯಾ ॥ ೧೧೫ ॥

ಸಂಪ್ರಾಪ್ಯ ಪಾರ್ಷದತ್ವಂ ಚ ಹರಿದಾಸೋ ಭವಿಷ್ಯತಿ ।
ದಶವಾಪೀಸಮಾ ಕನ್ಯಾ ದೀಯತೇ ಬ್ರಾಹ್ಮಣಾಯ ತಾಂ ॥ ೧೧೬ ॥

ವೇದಜ್ಞಾಯ ಪವಿತ್ರಾಯ ಚಾಪ್ರತಿಗ್ರಹಶಾಲಿನೇ ।
ಸಂಧ್ಯಾಯಜ್ಞವೇದಪಾಠಕಾರಿಣೇ ಸತ್ಯವಾದಿನೇ ॥ ೧೧೭ ॥

೧೧೨–೧೧೫. ಇಂದ್ರನೇ ಮುಂತಾದವರು ಸುಮೇರುವನ್ನು ಕಾಪಾಡುವ ಭಾರದಿಂದ ಒಂದು ಉಪಾಯವನ್ನು ಯೋಚಿಸಿದರು. ಪರ್ವತರಾಜನು ಅಚಲವಾದ ಭಕ್ತಿಯಿಂದ ತನ್ನ ಪುತ್ರಿಯನ್ನು ಈಶ್ವರನಿಗೆ ಕೊಡುವುದಾದರೆ ಆಗ ನಿಜವಾಗಿಯೂ ಜಾಗ್ರತೆಯಾಗಿ ಭಾರತದಲ್ಲಿ ಮೋಕ್ಷವನ್ನು ಹೊಂದುತ್ತಾನೆ. ನಾನಾರತ್ನಗಳಿಗೆ ಆಧಾರನಾದ ಹಿಮವಂತನು ಭೂಮಿಯನ್ನು ಬಿಟ್ಟು ಹೋದವನಾದರೆ ಖಂಡಿತ ವಾಗಿಯೂ ಭೂಮಿಯ ರತ್ನಗರ್ಭಾ ಎಂಬ ಹೆಸರು ವ್ಯರ್ಥವಾಗುತ್ತದೆ. ಆ ಹಿಮವಂತನು ತನ್ನ ಮಗಳನ್ನು ಶಂಕರನಿಗೆ ಕೊಟ್ಟು ತನ್ನ ಸ್ಥಾವರರೂಪವನ್ನು ಬಿಟ್ಟು ದಿವ್ಯರೂಪವನ್ನು ತಳೆದು ವಿಷ್ಣುಲೋಕವನ್ನು ಕುರಿತು ಹೋಗುತ್ತಾನೆ. ನಾರಾಯಣನ ಸಾರೂಪ್ಯವೂ ಸುಲಭವಾಗಿ ಆಗುತ್ತದೆ.

೧೧೬–೧೧೮. ಅಲ್ಲಿ ಪಾರ್ಷದ ಪದವಿಯನ್ನು ಪಡೆದು ಹರಿದಾಸನಾಗುವನು. ವೇದಾಧ್ಯಯನವನ್ನು ಮಾಡಿ ಪರಿಶುದ್ಧನಾದ ದಾನವನ್ನು ತೆಗೆದುಕೊಳ್ಳದ ಬ್ರಾಹ್ಮಣನಿಗೆ ಕನ್ಯೆಯನ್ನು ದಾನಮಾಡಿದರೆ ಹತ್ತು ಕೊಳಗಳನ್ನು ನಿರ್ಮಾಣ ಮಾಡಿದ ಫಲವುಂಟಾಗುವುದು. ಸಂಧ್ಯಾವಂದನೆ ಯಜ್ಞ ವೇದಪಠನ ಇವುಗಳಲ್ಲಿ

ಅಸ್ಮೈ ಪ್ರದತ್ತಾ ಕನ್ಯಾ ಚ ದಶವಾಪೀ ಫಲಪ್ರದಾ ।
ತ್ರಿಸಂಧ್ಯಂ ಕಾರಿಣೇ ಸತ್ಯವಾದಿನೇ ಗೃಹಶಾಲಿನೇ ॥ ೧೧೮ ॥

ವೇದಜ್ಞಾಯ ಸುವಿಪ್ರಾಯ ದತ್ತ್ವಾ ಸುಫಲದಾಯಿನೀ ।
ಪ್ರತಿಗ್ರಹಗೃಹೀತಾಯ ಸಂಧ್ಯಾಹೀನಾಯ ನಿತ್ಯಶಃ ॥ ೧೧೯ ॥

ಮೂರ್ಖಾಯ ದತ್ತಾ ಕನ್ಯಾ ಸಾ ತ್ವರ್ಧಾಂಶಫಲದಾಯಿನೀ ।
ಪರದಾರಗೃಹೀತಾಯ ಯಾಜಕಾಯ ದ್ವಿಜಾತಯೇ ॥ ೧೨೦ ॥

ಶಠಾಯ ಸಂಧ್ಯಾಹೀನಾಯ ವಾಪ್ಯೈಕಫಲದಾ ಸುತಾ ।
ಸರ್ವಸಂಧ್ಯಾಸುಗಾಯತ್ರೀವಿಹೀನಾಯ ಶಠಾಯ ಚ ॥ ೧೨೧ ॥

ವೈಶ್ಯೋದ್ಭವಾಯ ದತ್ತಾ ಯಾ ವಾಪ್ಯರ್ಧಫಲದಾ ಸ್ಮೃತಾ ।
ಪಾಪಿನೇ ಶೂದ್ರಜಾತಾಯ ವಿಪ್ರಕ್ಷತ್ರೋದ್ಭವಾಯ ಚ ॥ ೧೨೨ ॥

ನಿರತನಾದ ಸತ್ಯವಂತನಿಗೆ ಕನ್ಯಾದಾನವನ್ನು ಮಾಡಿದರೂ, ಮೂರು ಕಾಲಗಳಲ್ಲಿ ಸಂಧ್ಯಾವಂದನೆಯನ್ನು ಮಾಡುತ್ತ ವೇದಾಧ್ಯಯನಸಂಪನ್ನನಾಗಿ ಗೃಹಸ್ಥಾಶ್ರಮ ಧರ್ಮದಲ್ಲಿ ನಿರತನಾಗಿ ಸತ್ಯವಂತನಾದವನಿಗೆ ಕನ್ಯಾದಾನವನ್ನು ಮಾಡಿದರೂ ಮೇಲೆ ಹೇಳಿದ ಫಲವನ್ನು ಹೊಂದುತ್ತಾನೆ.

೧೧೯–೧೨೨. ಯಾವಾಗಲೂ ದಾನವನ್ನು ತೆಗೆದುಕೊಳ್ಳುವ ಸಂಧ್ಯಾವಂದನೆಯನ್ನು ಮಾಡದ ಮೂರ್ಖನಿಗೆ ಕನ್ಯಾದಾನ ಮಾಡಿದರೆ ಮೇಲೆ ಹೇಳಿರುವುದರ ಅರ್ಧಭಾಗ ಫಲವನ್ನು ಹೊಂದುವನು. ಪರಸ್ತ್ರೀನಿರತನಾದ ಯಾಗವನ್ನು ಮಾಡಿಸುವ ದುಷ್ಟನಾದ ಬ್ರಾಹ್ಮಣನಿಗೆ ಕನ್ಯಾದಾನಮಾಡಿದರೆ ಒಂದು ಕೆರೆಯ ನಿರ್ಮಾಣದ ಫಲವನ್ನು ಹೊಂದುವನು. ಮೂರು ಸಂಧ್ಯಾಕಾಲಗಳಲ್ಲಿಯೂ ಗಾಯತ್ರಿಯನ್ನೂ ಉಚ್ಚರಿಸದ ನೀಚನು ವೈಶ್ಯನಿಂದ ಹುಟ್ಟಿದವನೂ ಆದವನಿಗೆ ಕನ್ಯಾದಾನಮಾಡಿದರೆ ಅರ್ಧಕೊಳವನ್ನು ನಿರ್ಮಿಸಿದ ಫಲವನ್ನು ಹೊಂದುವನು. ಪಾಪಿಯೂ ಶೂದ್ರನಿಂದ ಹುಟ್ಟಿದವನೂ ಕ್ಷತ್ರಿಯನಿಂದ ಹುಟ್ಟಿದವನೂ ಆದ ವಿಪ್ರನಿಗೆ ಕನ್ಯಾದಾನಮಾಡಿದರೆ ನರಕವನ್ನು ಹೊಂದುವನು.

ದತ್ವಾ ಚಾಂಡಾಲತುಲ್ಯಾಯ ಕನ್ಯಾ ಸಾ ನರಕಪ್ರದಾ ।
ವಿಷ್ಣುಭಕ್ತಾಯ ವಿದುಷೇ ವಿಪ್ರಾಯ ಸತ್ಯವಾದಿನೇ ॥ ೧೨೩ ॥

ಜಿತೇಂದ್ರಿಯಾಯ ದತ್ತಾ ಯಾ ವಿಂಶದ್ವಾಪೀ ಫಲಪ್ರದಾ ।
ಷಷ್ಠಿವರ್ಷಸಹಸ್ರಾಣಿ ದಿವ್ಯರೂಪಂ ವಿಧಾಯ ಚ ॥ ೧೨೪ ॥

ಏವಂಭೂತಾಯ ದತ್ವಾ ಚೇನ್ಮೋದತೇ ವಿಷ್ಣುಮಂದಿರೇ ।
ದತ್ವಾ ಕನ್ಯಾಂ ಸುಶೀಲಾಂ ಚ ಹರಾಯ ಹರಯೇಽಥವಾ ॥ ೧೨೫ ॥

ನಾರಾಯಣಸ್ವರೂಪಂ ಚ ಭವೇದೇವ ಶ್ರುತೌ ಶ್ರುತಂ ।
ವಿಷ್ಣುಭಕ್ತೋ ಯದಾ ಕನ್ಯಾಂ ದದಾತಿ ವಿಷ್ಣುಪ್ರೀತಯೇ ॥ ೧೨೬ ॥

ಸ ಲಭೇದ್ಧರಿದಾಸ್ಯಂ ಚ ಧ್ರುವಂ ವಿಪ್ರೋದ್ಭವಾಯ ಚ ।
ಇತ್ಯಾಲೋಚ್ಯ ಸುರಾಃ ಸರ್ವೇ ಕೃತ್ವಾ ಚ ಮಂತ್ರಣಾಂ ಪ್ರಿಯೇ ॥ ೧೨೭ ॥

ಗುರುಂ ಪ್ರಸ್ಥಾಪಿತುಂ ಜಗ್ಮುರ್ಹಿಮಾಲಯಗೃಹಂ ಪ್ರತಿ ।
ಗತ್ವಾ ಪ್ರಣಮ್ಯ ಚ ಗುರುಂ ಸರ್ವೇ ಚಕ್ರುರ್ನಿವೇದನಂ ॥ ೧೨೮ ॥

೧೨೩–೧೨೪. ಚಂಡಾಲನಿಗೆ ಸಮಾನನಾದವನಿಗೆ ಕನ್ಯಾದಾನಮಾಡಿದರೆ ನರಕಪ್ರಾಪ್ತಿಯಾಗುತ್ತದೆ. ವಿಷ್ಣುಭಕ್ತನೂ, ಜ್ಞಾನಿಯೂ, ಸತ್ಯವಂತನೂ, ಜಿತೇಂದ್ರಿಯನೂ ಆದ ಬ್ರಾಹ್ಮಣನಿಗೆ ದಾನಮಾಡಿದ ಕನ್ಯೆಯು ಅರವತ್ತು ಸಾವಿರ ವರುಷಗಳವರೆಗೂ ದಿವ್ಯರೂಪವನ್ನು ಧರಿಸಿ ಇಪ್ಪತ್ತು ಕೊಳಗಳ ನಿರ್ಮಾಣದ ಫಲವನ್ನು ಕೊಡುವಳು.

೧೨೫–೧೨೮. ಇಂಥಾ ಗುಣ ಯುಕ್ತನಿಗೆ ಕನ್ಯಾದಾನಮಾಡಿದರೆ ವೈಕುಂಠದಲ್ಲಿ ಆನಂದವನ್ನನುಭವಿಸುತ್ತಾನೆ. ಗುಣವತಿಯಾದ ಕನ್ಯೆಯನ್ನು ಹರನಿಗಾಗಲಿ ಹರಿಗಾಗಲಿ ದಾನಮಾಡಿದರೆ ಆ ನಾರಾಯಣಸ್ವರೂಪವನ್ನೇ ಹೊಂದುತ್ತಾನೆಂದು ವೇದದಲ್ಲಿ ಹೇಳಲ್ಪಟ್ಟಿದೆ. ವಿಷ್ಣುಭಕ್ತನಾದವನು ಯಾವಾಗ ತನ್ನ ಕನ್ಯೆಯನ್ನು ಬ್ರಾಹ್ಮಣನಿಂದ ಉತ್ಪನ್ನನಾದವನಿಗೆ ದಾನಮಾಡುತ್ತಾನೋ ಆಗ ಅವನು ಸಂಶಯವಿಲ್ಲದೆ ವಿಷ್ಣು ಸಾಯುಜ್ಯವನ್ನು ಹೊಂದುತ್ತಾನೆ. ಎಲೈ ಪ್ರಿಯಳೇ, ದೇವತೆಗಳೆಲ್ಲರೂ ಸೇರಿ ಆಲೋಚನೆಯನ್ನು ಮಾಡಿ ಬೃಹಸ್ಪತ್ಯಾಚಾರ್ಯರನ್ನು ಹಿಮವಂತನ ಮನೆಗೆ ಕಳುಹಿಸುವುದಕ್ಕಾಗಿ ಅವನ ಮನೆಗೆ ಹೋಗಿ ಎಲ್ಲರೂ ಅವರಿಗೆ ನಮಸ್ಕಾರ ಮಾಡಿ ವಿಜ್ಞಾಪಿಸಿಕೊಂಡರು.

ಹಿಮಾಲಯಗೃಹಂ ಗತ್ವಾ ಕುರು ನಿಂದಾಂ ಚ ಶೂಲಿನಃ ।
ಪಿನಾಕಿನಂ ವಿನಾ ದುರ್ಗಾ ವರಂ ನಾನ್ಯಂ ವರಿಷ್ಯತಿ ॥ ೧೨೯ ॥

ಅನಿಚ್ಛಯಾ ಸುತಾಂ ದತ್ವಾ ಫಲಂ ತೂರ್ಣಂ ಲಭಿಷ್ಯತಿ ।
ಕಾಲೇನ ಯಾತು ಶೈಲೇಂದ್ರಶ್ಚೇದಾನೀಂ ಭುವಿ ತಿಷ್ಠತು ॥ ೧೩೦ ॥

ಅನಂತರತ್ನಾಧಾರಂ ಚ ತ್ವಮೇವ ರಕ್ಷ ಭಾರತೇ ।
ದೇವಾನಾಂ ವಚನಂ ಶ್ರುತ್ವಾ ಪ್ರದದೌ ಕರ್ಣಯೋಃ ಕರೌ ॥ ೧೩೧ ॥

ನ ಸ್ವೀಚಕಾರ ಸ್ವಗುರುಃ ಸ್ಮರನ್ನಾರಾಯಣೇತಿ ಚ ।
ಉವಾಚ ದೇವವರ್ಗಾಂಶ್ಚ ಸಂಭರ್ತ್ಸ್ಯ ಚ ಪುನಃಪುನಃ ।
ವೇದವೇದಾಂಗವಿಜ್ಞಾತಾ ಮಹಾಭಕ್ತೋ ಹರೌ ಹರೇ ॥ ೧೩೨ ॥

॥ ಬೃಹಸ್ಪತಿರುವಾಚ ॥

ಶ್ರೂಯತಾಂ ಮದ್ವಚಃ ಸತ್ಯಂ ಹೇ ದೇವಾಃ ಸ್ವಾರ್ಥಸಾಧಕಾಃ ।
ನೀತಿಸಾರಂ ಚ ವೇದೋಕ್ತಂ ಪರಿಣಾಮಸುಖಾವಹಂ ।
ಹರಕೇಶವಯೋರ್ಭಕ್ತಂ ಯೇ ಚ ನಿಂದಂತಿ ಪಾಪಿನಃ ॥ ೧೩೩ ॥

೧೨೯–೧೩೨. "ಆಚಾರ್ಯರೇ, ನೀವು ಹಿಮವಂತನ ಮನೆಗೆ ಹೋಗಿ ಶಂಕರನನ್ನು ನಿಂದೆಮಾಡಿರಿ. ಪಾರ್ವತಿಯು ಈಶ್ವರನನ್ನು ಬಿಟ್ಟು ಮತ್ತಾರನ್ನು ವರಿಸುವುದಿಲ್ಲ. ಹಿಮವಂತನು ತನಗೆ ಇಷ್ಟವಿಲ್ಲದಿದ್ದರೂ ಮಗಳನ್ನು ಶಿವನಿಗೆ ಕೊಟ್ಟು ಶೀಘ್ರವಾಗಿ ಫಲವನ್ನು ಹೊಂದುತ್ತಾನೆ. ಹಿಮವಂತನು ಕೆಲಕಾಲಾನಂತರ ಹೊರಟುಹೋಗಲಿ ಈಗ ಭೂಮಿಯಲ್ಲಿರಲಿ. ಈ ಭಾರತದಲ್ಲಿ ನಾನಾರತ್ನಗಳಿಗೆ ಆಶ್ರಯವಾದ ಮೇರುವನ್ನೂ ನೀವೇ ಕಾಪಾಡಬೇಕು." ಎಂದು ನುಡಿದರು. ದೇವತೆಗಳ ಮಾತನ್ನು ಕೇಳಿ ಬೃಹಸ್ಪತಿಯು ಎರಡು ಕಿವಿಗಳಿಗೂ ಕೈಯನ್ನು ಮುಚ್ಚಿಕೊಂಡು 'ನಾರಾಯಣ' ಎಂದು ಹೇಳುತ್ತ ಆ ಮಾತನೊಪ್ಪಿಕೊಳ್ಳಲಿಲ್ಲ. ವೇದವೇದಾಂಗಗಳಲ್ಲಿ ನಿಪುಣನೂ ಹರಿಯಲ್ಲಿಯೂ ಹರನಲ್ಲಿಯೂ ಮಹಾಭಕ್ತಿಯುಳ್ಳ ಬೃಹಸ್ಪತಿಯು ದೇವತೆಗಳ ಗುಂಪನ್ನು ಮತ್ತೆ ಮತ್ತೆ ಗದರಿಸಿಕೊಳ್ಳುತ್ತ ಹೇಳತೊಡಗಿದನು.

೧೩೩–೧೩೪. ಬೃಹಸ್ಪತಿಯು :— ಎಲೈ ಸ್ವಾರ್ಥಪರರಾದ ದೇವತೆಗಳಿರಾ, ವೇದೋಕ್ತವೂ, ನೀತಿಯ ಸಾರವೂ, ಸತ್ಯವೂ ಪರಿಣಾಮದಲ್ಲಿ ಸುಖವನ್ನುಂಟು

ಭೂದೇವಾನ್ಬ್ರಹ್ಮಣಾಂಶ್ಚೈವ ಸ್ವಗುರುಂ ಚ ಪತಿವ್ರತಾಃ ।
ಪತಿಭಿಕ್ಷುಬ್ರಹ್ಮಚಾರಿ ಸೃಷ್ಟಿಬೀಜಾನ್ ಸುರಾಂಸ್ತಥಾ || ೧೩೪ ||

ಪಚ್ಯಂತೇ ಕಾಲಸೂತ್ರೇ ತೇ ಯಾವಚ್ಚಂದ್ರದಿವಾಕರೌ ।
ಶ್ಲೇಷ್ಮಮೂತ್ರಪುರೀಷೇಷು ಶೇರತೇ ತೇ ದಿವಾನಿಶಂ || ೧೩೫ ||

ಭಕ್ಷಿತಾಃ ಕೀಟನಿಕರೈಃ ಶಬ್ದಂ ಕುರ್ವಂತಿ ಕಾತರಾಃ ।
ಯೇ ನಿಂದಂತಿ ಚ ಬ್ರಹ್ಮಾಣಂ ಸ್ರಷ್ಟಾರಂ ಜಗತಾಂ ಗುರುಂ || ೧೩೬ ||

ಶಿವಂ ಸುರಾಣಾಂ ಪ್ರವರಂ ದುರ್ಗಾಂ ಲಕ್ಷ್ಮೀಂ ಸರಸ್ವತೀಂ ।
ಗೀತಾಂ ಚ ತುಲಸೀಂ ಗಂಗಾಂ ವೇದಾಂಶ್ಚ ವೇದಮಾತರಂ || ೧೩೭ ||

ವ್ರತಂ ತಪಸ್ಯಾಂ ಪೂಜಾಂ ಚ ಮಂತ್ರಂ ಮಂತ್ರಪ್ರದಂ ಗುರುಂ ।
ತೇ ಪಚ್ಯಂತೇಽಂಧಕೂಪೇ ವೈ ಚಾಽಽಯುಷೋಽರ್ಧಂ ವಿಧೇರಹೋ ||

ಮಾಡುವುದೂ ಆದ ನನ್ನ ಮಾತನ್ನು ಕೇಳಿರಿ. ಯಾವ ಪಾಪಿಗಳು ಹರಿ ಪರತ ಭಕ್ತರನ್ನು ದೂಷಿಸುತ್ತಾರೆಯೋ ಭೂದೇವರಾದ ಬ್ರಾಹ್ಮಣರನ್ನೂ, ತನ್ನ ಗುರುವನ್ನೂ, ಪತಿವ್ರತೆಯರನ್ನೂ, ಗಂಡನನ್ನೂ, ಸನ್ಯಾಸಿಯನ್ನೂ, ಬ್ರಹ್ಮಚಾರಿಯನ್ನೂ, ಸೃಷ್ಟಿಕಾರಣರಾದ ದೇವರುಗಳನ್ನೂ ಸಹ ದೂಷಣೆಮಾಡುತ್ತಾರೋ ಅವರು ಕಾಲಸೂತ್ರವೆಂಬ ನರಕಕ್ಕೆ ಹೋಗಿ ಹಗಲು ರಾತ್ರಿಗಳಲ್ಲಿ ಮಲಮೂತ್ರ ಶ್ಲೇಷ್ಮಗಳಲ್ಲಿ ಬೀಳುತ್ತಾರೆ.

೧೩೬–೧೩೮. ಮತ್ತು ಹುಳುಗಳ ರಾಶಿಗಳಿಂದ ತಿನ್ನಲ್ಪಡುತ್ತಿರುವವರಾಗಿ ಗಾಭರಿಯಿಂದ ಕೂಗಿಕೊಳ್ಳುತ್ತಾರೆ. ಯಾರು ಸೃಷ್ಟಿಕರ್ತನಾದ ಜಗತ್ತಿನ ಗುರುವಾದ ಬ್ರಹ್ಮನನ್ನೂ, ದೇವತೆಗಳಿಗೆಲ್ಲ ಶ್ರೇಷ್ಠವಾದ ಶಿವನನ್ನೂ, ದುರ್ಗಿಯನ್ನೂ, ಲಕ್ಷ್ಮಿಯನ್ನೂ, ಸರಸ್ವತಿಯನ್ನೂ, ಗೀತೆಯನ್ನೂ, ತುಳಸಿಯನ್ನೂ, ಗಂಗೆಯನ್ನೂ ವೇದಗಳನ್ನೂ, ಗಾಯತ್ರಿಯನ್ನೂ, ವ್ರತವನ್ನೂ, ತಪಸ್ಸನ್ನೂ, ಪೂಜೆಯನ್ನೂ, ಮಂತ್ರವನ್ನೂ, ಮಂತ್ರೋಪದೇಶವನ್ನು ಮಾಡಿದ ಗುರುವನ್ನೂ ಕೂಡ ನಿಂದೆ ಮಾಡುತ್ತಾರೆಯೋ ಅವರು ಅಂಧಕೂಪವೆಂಬ ನರಕದಲ್ಲಿ ಬ್ರಹ್ಮನ ಆಯುಸ್ಸಿನ ಅರ್ಧದಷ್ಟು ಕಾಲ ಪೀಡಿಸಲ್ಪಡುತ್ತಾರೆ.

ಭಕ್ಷಿತಾಃ ಸರ್ಪಸಂಘೈಶ್ಚ ಶಬ್ದಂ ಕುರ್ವಂತಿ ಸಂತತಂ ।
ಯೇ ನಿಂದಂತಿ ಹೃಷೀಕೇಶಂ ದೇವಸಾಮ್ಯಂ ವಿಧಾಯ ಚ ॥ ೧೩೯ ॥

ವಿಷ್ಣುಭಕ್ತಿಪ್ರದಂ ಚೈವ ಪುರಾಣಂ ಚ ಶ್ರುತೇಃ ಪರಂ ।
ರಾಧಾಂ ತದಂಗಜಾ ಗೋಪೀರ್ಬ್ರಾಹ್ಮಣಾಂಶ್ಚ ಸದಾರ್ಚಿತಾನ್ ॥ ೧೪೦ ॥

ತೇ ಪಚ್ಯಂತೇಽವಟೇ ದೇವಾ ವಿಧಾತುರಾಯುಷಾ ಸಮಂ ।
ಅಧೋಮುಖಾ ಊರ್ಧ್ವಜಂಘಾಃ ಸರ್ಪಸಂಘೈಶ್ಚ ವೇಷ್ಟಿತಾಃ ॥ ೧೪೧ ॥

ಭಕ್ಷಿತಾಃ ವಿಕೃತಾಕಾರೈಃ ಕೀಟೈಃ ಸರ್ಪಸಮಾಕೃತೈಃ ।
ಅತೀವ ಕಾತರಾ ಭೀತಾಃ ಶಬ್ದಂ ಕುರ್ವಂತಿ ಸಂತತಂ ॥ ೧೪೨ ॥

ಶ್ಲೇಷ್ಮಮೂತ್ರಪುರೀಷಾಣಿ ಧ್ರುವಂ ಭಕ್ಷಂತಿ ಕ್ಷೋಭಿತಾಃ ।
ಉಲ್ಕಾಂ ದದತಿ ದುಷ್ಟಾಶ್ಚ ತನ್ಮುಖೇ ಯಮಕಿಂಕರಾಃ ॥ ೧೪೩ ॥

೧೩೯–೧೪೨. ಮತ್ತು ಅವರು ಸರ್ಪಗಳ ಗುಂಪಿನಿಂದ ತಿನ್ನಲ್ಪಡುವವರಾಗಿ ಯಾವಾಗಲೂ ಕೂಗಿಕೊಳ್ಳುತ್ತಿರುತ್ತಾರೆ. ಅಲ್ಲದೆ ಯಾರು ವಿಷ್ಣುವನ್ನು ಇತರ ದೇವರಿಗೆ ಸಮನಾಗಿ ಎಣಿಸಿ ವಿಷ್ಣುಭಕ್ತಿಯನ್ನುಂಟುಮಾಡುವ ವೇದಕ್ಕಿಂತಲೂ ಶ್ರೇಷ್ಠವಾದ ಪುರಾಣವನ್ನೂ, ರಾಧೆಯನ್ನೂ ಅವಳ ಶರೀರದಿಂದ ಹುಟ್ಟಿದ ಗೋಪಿಯರನ್ನೂ ಯಾವಾಗಲೂ ಪೂಜಿಸಲ್ಪಟ್ಟ ಬ್ರಾಹ್ಮಣರನ್ನೂ ನಿಂದಿಸುತ್ತಾರೆಯೋ ಅವರು, ದೇವತೆಗಳೇ ಕೇಳಿರಿ, ದೊಡ್ಡ ಹಳ್ಳದಲ್ಲಿ ಬಿದ್ದು ಬ್ರಹ್ಮನ ಆಯುಷ್ಯಕ್ಕೆ ಸಮನಾದಷ್ಟು ಕಾಲ ವ್ಯಥೆಗೊಳ್ಳುತ್ತಾರೆ. ತಲೆಕೆಳಗಾಗಿ ಮಾಡಲ್ಪಟ್ಟು ಹಾವುಗಳ ಗುಂಪುಗಳಿಂದ ಮುತ್ತಲ್ಪಟ್ಟವರಾಗಿ ವಿಕಾರವಾದ ರೂಪವುಳ್ಳ ಸರ್ಪಗಳಂತೆ ಆಕಾರವುಳ್ಳ ಕೀಟಗಳಿಂದ ತಿನ್ನಲ್ಪಡುತ್ತಿರುವವರಾಗಿ ಭಯದಿಂದ ಗಾಭರಿಗೊಂಡು ಯಾವಾಗಲೂ ಕೂಗುತ್ತಿರುತ್ತಾರೆ.

೧೪೩–೧೪೪. ಮತ್ತು ವ್ಯಥೆಗೊಂಡವರಾಗಿ ಶ್ಲೇಷ್ಮ ಮೂತ್ರ ಮಲಗಳನ್ನು ತಿನ್ನುತ್ತಾರೆ. ಯಮಭಟರು ಕೋಪಗೊಂಡು ಅವರ ಬಾಯಲ್ಲಿ ಬೆಂಕಿಯ ಕೆಂಡಗಳನ್ನು ಹಾಕುತ್ತಾರೆ. ಹಗಲು ರಾತ್ರಿಯೂ ಅವರನ್ನು ಬೆದರಿಸುತ್ತ ಕೋಲಿನಿಂದ

ತ್ರಿಸಂಧ್ಯಂ ತರ್ಜನಂ ಕೃತ್ವಾ ಕುರ್ವಂತಿ ದಂಡತಾಡನಂ ।
ಕುರ್ವಂತಿ ಮೂತ್ರಪಾನಂ ಚ ಪ್ರಹಾರೈಸ್ತೃಷಿತಾನ್ ಭಿಯಾ　|| ೧೪೪ ||

ತದಾ ಕಲ್ಪಾಂತರೇ ಸ್ರಷ್ಟುಂ ಸೃಷ್ಟಿಂ ಚ ಪ್ರಥಮೋ ಪುನಃ ।
ತೇಷಾಂ ಭವೇತ್ಪ್ರತೀಕಾರ ಇತ್ಯಾಹ ಕಮಲೋದ್ಭವಃ　|| ೧೪೫ ||

ಕೃತ್ವಾ ಹಿ ಶಿವ ನಿಂದಾಂ ಚ ಯಾಸ್ಯಂತಿ ನರಕಂ ಸುರಾಃ ।
ಇಮಮೇವೋಪಕಾರಂ ಚ ಕರ್ತುಮಿಚ್ಛಥ ಪುತ್ರಕಾಃ　|| ೧೪೬ ||

ಬ್ರಹ್ಮಣಾ ಪ್ರೇರಿತೋ ದಕ್ಷೋ ದತ್ವಾ ಶೂಲಭೃತೇ ಸುತಾಂ ।
ನ ಪಾಪಂ ಪರಮೈಶ್ವರ್ಯಂ ಸಂಪ್ರಾಪ ಹರಿನಿಂದಕಃ　|| ೧೪೭ ||

ಅನಿಚ್ಛಯಾ ಸುತಾಂ ದತ್ವಾ ತುರ್ಯಪುಣ್ಯಂ ಲಲಾಭ ಸಃ ।
ಅಹೋ ವಿಹಾಯ ಸಾರೂಪ್ಯಂ ತುಚ್ಛಂ ಸ್ವರ್ಗಂ ಲಲಾಭ ಸಃ　|| ೧೪೮ ||

ಹೊಡೆಯುತ್ತಾರೆ. ಈ ಹೊಡೆತದಿಂದ ಹೆದರಿ ಬಾಯಾರಿಕೆಯನ್ನು ಹೊಂದಿದ ಆ ಪಾಪಿಗಳಿಗೆ ಮೂತ್ರವನ್ನು ತಂದು ಕುಡಿಸುತ್ತಾರೆ. ಹೀಗೆ ಪ್ರಳಯಕಾಲವು ಮುಗಿದು ಮತ್ತೆ ಸೃಷ್ಟಿಯು ಪ್ರಾರಂಭವಾಗುವವರೆಗೂ ಅಲ್ಲಿ ವ್ಯಥೆಯನ್ನನುಭವಿಸಿ ಅನಂತರ ಬಿಡುಗಡೆಯನ್ನು ಹೊಂದುತ್ತಾರೆಂದು ಬ್ರಹ್ಮನು ಹೇಳಿರುವನು.

೧೪೬. ಎಲೈ ದೇವತೆಗಳೇ, ಶಿವನನ್ನು ನಿಂದೆಮಾಡಿದವರು ನರಕವನ್ನು ಹೊಂದುವವರಾಗುತ್ತಾರೆ. ಮಕ್ಕಳಿರಾ, ನನಗೆ ಈ ಉಪಕಾರವನ್ನು ಮಾಡಬೇಕೆಂದು ಅಪೇಕ್ಷಿಸಿರುವಿರೋ ?

೧೪೭. ಬ್ರಹ್ಮನಿಂದ ಪ್ರೇರಿತನಾದ ದಕ್ಷನು ತನ್ನ ಮಗಳನ್ನು ಈಶ್ವರನಿಗೆ ಕೊಟ್ಟು ಹರಿಯನ್ನು ನಿಂದಿಸುವವನಾದರೂ ಪಾಪವನ್ನು ಹೊಂದದೆ ಉತ್ತಮವಾದ ಐಶ್ವರ್ಯವನ್ನು ಹೊಂದಿದನು.

೧೪೮. ಆ ದಕ್ಷನು ಯಾವ ಅಪೇಕ್ಷೆಯೂ ಇಲ್ಲದೆ ಮಗಳನ್ನು ಕೊಟ್ಟು ತುಚ್ಛವಾದ ಸ್ವರ್ಗವನ್ನು ಬಿಟ್ಟು ಪುಣ್ಯಗಳಲ್ಲಿ ಕೊನೆಯದಾದ ಶ್ರೇಷ್ಠವಾದ ಮೋಕ್ಷವನ್ನು ಪಡೆದನೆಂಬುದು ಬಹಳ ಆಶ್ಚರ್ಯವು.

ಕಶ್ಚಿನ್ಮಧ್ಯೇ ಚ ಯುಷ್ಮಾಕಂ ಗತ್ವಾ ಶೈಲಗೃಹಂ ಸುರಾಃ ।
ಸಂಪಾದಯತ್ವಭಿಮತಂ ಶೈಲೇಂದ್ರಸ್ಯ ಪ್ರಯತ್ನತಃ ॥ ೧೪೯ ॥

ಅನಿಚ್ಛಯಾ ಸುತಾಂ ದತ್ವಾ ಸುಖಂ ತಿಷ್ಠತು ಭಾರತೇ ।
ತಸ್ಮೈ ಭಕ್ತ್ಯಾ ಸುತಾಂ ದತ್ವಾ ಮೋಕ್ಷಂ ಪ್ರಾಪ್ಸ್ಯತಿ ನಿಶ್ಚಿತಂ ॥ ೧೫೦ ॥

ಪಶ್ಚಾತ್ ಸಪ್ತರ್ಷಯಃ ಸರ್ವೇ ಗೃಹೀತ್ವಾ ತಾಮರುಂಧತೀಂ ।
ಧ್ರುವಂ ತಸ್ಯ ಗೃಹಂ ಗತ್ವಾ ಬೋಧಯಿಷ್ಯಂತಿ ಪರ್ವತಂ ॥ ೧೫೧ ॥

ವಿನಾ ಪಿನಾಕಿನಂ ದುರ್ಗಾ ವರಂ ನಾನ್ಯಂ ವರಿಷ್ಯತಿ ।
ಅನಿಚ್ಛಯಾ ಸುತಾಂ ತಸ್ಮೈ ಪ್ರದಾಸ್ಯತಿ ಸುತಾಜ್ಞಯಾ ॥ ೧೫೨ ॥

---

೧೪೯. ಓ ದೇವತೆಗಳಿರಾ! ನಿಮ್ಮಲ್ಲಿ ಯಾರಾದರೊಬ್ಬರು ಹಿಮವಂತನ ಮನೆಗೆ ಹೋಗಿ ಅವನ ಇಷ್ಟವನ್ನು ಸಂಪಾದಿಸಿಕೊಡಿರಿ.

೧೫೦. ಅವನು ಯಾವ ಅಪೇಕ್ಷೆಯೂ ಇಲ್ಲದವನಾಗಿ ಮಗಳನ್ನು ದಾನ ಮಾಡಿ ಸುಖದಿಂದ ಭಾರತದಲ್ಲಿ ಇರಲಿ. ಭಕ್ತಿಯಿಂದ ಈಶ್ವರನಿಗೆ ಮಗಳನ್ನು ಕೊಟ್ಟರೆ ಸಂಶಯವಿಲ್ಲದೆ ಮೋಕ್ಷವನ್ನು ಹೊಂದುತ್ತಾನೆ.

೧೫೧. ಕೆಲವು ಕಾಲಗಳನಂತರ ಸಪ್ತರ್ಷಿಗಳು ಅರುಂಧತಿಯೊಡನೆ ಆ ಹಿಮವಂತನ ಮನೆಗೆ ಹೋಗಿ ಅವನಿಗೆ ಉಪದೇಶಮಾಡುವರು.

೧೫೨. ಪಾರ್ವತಿಯು ಶಿವನನ್ನು ಬಿಟ್ಟು ಬೇರೆ ಯಾವ ವರನನ್ನೂ ಮದುವೆಯಾಗುವುದಿಲ್ಲ. ಹಿಮವಂತನು ನಿಷ್ಕಾಮನೆಯಿಂದ ಮಗಳನ್ನು ಅವಳ ಇಷ್ಟದಂತೆ ಈಶ್ವರನಿಗೆ ಕೊಡುತ್ತಾನೆ.

ಇತ್ಯೇವಂ ಕಥಿತಂ ಸರ್ವಂ ದೇವಾಗಚ್ಛಂತು ಮಂದಿರಂ ।
ಇತ್ಯುಕ್ತ್ವಾ ವಾಕ್ಪತಿಃ ಶೀಘ್ರಂ ತಪಸೇ ಸ್ವರ್ಣದೀಂ ಗತಃ ॥ ೧೫೩ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಪೂರ್ವಾರ್ಧೇ ನಾರದನಾರಾಯಣಸಂವಾದೇ ರಾಧಾಕೃಷ್ಣ
ಸಂವಾದೇ ಚತ್ವಾರಿಂಶೋಽಧ್ಯಾಯಃ

---

೧೫೩. ಬೃಹಸ್ಪತಿಯು ದೇವತೆಗಳನ್ನು ಕುರಿತು ಓ ದೇವತೆಗಳಿರಾ! ಈ ಪ್ರಕಾರವಾದ ವಿಷಯಗಳನ್ನು ನಿಮಗೆ ಹೇಳಿರುವೆನು. ನೀವು ನಿಮ್ಮ ಸ್ಥಳಕ್ಕೆ ತೆರಳಿರಿ ಎಂಬುದಾಗಿ ಹೇಳಿ ತಪಸ್ಸನ್ನು ಮಾಡಲು ಗಂಗಾನದಿಯ ತೀರಕ್ಕೆ ಹೊರಟನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ನಾರದ ನಾರಾಯಣ ಸಂವಾದಾಂತರ್ಗತವಾದ ರಾಧಾಕೃಷ್ಣರ
ಸಂವಾದದಲ್ಲಿ ನಲವತ್ತನೆಯ ಅಧ್ಯಾಯವು ಮುಗಿದುದು.

ನಲವತ್ತನೆಯ ಅಧ್ಯಾಯದ ಸಾರಾಂಶ.

ಪಾರ್ವತಿಯು ಯಾವ ಯಾವ ಕಠಿಣ ತಪಸ್ಸನ್ನಾಚರಿಸಿ ಮಹೇಶ್ವರನನ್ನು ಪತಿಯಾಗಿ ವರಿಸಿದಳು? ರತೀದೇವಿಯು ಮನ್ಮಥನನ್ನು ಹೇಗೆ ಪುನರ್ಜೀವನ ಗೊಳಿಸಿದಳು? ಎಲೈ ಪ್ರಭುವೇ, ಶಿವಪಾರ್ವತಿಯರ ವಿವಾಹವನ್ನು ವಿಸ್ತಾರವಾಗಿ ನನಗೆ ತಿಳಿಸು' ಎಂದು ರಾಧಾದೇವಿಯು ಪ್ರಶ್ನಿಸಲು ಶ್ರೀಕೃಷ್ಣನು ಇಂತು ಉತ್ತರವಿತ್ತನು.

ಶಂಕರನು ಮನ್ಮಥನನ್ನು ದಹಿಸಿ ಅಕ್ಷಯವಟವೃಕ್ಷದ ಮೂಲದಿಂದ ಅಂತರ್ಧಾನನಾಗಲು ಪಾರ್ವತಿಯು ಭಗ್ನಮನೋರಥಳಾಗಿ ತನ್ನ ರೂಪವನ್ನು ಮನಸ್ಸಿನಲ್ಲಿಯೇ ನಿಂದಿಸಿಕೊಂಡು, ಅದನ್ನು ಸಾರ್ಥಕಪಡಿಸಿಕೊಳ್ಳಲೋಸುಗ, ಮಾತಾಪಿತೃಗಳ ಅನುಜ್ಞೆಯನ್ನು ಪಡೆದು ತಪಸ್ಸಿಗೆ ತೆರಳಿದಳು. ಅಲ್ಲಿ ಅತ್ಯುಗ್ರತಪಸ್ಸನ್ನಾಚರಿಸಿದರೂ ಸಹ ತನ್ನ ಅಭೀಷ್ಟದೇವತೆಯು ಪ್ರಸನ್ನವಾಗದಿರಲು ಅಗ್ನಿಪ್ರವೇಶಮಾಡಲುದ್ಯುಕ್ತಳಾದಳು. ಆಗ ಶಂಕರನು ಬಾಲಬ್ರಹ್ಮಚಾರಿಯ ರೂಪದಿಂದ ಪಾರ್ವತಿಯ ಸಮೀಪಕ್ಕೆ ಬಂದು ತಪಸ್ಸುಮಾಡಲು ಕಾರಣವೇನೆಂದು ಆಕೆಯನ್ನು ಕೇಳಲು ಪಾರ್ವತಿಯು ತನ್ನ ದರ್ಪಭಂಗದ ವಿಷಯವನ್ನೆಲ್ಲ ತಿಳಿಸಿ ಆ ಬ್ರಹ್ಮಚಾರಿಯ ಎದುರಿನಲ್ಲೇ ಅಗ್ನಿಪ್ರವೇಶಮಾಡಿದಳು. ಆದರೆ ಆಕೆಯ ತಪೋಮಹಿಮೆಯಿಂದ ಅಗ್ನಿಯೂ ಸಹ ಶೀತಲವಾಯಿತು. ಆ ಅದ್ಭುತವನ್ನು ನೋಡಿದ ಬ್ರಹ್ಮಚಾರಿಯು, 'ಶಿವನು ಪ್ರಸನ್ನನಾಗುವನು. ನೀನು ಮನೆಗೆ ಹಿಂತಿರುಗು ಎಂದು ಪಾರ್ವತಿಗೆ ಬೋಧಿಸಿ ಅಂತರ್ಧಾನನಾದನು. ಇತ್ತ ಪಾರ್ವತಿಯು ತನ್ನ ಮಂದಿರಕ್ಕೆ ತೆರಳಿ ನಿಶ್ಚಿಂತಳಾಗಿದ್ದಳು. ಹೀಗೆ ಕೆಲವು ಕಾಲಾನಂತರ ಹಿಮವಂತನು ತಪಶ್ಚರಣೆಗೆಂದು ಗಂಗಾತೀರಕ್ಕೆ ಹೋಗಿದ್ದ ಸಮಯವನ್ನು ನೋಡಿ ಭಿಕ್ಷುವೊಬ್ಬನು ಬಂದು ಮೇನೆ ಮತ್ತು ಪಾರ್ವತಿಯರ ಎದುರಿನಲ್ಲಿ ಮನೋಹರವಾಗಿ ಹಾಡುತ್ತ ನರ್ತಿಸತೊಡಗಿದನು. ಅವನ ಅದ್ಭುತವಾದ ಗಾನನರ್ತನಗಳನ್ನು ನೋಡಿ ಎಲ್ಲರೂ ಆನಂದಪರವಶರಾದರು. ಮೇನೆಯು ಸಂತುಷ್ಟಳಾಗಿ ಅವನಿಗೆ ರತ್ನರಾಶಿಗಳನ್ನು ಕೊಡಲು ಅವನು ಆದೊಂದನ್ನೂ ಸ್ವೀಕರಿಸದೆ ಪಾರ್ವತಿಯನ್ನೇ ವರಿಸಲಿಷ್ಟಪಟ್ಟನು. ಆಗ ಮೇನೆಯು ಅವನನ್ನು ತಿರಸ್ಕರಿಸಿದಳು. ಆ ಸಮಯಕ್ಕೆ ಸರಿಯಾಗಿ ಹಿಮವಂತನೂ ಸಹ ಅಲ್ಲಿಗೆ ಬಂದು ಪರಮೇಶ್ವರನ ಪತ್ನಿಯಾದ ಪಾರ್ವತಿಯನ್ನು ನೀನು ವರಿಸುವುದುಚಿತವಲ್ಲವೆಂದು ಹೇಳಿ ಅವನನ್ನು ಧಿಕ್ಕರಿಸಿದನು. ಆಗ ಆ ಭಿಕ್ಷುಕನು ಕೂಡಲೇ ಅಂತರ್ಧಾನನಾಗಿ ಚತುರ್ಭುಜನೂ, ಶಂಖಚಕ್ರಗಧಾಪದ್ಮಧಾರಿಯೂ,

ಪೀತಾಂಬರಧಾರಿಯೂ ಆದ ಗೋಪಕಿಶೋರರೂಪವನ್ನು ತಳೆದು ನಿಂತನು. ಮತ್ತೊಂದು ಕ್ಷಣದಲ್ಲಿ ತ್ರಿಶೂಲಪಟ್ಟಿಶಧಾರಿಯೂ, ವ್ಯಾಘ್ರಚರ್ಮಾಂಬರನೂ, ಪಂಚವಕ್ತ್ರನೂ, ತ್ರಿನಯನನೂ ಆದ ಚಂದ್ರಶೇಖರನಾದನು. ಮರುಕ್ಷಣದಲ್ಲಿ ಚತುರ್ಮುಖನಾಗಿ ಶ್ರೀಹರಿಯ ದಿವ್ಯನಾಮವನ್ನು ಜಪಿಸತೊಡಗಿದನು. ಒಂದುಕ್ಷಣ 'ತ್ರಿಗುಣಾತ್ಮಕನಾದ ಸೂರ್ಯಸ್ವರೂಪವನ್ನೂ, ಮತ್ತೊಂದುಕ್ಷಣ ಅಗ್ನಿಸ್ವರೂಪವನ್ನೂ, ಮತ್ತೊಂದುಕ್ಷಣ ಪ್ರಶಾಂತವಾದ ಚಂದ್ರಸ್ವರೂಪವನ್ನೂ ತೋರಿದ ಆ ಭಿಕ್ಷುವು ಮರುಕ್ಷಣದಲ್ಲಿಯೇ ನಿರಾಕಾರನೂ, ನಿರಂಜನನೂ ಆದ ಪರಮಾತ್ಮಸ್ವರೂಪವನ್ನು ತಳೆದನು. ಆ ಅದ್ಭುತವನ್ನು ಕಂಡ ಹಿಮವಂತನು ಅವನಿಗೆ ದಂಡಪ್ರಣಾಮಮಾಡಿದನು. ಕತ್ತೆತ್ತಿ ನೋಡುವುದರೊಳಗೆ ಅವನು ಪುನಃ ಭಿಕ್ಷುರೂಪವನ್ನು ತಾಳಿ ಪಾರ್ವತಿಯನ್ನು ತನಗೆ ಕೊಡಬೇಕೆಂದು ಯಾಚಿಸಿದನು. ಆದರೆ ವಿಷ್ಣುಮಾಯೆಯಿಂದ ಮೋಹಿತನಾದ ಹಿಮವಂತನು ಆ ಭಿಕ್ಷುಕನ ಪ್ರಭಾವವನ್ನು ಮರೆತು, ಅವನನ್ನು ಸಾಮಾನ್ಯ ಭಿಕ್ಷುಕನೆಂದೇ ಬಗೆದು ಪಾರ್ವತಿಯನ್ನು ಕೊಡಲೊಪ್ಪಲಿಲ್ಲ. ಆಗ ಭಿಕ್ಷುಕನು ಅಂತರ್ಧಾನನಾಗಲು ಹಿಮವಂತ ಮತ್ತು ಮೇನೆಯರಿಗೆ ಜ್ಞಾನೋದಯವಾಯಿತು. ಹಿಮವಂತನು ಭಕ್ತಿಪೂರ್ವಕವಾಗಿ ಪಾರ್ವತಿಯನ್ನು ಶಂಕರನಿಗೆ ಕೊಟ್ಟು ತಾನು ನಿರ್ವಾಣ ಹೊಂದಿದರೆ ತಮಗೆ ಆಶ್ರಯವಿಲ್ಲದಂತಾಗುವುದೆಂದು ದೇವತೆಗಳು ಯೋಚಿಸಿ. ಬೃಹಸ್ಪತ್ಯಾಚಾರ್ಯನ ಸಮೀಪಕ್ಕೆ ಬಂದು 'ನೀನು ಹಿಮವಂತನ ಎದುರಿನಲ್ಲಿ ಶೂಲಿಯನ್ನು ನಿಂದಿಸು. ಆಗ ಅವನು ಕನ್ಯೆಯನ್ನು ಶೂಲಿಗೆ ಕೊಡುವುದಿಲ್ಲ ಮತ್ತು ತಾನೂ ಇದ್ದೆಡೆಯಲ್ಲಿಯೇ ಇರುವನು. ಅದರಿಂದ ನಮಗೆ ನೆಮ್ಮದಿಯುಂಟಾಗುವುದು' ಎಂದು ವಿಜ್ಞಾಪಿಸಿಕೊಂಡರು. ಆದರೆ ಬೃಹಸ್ಪತಿಯು ಈ ವಂಚನೆಗೆ ಒಪ್ಪಲಿಲ್ಲ. ವಿಷ್ಣುನಿಂದಕರೂ, ಶಿವನಿಂದಕರೂ, ಮಹಾಪಾಪಿಗಳಾಗಿ ನರಕಯಾತನೆಯನ್ನನುಭವಿಸುವರೆಂದು ಹೇಳಲು, ದೇವತೆಗಳು ಸಪ್ತರ್ಷಿಗಳನ್ನೂ, ಅರುಂಧತಿಯನ್ನೂ ಶೈಲರಾಜನ ಮಂದಿರಕ್ಕೆ ಕಳುಹಿಸಿ ಎಷ್ಟು ಬೋಧಿಸಿದರೂ ಪಾರ್ವತಿಯು ಪರಶಿವನನ್ನು ಬಿಟ್ಟು ಬೇರಾರನ್ನೂ ವರಿಸಲಿಷ್ಟಪಡಲಿಲ್ಲ. ದೇವತೆಗಳೆಲ್ಲ ಭಗ್ನಮನೋರಥರಾಗಿ ತಮ್ಮ ಮಂದಿರಕ್ಕೆ ಹಿಂತಿರುಗಿದರು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಏಕಚತ್ವಾರಿಂಶೋಽಧ್ಯಾಯಃ ॥

॥ ಶ್ರೀಕೃಷ್ಣ ಉವಾಚ ॥

ತದಾ ದೇವಾಃ ಸಮಾಲೋಚ್ಯ ಜಗ್ಮುಸ್ತೇ ಬ್ರಹ್ಮಣೋಽಂತಿಕಂ ।
ಸರ್ವೇ ನಿವೇದನಂ ಚಕ್ರುರ್ಬ್ರಹ್ಮಾಣಂ ಜಗತಾಂ ಪತಿಂ ॥ ೧ ॥

॥ ದೇವಾ ಊಚುಃ ॥

ತವ ಸೃಷ್ಟೌ ಜಗತ್ಸ್ರಷ್ಟ್ರಾ ರತ್ನಾಧಾರೋ ಹಿಮಾಲಯಃ ।
ಸ ಚೇತ್ಪ್ರಾಪ್ಸ್ಯತಿ ಮೋಕ್ಷಂ ಚ ರತ್ನಗರ್ಭಾ ಕುತೋ ಮಹೀ ॥ ೨ ॥

ಸುತಾಂ ಶೂಲಭೃತೇ ದತ್ವಾ ಭಕ್ತ್ಯಾ ಶೈಲೇಶ್ವರಃ ಸ್ವಯಂ ।
ನಾರಾಯಣಸ್ಯ ಸಾರೂಪ್ಯಂ ಸಂಪ್ರಾಪ್ಸ್ಯತಿ ನ ಸಂಶಯಃ ॥ ೩ ॥

ನಲವತ್ತೊಂದನೆಯ ಅಧ್ಯಾಯವು.

೧. ಶ್ರೀ ಕೃಷ್ಣನು :— ಆ ಸಮಯದಲ್ಲಿ ದೇವತೆಗಳೆಲ್ಲರೂ ಆಲೋಚನೆ ಮಾಡಿ ಬ್ರಹ್ಮನ ಸಮೀಪಕ್ಕೆ ಹೋಗಿ ಜಗತ್ತಿಗೆ ತಂದೆಯಾದ ಬ್ರಹ್ಮನನ್ನು ಕುರಿತು ಮುಂದೆ ಹೇಳುವಂತೆ ಪ್ರಾರ್ಥಿಸಿದರು.

೨. ದೇವತೆಗಳು :— ನಿನ್ನ ಸೃಷ್ಟಿಯಲ್ಲಿ ಹಿಮಾಲಯನು ಸಕಲ ರತ್ನಗಳಿಗೂ ಆಧಾರನಾಗಿರುತ್ತಾನೆ. ಅವನು ಮೋಕ್ಷವನ್ನು ಪಡೆದುದಾದರೆ ಭೂಮಿಯು ರತ್ನಗರ್ಭಾ ಎಂಬ ಹೆಸರನ್ನು ಹೊಂದಲು ಹೇಗೆ ಸಾಧ್ಯ?

೩. ಪರ್ವತರಾಜನು ಭಕ್ತಿಪೂರ್ವಕವಾಗಿ ಮಗಳನ್ನು ಪರಮೇಶ್ವರನಿಗೆ ದಾನಮಾಡಿ ಶ್ರೀಮನ್ನಾರಾಯಣನ ಸಾರೂಪ್ಯವನ್ನು ಹೊಂದುವನು. ಇದರಲ್ಲಿ ಸಂಶಯವಿಲ್ಲ.

ತ್ವಂ ತಸ್ಯ ನಿಂದನಂ ಕೃತ್ವಾ ವಿಮತಿಂ ಪ್ರತಿಪಾದಯ ।
ತ್ವಯಾ ವಿನಾ ಕ್ಷಮೋ ನಾನ್ಯೋ ಗಚ್ಛ ಶೈಲಗೃಹೇ ಪ್ರಭೋ ॥ ೪ ॥

ದೇವಾನಾಂ ವಚನಂ ಶ್ರುತ್ವಾ ತಾನುವಾಚ ವಿಧಿಃ ಸ್ವಯಂ ।
ವಚನಂ ನೀತಿಸಾರಂ ಚ ಕರ್ಣಪೀಯೂಷಮುತ್ತಮಂ ॥ ೫ ॥

॥ ಬ್ರಹ್ಮೋವಾಚ ॥

ನಾಹಂ ಕರ್ತುಂ ಕ್ಷಮೋ ವತ್ಸಾಃ ಶಿವನಿಂದಾಂ ಸುದುಷ್ಕರಾಂ ।
ಸಂಪದ್ವಿನಾಶರೂಪಾಂ ಚ ವಿಪದೋ ಬೀಜರೂಪಿಣೀಂ ॥ ೬ ॥

ಭೂತೇಶಂ ಪ್ರಸ್ಥಾಪಯತ ಸ್ವಾತ್ಮನಿಂದಾಂ ಕರೋತು ಸಃ ।
ಪರನಿಂದಾವಿನಾಶಾಯ ಸ್ವನಿಂದಾ ಯಶಸೇ ಪರಂ ॥ ೭ ॥

ಬ್ರಹ್ಮಣೋ ವಚನಂ ಶ್ರುತ್ವಾ ತಂ ಪ್ರಣಮ್ಯ ಸುರಾಃ ಪ್ರಿಯೇ ।
ಶೀಘ್ರಂ ಯಯುಸ್ತೇ ಕೈಲಾಸಂ ಗತ್ವಾ ಚ ತುಷ್ಟುವುಃ ಶಿವಂ ॥ ೮ ॥

---

೪. ನೀನು ಆ ಈಶ್ವರನನ್ನು ನಿಂದಿಸಿ ಅವನ ಮೇಲೆ ಅಸಮಾಧಾನವನ್ನುಂಟುಮಾಡು. ನಿನ್ನನ್ನು ಬಿಟ್ಟು ಮತ್ತಾರೂ ಈ ಕೆಲಸವನ್ನು ಮಾಡಲು ಸಮರ್ಥರಿಲ್ಲ. ಆದುದರಿಂದ ಎಲೈ ಪ್ರಭುವೇ, ಹಿಮವಂತನ ಮನೆಗೆ ಹೋಗು.

೫. ಈ ರೀತಿಯಾದ ದೇವತೆಗಳಾಡಿದ ಮಾತನ್ನು ಕೇಳಿ ಬ್ರಹ್ಮನು ನೀತಿಶಾಸ್ತ್ರದ ಸಾರವೂ ಕಿವಿಗೆ ಅಮೃತವೂ, ಶ್ರೇಷ್ಠವೂ ಆಗಿರುವ ಮಾತನ್ನು ಆ ದೇವತೆಗಳನ್ನು ಕುರಿತು ಹೇಳಿದನು.

೬. ಬ್ರಹ್ಮನು :– ಎಲೈ ಮಕ್ಕಳುಗಳಿರಾ, ಐಶ್ವರ್ಯವನ್ನೇ ನಾಶಮಾಡುವ, ಆಪತ್ತಿಗೆ ಬೀಜವಾಗಿರುವ, ಅತಿಕಠಿನವಾದ ಶಿವನಿಂದೆಯನ್ನು ನಾನು ಮಾಡಲಾರೆನು.

೭. ಆ ಈಶ್ವರನನ್ನೇ ಕಳುಹಿಸಿರಿ. ಅವನೇ ಅಲ್ಲಿಗೆ ಹೋಗಿ ತನ್ನನ್ನು ನಿಂದಿಸಿಕೊಳ್ಳಲಿ. ಪರನಿಂದೆಯನ್ನು ಮಾಡಿದರೆ ವಿನಾಶವುಂಟಾಗುವುದು. ಆತ್ಮನಿಂದೆಯನ್ನು ಮಾಡಿದರೆ ಕೀರ್ತಿಬರುವುದು.

೮-೯. ಎಲೈ ಪ್ರೀಯೆಯೇ, ದೇವತೆಗಳೆಲ್ಲರೂ ಬ್ರಹ್ಮನಮಾತನ್ನು ಕೇಳಿ ಅವನಿಗೆ ನಮಸ್ಕಾರಮಾಡಿ ಜಾಗ್ರತೆಯಾಗಿ ಕೈಲಾಸಕ್ಕೆ ಹೋಗಿ, ಈಶ್ವರನನ್ನು ಸ್ತೋತ್ರಮಾಡಿದರು. ದಯಾಮಯನಾದ ಶಂಕರನನ್ನು ಸ್ತೋತ್ರಮಾಡಿದರು.

ಸರ್ವಂ ನಿವೇದನಂ ಚಕ್ರುಃ ಶಂಕರಂ ಕರುಣಾಲಯಂ ।
ಸ ಯಯೌ ಶೈಲಮೂಲಂ ಚ ತಾನಾಶ್ವಾಸ್ಯ ಪ್ರಹಸ್ಯ ಚ ॥ ೯ ॥

ದೇವಾ ಮುಮುದಿರೇ ಸರ್ವೇ ಶೀಘ್ರಂ ಗತ್ವಾ ಸ್ವಮಂದಿರಂ ।
ಇಷ್ಟಸಿದ್ಧಿರ್ಮುದೇ ಶಶ್ವದಸಿದ್ಧಿರ್ದುಃಖವರ್ಧಿನೀ ॥ ೧೦ ॥

ಅಥ ಶೈಲಃ ಸಭಾಮಧ್ಯೇ ಸಮುವಾಸ ಮುದಾನ್ವಿತಃ ।
ಬಂಧುವರ್ಗೈಃ ಪರಿವೃತಃ ಪಾರ್ವತೀಸಹಿತಃ ಸ್ವಯಂ ॥ ೧೧ ॥

ಏತಸ್ಮಿನ್ನಂತರೇ ತತ್ರ ವಿಪ್ರರೂಪೀ ಶಿವಃ ಸ್ವಯಂ ।
ಸಮಾಜಗಾಮ ಸಹಸಾ ಪ್ರಸನ್ನವದನೇಕ್ಷಣಃ ॥ ೧೨ ॥

ದಂಡೀ ಛತ್ರೀ ದೀರ್ಘವಾಸಾ ಬಿಭ್ರತ್ತಿಲಕಮುತ್ತಮಂ ।
ಕರೇ ಸ್ಫಟಿಕಮಾಲಾಂ ಚ ಶಾಲಗ್ರಾಮಂ ಗಲೇ ದಧತ್ ॥ ೧೩ ॥

ಮತ್ತು ಸಕಲ ವಿಷಯಗಳನ್ನೂ ತಿಳಿಸಿದರು. ಆಗ ಈಶ್ವರನು ನಗುತ್ತ ಆ ದೇವತೆಗಳನ್ನು ಸಮಾಧಾನಮಾಡಿ ತಾನು ಹಿಮವಂತನ ಬಳಿಗೆ ಹೋದನು.

೧೦. ದೇವತೆಗಳೆಲ್ಲರೂ ಜಾಗ್ರತೆಯಾಗಿ ತಮ್ಮ ತಮ್ಮ ಮನೆಗಳಿಗೆ ಹೋಗಿ ಸಂತೋಷಗೊಂಡರು. ಲೋಕದಲ್ಲಿ ತನ್ನ ಇಷ್ಟವು ಸಿದ್ಧಿಸಿದರೆ ಎಲ್ಲರಿಗೂ ಸಂತೋಷವಾಗುತ್ತದೆ. ಇಷ್ಟವು ಸಿದ್ಧಿಯಾಗದಿದ್ದರೆ ಮತ್ತೆ ಮತ್ತೆ ದುಃಖವುಂಟಾಗುತ್ತದೆ.

೧೧. ಇತ್ತ ಹಿಮವಂತನು ಬಂಧುಜನರಿಂದಲೂ ಪಾರ್ವತಿಯಿಂದಲೂ ಕೂಡಿದವನಾಗಿ ಸಭೆಯ ಮಧ್ಯದಲ್ಲಿ ಸಂತೋಷದಿಂದ ಕುಳಿತಿದ್ದನು.

೧೨-೧೩ ಈ ಸಮಯದಲ್ಲಿ ಈಶ್ವರನು ಬ್ರಾಹ್ಮಣರೂಪವನ್ನು ಧರಿಸಿ ಕೈಯಲ್ಲಿ ದಂಡವನ್ನೂ ಛತ್ರಿಯನ್ನೂ ಹಿಡಿದುಕೊಂಡು ದೊಡ್ಡದಾಗಿ ಬಟ್ಟೆಯನ್ನುಟ್ಟು ಹಣೆಯಲ್ಲಿ ಉತ್ತಮವಾದ ತಿಲಕವನ್ನು ಧರಿಸಿ ಕೈಯಲ್ಲಿ ಸ್ಫಟಿಕದ ಜಪಮಾಲೆಯನ್ನು ಹಿಡಿದು ಕತ್ತಿನಲ್ಲಿ ಸಾಲಿಗ್ರಾಮವನ್ನು ಧರಿಸಿಕೊಂಡು ಶಾಂತವಾದ ಮುಖಭಾವವುಳ್ಳವನಾಗಿ ಆ ಹಿಮವಂತನ ಸಮೀಪಕ್ಕೆ ಬಂದನು.

ತಂ ಚ ದೃಷ್ಟ್ವಾ ಸಮುತ್ತಸ್ಥೌ ಸಗಣಶ್ಚ ಹಿಮಾಲಯಃ ।
ನನಾಮ ದಂಡವದ್ಭೂಮೌ ಭಕ್ತ್ಯಾಽತಿಥಿಮಪೂರ್ವಕಂ ॥ ೧೪ ॥

ನನಾಮ ಪಾರ್ವತೀ ಭಕ್ತ್ಯಾ ಪ್ರಾಣೇಶಂ ವಿಪ್ರರೂಪಿಣಂ ।
ಆಶಿಷಂ ಯುಯುಜೇ ವಿಪ್ರಃ ಸರ್ವೇಷಾಂ ಪ್ರೀತಿಪೂರ್ವಕಂ ॥ ೧೫ ॥

ಶೈಲದತ್ತಾಸನೇ ಶ್ರೇಷ್ಠಮುವಾಸ ಬ್ರಾಹ್ಮಣಃ ಸ್ವಯಂ ।
ಮಧುಪರ್ಕಾದಿಕಂ ಸರ್ವಂ ಜಗ್ರಾಹ ಪ್ರೀತಿಪೂರ್ವಕಂ ॥ ೧೬ ॥

ಪಪ್ರಚ್ಛ ಕುಶಲಂ ಶೈಲೋ ಬ್ರಾಹ್ಮಣಂ ಕೋ ಭವಾನಿತಿ ।
ಉವಾಚ ಸರ್ವಂ ವಿಪ್ರೇಂದ್ರೋ ಗಿರೀಂದ್ರಂ ಸಾದರೇಣ ಚ ॥ ೧೭ ॥

|| ಬ್ರಾಹ್ಮಣ ಉವಾಚ ||

ಘಾಟಕಾಂ ವೃತ್ತಿಮಾಶ್ರಿತ್ಯ ಭ್ರಮಾಮಿ ಧರಣೀತಲೇ ।
ಮನೋಯಾಯಿ ಸ್ವರ್ಗಗಾಮೀ ಸರ್ವಜ್ಞೋಽಹಂ ಗುರೋರ್ವರಾತ್ ॥೧೮॥

---

೧೪. ಅವನನ್ನು ನೋಡಿ ಹಿಮವಂತನು ತನ್ನ ಪರಿವಾರದೊಡನೆ ಎದ್ದು ನಿಂತನು. ಹಿಂದೆಂದೂ ನೋಡದ ಆ ಅತಿಥಿಯನ್ನು ನೋಡಿ ಭಕ್ತಿಯಿಂದ ನೆಲದ ಮೇಲೆ ಸಾಷ್ಟಾಂಗವೆರಗಿದನು.

೧೫. ಪಾರ್ವತಿಯು ಬ್ರಾಹ್ಮಣರೂಪದಿಂದಿರುವ ತನ್ನ ಪ್ರಾಣೇಶನನ್ನು ಭಕ್ತಿಯಿಂದ ನಮಸ್ಕಾರಮಾಡಿದಳು. ಆ ಬ್ರಾಹ್ಮಣನು ಪ್ರೀತಿಪೂರ್ವಕವಾಗಿ ಎಲ್ಲರಿಗೂ ಆಶೀರ್ವಾದವನ್ನು ಮಾಡಿದನು.

೧೬. ಆ ಬ್ರಾಹ್ಮಣನು ಹಿಮವಂತನು ಕೊಟ್ಟ ಆಸನದಲ್ಲಿ ಕುಳಿತುಕೊಂಡನು. ಮಧುಪರ್ಕವೇ ಮೊದಲಾದ ಸತ್ಕಾರಗಳನ್ನು ಪ್ರೀತಿಯಿಂದ ಸ್ವೀಕರಿಸಿದನು.

೧೭. ಹಿಮವಂತನು ಬ್ರಾಹ್ಮಣನನ್ನು ಕುಶಲಪ್ರಶ್ನೆಮಾಡಿದನಂತರ ನೀನು ಯಾರೆಂದು ಕೇಳಿದನು. ಆಗ ಬ್ರಾಹ್ಮಣನು ಹಿಮವಂತನನ್ನು ಕುರಿತು ವಿಶ್ವಾಸ ಪೂರ್ವಕವಾಗಿ ಈರೀತಿ ಹೇಳತೊಡಗಿದನು.

೧೮. ಬ್ರಾಹ್ಮಣ :—ನಾನು ಚಕ್ರದ ವ್ಯಾಪಾರವನ್ನವಲಂಬಿಸಿಕೊಂಡು ಭೂಮಿಯಲ್ಲಿ ತಿರುಗುತ್ತಿರುವೆನು. ಮನಬಂದೆಡೆಗೆ ಹೋಗುತ್ತ ಸ್ವರ್ಗಕ್ಕೂ ಹೋಗಬಲ್ಲೆನು. ನಮ್ಮ ಗುರುಗಳ ವರಪ್ರಸಾದದಿಂದ ನಾನು ಸಕಲವನ್ನೂ ತಿಳಿಯುವವನಾಗಿದ್ದೇನೆ.

ಮಯಾ ಜ್ಞಾತಂ ಶಂಕರಾಯ ಸುತಾಂ ದಾತುಂ ತ್ವಮಿಚ್ಛಸಿ ।
ಇಮಾಂ ಪದ್ಮಾಸಮಾಂ ದಿವ್ಯಾಮಜ್ಞಾತಕುಲಶೀಲಿನೇ ॥ ೧೯ ॥

ನಿರಾಶ್ರಯಾಯಾಸಂಗಾಯಾರೂಪಾಯ ನಿರ್ಗುಣಾಯ ಚ ।
ಶ್ಮಶಾನಗಾಮಿನೇ ಸರ್ವಭೂತನಾಥಾಯ ಯೋಗಿನೇ ॥ ೨೦ ॥

ದಿಗ್ವಾಸಸೇಽಹಿಗಾತ್ರಾಯ ವಿಭೂತಿಭೂಷಣಾಯ ಚ ।
ವ್ಯಾಲಗ್ರಾಹಿಸ್ವರೂಪಾಯ ಕಾಲವ್ಯಾಪಾದನಾಯ ಚ ॥ ೨೧ ॥

ಅಜ್ಞಾತಮೃತ್ಯವೇಽಜ್ಞಾಯಾನಾಥಾಯಾಬಂಧವೇ ಭವೇ ।
ತಪ್ತಸ್ವರ್ಣಜಟಾಭಾರಧಾರಿಣೇ ನಿರ್ಧನಾಯ ಚ ॥ ೨೨ ॥

ಅಜ್ಞಾತವಯಸೇಽತೀವ ವೃದ್ಧಾಯ ಚಾವಿಕಾರಿಣೇ ।
ಸರ್ವಾಶ್ರಯಾಯ ಭ್ರಮಿಣೇ ನಾಗಹಾರಾಯ ಭಿಕ್ಷವೇ ॥ ೨೩ ॥

ನಿಬೋಧ ಜ್ಞಾನಿನಾಂ ಶ್ರೇಷ್ಠಂ ನಾರಾಯಣಂ ಕುಲೋದ್ಭವಂ ।
ಸ ತೇ ಪಾತ್ರಾನುರೂಪಶ್ಚ ಪಾರ್ವತೀದಾತೃಕರ್ಮಣಿ ॥ ೨೪ ॥

೧೯-೨೨. ಲಕ್ಷ್ಮೀದೇವಿಗೆ ಸದೃಶಳೂ, ದಿವ್ಯರೂಪಳೂ ಆದ ಈ ಕನ್ಯೆಯನ್ನು ನೀನು ಕುಲಗೋತ್ರಗಳು ತಿಳಿಯದ ಶಂಕರನಿಗೆ ಕೊಡಲಿಚ್ಛಿಸುವುದಾಗಿ ನನಗೆ ತಿಳಿಯಿತು. ಆಶ್ರಯವಿಲ್ಲದವನೂ, ಸರ್ವಸಂಗಪರಿತ್ಯಾಗಿಯೂ, ಕುರೂಪಿಯೂ, ಗುಣರಹಿತನೂ, ದಿಗಂಬರನೂ, ಹಾವುಗಳನ್ನು ದೇಹದಲ್ಲಿ ಧರಿಸಿರುವವನೂ, ಬೂದಿಯನ್ನು ಬಳಿದುಕೊಂಡಿರುವವನೂ, ಹಾವಾಡಿಗರ ವೇಷದವನೂ, ಮೃತ್ಯುವನ್ನೇ ಕೊಲ್ಲುವವನೂ, ಯಾವಾಗ ಮೃತ್ಯುವು ಬರುವುದೆಂಬುದನ್ನು ತಿಳಿಯಲಸಾಧ್ಯನೂ, ರಕ್ಷಕರಿಲ್ಲದವನೂ, ಬಾಂಧವರಿಲ್ಲದವನೂ, ಕಾಯಿಸಿದ ಚಿನ್ನವಂತಿರುವ ಜಟೆಯನ್ನು ಧರಿಸಿದವನೂ, ದರಿದ್ರನೂ ಆದ ಶಂಕರನಿಗೆ ನಿನ್ನ ಮಗಳನ್ನು ಕೊಡುವುದು ಯೋಗ್ಯವಾಗಿಲ್ಲ.

೨೩-೨೪. ಮತ್ತು ವಯಸ್ಸೇ ತಿಳಿಯದ, ಬಹಳ ಮುದುಕನಾದ, ವಿಕಾರವನ್ನು ಹೊಂದದೆ ಒಂದೇ ತೆರನಾಗಿರುವ, ಸಕಲರಿಗೂ ಆಶ್ರಯನಾದ, ಯಾವಾಗಲೂ ಸುತ್ತುತ್ತಿರುವ ಹಾವನ್ನು ಹಾರವನ್ನಾಗಿ ಮಾಡಿಕೊಂಡಿರುವ, ಭಿಕ್ಷೆಬೇಡುತ್ತಿರುವ, ಆ ಶಂಕರನಿಗೆ ನಿನ್ನ ಮಗಳನ್ನು ಕೊಡುವುದಕ್ಕಿಂತ ಜ್ಞಾನಿಗಳಲ್ಲಿ ಉತ್ತಮನೂ, ಉತ್ತಮಕುಲದಲ್ಲಿ ಹುಟ್ಟಿದವನೂ ಆದ ನಾರಾಯಣನನ್ನು ಯೋಚಿಸು. ಅವನು ನಿನಗೆ ಸಮಾನನು. ಪಾರ್ವತಿಯನ್ನು ಕೊಡಲು ಅವನು ತಕ್ಕವನಾಗಿದ್ದಾನೆ.

ಮಹಾಜನಃ ಸ್ಮೇರಮುಖಃ ಶ್ರುತಿಮಾತ್ರಾದ್ಭವಿಷ್ಯತಿ ।
ಲಕ್ಷಶೈಲಾಧಿಪಸ್ತ್ವಂ ಚ ನ ತಸ್ಯೈಕೋಽಸ್ತಿ ಬಾಂಧವಃ ॥ ೨೫ ॥

ಬಾಂಧವಾನ್ ಮೇನಕಾಂ ಪ್ರಶ್ನಂ ಕುರು ಶೀಘ್ರಂ ಪ್ರಯತ್ನತಃ ।
ಸರ್ವಾನ್ ಪೃಚ್ಛ ಪ್ರಯತ್ನೇನ ಹೇ ಬಂಧೋ ಪಾರ್ವತೀಂ ವಿನಾ ॥ ೨೬ ॥

ರೋಗಿಣೇ ನೌಷಧಂ ಶಶ್ವತ್ ಕುಪಥ್ಯಂ ರೋಚತೇ ಸದಾ ।
ಇತ್ಯುಕ್ತ್ವಾ ಬ್ರಾಹ್ಮಣಃ ಶೀಘ್ರಂ ಸ್ನಾತ್ವಾ ಭುಕ್ತ್ವಾ ಮುದಾಽನ್ವಿತಃ ॥೨೭॥

ಜಗಾಮ ಸ್ವಾಲಯಂ ಶಾಂತೋ ವೃಂದಾವನವಿನೋದಿನಿ ।
ಬ್ರಾಹ್ಮಣಸ್ಯ ವಚಃ ಶ್ರುತ್ವಾ ಮೇನೋವಾಚ ಹಿಮಾಲಯಂ ।
ಶೋಕೇನ ಸಾಶ್ರುನಯನಾ ಹೃದಯೇನ ವಿದೂಯತಾ ॥ ೨೮ ॥

॥ ಮೇನಕೋವಾಚ ॥

ಶೃಣು ಶೈಲೇಂದ್ರ ಮದ್ವಾಕ್ಯಂ ಪರಿಣಾಮಸುಖಾವಹಂ ।
ಪೃಚ್ಛ ಶೈಲವರಾನಸ್ಮೈ ನ ದಾಸ್ಯಾಮಿ ಸುತಾಮಹಂ ॥ ೨೯ ॥

---

೨೫. ನೀನು ಲಕ್ಷಪರ್ವತಗಳಿಗೆ ರಾಜನಾಗಿರುವೆ. ಆ ಶಂಕರನಿಗೆ ಒಬ್ಬ ನಾದರೂ ಬಂಧುವಿಲ್ಲ. ದೊಡ್ಡಮನುಷ್ಯರು ಈ ವಿಷಯವನ್ನು ಕೇಳಿದೊಡನೆಯೇ ನಗುತ್ತಾರೆ.

೨೬. ಎಲೈ ಬಂಧುವೇ, ಜಾಗ್ರತೆಯಾಗಿ ನೀನು ನಿನ್ನ ಬಂಧುಗಳನ್ನೂ, ಮೇನಕಾದೇವಿಯನ್ನೂ, ಪಾರ್ವತಿಯನ್ನು ಬಿಟ್ಟು ಉಳಿದವರನ್ನೂ ಸಹ ಕೇಳು.

೨೭-೨೮. ರೋಗಿಯಾದವನಿಗೆ ಅಪಥ್ಯವಾದ ಔಷಧಿಯಲ್ಲದ ಪದಾರ್ಥವು ಯಾವಾಗಲೂ ಮತ್ತೆಮತ್ತೆ ಇಷ್ಟವಾಗುತ್ತದೆ. ಹೀಗೆ ಹೇಳಿ ಬ್ರಾಹ್ಮಣನು ಸ್ನಾನ ಮಾಡಿ ಊಟಮಾಡಿ ಶಾಂತವಾದ ಮನಸ್ಸಿನಿಂದ ತನ್ನ ಮನೆಗೆ ತೆರಳಿದನು. ಬ್ರಾಹ್ಮಣನಾಡಿದ ಮಾತುಗಳನ್ನು ಕೇಳಿ ಮೇನಾದೇವಿಯು ಮನಸ್ಸಿನಲ್ಲಿ ಪರಿತಾಪ ಪಡುತ್ತ ದುಃಖದಿಂದ ಹಿಮವಂತನನ್ನು ಕುರಿತು ಹೀಗೆಂದಳು.

೨೯. ಮೇನಕೆಯು :—ಎಲೈ ಪರ್ವತರಾಜನೇ, ಕೊನೆಯಲ್ಲಿ ಸುಖವನ್ನುಂಟು ಮಾಡುವ ನನ್ನ ಮಾತನ್ನು ಕೇಳು. ನಾನು ನನ್ನ ಮಗಳನ್ನು ಈಶ್ವರನಿಗೆ ಕೊಡ ಲಾರೆನು. ಪರ್ವತಶ್ರೇಷ್ಠರನ್ನು ಕೇಳು.

ತ್ಯಕ್ಷ್ಯಾಮಿ ಸರ್ವಾನ್ವಿಷಯಾನ್ಭಕ್ಷ್ಯಾಮಿ ವಿಷಮೇವ ಚ ।
ಗಲೇ ಬದ್ಧ್ವಾಂಬಿಕಾಂ ಪಶ್ಯ ಯಾಸ್ಯಾಮಿ ಘೋರಕಾನನಂ ॥ ೩೦ ॥

ಗೃಹೀತ್ವಾ ಪಾರ್ವತೀಂ ಮೇನಾ ಗತ್ವಾ ಕೋಪಾಲಯಂ ರುಷಾ ।
ತ್ಯಕ್ತ್ವಾಽಽಹಾರಂ ರುದಂತೀ ಚ ಚಕಾರ ಶಯನಂ ಭುವಿ ॥ ೩೧ ॥

ಏತಸ್ಮಿನ್ನಂತರೇ ತತ್ರ ವಸಿಷ್ಠೋ ಭ್ರಾತೃಭಿಃ ಸಹ ।
ಆಜಗಾಮ ಪುರಸ್ತೈಶ್ಚ ಯುಕ್ತಾ ಪಶ್ಚಾದರುಂಧತೀ ॥ ೩೨ ॥

ಪ್ರಣಮ್ಯ ಶೈಲಸ್ತಾನ್ಸರ್ವಾನ್ ಸ್ವರ್ಣಸಿಂಹಾಸನಂ ದದೌ ।
ದತ್ವಾ ಷೋಡಶೋಪಚಾರಾನ್ಪೂಜಯಾಮಾಸ ಭಕ್ತಿತಃ ॥ ೩೩ ॥

ಋಷಯಶ್ಚ ಸಭಾಮಧ್ಯೇ ಸುಖಮೂಷುಃ ಸುಖಾಸನೇ ।
ಜಗಾಮಾರುಂಧತೀ ತೂರ್ಣಂ ಯತ್ರ ಮೇನಾ ಚ ಪಾರ್ವತೀ ॥ ೩೪ ॥

---

೩೦. ನಾನು ಸಕಲ ಸುಖಗಳನ್ನೂ ಬಿಡುತ್ತೇನೆ. ವಿಷವನ್ನಾದರೂ ಕುಡಿಯುತ್ತೇನೆ. ನೋಡು ಈ ಪಾರ್ವತಿಯನ್ನು ಕತ್ತಿನಲ್ಲಿ ಕಟ್ಟಿಕೊಂಡು ಭಯಂಕರವಾದ ಕಾಡಿಗಾದರೂ ಹೋಗುತ್ತೇನೆ.

೩೧. ಹೀಗೆಂದು ಹೇಳಿ ಮೇನಾದೇವಿಯು ಆಹಾರವನ್ನೂ ತೆಗೆದುಕೊಳ್ಳದೆ ಅಳುತ್ತ ಪಾರ್ವತಿಯನ್ನು ಜೊತೆಯಲ್ಲಿ ಕರೆದುಕೊಂಡು ಕೋಪದ ಕೋಣೆಯನ್ನು ಪ್ರವೇಶಿಸಿ ನೆಲದಮೇಲೆ ಮಲಗಿಕೊಂಡಳು.

೩೨. ಈ ಸಂದರ್ಭಕ್ಕೆ ಸರಿಯಾಗಿ ವಸಿಷ್ಠರು ತಮ್ಮ ಸಹೋದರರೊಡನೆಯೂ ಹಿಂದೆ ಬರುತ್ತಿರುವ ಅರುಂಧತಿಯೊಡನೆಯೂ ಅಲ್ಲಿಗೆ ಬಂದರು.

೩೩. ಹಿಮವಂತನು ಅವರೆಲ್ಲರಿಗೂ ನಮಸ್ಕಾರಮಾಡಿ ಸುವರ್ಣಮಯವಾದ ಸಿಂಹಾಸನವನ್ನೂ ಕೊಟ್ಟನು. ಮತ್ತು ಭಕ್ತಿಪೂರ್ವಕವಾಗಿ ಷೋಡಶೋಪಚಾರ ವಿಧಿಯಿಂದ ಪೂಜೆಮಾಡಿದನು.

೩೪. ಮುನಿಗಳೆಲ್ಲರೂ ಸಭೆಯ ಮಧ್ಯದಲ್ಲಿ ಸುಖಾಸನದಲ್ಲಿಕುಳಿತುಕೊಂಡರು. ಅರುಂಧತಿಯು ನೇರವಾಗಿ ಪಾರ್ವತಿ ಮತ್ತು ಮೇನಾದೇವಿಯರಿರುವ ಸ್ಥಳಕ್ಕೆ ಹೋದಳು.

ಗತ್ವಾ ದದರ್ಶ ಮೇನಾಂ ಚ ಶಯಾನಾಂ ಶೋಕಮೂರ್ಛಿತಾಂ ।
ಉವಾಚ ಮಧುರಂ ಸಾಧ್ವೀ ಸಾವಧಾನಾಂ ಹಿತಂ ವಚಃ ॥ ೩೫ ॥

॥ ಅರುಂಧತ್ಯುವಾಚ ॥

ಉತ್ತಿಷ್ಠ ಮೇನಕೇ ಸಾಧ್ವಿ ತ್ವದ್ಗೃಹೇಽಹಮರುಂಧತೀ ।
ಪಿತೄಣಾಂ ಮಾನಸೀ ಕನ್ಯಾ ಮಾಂ ಜಾನೀಹಿ ವಿಧೇರ್ವಧೂಂ ॥ ೩೬ ॥

ಅರುಂಧತ್ಯಾಃ ಸ್ವರಂ ಶ್ರುತ್ವಾ ಶೀಘ್ರಮುತ್ಥಾಯ ಮೇನಕಾ ।
ಉವಾಚ ಶಿರಸಾ ನತ್ವಾ ತಾಂ ಪದ್ಮಾಮಿವ ತೇಜಸಾ ॥ ೩೭ ॥

॥ ಮೇನಕೋವಾಚ ॥

ಅಹೋಽದ್ಯ ಕಿಮಿದಂ ಪುಣ್ಯಮಸ್ಮಾಕಂ ಪುಣ್ಯಜನ್ಮನಾಂ ।
ವಧೂರ್ಜಗದ್ವಿಧೇಃ ಪತ್ನೀ ವಸಿಷ್ಠಸ್ಯ ಮಮಾಽಽಲಯೇ ॥ ೩೮ ॥

---

೩೫. ಅಲ್ಲಿಗೆ ಹೋಗಿ ದುಃಖದಿಂದ ಬಳಲಿ ಮಲಗಿರುವ ಮೇನಾದೇವಿಯನ್ನು ನೋಡಿ ಪತಿವ್ರತಾಶಿರೋಮಣಿಯಾದ ಅರುಂಧತಿಯು ಇಂಪಾಗಿಯೂ ಹಿತವಾಗಿಯೂ ಇರುವ ಮಾತನ್ನಾಡಿದಳು.

೩೬. ಅರುಂಧತಿಯು :– ಎಲೈ ಸಾಧ್ವಿಯಾದ ಮೇನಕೆಯೇ, ಮೇಲಕ್ಕೇಳು. ನಿನ್ನ ಮನೆಗೆ ಪಿತೃದೇವತೆಗಳ ಮಾನಸಪುತ್ರಿಯೂ, ಬ್ರಹ್ಮನ ಸೊಸೆಯೂ ಆದ ನಾನು ಬಂದಿರುವೆನೆಂಬುದನ್ನು ತಿಳಿಯೆಯಾ ?

೩೭. ಅರುಂಧತಿಯ ಧ್ವನಿಯನ್ನು ಕೇಳಿ ಮೇನಕೆಯು ಬೇಗನೆ ಮೇಲಕ್ಕೆದ್ದು ಕಾಂತಿಯಿಂದ ಲಕ್ಷ್ಮಿಯಂತಿರುವ ಆ ಅರುಂಧತಿಗೆ ತಲೆಬಾಗಿ ನಮಸ್ಕಾರಮಾಡಿ ಈ ಪ್ರಕಾರ ಹೇಳಿದಳು.

೩೮. ಮೇನಕೆಯು :—ಇದೇನಾಶ್ಚರ್ಯವು, ನಮ್ಮ ಪುಣ್ಯವು ಬಹಳ ಉತ್ತಮವಾದುದು. ಜಗತ್ತನ್ನು ಸೃಷ್ಟಿಮಾಡುವ ಬ್ರಹ್ಮನ ಸೊಸೆಯೂ, ವಸಿಷ್ಠಮುನಿಯ ಪತ್ನಿಯೂ ಆದ ಅರುಂಧತೀದೇವಿಯು ಇಂದು ನಮ್ಮ ಮನೆಗೆ ಬಂದಿರುವುದು ಆಶ್ಚರ್ಯವೇಸರಿ.

ಸಂಭ್ರಮೇಣೇದಮೇವೋಕ್ತಂ ಗೃಹಂ ತೇsಹಂ ಚ ಕಿಂಕರೀ ।
ಈಶ್ವರೀಂ ಜಗತಾಂ ದ್ರಷ್ಟುಮಾಗತಾಂ ಬಹುಪುಣ್ಯತಃ ॥ ೩೯ ॥

ಪಾದ್ಯಂ ದತ್ವಾ ಸ್ವರ್ಣಪೀಠೇ ವಾಸಯಾಮಾಸ ತಾಂ ಸತೀಂ ।
ಭೋಜಯಾಮಾಸ ಮಿಷ್ಟಾನ್ನಂ ಬುಭುಜೇ ಕನ್ಯಯಾ ಸಹ ॥ ೪೦ ॥

ಶಿವಸ್ಯ ಹೇತೋರ್ನೀತಿಂ ಚ ಬೋಧಯಾಮಾಸ ಮೇನಕಾಂ ।
ಅರುಂಧತೀ ಪ್ರಸಂಗೇನ ಸಂಬಂಧಯೋಜನಾನಿ ಚ ॥ ೪೧ ॥

ಅಥ ಶೈಲಮೃಷೀಂದ್ರಾಶ್ಚ ನೀತಿಸಾರಂ ಪರಂ ವಚಃ ।
ಬೋಧಯಾಮಾಸುಃ ಸಂಬಂಧಯೋಜನಾನಿ ಪ್ರಸಂಗತಃ ॥ ೪೨ ॥

---

೩೯. ಈ ಮಾತುಗಳೆಲ್ಲವೂ ಗಾಬರಿಯಿಂದ ಹೇಳಲ್ಪಟ್ಟವು. 'ಜಗದೀಶ್ವರಿ ಯನ್ನು ಬಹಳ ಪುಣ್ಯದಿಂದ ನೋಡಲು ನೀನು ಬಂದಿರುವಿ. ಈ ಮನೆಯು ನಿನ್ನ ದಾಗಿದೆ ನಾನೂ ಕೂಡ ನಿನ್ನ ದಾಸಿಯು' ಎಂದಳು.

೪೦. ಪಾದೋದಕವನ್ನು ಕೊಟ್ಟು ಚಿನ್ನದ ಮಣೆಯಮೇಲೆ ಕೂರಿಸಿದಳು. ಮೃಷ್ಟಾನ್ನವನ್ನು ಬಡಿಸಿ ಊಟಮಾಡಿಸಿದಳು. ತಾನೂ ಮಗಳೊಡನೆ ಭೋಜನ ವನ್ನು ಮಾಡಿದಳು.

೪೧. ಅರುಂಧತಿಯು ಮೇನಕೆಯನ್ನು ಕುರಿತು ಮಾತಿನ ಸಂದರ್ಭದಿಂದ ಶಿವನ ವಿಷಯದಲ್ಲಿ ಅವನ ಸಂಬಂಧ ಮಾಡಲನುಕೂಲವಾಗಿರುವ ಮಾತುಗಳನ್ನು ಉಪದೇಶಮಾಡಿದಳು.

೪೨. ಅನಂತರ ಮುನಿಗಳೂ ಕೂಡ ಹಿಮವಂತನನ್ನು ಕುರಿತು ನೀತಿ ಶಾಸ್ತ್ರದ ಸಾರವೂ, ಶ್ರೇಷ್ಠವೂ ಸಂಬಂಧಮಾಡುವ ವಿಧಿಯನ್ನು ತಿಳಿಸುವುದೂ ಆದ ಮಾತನ್ನು ಸಂದರ್ಭಾನುಸಾರವಾಗಿ ಉಪದೇಶಿಸಿದರು.

|| ಋಷಯ ಊಚುಃ ||

ಶೈಲೇಂದ್ರ ಶ್ರೂಯತಾಂ ವಾಕ್ಯಮಸ್ಮಾಕಂ ಶುಭಕಾರಕಂ |
ಶಿವಾಯ ಪಾರ್ವತೀಂ ದೇಹಿ ಸಂಹರ್ತುಃ ಶ್ವಶುರೋ ಭವ || ೪೩ ||

ಅಯಾಚಿತಾರಂ ದೇವೇಶಂ ಬೋಧಯಾಽಽಶು ಪ್ರಯತ್ನತಃ |
ತವ ಶಂಕಾವಿನಾಶಾಯ ಬ್ರಹ್ಮಸಂಬಂಧಕರ್ಮಣೀ | ೪೪ ||

ನೇಚ್ಛುಕೋ ದಾರಸಂಯೋಗೇ ಶಂಕರೋ ಯೋಗಿನಾಂ ವರಃ |
ವಿಧೇಃ ಪ್ರಾರ್ಥನಯಾ ದೇವಸ್ತ್ವತ ಕನ್ಯಾಂ ಗ್ರಹೀಷ್ಯತಿ || ೪೫ ||

ದುಹಿತುಸ್ತೇ ತಪಸ್ಯಾಂತೇ ಪ್ರತಿಜ್ಞಾನಂ ಚಕಾರ ಸಃ |
ಹೇತುದ್ವಯೇನ ಯೋಗೀಂದ್ರೋ ವಿವಾಹಂ ಚ ಕರಿಷ್ಯತಿ || ೪೬ ||

ಋಷೀಣಾಂ ವಚನಂ ಶ್ರುತ್ವಾ ಪ್ರಹಸ್ಯ ಚ ಹಿಮಾಲಯಃ |
ಉವಾಚ ಕಿಂಚಿದ್ಭೀತಶ್ಚ ಪರಂ ವಿನಯಪೂರ್ವಕಂ || ೪೭ ||

---

೪೩. ಮುನಿಗಳು:—ಓ ಪರ್ವತರಾಜನೇ ಮಂಗಳವನ್ನುಂಟುಮಾಡುವ ನಮ್ಮ ಮಾತನ್ನು ಕೇಳುವವನಾಗು. ಈಶ್ವರನಿಗೆ ಪಾರ್ವತಿಯನ್ನು ಕೊಟ್ಟು, ಜಗತ್ಸಂಹಾರಕನಾದ ಈಶ್ವರನಿಗೆ ಮಾವನೆನಿಸಿಕೋ.

೪೪. ಯಾಚನೆಮಾಡದ ದೇವರಿಗೆದೇವನಾದ ಈಶ್ವರನಿಗೆ ಪ್ರಯತ್ನ ಪೂರ್ವಕವಾಗಿ ನಿನ್ನ ಸಂಶಯಪರಿಹಾರಕ್ಕೋಸ್ಕರ ಈ ಸಂಬಂಧವಿಷಯದಲ್ಲಿ ಉಪದೇಶಮಾಡು.

೪೫. ಯೋಗಿಶ್ರೇಷ್ಠನಾದ ಶಂಕರನು ಮದುವೆಯನ್ನು ಅಪೇಕ್ಷಿಸುವವನಲ್ಲ. ಆ ದೇವನು ಬ್ರಹ್ಮನ ಪ್ರಾರ್ಥನೆಯಿಂದ ನಿನ್ನಮಗಳನ್ನು ಸ್ವೀಕರಿಸುತ್ತಾನೆ.

೪೬. ನಿನ್ನ ಮಗಳು ತಪಸ್ಸನ್ನು ಮಾಡಿದಾಗ ಕೊನೆಯಲ್ಲಿ ಈಶ್ವರನು ಅವಳನ್ನು ಮದುವೆಮಾಡಿಕೊಳ್ಳುವುದಾಗಿ ಮಾತು ಕೊಟ್ಟಿರುತ್ತಾನೆ. ಈ ಎರಡು ಕಾರಣಗಳಿಂದಲೂ ಯೋಗಿಶ್ರೇಷ್ಠನಾದ ಶಂಕರನು ಮದುವೆಯನ್ನು ಮಾಡಿಕೊಳ್ಳುತ್ತಾನೆ.

೪೭. ಮುನಿಗಳ ಮಾತನ್ನು ಕೇಳಿ ಹಿಮವಂತನು ಸ್ವಲ್ಪ ನಕ್ಕು ಹಾಗೆಯೇ ಕೊಂಚ ಭಯಗೊಂಡವನಾಗಿ ವಿನಯಪೂರ್ವಕವಾಗಿ ಮಾತನಾಡಿದನು

॥ ಹಿಮಾಲಯ ಉವಾಚ ॥

ಶಿವಸ್ಯ ರಾಜಸಾಮಗ್ರೀಂ ನ ಹಿ ಪಶ್ಯಾಮಿ ಕಿಂಚನ ।
ಕಿಂಚಿದಾಶ್ರಯಮೈಶ್ವರ್ಯಂ ಕಿಂ ವಾ ಸ್ವಜನಬಾಂಧವಂ ॥ ೪೮ ॥

ನ ಕನ್ಯಾಮತನಿರ್ಲಿಪ್ತಯೋಗಿನೇ ದಾತುಮರ್ಹತಿ ।
ಯೂಯಂ ವಿಧಾತುಃ ಪುತ್ರಾಶ್ಚ ಸತ್ಯಂ ವದತ ನಿಶ್ಚಿತಂ ॥ ೪೯ ॥

ನಾನುರೂಪಾಯ ಪುತ್ರ್ಯಾಯ ಪಿತಾ ಕನ್ಯಾಂ ದದಾತಿ ಚೇತ್ ।
ಕಾಮಾಲ್ಲೋಭಾದ್ಭಯಾನ್ಮೋಹಾಚ್ಛತಾಬ್ದಂ ನರಕಂ ವ್ರಜೇತ್ ॥ ೫೦ ॥

ನ ಹಿ ದಾಸ್ಯಾಮ್ಯಹಂ ಕನ್ಯಾಮಿಚ್ಛಯಾ ಶೂಲಪಾಣಿನೇ ॥
ಯದ್ವಿಧಾನಂ ಭವೇದ್ಯೋಗ್ಯಮೃಷಯಸ್ತದ್ವಿಧೀಯತಾಂ ॥ ೫೧ ॥

ಹಿಮಾಲಯ ವಚಃ ಶ್ರುತ್ವಾ ವಸಿಷ್ಠೋ ವಿಧಿನಂದನಃ ।
ವೇದವೇದಾಂಗವಿಜ್ಞಾತಾ ವೇದೋಕ್ತಂ ವಕ್ತುಮುದ್ಯತಃ ॥ ೫೨ ॥

---

೪೮. ಹಿಮಾಲಯನು :—ಈಶ್ವರನ ರಾಜ್ಯಸಂಪತ್ತಿಯನ್ನಾಗಲೀ, ಆಶ್ರಯವನ್ನಾಗಲೀ, ಸ್ವಜನರನ್ನಾಗಲೀ, ಬಂಧುಗಳನ್ನಾಗಲೀ ಯಾವುದೊಂದನ್ನೂ ಕಾಣೆನು.

೪೯. ಕನ್ಯೆಯನ್ನು ಅತ್ಯಂತ ನಿರ್ಲಿಪ್ತನಾದ ಯೋಗಿಗೆ ಕೊಡಬಾರದು. ನೀವು ಬ್ರಹ್ಮನ ಮಕ್ಕಳಾಗಿರುವಿರಿ. ಆದುದರಿಂದ ಈ ವಿಷಯವನ್ನು ನಿಶ್ಚಯ ಮಾಡಿಕೊಂಡು ಸತ್ಯಾಂಶವನ್ನು ಹೇಳಿರಿ.

೫೦. ಯಾವ ತಂದೆಯು ಕಾಮದಿಂದಲೋ, ಅಜ್ಞಾನದಿಂದಲೋ, ಭಯದಿಂದಲೋ ಅನುರೂಪನಲ್ಲದ ವರನಿಗೆ ಮಗಳನ್ನು ಕೊಡುತ್ತಾನೋ ಅವನು ನೂರು ವರುಷಗಳ ವರೆಗೂ ನರಕವನ್ನು ಹೊಂದುತ್ತಾನೆ.

೫೧. ನಾನು ಮನಃಪೂರ್ವಕವಾಗಿ ನನ್ನ ಮಗಳನ್ನು ಆ ಶೂಲಪಾಣಿಗೆ ಕೊಡಲಾರೆನು. ಓ ಮುನಿಗಳೇ, ಯಾವ ರೀತಿಯಲ್ಲಿ ನಡೆದುಕೊಂಡರೆ ಯುಕ್ತವಾಗುವುದೋ ಅದನ್ನು ನನಗೆ ಅಪ್ಪಣೆಮಾಡಿರಿ.

೫೨. ಈ ಪ್ರಕಾರವಾದ ಹಿಮವಂತನ ಮಾತನ್ನು ಕೇಳಿ ವೇದ ಮತ್ತು ವೇದಾಂಗಗಳಲ್ಲಿ ನಿಪುಣನಾದ, ಬ್ರಹ್ಮನ ಮಗನಾದ ವಸಿಷ್ಠಮುನಿಯು ವೇದಗಳಲ್ಲಿ ಹೇಳಿರುವ ಧರ್ಮರಹಸ್ಯವನ್ನು ಹೇಳಲು ಪ್ರಾರಂಭಿಸಿದನು.

॥ ವಸಿಷ್ಠ ಉವಾಚ ॥

ವಚನಂ ತ್ರಿವಿಧಂ ಶೈಲ ಲೌಕಿಕೇ ವೈದಿಕೇ ತಥಾ ।
ಸರ್ವಂ ಜಾನಾತಿ ಶಾಸ್ತ್ರಜ್ಞೋ ನಿರ್ಮಲಜ್ಞಾನಚಕ್ಷುಷಾ ॥ ೫೩ ॥

ಅಸತ್ಯಮಹಿತಂ ಪಶ್ಚಾತ್ ಸಾಂಪ್ರತಂ ಶ್ರುತಿಸುಂದರಂ ।
ಸುಬುದ್ಧಂ ಶತ್ರುರ್ವದತಿ ನ ಹಿತಂ ಚ ಕದಾಚನ ॥ ೫೪ ॥

ಆಪಾತಪ್ರೀತಿಜನಕಂ ಪರಿಣಾಮಸುಖಾವಹಂ ।
ದಯಾಲುರ್ಧರ್ಮಶೀಲಶ್ಚ ಬೋಧಯತ್ಯೇವ ಬಾಂಧವಂ ॥ ೫೫ ॥

ಶ್ರುತಿಮಾತ್ರಾತ್ಸುಧಾತುಲ್ಯಂ ಸರ್ವಕಾಲೇ ಸುಖಾವಹಂ ।
ಸತ್ಯಸಾರಂ ಹಿತಕರಂ ವಚಸಾಂ ಶ್ರೇಷ್ಠಮೀಪ್ಸಿತಂ ॥ ೫೬ ॥

---

೫೩. ವಸಿಷ್ಠನು :—ಹಿಮವಂತನೇ, ಲೌಕಿಕವಾಕ್ಯ ಮತ್ತು ವೈದಿಕ ವಾಕ್ಯಗಳೆಂಬ ಮಾತು ಮೂರು ವಿಧವಾಗಿರುತ್ತದೆ. ಶಾಸ್ತ್ರವನ್ನು ಬಲ್ಲವನು ಶುದ್ಧವಾದ ಜ್ಞಾನದೃಷ್ಟಿಯಿಂದ ಸಕಲವನ್ನೂ ತಿಳಿದುಕೊಳ್ಳುತ್ತಾನೆ.

೫೪. ಶತ್ರುವಾದವನು ಪ್ರಕೃತದಲ್ಲಿ ಕಿವಿಗೆ ಇಂಪಾದ ಕೊನೆಯಲ್ಲಿ ಹಿತವನ್ನುಂಟುಮಾಡದ ಸುಳ್ಳುಮಾತನ್ನು ಆಡುತ್ತಾನೆ. ಅವನು ಯಾವಾಗಲೂ ಸತ್ಯವಾದ ಮತ್ತು ಹಿತವಾದ ಮಾತನ್ನಾಡುವುದಿಲ್ಲ.

೫೫. ದಯಾವಂತನೂ, ಧರ್ಮಶೀಲನೂ ಆದವನು ತನ್ನ ಬಂಧುವನ್ನು ಕುರಿತು ಸಾಮಾನ್ಯವಾಗಿ ಸಂತೋಷವನ್ನುಂಟುಮಾಡುವ, ಕೊನೆಯಲ್ಲಿ ಸೌಖ್ಯವನ್ನು ಕೊಡುವ ಮಾತನ್ನು ಹೇಳುತ್ತಾನೆ.

೫೬. ಕೇಳಿದೊಡನೆಯೇ ಯುಕ್ತವಾಗಿ ತೋರುವ ಎಲ್ಲ ಕಾಲಗಳಲ್ಲಿಯೂ ಸುಖವನ್ನುಂಟುಮಾಡುವ ಸತ್ಯದ ಸಾರವೂ, ಹಿತವೂ, ಇಷ್ಟವೂ ಆದ ಮಾತನ್ನು ಮತ್ತೆ ಕೆಲವರು ಹೇಳುತ್ತಾರೆ.

ಏವಂ ಚ ತ್ರಿವಿಧಂ ಶೈಲ ನೀತಿಶಾಸ್ತ್ರ ನಿರೂಪಿತಂ ।
ಕಥ್ಯತಾಂ ತ್ರಿಷು ಮಧ್ಯೇ ಕಿಂ ವದಾಮಿ ವಾಕ್ಯಮೀಪ್ಸಿತಂ ॥ ೫೭ ॥

ಬಾಹ್ಯಸಂಪದ್ವಿಹೀನಶ್ಚ ಶಂಕರಸ್ತ್ರಿದಶೇಶ್ವರಃ ।
ತತ್ತ್ವಜ್ಞಾನಸಮುದ್ರೇಷು ಸನ್ನಿಮಗ್ನೈಕಮಾನಸಃ ॥ ೫೮ ॥

ಆಪಾತಭ್ರಮಸಂಪತ್ತಿರ್ವಿದ್ಯುಚ್ಛ್ರೀರಿವ ನಾಶಿನೀ ।
ಸದಾನಂದಸ್ಯೇಶ್ವರಸ್ಯ ಸ್ವಾತ್ಮಾರಾಮಸ್ಯ ಕಾ ಸ್ಪೃಹಾ ॥ ೫೯ ॥

ಗೃಹೀ ದದಾತಿ ಸ್ವಸುತಾಂ ರಾಜ್ಯಸಂಪತ್ತಿಶಾಲಿನೇ ।
ಕನ್ಯಾಂ ವಿದ್ವೇಷಿಣೇ ದತ್ತ್ವಾ ಕನ್ಯಾಘಾತೀ ಭವೇತ್ಪಿತಾ ॥ ೬೦ ॥

ಕೋ ವದೇಚ್ಛಂಕರೋ ದುಃಖೀ ಕುಬೇರೋ ಯಸ್ಯ ಕಿಂಕರಃ ।
ಭ್ರೂಭಂಗಲೀಲಯಾ ಸೃಷ್ಟಿಂ ಸ್ರಷ್ಟುಂ ನಷ್ಟುಂ ಕ್ಷಮೋ ಹಿ ಯಃ ॥ ೬೧ ॥

---

೫೭. ಎಲೈ ಹಿಮವಂತನೇ, ಈ ರೀತಿಯಾಗಿ ನೀತಿಶಾಸ್ತ್ರದಲ್ಲಿ ನಿರೂಪಿತವಾದ ಮಾತು ಮೂರು ವಿಧವು. ಈ ಮೂರರಲ್ಲಿ ನಿನಗೆ ಇಷ್ಟವಾದ ಯಾವ ಮಾತನ್ನು ಹೇಳಲಿ ಹೇಳು.

೫೮. ಶಂಕರನು ಬಾಹ್ಯವಾದ ಐಶ್ವರ್ಯವಿಲ್ಲದವನು. ಆದರೂ ದೇವತೆಗಳಿಗೆಲ್ಲ ಪ್ರಭುವು. ಮತ್ತು ತತ್ತ್ವಜ್ಞಾನವೆಂಬ ಸಮುದ್ರದಲ್ಲಿ ಮುಳುಗಿದ ಮನಸ್ಸುಳ್ಳವನಾಗಿರುತ್ತಾನೆ.

೫೯. ನೋಡಿದೊಡನೆ ಭ್ರಾಂತಿಯನ್ನುಂಟುಮಾಡುವ ಐಶ್ವರ್ಯವು ಮಿಂಚಿನ ಬೆಳಕಿನಂತೆ ಚಂಚಲವಾದುದು. ಸರ್ವದಾ ಆನಂದ ಸ್ವರೂಪನಾದ ಈಶ್ವರನಿಗೆ ಯಾವ ಆಸೆಯಿದೆ ?

೬೦. ಗೃಹಸ್ಥನಾದವನು ತನ್ನ ಮಗಳನ್ನು ರಾಜ್ಯ ಮತ್ತು ಐಶ್ವರ್ಯಗಳುಳ್ಳ ವರನಿಗೆ ಕೊಡುತ್ತಾನೆ. ಯಾವ ತಂದೆಯು ಮಗಳನ್ನು ಶತ್ರುವಿಗೆ ಕೊಡುತ್ತಾನೋ ಅವನು ಕನ್ಯಾಘಾತಿಯಾಗುತ್ತಾನೆ.

೬೧. ಯಾವನಿಗೆ ಕುಬೇರನು ಸೇವಕನಾಗಿರುವನೋ, ಲೀಲೆಯಿಂದ ಹುಬ್ಬು ಗಂಟಿಡುವ ಮಾತ್ರದಿಂದ ಸೃಷ್ಟಿಮಾಡಲು ಮತ್ತು ಪ್ರಳಯವನ್ನು ಮಾಡಲು ಯಾವನು ಸಮರ್ಥನೋ ಅಂಥಾ ಶಂಕರನು ದುಃಖಿಯೆಂದು ಯಾವನು ಹೇಳಿಯಾನು.

ನಿರ್ಗುಣಃ ಪರಮಾತ್ಮಾ ಚ ಯ ಈಶಃ ಪ್ರಕೃತೇಃ ಪರಃ ।
ಸರ್ವೇಶಃ ಸ ಚ ನಿರ್ಲಿಪ್ತೋ ಲಿಪ್ತಶ್ಚ ಸರ್ವಜಂತುಷು || ೬೨ ||

ಸ ಏಕಃ ಸೃಷ್ಟಿಸಂಹಾರೇ ಸ ಸರ್ವಃ ಸೃಷ್ಟಿಕರ್ಮಣೀ ।
ನಿರಾಕಾರಶ್ಚ ಸಾಕಾರೋ ವಿಭುಃ ಸ್ವೇಚ್ಛಾಮಯಃ ಸ್ವಯಂ || ೬೩ ||

ಯ ಈಶಸ್ತ್ರಿವಿಧಾಂ ಮೂರ್ತಿಂ ವಿಧತ್ತೇ ಸೃಷ್ಟಿಕರ್ಮಣಿ ।
ಸೃಷ್ಟಿಸ್ಥಿತ್ಯಂತಜನನೀಂ ಬ್ರಹ್ಮವಿಷ್ಣುಶಿವಾಭಿಧಾಂ || ೬೪ ||

ಬ್ರಹ್ಮಾ ಚ ಬ್ರಹ್ಮಲೋಕಸ್ಥೋ ವಿಷ್ಣುಃ ಕ್ಷೀರೋದವಾಸಕೃತ್ ।
ಶಿವಃ ಕೈಲಾಸವಾಸೀ ಚ ಸರ್ವಾಃ ಕೃಷ್ಣವಿಭೂತಯಃ || ೬೫ ||

---

೬೨. ಯಾವ ಈಶ್ವರನು ನಿರ್ಗುಣನೂ, ಪರಮಾತ್ಮನೂ, ಪ್ರಕೃತಿಗಿಂತಲೂ ಶ್ರೇಷ್ಠನೂ ಆಗಿರುವನೋ ಅವನೇ, ಸಕಲಕ್ಕೂ ಯಜಮಾನನೂ, ನಿರ್ಲಿಪ್ತನೂ ಸಕಲ ಪ್ರಾಣಿಗಳಲ್ಲಿರುವವನೂ ಆಗಿರುವನು.

೬೩. ಸೃಷ್ಟಿ ಮತ್ತು ಪ್ರಳಯಗಳಿಗೆ ಅವನೊಬ್ಬನೇ ಕಾರಣನು. ಸೃಷ್ಟಿ ಕಾರ್ಯದಲ್ಲಿ ಅವನು ಸಕಲ ರೂಪನಾಗಿರುವನು. ಅವನು ಆಕಾರವಿಲ್ಲದವನೂ, ಆಕಾರವಿರುವವನೂ, ಸಕಲ ಪ್ರಪಂಚಕ್ಕೂ ಒಡೆಯನೂ, ತನ್ನ ಇಷ್ಟಬಂದಂತೆ ನಡೆವವನೂ ಆಗಿರುವನು.

೬೪. ಯಾವ ಈಶ್ವರನು ಸೃಷ್ಟಿಯ ಆದಿಯಲ್ಲಿ ಸೃಷ್ಟಿ, ಪಾಲನೆ, ಮತ್ತು ಪ್ರಳಯಗಳನ್ನು ಮಾಡಲು ಸಮರ್ಥಗಳಾದ ಬ್ರಹ್ಮ ವಿಷ್ಣು ಶಿವ ಎಂಬ ಹೆಸರುಗಳುಳ್ಳ ಮೂರು ಶರೀರವನ್ನು ಧರಿಸುತ್ತಾನೆ.

೬೫. ಬ್ರಹ್ಮನು ಬ್ರಹ್ಮಲೋಕದಲ್ಲಿಯೂ, ವಿಷ್ಣುವು ಕ್ಷೀರಸಮುದ್ರದಲ್ಲಿಯೂ, ಶಿವನು ಕೈಲಾಸದಲ್ಲಿಯೂ ವಾಸಮಾಡುತ್ತ ಎಲ್ಲರೂ ಅತ್ಯುತ್ತಮವಾದ ಐಶ್ವರ್ಯ ದಿಂದ ಕೂಡಿರುವವರಾಗಿರುತ್ತಾರೆ.

ಶ್ರೀಕೃಷ್ಣಶ್ಚ ದ್ವಿಧಾಭೂತೋ ದ್ವಿಭುಜಶ್ಚ ಚತುರ್ಭುಜಃ ।
ಚತುರ್ಭುಜಶ್ಚ ವೈಕುಂಠೇ ಗೋಲೋಕೇ ದ್ವಿಭುಜಃ ಸ್ವಯಂ ॥ ೬೬ ॥

ತಸ್ಯ ದೇವಸ್ಯ ತೇಂऽಶಾಶ್ಚ ಬ್ರಹ್ಮವಿಷ್ಣುಮಹೇಶ್ವರಾಃ ।
ಕೇಚಿದ್ದೇವಾಃ ಕಲಾಸ್ತಸ್ಯ ಕಲಾಂಶಾಶ್ಚೈವ ಕೇಚನ ॥ ೬೭ ॥

ಕೃಷ್ಣಃ ಸೃಷ್ಟ್ಯುನ್ಮುಖಶ್ಚಾಪಿ ಪ್ರಕೃತಿಂ ತತ್ರ ನಿರ್ಮಮೇ ।
ನಿರ್ಮಾಯ ತಾಂ ಚ ತದ್ಯೋನೌ ವೀರ್ಯಾಧಾನಂ ಚಕಾರ ಹ ॥ ೬೮ ॥

ತತೋ ಡಿಂಭಃ ಸಮುದ್ಭೂತಃ ತನ್ಮಧ್ಯೇ ಚ ಮಹಾವಿರಾಟ್ ।
ಮಹಾವಿಷ್ಣುಃ ಸ ವಿಜ್ಞೇಯೋ ಶ್ರೀಕೃಷ್ಣಷೋಡಶಾಂಶಕಃ ॥ ೬೯ ॥

ನಾಭಿಪದ್ಮೋದ್ಭವೋ ಬ್ರಹ್ಮಾ ತಸ್ಯೈವ ಜಲಶಾಯಿನಃ ।
ಭಾಲೋದ್ಭವಸ್ತಸ್ಯ ಸ್ರಷ್ಟುಃ ಶಂಕರಶ್ಚಂದ್ರಶೇಖರಃ ॥ ೭೦ ॥

---

೬೬. ಶ್ರೀಕೃಷ್ಣನು ಎರಡು ತೋಳುಗಳು ಮತ್ತು ನಾಲ್ಕು ತೋಳುಗಳುಳ್ಳ ಎರಡು ರೂಪುಗಳನ್ನು ಪಡೆದು ನಾಲ್ಕು ತೋಳುಗಳಿಂದ ವೈಕುಂಠದಲ್ಲಿಯೂ ಎರಡು ತೋಳುಗಳಿಂದ ಗೋಲೋಕದಲ್ಲಿಯೂ ಇರುತ್ತಾನೆ.

೬೭. ಆ ಬ್ರಹ್ಮ ವಿಷ್ಣು ಮಹೇಶ್ವರರು ಆ ದೇವನಾದ ಶಂಕರನ ಅಂಶ ಭೂತರು. ಕೆಲವು ದೇವರು ಅವನ ಒಂದು ಕಲಾಮಾತ್ರದಿಂದ ಹುಟ್ಟಿದವರು. ಮತ್ತೆ ಕೆಲವರು ಒಂದು ಕಲೆಯ ಒಂದು ಭಾಗದಿಂದ ಹುಟ್ಟಿದವರು.

೬೮. ಕೃಷ್ಣನು ಸೃಷ್ಟಿಕಾರ್ಯದಲ್ಲಿ ತೊಡಗಿದ್ದರೂ ಅಲ್ಲಿ ಪ್ರಕೃತಿಯನ್ನು ನಿರ್ಮಾಣಮಾಡಿದನು. ಆ ಪ್ರಕೃತಿಯ ಯೋನಿಯಲ್ಲಿ ವೀರ್ಯವನ್ನು ಬಿಟ್ಟನು.

೬೯. ಆಗ ಒಂದು ಚಿಕ್ಕ ಶಿಶುವು ಜನಿಸಿತು. ಅದರ ಮಧ್ಯದಲ್ಲಿ ಮಹಾ ವಿರಾಡ್ರೂಪನು ಹುಟ್ಟಿದನು. ಅವನು ಶ್ರೀಕೃಷ್ಣನ ಹದಿನಾರನೆಯ ಒಂದಂಶದಿಂದ ಹುಟ್ಟಿದ ಮಹಾವಿಷ್ಣುವು.

೭೦. ನೀರಿನ ಮಧ್ಯದಲ್ಲಿ ಮಲಗಿರುವ ಆ ವಿರಾಡ್ರೂಪನ ನಾಭಿಮಧ್ಯದಿಂದ ಬ್ರಹ್ಮನು ಹುಟ್ಟಿದನು. ಆ ಬ್ರಹ್ಮನ ಹಣೆಯಿಂದ ಚಂದ್ರನನ್ನು ತಲೆಯಲ್ಲಿ ಧರಿಸಿ ಕೊಂಡಿರುವ ಶಂಕರನು ಹುಟ್ಟಿದನು.

ಮಹಾವಿಷ್ಣೋರ್ವಾಮಪಾರ್ಶ್ವಾತ್ ಸಂಭೂತೋ ವಿಷ್ಣುರೇವ ಚ ।
ಸರ್ವೇ ಪ್ರಾಕೃತಿಕಾಃ ಶೈಲ ಬ್ರಹ್ಮವಿಷ್ಣು ಶಿವಾದಯಃ ॥ ೭೧ ॥

ಧತ್ತೇ ಚತುರ್ವಿಧಾಂ ಮೂರ್ತಿಂ ಪ್ರಕೃತಿಃ ಕೃಷ್ಣಸಂಭವಾ ।
ಅಂಶೇನ ಲೀಲಯಾ ಸೃಷ್ಟ್ಯೈ ಕಲಯಾ ಬಹುಧಾ ತಥಾ ॥ ೭೨ ॥

ಕೃಷ್ಣವಾಮಾಂಗಸಂಭೂತಾ ರಾಧಾ ರಾಸೇಶ್ವರೀ ಸ್ವಯಂ ।
ಮುಖೋದ್ಭವಾ ಸ್ವಯಂ ವಾಣೀ ರಾಗಾಧಿಷ್ಠಾತೃದೇವತಾ ॥ ೭೩ ॥

ವಕ್ಷಃಸ್ಥಲೋದ್ಭವಾ ಲಕ್ಷ್ಮೀಃ ಸರ್ವಸಂಪತ್ಸ್ವರೂಪಿಣೀ ।
ಶಿವಾ ತೇಜಃಸು ದೇವಾನಾಮಾವಿರ್ಭಾವಂ ಚಕಾರ ಸಾ ॥ ೭೪ ॥

ನಿಹತ್ಯ ದಾನವಾನ್ ಸರ್ವಾನ್ ದೇವೇಭ್ಯಶ್ಚ ಶ್ರಿಯಂ ದದೌ ।
ಪ್ರಾಪ್ಯ ಕಲ್ಪಾಂತರೇ ಜನ್ಮ ಜಠರೇ ದಕ್ಷಯೋಷಿತಃ ॥ ೭೫ ॥

---

೭೧. ವಿಷ್ಣುವೂ ಕೂಡ ಮಹಾವಿಷ್ಣುವಿನ ಎಡಭಾಗದಿಂದ ಹುಟ್ಟಿದನು. ಎಲೈ ಹಿಮವಂತನೇ, ಬ್ರಹ್ಮ ವಿಷ್ಣು ಈಶ್ವರನೇ ಮೊದಲಾದವರುಗಳು ಎಲ್ಲರೂ ಕೂಡ ಆ ಪ್ರಕೃತಿಯಿಂದ ಹುಟ್ಟಿದವರು.

೭೨. ಕೃಷ್ಣನಿಂದ ಹುಟ್ಟಿದ ಪ್ರಕೃತಿಯು ಸೃಷ್ಟಿಮಾಡುವುದಕ್ಕೋಸ್ಕರ ತನ್ನ ಅಂಶದಿಂದ, ತನ್ನ ಲೀಲೆಯಿಂದ, ತನ್ನ ಕಲೆಯಿಂದ ಈ ಪ್ರಕಾರವಾಗಿ ತಾನು ಬಹುವಿಧವಾಗಿ ನಾಲ್ಕು ವಿಧವಾದ ಶರೀರವನ್ನು ಧರಿಸುತ್ತಾಳೆ.

೭೩. ಕೃಷ್ಣನ ಎಡಪಾರ್ಶ್ವದಿಂದ ಹುಟ್ಟಿದವಳಾದ ರಾಧೆಯು ತಾನು ರಾಸಮಂಡಲಕ್ಕೆ ಸ್ವಾಮಿನಿಯಾದಳು. ಕೃಷ್ಣನ ಮುಖದಿಂದ ಹುಟ್ಟಿದ ಸರಸ್ವತಿಯು ರಾಗಾಭಿಮಾನಿದೇವತೆಯಾದಳು.

೭೪–೭೬. ಕೃಷ್ಣನ ಎದೆಯಿಂದ ಹುಟ್ಟಿದ ಲಕ್ಷ್ಮಿಯು ಸಕಲೈಶ್ವರ್ಯ ರೂಪಿಣಿಯಾದಳು. ಸಕಲ ದೇವತೆಗಳ ತೇಜಸ್ಸುಗಳಲ್ಲಿ ಶಿವೆಯು ಮೈದೋರಿದಳು. ಮತ್ತು ಸಕಲ ರಾಕ್ಷಸರನ್ನೂ ಕೊಂದು ದೇವತೆಗಳಿಗೆ ತಮ್ಮ ಐಶ್ವರ್ಯವನ್ನು ತಂದು ಕೊಟ್ಟಳು. ಬೇರೆಯ ಕಲ್ಪದಲ್ಲಿ ದಕ್ಷಬ್ರಹ್ಮನ ಹೆಂಡತಿಯಲ್ಲಿ ಸತಿಯೆಂಬ ಹೆಸರಿನಿಂದ

ನಾಮ್ನಾ ಸತೀ ಶಿವಂ ಪ್ರಾಪ್ಯ ದಕ್ಷಸ್ತಸ್ಮೈ ದದೌ ಚ ತಾಂ ।
ಯೋಗೇನ ದೇಹಂ ತತ್ಯಾಜ ಶ್ರುತ್ವಾ ಸಾ ಭರ್ತೃನಿಂದನಂ || ೭೬ ||

ಪಿತೄಣಾಂ ಮಾನಸೀ ಕನ್ಯಾ ಮೇನಕಾ ತವ ಗೇಹಿನೀ ।
ಲಲಾಭ ತಸ್ಯಾ ಜಠರೇ ಜನ್ಮ ಸಾ ಜಗದಂಬಿಕಾ || ೭೭ ||

ಶಿವಾ ಶಿವಸ್ಯ ಪತ್ನೀಯಂ ಶೈಲ ಜನ್ಮನಿ ಜನ್ಮನಿ ।
ಕಲ್ಪೇ ಕಲ್ಪೇ ಬುದ್ಧಿರೂಪಾ ಜ್ಞಾನಿನಾಂ ಜನನೀ ಪರಾ || ೭೮ ||

ಜಾತಿಸ್ಮರಾ ಚ ಸರ್ವಜ್ಞಾ ಸಿದ್ಧಿದಾ ಸಿದ್ಧಿರೂಪಿಣೀ ।
ಅಸ್ಯಾ ಅಸ್ಥಿ ಚಿತಾಭಸ್ಮ ಭಕ್ತ್ಯಾ ಧತ್ತೇ ಶಿವಃ ಸ್ವಯಂ || ೭೯ ||

ದದಾಸಿ ಸ್ವೇಚ್ಛಯಾ ಕನ್ಯಾಂ ದೇಹಿ ಭದ್ರ ಶಿವಾಯ ಚ ।
ಅಥ ವಾ ಸಾ ಸ್ವಯಂ ಕಾಂತಸ್ಥಾನಂ ಯಾಸ್ಯತಿ ದ್ರಕ್ಷ್ಯಸಿ || ೮೦ ||

ಹುಟ್ಟಿ ದಕ್ಷಬ್ರಹ್ಮನಿಂದ ಶಿವನಿಗೆ ಕೊಡಲ್ಪಟ್ಟವಳಾಗಿ ಈಶ್ವರನನ್ನು ಹೊಂದಿದ್ದಳು. ಆಗ ಅವಳು ತನ್ನ ಪತಿಯ ನಿಂದೆಯನ್ನು ಕೇಳಿ ಸಹಿಸಲಾರದೆ ಯೋಗದಿಂದ ತನ್ನ ಶರೀರವನ್ನು ಬಿಟ್ಟಳು.

೭೭. ನಿನ್ನ ಪತ್ನಿಯಾದ ಮೇನಕೆಯು ಪಿತೃದೇವತೆಗಳ ಮನಸ್ಸಿನಿಂದ ಹುಟ್ಟಿದವಳು. ಅವಳ ಹೊಟ್ಟೆಯಲ್ಲಿ ಜಗನ್ಮಾತೆಯು ಅಲಂಕಾರಪ್ರಾಯಳಾಗಿ ಜನಿಸಿರುವಳು.

೭೮. ಓ ಹಿಮವಂತನೇ. ಈ ಶಿವೆಯು ಪ್ರತಿ ಜನ್ಮದಲ್ಲಿಯೂ ಈಶ್ವರನ ಪತ್ನಿಯಾಗಿರುವಳು. ಪ್ರತಿ ಕಲ್ಪದಲ್ಲಿಯೂ ಜ್ಞಾನಿಗಳಿಗೆ ಬುದ್ಧಿಸ್ವರೂಪಳೂ, ಶ್ರೇಷ್ಠಳಾದ ತಾಯಿಯೂ ಆಗಿರುವಳು.

೭೯. ಈ ಶಿವೆಯು ಜನ್ಮಾಂತರ ಜ್ಞಾನವುಳ್ಳವಳೂ, ಸರ್ವಜ್ಞಳೂ, ಸಿದ್ಧಿಸ್ವರೂಪಳೂ, ಸಿದ್ಧಿಯನ್ನು ಕೊಡುವವಳೂ ಆಗಿರುವಳು. ಇವಳ ಅಸ್ಥಿಯ ಚಿತಾಭಸ್ಮವನ್ನು ಈಶ್ವರನು ತಾನು ಭಕ್ತಿಯಿಂದ ಧರಿಸುತ್ತಾನೆ.

೮೦. ಎಲೈ ಸಾಧುವೇ, ನೀನು ನಿನ್ನ ಇಷ್ಟದಿಂದಲೇ ನಿನ್ನ ಮಗಳನ್ನು ಈಶ್ವರನಿಗೆ ಕೊಡುವುದಾದರೆ ಕೊಡು; ಇಲ್ಲವಾದರೆ ಅವಳು ತಾನಾಗಿಯೇ ತನ್ನ ಕಾಂತನೆಡೆಗೆ ಹೋಗುವುದನ್ನು ನೀನೇ ನೋಡುವಿ.

ಪ್ರಾಕ್ತನಾದ್ಯಸ್ಯ ಯಾ ಕಾಂತಾ ಸಾ ತಂ ಪ್ರಾಪ್ನೋತಿ ವಲ್ಲಭಂ |
ಪ್ರಜಾಪತೇರ್ನಿರ್ಬಂಧಂ ಚ ನ ಕೋಽಪಿ ಖಂಡಿತುಂ ಕ್ಷಮಃ || ೮೧ ||

ವಿವಾಹೇ ನೋತ್ಸುಕಃ ಶಂಭುಃ ಸ್ವಾತ್ಮಾರಾಮಶ್ಚ ತತ್ತ್ವವಿತ್ |
ತುಷ್ಟುವುಸ್ತಂ ಸುರಾಃ ಸರ್ವೇ ತಾರಕಾಖ್ಯೇನ ಪೀಡಿತಾಃ || ೮೨ ||

ದೇವಾನಾಂ ಪೀಡನಂ ದೃಷ್ಟ್ವಾ ಬ್ರಹ್ಮಣಾ ಪ್ರಾರ್ಥಿತೋ ವಿಭುಃ |
ಕೃಪಯಾ ಸ್ವೀ ಚಕಾರಾಽಽಶು ಕೃಪಾಲುರ್ದೇವಸಂಸದಿ || ೮೩ ||

ಕೃತ್ವಾ ಪ್ರತಿಜ್ಞಾಂ ಯೋಗೀಂದ್ರೋ ದೃಷ್ಟ್ವಾ ಕ್ಲೇಶಮಸಂಖ್ಯಕಂ |
ದುಹಿತುಸ್ತೇ ತಪಃಸ್ಥಾನಮಾಜಗಾಮ ದ್ವಿಜಾತ್ಮಕಃ || ೮೪ ||

ತಾಮಾಶ್ವಾಸ್ಯ ವರಂ ದತ್ತ್ವಾ ಜಗಾಮ ನಿಜಮಂದಿರಂ |
ತಚ್ಛ್ರುತ್ವೈವಾಽಽಯಯುಃ ಸರ್ವೇ ಸುರಾಃ ಶಕ್ರಾದಯೋ ಮುದಾ ||

---

೮೧. ಪೂರ್ವಜನ್ಮದಲ್ಲಿ ಯಾವನಿಗೆ ಯಾವಳು ಪತ್ನಿಯೋ ಅವಳು ಆ ವಲ್ಲಭನನ್ನು ಪಡೆದೇ ಪಡೆಯುವಳು ಬ್ರಹ್ಮನ ನಿಯಮವನ್ನು ಮುರಿಯಲು ಯಾರೂ ಸಮರ್ಥರಲ್ಲ.

೮೨. ಶಂಭುವು ತನ್ನಲ್ಲಿ ತಾನೇ ವಿಹರಿಸುವವನೂ, ತತ್ತ್ವವನ್ನು ಬಲ್ಲವನೂ ಆಗಿರುವನು. ಅವನು ಮದುವೆಯಲ್ಲಿ ಆಶೆಯಿಲ್ಲದವನಾಗಿರುವನು. ತಾರಕನೆಂಬ ರಾಕ್ಷಸನಿಂದ ಪೀಡಿತರಾದ ದೇವತೆಗಳು ಆ ಶಂಕರನನ್ನು ಸ್ತೋತ್ರಮಾಡಿದರು.

೮೩. ದೇವತೆಗಳಿಗುಂಟಾಗಿರುವ ಪೀಡೆಯನ್ನು ನೋಡಿ ಬ್ರಹ್ಮನು ಪ್ರಾರ್ಥನೆಮಾಡಲು ದಯೆಯಿಂದ ದೇವತೆಗಳೆದುರಿನಲ್ಲಿಯೇ ಶಂಕರನು ನಿನ್ನ ಮಗಳನ್ನು ಸ್ವೀಕರಿಸಿರುವನು.

೮೪. ಯೋಗೀಂದ್ರನಾದ ಆ ಶಿವನು ಪ್ರತಿಜ್ಞೆಮಾಡಿ ಬಹುಕಷ್ಟದಿಂದ ಬ್ರಾಹ್ಮಣವೇಷವನ್ನು ಧರಿಸಿ ನಿನ್ನ ಮಗಳು ತಪಸ್ಸನ್ನು ಮಾಡುತ್ತಿರುವ ಸ್ಥಳಕ್ಕೆ ಬಂದನು

೮೫ ಅಲ್ಲಿ ಆ ಪಾರ್ವತಿಯನ್ನು ಸಮಾಧಾನಮಾಡಿ ವರವನ್ನು ಕೊಟ್ಟು ತನ್ನ ಸ್ಥಳಕ್ಕೆ ಬಂದನು. ಆ ವರ್ತಮಾನವನ್ನು ಕೇಳಿ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಅಲ್ಲಿಗೆ ಬಂದರು.

ನಾರಾಯಣಶ್ಚ ಭಗವಾನ್ಬ್ರಹ್ಮಾ ಧರ್ಮಶ್ಚ ಸಾಂಪ್ರತಂ ।
ಋಷಯೋ ಮುನಯಃ ಸರ್ವೇ ಗಂಧರ್ವಾ ಯಕ್ಷರಾಕ್ಷಸಾಃ ॥ ೮೬ ॥

ತತ್ರ ಸರ್ವೇ ಮುದಾ ಯುಕ್ತೈಃ ಸಮಾಲೋಚನಕರ್ತೃಭಿಃ ।
ಪ್ರಸ್ಥಾಪಿತೌ ವಯಂ ಶೀಘ್ರಮನ್ಯಥಾ ಸಾ ಅರುಂಧತೀ ॥ ೮೭ ॥

ತವ ಪ್ರಬೋಧನೇ ಪ್ರೀತಿರ್ವರ್ಧತೇ ಮಹತೀ ಸದಾ ।
ಸಂಪ್ರಾಪ್ತಂ ಶುಭಕಾರ್ಯಂ ಚ ಸರ್ವಕಾಲ ಸುಖಾವಹಂ ॥ ೮೮ ॥

ಶಿವಾಂ ಶಿವಾಯ ಶೈಲೇಂದ್ರ ಸ್ವೇಚ್ಛಯಾ ಚೇನ್ನ ದಾಸ್ಯಸಿ ।
ಭವಿತಾ ವಾ ವಿವಾಹಶ್ಚ ಭವಿತವ್ಯಬಲೇನ ಚ ॥ ೮೯ ॥

ಆಗಮಿಷ್ಯತಿ ದೇವೋ ಯೋ ನಾರಾಯಣ ಸಹಾಯವಾನ್ ।
ರತ್ನಸಾರರಥೇ ಕೃತ್ವಾ ದೇವಾನಾಂ ಪ್ರವರಂ ವರಂ ॥ ೯೦ ॥

ಯೋಗೀಂದ್ರಾಣಾಂ ವರೇಣ್ಯಂ ತಂ ಜ್ಞಾನಿನಾಂ ಚ ಗುರೋರ್ಗುರುಂ ।
ಆದಿಮಧ್ಯಾಂತರಹಿತಮವಿಕಾರಮಜಂ ಪರಂ ॥ ೯೧ ॥

೮೬–೮೭. ಪೂಜ್ಯನಾದ ಬ್ರಹ್ಮನೂ, ನಾರಾಯಣನೂ, ಧರ್ಮನೂ, ಋಷಿಗಳೂ, ಯೋಗಿಗಳೂ, ಗಂಧರ್ವರೂ, ರಾಕ್ಷಸರೂ ಎಲ್ಲರೂ ಸೇರಿ ಸಮಾಲೋಚನೆಮಾಡಿ ನಮ್ಮನ್ನೂ, ಈ ಪೂಜ್ಯಳಾದ ಅರುಂಧತಿಯನ್ನೂ ಕಳುಹಿಸಿರುವರು.

೮೮. ನಿನಗೆ ಈ ವಿಚಾರವನ್ನು ತಿಳಿಸಲು ನಮಗೆ ಯಾವಾಗಲೂ ಸಂತೋಷವಾಗುತ್ತದೆ. ಯಾವಾಗಲೂ ಸುಖವನ್ನುಂಟುಮಾಡುವ ಶುಭಕಾರ್ಯವು ಸಮೀಪಗತವಾಗಿದೆ.

೮೯. ಎಲೈ ಹಿಮವಂತನೇ, ನೀನು ಮನಃಪೂರ್ವಕವಾಗಿ ನಿನ್ನ ಮಗಳನ್ನು ಶಿವನಿಗೆ ಕೊಡದಿದ್ದ ಪಕ್ಷದಲ್ಲಿ ಭವಿಷ್ಯದ ಬಲದಿಂದ ವಿವಾಹವು ನೆರವೇರುವುದು.

೯೦–೯೧. ನಾರಾಯಣನ ಸಹಾಯಹೊಂದಿದ ಆ ದೇವನು ಇಲ್ಲಿಗೆ ಬರುವನು. ಆ ದೇವದೇವನೂ, ಉತ್ತಮನೂ, ಯೋಗಿಶ್ರೇಷ್ಠನೂ, ಜ್ಞಾನಿಗಳಲ್ಲಿ ಉತ್ತಮನೂ, ಗುರುವಿಗೆ ಗುರುವೂ ಆದಿ ಮಧ್ಯಾಂತಗಳಿಲ್ಲದವನೂ, ವಿಕಾರರಹಿತನೂ, ಅಜನೂ, ಶ್ರೇಷ್ಠನೂ ಆದ ಆ ಪರಮಾತ್ಮನನ್ನು ನಾರಾಯಣನು ಶ್ರೇಷ್ಠವಾದ ರತ್ನಖಚಿತ ರಥದಲ್ಲಿ ಕುಳ್ಳಿರಿಸಿಕೊಂಡು ಕರೆತರುತ್ತಾನೆ.

ವರಂ ದದೌ ಶಿವಾಯೈ ಸ ಶಿವಶ್ಚ ತಪಸಃ ಸ್ಥಲೇ ।
ನ ಹೀಶ್ವರಪ್ರತಿಜ್ಞಾತಂ ದುರ್ಲಭಂ ವಿಫಲಂ ಭವೇತ್ ॥ ೯೨ ॥

ಬ್ರಹ್ಮಾದಿಸ್ತಂಬಪರ್ಯಂತಂ ಸರ್ವಂ ನಶ್ವರಮಸ್ಥಿರಂ ।
ಅಹೋ ಪ್ರತಿಜ್ಞಾ ದುರ್ಲಂಘ್ಯಾ ಸಾಧೂನಾಮವಿನಾಶಿನೀ ॥ ೯೩ ॥

ಏಕೋ ಮಹೇಂದ್ರಃ ಶೈಲಾನಾಂ ಪಕ್ಷಾಂಶ್ಚಿಚ್ಛೇದ ಲೀಲಯಾ ।
ಪವನೋ ಲೀಲಯಾ ಮೇರೋಃ ಶೃಂಗಭಂಗಂ ಚಕಾರ ಚ ॥ ೯೪ ॥

ಕೇ ವಾ ಶೈಲೇಷು ಯೋದ್ಧಾರಃ ಸುರೈಃ ಸಹ ಹಿಮಾಲಯ ।
ಪತಿಷ್ಯಂತಿ ಸಮುದ್ರೇಷು ಪವನೈಃ ಪ್ರೇರಿತಾಃ ಕ್ಷಣಾತ್ ॥ ೯೫ ॥

ಏಕಾರ್ಥೇ ಯದಿ ಶೈಲೇಂದ್ರ ಸರ್ವಸಂಪದ್ವಿನಶ್ಯತಿ ।
ಸರ್ವಾನ್ ರಕ್ಷತಿ ತದ್ದತ್ವಾ ವಿನಾ ಚ ಶರಣಾಗತಂ ॥ ೯೬ ॥

---

೯೨. ಆ ಶಿವನು ಪಾರ್ವತಿಯು ತಪಸ್ಸನ್ನು ಮಾಡುವ ಸ್ಥಳದಲ್ಲಿ ಅವಳಿಗೆ ವರವನ್ನು ಕೊಟ್ಟಿರುವನು. ಪ್ರತಿಜ್ಞೆಮಾಡಿದುದು ಹೊಂದಲಸಾಧ್ಯವಾದುದಾದರೂ ಕೂಡ ವ್ಯರ್ಥವಾಗತಕ್ಕುದಲ್ಲ.

೯೩. ಬ್ರಹ್ಮನನ್ನು ಮೊದಲು ಮಾಡಿಕೊಂಡು ತೃಣಪರ್ಯಂತವಾಗಿ ಸಮಸ್ತವೂ ನಾಶವಾಗತಕ್ಕದ್ದು. ಸತ್ಪುರುಷರು ಮಾಡಿದ ಪ್ರತಿಜ್ಞೆಯು ಸ್ಥಿರವಾದುದು ಮತ್ತು ನಾಶವಿಲ್ಲದುದು. ಇದು ಬಹಳ ಆಶ್ಚರ್ಯವು.

೯೪. ಒಬ್ಬನೇ ಮಹೇಂದ್ರನು ಪರ್ವತಗಳ ರೆಕ್ಕೆಗಳನ್ನು ವಿಲಾಸದಿಂದ ಕತ್ತರಿಸಿದನು. ವಾಯುವೂ ಕೂಡ ಆಯಾಸವಿಲ್ಲದ ರೀತಿಯಲ್ಲಿ ಮೇರುಪರ್ವತದ ಶಿಖರಗಳನ್ನು ಕತ್ತರಿಸಿದನು.

೯೫. ಎಲೈ ಹಿಮವಂತನೇ, ಪರ್ವತಗಳ ಮಧ್ಯೆ ಯಾರು ದೇವತೆಗಳೊಡನೆ ಯುದ್ಧವನ್ನು ಮಾಡುವವರಿರುತ್ತಾರೆ. ಗಾಳಿಯಿಂದ ಪ್ರೇರಿತವಾದ ಪರ್ವತಗಳೆಲ್ಲವೂ ಒಂದು ಕ್ಷಣದಲ್ಲಿ ಸಮುದ್ರದಲ್ಲಿ ಬೀಳುವುವು.

೯೬. ಎಲೈ ಪರ್ವತರಾಜನೇ, ಒಬ್ಬನಿಗೋಸ್ಕರ ಸಕಲ ಸಂಪತ್ತುಗಳೂ ನಾಶವಾಗುವುದಾದರೆ ಶರಣಾಗತನನ್ನು ಬಿಟ್ಟು ಉಳಿದುದೆಲ್ಲವನ್ನೂ ಕೊಟ್ಟು ಅವನನ್ನು ರಕ್ಷಣೆಮಾಡುತ್ತಾರೆ.

ಶರಣಾಗತರಕ್ಷಾರ್ಥಂ ಪ್ರಾಣಾಂಶ್ಚ ದಾತುಮರ್ಹತಿ ।
ಪುತ್ರದಾರಧನಂ ಸರ್ವಾನಿತಿ ನೀತಿವಿದೋ ವಿದುಃ ॥ ೯೭ ॥

ದತ್ತ್ವಾ ವಿಪ್ರಾಯ ಸ್ವಸುತಾಮನರಣ್ಯೋ ನೃಪೇಶ್ವರಃ ।
ಬ್ರಹ್ಮಶಾಪಾದ್ವಿಮುಕ್ತಶ್ಚ ರರಕ್ಷ ಸರ್ವಸಂಪದಂ ॥ ೯೮ ॥

ತಮಾಶು ಬೋಧಯಾಮಾಸುರ್ನೀತಿಶಾಸ್ತ್ರವಿದೋ ಜನಾಃ ।
ಬ್ರಹ್ಮಶಾಪನಿಮಗ್ನಂ ಚ ಬ್ರಹ್ಮಣ್ಯಮತಿಕಾತರಂ ॥ ೯೯ ॥

ತ್ವಮೇವ ಶೈಲರಾಜೇಂದ್ರ ಸುತಾಂ ದತ್ತ್ವಾ ಶಿವಾಯ ಚ ।
ರಕ್ಷ ಸರ್ವಾನ್ ಬಂಧುವರ್ಗಾನ್ ವಶೇ ಕುರು ಸುರಾನಪಿ ॥ ೧೦೦ ॥

ವಸಿಷ್ಠಸ್ಯ ವಚಃ ಶ್ರುತ್ವಾ ಪ್ರಹಸ್ಯ ಪರ್ವತೇಶ್ವರಃ ।
ಪಪ್ರಚ್ಛ ನೃಪವೃತ್ತಾಂತಂ ಹೃದಯೇನ ವಿದೂಯತಾ ॥ ೧೦೧ ॥

---

೯೭. ಶರಣು ಬಂದವನನ್ನು ಕಾಪಾಡುವುದಕ್ಕೋಸ್ಕರ ಪ್ರಾಣಗಳನ್ನೂ ಮಕ್ಕಳನ್ನೂ, ಪತ್ನಿಯನ್ನೂ, ಧನವನ್ನೂ, ಎಲ್ಲವನ್ನೂ ಕೊಡಬಹುದೆಂದು ನೀತಿಯನ್ನು ಬಲ್ಲವರು ತಿಳಿದಿರುವರು.

೯೮. ಅನರಣ್ಯನೆಂಬ ರಾಜನು ತನ್ನ ಮಗಳನ್ನು ಬ್ರಾಹ್ಮಣನಿಗೆ ದಾನಮಾಡಿ ಬ್ರಹ್ಮಶಾಪದಿಂದ ಬಿಡುಗಡೆ ಹೊಂದಿದನು ಮತ್ತು ತನ್ನ ಸಕಲ ಸಂಪತ್ತುಗಳನ್ನೂ ಉಳಿಸಿಕೊಂಡನು.

೯೯. ಬ್ರಹ್ಮಶಾಪದಲ್ಲಿ ಮುಳುಗಿರುವ ಆ ಅನರಣ್ಯರಾಜನಿಗೆ ನೀತಿಶಾಸ್ತ್ರದಲ್ಲಿ ನಿಪುಣರಾದ ಬಹುಜನರು ಬೇಗನೆ ಹೋಗಿ ಉಪದೇಶಮಾಡಿದರು.

೧೦೦. ಎಲೈ ಪರ್ವತ ಸಾರ್ವಭೌಮನೇ, ನೀನಾಗಿಯೇ ನಿನ್ನ ಮಗಳನ್ನು ಶಿವನಿಗೆ ಕೊಟ್ಟು ನಿನ್ನ ಸಕಲ ಬಂಧುಗಳನ್ನೂ ಕಾಪಾಡಿಕೋ ಮತ್ತು ಸಕಲ ದೇವತೆಗಳೂ ನಿನ್ನ ಅಧೀನದಲ್ಲಿರುವಂತೆ ಮಾಡಿಕೋ.

೧೦೧. ಹಿಮವಂತನು ವಸಿಷ್ಠಮುನಿಯ ಮಾತನ್ನು ಕೇಳಿ ಸ್ವಲ್ಪ ನಕ್ಕು ವ್ಯಥೆಯಿಂದ ತುಂಬಿದ ಮನಸ್ಸುಳ್ಳವನಾಗಿ ಅನರಣ್ಯರಾಜನ ಕಥೆಯನ್ನು ಕುರಿತು ಪ್ರಶ್ನೆಮಾಡಿದನು.

|| ಹಿಮಾಲಯ ಉವಾಚ ||

ಕಸ್ಯ ವಂಶೋದ್ಭವೋ ಬ್ರಹ್ಮನ್ನನರಣ್ಯೋ ನೃಪೇಶ್ವರಃ ।
ಸುತಾಂ ದತ್ತ್ವಾ ಸ ಚ ಕಥಮರಕ್ಷತ್ಸರ್ವಸಂಪದಂ || ೧೦೨ ||

|| ವಸಿಷ್ಠ ಉವಾಚ ||

ಮನುವಂಶೋದ್ಭವೋ ರಾಜಾ ಸೋಽನರಣ್ಯೋ ನೃಪೇಶ್ವರಃ ।
ಚಿರಂಜೀವೀ ಧರ್ಮಶೀಲೋ ವೈಷ್ಣವೋ ವಿಜಿತೇಂದ್ರಿಯಃ || ೧೦೩ ||

ಸ್ವಾಯಂಭುವೋ ಮನುಃ ಪೂರ್ವಂ ಬ್ರಹ್ಮಪುತ್ರೋಽತಿಧಾರ್ಮಿಕಃ ।
ರಾಜ್ಯಂ ಚಕಾರ ಧರ್ಮೇಣ ಯುಗಾನಾಮೇಕಸಪ್ತತಿಂ || ೧೦೪ ||

ತತೋ ಜಗಾಮ ವೈಕುಂಠಂ ಸಹಿತಃ ಶತರೂಪಯಾ ।
ಸಂಪ್ರಾಪ್ಯ ದಾಸ್ಯಂ ಸಾನ್ನಿಧ್ಯಂ ಹರೇರ್ದಾಸೋ ಬಭೂವ ಹ || ೧೦೫ ||

ಮನುರ್ಬಭೂವ ತತ್ಪಶ್ಚಾತ್ ಸ್ವಯಂ ಸ್ವಾರೋಚಿಷೋ ಮಹಾನ್ ।
ಸ್ವಾರೋಚಿಷೇ ಗತೇ ಶೈಲ ಬಭೂವ ಮನುರುತ್ತಮಃ || ೧೦೬ ||

---

೧೦೨ ಹಿಮಾಲಯನು :—ಎಲೈ ಬ್ರಾಹ್ಮಣನೇ, ಅನರಣ್ಯನೆಂಬ ರಾಜಶ್ರೇಷ್ಠನು ಯಾವ ವಂಶದಲ್ಲಿ ಹುಟ್ಟಿದನು, ಅವನು ಯಾವ ರೀತಿಯಾಗಿ ಮಗಳನ್ನು ದಾನಮಾಡಿ ತನ್ನ ಸಕಲೈಶ್ವರ್ಯಗಳನ್ನೂ ಕಾಪಾಡಿಕೊಂಡನು ?

೧೦೩. ವಸಿಷ್ಠನು :– ಆ ಅನರಣ್ಯನೆಂಬ ರಾಜೋತ್ತಮನು ಮನುವಂಶದಲ್ಲಿ ಹುಟ್ಟಿದವನು. ಅವನು ಚಿರಂಜೀವಿಯೂ, ಧರ್ಮಪರನೂ, ವಿಷ್ಣುಭಕ್ತನೂ, ಜಿತೇಂದ್ರಿಯನೂ ಆಗಿದ್ದನು.

೧೦೪. ಹಿಂದೆ ಬ್ರಹ್ಮನ ಮಗನಾದ ಸ್ವಾಯಂಭುವನು ಅತ್ಯಂತ ಧರ್ಮಪರನಾಗಿ ಎಪ್ಪತ್ತೊಂದು ಯುಗಗಳವರೆಗೆ ರಾಜ್ಯವನ್ನಾಳುತ್ತಿದ್ದನು.

೧೦೫. ಅನಂತರ ಅವನು ಶತರೂಪಳೆಂಬ ತನ್ನ ಪತ್ನಿಯೊಡನೆ ವೈಕುಂಠಕ್ಕೆ ಹೋದನು. ಅಲ್ಲಿ ಸೇವಕರ ಸ್ಥಾನವನ್ನು ಪಡೆದು ಹರಿದಾಸನಾದನು.

೧೦೬. ಅವನಾದ ನಂತರ ಜ್ಞಾನಿಯಾದ ಸ್ವಾರೋಚಿಷನು ಮನುವಾದನು. ಎಲೈ ಹಿಮವಂತನೇ, ಆ ಸ್ವಾರೋಚಿಷನು ಆದನಂತರ ಉತ್ತಮನು ಮನುವಾದನು.

ಉತ್ತಮೋ ನಿರ್ಗತೇ ಧರ್ಮಿ ತಾಮಸೋ ಮನುರೇವ ಚ ।
ತತೋ ಮನುರ್ಬಭೂವಾತ್ರ ರೈವತೋ ಜ್ಞಾನಿನಾಂ ವರಃ ॥ ೧೦೭ ॥

ಚಾಕ್ಷುಷಶ್ಚ ತತೋ ಜ್ಞೇಯಃ ಶ್ರಾದ್ಧದೇವಶ್ಚ ಸಪ್ತಮಃ ।
ಸಾವರ್ಣೀರಷ್ಟಮೋ ಜ್ಞೇಯಃ ಶ್ರೀಸೂರ್ಯತನಯೋ ಮಹಾನ್ ॥೧೦೮॥

ಚೈತ್ರವಂಶೋದ್ಭವೋ ರಾಜಾ ಪುರಾऽऽಸೀತ್ ಸುರಥೋ ಭುವಿ ।
ನವಮೋ ದಕ್ಷಸಾವರ್ಣಿರ್ಬ್ರಹ್ಮಸಾವರ್ಣಿಕೋ ದಶ ॥ ೧೦೯ ॥

ಏಕಾದಶೋ ಮನುಶ್ರೇಷ್ಠೋ ಧರ್ಮಸಾವರ್ಣಿರುಚ್ಯತೇ ।
ತತಶ್ಚ ರುದ್ರಸಾವರ್ಣಿರ್ವಿಷ್ಣುಭಕ್ತೋ ಜಿತೇಂದ್ರಿಯಃ ॥ ೧೧೦ ॥

ತತ್ಪರೋ ದೇವಸಾವರ್ಣಿರಿಂದ್ರಸಾವರ್ಣಿಕಸ್ತತಃ ।
ಇತ್ಯೇವಂ ಕಥಿತಾ ಬಂಧೋ ಮನವಶ್ಚ ಚತುರ್ದಶ ॥ ೧೧೧ ॥

---

೧೦೭. ಉತ್ತಮನು ಆದನಂತರ ಧರ್ಮಪರನಾದ ತಾಮಸನು ಮನುವಾದನು. ಅನಂತರ ಜ್ಞಾನಿಗಳಲ್ಲಿ ಶ್ರೇಷ್ಠನೆನಿಸಿದ ರೈವತನೆಂಬುವನು ಮನುವಾದನು.

೧೦೮-೧೦೯. ಅನಂತರ ಚಾಕ್ಷುಷನೂ ಅವನ ನಂತರ ಏಳನೆಯವನಾದ ಶ್ರಾದ್ಧದೇವನೂ ಮನುಗಳಾದರು. ಸೂರ್ಯನ ಮಗನಾದ ಸಾವರ್ಣಿಯು ಎಂಟನೆಯ ಮನುವಾದನು. ಇವನೇ ಪೂರ್ವದಲ್ಲಿ ಚೈತ್ರವಂಶದಲ್ಲಿ ಹುಟ್ಟಿ ಸುರಥನೆಂಬ ರಾಜನಾಗಿದ್ದನು. ಒಂಭತ್ತನೆಯ ಮನುವು ದಕ್ಷಸಾವರ್ಣಿಯು. ಹತ್ತನೆಯವನು ಬ್ರಹ್ಮಸಾವರ್ಣಿಯು.

೧೧೦. ಹನ್ನೊಂದನೆಯ ಮನುವು ಧರ್ಮಸಾವರ್ಣಿಯೆಂಬುವನು. ಅನಂತರ ವಿಷ್ಣುಭಕ್ತನೂ, ಜಿತೇಂದ್ರಿಯನೂ ಆದ ರುದ್ರಸಾವರ್ಣಿಯು ಮನುವಾದನು.

೧೧೧. ಅವನಾದ ನಂತರ ದೇವಸಾವರ್ಣಿಯೂ, ಅನಂತರ ಇಂದ್ರಸಾವರ್ಣಿಕನೂ ಮನುಗಳಾದರು. ಈ ಪ್ರಕಾರ ಹದಿನಾಲ್ಕುಜನ ಮನುಗಳನ್ನು ನಿನಗೆ ಹೇಳಿರುವೆನು.

ಏತೇಷು ಸಮತೀತೇಷು ಬಭೂವ ಬ್ರಹ್ಮಣೋ ದಿನಂ ।
ಇಂದ್ರಸಾವರ್ಣಿವೃತ್ತಾಂತಂ ಸರ್ವಂ ಮತ್ತೋ ನಿಶಾಮಯ ॥ ೧೧೨ ॥

ಮನೂನಾಂ ಪ್ರವರೋ ಧರ್ಮೀ ಶುದ್ಧಭಕ್ತೋ ಗದಾಭೃತಃ ।
ಚಕಾರ ರಾಜ್ಯಂ ಧರ್ಮೇಣ ಯುಗಾನಾಮೇಕಸಪ್ತತಿಂ ॥ ೧೧೩ ॥

ರಾಜ್ಯಂ ದತ್ವಾ ಸುರೇಂದ್ರಾಯ ಜಗಾಮ ತಪಸೇ ವನಂ ।
ಸುರೇಂದ್ರಸ್ಯ ಸುತಃ ಶ್ರೀಮಾಂಛ್ರೀನಿಕೇತುರ್ಮಹಾಬಲಃ ॥ ೧೧೪ ॥

ತಸ್ಯ ಪುತ್ರೋ ಮಹಾಯೋಗೀ ಪುರೀಷತರುರೇವ ಚ ।
ತಸ್ಯ ಪುತ್ರೋಽತಿ ತೇಜಸ್ವೀ ಗೋಕಾಮುಖ ಇತಿ ಸ್ಮೃತಃ ॥ ೧೧೫ ॥

ವೃದ್ಧಶ್ರವಾಃ ಸುತಸ್ತಸ್ಯ ತತ್ಪುತ್ರೋ ಭಾನುರೇವ ಚ ।
ಪುಂಡರೀಕಃ ಸುತಸ್ತಸ್ಯ ತತ್ಪುತ್ರೋ ಜಿಹ್ವಲಸ್ತಥಾ ॥ ೧೧೬ ॥

---

೧೧೨. ಇವರೆಲ್ಲರೂ ಆದ ನಂತರ ಬ್ರಹ್ಮನಿಗೆ ಒಂದು ದಿನವಾಯಿತು. ಈಗ ಇಂದ್ರ ಸಾವರ್ಣಿಯ ಕಥೆಯನ್ನು ನನ್ನಿಂದ ಕೇಳುವವನಾಗು.

೧೧೩. ಮನುಗಳಲ್ಲಿ ಶ್ರೇಷ್ಠನಾದ ಇಂದ್ರಸಾವರ್ಣಿಯು ನಾರಾಯಣನಲ್ಲಿ ಶುದ್ಧವಾದ ಭಕ್ತಿಯುಳ್ಳವನಾಗಿ ಎಪ್ಪತ್ತೊಂದು ಯುಗಗಳವರೆಗೆ ಅತ್ಯಂತ ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು.

೧೧೪. ಅವನು ತನ್ನ ರಾಜ್ಯವನ್ನು ಸುರೇಂದ್ರನೆಂಬುವನಿಗೆ ಕೊಟ್ಟು ತಪಸ್ಸನ್ನು ಮಾಡಲು ಕಾಡಿಗೆ ಹೋದನು. ಸುರೇಂದ್ರನಿಗೆ ಶ್ರೀನಿಕೇತುವೆಂಬ ಮಹಾ ಬಲಶಾಲಿಯಾದ ಐಶ್ವರ್ಯವಂತನಾದ ಮಗನಾದನು.

೧೧೫. ಆ ಶ್ರೀನಿಕೇತುವಿನ ಮಗನು ದೊಡ್ಡ ಯೋಗಿಯಾದ ಪುರೀಷತರುವೆಂಬುವನು. ಅವನ ಮಗನು ಹೆಚ್ಚು ತೇಜಸ್ವಿಯಾದ ಗೋಕಾಮುಖನೆಂಬುವನು.

೧೧೬. ಅವನಿಗೆ ವೃದ್ಧಶ್ರವನೆಂಬ ಮಗನು ಹುಟ್ಟಿದನು. ಅವನಿಗೆ ಭಾನುವೆಂಬ ಮಗನು ಹುಟ್ಟಿದನು. ಆ ಭಾನುವಿನ ಮಗನು ಪುಂಡರೀಕನೆಂಬುವನು. ಅವನ ಮಗನು ಜಿಹ್ವಲನೆಂಬ ಹೆಸರುಳ್ಳವನು.

ಜಿಹ್ವಲಸ್ಯ ಸುತಃ ಶೃಂಗೀ ತತ್ಪುತ್ರೋ ಭೀಮ ಏವ ಚ ।
ತತ್ಪುತ್ರೋಽಪಿ ಯಶಶ್ಚಂದ್ರೋ ಯಶಸಾ ಚ ಶಶೀ ಜಿತಃ ॥ ೧೧೭ ॥

ತತ್ಕೀರ್ತಿಂ ನಿರ್ಮಲಾಂ ಸಂತೋ ಗಾಯಂತಿ ಸಂತತಂ ಸುರಾಃ ।
ತಸ್ಯ ಪುತ್ರೋ ವರೇಣ್ಯಶ್ಚ ಪುರಾರಣ್ಯಶ್ಚ ತತ್ಸುತಃ ॥ ೧೧೮ ॥

ತತ್ಪುತ್ರೋ ಧಾರ್ಮಿಕಃ ಶ್ರೀಮಾನ್‌ಧರಾರಣ್ಯಶ್ಚ ಏವ ಚ ।
ತತ್ಪುತ್ರೋ ಮಂಗಲಾರಣ್ಯಸ್ತಪಸ್ವೀ ಜ್ಞಾನಿನಾಂ ವರಃ ॥ ೧೧೯ ॥

ಅಪುತ್ರಕೋ ನೃಪಶ್ರೇಷ್ಠಸ್ತಪಸೇ ಪುಷ್ಕರಂ ಯಯೌ ।
ಸುಚಿರಂ ಚ ತಪಸ್ತಪ್ತ್ವಾ ವರಂ ಲಬ್ಧ್ವಾ ಮಹೇಶ್ವರಾತ್ ॥ ೧೨೦ ॥

ಸಂಪ್ರಾಪ್ಯ ವೈಷ್ಣವಂ ಪುತ್ರಮನರಣ್ಯಂ ಜಿತೇಂದ್ರಿಯಂ ।
ದತ್ವಾ ತಸ್ಮೈ ಚ ರಾಜ್ಯಂ ಚ ಜಗಾಮ ತಪಸೇ ವನಂ ॥ ೧೨೧ ॥

---

೧೧೭. ಜಿಹ್ವಲನಿಗೆ ಶೃಂಗಿ ಯೆಂಬ ಮಗನು ಹುಟ್ಟಿದನು. ಅವನ ಮಗನು ಭೀಮನೆಂಬುವನು. ಭೀಮನಿಗೆ ಯಶಶ್ಚಂದ್ರನೆಂಬ ಮಗನು ಹುಟ್ಟಿದನು. ಇವನು ತನ್ನ ಕೀರ್ತಿಯಿಂದ ಚಂದ್ರನನ್ನು ಜಯಿಸಿದನು.

೧೧೮. ಆ ಯಶಶ್ಚಂದ್ರನ ಶುಭ್ರವಾದ ಕೀರ್ತಿಯನ್ನು ಯಾವಾಗಲೂ ದೇವತೆಗಳು ಹಾಡುತ್ತಾರೆ. ಅವನ ಮಗನು ವರೇಣ್ಯನೆಂಬುವನು. ಪುರಾರಣ್ಯನೆಂಬುವನು ವರೇಣ್ಯನಿಗೆ ಮಗನಾಗಿ ಹುಟ್ಟಿದನು.

೧೧೯. ಆ ಪುರಾರಣ್ಯನಿಗೆ ಧರ್ಮಪರನೂ, ಕಾಂತಿಯುಕ್ತನೂ ಆದ ಧರಾರಣ್ಯನೆಂಬ ಮಗನು ಹುಟ್ಟಿದನು. ಅವನಿಗೆ ತಪಸ್ವಿಯೂ ಜ್ಞಾನಿಗಳಲ್ಲಿ ಶ್ರೇಷ್ಠನೂ ಆದ ಮಂಗಲಾರಣ್ಯನು ಮಗನಾದನು.

೧೨೦–೧೨೧. ಮಂಗಲಾರಣ್ಯನೆಂಬ ರಾಜೋತ್ತಮನು ಮಕ್ಕಳಿಲ್ಲದವನಾಗಿ ತಪಸ್ಸನ್ನು ಮಾಡುವುದಕ್ಕೋಸ್ಕರ ಪುಷ್ಕರಕ್ಷೇತ್ರವನ್ನು ಕುರಿತು ಹೊರಟನು. ಅಲ್ಲಿ ಬಹುಕಾಲ ತಪಸ್ಸನ್ನು ಮಾಡಿ ಮಹೇಶ್ವರನಿಂದ ವರವನ್ನು ಪಡೆದು, ವಿಷ್ಣುಭಕ್ತನೂ ಜಿತೇಂದ್ರಿಯನೂ ಆದ ಅನರಣ್ಯನೆಂಬ ಮಗನನ್ನು ಪಡೆದು ಅವನಿಗೆ ತನ್ನ ರಾಜ್ಯವನ್ನು ಕೊಟ್ಟು ತಾನು ತಪಸ್ಸನ್ನು ಮಾಡುವುದಕ್ಕೋಸ್ಕರ ಕಾಡಿಗೆ ಹೋದನು.

ಅನರಣ್ಯೋ ನೃಪಶ್ರೇಷ್ಠಃ ಸಪ್ತದ್ವೀಪಮಹೀಪತಿಃ ।
ಚಕಾರ ಯಜ್ಞಶತಕಂ ಭೃಗುಣಾ ಚ ಪುರೋಧಸಾ ॥ ೧೨೨ ॥

ತುಚ್ಛಂ ಮತ್ವಾಽಽಶು ಶಕ್ರತ್ವಂ ನ ಲೇಭೇ ನಶ್ವರಂ ಸುಧೀಃ ।
ಲೀಲಯಾ ಚ ಜಿತಃ ಶಕ್ರೋ ಲೀಲಯಾ ಚ ಜಿತೋ ಬಲಿಃ ॥ ೧೨೩ ॥

ಜಿತಾಶ್ಚ ದಾನವೇಂದ್ರಾ ವೈ ಜ್ವಲತಾ ಸ್ವೇನ ತೇಜಸಾ ।
ಬಭೂವುಃ ಶತಪುತ್ರಾಶ್ಚ ರಾಜ್ಞಸ್ತಸ್ಯ ಹಿಮಾಲಯ ॥ ೧೨೪ ॥

ಕನ್ಯೈಕಾ ಸುಂದರೀ ರಮ್ಯಾ ಪದ್ಮಾ ಪದ್ಮಾಲಯಾಸಮಾ ।
ಸಾ ಕನ್ಯಾ ಯೌವನಸ್ಥಾ ಚ ಬಭೂವ ಪಿತೃಮಂದಿರೇ ॥ ೧೨೫ ॥

ಚಾರಂ ಪ್ರಸ್ಥಾಪಯಾಮಾಸ ವರಾಯ ನೃಪತೀಶ್ವರಃ ।
ಏಕದಾ ಪಿಪ್ಪಲಾದಶ್ಚ ಗಂತುಂ ಸ್ವಾಶ್ರಯಮುತ್ಸುಕಃ ॥ ೧೨೬ ॥

---

೧೨೨. ಅನರಣ್ಯನೆಂಬ ರಾಜೋತ್ತಮನು ಏಳು ದ್ವೀಪಗಳಿಂದ ಕೂಡಿದ ಭೂಮಿಗೆ ರಾಜನಾಗಿ ಪುರೋಹಿತರಾದ ಭೃಗುಗಳ ಸಹಾಯದಿಂದ ನೂರು ಯಾಗಗಳನ್ನು ಮಾಡಿದನು.

೧೨೩–೧೨೫. ಎಲೈ ಹಿಮಾಲಯನೇ, ಆ ಅನರಣ್ಯನು ಇಂದ್ರಪದವಿಯು ಹೀನವಾದುದೆಂದು ತಿಳಿದು ಅದನ್ನು ಹೊಂದಲಿಲ್ಲ. ಪ್ರಜ್ವಲಿಸುತ್ತಿರುವ ತನ್ನ ಕಾಂತಿಯಿಂದ ಸುಲಭವಾಗಿ ಇಂದ್ರನನ್ನೂ, ಬಲಿಯನ್ನೂ, ರಾಕ್ಷಸ ಶ್ರೇಷ್ಠರನ್ನೂ ಜಯಿಸಿದನು. ಆ ರಾಜನಿಗೆ ನೂರುಮಂದಿ ಮಕ್ಕಳುಗಳಾದರು. ಮತ್ತು ಸುಂದರಿಯೂ, ಮನೋಹರಳೂ, ಲಕ್ಷ್ಮಿಗೆ ಸಮಾನಳೂ, ಪದ್ಮಾ ಎಂಬ ಹೆಸರುಳ್ಳವಳೂ ಆದ ಒಬ್ಬಳು ಮಗಳೂ ಹುಟ್ಟಿದಳು. ಆ ಕನ್ಯೆಯು ಪ್ರಾಯವನ್ನು ಹೊಂದಿ ತಂದೆಯ ಮನೆಯಲ್ಲಿದ್ದಳು.

೧೨೬–೧೨೮. ರಾಜನು ತನ್ನ ಮಗಳಿಗೆ ತಕ್ಕ ವರನನ್ನು ಹುಡುಕಿ ತರುವುದಕ್ಕೋಸ್ಕರ ದೂತರನ್ನು ದೇಶದೇಶಗಳಿಗೆ ಕಳುಹಿಸಿದನು. ಒಂದುದಿನ ಪಿಪ್ಪಲಾದನೆಂಬ ಮುನಿಯು ತನ್ನ ಆಶ್ರಮಕ್ಕೆ ಹೋಗುತ್ತ ದಾರಿಯಲ್ಲಿ ಜನರಹಿತವಾದ ತಪೋವನದಲ್ಲಿ

ತಪಃಸ್ಥಾನೇ ನಿರ್ಜನೇ ಚ ಗಂಧರ್ವಂ ಸ ದದರ್ಶ ಹ ।
ಸ್ತ್ರೀಷು ನಿಮಗ್ನಚಿತ್ತಂ ಚ ಶೃಂಗಾರರಸಸಾಗರೇ ॥ ೧೨೭ ॥

ಕಾಮಾದತೀವ ಮತ್ತಂ ಚ ನ ಜಾನಂತಂ ದಿವಾನಿಶಂ ।
ದೃಷ್ಟ್ವಾ ತಂ ಮುನಿಶಾರ್ದೂಲಃ ಸಕಾಮಶ್ಚ ಬಭೂವ ಹ ॥ ೧೨೮ ॥

ತತಃ ಸುಭಗ್ನಚಿತ್ತಃ ಸಂಚಿತಯನ್ ದಾರಸಂಗ್ರಹಂ ।
ಏಕದಾ ಪುಷ್ಪಭದ್ರಾಯಾಂ ಸ್ನಾತುಂ ಗಚ್ಛನ್ಮುನೀಶ್ವರಃ ॥ ೧೨೯ ॥

ದದರ್ಶ ಪದ್ಮಾಂ ಯುವತೀಂ ಪದ್ಮಾಮಿವ ಮನೋರಮಾಂ ।
ಕೇಯಂ ಕಸ್ಯೇತಿ ಪಪ್ರಚ್ಛ ಸಮೀಪಸ್ಥಾನ್ ಜನಾನ್ಮುನಿಃ ॥ ೧೩೦ ॥

ಜನಾ ನಿವೇದನಂ ಚಕ್ರುಃ ಪದ್ಮಾಽನರಣ್ಯಕನ್ಯಕಾ ।
ಮುನಿಃ ಸ್ನಾತ್ವಾಽಭೀಷ್ಟದೇವಂ ಸಂಪೂಜ್ಯ ರಾಧಿಕೇಶ್ವರಮ್ ॥ ೧೩೧ ॥

ಜಗಾಮ ಕಾಮೀ ಭಿಕ್ಷಾರ್ಥಮನರಣ್ಯಸಭಾಜಿರೇ ।
ರಾಜಾ ಶೀಘ್ರಂ ಮುನಿಂ ದೃಷ್ಟ್ವಾ ಪ್ರಣನಾಮ ಭಯಾಕುಲಃ ॥ ೧೩೨ ॥

ಬಹಳ ಕಾಮುಕನಾಗಿ ಹಗಲು ರಾತ್ರಿಯೆಂಬುದನ್ನು ತಿಳಿಯದೆ ಶೃಂಗಾರರಸದ ಸಮುದ್ರದಲ್ಲಿ ಮುಳುಗಿ ಮತ್ತನಾಗಿ ಸ್ತ್ರೀಯರಲ್ಲಿ ಆಸಕ್ತನಾಗಿರುವ ಗಂಧರ್ವನನ್ನು ನೋಡಿ ತಾನೂ ಕಾಮುಪರವಶನಾದನು.

೧೨೯-೧೩೦. ಆ ಮುನಿಯು ಚಪಲ ಮನಸ್ಸುಳ್ಳನಾಗಿ ಮದುವೆಯನ್ನು ಮಾಡಿಕೊಳ್ಳಬೇಕೆಂದು ಯೋಚಿಸುತ್ತ ಒಂದುದಿನ ಪುಷ್ಪಭದ್ರಾ ನದಿಯಲ್ಲಿ ಸ್ನಾನ ಮಾಡುವುದಕ್ಕಾಗಿ ಹೋಗುತ್ತಾ ಯೌವನವತಿಯೂ, ಲಕ್ಷ್ಮಿಯಂತೆ ಮನೋಹರಳೂ ಆದ ಪದ್ಮೆಯನ್ನು ನೋಡಿದನು. ಅವಳ ಸಮೀಪದಲ್ಲಿದ್ದ ಜನರನ್ನು ಕುರಿತು ಇವಳು ಯಾರು? ಯಾರ ಮಗಳು? ಎಂಬುದಾಗಿ ಪ್ರಶ್ನೆ ಮಾಡಿದನು.

೧೩೧-೧೩೨. ಆ ಜನರು ಇವಳು ಅನರಣ್ಯರಾಜನ ಮಗಳು. ಇವಳ ಹೆಸರು ಪದ್ಮಾ ಎಂಬುದಾಗಿ ಹೇಳಿದರು. ಆ ಮಾತನ್ನು ಕೇಳಿ ಮುನಿಯು ಸ್ನಾನವನ್ನು ಮಾಡಿ ತನ್ನ ಇಷ್ಟದೇವನಾದ ರಾಧಿಕೇಶ್ವರನನ್ನು ಪೂಜೆಮಾಡಿ ಕಾಮಯುಕ್ತನಾಗಿ ಭಿಕ್ಷೆಗೋಸ್ಕರ ಅನರಣ್ಯರಾಜನ ಸಭೆಗೆ ಹೋದನು. ರಾಜನು ಈ ಮುನಿಯನ್ನು ನೋಡಿ ಭಯಗೊಂಡು ಜಾಗ್ರತೆಯಾಗಿ ನಮಸ್ಕಾರವನ್ನು ಮಾಡಿದನು.

ಮಧುಪರ್ಕಾದಿಕಂ ದತ್ವಾ ಪೂಜಯಾಮಾಸ ಭಕ್ತಿತಃ ।
ಕಾಮಾತ್ಸರ್ವಂ ಗೃಹೀತ್ವಾ ಚ ಯಯಾಚೇ ಕನ್ಯಕಾಂ ಮುನಿಃ ॥ ೧೩೩ ॥

ಮೌನೀ ಬಭೂವ ನೃಪತಿಃ ಕಿಂಚಿನ್ನಿರ್ವಕ್ತುಮಕ್ಷಮಃ ।
ಮುನಿಃ ಪುನರ್ಯಯಾಚೇ ತಂ ಕನ್ಯಾಂ ದೇಹೀತಿ ಮೇ ನೃಪ ॥ ೧೩೪ ॥

ಅಥವಾ ಭಸ್ಮಸಾತ್ಸರ್ವಂ ಕರಿಷ್ಯಾಮಿ ಕ್ಷಣೇನ ಚ ।
ಸರ್ವೇ ಬಭೂವುರಾಚ್ಛನ್ನಾ ಗಣಾಶ್ಚ ತೇಜಸಾ ಮುನೇಃ ॥ ೧೩೫ ॥

ರುರೋದ ರಾಜಾ ಸಗಣೋ ದೃಷ್ಟ್ವಾ ವೃದ್ಧಂ ಜರಾತುರಂ ।
ಮಹಿಷ್ಯೋ ರುರುದುಃ ಸರ್ವಾ ಇತಿಕರ್ತವ್ಯಮಕ್ಷಮಾಃ ॥ ೧೩೬ ॥

ಮೂರ್ಛಾಂ ಪ್ರಾಪ ಮಹಾರಾಜ್ಞೀ ಕನ್ಯಾಮಾತಾ ಶುಚಾಕುಲಾ ।
ಪಂಡಿತೋ ನೀತಿಶಾಸ್ತ್ರಜ್ಞೋ ಬೋಧಯಾಮಾಸ ಭೂಮಿಪಂ ॥ ೧೩೭ ॥

---

೧೩೩. ಮತ್ತು ರಾಜನು ಮಧುಪರ್ಕವೇ ಮೊದಲಾದುವುಗಳನ್ನು ಕೊಟ್ಟು ಭಕ್ತಿಯಿಂದ ಮುನಿಯನ್ನು ಪೂಜೆಮಾಡಿದನು. ಆ ಮುನಿಯು ಆ ಪೂಜೆಗಳನ್ನೆಲ್ಲ ಸ್ವೀಕರಿಸಿ ಕಾಮಪೀಡಿತನಾಗಿ ರಾಜನ ಮಗಳನ್ನು ಬೇಡಿದನು.

೧೩೪. ರಾಜನು ಆ ಮಾತನ್ನು ಕೇಳಿ ಯಾವ ಉತ್ತರವನ್ನು ಕೊಡುವುದಕ್ಕೂ ಸಮರ್ಥನಾಗದೆ ಮೌನವನ್ನು ತಳೆದುಕೊಂಡನು. ಆಗ ಮುನಿಯು ಮತ್ತೆ ಎಲೈ ರಾಜನೇ ನಿನ್ನ ಮಗಳನ್ನು ನನಗೆ ಕೊಡು ಎಂದು ಬೇಡಿದನು.

೧೩೫. ಮತ್ತು ಹಾಗೆ ಕೊಡದಿದ್ದರೆ ಈ ನಿನ್ನ ಸಮಸ್ತವನ್ನೂ ಒಂದು ಕ್ಷಣದಲ್ಲಿ ಬೂದಿಮಾಡುತ್ತೇನೆ ಎಂದು ನುಡಿದನು. ಆ ಮುನಿಯ ತೇಜಸ್ಸಿನಿಂದ ಪರಿಜನರೇ ಮುಂತಾದ ಸಕಲರೂ ಮುಚ್ಚಿಹೋದರು.

೧೩೬. ರಾಜನು ಆ ಮುನಿಯ ಮುದಿತನವನ್ನು ನೋಡಿ ಮಗಳನ್ನು ಕೊಡಲಾರದೆ ಅತ್ತನು. ರಾಣಿಯೇ ಮುಂತಾದ ಅಂತಃಪುರದವರೂ ಕೂಡ ಏನು ಮಾಡಬೇಕೆಂಬುದು ತೋರದವರಾಗಿ ಅತ್ತರು.

೧೩೭-೧೩೮. ಕನ್ಯೆಯ ತಾಯಿಯಾದ ಮಹಾರಾಣಿಯು ಬಹಳ ದುಃಖಗೊಂಡವಳಾಗಿ ಮೂರ್ಛೆ ಹೊಂದಿದಳು. ನೀತಿ ಶಾಸ್ತ್ರವನ್ನು ಬಲ್ಲ ಪಂಡಿತನು ರಾಜನನ್ನೂ, ರಾಣಿಯನ್ನೂ, ರಾಜಕುಮಾರರನ್ನೂ ಕುರಿತು ಕನ್ಯೆಯ ವಿಷಯದಲ್ಲಿ

ಮಹಿಷೀಂ ಚ ನೃಪಸುತಾನ್ ಕನ್ಯಕಾನೀತಿಮುತ್ತಮಾಮ್ ।
ಅದ್ಯ ವಾಽಪಿ ದಿನಾಂತೇ ವಾ ದಾತವ್ಯಾ ಕನ್ಯಕಾ ನೃಪ ॥ ೧೩೮ ॥

ಪರಾಯ ವಿಪ್ರಾದನ್ಯಸ್ಮೈ ಕಸ್ಮೈ ವಾ ದಾತುಮರ್ಹಸಿ ।
ಸತ್ಪಾತ್ರಂ ಬ್ರಾಹ್ಮಣಾದನ್ಯಂ ನ ಪಶ್ಯಾಮಿ ಜಗತ್ತ್ರಯೇ ॥ ೧೩೯ ॥

ಸುತಾಂ ದತ್ವಾ ಚ ಮುನಯೇ ರಕ್ಷಸ್ವ ಸರ್ವಸಂಪದಂ ।
ರಾಜನ್ ಕನ್ಯಾನಿಮಿತ್ತೇನ ಸರ್ವಸಂಪತ್ಪ್ರಣಶ್ಯತಿ ॥ ೧೪೦ ॥

ಸರ್ವಂ ರಕ್ಷತಿ ತತ್ತ್ಯಕ್ತ್ವಾ ವಿನಾ ತಂ ಶರಣಾಗತಂ ।
ರಾಜಾ ಪ್ರಾಜ್ಞವಚಃ ಶ್ರುತ್ವಾ ವಿಲಪ್ಯ ಚ ಮುಹುರ್ಮುಹುಃ ॥ ೧೪೧ ॥

ಕನ್ಯಾಂ ಸಾಲಂಕೃತಾಂ ಕೃತ್ವಾ ಮುನೀಂದ್ರಾಯ ದದೌ ಕಿಲ ।
ಕಾಂತಾಂ ಗೃಹೀತ್ವಾ ಸ ಮುನಿರ್ಮುದಿತಃ ಸ್ವಾಲಯಂ ಯಯೌ ॥ ೧೪೨ ॥

ಉತ್ತಮವಾದ ನೀತಿಯನ್ನುಪದೇಶಮಾಡಿದನು :—ಎಲೈ ರಾಜನೇ ಇಂದಾಗಲೀ ಇನ್ನು ಹಲವು ದಿನಗಳನಂತರವಾಗಲೀ ಕನ್ಯೆಯನ್ನು ಕೊಡಲೇಬೇಕು.

೧೩೯. ಉತ್ತಮನಾದ ಬ್ರಾಹ್ಮಣನನ್ನು ಬಿಟ್ಟು ಮತ್ತೆ ಯಾರಿಗೆ ಕೊಡವೆ ? ಬ್ರಾಹ್ಮಣನಿಗಿಂತಲೂ ಉತ್ತಮ ಪಾತ್ರನನ್ನು ಮೂರು ಲೋಕದಲ್ಲಿಯೂ ಕಾಣೆನು.

೧೪೦. ಎಲೈ ರಾಜನೇ, ಈ ಮುನಿಗೆ ನಿನ್ನ ಮಗಳನ್ನು ಕೊಟ್ಟು ನಿನ್ನ ಸಕಲ ಸಂಪತ್ತನ್ನೂ ಕಾಪಾಡಿಕೋ ಇಲ್ಲವಾದರೆ ಈ ಕನ್ಯೆಯ ಕಾರಣದಿಂದ ನಿನ್ನ ಸಮಸ್ತವಾದ ಐಶ್ವರ್ಯವೂ ನಾಶವಾಗುತ್ತದೆ.

೧೪೧–೧೪೨. ಮನುಜನು ಲೋಕದಲ್ಲಿ ಶರಣಾಗತನನ್ನುಳಿದು ಬೇರೆ ಯಾವುದನ್ನಾದರೂ ಕೊಟ್ಟು ತನ್ನನ್ನು ಕಾಪಾಡಿಕೊಳ್ಳುತ್ತಾನೆ. ರಾಜನು ಈ ರೀತಿಯಾದ ಪಂಡಿತನ ಮಾತನ್ನು ಕೇಳಿ ಮತ್ತೆ ದುಃಖಗೊಂಡವನಾಗಿ, ತನ್ನ ಮಗಳನ್ನು ಅಲಂಕರಿಸಿ ಆ ಮುನಿಶ್ರೇಷ್ಠನಿಗೆ ಧಾರೆಯೆರೆದನು. ಆ ಮುನಿಯು ಸಂತೋಷಪಟ್ಟು ತನ್ನ ಪತ್ನಿಯನ್ನು ಕರೆದುಕೊಂಡು ಮನೆಗೆ ಬಂದನು.

ರಾಜಾ ಸರ್ವಾನ್ಪರಿತ್ಯಜ್ಯ ಜಗಾಮ ತಪಸೇ ಶುಚಾ ।
ಭರ್ತುಶ್ಚ ದುಹಿತುಃ ಶೋಕಾತ್ ಪ್ರಾಣಾಂಸ್ತತ್ಯಾಜ ಸುಂದರೀ ॥ ೧೪೩ ॥

ಪುತ್ರಾಃ ಪೌತ್ರಾಶ್ಚ ಭೃತ್ಯಾಶ್ಚ ಮೂರ್ಛಾಂ ಪ್ರಾಪುರ್ನೃಪಂ ವಿನಾ ।
ಅನರಣ್ಯಸ್ತಪಸ್ತಪ್ತ್ವಾ ಚಿಂತಯನ್ ರಾಧಿಕೇಶ್ವರಂ ॥ ೧೪೪ ॥

ಗೋಲೋಕನಾಥಂ ಸಂಸೇವ್ಯ ಗೋಲೋಕಂ ಚ ಜಗಾಮ ಹ ।
ಬಭೂವ ಕೀರ್ತಿಮಾನ್ ರಾಜಾ ಜ್ಯೇಷ್ಠಪುತ್ರೋ ನೃಪಸ್ಯ ಚ ।
ಪುತ್ರವತ್ಪಾಲಯಾಮಾಸ ಪ್ರಜಾಃ ಸರ್ವಾ ಮಹೀತಲೇ ॥ ೧೪೫ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ಪೂರ್ವಾರ್ಧೇ ನಾರದನಾರಾಯಣ ಸಂವಾದೇ ರಾಧಾಕೃಷ್ಣ ಸಂವಾದೇ ಏಕಚತ್ವಾರಿಂಶೋಽಧ್ಯಾಯಃ

---

೧೪೩. ಅನರಣ್ಯರಾಜನು ಎಲ್ಲರನ್ನೂ ಬಿಟ್ಟು ದುಃಖಿತನಾಗಿ ತಪವನ್ನಾಚರಿಸಲು ಕಾಡಿಗೆ ಹೋದನು. ಗಂಡನ ಮತ್ತು ಮಗಳ ಅಗಲುವಿಕೆಯ ದುಃಖದಿಂದ ರಾಣಿಯು ಪ್ರಾಣಬಿಟ್ಟಳು.

೧೪೪–೧೪೫. ರಾಜನಿಲ್ಲದಿರುವುದನ್ನು ಕಂಡು ಅವನ ಮಕ್ಕಳೂ, ಮೊಮ್ಮಕ್ಕಳೂ ಸಹ ಮೂರ್ಛೆ ಹೊಂದಿದರು. ಅನರಣ್ಯನು ರಾಧಿಕೇಶ್ವರನನ್ನು ಧ್ಯಾನಮಾಡುತ್ತ ತಪಸ್ಸನ್ನು ಮಾಡಿ, ಗೋಲೋಕಾಧೀಶ್ವರನನ್ನು ಸೇವಿಸಿ, ಗೋಲೋಕವನ್ನು ಕುರಿತು ಹೊರಟು ಹೋದನು. ಇತ್ತ ಅನರಣ್ಯನ ಹಿರಿಯ ಮಗನಾದ ಕೀರ್ತಿಮಂತನು ಭೂಮಂಡಲಕ್ಕೆ ರಾಜನಾಗಿ ಸಮಸ್ತ ಪ್ರಜೆಗಳನ್ನೂ ತನ್ನ ಮಕ್ಕಳಂತೆ ಕಾಪಾಡುತ್ತಿದ್ದನು.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಪೂರ್ವಾರ್ಧದ ನಾರದ ನಾರಾಯಣ ಸಂವಾದದಲ್ಲಿ
ನಲವತ್ತೊಂದನೆಯ ಅಧ್ಯಾಯವು ಮುಗಿದುದು.

ನಲವತ್ತೊಂದನೆಯ ಅಧ್ಯಾಯದ ಸಾರಾಂಶ.

ಅನಂತರ ದೇವತೆಗಳೆಲ್ಲರೂ ಬ್ರಹ್ಮನ ಸಮೀಪಕ್ಕೆ ಹೋಗಿ, 'ಸಕಲ ರತ್ನಗಳಿಗೂ ಆಧಾರನಾದ ಹಿಮವಂತನು ಪಾರ್ವತಿಯನ್ನು ಶಿವನಿಗೆ ಕೊಟ್ಟು ಮೋಕ್ಷವನ್ನು ಪಡೆದುದಾದರೆ ಭೂಮಿಗೆ ರತ್ನಗರ್ಭಾ ಎಂಬ ಹೆಸರು ಅನ್ವರ್ಥವಾಗುವುದಿಲ್ಲ. ಆದಕಾರಣ ನೀನು ಹಿಮವಂತನ ಬಳಿಗೆ ಹೋಗಿ ಶಿವನನ್ನು ನಿಂದಿಸಿ ಶಿವಪಾರ್ವತಿಯರ ವಿವಾಹವನ್ನು ತಪ್ಪಿಸು' ಎಂದು ಬೇಡಲು, ಬ್ರಹ್ಮನು ಶಿವನಿಂದೆಯು ಮಹಾಪಾಪಕರವಾದುದೆಂದು ಹೇಳಿ, ತಾನು ಅದಕ್ಕೆ ಒಪ್ಪದೆ, ಶಿವನೇ ರೂಪಾಂತರದಿಂದ ಹಿಮವಂತನಲ್ಲಿಗೆ ಹೋಗಿ ತನ್ನನ್ನು ತಾನೇ ನಿಂದಿಸಿಕೊಳ್ಳುವಂತೆ ಮಾಡಲು ದೇವತೆಗಳಿಗೆ ಹೇಳಿದನು. ಆದರಂತೆ ದೇವತೆಗಳು ಶಿವನನ್ನು ಪ್ರಾರ್ಥಿಸಲು ಶಿವನು ವೃದ್ಧಬ್ರಾಹ್ಮಣನ ರೂಪದಲ್ಲಿ ಹಿಮವಂತನ ಸಮೀಪಕ್ಕೆ ಬಂದು ಶಿವನು 'ಶ್ಮಶಾನವಾಸಿ, ವಿರೂಪಾಕ್ಷ, ದಿಗಂಬರ,' ಮುಂತಾಗಿ ನಿಂದಿಸಿ ಅವನಿಗೆ ಪಾರ್ವತಿಯನ್ನು ಕೊಡಲು ಸ್ವಲ್ಪ ಯೋಚಿಸುವುದು ಒಳ್ಳೆಯದೆಂದು ಹೇಳಿ ಹೊರಟು ಹೋದನು. ಆ ಮಾತನ್ನು ಕೇಳಿದ ಮೇನಾದೇವಿಯು ತನ್ನ ಮಗಳನ್ನು ಶಿವನಿಗೆ ಕೊಡಲೊಪ್ಪಲಿಲ್ಲ. ಅಲ್ಲದೆ ಆಹಾರವನ್ನು ತೊರೆದು ಚಿಂತಾಕ್ರಾಂತಳಾಗಿ ಕುಳಿತಳು. ಆ ಸಮಯಕ್ಕೆ ಸರಿಯಾಗಿ ಸಪ್ತರ್ಷಿಗಳು ಅರುಂಧತಿಯೊಡನೆ ಹಿಮವಂತನ ಸಮೀಪಕ್ಕೆ ಬಂದರು. ಆ ಹಿಮವಂತನಿಗೆ ಹಿತವೂ, ಸತ್ಯವೂ ಆದ ಕೆಲವು ಉಪದೇಶಗಳನ್ನು ಹೇಳಿ ಅನರಣ್ಯನ ಕಥೆಯನ್ನೂ ಹೇಳಿ, ಪರಮೇಶ್ವರನಿಗೆ ಪಾರ್ವತಿಯನ್ನು ಕೊಡಹೇಳಿದರು. ಅನರಣ್ಯನೆಂಬ ರಾಜನು ಇಂದ್ರಸಾವರ್ಣೀ ಎಂಬ ಮನುವಿನ ವಂಶದಲ್ಲಿ ಜನಿಸಿ, ಭೂಮಂಡಲವನ್ನಾಳುತ್ತಿದ್ದನು. ಅವನಿಗೆ ಪದ್ಮೆ ಎಂಬ ಸುಂದರಳಾದ ಕನ್ಯೆಯೊಬ್ಬಳಿದ್ದಳು. ಅವಳು ಪ್ರಾಪ್ತವಯಸ್ಕಳಾಗಲು ಅವಳಿಗೆ ಅನುರೂಪನಾದ ವರನನ್ನು ಹುಡುಕಲು ದೇಶದೇಶಗಳಿಗೆಲ್ಲ ದೂತರನ್ನಟ್ಟಿದನು. ಈ ಮಧ್ಯೆ ಪಿಪ್ಪಲಾದನೆಂಬ ವೃದ್ಧಮುನಿಯೊಬ್ಬನು ತನ್ನ ಆಶ್ರಮಕ್ಕೆ ಹೋಗುತ್ತ ದಾರಿಯಲ್ಲಿ ಕಾಮುಕನಾದ ಗಂಧರ್ವನೊಬ್ಬನನ್ನು ನೋಡಿ ತಾನೂ ಕಾಮಿಯಾಗಿ ಪುಷ್ಪಭದ್ರಾನದಿಯಲ್ಲಿ ಸ್ನಾನಮಾಡುತ್ತಿದ್ದ ಪದ್ಮೆಯನ್ನು ನೋಡಿ ಕಾಮಿಸಿ ಅವಳನ್ನು ತನಗೆ ಕೊಡಬೇಕೆಂದು ಅನರಣ್ಯನನ್ನು ಯಾಚಿಸಿದನು.

ಆದರೆ ಅನರಣ್ಯನೂ ಅವನ ಪತ್ನಿಯೂ ಆ ವೃದ್ಧಮುನಿಗೆ ಮಗಳನ್ನು ಕೊಡಲೊಪ್ಪಲಿಲ್ಲ. ಆಗ ಪಂಡಿತನೊಬ್ಬನು 'ತಾನಾಗಿ ಬೇಡಲು ಬಂದಿರುವ

ಬ್ರಾಹ್ಮಣನಿಗೆ ಕನ್ಯೆಯನ್ನು ಕೊಡುವುದು ಧರ್ಮವೆಂದೂ ಹಾಗೆ ಕೊಡದಿದ್ದರೆ, ಆ ಬ್ರಾಹ್ಮಣನ ಶಾಪಕ್ಕೆ ಗುರಿಯಾಗಬೇಕಾಗುವುದೆಂದೂ' ಹೇಳಲು ಆ ರಾಜನು ಒಪ್ಪಿ ಅವನಿಗೆ ಸಾಲಂಕೃತ ಕನ್ಯಾದಾನಮಾಡಿ ತಾನು ತಪೋವನಕ್ಕೆ ಹೋದನು. ಅಲ್ಲಿ ಶ್ರೀಕೃಷ್ಣನನ್ನು ಕುರಿತು ತಪಸ್ಸುಮಾಡಿ ಮುಕ್ತನಾದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ದ್ವಿಚತ್ವಾರಿಂಶೋಽಧ್ಯಾಯಃ ||

|| ವಸಿಷ್ಠ ಉವಾಚ ||

ಅಥಾನರಣ್ಯಸ್ಯ ಕನ್ಯಾ ಸಿಷೇವೇ ಭಕ್ತಿತೋ ಮುನಿಂ |
ಕರ್ಮಣಾ ಮನಸಾ ವಾಚಾ ಲಕ್ಷ್ಮೀರ್ನಾರಾಯಣಂ ಯಥಾ || ೧ ||

ಏಕದಾ ಸ್ವರ್ಣದೀಂ ಸ್ನಾತುಂ ಗಚ್ಛಂತೀಂ ಸಸ್ಮಿತಾಂ ಸತೀಂ |
ಏದರ್ಶ ಪಥಿ ಧರ್ಮಶ್ಚ ಮಾಯಯಾ ನೃಪಲಿಂಗಕಃ || ೨ ||

ಚಾರುರತ್ನರಥಸ್ಥಶ್ಚ ರತ್ನಾಲಂಕಾರಭೂಷಿತಃ |
ನವೀನಯೌವನ ಶ್ರೀಮಾನ್ ಕಾಮದೇವಸಮಪ್ರಭಃ || ೩ ||

ನಲವತ್ತೆರಡನೆಯ ಅಧ್ಯಾಯವು.

೧. ವಸಿಷ್ಠನು :—ಹಿಂದಿನ ಅಧ್ಯಾಯದಲ್ಲಿ ಹೇಳಿರುವಂತೆ ಮುನಿಯನ್ನು ಮದುವೆಯಾದ ಅನರಣ್ಯನ ಮಗಳು, ಕೆಲಸಗಳಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ ಭಕ್ತಿಪೂರ್ವಕವಾಗಿ ಲಕ್ಷ್ಮಿಯು ನಾರಾಯಣನನ್ನು ಸೇವಿಸುವಂತೆ ಮುನಿಯನ್ನು ಸೇವಿಸುತ್ತಿದ್ದಳು.

೨. ಒಂದು ದಿನ ದೇವಗಂಗಾನದಿಗೆ ಸ್ನಾನಕ್ಕಾಗಿ ಹೋಗುತ್ತಿರುವ ಮಂದ ಹಾಸವನ್ನು ಬೀರುತ್ತಿರುವ, ಆ ಪತಿವ್ರತೆಯನ್ನು ಧರ್ಮನು ಮಾಯೆಯಿಂದ ರಾಜನ ರೂಪವನ್ನು ತಾಳಿ ದಾರಿಯಲ್ಲಿ ಕಂಡನು.

೩–೪. ಮನೋಹರವಾದ ರತ್ನಮಯವಾದ ರಥದಲ್ಲಿ ಕುಳಿತು ರತ್ನಾಭರಣ ಗಳಿಂದ ಅಲಂಕಾರಮಾಡಿಕೊಂಡು ಹೊಸ ಯೌವನದ ಕಾಂತಿಯಿಂದ ಕೂಡಿ ಮನ್ಮಥ

ದೃಷ್ಟ್ವಾ ತಾಂ ಸುಂದರೀಂ ರಮ್ಯಾಮುವಾಚ ಮಾಯಯಾ ವಿಭುಃ ।
ವಿಜ್ಞಾತುಮಂತಸ್ತತ್ತ್ವಂ ಚ ತಸ್ಯಾಶ್ಚ ಮುನಿಯೋಷಿತಃ ॥ ೪ ॥

॥ ಧರ್ಮ ಉವಾಚ ॥

ಅಯಿ ಸುಂದರಿ ಲಕ್ಷ್ಮೀವ ರಾಜಯೋಗ್ಯೇ ಮನೋಹರೇ ।
ಅತೀವ ಯೌವನಸ್ಥೇ ಚ ಕಾಮಿನಿ ಸ್ಥಿರಯೌವನೇ ॥ ೫ ॥

ಜರಾತುರಸ್ಯ ವೃದ್ಧಸ್ಯ ಸಮೀಪೇ ತ್ವಂ ನ ರಾಜಸೇ ।
ಚಂದನಾಗುರುಸಂಲಿಪ್ತಾ ರಾಜಸೇ ರಾಜವಕ್ಷಸಿ ॥ ೬ ॥

ವಿಪ್ರಂ ತಪಃಸು ನಿರತಂ ಸತ್ಯಜ್ಞಂ ಮರಣೋನ್ಮುಖಂ ।
ವಿಹಾಯ ಪಶ್ಯ ರಾಜೇಂದ್ರಂ ರತಿಶೂರಂ ಸ್ಮರಾತುರಂ ॥ ೭ ॥

ಪ್ರಾಪ್ನೋತಿ ಸುಂದರೀ ಪುಣ್ಯಾತ್ ಸೌಂದರ್ಯಂ ಪೂರ್ವಜನ್ಮನಃ ।
ಸಫಲಂ ತದ್ಭವೇತ್ಸರ್ವಂ ರಸಿಕಾಲಿಂಗನೇನ ಚ ॥ ೮ ॥

ನಂತೆ ಕಂಗೊಳಿಸುತ್ತಿರುವ ಮಾಯೆಯ ರಾಜನು ಮನೋಹಾರಿಣಿಯೂ, ಸುಂದರಿಯೂ ಆದ ಆ ಮುನಿಪತ್ನಿಯನ್ನು ನೋಡಿ ಅವಳ ಮನೋನಿಶ್ಚಯವನ್ನು ತಿಳಿಯಲು ಕುತೂಹಲದಿಂದ ಅವಳನ್ನು ಕುರಿತು ಮಾತನಾಡಿದನು.

೫-೬. ಧರ್ಮನು :— ಎಲೈ ಸುಂದರಿಯೇ, ಲಕ್ಷ್ಮಿಯಂತೆ ರಾಜರಿಗೆ ಯೋಗ್ಯಳೇ, ಹೊಸಯೌವನದಲ್ಲಿರುವವಳೇ, ಕಾಮಿನಿಯೇ, ಸ್ಥಿರವಾದ ಯೌವನವುಳ್ಳವಳೇ, ಮುಪ್ಪಿನಿಂದ ಬಳಲುತ್ತಿರುವ ಮುದುಕನ ಸಮೀಪದಲ್ಲಿರುವ ನೀನು ಪ್ರಕಾಶಿಸುವುದಿಲ್ಲ. ದಿವ್ಯವಾದ ಚಂದನಗಳನ್ನು ಲೇಪನಮಾಡಿಕೊಂಡು ರಾಜನ ವಕ್ಷಃಸ್ಥಳದಲ್ಲಿದ್ದು ಪ್ರಕಾಶಿಸುವೆ.

೭. ಯಾವಾಗಲೂ ತಪಸ್ಸನ್ನು ಮಾಡುವ, ಸತ್ಯವನ್ನು ಮಾತ್ರ ತಿಳಿದಿರುವ, ಸಾವಿಗೆ ಸಿದ್ಧನಾಗಿರುವ, ಬ್ರಾಹ್ಮಣನನ್ನು ಬಿಟ್ಟು ರತಿಯಲ್ಲಿ ನಿಪುಣನಾದ ಕಾಮಾತುರನಾದ ರಾಜಶ್ರೇಷ್ಠನಾದ ನನ್ನನ್ನು ನೋಡು.

೮. ಹೆಂಗಸು ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದಿಂದ ಸೌಂದರ್ಯವನ್ನು ಈ ಜನ್ಮದಲ್ಲಿ ಪಡೆಯುತ್ತಾಳೆ. ಆ ಸೌಂದರ್ಯವೆಲ್ಲವೂ ರಸಿಕನಾದ ಕಾಂತನನ್ನು ಆಲಿಂಗಿಸಿಕೊಳ್ಳುವುದರಿಂದ ಸಫಲವಾಗುತ್ತದೆ.

ಸಹಸ್ರಸುಂದರೀಕಾಂತಂ ಕಾಮಶಾಸ್ತ್ರವಿಶಾರದಂ ।
ಕಿಂಕರಂ ಕುರು ಮಾಂ ಕಾಂತೇ ಪರಿತ್ಯಕ್ಷ್ಯಾಮಿ ತಾ ಅಪಿ ॥ ೯ ॥

ನಿರ್ಜಲೇ ನಿರ್ಜನೇ ರಮ್ಯೇ ಶೈಲೇ ಶೈಲೇ ನದೇ ನದೇ ।
ಪುಷ್ಪೋದ್ಯಾನೇ ಪುಷ್ಪಿತೇ ಚ ಸುಗಂಧಿಪುಷ್ಪವಾಯುನಾ ॥ ೧೦ ॥

ಮಲಯೇ ಚಂದನಾರಣ್ಯೇ ಚಾರು ಚಂದನವಾಯುನಾ ।
ವಿಹರಿಷ್ಯಾಮಿ ಕಾಮೇನ ಕಾಮಿನ್ಯಾ ಚ ತ್ವಯಾ ಸಹ ॥ ೧೧ ॥

ಕಾಮಜ್ವರೇಣ ದಗ್ಧಾಯಾಃ ಶಾಂತಿಂ ಕರ್ತುಮಹಂ ಕ್ಷಮಃ ।
ವಿಹರಸ್ವ ಮಯಾ ಸಾರ್ಧಂ ಜನ್ಮೇದಂ ಸಫಲಂ ಕುರು ॥ ೧೨ ॥

ಇತ್ಯೇವಮುಕ್ತ್ವಾವಂತಂ ತಂ ಸ್ವರಥಾದವರುಹ್ಯ ಚ ।
ಗೃಹೀತುಮುತ್ಸುಕಂ ಹಸ್ತೇ ತಮುವಾಚ ಪತಿವ್ರತಾ ॥ ೧೩ ॥

---

೯. ಎಲೈ ಮನೋಹರಳೇ, ಸಾವಿರ ಸ್ತ್ರೀಯರಿಗೆ ಪ್ರಿಯನೂ ಕಾಮಶಾಸ್ತ್ರವನ್ನು ಚೆನ್ನಾಗಿ ಅರಿತಿರುವವನೂ ಆದ ನನ್ನನ್ನು ನಿನ್ನ ಸೇವಕನನ್ನಾಗಿ ಮಾಡಿಕೋ. ನನ್ನ ಸ್ತ್ರೀಯರನ್ನೂ ಕೂಡ ನಾನು ಬಿಡುವೆನು.

೧೦-೧೧. ಜನರಹಿತವಾಗಿಯೂ ಜಲರಹಿತವಾಗಿಯೂ ಇರುವ ಮನೋಹರವಾದ ಅನೇಕ ಬೆಟ್ಟಗಳಲ್ಲಿಯೂ, ನದಿಗಳಲ್ಲಿಯೂ ಅರಳಿದ ಹೂವುಗಳಿಂದ ಕೂಡಿದ ಮತ್ತು ಸುಗಂಧಪುಷ್ಪಗಳ ವಾಸನೆಯಿಂದ ರಮ್ಯವಾದ ಮಲಯ ಪರ್ವತದ ಗಂಧದ ಮರಗಳ ಮನೋಹರವಾದ ಗಂಧದ ವಾಸನೆಯಿಂದ ಕೂಡಿದ ಸ್ಥಳಗಳಲ್ಲಿಯೂ ಸಹ ಕಾಮಿನಿಯಾದ ನಿನ್ನೊಡನೆ ಕ್ರೀಡಿಸುವೆನು.

೧೨. ಕಾಮಜ್ವರದಿಂದ ಸುಟ್ಟುಹೋಗುತ್ತಿರುವ ನಿನಗೆ ತೃಪ್ತಿಯನ್ನುಂಟು ಮಾಡಲು ನಾನು ಸಮರ್ಥನಾಗಿರುವೆನು. ನನ್ನೊಡನೆ ಕ್ರೀಡಿಸು. ಆ ಮೂಲಕ ಈ ನಿನ್ನ ಜನ್ಮವನ್ನು ಸಾರ್ಥಕ ಮಾಡಿಕೋ.

೧೩. ಈ ರೀತಿಯಾಗಿ ಹೇಳುತ್ತ ತನ್ನ ರಥದಿಂದಿಳಿದು ಅವಳ ಕೈಯನ್ನು ಹಿಡಿದುಕೊಳ್ಳಲು ಬರುತ್ತಿರುವ ಆ ರಾಜನನ್ನು ಕುರಿತು ಪತಿವ್ರತೆಯಾದ ಮುನಿಪತ್ನಿಯು ಹೀಗೆ ಹೇಳಿದಳು.

॥ ಪದ್ಮೋವಾಚ ॥

ದೂರಂ ಗಚ್ಛ ಗಚ್ಛ ದೂರಂ ಪಾಪಿಷ್ಠ ಭೂಮಿಪಾಧಮ ।
ಮಾಂ ಚೇತ್ಪಶ್ಯಸಿ ಕಾಮೇನ ಸದ್ಯೋ ಭಸ್ಮ ಭವಿಷ್ಯಸಿ ॥ ೧೪ ॥

ಪಿಪ್ಪಲಾದಂ ಮುನಿಶ್ರೇಷ್ಠಂ ತಪಸಾ ಪೂತವಿಗ್ರಹಂ ।
ವಿಹಾಯ ತ್ವಾಂ ಭಜಿಷ್ಯಾಮಿ ಸ್ತ್ರೀಜಿತಂ ರತಿಲಂಪಟಂ ॥ ೧೫ ॥

ಸ್ತ್ರೀಜಿತಸ್ಪರ್ಶಮಾತ್ರೇಣ ಸರ್ವಂ ಪುಣ್ಯಂ ಪ್ರಣಶ್ಯತಿ ।
ನ ಭೂಮೌ ಪಾತಕೀ ಪಾಪಾತ್ಪಾಪಿನಾಂ ಸ್ತ್ರೀಜಿತಾತ್ಪರಃ ॥ ೧೬ ॥

ಮಾಂ ಮಾತರಂ ಚ ಸ್ತ್ರೀಭಾವಂ ಕೃತ್ವಾ ಯೇನ ಬ್ರವೀಷಿ ಚ ।
ಭವಿಷ್ಯತಿ ಕ್ಷಯಸ್ತೇನ ಕಾಲೇನ ಮಮ ಶಾಪತಃ ॥ ೧೭ ॥

ಶ್ರುತ್ವಾ ಧರ್ಮಃ ಸತೀಶಾಪಂ ನೃಪಮೂರ್ತಿಂ ವಿಹಾಯ ಚ ।
ಧೃತ್ವಾ ಸ್ವಮೂರ್ತಿಂ ದೇವೇಶಃ ಕಂಪಮಾನ ಉವಾಚ ತಾಂ ॥ ೧೮ ॥

---

೧೪. ಪದ್ಮೆಯು :—ಎಲೈ ಪಾಪಿಯಾದ ಬ್ರಹ್ಮಣಾಧಮನೇ, ದೂರಹೋಗು ಹೋಗು. ಕಾಮುಕನಾಗಿ ನನ್ನನ್ನು ನೋಡುವೆಯಾದರೆ ಈಗಲೇ ಸುಟ್ಟು ಬೂದಿಯಾಗುವೆ.

೧೫. ತಪಸ್ಸನ್ನು ಮಾಡಿ ಪರಿಶುದ್ಧನಾದ, ಮುನಿಗಳಲ್ಲಿ ಶ್ರೇಷ್ಠನೆನಿಸಿದ ಪಿಪ್ಪಲಾದನನ್ನು ಬಿಟ್ಟು ಸ್ತ್ರೀಯರಿಂದ ಜಯಿಸಲ್ಪಟ್ಟಿರುವ ರತಿಸುಖದಲ್ಲಿ ಚಪಲತೆಯನ್ನು ಹೊಂದಿರುವ ನಿನ್ನನ್ನು ಸೇವಿಸುತ್ತೇನಲ್ಲವೇ?

೧೬. ಸ್ತ್ರೀಯರಿಂದ ಜಯಿಸಲ್ಪಟ್ಟವನನ್ನು ಸ್ಪರ್ಶಮಾಡಿದ ಮಾತ್ರದಿಂದಲೇ ಸಕಲ ಪುಣ್ಯವೂ ನಾಶವಾಗುತ್ತದೆ. ಈ ಭೂಮಿಯಲ್ಲಿ ಪಾಪಿಗಳ ಮಧ್ಯದಲ್ಲಿ ಸ್ತ್ರೀಯರಿಂದ ಜಿತನಾದವನಿಗಿಂತಲೂ ಪಾಪಿಯಾದವನು ಬೇರೊಬ್ಬನಿಲ್ಲ.

೧೭. ಯಾವ ಕಾರಣದಿಂದ ನೀನು ತಾಯಿಯಂತಿರುವ ನನ್ನಲ್ಲಿ ಸ್ತ್ರೀಸಾಮಾನ್ಯಳೆಂಬ ಭಾವನೆಯನ್ನು ಹೊಂದಿ ಮಾತನಾಡುತ್ತಿರುವಿಯೋ ಆ ಕಾರಣದಿಂದ ಕಾಲಕ್ರಮದಿಂದ ನೀನು ಕ್ಷಯವನ್ನು ಹೊಂದುವಿ. ಇದು ನನ್ನ ಶಾಪವು.

೧೮. ಧರ್ಮನು ಪತಿವ್ರತೆಯು ಕೊಟ್ಟ ಶಾಪವನ್ನು ಕೇಳಿ ರಾಜನ ವೇಷವನ್ನು ಬಿಟ್ಟು ತನ್ನ ರೂಪವನ್ನು ಹೊಂದಿದವನಾಗಿ ನಡುಗುತ್ತಿರುವವನಾಗಿ ಆ ಪತಿವ್ರತೆಯನ್ನು ಕುರಿತು ಈ ಪ್ರಕಾರ ಹೇಳಿದನು.

॥ ಧರ್ಮ ಉವಾಚ ॥

ಮಾತರ್ಜಾನೀಹಿ ಮಾಂ ಧರ್ಮಂ ಧರ್ಮಜ್ಞಾನಾಂ ಗುರೋರ್ಗುರುಂ ।
ಪರಸ್ತ್ರೀಮಾತೃಬುದ್ಧಿಂ ಚ ಕುರ್ವಂತಂ ಸಂತತಂ ಸತಿ ॥ ೧೯ ॥

ಅಹಂ ತವಾಂತರ್ವಿಜ್ಞಾತುಮಾಗತಸ್ತವ ಸನ್ನಿಧಿಂ ।
ಯುಷ್ಮಾಕಂ ಚ ಮನೋ ಜಾನೇ ತಥಾಪಿ ದೈವಬೋಧಿತಃ ॥ ೨೦ ॥

ಕೃತಂ ಮೇ ದಮನಂ ಸಾಧ್ವೀ ನ ವಿರುದ್ಧಂ ಯಥೋಚಿತಂ ।
ಶಾಸ್ತಿಃ ಸಮುತ್ಪಥಸ್ಥಾನಾಮೀಶ್ವರೇಣ ವಿನಿರ್ಮಿತಾ ॥ ೨೧ ॥

ಧರ್ಮಂ ಸ್ವಧರ್ಮಂ ವಿಜ್ಞಾತುಂ ಕಾಲಂ ಕಲಯಿತುಂ ಕ್ಷಮಃ ।
ವಿಧಾತಾರಂ ಸಂವಿಧಾತುಂ ತಸ್ಮೈ ಕೃಷ್ಣಾಯ ತೇ ನಮಃ ॥ ೨೨ ॥

---

೧೯. ಧರ್ಮನು:—ಓ ತಾಯಿಯೇ, ನನ್ನನ್ನು ಧರ್ಮವನ್ನು ತಿಳಿದವರಿಗೂ, ಗುರುಗಳಿಗೂ ಗುರುವಾದ ಧರ್ಮನೆಂದು ತಿಳಿ. ಎಲೈ ಪತಿವ್ರತೆಯೇ, ನಾನು ಯಾವಾಗಲೂ ಪರಸ್ತ್ರೀಯರನ್ನು ತಾಯಿಯರೆಂಬ ಭಾವನೆಯಿಂದ ನೋಡುವವನು.

೨೦. ನಾನು ನಿನ್ನ ಮನಸ್ಸನ್ನು ತಿಳಿಯುವುದಕ್ಕೋಸ್ಕರ ನಿನ್ನ ಸಮೀಪಕ್ಕೆ ಬಂದೆನು. ನಿನ್ನ ಮನಸ್ಸನ್ನು ನಾನು ತಿಳಿದವನಾದರೂ ದೈವಪ್ರೇರಣೆಯಿಂದ ಬಂದೆನು.

೨೧. ಎಲೈ ಪತಿವ್ರತೆಯೇ, ವಿರೋಧವಿಲ್ಲದ ತಪ್ಪಿಗೆ ತಕ್ಕ ಶಿಕ್ಷೆಯನ್ನು ನೀನು ನನಗೆ ಕೊಟ್ಟಿರುವಿ. ದುರ್ಮಾರ್ಗದಲ್ಲಿ ನಡೆವವರಿಗಾಗಿ ಶಿಕ್ಷೆಯು ಈಶ್ವರನಿಂದಲೇ ಸೃಷ್ಟಿಮಾಡಲ್ಪಟ್ಟಿದೆ.

೨೨. ಧರ್ಮನಿಗೆ ತನ್ನ ಧರ್ಮವನ್ನು ತಿಳಿಸಲೂ, ಕಾಲವನ್ನು ಸೃಷ್ಟಿಸಲೂ ಮತ್ತು ಬ್ರಹ್ಮನನ್ನು ನಿರ್ಮಾಣಮಾಡಲೂ ಸಮರ್ಥನಾದ ಕೃಷ್ಣನೇ ನಿನಗೆ ನಮಸ್ಕಾರವು.

ಸಂಹರ್ತುಂ ಯಃ ಕ್ಷಮಃ ಕಾಲೇ ಸಂಹರ್ತಾರಂ ಭವಂ ವಿಭುಃ ।
ಸ್ರಷ್ಟಾರಂ ಲೀಲಯಾ ಸ್ರಷ್ಟುಂ ತಸ್ಮೈ ಕೃಷ್ಣಾಯ ತೇ ನಮಃ ॥ ೨೩ ॥

ಶತ್ರುಂ ವಿಧಾತುಂ ಮಿತ್ರಂ ಚ ಸುಪ್ರೀತಿಂ ಕಲಹಂ ಕ್ಷಮಃ ।
ಸ್ರಷ್ಟುಂ ನಷ್ಟುಂ ತದೇವಂ ಚ ತಸ್ಮೈ ಕೃಷ್ಣಾಯ ತೇ ನಮಃ ॥ ೨೪ ॥

ಶಾಪಂ ಪ್ರದಾತುಂ ಸರ್ವಾಂಶ್ಚ ಸುಖದುಃಖವರಾನ್ ಕ್ಷಮಃ ।
ಸಂಪದಂ ವಿಪದಂ ಯೋಹಿ ತಸ್ಮೈ ಕೃಷ್ಣಾಯ ತೇ ನಮಃ ॥ ೨೫ ॥

ಪ್ರಕೃತಿರ್ನಿರ್ಮಿತಾ ಯೇನ ಮಹಾವಿಷ್ಣುಶ್ಚ ನಿರ್ಮಿತಃ ।
ಬ್ರಹ್ಮವಿಷ್ಣುಮಹೇಶಾದ್ಯಾಸ್ತಸ್ಮೈ ಕೃಷ್ಣಾಯ ತೇ ನಮಃ ॥ ೨೬ ॥

ಯೇನ ಶುಕ್ಲೀಕೃತಂ ಕ್ಷೀರಂ ಜಲಂ ಶೀತಂ ಕೃತಂ ಪುರಾ ।
ದಾಹೀಕೃತೋ ಹುತಾಶಶ್ಚ ತಸ್ಮೈ ಕೃಷ್ಣಾಯ ತೇ ನಮಃ ॥ ೨೭ ॥

---

೨೩. ಯಾವ ಪ್ರಭುವು, ಕಾಲದಲ್ಲಿ ಜಗತ್ತನ್ನು ಸಂಹಾರ ಮಾಡುವ ಈಶ್ವರನನ್ನೂ ಸಂಹಾರ ಮಾಡಲು ಸಮರ್ಥನೋ. ಜಗತ್ತನ್ನು ಸೃಷ್ಟಿಮಾಡುವ ಬ್ರಹ್ಮನನ್ನೂ ಸೃಷ್ಟಿಮಾಡಲು ಶಕ್ತನೋ ಅಂಥಾ ಕೃಷ್ಣನಿಗೆ ನಮಸ್ಕಾರವು.

೨೪. ಮಿತ್ರನನ್ನು ಶತ್ರುವನ್ನಾಗಿಯೂ ಶತ್ರುವನ್ನು ಮಿತ್ರನನ್ನಾಗಿಯೂ ಮಾಡಲು ಸಮರ್ಥನಾದ, ಕಲಹವನ್ನು ಪ್ರೀತಿಯನ್ನಾಗಿ ಮಾಡಬಲ್ಲ, ಸೃಷ್ಟಿ ಮಾಡುವುದಕ್ಕೂ ನಾಶಮಾಡುವುದಕ್ಕೂ ಸಮರ್ಥನಾದ ಕೃಷ್ಣನಿಗೆ ನಮಸ್ಕಾರವು.

೨೫. ಶಾಪವನ್ನು ಕೊಡುವುದಕ್ಕೂ ಸಕಲರಿಗೂ ಸುಖ ದುಃಖಗಳನ್ನುಂಟು ಮಾಡುವುದಕ್ಕೂ ಸಮರ್ಥನಾದ ಮತ್ತು ಸಂಪತ್ತು ಆಪತ್ತುಗಳನ್ನುಂಟುಮಾಡುವವನಾದ ಕೃಷ್ಣನಿಗೆ ನಮಸ್ಕಾರವು.

೨೬. ಯಾವನಿಂದ ಪ್ರಕೃತಿಯು ನಿರ್ಮಾಣವಾದಳೋ ಯಾವನಿಂದ ಮಹಾವಿಷ್ಣುವು ಹುಟ್ಟಿದನೋ ಮತ್ತು ಬ್ರಹ್ಮ ವಿಷ್ಣು ಮಹೇಶ್ವರರನ್ನು ಯಾವನು ಸೃಷ್ಟಿಮಾಡಿದನೋ ಅಂಥಾ ಕೃಷ್ಣನಿಗೆ ನಮಸ್ಕಾರವು.

೨೭. ಯಾವನು ಹಾಲನ್ನು ಬೆಳ್ಳಗೂ, ನೀರನ್ನು ತಣ್ಣಗೂ, ಬೆಂಕಿಯನ್ನು ಬಿಸಿಯಾಗಿಯೂ ಮಾಡಿರುವನೋ ಅಂಥ ಕೃಷ್ಣನಿಗೆ ನಮಸ್ಕಾರವು.

ಅತಿತೇಜಃ ಸಮುತ್ಥಾಯ ತೇಜೋರೂಪಾಯ ಮೂರ್ತಯೇ ।
ಗುಣಶ್ರೇಷ್ಠನಿರ್ಗುಣಾಯ ತಸ್ಮೈ ಕೃಷ್ಣಾಯ ತೇ ನಮಃ ॥ ೨೮ ॥

ಸರ್ವಸ್ಮೈ ಸರ್ವಬೀಜಾಯ ಸರ್ವೇಷಾಮಂತರಾತ್ಮನೇ ।
ಸರ್ವಬಂಧುಸ್ವರೂಪಾಯ ತಸ್ಮೈ ಕೃಷ್ಣಾಯ ತೇ ನಮಃ ॥ ೨೯ ॥

ಇತ್ಯುಕ್ತ್ವಾ ಪುರತಸ್ತಸ್ಯಾಸ್ತಸ್ಥೌ ಧರ್ಮೋ ಜಗದ್ಗುರುಃ ।
ಸಾ ಸಾಧ್ವೀ ತಂ ಚ ವಿಜ್ಞಾಯ ಸಹಸೋವಾಚ ಪರ್ವತ ॥ ೩೦ ॥

॥ ಪದ್ಮೋವಾಚ ॥

ತ್ವಮೇವ ಧರ್ಮ ಸರ್ವೇಷಾಂ ಸಾಕ್ಷೀ ಚ ಸರ್ವಕರ್ಮಣಾಂ ।
ಸರ್ವಾಂತರೇಷು ಸರ್ವಾತ್ಮಾ ಸರ್ವಜ್ಞಃ ಸರ್ವತತ್ತ್ವವಿತ್ ॥ ೩೧ ॥

ಕಥಂ ಮನೋ ಮೇ ವಿಜ್ಞಾತುಂ ವಿಡಂಬಯಸಿ ಕಿಂಕರೀಂ ।
ಯತ್ಕೃತಂ ತ್ವತ್ಕೃತೇ ಬ್ರಹ್ಮನ್ನಪರಾಧೋ ಬಭೂವ ಮೇ ॥ ೩೨ ॥

---

೨೮. ಮಹಾತೇಜಸ್ಸಿನಿಂದ ಹುಟ್ಟಿದ ತೇಜೋಮಯವಾದ ಶರೀರವುಳ್ಳ ಉತ್ತಮ ಗುಣವುಳ್ಳವನೂ, ನಿರ್ಗುಣನೂ ಆದ ಕೃಷ್ಣನಿಗೆ ನಮಸ್ಕಾರವು.

೨೯. ಸರ್ವಸ್ವರೂಪನೂ, ಸರ್ವಕ್ಕೂ ಕಾರಣನೂ, ಸರ್ವರಲ್ಲಿಯೂ ಅಂತರಾತ್ಮ ಸ್ವರೂಪನೂ, ಸರ್ವರಿಗೂ ಬಂಧುಸ್ವರೂಪನೂ ಆದ ಕೃಷ್ಣನಿಗೆ ನಮಸ್ಕಾರವು.

೩೦. ಎಲೈ ಹಿಮವಂತನೇ, ಜಗತ್ತಿಗೆ ಗುರುವಾದ ಧರ್ಮನು ಈ ರೀತಿಯಾಗಿ ಸ್ತೋತ್ರಮಾಡಿ ಆ ಪತಿವ್ರತೆಯ ಮುಂದೆ ನಿಂತುಕೊಂಡನು. ಆಗ ಆ ಪತಿವ್ರತೆಯು ಅವನನ್ನು ಧರ್ಮನೆಂದು ತಿಳಿದು ಈ ರೀತಿಯಾಗಿ ಹೇಳಿದಳು.

೩೧. ಪದ್ಮೆಯು :—ಎಲೈ ಧರ್ಮನೇ, ನೀನೇ ಎಲ್ಲರೂ ಮಾಡುವ ಎಲ್ಲಾ ವಿಧವಾದ ಕರ್ಮಗಳಿಗೂ ಸಾಕ್ಷಿಯಾಗಿರುವೆ. ಸರ್ವಜ್ಞನೂ ಸಕಲರ ಅಭಿಪ್ರಾಯ ವನ್ನು ಬಲ್ಲವನೂ ಆಗಿರುವೆ. ಅಲ್ಲದೆ ಸಕಲರ ಹೃದಯದಲ್ಲಿಯೂ ವಾಸಮಾಡುವೆ.

೩೨. ಇಂಥಾ ನೀನು ನನ್ನ ಮನಸ್ಸನ್ನು ತಿಳಿಯುವುದಕ್ಕಾಗಿ ಬಂದು ದಾಸಿಯಾದ ನನ್ನನ್ನು ಏಕೆ ನಾಚಿಸುತ್ತಿರುವೆ? ನಿನ್ನ ವಿಷಯದಲ್ಲಿ ನಾನು ಮಾಡಿದ ಕೆಲಸವು ನನ್ನ ಅಪರಾಧವಾಗಿದೆ

ತ್ವಂ ಚ ಶಪ್ತೋ ಮಯೋಽಜ್ಞಾನಾತ್ ಸ್ತ್ರೀಸ್ವಭಾವಾತ್ ಕ್ರುಧಾ ವಿಭೋ ।
ಕಾ ವ್ಯವಸ್ಥಾ ಭವೇತ್ತಸ್ಯ ಚಿಂತಯಾಮಿತಿ ಸಾಂಪ್ರತಂ ॥ ೩೩ ॥

ಆಕಾಶೋಽಸೌ ದಿಶಃಸರ್ವಾ ಯದಿ ನಶ್ಯಂತಿ ವಾಯವಃ ।
ತಥಾ ಪಿ ಸಾಧ್ವೀಶಾಪಸ್ತು ನ ನಶ್ಯತಿ ಕದಾಚನ ॥ ೩೪ ॥

ತ್ವಂ ಚ ನಷ್ಟೋ ಭವಸಿ ಚೇತ್ಸೃಷ್ಟಿನಾಶೋ ಭವೇತ್ತದಾ ।
ಇತಿಕರ್ತವ್ಯತಾ ಮೂಢಾ ತಥಾಪಿ ತ್ವಾಂ ವದಾಮ್ಯಹಂ ॥ ೩೫ ॥

ಸತ್ಯೇ ಪೂರ್ಣಶ್ಚತುಷ್ಪಾದೈಃ ಪೌರ್ಣಮಾಸ್ಯಾಂ ಯಥಾ ಶಶೀ ।
ವಿರಾಜಸೇ ದೇವರಾಜ ಸರ್ವಕಾಲಂ ದಿವಾನಿಶಂ ॥ ೩೬ ॥

ಪಾದಕ್ಷಯಶ್ಚ ತ್ರೇತಾಯಾಂ ಭಗವನ್ ಭವಿತಾ ತವ ।
ಪಾದೌ ಪರೌ ದ್ವಾಪರೇ ಚ ತೃತಿಯಶ್ಚ ಕಲೌ ವಿಭೋ ॥ ೩೭ ॥

---

೩೩. ಸ್ತ್ರೀಸ್ವಭಾವದಿಂದಲೂ, ತಿಳಿವಳಿಕೆಯಿಲ್ಲದುದರಿಂದಲೂ, ಕೋಪದಿಂದಲೂ ಸಹ ನೀನು ನನ್ನಿಂದ ಶಪಿಸಲ್ಪಟ್ಟಿರುವೆ. ಎಲೈ ಪ್ರಭುವೇ, ಈ ಶಾಪದಿಂದ ಮುಂದೆ ಯಾವ ತೊಂದರೆಯುಂಟಾಗಬಹುದೋ ಎಂದು ಯೋಚಿಸುತ್ತಿರುವೆನು.

೩೪. ಈ ಆಕಾಶವೂ, ಸಮಸ್ತ ದಿಕ್ಕುಗಳೂ, ಸಪ್ತ ವಾಯುಗಳೂ ನಾಶವಾದರೂ ಕೂಡ ಪತಿವ್ರತೆಯರ ಶಾಪವು ಮಾತ್ರ ಎಂದೆಂದಿಗೂ ನಾಶವಾಗಲಾರದು.

೩೫. ನೀನು ನಾಶಹೊಂದಿದೆಯಾದರೆ ಆಗಲೇ ಸೃಷ್ಟಿಯು ನಾಶವಾಗುತ್ತದೆ. ಆದುದರಿಂದ ನಾನು ಮುಂದೇನು ಮಾಡಬೇಕೆಂಬುದನ್ನು ತಿಳಿಯದವಳಾಗಿದ್ದೇನೆ. ಆದರೂ ನಿನ್ನನ್ನು ಕುರಿತು ಈ ಮಾತನ್ನು ಹೇಳುತ್ತೇನೆ.

೩೬. ಎಲೈ ದೇವರಾಜನೇ, ನೀನು ಸತ್ಯಯುಗದಲ್ಲಿ ಹುಣ್ಣಿಮೆಯ ಚಂದ್ರನಂತೆ ನಾಲ್ಕು ಕಾಲುಗಳಿಂದ ಪೂರ್ಣನಾಗಿ ಹಗಲು ರಾತ್ರಿ ಎಲ್ಲಾ ಕಾಲಗಳಲ್ಲಿಯೂ ಪ್ರಕಾಶಿಸುವೆ.

೩೭. ಎಲೈ ಪೂಜ್ಯನೇ ತ್ರೇತಾಯುಗದಲ್ಲಿ ನಿನ್ನ ಒಂದು ಪಾದವು ಕ್ಷಯವಾಗುತ್ತದೆ. ದ್ವಾಪರಯುಗದಲ್ಲಿ ಎರಡು ಪಾದಗಳು ನಾಶವಾಗುತ್ತವೆ. ಕಲಿಯುಗದಲ್ಲಿ ಮೂರು ಪಾದಗಳು ಕ್ಷಯಿಸುತ್ತವೆ.

ಕಲಿಶೇಷೇ ಶೇಷಪಾದಸ್ತವಾಽಽಚ್ಛನ್ನೋ ಭವಿಷ್ಯತಿ ।
ಪುನಃ ಸತ್ಯೇ ಸಮಾಯಾತೇ ಪರಿಪೂರ್ಣೋ ಭವಿಷ್ಯಸಿ ॥ ೩೮ ॥

ಸತ್ಯೇ ಸರ್ವವ್ಯಾಪಕಸ್ತ್ವಂ ತದನ್ಯೇಷು ಚ ಕುತ್ರಚಿತ್ ।
ಯತ್ರ ಸ್ಥಾನಂ ತವಾಧಾರೋ ವದಾಮಿ ಶ್ರೂಯತಾಂ ವಿಭೋ ॥ ೩೯ ॥

ವೈಷ್ಣವೇಷು ಚ ಸರ್ವೇಷು ಯತಿಷು ಬ್ರಹ್ಮಚಾರಿಷು ।
ಪತಿವ್ರತಾಸು ಪ್ರಾಜ್ಞೇಷು ವಾನಪ್ರಸ್ಥೇಷು ಭಿಕ್ಷುಷು ॥ ೪೦ ॥

ನೃಪೇಷು ಧರ್ಮಶೀಲೇಷು ಸತ್ಸು ಸದ್ವೈಶ್ಯಜಾತಿಷು ।
ದ್ವಿಜಸೇವಿಷು ಶೂದ್ರೇಷು ಸತ್ಸಂಸರ್ಗಸ್ಥಿತೇಷು ಚ ॥ ೪೧ ॥

ಏಷು ತ್ವಂ ಸತತಂ ಪೂರ್ಣೋ ಧರ್ಮರಾಜ ವಿರಾಜಸೇ ।
ಯುಗೇ ಯುಗೇ ತವಾಽಽಧಾರಾ ಯತ್ರ ಪುಣ್ಯತಮಾ ಜನಾಃ ॥ ೪೨ ॥

---

೩೮. ಕಲಿಯುಗದ ಕೊನೆಯಲ್ಲಿ ನಿನ್ನ ಉಳಿದೊಂದು ಪಾದವೂ ಕಾಣಿಸ ದಾಗುತ್ತದೆ. ಮತ್ತೆ ಸತ್ಯಯುಗವು ಬರಲು ನೀನು ಮೊದಲಿನಂತೆ ಸಂಪೂರ್ಣವಾದ ರೂಪ ಉಳ್ಳವನಾಗುವೆ.

೩೯. ಸತ್ಯಯುಗದಲ್ಲಿ ನೀನು ಎಲ್ಲೆಡೆಯಲ್ಲಿಯೂ ವ್ಯಾಪಿಸಿಕೊಂಡಿರುವೆ. ಉಳಿದ ಯುಗಗಳಲ್ಲಿ ಕೆಲವೆಡೆಗಳಲ್ಲಿ ಮಾತ್ರ ವ್ಯಾಪಕನಾಗಿರುವೆ. ಎಲೈ ವ್ಯಾಪಕನೇ, ನಿನಗೆ ಆಧಾರವಾದ ಸ್ಥಳಗಳನ್ನು ಹೇಳುವೆನು ಕೇಳು.

೪೦. ಎಲ್ಲಾ ವಿಷ್ಣುಭಕ್ತರಲ್ಲಿಯೂ, ಯತಿಗಳಲ್ಲಿಯೂ, ಬ್ರಹ್ಮಚಾರಿ ಗಳಲ್ಲಿಯೂ, ಪತಿವ್ರತೆಯರಲ್ಲಿಯೂ, ವಿದ್ವಾಂಸರಲ್ಲಿಯೂ, ವಾನಪ್ರಸ್ಥಾಶ್ರಮವನ್ನು ಕೈಗೊಂಡವರಲ್ಲಿಯೂ ನೀನು ಇರು.

೪೧. ಧರ್ಮಪರರಾದ ಉತ್ತಮ ರಾಜರಲ್ಲಿಯೂ, ಉತ್ತಮ ವೈಶ್ಯ ಜಾತಿಯವ ರಲ್ಲಿಯೂ, ಬ್ರಾಹ್ಮಣರನ್ನು ಸೇವೆಮಾಡಿಕೊಂಡಿರುವ ವೈಶ್ಯರಲ್ಲಿಯೂ, ಉತ್ತಮರ ಸಹವಾಸದಲ್ಲಿರುವವರಲ್ಲಿಯೂ ನೀನು ಇರು.

೪೨. ಎಲೈ ಧರ್ಮರಾಜನೇ, ಪ್ರತಿ ಯುಗದಲ್ಲಿಯೂ ಎಲ್ಲಿ ಪುಣ್ಯವಂತರಾದ ಜನರು ಇರುತ್ತಾರೆಯೋ ಆ ಸ್ಥಳವು ನಿನಗೆ ಆಶ್ರಯವಾಗಿರುತ್ತದೆ. ಮೇಲೆ ಹೇಳಿದ ಸ್ಥಳಗಳಲ್ಲಿ ನೀನು ಯಾವಾಗಲೂ ಪರಿಪೂರ್ಣನಾಗಿ ವಿರಾಜಿಸುವೆ.

ಅಶ್ವತ್ಥವಟಬಿಲ್ವೇಷು ತುಲಸೀ ಚಂದನೇಷು ಚ ।
ದೀಕ್ಷಾ ಪರೀಕ್ಷಾ ಶಪಥಗೋಷ್ಠಗೋಷ್ಪದ ಭೂಮಿಷು ॥ ೪೩ ॥

ದೇವಾರ್ಹೇಷು ಚ ಪುಷ್ಪೇಷು ವಿದ್ಯಮಾನೋಽಸಿ ಶಾಖಿಷು ।
ದೇವಾಲಯೇಷು ತೀರ್ಥೇಷು ಸತಾಂ ಶಶ್ವದ್ಗೃಹೇಷು ಚ ॥ ೪೪ ॥

ವೇದವೇದಾಂಗಶ್ರವಣೇ ಜಲೇಷು ಚ ಸಭಾಸು ಚ ।
ಶ್ರೀಕೃಷ್ಣಗುಣನಾಮೋಕ್ತ ಶ್ರುತಿಗೀತಸ್ಥಲೇಷು ಚ ॥ ೪೫ ॥

ವ್ರತಪೂಜಾತಪೋನ್ಯಾಯ ಯಜ್ಞಸಾಕ್ಷ್ಯಸ್ಥಲೇಷು ಚ ।
ಗವಾಂ ಗೃಹೇಷು ಗೋಷ್ಠೇವ ವಿದ್ಯಮಾನೋ ಹಿ ಪಶ್ಯಸಿ ॥ ೪೬ ॥

---

೪೩. ಅರಳಿ ಆಲ ಮತ್ತು ಬಿಲ್ವವೃಕ್ಷಗಳಲ್ಲಿಯೂ, ತುಳಸೀ ಮತ್ತು ಗಂಧದ ಗಿಡಗಳಲ್ಲಿಯೂ, ದೀಕ್ಷಾಸ್ಥಾನ, ಪರೀಕ್ಷಾಸ್ಥಾನ, ಶಪಥಸ್ಥಾನ, ಕೊಟ್ಟಿಗೆ, ಗೋವಿನ ಪಾದದ ಗುರುತುಳ್ಳ ಭೂಮಿ, ದೇವರ ಪೂಜೆಗೆ ಯೋಗ್ಯವಾದ ಹೂವುಗಳುಳ್ಳ ಮರಗಳಲ್ಲಿಯೂ ಇರುವವನಾಗುವೆ.

೪೪. ವೇದ ಮತ್ತು ವೇದಾಂತಗಳ ಶ್ರವಣವಾಗುವಲ್ಲಿಯೂ, ನೀರಿನಲ್ಲಿಯೂ ಸಭೆಯಲ್ಲಿಯೂ ಶ್ರೀ ಕೃಷ್ಣನ ಗುಣಗಣಗಳ ಹೆಸರುಗಳನ್ನು ಹೇಳುತ್ತಿರುವ ವೇದ ಮತ್ತು ಗೀತೆ ಇವುಗಳುಳ್ಳ ಸ್ಥಳಗಳಲ್ಲಿಯೂ ಇರುವವನಾಗುವೆ.

೪೫. ವ್ರತಗಳು, ಪೂಜೆಗಳು ತಪಸ್ಸು, ನ್ಯಾಯ, ಯಜ್ಞ ಇವುಗಳ ಸ್ಥಳಗಳಲ್ಲಿ, ಹಸುಗಳಿರುವ ಮನೆಗಳು ಮತ್ತು ಹಸುವಿನ ಕೊಟ್ಟಿಗೆ ಇವುಗಳಲ್ಲಿ ಇರುವವನಾಗುವೆ.

೪೬. ಎಲೈ ಧರ್ಮನೇ, ಮೇಲೆ ಹೇಳಿದ ಸ್ಥಳಗಳಲ್ಲಿರುವ ನಿನಗೆ ಕ್ಷೀಣತೆಯು ಬರುವುದಿಲ್ಲ. ಅವುಗಳನ್ನು ಬಿಟ್ಟು ಉಳಿದ ಸ್ಥಳದಲ್ಲಿರುವ ನಿನಗೆ ಕ್ಷೀಣವೆತೆಯುಂಟಾಗುತ್ತದೆ. ಇನ್ನು ನೀನು ಪ್ರವೇಶಿಸಬಾರದ ಸ್ಥಳವನ್ನು ಹೇಳುವೆನು ಕೇಳು.

ಕೃತಶಾ ತೇ ನ ಭವಿತಾ ಧರ್ಮ ತೇಷು ಸ್ಥಲೇಷು ಚ ।
ಏತದನ್ಯೇಷು ಕೃತಶಾ ಯದಗಮ್ಯಂ ಚ ತಚ್ಛೃಣು ॥ ೪೭ ॥

ಪುಂಶ್ಚಲೀಷು ಚ ಸರ್ವಾಸು ಗೃಹೇಷು ನರಘಾತಿನಾಂ ।
ನರಘಾತಿಷು ನೀಚೇಷು ಮೂರ್ಖೇಷು ಚ ಖಲೇಷು ಚ ॥ ೪೮ ॥

ದೇವತಾಗುರುವಿಪ್ರೇಷ್ವಪಾಲ್ಯಾನಾಂ ಧನಹಾರಿಷು ।
ಅಸನ್ನರೇಷು ಧೂರ್ತೇಷು ಚೌರೇಷು ರತಿಭೂಮಿಷು ॥ ೪೯ ॥

ದುರೋದರಸುರಾಪಾನಕಲಹಾನಾಂ ಸ್ಥಲೇಷು ಚ ।
ಶಾಲಗ್ರಾಮಸಾಧುತೀರ್ಥಪುರಾಣರಹಿತೇಷು ಚ ॥ ೫೦ ॥

ದಸ್ಯುಸ್ನೇಹೇಷು ವಾದೇಷು ತಾಲಚ್ಛಾಯಾಸು ಗರ್ವಿಷು ।
ಅಸೀಜೀವಿಮಷೀಜೀವಿದೇವಲಗ್ರಾಮಯಾಜಿಷು ॥ ೫೧ ॥

ವೃಷವಾಹಸ್ವರ್ಣಕಾರಜೀವಹಿಂಸೋಪಜೀವಿಸು ।
ಭರ್ತೃನಿಂದಿತನಾರೀಷು ಸ್ತ್ರೀಜಿತೇಷು ಚ ಪುಂಸು ಚ ॥ ೫೨ ॥

೪೭–೫೦. ಎಲ್ಲಾ ಕುಲಟೆಯರಲ್ಲಿಯೂ, ಮನುಷ್ಯರನ್ನು ಕೊಲ್ಲುವವರ ಮನೆಯಲ್ಲಿಯೂ, ದೇವರ, ಗುರುಗಳ, ಬ್ರಾಹ್ಮಣರ, ಮಿತ್ರರ, ರಾಜರ, ದ್ರವ್ಯಗಳನ್ನು ಅಪಹಾರಮಾಡುವವರಲ್ಲಿಯೂ, ದುರ್ಮಾರ್ಗಗಾಮಿಗಳಲ್ಲಿಯೂ, ಧೂರ್ತರಲ್ಲಿಯೂ, ಕಳ್ಳರಲ್ಲಿಯೂ, ರತಿಕ್ರೀಡೆಯು ನಡೆಯುವ ಸ್ಥಳಗಳಲ್ಲಿಯೂ, ಜೂಜು, ಮದ್ಯಪಾನ, ಜಗಳ ಇವುಗಳು ನಡೆಯುವ ಸ್ಥಳಗಳಲ್ಲಿಯೂ, ಸಾಲಿಗ್ರಾಮ, ಸತ್ಪುರುಷರು, ಪುಣ್ಯ ತೀರ್ಥ, ಪುರಾಣ ಇವುಗಳಿಲ್ಲದ ಸ್ಥಳಗಳಲ್ಲಿಯೂ ಇರಲು ನಿನಗೆ ಅವಕಾಶವಿಲ್ಲ.

೫೧–೫೪. ಕಳ್ಳರ ಸ್ನೇಹಮಾಡುವವರಲ್ಲಿಯೂ, ವಾದದಲ್ಲಿಯೂ, ಅಹಂಕಾರಿಗಳಲ್ಲಿಯೂ, ಶಸ್ತ್ರವ್ಯಾಪಾರದಿಂದಲೂ, ಮಶಿಯ ವ್ಯಾಪಾರದಿಂದಲೂ ಜೀವಿಸುವವರಲ್ಲಿಯೂ ಕೂಲಿಗೋಸ್ಕರ ದೇವರಪೂಜೆಯನ್ನು ಮಾಡುವವನಲ್ಲಿಯೂ, ಗ್ರಾಮ ಪುರೋಹಿತನಲ್ಲಿಯೂ, ಎತ್ತಿನ ಮೇಲೆ ಸಂಚಾರಮಾಡುವವನಲ್ಲಿಯೂ, ವಿಶ್ವಕರ್ಮರಲ್ಲಿಯೂ, ಪ್ರಾಣಿಹಿಂಸೆಯಿಂದ ಜೀವಿಸುವವರಲ್ಲಿಯೂ, ಪತಿಯನ್ನು ನಿಂದಿಸುವ ಸ್ತ್ರೀಯರಲ್ಲಿಯೂ, ಸ್ತ್ರೀಯರಿಂದ ಜಯಿಸಲ್ಪಟ್ಟ ಪುರುಷರಲ್ಲಿಯೂ, ದೀಕ್ಷೆ, ಸಂಧ್ಯಾ

ದೀಕ್ಷಾಸಂಧ್ಯಾ ವಿಷ್ಣುಭಕ್ತಿವಿಹೀನೇಷು ದ್ವಿಜೇಷು ಚ ।
ಸ್ವಾಂಗಕನ್ಯಾವಿಕ್ರಯಿಷು ಸ್ವಯೋಷಿದ್ವಿಕ್ರಯೋಷ್ವಥ ॥ ೫೩ ॥

ಶಾಲಗ್ರಾಮಸುರಗ್ರಂಥಭೂಮಿವಿಕ್ರಯಿಷು ಪ್ರಭೋ ।
ಮಿತ್ರದ್ರೋಹಿಕೃತಘ್ನೇಷು ಸತ್ಯವಿಶ್ವಾಸಘಾತಿಷು ॥ ೫೪ ॥

ಶರಣಾಗತಹೀನೇಷು ಚಾಶ್ರಿತಘ್ನೇಷು ನೃಷ್ವಪಿ ।
ಶಶ್ವನ್ಮಿಥ್ಯೋಕ್ತಿಶೀಲೇಷು ತಥಾ ಸೀಮಾಪಹಾರಿಷು ॥ ೫೫ ॥

ಕಾಮಾತ್ಕ್ರೋಧಾತ್ತಥಾ ಲೋಭಾನ್ಮಿಥ್ಯಾಸಾಕ್ಷ್ಯಪ್ರವಾದಿಷು ।
ಪುಣ್ಯಕರ್ಮವಿಹೀನೇಷು ಪುಣ್ಯಕರ್ಮವಿರೋಧಿಷು ॥ ೫೬ ॥

ಸ್ಥಾತುಮೇತೇಷು ನಿಂದ್ಯೇಷು ನಾಧಿಕಾರಸ್ತವ ಪ್ರಭೋ ।
ಮಮಾಪಿ ವಚನಂ ಸತ್ಯಂ ಬಭೂವ ಚ ಕ್ಷಣಂ ತವ ॥ ೫೭ ॥

ವಂದನೆ ಇವುಗಳನ್ನು ಬಿಟ್ಟಿರುವವರಲ್ಲಿಯೂ, ವಿಷ್ಣುಭಕ್ತಿರಹಿತ ಬ್ರಾಹ್ಮಣರಲ್ಲಿಯೂ, ತನ್ನ ಮಗಳನ್ನೂ ಪತ್ನಿಯನ್ನೂ ಮಾರುವವರಲ್ಲಿಯೂ, ಸಾಲಿಗ್ರಾಮವನ್ನೂ ವೇದವನ್ನೂ ಭೂಮಿಯನ್ನೂ ಮಾರುವವರಲ್ಲಿಯೂ, ಮಿತ್ರರಿಗೆ ದ್ರೋಹವನ್ನು ಮಾಡುವವರಲ್ಲಿಯೂ, ಕೃತಘ್ನರಲ್ಲಿಯೂ, ಸತ್ಯವನ್ನೂ ವಿಶ್ವಾಸವನ್ನೂ ನಾಶಪಡಿಸುವವರಲ್ಲಿಯೂ ಇರಲು ನಿನಗೆ ಅವಕಾಶವಿಲ್ಲ.

೫೫–೫೭. ಮರೆಹೊಕ್ಕವರಲ್ಲಿ ಹೀನವಾಗಿ ವರ್ತಿಸುವವರಲ್ಲಿಯೂ, ಯಾವಾಗಲೂ ಸುಳ್ಳುಮಾತನ್ನಾಡುವವರಲ್ಲಿಯೂ ಮತ್ತು ಹೊಲಗದ್ದೆಗಳನ್ನಪಹರಿಸುವವರಲ್ಲಿಯೂ, ಬುದ್ಧಿಪೂರ್ವಕವಾಗಿಯೋ, ಕೋಪದಿಂದಲೋ, ಆಶೆಯಿಂದಲೋ, ಸುಳ್ಳುಸಾಕ್ಷಿಯನ್ನು ಹೇಳುವವರಲ್ಲಿಯೂ, ಪುಣ್ಯಕೆಲಸಗಳನ್ನು ಮಾಡದವರಲ್ಲಿಯೂ, ಪುಣ್ಯಕೆಲಸಗಳನ್ನು ದ್ವೇಷಿಸುವವರಲ್ಲಿಯೂ, ಈ ವಿಧವಾದ ನಿಂದಿತ ಸ್ಥಳ ಮತ್ತು ಜನರಲ್ಲಿ ಇರಲು ನಿನಗೆ ಅಧಿಕಾರವಿಲ್ಲ. ನನ್ನ ಈ ಮಾತು ಸ್ವಲ್ಪಕಾಲ ನಿನ್ನ ವಿಷಯದಲ್ಲಿ ಸತ್ಯವಾಯಿತು.

ಯಾಸ್ಯಾಮಿ ಪತಿಸೇವಾಯೈ ಗಚ್ಛ ತಾತ ಸ್ವಮಂದಿರಂ ।
ಇತ್ಯೇವಂ ವಾದಿನೀಂ ಸಾಧ್ವೀಮುವಾಚ ವಿಧಿನಂದನಃ ।
ಪ್ರಸನ್ನವದನಃ ಶ್ರೀಮಾನತೀವ ವಿನಯಂ ವಚಃ ॥ ೫೮ ॥

॥ ಧರ್ಮ ಉವಾಚ ॥

ಧನ್ಯಾಸಿ ಪತಿಭಕ್ತಾऽಸಿ ಸ್ವಸ್ತಿ ತೇऽಸ್ತು ಚ ಸಂತತಂ ॥ ೫೯ ॥

ವರಂ ಗೃಹಾಣ ದಾಸ್ಯಾಮಿ ಮತ್ಪರಿತ್ರಾಣಕಾರಿಣಿ ।
ಯುವಾ ಭವತು ಭರ್ತಾ ತೇ ರತಿಶೂರಶ್ಚ ಕನ್ಯಕೇ ॥ ೬೦ ॥

ರೂಪವಾನ್ಗುಣವಾನ್ ಸಾಧ್ವಿ ಸಂತತಂ ಸ್ಥಿರಯೌವನಃ ।
ಪರಮೈಶ್ವರ್ಯಸಂಯುಕ್ತಾ ತ್ವಂ ಭವ ಸ್ಥಿರಯೌವನಾ ॥ ೬೧ ॥

ಚಿರಜೀವೀ ಭವತು ಸ ಮಾರ್ಕಂಡೇಯಾತ್ಪರಃ ಸುತೇ ।
ಕುಬೇರಾದ್ಧನವಾಂಶ್ಚೈವ ಶಕ್ರಾದೈಶ್ವರ್ಯವಾನಪಿ ॥ ೬೨ ॥

---

೫೮. ಎಲೈ ಧರ್ಮನೇ, ನಾನಿನ್ನು ನನ್ನ ಪತಿಯ ಸೇವೆಯನ್ನು ಮಾಡಲು ಹೊರಡುತ್ತೇನೆ. ಎಲೈ ತಂದೆಯೇ, ನೀನು ನಿನ್ನ ಮನೆಗೆ ಹೊರಡು. ಈ ಪ್ರಕಾರ ಹೇಳುತ್ತಿರುವ ಪತಿವ್ರತಿಯಾದ ಪದ್ಮೆಯನ್ನು ಕುರಿತು. ಬ್ರಹ್ಮಪುತ್ರನಾದ ಧರ್ಮ ಪ್ರಶಾಂತವಾದ ಮುಖದಿಂದ ವಿನಯಪೂರ್ವಕವಾಗಿ ಮಾತನಾಡಿದನು.

೫೯–೬೦. ಧರ್ಮನು:—ಎಲೈ ನನ್ನನ್ನು ಉದ್ಧಾರಮಾಡಿದವಳೇ ನೀನು ಧನ್ಯಳು ಮತ್ತು ಪತಿಭಕ್ತಿಯುಳ್ಳವಳು. ನಿನಗೆ ಯಾವಾಗಲೂ ಮಂಗಳವಾಗಲಿ. ನಾನು ನಿನಗೆ ವರವನ್ನು ಕೊಡುವೆನು ಸ್ವೀಕರಿಸುವವಳಾಗು. ನಿನ್ನ ಪತಿಯು ಯಾವಾಗಲೂ ಯುವಕನೂ, ರತಿಕ್ರೀಡೆಗಳಲ್ಲಿ ನಿಪುಣನೂ ಆಗಿರಲಿ.

೬೧. ಮತ್ತು ನಿನ್ನ ಪತಿಯು ಯಾವಾಗಲೂ ರೂಪವಂತನೂ, ಗುಣವಂತನೂ, ಸ್ಥಿರವಾದ ಯೌವನವುಳ್ಳವನೂ ಆಗಿರಲಿ. ನೀನೂ ಕೂಡ ಉತ್ತಮವಾದ ಐಶ್ವರ್ಯ ವುಳ್ಳವಳೂ, ಸ್ಥಿರವಾದ ಯೌವನವುಳ್ಳವಳೂ ಆಗು.

೬೨. ಮಗಳೇ ನಿನ್ನ ಪತಿಯು ಮಾರ್ಕಂಡೇಯನಿಗಿಂತಲೂ ಉತ್ತಮವಾದ ಚಿರಂಜೀವಿಯಾಗಿರಲಿ. ಕುಬೇರನಿಗಿಂತಲೂ ಹೆಚ್ಚು ಧನವಂತನಾಗಲಿ. ಇಂದ್ರನಿ ಗಿಂತಲೂ ಹೆಚ್ಚು ಐಶ್ವರ್ಯವಂತನಾಗಲಿ.

ವಿಷ್ಣುಭಕ್ತಃ ಶಿವಸಮಃ ಸಿದ್ಧಸ್ತು ಕಪಿಲಾತ್ಪರಃ ।
ಸ್ವಾಮಿಸೌಭಾಗ್ಯಸಂಯುಕ್ತಾ ಭವ ತ್ವಂ ಜೀವನಾವಧಿ　　॥ ೬೩ ॥

ಗೃಹಾ ಭವಂತು ತೇ ಸಾಧ್ವಿ ಕುಬೇರಭವನಾಧಿಕಾಃ ।
ಮಾತಾ ತ್ವಂ ದಶಪುತ್ರಾಣಾಂ ಗುಣಿನಾಂ ಚಿರಜೀವಿನಾಂ　　॥ ೬೪ ॥

ಸ್ವಭರ್ತುರಧಿಕಾನಾಂ ಚ ಭವಿಷ್ಯಸಿ ನ ಸಂಶಯಃ ।
ಇತ್ಯೇವಮುಕ್ತ್ವಾ ಸಂತಸ್ಥೌ ಧರ್ಮರಾಜಶ್ಚ ಪರ್ವತ　　॥ ೬೫ ॥

ಸಾ ತಂ ಪ್ರದಕ್ಷಿಣೀಕೃತ್ಯ ಪ್ರಣಮ್ಯ ಸ್ವಗೃಹಂ ಯಯೌ ।
ಧರ್ಮಸ್ತಾಮಾಶಿಷಂ ಯುಕ್ತ್ವಾ ಜಗಾಮ ನಿಜಮಂದಿರಂ　　॥ ೬೬ ॥

ಪತಿವ್ರತಾಂ ಪ್ರಶಶಂಸ ಪ್ರತಿಸಂಸದಿ ಸಂಸದಿ ।
ಸಾ ರೇಮೇ ಸ್ವಾಮಿನಾ ಸಾರ್ಧಂ ಯೂನಾ ರಹಸಿ ಸಂತತಂ　　॥ ೬೭ ॥

---

೬೩. ಮತ್ತು ವಿಷ್ಣುಭಕ್ತನೂ, ಶಿವನಿಗೆ ಸಮಾನನೂ, ಕಪಿಲ ಮುನಿಗಿಂತಲೂ ಉತ್ತಮನಾದ ಸಿದ್ಧನೂ ಆಗಿರಲಿ. ನೀನು ಬದುಕಿರುವವರೆಗೂ ಪತಿ ಸೌಭಾಗ್ಯದಿಂದ ಕೂಡಿರುವವಳಾಗಿರು.

೬೪–೬೫. ಎಲೈ ಪತಿವ್ರತೆಯೇ, ನಿನ್ನ ಮನೆಯು ಕುಬೇರನ ಮನೆಗಿಂತಲೂ ಹೆಚ್ಚಾಗಿ ಶೋಭಿಸಲಿ. ನೀನು ನಿನ್ನ ಗಂಡನಿಗಿಂತಲೂ ಉತ್ತಮರಾದ ಗುಣವಂತರೂ ಚಿರಂಜೀವಿಗಳೂ ಆದ ಹತ್ತು ಮಕ್ಕಳಿಗೆ ತಾಯಿಯಾಗುವಿ, ಇದಕ್ಕೆ ಸಂಶಯವಿಲ್ಲ. ಎಲೈ ಹಿಮವಂತನೇ ಧರ್ಮರಾಜನು ಈ ರೀತಿಯಾಗಿ ಹೇಳಿ ಸುಮ್ಮನಾದನು.

೬೬. ಆ ಪತಿವ್ರತೆಯು ಧರ್ಮನಿಗೆ ಪ್ರದಕ್ಷಿಣೆಮಾಡಿ ನಮಸ್ಕಾರವನ್ನು ಮಾಡಿ ತನ್ನ ಮನೆಗೆ ಹೋದಳು. ಧರ್ಮನೂ ಕೂಡ ಆ ಪತಿವ್ರತೆಗೆ ಆಶೀರ್ವಾದವನ್ನು ಮಾಡಿ ತನ್ನ ಮನೆಗೆ ಹೋದನು.

೬೭. ಧರ್ಮನು ಎಲ್ಲಾ ಸಭೆಗಳಲ್ಲಿಯೂ, ಆ ಪತಿವ್ರತೆಯನ್ನು ಹೊಗಳುತ್ತಿದ್ದನು. ಆ ಪದ್ಮೆಯು ಯುವಕನಾದ ತನ್ನ ಪತಿಯೊಡನೆ ಸರ್ವದಾ ರತಿಕ್ರೀಡೆಯನ್ನನುಭವಿಸುತ್ತಿದ್ದಳು.

ಪಶ್ಚಾದ್ಬಭೂವುಃ ಸತ್ಪುತ್ರಾ ತದ್ಭರ್ತುರಧಿಕಾ ಗುಣೈಃ ।
ಶೈಲೇಂದ್ರ ಕಥಿತಂ ಸರ್ವಮಿತಿಹಾಸಂ ಪುರಾತನಂ ॥ ೬೮ ॥

ದತ್ತ್ವಾಽನರಣ್ಯಃ ಸ್ವಸುತಾಂ ರರಕ್ಷ ಸರ್ವಸಂಪದಂ ।
ತ್ವಮೇವ ಕನ್ಯಕಾಂ ದತ್ತ್ವಾ ಸರ್ವೇಷಾಮೀಶ್ವರಾಯ ಚ ॥ ೬೯ ॥

ರಕ್ಷ ಸರ್ವಬಂಧುವರ್ಗಾನಾತ್ಮನಃ ಸರ್ವಸಂಪದಂ ।
ಸಪ್ತಾಹೇ ಸಮತೀತೇ ಚ ದುರ್ಲಭೇಽತಿಶುಭೇ ಕ್ಷಣೇ । ॥ ೭೦ ॥

ಲಗ್ನಾಧಿಪೇ ಚ ಲಗ್ನಸ್ಥೇ ಚಂದ್ರೇ ಸ್ವತನಯಾನ್ವಿತೇ ।
ಮೋದತೇ ರೋಹಿಣೀಯುಕ್ತೇ ವಿಶುದ್ಧೇ ಚಂದ್ರತಾರಕೇ ॥ ೭೧ ॥

ಮಾರ್ಗಶೀರ್ಷೇ ಚಂದ್ರವಾರೇ ಸರ್ವದೋಷವಿವರ್ಜಿತೇ ।
ಸರ್ವಸದ್ಗ್ರಹಸಂದೃಷ್ಟೇ ಹ್ಯಸದ್ಗ್ರಹವಿವರ್ಜಿತೇ ॥ ೭೨ ॥

---

೬೮. ಕೆಲವು ಕಾಲಾನಂತರ ಅವಳಿಗೆ ತನ್ನ ಗಂಡನಿಗಿಂತಲೂ ಉತ್ತಮ ಗುಣವುಳ್ಳ ಮಕ್ಕಳು ಆದರು. ಎಲೈ ಪರ್ವತರಾಜನೇ, ಈ ಪ್ರಕಾರವಾದ ಹಿಂದಿನ ಕಥೆಯನ್ನು ನಿನಗೆ ಹೇಳಿರುವೆನು.

೬೯–೭೦. ಅನರಣ್ಯನು ತನ್ನ ಮಗಳನ್ನು ದಾನಮಾಡಿ ಸಕಲೈಶ್ವರ್ಯವನ್ನೂ ಕಾಪಾಡಿಕೊಂಡನು. ನೀನೂ ಕೂಡ ಸರ್ವೇಶ್ವರನಿಗೆ ಮಗಳನ್ನು ದಾನಮಾಡಿ ಬಂಧುಗಳನ್ನೂ, ನಿನ್ನ ಸಕಲ ಸಂಪತ್ತುಗಳನ್ನೂ ಕಾಪಾಡಿಕೋ. ಇನ್ನು ಏಳು ದಿನಗಳು ಕಳೆದನಂತರ ಅತ್ಯುತ್ತಮವಾದ ಮುಹೂರ್ತವಿರುತ್ತದೆ.

೭೧–೭೪. ಲಗ್ನಾಧಿಪತಿಯು ಲಗ್ನದಲ್ಲಿಯೂ. ಚಂದ್ರನು ಬುಧನೊಂದಿಗೂ, ರೋಹಿಣೀನಕ್ಷತ್ರದೊಡನೆಯೂ ಇದ್ದು, ಚಂದ್ರತಾರಾಬಲಯುಕ್ತವಾದ, ಮಾರ್ಗಶೀರ್ಷಮಾಸದ ಸೋಮವಾರದ ದಿನ, ಯಾವ ದೋಷವೂ ಇಲ್ಲದಿರುವ, ಎಲ್ಲಾ ಉತ್ತಮ ಗ್ರಹಗಳಿಂದಲೂ ನೋಡಲ್ಪಡುತ್ತಿರುವ, ನೀಚಗ್ರಹಗಳಿಲ್ಲದ, ಉತ್ತಮ

ಸದಪತ್ಯಪ್ರದೇತೀವ ಪತಿಸೌಭಾಗ್ಯದಾಯಿನಿ ।
ಅವೈಧವ್ಯಪ್ರದೇ ಸೌಖ್ಯಪ್ರದೇ ಜನ್ಮನಿ ಜನ್ಮನಿ ॥ ೭೩ ॥

ಅತ್ಯಂತ ಪ್ರೇಮಾವಿಚ್ಛೇದಪ್ರದಾಯಿನಿ ಪರಾತ್ಪರೇ ।
ಕನ್ಯಾ ಪ್ರದಾಯ ದೇವಾಯ ತ್ವಂ ಕೃತೀ ಭವ ಪರ್ವತ ॥ ೭೪ ॥

ಜಗದಂಬಾಂ ಜಗತ್ಪಿತ್ರೇ ಮೂಲಪ್ರಕೃತಿಮೀಶ್ವರೀಂ ।
ತೇಜಃಸ್ವರೂಪಾಂ ಸರ್ವೇಷಾಂ ದೇವಾನಾಂ ದೇವಪೂಜಿತಾಂ ॥ ೭೫ ॥

ಆವಿರ್ಭೂತಾ ಪುರಾ ಕಲ್ಪೇ ದೇವಾನಾಂ ರಕ್ಷಣಾಯ ಚ ।
ತೇಜೋರಾಶಿಃ ಸುರೌಘಾನಾಂ ಪ್ರಜ್ವಲಂತೀ ದಿಶೋ ದಶ ॥ ೭೬ ॥

ಅಸ್ಯಾಃ ಸ್ವತೇಜಸಾ ದೈತ್ಯಾಃ ಕೇಚಿದ್ದಗ್ಧಾಃ ಪಲಾಯಿತಾಃ ।
ಕೇಚಿದ್ಬಭೂವುಃ ಶೈಲೇಂದ್ರ ಭಸ್ಮೀ ಭೂತಾಶ್ಚ ಭೂತಲೇ ॥ ೭೭ ॥

ಪುತ್ರನನ್ನೂ ಪತಿಸೌಭಾಗ್ಯವನ್ನೂ ಪ್ರತಿ ಜನ್ಮದಲ್ಲೂ ಉಂಟುಮಾಡುವ, ಸೌಮಂಗಲ್ಯವನ್ನೂ ಸೌಖ್ಯವನ್ನೂ ಕೊಡುವ. ತಡೆಯಿಲ್ಲದ ಪ್ರೀತಿಯನ್ನುಂಟು ಮಾಡುವ ಅತಿಶ್ರೇಷ್ಠವಾದ ಮುಹೂರ್ತದಲ್ಲಿ ಕನ್ಯಾದಾನವನ್ನು ಮಾಡಿ ನೀನು ಕೃತಾರ್ಥನಾಗು.

೭೫. ಮೂಲಪ್ರಕೃತಿಸ್ವರೂಪಳಾದ, ಸಕಲ ದೇವತೆಗಳ ತೇಜೋರೂಪಳಾದ ದೇವತೆಗಳಿಗೂ ಪೂಜ್ಯಳಾದ ಜಗನ್ಮಾತೆಯನ್ನು ಜಗತ್ತಿಗೆ ತಂದೆಯಾದ ಈಶ್ವರನಿಗೆ ಕೊಟ್ಟು ಕೃತಾರ್ಥನಾಗು.

೭೬. ಈ ನಿನ್ನ ಮಗಳು ಹಿಂದಿನ ಕಲ್ಪದಲ್ಲಿ ದೇವತೆಗಳನ್ನು ಕಾಪಾಡುವ ಸಲುವಾಗಿ ರಾಕ್ಷಸರಿಗೆ ಬೆಂಕಿಯಂತೆ ಕಾಣುತ್ತ ತನ್ನ ಪ್ರಕಾಶದಿಂದ ಹತ್ತು ದಿಕ್ಕು ಗಳನ್ನು ಪ್ರಕಾಶಮಾಡುತ್ತ ಉದ್ಭವಿಸಿದ್ದಳು.

೭೭. ಎಲೈ ಪರ್ವತರಾಜನೇ, ಇವಳ ತೇಜಸ್ಸಿನಿಂದ ಕೆಲವು ರಾಕ್ಷಸರು ಸುಟ್ಟು ಓಡಿಹೋದರು. ಕೆಲವರು ನೆಲದಮೇಲೆ ಸುಟ್ಟು ಬೂದಿಯಾದರು.

ಬಿಲಂ ಪ್ರವಿವಿಶುಃ ಕೇಚಿನ್ಮೂರ್ಛಾಂ ಪ್ರಾಪುಶ್ಚ ಕೇಚನ ।
ಕೇಚಿದ್ದಂತೇ ತೃಣಂ ಕೃತ್ವಾ ಜಗ್ಮುಃ ಶರಣಮೀಶ್ವರೀಂ ॥ ೭೮ ॥

ಕೇಚಿಚ್ಛಿಕ್ಷಿಪುರಸ್ತ್ರಾಣಿ ಸ್ತಂಭಿತಾ ಅಪಿ ಕೇಚನ ।
ಕೇಚಿಚ್ಚಿರಂ ರಣಂ ಕೃತ್ವಾ ಯಯುಃ ಸ್ವರ್ಗಮನಾಮಯಂ ॥ ೭೯ ॥

ನಿಃಶತ್ರವೋ ಬಭೂವುಸ್ತೇ ಸುರಾ ಅಸ್ಯಾಃ ಪ್ರಸಾದತಃ ।
ಕೃಷ್ಣಾಜ್ಞಯಾ ಸಾ ಕಲ್ಪಾಂತೇ ದಕ್ಷಕನ್ಯಾ ಬಭೂವ ಹ ॥ ೮೦ ॥

ದಕ್ಷಶ್ಚ ವಿಧಿವದ್ದೇವೀಂ ಪ್ರದದೌ ಶೂಲಪಾಣಯೇ ।
ದೇವೇನ ಮತ್ಪಿತುರ್ಯಜ್ಞೇ ಸಹಸಾ ಸುರಸಂಸದಿ ॥ ೮೧ ॥

ಬಭೂವ ಕಲಹಃ ಶೈಲ ತೇನ ಶೂಲಭೃತಾ ಮಹಾನ್ ।
ಬ್ರಹ್ಮಾಣಂ ಚ ನಮಸ್ಕೃತ್ಯ ಯಯೌ ರುಷ್ಟಸ್ತ್ರಿಲೋಚನಃ ॥ ೮೨ ॥

---

೭೮. ಮತ್ತೆ ಕೆಲವರು ಬಿಲಗಳನ್ನು ಹೊಕ್ಕರು. ಉಳಿದ ಕೆಲವರು ಮೂರ್ಛೆಯನ್ನು ಹೊಂದಿದರು. ಇನ್ನು ಕೆಲವರು ಹಲ್ಲಿನಲ್ಲಿ ಹುಲ್ಲನ್ನು ಕಚ್ಚಿಕೊಂಡು ಈಶ್ವರಿಯನ್ನು ಮರೆಹೊಕ್ಕರು.

೭೯. ಕೆಲವರು ಬಾಣಗಳನ್ನು ಬಿಟ್ಟರು. ಕೆಲವರು ನಿಶ್ಚೇಷ್ಟಿತರಾದರು. ಮತ್ತಿತರರು ಬಹುಕಾಲ ಯುದ್ಧವನ್ನು ಮಾಡಿ ಸ್ವರ್ಗವನ್ನು ಸೇರಿದರು.

೮೦. ದೇವತೆಗಳು ಇವನ ಅನುಗ್ರಹದಿಂದ ಶತ್ರುಗಳಿಲ್ಲದವರಾದರು. ಹಿಂದಿನ ಕಲ್ಪದಲ್ಲಿ ಈ ದೇವಿಯು ಶ್ರೀಕೃಷ್ಣನ ಆಜ್ಞೆಯಿಂದ ದಕ್ಷಬ್ರಹ್ಮನ ಮಗಳಾಗಿ ಹುಟ್ಟಿದಳು

೮೧-೮೨. ದಕ್ಷನು ನಿಯಮಪೂರ್ವಕವಾಗಿ ಸತೀದೇವಿಯನ್ನು ಪರಮೇಶ್ವರನಿಗೆ ಕೊಟ್ಟನು. ಎಲೈ ಹಿಮವಂತನೇ, ನಮ್ಮ ತಂದೆಯಾದ ಬ್ರಹ್ಮನ ಯಾಗ ಸಂದರ್ಭದಲ್ಲಿ ದೇವತೆಗಳ ಎದುರಿನಲ್ಲಿ ದಕ್ಷಬ್ರಹ್ಮನಿಗೂ, ಈಶ್ವರನಿಗೂ ಕಲಹ ಪುಂಟಾಯಿತು. ಈಶ್ವರನು ಕೋಪಗೊಂಡವನಾಗಿ ಬ್ರಹ್ಮನಿಗೆ ನಮಸ್ಕಾರವನ್ನು ಮಾಡಿದವನಾಗಿ ಹೊರಟುಹೋದನು.

ದಕ್ಷಶ್ಚ ಸಗಣೋ ರುಷ್ಟಃ ಪ್ರಯಯೌ ಸ್ವಾಲಯಂ ತದಾ ।
ಕೋಪಾತ್ಸಂಭೃತಸಂಭಾರೋ ದಕ್ಷೋ ಯಜ್ಞಂ ಚಕಾರ ಹ ॥ ೮೩ ॥

ನ ದದೌ ಯಜ್ಞಭಾಗಂ ಚ ಮಾತ್ಸರ್ಯಾಚ್ಛೂಲಪಾಣಯೇ ।
ದೃಷ್ಟ್ವಾ ಸತೀ ಪ್ರಕುಪಿತಾ ಜನಕಂ ರಕ್ತಲೋಚನಾ ॥ ೮೪ ॥

ನಿರ್ಭರ್ತ್ಸ್ಯ ಚ ಬಹುತರಂ ಹೃದಯೇನ ವಿದೂಯತಾ ।
ಯಜ್ಞಸ್ಥಾನಾತ್ಸಮುತ್ಥಾಯ ಜಗಾಮ ಮಾತುರಂತಿಕಂ ॥ ೮೫ ॥

ಭವಿಷ್ಯಂ ಕಥಯಾಮಾಸ ತ್ರಿಕಾಲಜ್ಞಾ ಪರಾತ್ಪರಾ ।
ಯಜ್ಞಭಂಗಾದಿಕಂ ಸರ್ವಂ ಸ್ವಪಿತುಶ್ಚ ಪರಾಭವಂ ॥ ೮೬ ॥

ಪಲಾಯನಂ ಚ ದೇವಾನಾಂ ಯಜ್ಞಸ್ಥಾನಾದ್ಗಿರೀಶ್ವರಂ ।
ಮುನೀನಾ ಮೃತ್ವಿಜಾಂ ಚೈವ ಪರ್ವತಾನಾಂ ತಥೈವ ಚ ॥ ೮೭ ॥

ಜಯಂ ಶಂಕರಸೈನ್ಯಾನಾಂ ಸ್ವಾತ್ಮನೋ ಮೃತ್ಯುರೇವ ಚ ।
ಶೋಕಾತ್ಪರ್ಯಟನಂ ಭರ್ತುರ್ವಿರಹಾತುರಚೇತಸಾ ॥ ೮೮ ॥

---

೮೩. ಆಗ ದಕ್ಷನೂ ಕೂಡ ಕೋಪಿಸಿಕೊಂಡು ತನ್ನ ಮನೆಗೆ ಹೋದನು. ಮತ್ತು ಈಶ್ವರನ ಮೇಲಿನ ಕೋಪದಿಂದ ಸಕಲ ಸಂಭಾರಗಳನ್ನೂ ಸಿದ್ಧಪಡಿಸಿಕೊಂಡು ಯಾಗವೊಂದನ್ನು ಮಾಡಿದನು.

೮೪-೮೫. ಆ ಯಾಗದಲ್ಲಿ ಅಸೂಯೆಯಿಂದ ಈಶ್ವರನಿಗೆ ಹವಿರ್ಭಾಗವನ್ನು ಕೊಡಲಿಲ್ಲ. ಇದನ್ನು ಕಂಡು ಕೋಪಗೊಂಡ ಸತೀದೇವಿಯು ಕಣ್ಣುಗಳನ್ನು ಕೆಂಪು ಮಾಡಿಕೊಂಡು ತಂದೆಯನ್ನು ನಾನಾರೀತಿಯಿಂದ ನಿಂದಿಸುತ್ತ ಮನಸ್ಸಿನಲ್ಲಿ ವ್ಯಥೆಗೊಂಡವಳಾಗಿ ಯಜ್ಞಶಾಲೆಯಿಂದೆದ್ದು ತಾಯಿಯ ಬಳಿಗೆ ಹೊರಟುಹೋದಳು.

೮೬-೮೮. ಮೂರು ಕಾಲಗಳ ವಿಷಯಗಳನ್ನೂ ತಿಳಿದವಳಾದ ಪರಾತ್ಪರ ಸ್ವರೂಪಳಾದ ದೇವಿಯು ಮುಂದೊದಗಬಹುದಾದ ಯಾಗನಾಶ, ತನ್ನ ತಂದೆಯ ಅವಮಾನ, ದೇವತೆಗಳು ಯಾಗಮಂಟಪದಿಂದೋಡುವುದು, ಮುನಿಗಳು, ಋತ್ವಿಜರು, ಪರ್ವತಗಳು, ಇವರು ಓಡಿಹೋಗುವಿಕೆ, ಈಶ್ವರನ ಸೈನ್ಯದ ವಿಜಯ, ತನ್ನ ಮರಣ, ವಿರಹವ್ಯಥೆಯಿಂದಲೂ ದುಃಖದಿಂದಲೂ ತನ್ನ ಪತಿಯು ಅಲೆಯುವುದು. ಇವೇ ಮೊದಲಾದ ಎಲ್ಲಾ ವಿಚಾರಗಳನ್ನೂ ಹೇಳಿದಳು.

ನಿರ್ಮಾಣಂ ನೇತ್ರಸರಸಃ ಪ್ರಬೋಧಂ ಚ ಜನಾರ್ದನಾತ್ ।
ಮೂರ್ತಿಭೇದಾತ್ಮನಃ ಪ್ರೀತಿಂ ವಿಹಾರಂ ತಸ್ಯ ತತ್ಸಮಂ ॥ ೮೯ ॥

ಅಪರಂ ಭವಿತವ್ಯಂ ಚ ಸರ್ವಮುಕ್ತ್ವಾ ಜಗಾಮ ಸಾ ।
ಸ್ವಮಾತ್ರಾ ಭಗಿನೀಭಿಶ್ಚ ಪ್ರತಿಷಿದ್ಧಾ ಚ ದುಃಖಿತಾ ॥ ೯೦ ॥

ಬಭೂವಾದರ್ಶನಾ ಯೋಗಾತ್ಸರ್ವಾಸಾಂ ಸಿದ್ಧಿಯೋಗಿನೀ ।
ಗತ್ವಾ ಸಾ ಜಾಹ್ನವೀತೀರಂ ಸ್ಮೃತ್ವಾ ಸಂಪೂಜ್ಯ ಶಂಕರಂ ॥ ೯೧ ॥

ಸ್ಮೃತ್ವಾ ತಚ್ಚರಣಾಂಭೋಜಂ ದೇಹಂ ತತ್ಯಾಜ ಸುಂದರೀ ।
ಗಂಧಮಾದನದ್ರೋಣೀಸ್ಥಂ ಶರೀರಂ ಪ್ರವಿವೇಶ ಹ ॥ ೯೨ ॥

ಸಂಜಹಾರ ಪುರಾ ಯೇನ ದೈತ್ಯಾನಾಮಖಿಲಂ ಕುಲಂ ।
ಹಾಹಾಕಾರಂ ಪ್ರಚಕ್ರುಶ್ಚ ಸುರಾಃ ಸರ್ವೇऽತಿವಿಸ್ಮಿತಾಃ ॥ ೯೩ ॥

ಜಗ್ಮುಃ ಶಂಕರಸೇನಾಶ್ಚ ದಕ್ಷಯಜ್ಞಂ ವಿನಶ್ಯ ಚ ।
ಪರಾಭವಂ ಚ ಸರ್ವೇಷಾಂ ಕೃತ್ವಾ ಶೋಕಾತುರಾಃ ಪರಾಃ ॥ ೯೪ ॥

೮೯–೯೨ ಮತ್ತು ಕಣ್ಣೀರಿನ ಸರೋವರದ ನಿರ್ಮಾಣವನ್ನೂ, ವಿಷ್ಣುವಿನಿಂದ ಜ್ಞಾನಪಡೆಯುವಿಕೆಯನ್ನೂ ಶರೀರಭೇದದಿಂದ ಮತ್ತೆ ಸಂತೋಷವನ್ನೂ ಆ ಮೂರ್ತಿಯೊಡನೆ ವಿಹಾರವನ್ನೂ ಮುಂದಾಗುವ ಇನ್ನೂ ಅನೇಕ ವಿಷಯಗಳನ್ನೂ ಹೇಳಿ ತನ್ನ ತಾಯಿಯೂ, ಸಹೋದರಿಯರೂ ತಡೆಯುತ್ತಿದ್ದರೂ ಕೂಡ ದುಃಖಗೊಂಡವಳಾಗಿ ಯೋಗಸಿದ್ಧಿಯನ್ನು ಪಡೆದಿದ್ದ ಆ ಸತಿಯು ಎಲ್ಲರೂ ನೋಡುತ್ತಿರುವಂತೆಯೇ ಯೋಗದಿಂದ ಮಾಯವಾದಳು. ಮತ್ತು ಭಾಗೀರಥೀ ನದಿಯ ತೀರಕ್ಕೆ ಹೋಗಿ ಶಂಕರನನ್ನು ಧ್ಯಾನಮಾಡಿ ಅವನಿಗೆ ಪೂಜೆಯನ್ನು ಮಾಡಿ ಅವನ ಪಾದಕಮಲಗಳನ್ನು ಧ್ಯಾನಮಾಡುತ್ತಾ ಶರೀರವನ್ನು ಬಿಟ್ಟಳು. ಮತ್ತು ಗಂಧಮಾದನ ಪರ್ವತದ ಸಂಧಿಯಲ್ಲಿದ್ದ ಶರೀರವನ್ನು ಪ್ರವೇಶಮಾಡಿದಳು.

೯೩. ಆ ಶರೀರವಾವುದೆಂದರೆ ಹಿಂದೆ ಯಾವ ಶರೀರವನ್ನು ಹೊಂದಿ ಸಮಸ್ತ ರಾಕ್ಷಸರ ಕುಲವನ್ನೂ ನಿರ್ಮೂಲಮಾಡಿದ್ದಳೋ ಅದೇ ಶರೀರವು. ಆಗ ದೇವತೆಗಳೆಲ್ಲರೂ ಆಶ್ಚರ್ಯಗೊಂಡವರಾಗಿ ಹಾಹಾಕಾರವನ್ನು ಮಾಡಿದರು.

೯೪. ಈಶ್ವರನ ಸೈನ್ಯಗಳು ಹೋಗಿ ದಕ್ಷನ ಯಾಗವನ್ನು ನಾಶಮಾಡಿ ಎಲ್ಲರನ್ನೂ ಸೋಲಿಸಿ ಹೆಚ್ಚಾದ ದುಃಖದಿಂದ ಕೂಡಿದವರಾಗಿ ಈಶ್ವರನಸಿದ್ದೆಡೆಗೆ ಹೊರಟರು.

ಸತ್ವರಂ ಸರ್ವವೃತ್ತಾಂತಂ ಕಥಯಾಮಾಸುರೀಶ್ವರಂ ।
ಶ್ರುತ್ವಾ ಪ್ರವೃತ್ತಿಂ ಸಂಹರ್ತಾ ಸರ್ವರುದ್ರಗಣೈರ್ವೃತಃ ॥ ೯೫ ॥

ಮೂರ್ಛಾಂ ಸಂಪ್ರಾಪ ಶೋಕೇನ ಜ್ಞಾನಾನಂದಃ ಪರಾತ್ಪರಃ ।
ಕ್ಷಣೇನ ಚೇತನಾಂ ಪ್ರಾಪ್ಯ ಸಮುತ್ತಸ್ಥೌ ತ್ರಿಲೋಚನಃ ॥ ೯೬ ॥

ಜಗಾಮ ಸ್ವರ್ಣದೀತೀರಂ ಯತ್ರ ದೇವೀಕಲೇವರಂ ॥ ೯೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ಪೂರ್ವಾರ್ಧೇ ನಾರದನಾರಾಯಣಸಂವಾದೇ ರಾಧಾಕೃಷ್ಣ
ಸಂವಾದೇ ಸತೀದೇಹತ್ಯಾಗೋ ನಾಮ
ದ್ವಿಚತ್ವಾರಿಂಶೋಽಧ್ಯಾಯಃ

೯೫–೯೭. ಬೇಗನೆ ಹೋಗಿ ನಡೆದ ಸಮಸ್ತ ಸಮಾಚಾರವನ್ನೂ ಈಶ್ವರನಿಗೆ ತಿಳಿಸಿದರು. ಜಗತ್ಸಂಹಾರಕನಾದ ಈಶ್ವರನು ಈ ಸಮಾಚಾರವನ್ನು ಕೇಳಿ ತನ್ನ ಸಮಸ್ತ ಗಣಗಳೊಡನೆ ಜ್ಞಾನಸ್ವರೂಪನೂ, ಆನಂದಸ್ವರೂಪನೂ ಪರಾತ್ಪರನೂ ಆದ ಈಶ್ವರನು ದುಃಖದಿಂದ ಮೂರ್ಛೆಗೊಂಡನು. ಸ್ವಲ್ಪ ಹೊತ್ತಿನನಂತರ ಜ್ಞಾನವನ್ನು ಪಡೆದುಕೊಂಡು ಆ ಈಶ್ವರನು ಮೇಲಕ್ಕೆದ್ದು ಆ ದೇವಿಯ ಮೃತಶರೀರವು ಬಿದ್ದಿರುವ ದೇವಗಂಗಾ ನದಿಯ ದಡಕ್ಕೆ ಹೋದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ಪೂರ್ವಾರ್ಧದಲ್ಲಿನ ನಾರದ ನಾರಾಯಣ ಸಂವಾದದಲ್ಲಿ
ಸತೀ ದೇಹತ್ಯಾಗವೆಂಬ ನಲವತ್ತೆರಡನೆಯ
ಅಧ್ಯಾಯವು ಮುಗಿದುದು.

ನಲವತ್ತೆರಡನೆಯ ಅಧ್ಯಾಯದ ಸಾರಾಂಶ.

ಅನರಣ್ಯರಾಜನ ಮಗಳು ಪತಿಸೇವಾಪರಾಯಣೆಯಾಗಿದ್ದು ಒಮ್ಮೆ ದೇವಗಂಗಾನದಿಯಲ್ಲಿ ಸ್ನಾನಮಾಡುತ್ತಿದ್ದಾಗ, ಧರ್ಮಪುರುಷನು ಸುಂದರನಾದ ರಾಜನ ವೇಷವನ್ನು ಧರಿಸಿ ಅಲ್ಲಿಗೆ ಬಂದು ಆಕೆಯ ಪಾತಿವ್ರತ್ಯವನ್ನು ಪರೀಕ್ಷಿಸಲು ಆಕೆಯ ಪತಿಯನ್ನು ಮುದುಕನೆಂದೂ ಮೃತ್ಯುಸನ್ನಿಹಿತನೆಂದೂ ಹೇಳಿ ಸುಂದರರೂಪನೂ ಐಶ್ವರ್ಯಸಂಪನ್ನನೂ ಆದ ತನ್ನನ್ನು ವರಿಸಬೇಕೆಂದು ಏಕಾಂತದಲ್ಲಿ ಕೇಳಿದನು. ಆಗ ಪತಿವ್ರತೆಯಾದ ಆ ಪದ್ಮೆಯು ಜಿತೇಂದ್ರಿಯನಾದ ತನ್ನ ಪತಿಯನ್ನು ಬಿಟ್ಟು ಸ್ತ್ರೀಜಿತರಾದ ಕಾಮುಕರನ್ನು ವರಿಸುವುದು ಅಧರ್ಮವೆಂದು ಹೇಳಿ ಕಾಮುಕನಾದ ಆ ರಾಜನಿಗೆ ಕ್ಷಯರೋಗ ಬರುವಂತೆ ಶಾಪವಿತ್ತಳು. ಆಗ ಧರ್ಮಪುರುಷನು ತನ್ನ ನಿಜಸ್ವರೂಪವನ್ನು ತೋರಿ ಶ್ರೀಕೃಷ್ಣನ ಪ್ರೇರಣೆಯಂತೆ ಆಕೆಯ ಮನೋದಾರ್ಢ್ಯವನ್ನು ಪರೀಕ್ಷಿಸಲು ಬಂದುದಾಗಿ ಹೇಳಿ ಶ್ರೀಕೃಷ್ಣನ ಮಹಿಮೆಯನ್ನು ಸ್ತುತಿಸಿ ಅವನಿಗೆ ನಮಸ್ಕರಿಸಿ ನಿಂತನು. ಆಗ ಪದ್ಮೆಯು ತಿಳಿಯದೆ ತಾನು ಶಾಪಕೊಟ್ಟುದಕ್ಕಾಗಿ ಪಶ್ಚಾತ್ತಾಪಪಟ್ಟು ಪತಿವ್ರತೆಯರ ಶಾಪವು ವ್ಯರ್ಥವಾಗದಿರುವುದರಿಂದ ಧರ್ಮವು ಕೃತಯುಗದಲ್ಲಿ ನಾಲ್ಕು ಪಾದಗಳಿಂದಲೂ, ತ್ರೇತಾಯುಗದಲ್ಲಿ ಮೂರು ಪಾದಗಳಿಂದಲೂ, ದ್ವಾಪರಯುಗದಲ್ಲಿ ಎರಡು ಪಾದಗಳಿಂದಲೂ, ಕಲಿಯುಗದ ಆದಿಯಲ್ಲಿ ಒಂದು ಪಾದದಿಂದಲೂ ಇದ್ದು ಕೊನೆಯಲ್ಲಿ ನಾಶವಾಗುವುದೆಂದು ಅನುಗ್ರಹಿಸಿದುದಲ್ಲದೆ ಧರ್ಮವು ಪೂರ್ಣವಾಗಿರಬಹುದಾದ ಸ್ಥಳಗಳನ್ನೂ ಇರಬಾರದ ಸ್ಥಳಗಳನ್ನೂ ನಿರೂಪಿಸಿದಳು. ಆಗ ಧರ್ಮಪುರುಷನು ಪದ್ಮೆಯ ಪಾತಿವ್ರತ್ಯಕ್ಕೆ ಮೆಚ್ಚಿ ಅವಳ ಪತಿಗೆ ರೂಪಯೌವನಸಂಪತ್ತುಗಳನ್ನೂ ದೀರ್ಘಾಯುಷ್ಯವನ್ನೂ ಅನುಗ್ರಹಿಸಿದನು.

ಈರೀತಿ ಅನರಣ್ಯರಾಜನು ತನ್ನ ಪುತ್ರಿಯನ್ನು ಪಿಪ್ಪಲಾದಮಹರ್ಷಿಗೆ ಕೊಟ್ಟು ಪುನೀತನಾದಂತೆ ಪಾರ್ವತಿಯನ್ನು ಪರಮೇಶ್ವರನಿಗೆ ಕೊಟ್ಟು ನೀನೂ ಪುನೀತನಾಗೆಂದು ಹಿಮವಂತನಿಗೆ ವಸಿಷ್ಠನು ಹೇಳಿ ಪಾರ್ವತಿಯ ಜನ್ಮಾಂತರ ವೃತ್ತಾಂತವನ್ನೂ ತಿಳಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ತ್ರಿಚತ್ವಾರಿಂಶೋಽಧ್ಯಾಯಃ ॥

॥ ನಾರಾಯಣ ಉವಾಚ ॥

ಅಥ ದುರ್ಗಾಂ ಮಹಾದೇವಃ ಸತೀಮೂರ್ತಿಂ ಮನೋಹರಾಂ ।
ಅಮ್ಲಾನಪದ್ಮವಕ್ತ್ರಾಂ ತಾಂ ತಯೋನಾಂ ಜಾಹ್ನವೀತಟೇ ॥ ೧ ॥

ದಧತೀಮಕ್ಷಮಾಲಾಂ ಚ ಪ್ರತಪ್ತಕಾಂಚನಪ್ರಭಾಂ ।
ತೇಜಸಾ ಪ್ರಜ್ವಲಂತೀಂ ಚ ದಧಾನಾಂ ಶುಕ್ಲವಾಸಸಂ ॥ ೨ ॥

ದೃಷ್ಟ್ವಾ ಸತೀ ಶರೀರಂ ಚ ಪ್ರದಗ್ಧೋ ವಿರಹಾಗ್ನಿನಾ ।
ತತ್ತ್ವರಾಶಿರ್ಮೂರ್ತಿಮಾಂಶ್ಚ ಮೂರ್ಛಾಂ ಪ್ರಾಪ ತಥಾಽಪಿ ಚ ॥ ೩ ॥

ನಲವತ್ತಮೂರನೆಯ ಅಧ್ಯಾಯ.

೧–೩. ನಾರಾಯಣನು :—ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಗಂಗಾ ನದಿಯ ತೀರಕ್ಕೆ ಹೋದ ಶಂಕರನು ಅಲ್ಲಿ ಮನೋಹರವಾದ, ಸ್ವಲ್ಪವೂ ಬಾಡದಿರುವ ಮುಖಕಮಲವುಳ್ಳ, ಆ ಗಂಗಾನದಿಯ ತೀರದಲ್ಲಿ ಮಲಗಿ ಜಪಮಾಲೆಯನ್ನು ಧರಿಸಿರುವ, ಕಾಯಿಸಿದ ಚಿನ್ನದಂತೆ ಪ್ರಕಾಶಮಾನವಾದ ದಿವ್ಯತೇಜಸ್ಸಿನಿಂದ ಕಂಗೊಳಿಸುತ್ತಿರುವ, ಬಿಳಿಯ ವಸ್ತ್ರವನ್ನು ಧರಿಸಿರುವ, ದುರ್ಗಾಸ್ವರೂಪಳಾದ ಸತೀದೇವಿಯ ಶರೀರವನ್ನು ನೋಡಿ ತತ್ವರಾಶಿ ಸ್ವರೂಪನಾದರೂ ವಿರಹಾಗ್ನಿಯಿಂದ ಸಂತಾಪಗೊಳಿಸಲ್ಪಟ್ಟವನಾಗಿ ಮೂರ್ಛೆಯನ್ನು ಹೊಂದಿದನು.

ಕಲತ್ರಶೋಕೋ ಬಲವಾನ್ ಸ್ವಾತ್ಮಾರಾಮಂ ಪರಾತ್ಪರಂ ।
ಬಾಧತೇ ವೇದಬೀಜಂ ತಂ ಯೋಗೀಂದ್ರಾಣಾಂ ಗುರೋರ್ಗುರುಂ ॥ ೪ ॥

ಕ್ಷಣೇನ ಚೇತನಾಂ ಪ್ರಾಪ್ಯ ತಾಮುವಾಚ ತ್ರಿಲೋಚನಃ ।
ನಿರೀಕ್ಷ್ಯ ವದನಾಂಭೋಜಂ ಸ್ಥಾಣುಃ ಸ್ಥಾಣುರಿವಾಪರಃ ॥ ೫ ॥

ಸಾಶ್ರುನೇತ್ರೋsತಿದೀನಶ್ಚ ದೀನಾನಾಂ ಶರಣಪ್ರದಃ ।
ದೀನದೈನ್ಯಾಪಹಾರೀ ಚ ವಿಲಲಾಪ ಪರಂ ವಚಃ ॥ ೬ ॥

॥ ಶಂಕರ ಉವಾಚ ॥

ಉತ್ತಿಷ್ಠೋತ್ತಿಷ್ಠ ಸುಭಗೇ ಸತಿ ಪ್ರಾಣೇಶ್ವರಿ ಪ್ರಿಯೇ ।
ಶಂಕರೋsಹಂ ತವ ಸ್ವಾಮೀ ಪಶ್ಯ ಮಾಂ ನಿಕಟಾಗತಂ ॥ ೭ ॥

---

೪. ಲೋಕದಲ್ಲಿ ಪತ್ನಿಯ ವಿಯೋಗದುಃಖವು ಅತ್ಯಂತ ಪ್ರಬಲವಾದುದು. ಆ ದುಃಖವು ಆತ್ಮಾರಾಮನೂ, ಪರಾತ್ಪರನೂ ವೇದಗಳಿಗೆ ಕಾರಣನೂ ಯೋಗಿ ಶ್ರೇಷ್ಠರಿಗೂ, ಗುರುಗಳಿಗೂ ಗುರುವೂ ಆದ ಪರಮೇಶ್ವರನನ್ನೂ ಕೂಡ ತೊಂದರೆ ಗೊಳಿಸಿತು.

೫. ಸ್ವಲ್ಪಕಾಲದ ಮೇಲೆ ಜ್ಞಾನವನ್ನು ಪಡೆದ ತ್ರಿಲೋಚನನೂ ಸ್ಥಾಣುವೂ ಆದ ಪರಮೇಶ್ವರನು ಮೋಟುಮರದಂತೆ ನಿಶ್ಚಲನಾಗಿ ಆ ಸತಿಯ ಮುಖವನ್ನು ನೋಡಿ ಮಾತನಾಡಿದನು.

೬. ಯಾವನು ದುಃಖಗೊಂಡವರಿಗೆ ಆಶ್ರಯನೋ ದುಃಖಿತರ ದುಃಖವನ್ನು ಪರಿಹಾರ ಮಾಡುವವನೋ ಅಂಥಾ ಶಂಕರನು ಬಹಳ ಮಾತನಾಡುತ್ತ ಬಹಳವಾಗಿ ವಿಲಾಪಿಸಿದನು.

೭. ಶಂಕರನು :—ಎಲೈ ಮಂಗಳಕರಳೇ, ಪ್ರಾಣಪ್ರಿಯಳಾದ ಸತೀ ದೇವಿಯೇ ಏಳು ಏಳು. ಶಂಕರನೂ ನಿನ್ನ ಪತಿಯೂ ಆದ ನಾನು ಬಂದಿರುವೆನು. ನಿನ್ನ ಸಮೀಪಕ್ಕೆ ಬಂದಿರುವ ನನ್ನನ್ನು ನೋಡು.

ಶಿವಂ ಶಿವಪ್ರದಂ ಸರ್ವಸಂಪದ್ರೂಪಂ ಚ ಸಿದ್ಧಿದಂ ।
ಸರ್ವಾತ್ಮಾನಂ ಚ ಸರ್ವೇಶಂ ಶವತುಲ್ಯಂ ತ್ವಯಾ ವಿನಾ ॥ ೮

ಶಕ್ತೋಽಹಂ ಚ ತ್ವಯಾ ಸಾರ್ಧಂ ಸರ್ವಶಕ್ತಿಸ್ವರೂಪಯಾ ।
ಶಕ್ತಿಹೀನಃ ಶವಸಮೋ ನಿಶ್ಚೇಷ್ಟಃ ಸರ್ವಕರ್ಮಸು ॥ ೯ ॥

ಯಶ್ಚ ಶಕ್ತಿಂ ನ ಜಾನಾತಿ ಜ್ಞಾನಹೀನಶ್ಚ ನಿಂದತಿ ।
ತಂ ತ್ಯಕ್ತುಮುಚಿತಂ ವಿಜ್ಞೇ ಕಥಂ ಮಾಂತ್ಯಜಸಿ ಪ್ರಿಯೇ ॥ ೧೦ ॥

ತ್ವಯಂ ಬ್ರಹ್ಮಾ ಸ್ವಯಂ ವಿಷ್ಣುಃ ಸಾಧ್ಯಭೂತಾ ವಯಂ ತವ ।
ಸಸ್ಮಿತಂ ಸಕಟಾಕ್ಷಂ ಚ ವದ ಕಿಂಚಿತ್ಸುಧೋಪಮಂ ॥ ೧೧ ॥

ಮಧುರಾಭಾಸ ದೃಷ್ಟ್ಯಾ ಚ ಮಾಂದಗ್ಧಂ ಸೇಚನಂ ಕುರು ।
ಮಾಂ ದೃಷ್ಟ್ವಾ ದೂರತಃ ಶೀಘ್ರಂ ಸ್ನಿಗ್ಧಂ ವದಸಿ ಸಸ್ಮಿತಂ ॥ ೧೨ ॥

---

೮. ಮಂಗಳರೂಪನೂ, ಮಂಗಳಕರನೂ, ಸಕಲೈಶ್ವರ್ಯಸ್ವರೂಪನೂ, ಸಕಲ ಸಿದ್ಧಿಯನ್ನುಂಟುಮಾಡುವವನೂ, ಸರ್ವಸ್ವರೂಪನೂ, ಸಕಲಕ್ಕೂ ಯಜಮಾನನೂ ಆದ ನಾನು ನೀನಿಲ್ಲದೆ ಶವದಂತಾಗಿರುವೆನು.

೯. ನಾನು ಸಕಲ ಶಕ್ತಿರೂಪಿಣಿಯಾದ ನಿನ್ನೊಡನೆ ಇರುವವನಾಗಿ ಶಕ್ತಿವಂತನಾಗಿರುವೆನು. ಶಕ್ತಿಯಿಂದ ಬಿಡಲ್ಪಟ್ಟವನಾದರೆ ಶವಕ್ಕೆ ಸಮನಾಗಿ ಯಾವ ಕೆಲಸಗಳನ್ನು ಮಾಡುವುದಕ್ಕೂ ಸಾಮರ್ಥ್ಯವಿಲ್ಲದವನಾಗಿರುತ್ತೇನೆ.

೧೦. ಎಲೈ ಸರ್ವಜ್ಞಳೇ, ಯಾವನು ಶಕ್ತಿಯ ವಿಷಯವನ್ನು ತಿಳಿದಿಲ್ಲವೋ ಜ್ಞಾನವಿಲ್ಲದವನಾಗಿ ಶಕ್ತಿಯನ್ನು ನಿಂದಿಸುತ್ತಾನೋ ಅಂಥವನನ್ನು ಬಿಡುವುದು ನ್ಯಾಯವಾಗಿರುತ್ತದೆ. ಎಲೈ ಪ್ರಿಯಳೇ, ನನ್ನನ್ನು ಏತಕ್ಕಾಗಿ ಬಿಡುವೆ.

೧೧. ಬ್ರಹ್ಮನೂ ವಿಷ್ಣುವೂ, ನಾವೆಲ್ಲರೂ ನಿನ್ನ ಅಧೀನರು. ಮಂದಹಾಸ ಪೂರ್ವಕವಾಗಿ ಕಡೆಗಣ್ಣಿನಿಂದ ನೋಡುತ್ತ ಅಮೃತಕ್ಕೆ ಸಮಾನವಾದ ಮಾತನಾಡು.

೧೨-೧೩. ದುಃಖದಿಂದ ಸುಡುತ್ತಿರುವ ನನ್ನನ್ನು ಅಮೃತದಂತಿರುವ ನೋಟದಿಂದ ನೆನೆಯಿಸು. ದೂರದಿಂದಲೇ ನನ್ನನ್ನು ನೋಡಿದೊಡನೆಯೇ ಸ್ನೇಹದಿಂದ ಇಂಪಾಗಿ ಮಾತನಾಡುತ್ತಿದ್ದ ನೀನು ಇಷ್ಟು ಹೊತ್ತಾದರೂ ಏತಕ್ಕಾಗಿ

ಕಥಮದ್ಯಾಪಿ ರುಷ್ಟೇವ ವಿಲಪಂತಂ ನ ಭಾಷಸೇ ।
ಪ್ರಾಣಾಧಿಕೇ ಸಮುತ್ತಿಷ್ಠ ರುದಂತಂ ಮಾಂ ನಪಶ್ಯಸಿ ॥ ೧೩ ॥

ಪರಿತ್ಯಜ್ಯ ಚ ನಃ ಪ್ರಾಣಾನ್ ಗಂತುಂ ನಾರ್ಹಸಿ ಸುಂದರಿ ।
ಜಗದಂಬೇ ಸಮುತ್ತಿಷ್ಠ ಪ್ರಾಣಾಧಾರೇ ಪರಾತ್ಪರೇ ॥ ೧೪ ॥

ಪತಿವ್ರತೇ ಸಮುತ್ತಿಷ್ಠ ಕಥಂ ಮಾಂ ನಾದ್ಯ ಸೇವಸೇ ।
ಕಥಂ ಕರೋಷಿವಿಜ್ಞಾಯ ವ್ರತಭಂಗಂ ಶ್ರುತಿಪ್ರಸೂಃ ॥ ೧೫ ॥

ಇತ್ಯುಕ್ತ್ವಾ ಮೃತದೇಹಂ ಚ ಪ್ರಿಯಾಯಾ ವಿರಹಾತುರಃ ।
ನಿಧಾಯೋರಸಿ ಸಂಶ್ಲಿಷ್ಯ ಚುಚುಂಬ ಚ ಪುನಃ ಪುನಃ ॥ ೧೬ ॥

ಅಧರೇ ಚಾಧರಂ ದತ್ತ್ವಾ ವಕ್ಷೋ ವಕ್ಷಸಿ ಶಂಕರಃ ।
ಪುನಃ ಪುನಃ ಸಮಾಶ್ಲಿಷ್ಯ ಪುನರ್ಮೂರ್ಛಾಮವಾಪ ಸಃ ॥ ೧೭ ॥

ಕೋಪಿಸಿಕೊಂಡವಳಂತೆ ಮಾತನಾಡದೆ ಸುಮ್ಮನಿರುವೆ? ಎಲೈ ಪ್ರಾಣಕ್ಕಿಂತಲೂ ಪ್ರಿಯಳೇ, ಮೇಲೇಳು. ಅಳುತ್ತಿರುವ ನನ್ನನ್ನು ನೋಡುವುದಿಲ್ಲವೇಕೆ?

೧೪. ಎಲೈ ಸುಂದರಿಯೇ, ನನ್ನನ್ನೂ ಪ್ರಾಣಗಳನ್ನೂ ಬಿಟ್ಟು ನೀನು ಹೋಗುವುದು ನ್ಯಾಯವಲ್ಲ. ಎಲೈ ಪ್ರಾಣಾಧಾರಳೂ, ಪರಾತ್ಪರಳೂ ಆದ ಜಗನ್ಮಾತೆಯೇ, ಮೇಲೇಳು.

೧೫. ಎಲೈ ಪತಿವ್ರತೆಯೇ ಮೇಲೇಳು, ಏಕೆ ಇಷ್ಟುಹೊತ್ತಾದರೂ ಇಂದು ನೀನು ನನ್ನನ್ನು ಸೇವಿಸುತ್ತಿಲ್ಲ? ಎಲೈ ಪತಿವ್ರತೆಯೇ, ವೇದಜನನಿಯಾಗಿ ಸಕಲವನ್ನೂ ತಿಳಿದವಳಾಗಿ ನಿಯಮ ಭಂಗವನ್ನು ಹೇಗೆಮಾಡುವೆ?

೧೬. ಹೀಗೆ ಹೇಳಿ ವಿರಹದಿಂದ ಪೀಡಿತನಾದ ಶಂಕರನು ಪ್ರಿಯೆಯ ಮೃತಶರೀರವನ್ನು ಎದೆಯಲ್ಲಿ ಅಪ್ಪಿಕೊಂಡು ಮತ್ತೆ ಮತ್ತೆ ಚುಂಬಿಸಿದನು.

೧೭. ಅವಳ ತುಟಿಯಲ್ಲಿ ತನ್ನ ತುಟಿಯನ್ನಿಟ್ಟು ಅವಳ ಎದೆಯ ಮೇಲೆ ತನ್ನೆದೆಯನ್ನಿಟ್ಟು ಮತ್ತೆ ಮತ್ತೆ ಅಪ್ಪಿಕೊಂಡು ಮತ್ತೆ ಮೂರ್ಛೆಯನ್ನು ಹೊಂದಿದನು.

ಪುನಃ ಸ ಚೇತನಾಂ ಪ್ರಾಪ್ಯ ವೇಗಾದುತ್ಥಾಯ ಶೋಕತಃ ।
ದುದ್ರಾವ ಚ ಯಥೋಽನ್ಮತ್ತೋ ಜ್ಞಾನಿನಾಂ ಚ ಗುರೋರ್ಗುರುಃ ॥ ೧೮ ॥

ಸಪ್ತದ್ವೀಪಂ ಸಪ್ತಸಿಂಧುಂ ಲೋಕಾಲೋಕಂ ಚ ಕಾಂಚನಂ ।
ಬಭ್ರಾಮ ಭ್ರಾಂತವತ್ ಜ್ಞಾನೀ ಸತೀಂ ಕೃತ್ವಾ ಸ್ವವಕ್ಷಸಿ ॥ ೧೯ ॥

ಶತಶೃಂಗಗಿರೇಃ ಪಾರ್ಶ್ವೇ ಜಂಬುದ್ವೀಪೇ ಚ ಭಾರತೇ ।
ಸುನಿರ್ಜನೇಽಕ್ಷಯವಟೇ ಗಂಗಾತೀರೇ ಸರಿತ್ತಟೇ ॥ ೨೦ ॥

ರುರೋದೋಚ್ಚೈಃ ಸ್ವಯಂ ಕೃತ್ವಾ ಸತಿಸಾಧ್ವೀತ್ಯುದೀರ್ಯ ಚ ।
ತ್ರಿನೇತ್ರನೇತ್ರನೀರೇಣ ಸಂಬಭೂವ ಸರೋವರಂ ॥ ೨೧ ॥

ತನ್ನೇತ್ರಂ ಚ ಸರೋ ನಾಮ ಮುನೀನಾಂ ತಪಸಃ ಸ್ಥಲಂ ।
ಯೋಜನದ್ವಯವಿಸ್ತೀರ್ಣಂ ಪುಣ್ಯತೀರ್ಥಂ ಮನೋಹರಂ ॥ ೨೨ ॥

---

೧೮. ಮತ್ತೆ ಜ್ಞಾನವನ್ನು ಪಡೆದು ದುಃಖದಿಂದ ಮೇಲಕ್ಕೆದ್ದು ಜ್ಞಾನಿಗಳಿಗೂ ಗುರುವಿಗೂ ಗುರುವಾದ ಆ ಶಂಕರನು ಹುಚ್ಚನಂತೆ ಓಡಿದನು.

೧೯. ಎಲೈ ಹಿಮವಂತನೇ, ಜ್ಞಾನಿಯಾದ ಶಂಕರನು ತನ್ನ ಸತಿಯನ್ನು ಎದೆಯಲ್ಲಿ ಅಪ್ಪಿಕೊಂಡು ಭ್ರಾಂತನಂತೆ ಏಳುದ್ವೀಪಗಳನ್ನೂ, ಏಳುಸಮುದ್ರವನ್ನೂ ಲೋಕಾಲೋಕ ಪರ್ವತವನ್ನೂ ಅಲೆದನು.

೨೦. ಮತ್ತು ಶತಶೃಂಗಪರ್ವತದ ಪಕ್ಕದಲ್ಲಿಯೂ, ಜಂಬೂದ್ವೀಪದಲ್ಲಿಯೂ, ಭರತಖಂಡದಲ್ಲಿಯೂ, ನಿರ್ಜನಸ್ಥಳದಲ್ಲಿಯೂ, ಅಕ್ಷಯವಟದ ಸಮೀಪದಲ್ಲಿಯೂ, ಗಂಗಾನದಿಯ ದಡದಲ್ಲಿಯೂ ಅಲೆದನು.

೨೧. ಎಲೈ ಸತಿಯೇ, ಎಲೈ ಪ್ರತಿವ್ರತೆಯೇ, ಎಂದು ಹೇಳಿಕೊಂಡು ತಾನೇ ತಾನಾಗಿ ಗಟ್ಟಿಯಾಗಿ ಅತ್ತನು. ಆ ಪರಮೇಶ್ವರನ ಕಣ್ಣಿನಿಂದ ಹುಟ್ಟಿದ ನೀರಿನಿಂದ ಒಂದು ಸರೋವರವು ಉಂಟಾಯಿತು.

೨೨. ಅದು ನೇತ್ರ ಸರೋವರವೆಂಬ ಹೆಸರಿನಿಂದ ಪ್ರಸಿದ್ಧವಾಗಿ ಮುನಿಗಳಿಗೆ ತಪಸ್ಸನ್ನು ಮಾಡಲು ಉತ್ತಮವಾದ ಸ್ಥಳವಾಗಿ, ಎರಡು ಯೋಜನ ವಿಸ್ತಾರವುಳ್ಳದ್ದಾಗಿಯೂ, ಪುಣ್ಯತೀರ್ಥವಾಗಿಯೂ, ಮನೋಹರವಾಗಿಯೂ ಇರುತ್ತದೆ.

ಯತ್ರ ಸ್ನಾತ್ವಾ ಪುನರ್ಜನ್ಮ ನರಾಣಾಂ ನಭವೇದ್ಗಿರೇ ।
ಶತಜನ್ಮಕೃತಂ ಪಾಪಂ ಸ್ನಾನಮಾತ್ರೇಣ ನಶ್ಯತಿ ॥ ೨೩ ॥

ತ್ಯಕ್ತ್ವಾ ತಾಂ ಮಾನವೀಂ ಮೂರ್ತಿಂ ನರಾ ಯಾಂತಿ ಹರೇಃ ಪದಂ ।
ತತ್ರ ಸ ರೋದನಂ ತ್ಯಕ್ತ್ವಾ ಪುನರ್ಬಭ್ರಾಮ ಮೇದಿನೀಂ ॥ ೨೪ ॥

ಪೂರ್ಣಮಬ್ದಂ ಮಹಾಯೋಗೀ ವಿರಹಾತುರಮಾನಸಃ ।
ಸತೀಗಲಿತ ಪ್ರತ್ಯಂಗೈರಂಗೈಶ್ಚ ಪರ್ವತೇಶ್ವರ ॥ ೨೫ ॥

ಬಭೂವ ಸಿದ್ಧಪೀಠಾನಾಂ ಸಮೂಹೋ ವಾಂಛಿತಪ್ರದಃ ।
ಶೇಷಾಂಗಾನಾಂ ಮಹಾದೇವಃ ಸಂಸ್ಕಾರಂ ವೈ ವಿಧಾಯ ಚ ॥ ೨೬ ॥

ಅಸ್ಥಿಮಾಲಾಂ ವಿನಿರ್ಮಾಯ ಚಕಾರ ಕಂಠಭೂಷಣಂ ।
ನಿತ್ಯಂ ತದ್ಭಸ್ಮ ಭಕ್ತ್ಯಾ ಚ ಚಕಾರ ಗಾತ್ರಲೇಪನಂ ॥ ೨೭ ॥

೨೩–೨೪. ಎಲೈ ಹಿಮವಂತನೇ, ಯಾವ ಕ್ಷೇತ್ರಸರೋವರದಲ್ಲಿ ಸ್ನಾನ ಮಾಡುವುದರಿಂದ ಪುನರ್ಜನ್ಮವು ಬರುವುದಿಲ್ಲ. ನೂರು ಜನ್ಮಗಳಲ್ಲಿ ಮಾಡಿದ ಪಾಪವೆಲ್ಲವೂ ಸ್ನಾನಮಾಡುವ ಮಾತ್ರದಿಂದಲೇ ನಾಶವಾಗುತ್ತವೆ. ಮತ್ತು ಅಂಥವರು ಆ ಮನುಷ್ಯಶರೀರವನ್ನು ಬಿಟ್ಟು ವೈಕುಂಠವನ್ನು ಸೇರುತ್ತಾರೆ. ಆ ಸ್ಥಳದಲ್ಲಿ ಶಂಕರನು ಅಳುತ್ತ ಮತ್ತೆ ಭೂಮಿಯನ್ನು ಸುತ್ತಿದನು.

೨೫–೨೬. ಎಲೈ ಹಿಮವಂತನೇ, ಒಂದು ವರ್ಷಕಾಲ ಮಹಾಯೋಗಿಯಾದ ಶಂಕರನು ಹೀಗೆ ವಿರಹ ದುಃಖದಿಂದ ಪೀಡಿತನಾಗಿ ತಿರುಗುತ್ತಿರಲು ಆ ಸತೀ ದೇವಿಯ ಶರೀರದಿಂದ ಗಲಿತವಾದ ಅವಯವಗಳು ಅಲ್ಲಲ್ಲಿ ಬಿದ್ದು ಸಕಲ ಇಷ್ಟಾರ್ಥಗಳನ್ನು ಕೊಡುವ ಸಿದ್ಧಿಕ್ಷೇತ್ರಗಳ ಸಮೂಹವುಂಟಾಯಿತು. ಅನಂತರ ಉಳಿದ ಅಂಗಗಳನ್ನು ಪರಮೇಶ್ವರನು ಸಂಸ್ಕಾರ ಮಾಡಿದನು.

೨೭. ಆ ಎಲುಬುಗಳನ್ನು ಸರವನ್ನಾಗಿ ಮಾಡಿ ಕತ್ತಿಗೆ ಹಾಕಿಕೊಂಡನು. ಯಾವಾಗಲೂ ಆ ಚಿತೆಯ ಬೂದಿಯನ್ನು ಶರೀರಕ್ಕೆ ಬಳಿದುಕೊಳ್ಳುವನು

ಸತಿ ಪ್ರಾಣೇಶ್ವರೀತ್ಯುಕ್ತ್ವಾ ಪುನರ್ಮೂರ್ಛಾಮವಾಪ ಸಃ ।
ವಿಸಸ್ಮಾರ ಬ್ರಹ್ಮ ಪರಮಾತ್ಮಾನಮಾತ್ಮಸಂಭವಃ ॥ ೨೮ ॥

ಸ್ವಾತ್ಮಾರಾಮಃ ಪೂರ್ಣಕಾಮೋ ನಿಶ್ಚೇಷ್ಟೋ ವಿರಹಜ್ವರಾತ್ ।
ತಂ ಶಯಾನಂ ಗಿರಿವರಸ್ಯಾಭ್ಯಾಶೇ ವಟಮೂಲಕೇ ॥ ೨೯ ॥

ದೃಷ್ಟ್ವಾ ದೇವಾಃ ಸಮಾಜಗ್ಮುರ್ವಿಸ್ಮಿತಾಃ ಶಿವಸನ್ನಿಧಿಂ ।
ನಾರಾಯಣಶ್ಚ ಭಗವಾನೀಶ್ವರಃ ಸಹ ಪಾರ್ಷದೈಃ ॥ ೩೦ ॥

ರತ್ನಯಾನೇನಾ ಜಗಾಮ ಪದ್ಮಾರ್ಚಿತಪದಾಂಬುಜಃ ।
ರತ್ನಾಲಂಕಾರಶೋಭಾಢ್ಯಃ ಪೀತವಾಸಾಶ್ಚತುರ್ಭುಜಃ ॥ ೩೧ ॥

ಈಷದ್ಧಾಸ್ಯಪ್ರಸನ್ನಾಸ್ಯೋ ವನಮಾಲಾವಿಭೂಷಿತಃ ।
ಬ್ರಹ್ಮಾ ಶೇಷಶ್ಚ ಧರ್ಮಶ್ಚ ಸುರಾಃ ಸರ್ವೇ ಮಹರ್ಷಯಃ ॥ ೩೨ ॥

ಸಮೂಷುರೀಶಸದಸಿ ಲಕ್ಷ್ಮೀಕಾಂತಂ ಪ್ರಣಮ್ಯ ತೇ ।
ಶ್ರೀಹರಿಃ ಶಂಕರಮಹೋ ಕೃತ್ವಾ ವಕ್ಷಸಿ ಮೂರ್ಛಿತಂ ।
ರುದಂತಂ ಬೋಧಯಾಮಾಸ ಜ್ಞಾನೀಶೋ ಜ್ಞಾನಿನಾಂ ಗುರುಂ ॥ ೩೩ ॥

೨೮-೩೧. ಎಲೈ ಸತಿಯೇ, ಪ್ರಾಣೇಶ್ವರಿಯೇ, ಎಂದು ನುಡಿಯುತ್ತ ಮತ್ತೆ ಮೂರ್ಛೆಹೊಂದಿದನು. ಆತ್ಮಸಂಭವನಾದ ಆ ಶಂಕರನು ಪರಬ್ರಹ್ಮನಾದ ಪರಮಾತ್ಮನನ್ನು ಮರೆತನು. ಆತ್ಮಾರಾಮನೂ, ಪೂರ್ಣಕಾಮನೂ ಆದ ಶಿವನು ವಿರಹಜ್ವರದಿಂದ ಸಂತಪ್ತನಾಗಿ ಅಲುಗಾಡದೆ ಪರ್ವತದ ಸಮೀಪದಲ್ಲಿರುವ ಆಲದಮರದ ಬುಡದಲ್ಲಿ ಮಲಗಿರುವುದನ್ನು ನೋಡಿ ದೇವತೆಗಳು ಆಶ್ಚರ್ಯಗೊಂಡವರಾಗಿ ಅಲ್ಲಿಗೆ ಬಂದರು. ಸಕಲ ಜಗತ್ತಿಗೂ ಅಧಿಪತಿಯೂ, ಪೂಜ್ಯನೂ ಆದ ವಿಷ್ಣುವು ರತ್ನಾಭರಣಗಳಿಂದ ಅಲಂಕೃತನಾಗಿ ಪೀತಾಂಬರವನ್ನು ಧರಿಸಿ, ನಾಲ್ಕು ತೋಳುಗಳಿಂದ ಕಂಗೊಳಿಸುತ್ತ ತನ್ನ ಪರಿವಾರದೊಂದಿಗೆ ರತ್ನಮಯವಾದ ವಿಮಾನದಲ್ಲಿ ಕುಳಿತು ಮಂದಹಾಸವನ್ನು ಬೀರುತ್ತ ಬಂದನು.

೩೨-೩೩. ಬ್ರಹ್ಮನೂ, ಶೇಷನೂ, ಧರ್ಮನೂ, ಸಕಲ ದೇವತೆಗಳೂ, ಮುನಿಗಳೂ ಸಹ ಬಂದು ವಿಷ್ಣುವಿಗೆ ನಮಸ್ಕಾರವನ್ನು ಮಾಡಿ ಈಶ್ವರನ ಸಮೀಪದಲ್ಲಿ ನಿಂತರು. ಶ್ರೀಹರಿಯು ಮೂರ್ಛೆಹೊಂದಿದ ಮತ್ತು ಅಳುತ್ತಿರುವ, ಜ್ಞಾನಿಗಳಿಗೆ ಶ್ರೇಷ್ಠನಾದ ಶಂಕರನನ್ನು ಎದೆಗಪ್ಪಿಕೊಂಡು ಸಮಾಧಾನದ ಮಾತುಗಳನ್ನಾಡಿದನು.

॥ ಶ್ರೀ ಭಗವಾನುವಾಚ ॥

ಸ್ವಾತ್ಮಾರಾಮ ನಿಬೋಧೇದಂ ಮದೀಯಂ ವಚನಂ ಶೃಣು ।
ಹಿತಮಧ್ಯಾತ್ಮಸಾರಂ ಚ ದುಃಖಶೋಕನಿಕೃಂತನಂ ॥ ೩೪ ॥

ಸರ್ವಾಧ್ಯಾತ್ಮವಿದ್ಯಾಮಾನಬೀಜಂ ಜ್ಞಾನನಿಧಿಂ ವಿಧಿಂ ।
ತಥಾಽಪಿ ಬೋಧಯಾಮಿ ತ್ವಾಂ ಸರ್ವಜ್ಞಂ ವೇಧಸಾಂ ವಿಧಿಂ ॥ ೩೫ ॥

ಬುಧಂ ಬೋಧಯಿತುಂ ಶಕ್ತೋಽಬುಧೇಽಪಿ ಪ್ರಾಣಸಂಕಟೇ ।
ವ್ಯವಹಾರೋಽಸ್ತಿ ಲೋಕೇಷು ಸರ್ವಃ ಸರ್ವಪರಸ್ಪರಂ ॥ ೩೬ ॥

ಮಾಯಾಶ್ರಿತಾ ಗುಣಾಃ ಸರ್ವೇ ಹೇತವಃ ಸುಖ ದುಃಖಯೋಃ ।
ವಿಷ್ಣುಮಾಯಾ ಬಲವತೀ ಗುಣಯುಕ್ತಂ ಪ್ರಬಾಧತೇ ॥ ೩೭ ॥

ದುಃಖಂ ಶೋಕಂ ಭಯಂ ಶಂಭೋ ದುರ್ದಿನೇ ಭವತೀಶ್ವರ ।
ತತ್ಪ್ರತೀತೇ ಕುತಸ್ತಾನಿ ಸುದಿನೇ ಚ ಸಮಾಗತೇ ॥ ೩೮ ॥

---

೩೪. ಶ್ರೀ ಭಗವಂತನು :—ಎಲೈ ಆತ್ಮಾರಾಮನೇ, ಹಿತವೂ ವೇದಾಂತ ಸಾರವೂ ಆಗಿ ದುಃಖವನ್ನೂ ಶೋಕವನ್ನೂ ನಿರ್ಮೂಲಮಾಡುವ ನನ್ನ ಮಾತನ್ನು ಲಾಲಿಸು.

೩೫. ಸಕಲ ವೇದಾಂತವಿದ್ಯೆಗೆ ಕಾರಣನಾಗಿ ಜ್ಞಾನಕ್ಕೆ ಗಣಿಯಂತಿರುವ ವ್ಯಾಪಕನೂ, ಸರ್ವಜ್ಞನೂ, ಬ್ರಹ್ಮನಿಗೂ ಬ್ರಹ್ಮನೂ ಆದ ನಿನಗೆ ನಾನು ಉಪದೇಶಿಸುತ್ತೇನೆ.

೩೬. ಜ್ಞಾನಿಯಾದವನು ಸಂಕಟದಲ್ಲಿ ಮುಳುಗಿದವನಾಗಿರಲು ಅವನಿಗೆ ಉಪದೇಶಮಾಡಲವಕಾಶವುಂಟು. ಲೋಕದಲ್ಲಿ ತಿಳಿದವರೂ ಕೂಡ ಸಮಯದಲ್ಲಿ ಒಬ್ಬರಿಗೊಬ್ಬರು ಉಪದೇಶಮಾಡುವುದು ವಾಡಿಕೆಯಾಗಿದೆ.

೩೭. ಮಾಯೆಯನ್ನು ಆಶ್ರಯಿಸಿದ ಎಲ್ಲಗುಣಗಳೂ ಸುಖದುಃಖಗಳಿಗೆ ಕಾರಣಗಳಾಗಿರುತ್ತವೆ. ಪ್ರಭಲವಾದ ವಿಷ್ಣುಮಾಯೆಯು ಗುಣವಂತನನ್ನೂ ಸಹ ಬಾಧಿಸುತ್ತವೆ.

೩೮. ಎಲೈ ಈಶ್ವರನೇ, ದುಃಖವೂ, ಶೋಕವೂ, ಭಯವೂ ಸಹ ಕೆಟ್ಟ ದಿನಗಳಲ್ಲುಂಟಾಗುತ್ತವೆ. ಅದು ಕಳೆದು ಸುದಿನವು ಬರಲು ಅವುಗಳೆಲ್ಲಿರಬೇಕು ?

ಹರ್ಷ ಐಶ್ವರ್ಯದರ್ಪಶ್ಚ ಸಂತತಂ ತತ್ರ ವರ್ಧತೇ ।
ಸರ್ವಾಣ್ಯೇತಾನಿ ಗಣ್ಯಂತೇ ಸ್ವಪ್ನಾನೀವ ವಿಪಶ್ಚಿತಃ ॥ ೩೯ ॥

ಜ್ಞಾನಂ ಲಭ ಮಹಾದೇವ ಜ್ಞಾನಬೀಜ ಸನಾತನ ।
ಚೇತನಾಂ ಕುರು ಭದ್ರಂ ತೇ ಸತೀಂ ಪ್ರಾಪ್ಸ್ಯಸಿ ನಿಶ್ಚಿತಂ ॥ ೪೦ ॥

ನ ತೋಯಂ ಶೀತತಾ ನಿತ್ಯಂ ನಾಗ್ನಿಂ ಮುಂಚತಿ ದಾಹಿಕಾ ।
ತೇಜಃ ಸೂರ್ಯಂ ಮಹೀಂ ಗಂಧೋ ತಥಾ ತ್ವಾಂ ಚ ಸತೀ ಶಿವ ॥ ೪೧ ॥

ಶೈಲೇತ್ಯೇವಂ ಸಮಾಕರ್ಣ್ಯ ಹರಿಂ ಕಿಂಚಿದುವಾಚ ಹ ।
ನೇತ್ರಾಣ್ಯುನ್ಮೀಲನಂ ಕೃತ್ವಾ ತ್ರಿನೇತ್ರಃ ಕೃಪಯಾಮಿತಿ ॥ ೪೨ ॥

॥ ತ್ರಿನೇತ್ರ ಉವಾಚ ॥

ಕಸ್ತ್ವಂ ತೇಜಃಸ್ವರೂಪೋಽಸಿ ಕ ಇಮೇ ತವ ಸನ್ನಿಧೌ ।
ಕಿನ್ನಾಮ ಭವತಶ್ಚೈಷಾಂ ಕಾನಿ ನಾಮಾನಿ ಕಾ ಸತೀ ॥ ೪೩ ॥

---

೩೯. ಸಂತೋಷವೂ, ಐಶ್ವರ್ಯದ ದರ್ಪವೂ ಆ ದಿನಗಳಲ್ಲಿ ಯಾವಾಗಲೂ ಹೆಚ್ಚುವುವು. ಜ್ಞಾನಿಯಾದವನು ಇವುಗಳನ್ನು ಸ್ವಪ್ನವೆಂದೆಣಿಸುತ್ತಾನೆ.

೪೦. ಎಲೈ ಜ್ಞಾನಕಾರಣನೂ, ಶಾಶ್ವತನೂ ಆದ ಮಹಾದೇವನೇ, ಚೈತನ್ಯ ವನ್ನು ಹೊಂದು. ದಿವ್ಯಜ್ಞಾನವನ್ನು ಪಡೆಯುವವನಾಗು. ನೀನು ಸತಿಯನ್ನು ಹೊಂದುವೆ. ಇದು ನಿಶ್ಚಯವು.

೪೧. ಯಾವ ರೀತಿ ಶೀತವು ನೀರನ್ನೂ, ಸುಡುವಿಕೆಯು ಬೆಂಕಿಯನ್ನೂ, ಸೂರ್ಯನನ್ನೂ, ಗಂಧವು ಪೃಥಿವಿಯನ್ನೂ ಬಿಟ್ಟಿರಲು ಸಾಧ್ಯವಿಲ್ಲವೋ ಹಾಗೆಯೇ ಸತೀದೇವಿಯು ನಿನ್ನನ್ನು ಬಿಟ್ಟಿರಲು ಸಾಧ್ಯವಿಲ್ಲ.

೪೨. ಎಲೈ ಹಿಮವಂತನೇ, ಈಶ್ವರನು ಈ ರೀತಿಯಾದ ಮಾತನ್ನು ಕೇಳಿ ಕಣ್ಣುಗಳನ್ನು ಸ್ವಲ್ಪ ತೆರೆದು ವಿಷ್ಣುವನ್ನು ಕುರಿತು ಹೀಗೆ ಹೇಳಿದನು.

೪೩–೪೪. ತ್ರಿನೇತ್ರನು :—ತೇಜೋರೂಪನಾದ ನೀನು ಯಾರು ? ನಿನ್ನ ಸಮೀಪದಲ್ಲಿರುವ ಇವರು ಯಾರು ? ನಿನ್ನ ಮತ್ತು ಇವರ ಹೆಸರುಗಳೇನು ? ಸತಿಯೆಂಬುವಳಾರು ? ನಾನು ಯಾರು ? ನನಗೆ ಉಪದೇಶಿಸುತ್ತಿರುವ ನೀನು

ಕೋಽಹಂ ಕೋ ಮೇ ಭವಾನ್ಭ್ರಾತೇ ಕಿಂಕರಾಃಕುತ ಆಗತಾಃ ।
ಕ್ವ ಯಾಸ್ಯಸಿ ಕ್ವ ಯಾಸ್ಯಾಮಿ ಕ್ವ ಗಚ್ಛಂತಿ ಇಮೇ ವದ ॥ ೪೪ ॥

ಹರಿರಿತ್ಯೇವಮಾಕರ್ಣ್ಯ ರುರೋದ ಸಗಣೋ ಗಿರೇ ।
ನೇತ್ರನೀರೈಸ್ತ್ರಿನೇತ್ರಂ ತಂ ರುದಂತಂ ಪ್ರಸಿಷೇಚ ಸಃ ॥ ೪೫ ॥

ಹರಿತ್ರಿನೇತ್ರಯೋರ್ನೇತ್ರನೀರಪಾತೇನ ತತ್ರ ವೈ ।
ಬಭೂವ ಸರಸಾಂ ಶ್ರೇಷ್ಠಂ ತೀರ್ಥಂ ಭುವನಪಾವನಂ ॥ ೪೬ ॥

ಭಾರತೇಽಸ್ತಗಿರೇಃ ಪಶ್ಚಾತ್ತತ್ರಾಕ್ಷಯವಟಾಂತಿಕೇ ।
ಸ್ಥಲಂ ಬಭೂವ ತಪಸಾಂ ಮುಕ್ತಿಬೀಜಂ ತಪಸ್ವಿನಾಂ ॥ ೪೭ ॥

ಅಥೋವಾಚ ಪುನಃ ಶೀಘ್ರಮಾಧ್ಯಾತ್ಮಂ ಚ ಹರಂ ಹರಿಃ ।
ಶೃಣ್ವತಾಂ ಸರ್ವದೇವಾನಾಂ ಮುನೀನಾಮೂರ್ಧ್ವರೇತಸಾಂ ॥ ೪೮ ॥

ಯಾರು? ಈ ಸೇವಕರು ಏತಕ್ಕಾಗಿ ಬಂದಿರುವರು? ನೀನು ಎಲ್ಲಿಗೆ ಹೋಗುವಿ? ನಾನೆಲ್ಲಿಗೆ ಹೋಗುವೆನು? ಇವರುಗಳು ಎಲ್ಲಿಗೆ ಹೋಗುವರು? ಇದನ್ನೆಲ್ಲ ನನಗೆ ಹೇಳು.

೪೫. ಎಲೈ ಹಿಮವಂತನೇ, ವಿಷ್ಣುವು ಈ ಪ್ರಕಾರವಾದ ಮಾತನ್ನು ಕೇಳಿ ತನ್ನ ಗಣಗಳೊಂದಿಗೆ ಅತ್ತನು. ತನ್ನ ಕಣ್ಣೀರಿನಿಂದ, ಅಳುತ್ತಿರುವ ಶಂಕರನನ್ನು ನೆನೆಯಿಸಿದನು.

೪೬. ವಿಷ್ಣು ಮತ್ತು ಈಶ್ವರ ಇವರುಗಳ ಕಣ್ಣೀರು ಬೀಳುವುದರಿಂದ ಅಲ್ಲಿ ಒಂದು ಜಗತ್ಪಾವನವಾದ ಶ್ರೇಷ್ಠಸರೋವರವು ಹುಟ್ಟಿತು.

೪೭. ಭಾರತದೇಶದಲ್ಲಿ ಅಸ್ತಪರ್ವತದ ಹಿಂಭಾಗದಲ್ಲಿರುವ ಅಕ್ಷಯವಟದ ಸಮೀಪದಲ್ಲಿ ತಪಸ್ವಿಗಳಿಗೆ ಮುಕ್ತಿಗೆ ಕಾರಣವಾದ ತಪೋಭೂಮಿಯಾಯಿತು.

೪೮. ಅನಂತರ ವಿಷ್ಣುವು ಸಕಲ ದೇವತೆಗಳಿಗೂ ಕೇಳುತ್ತಿರುವಂತೆಯೇ ಮತ್ತೆ ಈಶ್ವರನಿಗೆ ಜಿತೇಂದ್ರಿಯರಾದ ಮುನಿಗಳೆದುರಿನಲ್ಲಿ ಅಧ್ಯಾತ್ಮವಿಷಯವನ್ನು ಬೋಧಿಸಿದನು.

॥ ಶ್ರೀ ಭಗವಾನುವಾಚ ॥

ಶೃಣು ಶಂಕರ ವಕ್ಷ್ಯಾಮಿ ಜ್ಞಾನಾನಂದ ಸನಾತನ ॥ ೪೯ ॥

ಜ್ಞಾನಂ ಜ್ಞಾನನಿಧೇ ಶೋಕಾದ್ವಿಸ್ಮೃತೋऽಸಿ ಪರಾತ್ಪರ ।
ಸುದಿನಂ ದುರ್ದಿನಂ ಶಶ್ವದ್ಭವತ್ಯೇವ ಭವೇ ಭವ ॥ ೫೦ ॥

ಸರ್ವೇಷಾಂ ಪ್ರಾಕೃತಾನಾಂ ಚ ತೇ ಬೀಜೇ ಸುಖದುಃಖಯೋಃ ।
ಸುಖಾದ್ಭವತಿ ಹರ್ಷಶ್ಚ ದರ್ಪಃ ಶೌರ್ಯಂ ಪ್ರಮತ್ತತಾ ॥ ೫೧ ॥

ರಾಗ ಐಶ್ವರ್ಯಕಾಮಶ್ಚ ವಿದ್ವೇಷಶ್ಚ ನಿರಂತರಂ ।
ದುಃಖಾಚ್ಛೋಕಾತ್ಸಮುದ್ವೇಗಾದ್ಭಯಂ ನಿತ್ಯಂ ಪ್ರವರ್ತತೇ ॥ ೫೨ ॥

ಹತಾನ್ಯೇತಾನಿ ಸರ್ವಾಣಿ ಹತೇ ಬೀಜೇ ಮಹೇಶ್ವರ ।
ಸುದಿನಂ ದುರ್ದಿನಂ ಚೈವ ಸರ್ವಂ ಕರ್ಮೋದ್ಭವಂ ಭವ ॥ ೫೩ ॥

---

೪೯. ಶ್ರೀ ಭಗವಂತನು :—ಎಲೈ ಶಂಕರನೇ, ಜ್ಞಾನಸ್ವರೂಪನೂ, ಆನಂದ ಸ್ವರೂಪನೂ ಆಗಿರುವವನೇ, ಪುರಾತನನೇ, ಹೇಳುವೆನು ಕೇಳು.

೫೦. ಜ್ಞಾನನಿಧಿಯಾದ ನೀನು ದುಃಖದಿಂದ ಜ್ಞಾನವಿಷಯವನ್ನು ಮರೆತಿರುವೆ. ಪ್ರತಿಯೊಬ್ಬನಿಗೂ ಪ್ರತಿಜನ್ಮದಲ್ಲಿಯೂ ಒಳ್ಳೆಯದಿನ ಮತ್ತು ಕೆಟ್ಟ ದಿನ ಇವುಗಳು ಮತ್ತೆ ಮತ್ತೆ ಬರುತ್ತಲಿರುತ್ತವೆ.

೫೧–೫೨ ಪ್ರಕೃತಿ ಸಂಬಂಧವಾದ ಎಲ್ಲ ಕಾರ್ಯಗಳಿಗೂ ಆ ಸುಖದುಃಖಗಳು ಕಾರಣಗಳು. ಸುಖದಿಂದ ಸಂತೋಷವೂ ದರ್ಪವೂ ಶೌರ್ಯವೂ ಮದವೂ ಉಂಟಾಗುತ್ತದೆ. ಮತ್ತು ಪ್ರೀತಿಯೂ ಐಶ್ವರ್ಯಾಪೇಕ್ಷೆಯೂ ದ್ವೇಷವೂ ಉಂಟಾಗುತ್ತದೆ. ದುಃಖದಿಂದಲೂ ಶೋಕದಿಂದಲೂ ಉದ್ವೇಗದಿಂದಲೂ ಯಾವಾಗಲೂ ಭಯವುಂಟಾಗುತ್ತದೆ.

೫೩. ಎಲೈ ಮಹೇಶ್ವರನೇ, ಈ ಬೀಜವು ನಾಶವಾದರೆ ಈ ಕರ್ಮಗಳೆಲ್ಲವೂ ನಾಶವಾಗುತ್ತವೆ. ಒಳ್ಳೆಯದಿನ ಮತ್ತ ಕೆಟ್ಟದಿನ ಅವುಗಳು ಎಲ್ಲವೂ ಕರ್ಮದಿಂದಲೇ ಹುಟ್ಟುತ್ತವೆ.

ತತ್ಕರ್ಮ ತಪಸಾಂ ಸಾಧ್ಯಂ ಕರ್ಮಣಾಂ ಚ ಶುಭಾಶುಭಂ ।
ತಪಃ ಸ್ವಭಾವಸಾಧ್ಯಂ ಚ ಸ್ವಭಾವೋಽಭ್ಯಾಸತೋ ಭವೇತ್ ॥ ೫೪ ॥

ಸಂಸರ್ಗಸಾಧ್ಯೋಽಭ್ಯಾಸಶ್ಚ ಸಂಸರ್ಗಃ ಪುಣ್ಯತೋ ಭವೇತ್ ।
ಪುಣ್ಯಬೀಜಂ ಮನಶ್ಚೈವ ಪಾಪಬೀಜಂ ಚ ಚಂಚಲಂ ॥ ೫೫ ॥

ಮನಃ ಶಂಭೋ ಮಮಾಂಶಶ್ಚ ಸರ್ವೇಂದ್ರಿಯಪುರಃಸರಂ ।
ಸರ್ವೇಷಾಂ ಜನಕೋಽಹಂ ಚ ಚಿತ್ತ್ವಂ ಬ್ರಹ್ಮಾ ಪತಿಸ್ತ್ವಯಂ ॥ ೫೬ ॥

ಬ್ರಹ್ಮೈಕಂ ಮೂರ್ತಿಭೇದಸ್ತು ಗುಣಭೇದೇನ ಸಂತತಂ ।
ತದ್ಬ್ರಹ್ಮ ವಿವಿಧಂ ವಸ್ತು ಸಗುಣಂ ನಿರ್ಗುಣಂ ಶಿವ ॥ ೫೭ ॥

ಮಾಯಾಶ್ರಿತೋ ಯಃ ಸಗುಣೋ ಮಾಯಾತೀತಶ್ಚ ನಿರ್ಗುಣಃ ।
ಸ್ವೇಚ್ಛಾಮಯಶ್ಚ ಭಗವಾನಿಚ್ಛಯಾ ವಿಕರೋತಿ ಚ ॥ ೫೮ ॥

---

೫೪. ಆ ಕರ್ಮವು ತಪಸ್ಸಿನಿಂದ ಸಾಧಿಸಲ್ಪಡತಕ್ಕದು. ಮತ್ತು ಕರ್ಮಗಳು ಉತ್ತಮ ಅಧಮಭಾವವನ್ನು ಹೊಂದುವುದಕ್ಕೆ ತಪಸ್ಸು ಕಾರಣವಾಗಿರುತ್ತದೆ. ಆ ತಪಸ್ಸು ಸ್ವಭಾವದಿಂದ ಸಾಧಿಸಲು ಯೋಗ್ಯವಾಗುತ್ತದೆ. ಸ್ವಭಾವವು ಅಭ್ಯಾಸದಿಂದ ಸಾಧ್ಯವಾಗುತ್ತದೆ.

೫೫. ಅಭ್ಯಾಸವು ಸತ್ಸಹವಾಸದಿಂದುಂಟಾಗುತ್ತದೆ. ಸಹವಾಸವು ಪುಣ್ಯದಿಂದುಂಟಾಗುತ್ತದೆ. ಪುಣ್ಯಕ್ಕೆ ಮನಸ್ಸು ಕಾರಣವು. ಪಾಪಕ್ಕೆ ಚಪಲತೆಯು ಕಾರಣವು.

೫೬. ಎಲೈ ಶಂಭುವೇ, ಸಕಲೇಂದ್ರಿಯಗಳಿಂದ ಕೂಡಿದ ಮನಸ್ಸು ನನ್ನ ಅಂಶದ್ದು. ಎಲ್ಲದಕ್ಕೂ ಕಾರಣನಾದ ನಾನು ಬ್ರಹ್ಮಸ್ವರೂಪದಿಂದ ಮನಸ್ಸೆಂದು ಹೇಳಲ್ಪಟ್ಟು ಕಾರಣನಾಗಿರುವೆನು.

೫೭ ಎಲೈ ಶಿವನೇ, ಬ್ರಹ್ಮ ಎಂಬುದು ಒಂದೇ ಆದರೂ ಗುಣಗಳ ಬೇದದಿಂದ ಶರೀರಭೇದಉಂಟಾಗಿರುವುದು. ಆ ಬ್ರಹ್ಮವು ಸಗುಣ ಮತ್ತು ನಿರ್ಗುಣ ಎಂಬ ಭೇದದಿಂದ ಎರಡು ವಿಧವಾಗಿರುತ್ತದೆ.

೫೮. ಮಾಯೆಯಿಂದ ಕೂಡಿದ ಬ್ರಹ್ಮವು ಸಗುಣವೆಂದೂ ಮಾಯೆಯಿಂದ ಬಿಡಲ್ಪಟ್ಟ ಬ್ರಹ್ಮವು ನಿರ್ಗುಣವೆಂದೂ ಹೇಳಲ್ಪಡುತ್ತದೆ. ಸ್ವೇಚ್ಛಾರೂಪನಾದ ಪರಮಾತ್ಮನು ಇಚ್ಛೆಯಿಂದ ವಿಕಾರವನ್ನು ಹೊಂದುತ್ತಾನೆ.

ಇಚ್ಛಾಶಕ್ತಿಶ್ಚ ಪ್ರಕೃತಿರ್ನಿತ್ಯಾ ಸರ್ವಪ್ರಸೂಃ ಸದಾ ।
ಕೇಚಿದೇಕಂ ವದಂತ್ಯೇವ ಬ್ರಹ್ಮಜ್ಯೋತಿಃ ಸನಾತನಂ ॥ ೫೯ ॥

ಕೇಚಿದ್ವದಂತಿ ದ್ವಿವಿಧಂ ಬ್ರಹ್ಮ ಪ್ರಕೃತಿಪೂರ್ವಕಂ ।
ಶೃಣು ಯೇ ಚ ವದಂತ್ಯೇಕಂ ಮಾಯಾಪುರುಷಯೋಃ ಪರಂ ॥ ೬೦ ॥

ತಸ್ಮಾದ್ಭವತಿ ತೌ ದ್ವೌ ಚ ತದ್ಬ್ರಹ್ಮ ಸರ್ವಕಾರಣಂ ।
ಅಥ ಚೈಕಂ ಪರಂ ಬ್ರಹ್ಮ ದ್ವಿವಿಧಂ ಭವತೀಚ್ಛಯಾ ॥ ೬೧ ॥

ಇಚ್ಛಾಶಕ್ತಿಶ್ಚಪ್ರಕೃತಿಃ ಸರ್ವಶಕ್ತಿಪ್ರಸೂಃ ಸದಾ ।
ತತ್ರಾಽಽಸಕ್ತಶ್ಚ ಸಗುಣಃ ಶರೀರೀ ಪ್ರಾಕೃತಸ್ತಥಾ ॥ ೬೨ ॥

ನಿರ್ಗುಣಸ್ತತ್ರ ನಿರ್ಲಿಪ್ತೋಽಶರೀರೀ ಚ ನಿರಂಕುಶಃ ।
ಸರ್ವಾತ್ಮಾ ಭಗವನ್ನಿತ್ಯಃ ಸರ್ವಾಧಾರಃ ಸನಾತನಃ ॥ ೬೩ ॥

---

೫೯. ಇಚ್ಛಾಶಕ್ತಿಯು ಪ್ರಕೃತಿಯು. ಅದು ನಿತ್ಯವೂ ಯಾವಾಗಲೂ ಸಕಲಕ್ಕೂ ಕಾರಣವೂ ಆಗಿರುತ್ತದೆ. ಕೆಲವರು ಬ್ರಹ್ಮವು ಸನಾತನವೂ ತೇಜೋರೂಪವೂ ಒಂದೇ ಆಗಿರುವುದೂ ಎಂದು ಹೇಳುತ್ತಾರೆ.

೬೦. ಮತ್ತೆ ಕೆಲವರು ಬ್ರಹ್ಮ, ಪ್ರಕೃತಿ ಎಂದು ಎರಡು ವಿಧವಾಗಿರುವುದೆಂದು ಹೇಳುತ್ತಾರೆ. ಯಾರು ಯಾರು ಮಾಯಾಪುರುಷರು ಒಂದೆಂದು ಹೇಳುತ್ತಾರೋ ಆ ವಿಚಾರವನ್ನು ಕೇಳು.

೬೧. ಆ ಮಾಯಾ ಪುರುಷರುಗಳು ಪರಬ್ರಹ್ಮನಿಂದ ಉಂಟಾಗುವುವು. ಆ ಬ್ರಹ್ಮವು ಸಕಲಕ್ಕೂ ಕಾರಣವಾಗಿರುವುದು. ಒಂದೇ ಆದ ಪರಬ್ರಹ್ಮವು ತನ್ನ ಇಚ್ಛೆಯಿಂದ ಎರಡು ವಿಧವಾಗುತ್ತದೆ.

೬೨. ಇಚ್ಛಾಶಕ್ತಿ ರೂಪವಾದ ಪ್ರಕೃತಿಯು ಯಾವಾಗಲೂ ಸಕಲ ಶಕ್ತಿಗೂ ಕಾರಣವಾದುದು. ಅದರಲ್ಲಿ ಸಂಬಂಧಿಯಾದವನೂ, ಗುಣಸಂಬಂಧವುಳ್ಳವನೂ, ಪ್ರಾಕೃತಶರೀರಿಯೆನಿಸುವನು.

೬೩. ಶರೀಯು ನಿರ್ಗುಣನೂ, ನಿರ್ಲಿಪ್ತನೂ, ನಿರಂಕುಶನೂ ಆಗಿರುವನು. ಪರಮಾತ್ಮನಾದರೋ ಸರ್ವಸ್ವರೂಪನೂ ಸರ್ವಕ್ಕೂ ಆಧಾರನೂ, ಪುರಾತನನೂ ಆಗಿರುವನು.

ಸರ್ವೇಶ್ವರಃ ಸರ್ವಸಾಕ್ಷೀ ಸರ್ವತ್ರಾಸ್ತಿ ಫಲಪ್ರದಃ ।
ಶರೀರಂ ದ್ವಿವಿಧಂ ಶಂಭೋ ನಿತ್ಯಂ ಪ್ರಾಕೃತಮೇವ ಚ ॥ ೬೪ ॥

ನಿತ್ಯಂ ವಿನಾಶರಹಿತಂ ನಶ್ವರಂ ಪ್ರಾಕೃತಂ ಸದಾ ।
ಅಹಂ ತ್ವಂ ಚಾಪಿ ಭಗವಾನ್ನಾವಯೋರ್ನಿತ್ಯ ವಿಗ್ರಹಃ ॥ ೬೫ ॥

ಆವಯೋರಂಶಭೂತಾ ಯೇ ಪ್ರಾಕೃತಾ ನಷ್ಟವಿಗ್ರಹಾಃ ।
ರುದ್ರಾದಯಸ್ತ್ವದಂಶಾಶ್ಚ ಮದಂಶಾ ವಿಷ್ಣುರೂಪಿಣಃ ॥ ೬೬ ॥

ಮಮಾಪ್ಯೇವಂ ದ್ವಿಧಾ ರೂಪಂ ದ್ವಿಭುಜಂ ಚ ಚತುರ್ಭುಜಂ ।
ಚತುರ್ಭುಜೋಽಹಂ ವೈಕುಂಠೇ ಪದ್ಮಯಾ ಪಾರ್ಷದೈಃ ಸಹ ॥ ೬೭ ॥

---

೬೪. ಎಲೈ ಶಂಭುವೇ, ಸರ್ವಸಾಕ್ಷಿಯಾದ ಸರ್ವೇಶ್ವರನು ಕರ್ಮಫಲಗಳನ್ನು ಕೊಡುವವನಾಗಿ ಎಲ್ಲೆಡೆಯಲ್ಲಿಯೂ ಇರುವನು. ಶರೀರವು ನಿತ್ಯ ಮತ್ತು ಪ್ರಾಕೃತ ಎಂದು ಎರಡು ವಿಧವಾಗಿರುತ್ತದೆ.

೬೫. ನಿತ್ಯವೆಂದರೆ ನಾಶವಿಲ್ಲದುದೆಂದರ್ಥವು. ಪ್ರಾಕೃತವೆಂದರೆ ನಾಶವಾಗುವುದೆಂದರ್ಥವು. ನನ್ನ ಮತ್ತು ನಿನ್ನ ಶರೀರಗಳು ಕೂಡ ನಾಶವಿಲ್ಲದವುಗಳಾಗಿರುತ್ತವೆ.

೬೬. ನನ್ನ ಮತ್ತು ನಿನ್ನ ಅಂಶದಿಂದ ಉಂಟಾದ ಪಾಕೃತರ ಶರೀರಗಳೆಲ್ಲ ನಾಶವಾಗತಕ್ಕವುಗಳು. ನಿನ್ನ ಅಂಶದಿಂದ ಹುಟ್ಟಿದ ರುದ್ರನೇ ಮೊದಲಾದವರೂ, ನನ್ನ ಅಂಶದಿಂದ ಹುಟ್ಟಿದ ವಿಷ್ಣುರೂಪಿಗಳು ಇವರುಗಳೆಲ್ಲರೂ ಶರೀರನಾಶವನ್ನು ಹೊಂದುವವರೇ ಸರಿ.

೬೭. ಇದೇ ರೀತಿಯಾಗಿ ನನಗೂ ಎರಡು ರೂಪಗಳುಂಟು. ಎರಡು ತೋಳುಗಳಿಂದ ಕಂಗೊಳಿಸುವುದೊಂದು, ಮತ್ತೊಂದು ನಾಲ್ಕು ತೋಳುಗಳಿಂದ ಪ್ರಕಾಶಿಸುತ್ತಿರುವುದು. ನಾನು ವೈಕುಂಠದಲ್ಲಿ ಪರಿವಾರದವರೊಡನೆಯೂ, ಲಕ್ಷ್ಮಿಯೊಡನೆಯೂ ನಾಲ್ಕು ತೋಳುಗಳಿಂದ ಪ್ರಕಾಶಿಸುತ್ತಿರುವೆನು.

ಗೋಲೋಕೇ ದ್ವಿಭುಜೋಽಹಂ ಚ ಗೋಪೀಭಿಃ ಸಹರಾಧಯಾ ।
ದ್ವಿವಿಧಂ ಯೇ ವದಂತ್ಯೇವಂ ದ್ವೌ ಪ್ರಧಾನೌ ತು ತನ್ಮತೇ ॥ ೧೮ ॥

ಪುರುಷಶ್ಚ ಸದಾ ನಿತ್ಯೋ ನಿತ್ಯಾ ಪ್ರಕೃತಿರೀಶ್ವರೀ ।
ಸದಾ ತೌ ದ್ವೌ ಚ ಸಂಶ್ಲಿಷ್ಟೌ ಸರ್ವೇಷಾಂ ಪಿತರೌ ಶಿವ ॥ ೧೯ ॥

ಸಶರೀರೌ ನಿಃಶರೀರೌ ಸ್ವೇಚ್ಛಯಾ ಸರ್ವರೂಪಿಣೌ ।
ಪ್ರಾಧಾನ್ಯಂ ಚ ಯಥಾ ಪುಂಸಃ ಪ್ರಕೃತೇಶ್ಚ ಸದಾ ತಥಾ ॥ ೨೦ ॥

ಸತೀಮಿಚ್ಛಸಿ ಚೇಚ್ಛಂಭೋ ಪ್ರಕೃತೇಃ ಸ್ತವನಂ ಕುರು ।
ಯತ್ಸ್ತೋತ್ರಂ ಚ ತ್ವಯಾ ದತ್ತಂ ಪುರಾ ದುರ್ವಾಸಸೇ ಮುದಾ ॥ ೨೧ ॥

ತದ್ದಿವ್ಯಂ ಕಣ್ವಶಾಖೋಕ್ತಂ ಭಜ ತೇನ ಜಗತ್ಪ್ರಸೂಂ ।
ಶೋಕನಾಶೋ ಭವತು ತೇ ಶಿವಂ ಶಿವ ಮಮಾಽಽಶಿಷಾ ॥ ೨೨ ॥

---

೧೮. ಅದೇ ನಾನು ಗೋಲೋಕದಲ್ಲಿ ಗೋಪಿಯರೊಡನೆಯೂ, ರಾಧೆಯೊಡನೆಯೂ ಸಹ ಎರಡು ತೋಳುಗಳಿಂದ ಪ್ರಕಾಶಿಸುವೆನು. ಯಾರು ಆತ್ಮಸ್ವರೂಪವನ್ನು ಎರಡು ವಿಧವೆನ್ನುವರೋ ಅವರ ಮತದಲ್ಲಿ ಆ ಎರಡೂ ಪ್ರಧಾನವಾದವುಗಳು.

೧೯. ಪುರುಷನು ಯಾವಾಗಲೂ ನಿತ್ಯನು. ಎಲೈ ಶಿವನೇ, ಆ ಪ್ರಕೃತಿ ಪುರುಷರು ಯಾವಾಗಲೂ ಒಟ್ಟಾಗಿದ್ದು ಸಕಲ ಜಗತ್ತಿಗೂ ಕಾರಣರಾಗಿರುವರು.

೨೦. ಅವರು ತಮ್ಮ ಇಷ್ಟಬಂದಂತೆ ಸಶರೀರರೂ ಶರೀರರಹಿತರೂ ಸಕಲ ರೂಪಧಾರಿಗಳೂ ಆಗಬಲ್ಲರು. ಅವರಲ್ಲಿ ಪುರುಷನಿಗೆ ಎಷ್ಟು ಪ್ರಾಧಾನ್ಯವೋ ಪ್ರಕೃತಿಗೂ ಕೂಡ ಯಾವಾಗಲೂ ಅಷ್ಟೇ ಪ್ರಾಧಾನ್ಯವು

೨೧. ಎಲೈ ಶಂಭುವೇ, ನೀನು ಸತೀದೇವಿಯನ್ನು ಅಪೇಕ್ಷಿಸುವವನಾದರೆ ಈ ಹಿಂದೆ ದೂರ್ವಾಸಮುನಿಗೆ ನೀನೇ ಉಪದೇಶ ಮಾಡಿರುವ ಪ್ರಕೃತಿಸ್ತೋತ್ರವನ್ನು ಮಾಡು.

೨೨. ಆ ಸ್ತೋತ್ರವು ಕಣ್ವಶಾಖೆಯಲ್ಲಿ ಹೇಳಲ್ಪಟ್ಟಿರುವುದು. ಅದರಿಂದ ಜಗನ್ಮಾತೆಯಾದ ಪ್ರಕೃತಿಯನ್ನು ಸ್ತೋತ್ರಮಾಡು. ನನ್ನ ಆಶೀರ್ವಾದದಿಂದ ನಿನ್ನ ದುಃಖನಾಶವೂ, ಮಂಗಳವೂ ನಿನಗೆ ಉಂಟಾಗಲಿ.

ದೂರಂ ವಿಪ್ಲವಹೇತುಶ್ಚ ಯಾತು ಸ್ತ್ರೀವಿರಹಜ್ವರಃ ।
ಇತ್ಯೇವಮುಕ್ತ್ವಾ ಲಕ್ಷ್ಮೀಶೋ ವಿರರಾಮ ಗಿರೀಶ್ವರಂ ॥ ೭೩ ॥

ಶ್ರವಣಂ ಕರ್ತುರ್ಮಾರೇಭೇ ಪ್ರಕೃತೇಶ್ಚ ಮಹೇಶ್ವರಃ ।
ಸ್ನಾತ್ವಾ ನತ್ವಾ ಚ ಶ್ರೀಕೃಷ್ಣಂ ಬ್ರಹ್ಮಾಣಂ ಭಕ್ತಿಸಂಯುತಃ ।
ಪುಟಾಂಜಲಿಯುತೋ ಭೂತ್ವಾ ಪುಲಕಾಂಚಿತ ವಿಗ್ರಹಃ ॥ ೭೪ ॥

॥ ಮಹೇಶ್ವರ ಉವಾಚ ॥

॥ ಓಂ ನಮಃ ಪ್ರಕೃತ್ಯೈ ಮಂತ್ರಃ ॥

ಬ್ರಾಹ್ಮಿ ಬ್ರಹ್ಮಸ್ವರೂಪೇ ತ್ವಂ ಮಾಂ ಪ್ರಸೀದ ಸನಾತನಿ ।
ಪರಮಾತ್ಮಸ್ವರೂಪೇ ಚ ಪರಮಾನಂದರೂಪಿಣಿ ॥ ೭೫ ॥

ಭದ್ರೇ ಭದ್ರಪ್ರದೇ ದುರ್ಗೇ ದುರ್ಗಘ್ನೇ ದುರ್ಗನಾಶಿನಿ ।
ಪೋತಃ ಸ್ವರೂಪೇ ಜೀರ್ಣೇ ತ್ವಂ ಮಾಂ ಪ್ರಸೀದ ಭವಾರ್ಣವೇ ॥ ೭೬ ॥

---

೭೩. ಪ್ರಳಯವನ್ನೇ ಮಾಡಲು ಸಮರ್ಥವಾದ ನಿನ್ನ ಈ ಸ್ತ್ರೀವಿರಹಜ್ವರವು ದೂರಹೋಗಲಿ. ಈ ರೀತಿಯಾಗಿ ವಿಷ್ಣುವು ಈಶ್ವರನನ್ನು ಕುರಿತು ಉಪದೇಶಿಸಿ ಸುಮ್ಮನಾದನು.

೭೪. ಅನಂತರ ಮಹೇಶ್ವರನು ಸ್ನಾನಮಾಡಿದವನಾಗಿ ಕೃಷ್ಣನಿಗೂ, ಬ್ರಹ್ಮನಿಗೂ ನಮಸ್ಕಾರಮಾಡಿ ಭಕ್ತಿಯಿಂದ ಎರಡು ಕೈಗಳನ್ನೂ ಜೋಡಿಸಿಕೊಂಡು ಮೈಯೆಲ್ಲಾ ರೋಮಾಂಚವಾಗಿರಲು ಪ್ರಕೃತಿಯನ್ನು ಸ್ತೋತ್ರಮಾಡಲು ಪ್ರಾರಂಭ ಮಾಡಿದನು. ಮಹೇಶ್ವರನು :— "ಓಂನಮಃ ಪ್ರಕೃತ್ಯೈ" ಪ್ರಕೃತಿದೇವಿಗೆ ನಮಸ್ಕಾರವು.

೭೫. ಬ್ರಹ್ಮನ ಪತ್ನಿಯೂ, ಬ್ರಹ್ಮಸ್ವರೂಪಿಣಿಯೂ, ನಾಶರಹಿತಳೂ, ಪರಮಾತ್ಮಸ್ವರೂಪಿಣಿಯೂ, ಉತ್ತಮವಾದ ಆನಂದರೂಪಿಣಿಯೂ, ಆದ ಪ್ರಕೃತಿಯೇ, ನೀನು ನನ್ನಲ್ಲಿ ದಯೆಯನ್ನು ತೋರು.

೭೬. ಮಂಗಳ ರೂಪಿಣಿಯೂ, ಸಕಲರಿಗೂ ಮಂಗಳವನ್ನು ಮಾಡುವವಳೂ, ಶತ್ರುಗಳ ದುರ್ಗವನ್ನು ನಾಶಮಾಡುವವಳೂ, ಸಂಸಾರವೆಂಬ ದುರ್ಗವನ್ನು ದಾಟಿಸುವವಳೂ, ಸಂಸಾರವೆಂಬ ಸಮುದ್ರಕ್ಕೆ ಹಡಗಿನಂತಿರುವವಳೂ, ಮುಪ್ಪಿಲ್ಲದವಳೂ ಆದ ದುರ್ಗಾದೇವಿಯೇ, ನನ್ನನ್ನು ಅನುಗ್ರಹಿಸು.

ಸರ್ವಮಂಗಲರೂಪೇ ಚ ಸರ್ವಮಂಗಲದಾಯಿನಿ ।
ಸಮಸ್ತಮಂಗಲಾಧಾರೇ ಪ್ರಸೀದ ಸರ್ವಮಂಗಲೇ ॥ ೭೭ ॥

ನಿದ್ರೇ ತಂದ್ರೇ ಕ್ಷಮೇ ಶ್ರದ್ಧೇ ತುಷ್ಟಿಪುಷ್ಟಿಸ್ವರೂಪಿಣಿ ।
ಲಜ್ಜೇ ಮೇಧೇ ಬುದ್ಧಿರೂಪೇ ಪ್ರಸೀದ ಭಕ್ತವತ್ಸಲೇ ॥ ೭೮ ॥

ಸರ್ವಸ್ವರೂಪೇ ಸರ್ವೇಶಿ ಸರ್ವಬೀಜಸ್ವರೂಪಿಣಿ ।
ಸರ್ವಾಧಾರೇ ಸರ್ವವಿದ್ಯೇ ಮಾಂ ಪ್ರಸೀದ ಜಯಪ್ರದೇ ॥ ೭೯ ॥

ವೇದಸ್ವರೂಪೇ ವೇದಾನಾಂ ಕಾರಣೇ ವೇದದಾಯಿನಿ ।
ಸರ್ವವೇದಾಂಗರೂಪೇ ಚ ವೇದಮಾತಃ ಪ್ರಸೀದ ಮೇ ॥ ೮೦ ॥

ದಯೇ ಜಯೇ ಮಹಾಮಾಯೇ ಪ್ರಸೀದ ಜಗದಂಬಿಕೇ ।
ಕ್ಷಾಂತೇ ಶಾಂತೇ ಚ ಸರ್ವಾಂತೇ ಕ್ಷುತ್ಪಿಪಾಸಾಸ್ವರೂಪಿಣಿ ॥ ೮೧ ॥

---

೭೭. ಸಕಲ ವಿಧವಾದ ಮಂಗಳರೂಪಳೂ, ಭಜಿಸುವವರಿಗೆ ಸಕಲ ಮಂಗಳಗಳನ್ನು ಕೊಡುವವಳೂ, ಸಕಲಮಂಗಳಗಳಿಗೂ ಆಶ್ರಯಳೂ ಆದ ಸರ್ವಮಂಗಳಾದೇವಿಯೇ ನೀನು ನನ್ನಲ್ಲಿ ದಯೆಯನ್ನು ತೋರು.

೭೮. ನಿದ್ರಾಸ್ವರೂಪಳೂ, ಆಲಸ್ಯರೂಪಳೂ, ಕ್ಷಮಾಸ್ವರೂಪಳೂ, ಶ್ರದ್ಧಾಸ್ವರೂಪಳೂ, ತುಷ್ಟಿ ಮತ್ತು ಪುಷ್ಟಿರೂಪಳೂ, ಲಜ್ಜಾರೂಪಳೂ, ಬುದ್ಧಿರೂಪಳೂ ಆದ ಭಕ್ತರಲ್ಲಿ ಪ್ರೀತಿಯುಳ್ಳ ದೇವಿಯೇ ಪ್ರಸನ್ನಳಾಗು.

೭೯. ಸಕಲ ಜಗದ್ರೂಪಳೂ, ಸಕಲ ಜಗತ್ತಿಗೆ ಯಜಮಾನಿಯೂ, ಸಕಲಕ್ಕೂ ಕಾರಣರೂಪಳೂ, ಸಕಲ ಜಗತ್ತಿಗೂ ಆಧಾರರೂಪಳೂ, ಸಕಲ ವಿದ್ಯಾಸ್ವರೂಪಳೂ, ಜಯವನ್ನು ಕೊಡುವವಳೂ ಆದ ದೇವಿಯೇ ನನ್ನಲ್ಲಿ ದಯೆಯನ್ನು ತೋರು.

೮೦. ವೇದರೂಪಳೂ, ವೇದಗಳಿಗೆ ಕಾರಣಳೂ, ವೇದವನ್ನು ಕೊಡುವವಳೂ ಸಕಲ ವೇದಾಂಗಗಳರೂಪಳೂ, ವೇದಗಳಿಗೆ ತಾಯಿಯೂ ಆದ ದೇವಿಯೇ ನೀನು ನನ್ನ ಮೇಲೆ ದಯೆಯನ್ನು ತೋರು.

೮೧. ದಯಾರೂಪಳೂ, ಜಯರೂಪಳೂ, ಮಹಾಮಾಯಾರೂಪಳೂ, ಜಗತ್ತಿಗೆ ತಾಯಿಯೂ, ಕ್ಷಮೆ ಮತ್ತು ಶಾಂತಿರೂಪಳೂ, ಸಕಲ ಜಗತ್ತಿನ ಪ್ರಳಯಕಾರಣಳೂ, ಹಸಿವು ಮತ್ತು ನೀರಡಿಕೆಗಳ ಸ್ವರೂಪಳೂ ಆದ ದೇವಿಯೇ ಪ್ರಸನ್ನಳಾಗು.

ಲಕ್ಷ್ಮೀರ್ನಾರಾಯಣ ಕ್ರೋಡೇ ಸ್ರಷ್ಟುರ್ವಕ್ಷಸಿ ಭಾರತಿ ।
ಮಮ ಕ್ರೋಡೇ ಮಹಾಮಾಯೇ ವಿಷ್ಣುಮಾಯೇ ಪ್ರಸೀದ ಮೇ ॥ ೮೨ ॥

ಕಲಾಕಾಷ್ಠಾಸ್ವರೂಪೇ ಚ ದಿವಾರಾತ್ರಿಸ್ವರೂಪಿಣಿ ।
ಪರಿಣಾಮಪ್ರದೇ ದೇವಿ ಪ್ರಸೀದ ದೀನವತ್ಸಲೇ ॥ ೮೩ ॥

ಕಾರಣೇ ಸರ್ವಶಕ್ತೀನಾಂ ಕೃಷ್ಣಸ್ಯೋರಸಿ ರಾಧಿಕೇ ।
ಕೃಷ್ಣಪ್ರಾಣಾಧಿಕೇ ಭದ್ರೇ ಪ್ರಸೀದ ಕೃಷ್ಣಪೂಜಿತೇ ॥ ೮೪ ॥

ಯಶಃಸ್ವರೂಪೇ ಯಶಸಾಂ ಕಾರಣೇ ಚ ಯಶಃಪ್ರದೇ ।
ಸರ್ವದೇವೀಸ್ವರೂಪೇ ಚ ನಾರೀರೂಪವಿಧಾಯಿನಿ ॥ ೮೫ ॥

ಸಮಸ್ತಕಾಮಿನೀರೂಪೇ ಕಲಾಂಶೇನ ಪ್ರಸೀದ ಮೇ ।
ಸರ್ವಸಂಪತ್ಸ್ವರೂಪೇ ಚ ಸರ್ವಸಂಪತ್ಪ್ರದೇ ಶುಭೇ ॥ ೮೬ ॥

---

೮೨. ನಾರಾಯಣನ ಹೃದಯದಲ್ಲಿ ಲಕ್ಷ್ಮಿಯರೂಪದಿಂದಲೂ, ಬ್ರಹ್ಮನ ಎಡೆಯಲ್ಲಿ ಭಾರತಿಯ ರೂಪದಿಂದಲೂ, ನನ್ನ ಹೃದಯದಲ್ಲಿ ಮಹಾಮಾಯಾ ರೂಪದಿಂದಲೂ ಇರುವ ವಿಷ್ಣುಮಾಯೆಯೇ ನನ್ನಲ್ಲಿ ಪ್ರಸನ್ನಳಾಗು.

೮೩. ಕಲಾ ಮತ್ತು ಕಾಷ್ಠವೆಂಬ ಕಾಲಸ್ವರೂಪಳೂ, ಹಗಲು ಮತ್ತು ರಾತ್ರಿಸ್ವರೂಪಳೂ, ಜಗತ್ತಿಗೆ ಪರಿಣಾಮವನ್ನುಂಟುಮಾಡುವವಳೂ, ದುಃಖಗೊಂಡವರಲ್ಲಿ ದಯೆಯುಳ್ಳವಳೂ ಆದ ದೇವಿಯೇ ಪ್ರಸನ್ನಳಾಗು.

೮೪. ಸಕಲಶಕ್ತಿಗಳಿಗೂ ಕಾರಣಳೂ, ಕೃಷ್ಣನ ಹೃದಯದಲ್ಲಿ ರಾಧೆಯ ಸ್ವರೂಪಳೂ, ಕೃಷ್ಣನಿಗೆ ಪ್ರಾಣಪ್ರಿಯಳೂ, ಕೃಷ್ಣನಿಂದ ಪೂಜಿಸಲ್ಪಟ್ಟವಳೂ ಆದ ದೇವಿಯೇ ನೀನು ನನ್ನಲ್ಲಿ ಪ್ರಸನ್ನಳಾಗು.

೮೫. ಕೀರ್ತಿಸ್ವರೂಪಳೂ, ಕೀರ್ತಿಗೆ ಕಾರಣಳೂ, ಕೀರ್ತಿಯನ್ನು ಕೊಡುವವಳೂ, ಸಕಲ ದೇವೀರೂಪಳೂ ಜಗತ್ತಿನಲ್ಲಿರುವ ಸಮಸ್ತ ಸ್ತ್ರೀಯರನ್ನೂ ನಿರ್ಮಿಸುವವಳೂ ಆದ ದೇವಿಯೇ ಪ್ರಸನ್ನಳಾಗು.

೮೬. ಕಲಾಂಶದಿಂದ ಸಮಸ್ತ ಕಾಮಿನಿಯರ ಸ್ವರೂಪಳೂ, ಸಕಲ ಸಂಪತ್ಸ್ವರೂಪಳೂ, ಸಕಲೈಶ್ವರ್ಯಗಳನ್ನು ಕೊಡುವವಳೂ, ಮಂಗಳಕರಳೂ ಆದ ದೇವಿಯೇ ನೀನು ನನ್ನಲ್ಲಿ ಪ್ರಸನ್ನಳಾಗು.

ಪ್ರಸೀದ ಪರಮಾನಂದೇ ಕಾರಣೇ ಸರ್ವಸಂಪದಾಂ ।
ಯಶಸ್ವಿನಾಂ ಪೂಜಿತೇ ಚ ಪ್ರಸೀದ ಯಶಸಾಂನಿಧೇ　　॥ ೮೭ ॥

ಆಧಾರೇ ಸರ್ವಜಗತಾಂ ರತ್ನಾಧಾರೇ ವಸುಂಧರೇ ।
ಚರಾಚರಸ್ವರೂಪೇ ಚ ಪ್ರಸೀದ ಮಮ ಮಾ ಚಿರಂ　　॥ ೮೮ ॥

ಯೋಗಸ್ವರೂಪೇ ಯೋಗೀಶೇ ಯೋಗದೇ ಯೋಗಕಾರಣೇ ।
ಯೋಗಾಧಿಷ್ಠಾತ್ರಿದೇವೀಶೇ ಪ್ರಸೀದ ಸಿದ್ಧಯೋಗಿನಿ　　॥ ೮೯ ॥

ಸರ್ವಸಿದ್ಧಿಸ್ವರೂಪೇ ಚ ಸರ್ವಸಿದ್ಧಿಪ್ರದಾಯಿನಿ ।
ಕಾರಣೇ ಸರ್ವಸಿದ್ಧೀನಾಂ ಸಿದ್ಧೇಶ್ವರಿ ಪ್ರಸೀದ ಮೇ　　॥ ೯೦ ॥

---

೮೭. ಪರಮಾನಂದರೂಪಳೂ, ಸಕಲ ಸಂಪತ್ತುಗಳಿಗೆ ಕಾರಣಳೂ, ಕೀರ್ತಿವಂತರಿಂದ ಪೂಜಿಸಲ್ಪಟ್ಟವಳೂ, ಕೀರ್ತಿಗೆ ಗಣಿಯೂ, ಆದ ದೇವಿಯೇ ನೀನು ಪ್ರಸನ್ನಳಾಗು.

೮೮. ಸಕಲ ಜಗತ್ತುಗಳಿಗೂ ಆಧಾರಳೂ, ಸಕಲ ರತ್ನಗಳಿಗೆ ಆಶ್ರಯಳೂ, ಭೂಮಿರೂಪಳೂ, ಚರಾಚರಸ್ವರೂಪಳೂ ಆದ ದೇವಿಯೇ, ಸಾವಕಾಶಮಾಡದೆ ನನ್ನಲ್ಲಿ ದಯೆಯನ್ನು ತೋರು.

೮೯. ಯೋಗಸ್ವರೂಪಳೂ, ಯೋಗಿಗಳಿಗೆಲ್ಲಾ ಶ್ರೇಷ್ಠಳೂ, ಯೋಗಶಕ್ತಿಯನ್ನು ಕೊಡುವವಳೂ, ಯೋಗಕ್ಕೆ ಕಾರಣಳೂ, ಯೋಗದ ಅಭಿಮಾನಿ ದೇವತೆಯೂ, ಯೋಗಸಿದ್ಧಿಯನ್ನು ಪಡೆದಿರುವವಳೂ ಆದ ದೇವೇಶಿಯೇ, ಪ್ರಸನ್ನಳಾಗು.

೯೦. ಸಕಲಸಿದ್ಧಿರೂಪಳೂ, ಸಕಲಸಿದ್ಧಿಯನ್ನು ಕೊಡುವವಳೂ, ಸಕಲ ಸಿದ್ಧಿಗಳಿಗೂ ಕಾರಣಳೂ, ಸಿದ್ಧರಿಗೆ ಸ್ವಾಮಿನಿಯೂ ಆದ ದೇವಿಯೇ, ನೀನು ನನ್ನಲ್ಲಿ ಪ್ರಸನ್ನಳಾಗು.

**ವ್ಯಾಖ್ಯಾನಂ ಸರ್ವಶಾಸ್ತ್ರಾಣಾಂ ಮತಭೇದೇ ಮಹೇಶ್ವರಿ ।
ಜ್ಞಾನೇ ಯದುಕ್ತಂ ತತ್ಸರ್ವಂ ಕ್ಷಮಸ್ವ ಪರಮೇಶ್ವರಿ ॥ ೯೧ ॥**

**ಕೇಚಿದ್ವದಂತಿ ಪ್ರಕೃತೇಃ ಪ್ರಾಧಾನ್ಯಂ ಪುರುಷಸ್ಯ ಚ ।
ಕೇಚಿತ್ತತ್ರ ಮತದ್ವೈಧೇ ವ್ಯಾಖ್ಯಾಭೇದಂ ವಿದುರ್ಬುಧಾಃ ॥ ೯೨ ॥**

**ಮಹಾವಿಷ್ಣೋರ್ನಾಭಿದೇಶೇ ಸ್ಥಿತಂ ತಂ ಕಮಲೋದ್ಭವಂ ।
ಮಧುಕೈಟಭೌ ಮಹಾದೈತ್ಯೌ ಲೀಲಯಾ ಹಂತುಮುದ್ಯತೌ ॥ ೯೩ ॥**

**ದೃಷ್ಟ್ವಾ ಸ್ತುತಿಂ ಪ್ರಕುರ್ವಂತಂ ಬ್ರಹ್ಮಾಣಂ ರಕ್ಷಿತುಂ ಪುರಾ ।
ಬೋಧಯಾಮಾಸ ಗೋವಿಂದಂ ವಿನಾಶಹೇತವೇ ತಯೋಃ ॥ ೯೪ ॥**

**ನಾರಾಯಣಸ್ತ್ವಯಾ ಶಕ್ತ್ಯಾ ಜಘಾನ ತೌ ಮಹಾಸುರೌ ।
ಸರ್ವೇಶ್ವರಸ್ತ್ವಯಾ ಸಾರ್ಧಮನೀಶೋಽಯಂ ತ್ವಯಾ ವಿನಾ ॥ ೯೫ ॥**

---

೯೧. ಸಕಲ ಶಾಸ್ತ್ರಗಳ ವ್ಯಾಖ್ಯಾನರೂಪಳೂ, ಮತಭೇದಸ್ವರೂಪಳೂ ಆದ ಮಹೇಶ್ವರಿಯೇ, ನನ್ನಿಂದ ಹೇಳಲ್ಪಟ್ಟ ಅಜ್ಞಾನದ ಮಾತುಗಳನ್ನು ನೀನು ಕ್ಷಮಿಸುವವಳಾಗು.

೯೨. ಕೆಲವರು ಪ್ರಕೃತಿಯೇ ಮುಖ್ಯವೆಂದು ಹೇಳುವರು. ಮತ್ತೆ ಕೆಲವರು ಪುರುಷನೇ ಮುಖ್ಯನೆಂದು ಹೇಳುವರು. ವಿದ್ವಾಂಸರಾದವರು ಎರಡು ಮತಭೇದ ಗಳಿರುವುದರಿಂದ ವ್ಯಾಖ್ಯಾನದಲ್ಲಿ ಭೇದವನ್ನು ತಿಳಿಯುತ್ತಾರೆ.

೯೩. ಹಿಂದೆ ಮಹಾವಿಷ್ಣುವಿನ ನಾಭಿಯಲ್ಲಿದ್ದ ಬ್ರಹ್ಮನನ್ನು ಅತಿ ಬಲವಂತ ರಾದ ಮಧುಕೈಭಟರೆಂಬ ರಾಕ್ಷಸರು ಕೊಲ್ಲಲು ಸಿದ್ಧರಾದರು.

೯೪. ಇದನ್ನು ನೋಡಿ ಸ್ತೋತ್ರಮಾಡಿದ ಬ್ರಹ್ಮನನ್ನು ರಕ್ಷಿಸುವುದಕ್ಕಾಗಿ ಮತ್ತು ಆ ರಾಕ್ಷಸರನ್ನು ಕೊಲ್ಲುವುದಕ್ಕಾಗಿಯೂ ನಾರಾಯಣನನ್ನು ನೀನು ಎಚ್ಚರಗೊಳಿಸಿದೆ.

೯೫. ನಾರಾಯಣನು ನಿನ್ನಿಂದೊಡಗೂಡಿ ಆ ರಾಕ್ಷಸನನ್ನು ಕೊಂದನು. ಆ ನಾರಾಯಣನು ನಿನ್ನಿಂದ ಕೂಡಿದವನಾದರೆ ಸಕಲಕ್ಕೂ ಪ್ರಭುವೆನಿಸುವನು. ನಿನ್ನಿಂದ ಬಿಡಲ್ಪಟ್ಟವನಾದರೆ ಯಾವ ಕಾರ್ಯದಲ್ಲಿಯೂ ಸಮರ್ಥನಾಗಲಾರನು.

ಪುರಾ ತ್ರಿಪುರಸಂಗ್ರಾಮೇ ಗಗನಾತ್ಪತಿತೇ ಮಯಿ ।
ತ್ವಯಾ ಚ ವಿಷ್ಣುನಾ ಸಾರ್ಧಂ ರಕ್ಷಿತೋಽಹಂ ಸುರೇಶ್ವರಿ ॥ ೯೬ ॥

ಅಧುನಾ ರಕ್ಷ ಮಾಮೀಶೇ ಪ್ರದಗ್ಧಂ ವಿರಹಾಗ್ನಿನಾ ।
ಸ್ವಾತ್ಮಸಂದರ್ಶನಪಣ್ಯೇನ ಕ್ರೀಣೀಹಿ ಪರಮೇಶ್ವರಿ ॥ ೯೭ ॥

ಇತ್ಯುಕ್ತ್ವಾ ವಿರತಃ ಶಂಭುರ್ದದರ್ಶ ಗಗನಸ್ಥಿತಾಂ ।
ರತ್ನಸಾರರಥಸ್ಥಾಂ ತಾಂ ದೇವೀಂ ಶತಭುಜಾಂ ಮುದಾ ॥ ೯೮ ॥

ತಪ್ತಕಾಂಚನವರ್ಣಾಭಾಂ ರತ್ನಾಭರಣಭೂಷಿತಾಂ ।
ಈಷದ್ಧಾಸ್ಯಪ್ರಸನ್ನಾಸ್ಯಾಂ ಜಗತಾಂ ಮಾತರಂ ಸತೀಂ ॥ ೯೯ ॥

ದೃಷ್ಟ್ವಾ ತಾಂ ವಿರಹಾಸಕ್ತಃ ಪುನಸ್ತುಷ್ಟಾವ ಸತ್ವರಂ ।
ದುಃಖಂ ನಿವೇದಯಾಮಾಸ ಪ್ರರುದನ್ವಿರಹೋದ್ಭವಂ ॥ ೧೦೦ ॥

---

೯೬. ಎಲೈ ದೇವೇಶ್ವರಿಯೇ, ಪೂರ್ವದಲ್ಲಿ ತ್ರಿಪುರಾಸುರರೊಡನೆ ಯುದ್ಧ ಮಾಡುತ್ತಿರುವಾಗ ನಾನು ಆಕಾಶದಿಂದ ಬೀಳಲು ವಿಷ್ಣುಸಹಿತಳಾದ ನಿನ್ನಿಂದ ನಾನು ಕಾಪಾಡಲ್ಪಟ್ಟೆನು.

೯೭. ಎಲೈ ಈಶ್ವರಿಯೇ, ಈಗಲೂ ವಿರಹಾಗ್ನಿಯಿಂದ ಸುಡುತ್ತಿರುವ ನನ್ನನ್ನು ಕಾಪಾಡು. ಎಲೈ ಪರಮೇಶ್ವರಿಯೇ, ನಿನ್ನ ರೂಪವನ್ನು ತೋರಿಸುವಿಕೆ ಯೆಂಬ ಬೆಲೆಯಿಂದ ನನ್ನನ್ನು ಕೊಂಡುಕೊಳ್ಳುವವಳಾಗು.

೯೮-೯೯. ಈ ಪ್ರಕಾರ ಸ್ತೋತ್ರಮಾಡಿ ಸುಮ್ಮನಾದ ಪರಮೇಶ್ವರನು ಆಕಾಶಮಧ್ಯದಲ್ಲಿ ಉತ್ತಮ ರತ್ನಮಯವಾದ ರಥದಲ್ಲಿ ಕುಳಿತಿರುವ, ನೂರು ತೋಳು ಗಳನ್ನು ಹೊಂದಿರುವ, ಕಾಯಿಸಿದ ಚಿನ್ನದಂತೆ ಕಂಗೊಳಿಸುತ್ತಿರುವ, ದಿವ್ಯರತ್ನ ಗಳಿಂದ ಮಾಡಿರುವ ಒಡವೆಗಳಿಂದ ಅಲಂಕಾರಮಾಡಿಕೊಂಡಿರುವ, ಮುಗುಳುನಗೆ ಯಿಂದ ಕೂಡಿದ, ಗಂಭೀರವಾದ ಮುಖವುಳ್ಳ, ಸಕಲ ಜಗತ್ತಿಗೂ ತಾಯಿಯಾದ ಸತೀದೇವಿಯನ್ನು ಕಂಡನು.

೧೦೦. ಆ ಸತೀದೇವಿಯನ್ನು ಕಂಡೊಡನೆಯೇ ಮತ್ತೆ ವಿರಹವ್ಯಥೆಯಿಂದ ಕೂಡಿದವನಾಗಿ ಮತ್ತೂ ಸ್ತೋತ್ರಮಾಡಿದನು. ಅಳುತ್ತ ತನ್ನ ವಿರಹದುಃಖವನ್ನು ತಿಳಿಸಿದನು.

ದರ್ಶಯಾಮಾಸಾಸ್ಥಿಮಾಲಾಂ ಸ್ವಾಂಗಸ್ಥಂ ಭಸ್ಮಭೂಷಣಂ ।
ಕೃತ್ವಾ ಬಹುಹರೀಹಾರಂ ತೋಷಯಾಮಾಸ ಸುಂದರೀಂ ॥ ೧೦೧ ॥

ನಾರಾಯಣಶ್ಚ ಬ್ರಹ್ಮಾ ಚ ಧರ್ಮಃ ಶೇಷಃ ಸುರರ್ಷಯಃ ।
ಶಿವಂ ರಕ್ಷೇಶ್ವರೀತ್ಯುಕ್ತ್ವಾ ತುಷ್ಟುವುಸ್ತೇ ಸನಾತನೀಂ ॥ ೧೦೨ ॥

ಬಭೂವ ಪರಿತುಷ್ಟಾ ಸಾ ತೇಷಾಂ ಸ್ತೋತ್ರೇಣ ತತ್‌ಕ್ಷಣಂ ।
ಉವಾಚ ಕೃಪಯಾ ಶಂಭುಂ ಪ್ರಾಣೇಶಂ ಪ್ರಾಣವಲ್ಲಭಾ ॥ ೧೦೩ ॥

॥ ಪ್ರಕೃತಿರುವಾಚ ॥

ಸ್ಥಿರೋ ಭವ ಮಹಾದೇವ ಮಮ ಪ್ರಾಣಾಧಿಕಪ್ರಭೋ ।
ಭವಾನಾತ್ಮಾ ಚ ಯೋಗೀಶಃ ಸ್ವಾಮೀ ಜನ್ಮನಿ ಜನ್ಮನಿ ॥ ೧೦೪ ॥

ಅಹಂ ಶೈಲೇಂದ್ರಕಾಮಿನ್ಯಾಂ ಲಬ್ಧ್ವಾ ಜನ್ಮ ಮಹೇಶ್ವರ ।
ತವ ಪತ್ನೀ ಭವಿಷ್ಯಾಮಿ ಮುಂಚ ತ್ವಂ ವಿರಹಜ್ವರಂ ॥ ೧೦೫ ॥

---

೧೦೧. ಮತ್ತು ತನ್ನ ಶರೀರದಲ್ಲಿ ಧರಿಸಿರುವ ಎಲುಬಿನ ಮಾಲಿಕೆಯನ್ನೂ, ಬೂದಿಯ ಅಲಂಕಾರವನ್ನೂ ತೋರಿಸಿದನು ಮತ್ತು ನಾನಾವಿನೋದಗಳಿಂದ ಆ ದೇವಿಯನ್ನು ಸಂತೋಷಗೊಳಿಸಿದನು.

೧೦೨. ನಾರಾಯಣನೂ, ಬ್ರಹ್ಮನೂ, ಧರ್ಮನೂ, ಆದಿಶೇಷನೂ, ದೇವರ್ಷಿಗಳೂ ಕೂಡ ಎಲೈ ಈಶ್ವರಿಯೇ, ಶಿವನನ್ನು ಕಾಪಾಡು ಎಂದು ಹೇಳುತ್ತ ನಾಶರಹಿತಳಾದ ಆ ದೇವಿಯನ್ನು ಸ್ತೋತ್ರಮಾಡಿದರು.

೧೦೩. ಆ ದೇವಿಯು ಅವರ ಸ್ತೋತ್ರದಿಂದ ಆಗಲೇ ಸಂತೋಷಗೊಂಡಳು. ಮತ್ತು ಪ್ರಾಣೇಶ್ವರನಾದ ಶಂಭುವನ್ನು ಕುರಿತು ದಯೆಯಿಂದ ಈ ರೀತಿಯಾಗಿ ಹೇಳಿದನು.

೧೦೪. ಪ್ರಕೃತಿಯು :—ಎಲೈ ನನ್ನ ಪ್ರಾಣಪ್ರಿಯನೂ, ಪ್ರಭುವೂ ಆದ ಮಹಾದೇವನೇ, ಸ್ಥಿರಬುದ್ಧಿಯುಳ್ಳವನಾಗು. ಆತ್ಮಸ್ವರೂಪನೂ, ಯೋಗೀಶ್ವರನೂ ಆದ ನೀನು ಪ್ರತಿಜನ್ಮದಲ್ಲಿಯೂ ನನಗೆ ಪತಿಯು.

೧೦೫. ಎಲೈ ಮಹೇಶ್ವರನೇ, ನಾನು ಪರ್ವತರಾಜನ ಪತ್ನಿಯಲ್ಲಿ ಜನ್ಮವನ್ನು ಪಡೆದವಳಾಗಿ ನಿನ್ನ ಪತ್ನಿಯಾಗುವೆನು. ನೀನು ಈ ವಿರಹದ ದುಃಖವನ್ನು ಬಿಡು.

ಇತ್ಯುಕ್ತ್ವಾ ಶಿವಮಾಶ್ವಾಸ್ಯ ಚಾಂತರ್ಧಾನಂ ಚಕಾರ ಸಾ ।
ಸುರಾ ಜಗ್ಮುಸ್ತಮಾಶ್ವಾಸ್ಯ ಲಜ್ಜಾನಮ್ರಾತ್ಮಕಂಧರಂ ॥ ೧೦೬ ॥

ಹೃಷ್ಟಾಂತರಾತ್ಮಾಗಿರಿಶಃ ಕೈಲಾಸಂ ತು ಜಗಾಮ ಹ ।
ನನರ್ತ ಸಗಣಸ್ತೂರ್ಣಂ ಸಂತ್ಯಜ್ಯ ವಿರಹಜ್ವರಂ ॥ ೧೦೭ ॥

ಇದಂ ಶಿವಕೃತಂ ಸ್ತೋತ್ರಂ ಪ್ರಕೃತ್ಯಾ ಯಃ ಪಠೇನ್ನರಃ ।
ನ ಭವೇತ್ಕಾಮಿನೀಭೇದಸ್ತಸ್ಯ ಜನ್ಮನಿ ಜನ್ಮನಿ ॥ ೧೦೮ ॥

ಇಹ ಲೋಕೇ ಸುಖಂ ಭುಕ್ತ್ವಾ ಸ ಯಾತಿ ಶಿವಮಂದಿರಂ ।
ಧರ್ಮಾರ್ಥಕಾಮಮೋಕ್ಷಾಂಶ್ಚ ಲಭತೇ ನಾತ್ರ ಸಂಶಯಃ ॥ ೧೦೯ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರದನಾರಾಯಣಸಂವಾದೇ ಶಂಕರಶೋಕಾಪನೋದನಂ ನಾಮ
ತ್ರಿಚತ್ವಾರಿಂಶೋಽಧ್ಯಾಯಃ

---

೧೦೬. ಈ ಪ್ರಕಾರ ಹೇಳಿ ಶಿವನನ್ನು ಸಮಾಧಾನಗೊಳಿಸಿ ಆ ದೇವಿಯು ಮಾಯವಾದಳು. ದೇವತೆಗಳೂ ಕೂಡ ನಾಚಿಕೆಯಿಂದ ತಲೆಬಾಗಿಸಿ ನಿಂದಿರುವ ಶಂಕರನನ್ನು ಸಮಾಧಾನಪಡಿಸಿ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

೧೦೭. ಈಶ್ವರನೂ ಕೂಡ ಸಂತೋಷಗೊಂಡ ಮನಸ್ಸುಳ್ಳವನಾಗಿ ಕೈಲಾಸಕ್ಕೆ ಹೋದನು. ವಿರಹದುಃಖವನ್ನು ಬಿಟ್ಟು ತನ್ನ ಗಣಗಳಿಂದೊಡಗೂಡಿ ಆನಂದದಿಂದ ಕುಣಿದನು.

೧೦೮–೧೦೯. ಈಶ್ವರನಿಂದ ಮಾಡಲ್ಪಟ್ಟ ಈ ಪ್ರಕೃತಿಯ ಸ್ತೋತ್ರವನ್ನು ಯಾವ ಮನುಜನು ಹೇಳುತ್ತಾನೋ, ಅವನಿಗೆ ಪ್ರತಿಜನ್ಮದಲ್ಲಿಯೂ ಪತ್ನೀವಿಯೋಗ ವುಂಟಾಗುವುದಿಲ್ಲ. ಮತ್ತು ಈ ಲೋಕದಲ್ಲಿ ಸೌಖ್ಯವನ್ನನುಭವಿಸಿ ಅನಂತರ ಕೈಲಾಸಕ್ಕೆ ಹೋಗುತ್ತಾನೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳನ್ನು ಕೂಡ ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ನಾರದ ನಾರಾಯಣ ಸಂವಾದದಲ್ಲಿ ಶಂಕರನ
ದುಃಖಮೋಚನವೆಂಬ ನಲವತ್ತಮೂರನೆಯ
ಅಧ್ಯಾಯವು ಮುಗಿದುದು.

ನಲವತ್ತಮೂರನೆಯ ಅಧ್ಯಾಯದ ಸಾರಾಂಶ.

ದಾಕ್ಷಾಯಣಿಯು ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ದೇಹತ್ಯಾಗಮಾಡಿ ತನ್ನ ಪ್ರಾಕ್ತನಶರೀರವನ್ನು ಹೊಂದಿ ಗಂಗಾತೀರದಲ್ಲಿ ಪವಡಿಸಿರುವುದನ್ನು ತಿಳಿದ ಶಂಕರನು ಅಲ್ಲಿಗೆ ಹೋಗಿ ಆ ದೇಹವನ್ನು ಅಪ್ಪಿಕೊಂಡು ಗೋಳಾಡುತ್ತ ಪ್ರಪಂಚ ದಲ್ಲೆಲ್ಲಾ ಅಲೆದಾಡುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ವಿಷ್ಣು ಮುಂತಾದ ದೇವತೆಗಳೆಲ್ಲಾ ಅಲ್ಲಿಗೆ ಬಂದರು. ವಿಷ್ಣುವು ಶಂಕರನಿಗೆ ಸೃಷ್ಟಿತತ್ವಗಳನ್ನು ತಿಳಿಸಿದನು. ಆಗ ಶಂಕರನು ಮೂಲಪ್ರಕೃತಿರೂಪಿಣಿಯಾದ ದಾಕ್ಷಾಯಣಿಯನ್ನು ಸ್ತೋತ್ರಮಾಡಲು, ಆ ದೇವಿಯು ಪ್ರಸನ್ನಳಾಗಿ ದಿವ್ಯಯಾನದಲ್ಲಿ ಬಂದು, ಹಿಮವಂತನ ಪತ್ನಿಯಾದ ಮೇನೆಯಲ್ಲಿ ಜನಿಸಿ ಶಂಕರನನ್ನು ವರಿಸುವುದಾಗಿ ಹೇಳಿ ಅಂತರ್ಧಾನ ಹೊಂದಿದಳು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಚತುಶ್ಚತ್ವಾರಿಂಶೋಽಧ್ಯಾಯಃ ॥

॥ ಶ್ರೀಕೃಷ್ಣ ಉವಾಚ ॥

ವಸಿಷ್ಠಸ್ಯ ವಚಃ ಶ್ರುತ್ವಾ ಸಗಣೋಽಪಿ ಹಿಮಾಲಯಃ ।
ವಿಸ್ಮಿತೋ ಭಾರ್ಯಯಾ ಸಾರ್ಧಂ ಜಹಾಸ ಪಾರ್ವತೀ ಸ್ವಯಂ ॥ ೧ ॥

ಅರುಂಧತೀಂ ಚ ತಾಂ ಮೇನಾಂ ಬೋಧಯಾಮಾಸ ಕಾತರಾಂ ।
ನಿರಾಹಾರಾಂ ಚ ರುದತೀಂ ಜಹೌ ಶೋಕಂ ಮುದಾ ಚ ಸಾ ॥ ೨ ॥

ಅರುಂಧತೀಂ ಭೋಜಯಿತ್ವಾ ಬುಭುಜೇ ಭೋಗಮುತ್ತಮಂ ।
ಸರ್ವಂ ಪ್ರಹೃಷ್ಟಮನಸಾ ಮಂಗಲಂ ಚ ಚಕಾರ ಹ ॥ ೩ ॥

ನಲವತ್ತನಾಲ್ಕನೆಯ ಅಧ್ಯಾಯವು.

೧. ಶ್ರೀಕೃಷ್ಣನು:—ವಸಿಷ್ಠಮುನಿಯ ಮಾತನ್ನು ಕೇಳಿ ಪರಿವಾರ ಸಮೇತನಾದ ಹಿಮವಂತನು ಆಶ್ಚರ್ಯಗೊಂಡನು. ಪಾರ್ವತಿಯು ನಕ್ಕಳು.

೨. ಅರುಂಧತೀದೇವಿಯು ಆಹಾರವನ್ನು ಬಿಟ್ಟು ಅಳುತ್ತಿರುವ ವ್ಯಾಕುಲಗೊಂಡಿರುವ ಆ ಮೇನಾದೇವಿಗೆ ಉಪದೇಶಮಾಡಿದಳು. ಆಗ ಮೇನಾದೇವಿಯು ದುಃಖವನ್ನು ಬಿಟ್ಟು ಸಂತೋಷವನ್ನು ಹೊಂದಿದಳು.

೩. ಅರುಂಧತೀದೇವಿಗೆ ಉತ್ತಮವಾದ ಭೋಜನವನ್ನು ಮಾಡಿಸಿ ತಾನೂ ಭೋಜನವನ್ನು ಮಾಡಿದಳು. ಸಂತೋಷಗೊಂಡ ಮನಸ್ಸಿನಿಂದ ಎಲ್ಲಾ ವಿಧವಾದ ಮಂಗಲಕಾರ್ಯಗಳನ್ನೂ ಮಾಡಿದಳು.

ಶೈಲಃ ಸಂಭೃತಸಂಭಾರೋ ವಸಿಷ್ಠಸ್ಯಾಜ್ಞಯಾ ಪ್ರಿಯೇ ।
ಪತ್ರಂ ಪ್ರಸ್ಥಾಪಯಾಮಾಸ ನಾನಾಸ್ಥಾನಂ ತ್ವರಾನ್ವಿತಃ ॥ ೪ ॥

ತತಃ ಪ್ರಸ್ಥಾಪಯಾಮಾಸ ಶಿವಂ ಮಂಗಲಪತ್ರಿಕಾಂ ।
ನಾನಾಪ್ರಕಾರದ್ರವ್ಯಾಣಿ ಬಾಹ್ಯಾನಿ ಚ ಚಕಾರ ಹ ॥ ೫ ॥

ತಂಡುಲಾನಾಂ ಚ ಶೈಲಾನ್ಯೈ ಪೃಥುಕಾನಾಂ ಚ ಸುಂದರಿ ।
ತೈಲಾನಾಂ ಚ ಘೃತಾನಾಂ ಚ ದಧ್ನಾಂ ವಾಪೀಶ್ಚಕಾರ ಹ ॥ ೬ ॥

ಗುಡಾನಾಮಾಸವಾನಾಂ ಚ ಕ್ಷೀರಾಣಾಂ ಚ ತಥೈವ ಚ ।
ಅಥೋ ಹೈಯಙ್ಗವೀನಾನಾಂ ಲವಣಾನಾಂ ಪರಂ ಮುದಾ ॥ ೭ ॥

ಲಡ್ಡುಕಾನಾಂ ಶರ್ಕರಾಣಾಂ ಸ್ವಸ್ತಿಕಾನಾಂ ತಥೈವ ಚ ।
ಯವಚೂರ್ಣಾದಿ ಪಿಷ್ಟಾನಾಂ ಘೃತಪಕ್ವಾನಿ ತಾನಿ ಚ ॥ ೮ ॥

---

೪. ಹಿಮವಂತನೂ ಕೂಡ ಸಕಲ ಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು ವಸಿಷ್ಠರ ಅಪ್ಪಣೆಯ ಪ್ರಕಾರ ಶೀಘ್ರವಾಗಿ ನಾನಾ ಸ್ಥಳಗಳಿಗೆ ವಿವಾಹಲಗ್ನಪತ್ರಿಕೆಗಳನ್ನು ಕಳುಹಿಸಿದನು.

೫. ಅನಂತರ ಈಶ್ವರನಿಗೆ ಮಂಗಳಪತ್ರಿಕೆಯನ್ನು ಕಳುಹಿಸಿಕೊಟ್ಟನು ಮತ್ತು ಮದುವೆಗೆ ಬೇಕಾಗುವ ನಾನಾವಿಧವಾದ ಸಾಮಗ್ರಿಗಳನ್ನು ಸಿದ್ಧಪಡಿಸಿದನು.

೬. ಎಲೈ ಸುಂದರಿಯೇ, ಪರ್ವತದಂತೆ ರಾಶಿಯಾಗಿರುವ ಅಕ್ಕಿ ಮತ್ತು ಅವಲಕ್ಕಿಗಳನ್ನೂ, ಎಣ್ಣೆ, ತುಪ್ಪ ಮತ್ತು ಮೊಸರು ಇವುಗಳ ಬಾವಿಗಳನ್ನೂ ಮಾಡಿಸಿದನು.

೭. ಬೆಲ್ಲದ ರಾಶಿಯನ್ನೂ, ಮದ್ಯ ಮತ್ತು ಹಾಲುಗಳ ಬಾವಿಗಳನ್ನೂ, ಹಸುವಿನ ತುಪ್ಪ ಮತ್ತು ಉಪ್ಪು ಇವುಗಳನ್ನೂ ಸಿದ್ಧಪಡಿಸಿದನು.

೮. ನಾನಾವಿಧವಾದ ಉಂಡೆಗಳನ್ನೂ, ಸಕ್ಕರೆಯ ರಾಶಿಯನ್ನೂ, ನಾನಾ ವಿಧವಾದ ಮಂಗಳದ್ರವ್ಯಗಳನ್ನೂ, ಅಕ್ಕಿಯೇ ಮೊದಲಾದ ಧಾನ್ಯಗಳ ಹಿಟ್ಟುಗಳನ್ನೂ, ತುಪ್ಪದಲ್ಲಿ ಕರಿದ ಆ ಹಿಟ್ಟುಗಳ ಭಕ್ಷ್ಯಗಳನ್ನೂ, (ಚಕ್ಕುಲಿ ಮೊದಲಾದವುಗಳು) ಸಿದ್ಧಪಡಿಸಿದನು.

ನಾನಾಪ್ರಕಾರವಸ್ತ್ರಾಣಿ ವಹ್ನಿ ಶೌಚಾನಿ ಯಾನಿ ಚ ।
ಮಹಾರತ್ನಪ್ರವಾಲಾನಿ ಸುವರ್ಣರಜತಾನಿ ಚ　　॥ ೯ ॥

ದ್ರವ್ಯಾಣ್ಯೇತಾನಿ ಶೈಲೇಂದ್ರಃ ಕೃತ್ವಾತು ವಿಧಿಪೂರ್ವಕಂ ।
ಮಂಗಲಂ ಕರ್ತುಮಾರೇಭೇ ತತ್ರೈವ ಮಂಗಲೇ ದಿನೇ　　॥ ೧೦ ॥

ಸಂಸ್ಕಾರಂ ಕಾರಯಾಮಾಸುಃ ಪಾರ್ವತೀಂ ಪರ್ವತಸ್ತ್ರಿಯಃ ।
ಸ್ನಾಪಯಿತ್ವಾ ವಸ್ತ್ರಯುಗ್ಮಂ ಧಾರಯಾಮಾಸುರಾಶು ತಾಃ　　॥ ೧೧ ॥

ಕಾರಯಿತ್ವಾ ಸುವೇಷಾಂ ಚ ರತ್ನ ಭೂಷಣಭೂಷಿತಾಂ ।
ದರ್ಪಣಂ ಧಾರಯಾಮಾಸುಃ ದೂರ್ವಾಕ್ಷತ ಸಮನ್ವಿತಾಂ　　॥ ೧೨ ॥

ಮಧುಶ್ಚಾಲಕ್ತಕಂ ಚಾರು ಪಾದಾಂಗುಲಿಷು ಪಾದಯೋಃ ।
ಗಂಡೇ ಪತ್ರಾವಲೀಂ ರಮ್ಯಾಂ ನೇತ್ರೇ ಕಜ್ಜಲಮುಜ್ಜ್ವಲಂ　　॥ ೧೩ ॥

---

೯. ನಾನಾವಿಧವಾದ ಪರಿಶುದ್ಧವಾದ ವಸ್ತ್ರಗಳನ್ನೂ, ಉತ್ತಮವಾದ ರತ್ನಗಳನ್ನೂ ಮುತ್ತು, ಹವಳ, ಚಿನ್ನ, ಬೆಳ್ಳಿ ಇವುಗಳನ್ನೂ ಸಿದ್ಧಪಡಿಸಿದನು.

೧೦. ಹಿಮವಂತನು ಈ ರೀತಿಯಾದ ಸಂಭಾರಗಳನ್ನು ಸಿದ್ಧಪಡಿಸಿಕೊಂಡು ಶುಭದಿನವಲ್ಲಿ ಮಂಗಲಕಾರ್ಯಗಳನ್ನು ಮಾಡಲು ಪ್ರಾರಂಭಿಸಿದನು.

೧೧. ಹಿಮವಂತನ ಸಂಬಂಧಿಗಳಾದ ಸ್ತ್ರೀಯರು ಪಾರ್ವತಿಗೆ ವಿವಾಹೋಚಿತ ಮಂಗಳಸಂಸ್ಕಾರಗಳನ್ನು (ಎಣ್ಣೆ ಶಾಸ್ತ್ರ ಮುಂತಾದುವು) ಮಾಡಿ ತೈಲಾಭ್ಯಂಜನವನ್ನು ಮಾಡಿಸಿ ಉತ್ತಮವಾದ ಪೀತಾಂಬರಗಳನ್ನು ಉಡಿಸಿದರು.

೧೨. ಮತ್ತು ರತ್ನಮಯವಾದ ಆಭರಣಗಳಿಂದ ಆಯಾಯ ಅಂಗಗಳನ್ನು ಅಲಂಕರಿಸಿದರು. ದೂರ್ವಾಕ್ಷತೆಗಳೊಡನೆ ಕನ್ನಡಿ ಕಲಶಗಳನ್ನು ಹಿಡಿದುಕೊಂಡರು.

೧೩. ಉತ್ತಮವಾದ ಅರಗಿನ ರಸವನ್ನು ಪಾರ್ವತಿಯ ಎರಡು ಕಾಲುಗಳಿಗೂ ಕಾಲುಗಳ ಬೆರಳುಗಳಿಗೂ ಹಚ್ಚಿದರು. ಕೆನ್ನೆಯ ಮೇಲೆ ಮಕರಿಕಾದಿ ಪತ್ರಗಳನ್ನು ಬರೆದು ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿದರು.

ಕಬರೀಂ ಕಾರಯಾಮಾಸುರ್ಮಾಲತೀಮಾಲ್ಯವೇಷ್ಟಿತಾಂ ।
ಪಟ್ಟಸೂತ್ರಪಿನದ್ಧಾಂ ತಾಂ ವಾಮವಕ್ತ್ರಾಂ ಮನೋಹರಾಂ ॥ ೧೪ ॥

ಏತಸ್ಮಿನ್ನಂತರೇ ರಾಧೇ ಸಮಾಜಗ್ಮುಃ ಸುರೇಶ್ವರಾಃ ।
ನೀತ್ವಾ ತ್ರಿನೇತ್ರಂ ತತ್ರೈವ ರತ್ನಯಾನಸ್ಥಮೀಶ್ವರಂ ॥ ೧೫ ॥

ಶೈಲಃ ಸಂಭೃತಸಂಭರಾನ್ ಸಂಭಾಷಯಿತುಮೀಶ್ವರಾನ್ ।
ಶೈಲಾನ್ ಪ್ರಸ್ಥಾಪಯಾಮಾಸ ಬ್ರಾಹ್ಮಣಾನಪಿ ಪೂಜಿತಾನ್ ॥ ೧೬ ॥

ಪ್ರಾಂಗಣಂ ಕಾರಯಾಮಾಸ ರಂಭಾಸ್ತಂಭೈಃ ಸಮನ್ವಿತಂ ।
ಪಟ್ಟಸೂತ್ರಸಂನಿಬದ್ಧರಸಾಲಪಲ್ಲವಾನ್ವಿತೈಃ ॥ ೧೭ ॥

ಫಲಪಲ್ಲವಸಂಯುಕ್ತೈಃ ಕಲಶೈರ್ಜಲಸಂಯುತೈಃ ।
ಚಂದನಾಗುರುಕಸ್ತೂರೀಸುಚಾರುಕುಸುಮಾನ್ವಿತೈಃ ॥ ೧೮ ॥

ಮಾಲತೀಮಾಲ್ಯಸಂಯುಕ್ತೈಃ ಸಂಯುಕ್ತಂ ಸುಮನೋಹರಂ ।
ದೇವೇಶ್ವರಾನ್ಪುರೋ ದೃಷ್ಟ್ವಾ ಪ್ರಣನಾಮ ಹಿಮಾಲಯಃ ॥ ೧೯ ॥

---

೧೪. ಜಡೆಯನ್ನು ಹಾಕಿ ಮಾಲತೀ ಹೂವುಗಳನ್ನು ಪಟ್ಟೆಯ ದಾರದಲ್ಲಿ ಕಟ್ಟಿಮುಡಿಸಿ ಸುಂದರವಾದ ಮುಖವುಳ್ಳ ಆ ಪಾರ್ವತಿಯನ್ನು ಅಲಂಕರಿಸಿದಳು.

೧೫. ಎಲೈ ರಾಧೆಯೇ, ಈ ಸಂದರ್ಭದಲ್ಲಿ ದೇವತೆಗಳಲ್ಲಿ ಶ್ರೇಷ್ಠರಾದವರು ಈಶ್ವರನನ್ನು ರತ್ನಮಯವಾದ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಅಲ್ಲಿಗೆ ಬಂದರು.

೧೬. ಹಿಮವಂತನು ವಿವಾಹಯೋಗ್ಯವಾದ ಮಂಗಳದ್ರವ್ಯಗಳೊಡನೆ ಬಂದಿರುವ ದೇವೇಶ್ವರರನ್ನು ಮಾತನಾಡಿಸಲು ಪರ್ವತರನ್ನೂ ಸತ್ಕರಿಸಲ್ಪಟ್ಟ ಬ್ರಾಹ್ಮಣರನ್ನೂ ಕಳುಹಿಸಿದನು.

೧೭-೧೯. ಮನೆಯ ಮುಂಭಾಗಗಳನ್ನು ಸುತ್ತಲೂ ಬಾಳೆಯ ಕಂಭಗಳಿಂದಲೂ, ಪಟ್ಟೆಯದಾರದಿಂದ ಕಟ್ಟಿದ ಮಾವಿನ ಚಿಗುರುಗಳಿಂದಲೂ, ಅಲಂಕರಿಸಿದನು ಮತ್ತು ಹಣ್ಣುಗಳಿಂದಲೂ, ನೀರಿನಿಂದ ತುಂಬಿದ ಕಲಶಗಳಿಂದಲೂ, ಚಂದನವೇ ಮೊದಲಾದ ಸುಗಂಧದ್ರವ್ಯಗಳಿಂದಲೂ, ಮಾಲತೀಹೂವಿನ ಮಾಲಿಕೆಗಳಿಂದಲೂ ಕಂಗೊಳಿಸುವಂತೆ ಮಾಡಿ ತನ್ನಲ್ಲಿಗೆ ಬಂದಿರುವ ದೇವೇಶ್ವರನನ್ನು ನೋಡಿ ಹಿಮವಂತನು ಸಂತೋಷದಿಂದ ನಮಸ್ಕಾರಮಾಡಿದನು.

ರತ್ನಸಿಂಹಾಸನಂ ದಾತುಂ ಪ್ರೇರಯಾಮಾಸ ಕಿಂಕರಾನ್ ।
ನಾರಾಯಣೋ ಹಿ ಭಗವಾನುವಾಸ ಪಾರ್ಷದೈಃ ಸಹ ॥ ೨೦ ॥

ವಿನತಾನಂದನಾತ್ತೂರ್ಣಮವರುಹ್ಯ ಚತುರ್ಭುಜಃ ।
ಚತುರ್ಭುಜೈಃ ಪಾರ್ಷದೈಶ್ಚ ರತ್ನಭೂಷಣಭೂಷಿತೈಃ ॥ ೨೧ ॥

ರತ್ನಮುಷ್ಟಿನಿಬದ್ಧೈಶ್ಚ ಸೇವಿತಃ ಶ್ವೇತಚಾಮರೈಃ ।
ಋಷಿಶ್ರೇಷ್ಠೈಃ ಸುರಶ್ರೇಷ್ಠೈಃ ಸ್ತೂಯಮಾನಶ್ಚ ಸಂಸದಿ ॥ ೨೨ ॥

ಈಷದ್ಧಾಸ್ಯಪ್ರಸನ್ನಾಸ್ಯೋ ಭಕ್ತಾನುಗ್ರಹಕಾರಕಃ ।
ಉವಾಸ ಚ ತದಭ್ಯಾಶೇ ಬ್ರಹ್ಮಾ ದೇವಗಣೈಃ ಸಹ ॥ ೨೩ ॥

ಋಷಯೋ ಮುನಯಶ್ಚೈವ ಸಮೂಷುರ್ಮಂಗಲೇ ಸ್ಥಲೇ ।
ಏತಸ್ಮಿನ್ನಂತರೇ ಶಂಭುರವರುಹ್ಯ ರಥಾದಹೋ ॥ ೨೪ ॥

೨೦–೨೩. ಅವರಿಗೆಲ್ಲ ರತ್ನಮಯವಾದ ಸಿಂಹಾಸನವನ್ನು ಕೊಡುವಂತೆ ಸೇವಕರಿಗೆ ಆಜ್ಞಾಪಿಸಿದನು. ಪೂಜ್ಯನಾದ ನಾರಾಯಣನು ಗರುಡನಿಂದ ಇಳಿದು ನಾಲ್ಕು ತೋಳುಗಳಿಂದ ಪ್ರಕಾಶಿಸುತ್ತ ತನ್ನಂತೆ ನಾಲ್ಕು ತೋಳುಗಳುಳ್ಳ ಪರಿವಾರದವರೊಡನೆ ರತ್ನಾಲಂಕಾರಗಳಿಂದ ಅಲಂಕೃತನಾಗಿ ರತ್ನದ ಹಿಡಿಗಳಿಂದ ಕೂಡಿದ ಬಿಳಿಯ ಚಾಮರಗಳಿಂದ ಸೇವಿಸಲ್ಪಡುತ್ತಿರುವವನಾಗಿ ಮುನಿವರರಿಂದಲೂ ದೇವೋತ್ತಮರಿಂದಲೂ ಸ್ತೋತ್ರಮಾಡಲ್ಪಡುವವನಾಗಿ ಮಂದಹಾಸದಿಂದ ಗಂಭೀರವಾದ ಮುಖವುಳ್ಳವನಾಗಿ ಭಕ್ತರಿಗೆ ಅನುಗ್ರಹವನ್ನು ಮಾಡಲುದ್ಯುಕ್ತನಾಗಿ ಸಭೆಯಲ್ಲಿ ಬಂದು ಕುಳಿತನು. ಅವನ ಸಮೀಪದಲ್ಲಿ ಬ್ರಹ್ಮನು ದೇವತೆಗಳ ಗುಂಪಿನೊಡನೆ ಬಂದು ಕುಳಿತನು.

೨೪–೨೬. ಋಷಿಗಳೂ ಮುನಿಗಳೂ ಕೂಡ ಮಂಗಳ ಮಂಟಪದಲ್ಲಿ ಬಂದು ಕುಳಿತರು. ಈ ಸಮಯದಲ್ಲಿ ಈಶ್ವರನು ರಥದಿಂದಿಳಿದು ರತ್ನಮಯವಾದ ಸಿಂಹಾಸನದಲ್ಲಿ ಕುಳಿತು ವಿವಾಹ ಸಮಾರಂಭದ ಅಲಂಕಾರಗಳಿಂದ ಮನೋಹರ

ರತ್ನಾಸನೇ ಸಮುತ್ತಿಷ್ಠ ದದರ್ಶ ಪರ್ವತಾಲಯಂ ।
ಸಮಾಜಗ್ಮುಃ ಶಿವಂ ದ್ರಷ್ಟುಂ ಶೈಲೇಂದ್ರನಗರಸ್ತ್ರಿಯಃ ॥ ೨೫ ॥

ವೃದ್ಧಾ ಬಾಲಾ ಯುವತ್ಯಶ್ಚ ವಸ್ತ್ರಾಭರಣ ಭೂಷಿತಾಃ ।
ಕಾಶ್ಚಿತ್ಕಜ್ಜಲಹಸ್ತಾಶ್ಚ ವಸ್ತ್ರಹಸ್ತಾಶ್ಚ ಕಾಶ್ಚನ ॥ ೨೬ ॥

ಕಾಶ್ಚಿತ್ಸಿಂಧೂರ ಹಸ್ತಾಶ್ಚ ಕಾಶ್ಚಿತ್ಕಂಕತಿಕಾಕರಾಃ ।
ವೇಷಾರ್ಧಭೂಷಿತಾಃ ಕಾಶ್ಚಿತ್ಕಾಶ್ಚಿನ್ನೈವಾರ್ಧಭೂಷಿತಾಃ ॥ ೨೭ ॥

ಕಾಶ್ಚಿನ್ನಿರ್ಭೂಷಿತಾಃ ಕಾಶ್ಚಿತ್ಸರ್ವಾಭರಣ ಭೂಷಿತಾಃ ।
ಸರ್ವಾ ಆಗತ್ಯ ಸಂತಸ್ಥುಃ ಸಸ್ಮಿತಾಃ ಪರ್ವತಾಲಯೇ ॥ ೨೮ ॥

ಋಷಿಕನ್ಯಾ ದೇವಕನ್ಯಾ ನಾಗಕನ್ಯಾ ಮನೋಹರಾಃ ।
ಗಂಧರ್ವಶೈಲಕನ್ಯಾಶ್ಚ ರಾಜಕನ್ಯಾಸ್ಸಮಾಗತಾಃ ॥ ೨೯ ॥

ವಾದ ಹಿಮವಂತನ ಮನೆಯನ್ನು ನೋಡಿದನು. ಈಶ್ವರನನ್ನು ನೋಡುವ ಕುತೂಹಲದಿಂದ ಹಿಮವಂತನ ನಗರದಲ್ಲಿರುವ ಸ್ತ್ರೀಯರುಗಳೂ, ಮುದುಕಿಯರೂ, ಹುಡುಗಿಯರೂ, ಯುವತಿಯರೂ ಎಲ್ಲರೂ ವಸ್ತ್ರಾಭರಣಗಳಿಂದ ಅಲಂಕಾರ ಮಾಡಿಕೊಂಡವರಾಗಿ ಬಂದರು. ಅವರಲ್ಲಿ ಕೆಲವರು ಕಾಡಿಗೆಯನ್ನೂ ಕೆಲವರು ದಿವ್ಯವಸ್ತ್ರಗಳನ್ನೂ ಕೈಯಲ್ಲಿ ಹಿಡಿದವರಾಗಿ ಬಂದರು.

೨೭–೨೮. ಕೆಲವರು ಚಂದ್ರವನ್ನು ಹಿಡಿದವರಾಗಿಯೂ, ಕೆಲವರು ಬಾಚಣಿಗೆ ಯನ್ನು ಹಿಡಿದವರಾಗಿಯೂ ಕೆಲವರು ನಾನಾಲಂಕಾರಗಳಿಂದ ಭೂಷಿತರಾಗಿಯೂ ಮತ್ತೆ ಕೆಲವರು ಅರ್ಧಾಲಂಕಾರಮಾಡಿಕೊಂಡವರಾಗಿಯೂ ಇನ್ನೂ ಕೆಲವರು ಅಲಂಕಾರವನ್ನು ಮಾಡಿಕೊಳ್ಳದವರಾಗಿಯೂ ಸಕಲರೂ ಆ ಹಿಮವಂತನ ಮನೆಗೆ ಬಂದು ಸಂತೋಷದಿಂದ ಕುಳಿತುಕೊಂಡರು.

೨೯–೩೦ ಋಷಿಕುಮಾರಿಯರೂ, ದೇವಕನ್ಯೆಯರೂ, ನಾಗಕನ್ಯೆಯರೂ, ಗಂಧರ್ವಕನ್ಯೆಯರೂ ಪರ್ವತಕನ್ಯೆಯರೂ ಮತ್ತು ರಾಜಪುತ್ರಿಯರೂ ಕೂಡ ಅಲಂಕರಿಸಿ

ಸರ್ವಾ ಅಪ್ಸರಸೋ ದಿವ್ಯಾ ರಂಭಾದ್ಯಾಃ ಸಮುಪಸ್ಥಿತಾಃ ।
ಮೇನಾ ಕನ್ಯಾಗಣೈಃ ಸಾರ್ಧಂ ದದರ್ಶ ಶಂಕರಂ ವರಂ ॥ ೩೦ ॥

ಚಾರುಚಂಪಕವರ್ಣಾಭಮೇಕವಕ್ತ್ರಂ ತ್ರಿಲೋಚನಂ ।
ಈಷದ್ಧಾಸ್ಯಪ್ರಸನ್ನಾಸ್ಯಂ ರತ್ನಾಭರಣಭೂಷಿತಂ ॥ ೩೧ ॥

ಚಂದನಾಗುರುಕಸ್ತೂರೀಚಾರುಕುಂಕುಮಭೂಷಿತಂ ।
ಮಾಲತೀಮಾಲ್ಯಸಂಯುಕ್ತಂ ಸದ್ರತ್ನಮುಕುಟೋಜ್ಜ್ವಲಂ ॥ ೩೨ ॥

ವಹ್ನಿಶೌಚೇನಾತುಲೇನ ಚಾತಿಸೂಕ್ಷ್ಮೇಣ ಚಾರುಣಾ ।
ಅಮೂಲ್ಯವಸ್ತ್ರಯುಗ್ಮೇನ ವಿಚಿತ್ರೇಣಾತಿಭೂಷಿತಂ ॥ ೩೩ ॥

ರತ್ನದರ್ಪಣಹಸ್ತಂ ಚ ಕಜ್ಜಲೋಜ್ಜ್ವಲಲೋಚನಂ ।
ಸರ್ವಯಾ ಪ್ರಭಯಾಽಽಚ್ಛನ್ನಮತೀವ ಸುಮನೋಹರಂ ॥ ೩೪ ॥

ಕೊಂಡವರಾಗಿ ಹಿಮವಂತನ ಮನೆಗೆ ಬಂದರು. ಮತ್ತು ರಂಭೆಯೇ ಮೊದಲಾದ ಎಲ್ಲ ಅಪ್ಸರಸೆಯರೂ ಬಂದರು. ಮೇನಾದೇವಿಯು ಕನ್ಯಾಸಮೂಹದೊಡನೆ ಬಂದು ಶಂಕರನನ್ನು ನೋಡಿದಳು.

೩೧-೩೪. ಸುಂದರವಾದ ಸಂಪಿಗೆಯ ಹೂವಿನ ಬಣ್ಣದಂತೆ ಕಾಂತಿಯುಳ್ಳ, ಒಂದೇ ಮುಖವನ್ನು ಧರಿಸಿ ಮೂರು ಕಣ್ಣುಗಳಿಂದ ಶೋಭಿಸುತ್ತ ರತ್ನಮಯವಾದ ಆಭರಣಗಳಿಂದ ಅಲಂಕೃತನಾಗಿಯೂ, ಮಂದಹಾಸದಿಂದ ಕೂಡಿದ ಮುಖವುಳ್ಳವನಾಗಿಯೂ ಚಂದನ, ಅಗರು, ಕಸ್ತೂರಿ, ಕೇಸರಿ ಮುಂತಾದ ದ್ರವ್ಯಗಳಿಂದ ಭೂಷಿತನಾಗಿಯೂ, ಮಾಲತೀ ಪುಷ್ಪದ ಮಾಲಿಕೆಯನ್ನು ಧರಿಸಿ ರತ್ನಮಯವಾದ ಕಿರೀಟದಿಂದ ವಿರಾಜಮಾನನಾಗಿಯೂ, ಅಗ್ನಿಯಂತೆ ಪರಿಶುದ್ಧವಾದ ಅತಿಸೂಕ್ಷ್ಮವಾದ ಮನೋಹರವಾದ ಮತ್ತು ಬೆಲೆಬಾಳುವ ವಿಚಿತ್ರವಾದ ವಸ್ತ್ರಗಳಿಂದಲಂಕೃತನಾಗಿಯೂ, ಕೈಯಲ್ಲಿ ರತ್ನಮಯವಾದ ಕನ್ನಡಿಯನ್ನು ಹಿಡಿದಿರುವ ಕಾಡಿಗೆಯಿಂದ ಪ್ರಕಾಶಮಾನವಾದ ಕಣ್ಣುಗಳುಳ್ಳ, ಸಮಸ್ತ ಕಾಂತಿಯಿಂದಲೂ ಕೂಡಿ ಅತ್ಯಂತ ಮನೋಹರನಾದ ಶಂಕರನನ್ನು ಮೇನಾದೇವಿಯು ನೋಡಿದಳು.

ಅತೀವತರುಣಂ ರಮ್ಯೈರ್ಭೂಷಿತಾಂಗೈಶ್ಚ ಭೂಷಿತಂ ।
ಬಿಭ್ರಂತಂ ರೂಪಮತುಲಂ ಪರಂ ನಾರಾಯಣಾಜ್ಞಯಾ ॥ ೩೫ ॥

ಯೋಗಸ್ವರೂಪಂ ಯೋಗೇಶಂ ಯೋಗೀಂದ್ರಾಣಾಂ ಗುರೋರ್ಗುರುಂ ।
ಸ್ವೇಚ್ಛಾಮಯಂ ಗುಣಾತೀತಂ ಬ್ರಹ್ಮಜ್ಯೋತಿಃ ಸನಾತನಂ ॥ ೩೬ ॥

ಗುಣಬೇಧಾದ್ರೂಪಬೇಧಂ ಧತ್ತೇಽನಂತಮರೂಪಕಂ ।
ತಾರಣಂ ತಂ ಭವಸ್ಥಾನಾಂ ಸೃಷ್ಟಿಸ್ಥಿತ್ಯಂತಕಾರಣಂ ॥ ೩೭ ॥

ಸರ್ವಾಧಾರಂ ಸರ್ವಬೀಜಂ ಸರ್ವೇಶಂ ಸರ್ವಜೀವನಂ ।
ಸಾಕ್ಷಿರೂಪಂ ನಿರೀಹಂ ಚ ಪರಮಾನಂದಮಕ್ಷರಂ ॥ ೩೮ ॥

ಆದ್ಯಂತಮಧ್ಯರಹಿತಂ ಸರ್ವಾದ್ಯಂ ಸರ್ವರೂಪಕಂ ।
ದೃಷ್ಟ್ವಾ ಜಾಮಾತರಂ ಮೇನಾ ಜಹೌ ಶೋಕಂ ಮುದಾನ್ವಿತಾ ॥ ೩೯ ॥

೩೫–೩೮. ಅತ್ಯಂತ ತರುಣನಾಗಿಯೂ, ಅಲಂಕೃತನಾಗಿಯೂ ನಾರಾಯಣನ ಆಜ್ಞೆಯಂತೆ ಎಣೆಯಿಲ್ಲದ ರೂಪವನ್ನು ಧರಿಸಿದವನಾಗಿಯೂ, ಯೋಗಸ್ವರೂಪನಾಗಿಯೂ, ಯೋಗಗಳಿಗೆ ಅಧಿಪತಿಯಾಗಿಯೂ, ಯೋಗಿಶ್ರೇಷ್ಠರಿಗೂ ಗುರುಗಳಿಗೂ ಗುರುವಾಗಿಯೂ, ಸ್ವೇಚ್ಛಾರೂಪನಾಗಿಯೂ, ಸಕಲಗುಣಗಳಿಂದಲೂ ಬೇರೆಯಾದವನಾಗಿಯೂ, ಶಾಶ್ವತನೂ ಬ್ರಹ್ಮತೇಜೋರೂಪನೂ ಸಕಲ ಪ್ರಪಂಚಕ್ಕೆ ಆಶ್ರಯನೂ, ಸಕಲಕ್ಕೂ ಕಾರಣನೂ, ಸಕಲರಿಗೂ ಅಧಿಪತಿಯೂ, ಗುಣಭೇದದಿಂದ ಬೇರೆ ಬೇರೆ ರೂಪಗಳನ್ನು ಧರಿಸುವವನೂ, ಅನಂತರೂಪನೂ, ರೂಪರಹಿತನೂ, ಸೃಷ್ಟಿ ಸ್ಥಿತಿ ಪ್ರಳಯಗಳಿಗೆ ಕಾರಣನೂ, ಸಂಸಾರದಲ್ಲಿ ಬಳಲುವವರನ್ನು ಪರಿತ್ರಾಣಮಾಡುವವನೂ, ಸರ್ವಸಾಕ್ಷಿಸ್ವರೂಪನೂ, ಆಶಾರಹಿತನೂ, ಪರಮಾನಂದರೂಪನೂ, ನಾಶರಹಿತನೂ ಆದ ಶಂಕರನನ್ನು ನೋಡಿದಳು.

೩೯. ಆದಿಮಧ್ಯಾಂತರಹಿತನೂ ಸರ್ವಸ್ವರೂಪನೂ, ಸರ್ವಾದಿಯೂ, ಶಂಕರನೂ ಆದ ಅಳಿಯನನ್ನು ನೋಡಿ ಮೇನಾದೇವಿಯು ಮನಸ್ಸಿನಲ್ಲಿದ್ದ ದುಃಖವನ್ನು ಬಿಟ್ಟು ಸಂತೋಷಗೊಂಡಳು.

ಪ್ರಶಶಂಸುರ್ಯುವತ್ಯಶ್ಚ ಧನ್ಯಾ ಧನ್ಯಾ ಸತೀತಿ ಯೋಃ ।
ದುರ್ಗಾಂ ಭಾಗ್ಯವತೀತ್ಯೇವಮೂಚುಃ ಕಾಶ್ಚನ ಕನ್ಯಕಾಃ ॥ ೪೦ ॥

ಕಾಮೇನ ಕಶ್ಚಿತ್ಕಾಮಿನ್ಯೋ ಮೌನೀಭೂತಾಶ್ಚ ಸ್ತಂಭಿತಾಃ ।
ನ ದೃಷ್ಟೋ ವರ ಇತ್ಯೇವಮುಸ್ಮಾಭಿಜ್ಞಾನಗೋಚರೇ ॥ ೪೧ ॥

ಕಾಶ್ಚಿನ್ನಿಮೇಷರಹಿತಾ ಮೂರ್ಛಾಮಾಪುಶ್ಚ ಕಾಶ್ಚನ ।
ನಿನಿಂದುಃ ಸ್ವಪತಿಂ ಕಾಶ್ಚಿತ್ಸ್ವೇಚ್ಛಾಂ ಚಕ್ರುಶ್ಚ ಕಾಶ್ಚನ ॥ ೪೨ ॥

ಕಾಶ್ಚಿದ್ಭಾವೇನ ರುರುದುಃ ಪುಲಕಾಂಚಿತವಿಗ್ರಹಾಃ ।
ಜಗುರ್ಗಂಧರ್ವಪತಯೋ ನನೃತುಶ್ಚಾಪ್ಸರೋ ಗಣಾಃ ॥ ೪೩ ॥

ದೃಷ್ಟ್ವಾ ಶಂಕರರೂಪಂ ಚ ಪ್ರಹೃಷ್ಟಾಃ ಸರ್ವದೇವತಾಃ ।
ನಾನಾಪ್ರಕಾರವಾದ್ಯಾನಿ ಚಾರೂಣಿ ಮಧುರಾಣಿ ಚ ॥ ೪೪ ॥

---

೪೦. ಕೆಲವರು ಸ್ತ್ರೀಯರು ಸತೀದೇವಿಯು ಧನ್ಯಳು ಎಂದು ಅವಳನ್ನು ಹೊಗಳಿದರು. ಕೆಲವು ಕನ್ಯೆಯರು ದುರ್ಗಾದೇವಿಯು ಪುಣ್ಯವತಿಯೆಂದು ಹೇಳಿಕೊಂಡರು.

೪೧. ಕೆಲಮಂದಿ ಸ್ತ್ರೀಯರು ಕಾಮವಿಕಾರದಿಂದ ಮೌನವನ್ನು ಧರಿಸಿ ಅಲ್ಲಾಡದೆ ನಿಂತರು. ಈ ರೀತಿಯಾದ ವರನನ್ನು ನಾವು ಯಾವಾಗಲೂ ನೋಡಿರಲಿಲ್ಲವೆಂದು ಕೆಲವರು ಆಶ್ಚರ್ಯದಿಂದ ನೋಡಿದರು.

೪೨. ಕೆಲವು ಸ್ತ್ರೀಯರು ಎವೆಯಿಕ್ಕದೆ ಶಂಕರನನ್ನು ನೋಡುತ್ತ ಮೂರ್ಛೆ ಹೊಂದಿದರು. ಮತ್ತೆ ಕೆಲವರು ತಮ್ಮ ಪತಿಗಳನ್ನು ನಿಂದಿಸಿಕೊಂಡರು. ಇನ್ನು ಕೆಲವರು ತಾವೂ ಶಂಕರನನ್ನು ಹೊಂದಬೇಕೆಂದು ಬಯಸಿದರು.

೪೩. ಮತ್ತೆ ಕೆಲವರು ರೋಮಾಂಚವನ್ನು ಹೊಂದಿದವರಾಗಿ ಈಶ್ವರನಲ್ಲಿ ನಟ್ಟಮನೋಭಾವವುಳ್ಳವರಾಗಿ ಅತ್ತರು. ಗಂಧರ್ವ ಶ್ರೇಷ್ಠರೆಲ್ಲರೂ ಗಾನಮಾಡಿದರು. ಅಪ್ಸರಸ್ತ್ರೀಯರೆಲ್ಲರೂ ಗುಂಪುಸೇರಿ ನರ್ತನಮಾಡಿದರು.

೪೪-೪೬. ದೇವತೆಗಳೆಲ್ಲರೂ ಶಂಕರನ ರೂಪವನ್ನು ನೋಡಿ ಸಂತೋಷಗೊಂಡರು. ವಾದ್ಯಗಾರರು ನಾನಾವಿಧವಾದ ವಾದ್ಯಗಳನ್ನು ಬಹಳ ನಿಪುಣತೆಯಿಂದ

ನಾದೇಶಾ ವಾದಯಾಮಾಸುರ್ನಾನಾಶಿಲ್ಪೇನ ತತ್ರ ವೈ ।
ಏತಸ್ಮಿನ್ನಂತರೇ ದುರ್ಗಾಂ ಶೈಲಾನ್ತಃಪುರಚಾರಿಕಾ ॥ ೪೫ ॥

ಬಹಿಶ್ಚಕಾರ ಸದ್ರತ್ನಾಸನಸ್ಥಾಂ ವಸ್ತ್ರವೇಷ್ಟಿತಾಂ ।
ಕಸ್ತೂರೀಬಿಂದುಭಿಃ ಸಾಂದ್ರಸಿಂದೂರಬಿಂದುಭೂಷಿತಾಂ ॥ ೪೬ ॥

ಚಾರುಚಂದನಚಂದ್ರಾಭಾಂ ನಮ್ರಭಾಲಸ್ಥಲೋಜ್ಜ್ವಲಾಂ ।
ರತ್ನೇಂದ್ರಸಾರಹಾರೇಣ ವಕ್ಷಃಸ್ಥಲವಿಭೂಷಿತಾಂ ॥ ೪೭ ॥

ತ್ರಿನೇತ್ರದತ್ತನೇತ್ರಾಂ ತಾಮನ್ಯವಾರಿತಲೋಚನಾಂ ।
ಅತೀಷದ್ಧಾಸ್ಯ ಯುಕ್ತಾಸ್ಯಾಂ ಸಕಟಾಕ್ಷಾಂ ಮನೋಹರಾಂ ॥ ೪೮ ॥

ರತ್ನಕೇಯೂರವಲಯರತ್ನಕಂಕಣಮಂಡಿತಾಂ ।
ರತ್ನಪಾಶಕ ಸಂಸಕ್ತಾಂ ಕ್ವಣನ್ಮಂಜೀರ ರಂಜಿತಾಂ ॥ ೪೯ ॥

ಬಾರಿಸಿದರು. ಈ ಸಂದರ್ಭದಲ್ಲಿ ಹಿಮವಂತನ ಅಂತಃಪುರದ ಪರಿಚಾರಿಕೆಯು ದುರ್ಗಾರೂಪಿಣಿಯಾದ ಪಾರ್ವತಿಯನ್ನು ಮಂಟಪಕ್ಕೆ ಕರೆತಂದು ದಿವ್ಯರತ್ನಮಯ ವಾದ ಸಿಂಹಾಸನದಲ್ಲಿ ಕುಳ್ಳಿರಿಸಿದಳು. ಆಗ ಅವಳ ಅಲಂಕಾರವು ಹೇಗಿದ್ದಿತೆಂದರೆ ಕಸ್ತೂರಿ ಬಿಂದುವಿನಿಂದ ಕೂಡಿದ ದಟ್ಟವಾದ ಚಂದ್ರದ ಬೊಟ್ಟಿನಿಂದ ಅಲಂಕರಿಸ ಲ್ಪಟ್ಟಿದ್ದಳು.

೪೭-೪೮. ಮತ್ತು ಮನೋಹರವಾದ ದಿವ್ಯಗಂಧವನ್ನು ಲೇಪಿಸಿಕೊಂಡು, ಚಂದ್ರನಂತಿರುವ ಮುಖವನ್ನು ಬಾಗಿಸಿಕೊಂಡು, ಉತ್ತಮವಾದ ರತ್ನಖಚಿತಹಾರ ವನ್ನು ವಕ್ಷಃಸ್ಥಳದಲ್ಲಿ ಧರಿಸಿ, ತನ್ನ ದೃಷ್ಟಿಯನ್ನು ಬೇರೊಂದೆಡೆಯಲ್ಲಿಡದೆ ಈಶ್ವರ ನಲ್ಲಿಯೇ ನಟ್ಟದೃಷ್ಟಿಯುಳ್ಳವಳಾಗಿ, ಮಂದಹಾಸದಿಂದ ಕೂಡಿದ ಮುಖವುಳ್ಳವಳಾಗಿ ಕಡೆಗಣ್ಣಿನ ನೋಟದಿಂದ ಸುಂದರಳಾಗಿ ಪ್ರಕಾಶಿಸುತ್ತಿದ್ದಳು.

೪೯-೫೧. ರತ್ನಮಯವಾದ ಭುಜಕೀರ್ತಿ, ಬಳೆಗಳು, ಕಂಕಣಗಳು ಇವು ಗಳಿಂದ ಅಲಂಕರಿಸಲ್ಪಟ್ಟವಳಾಗಿ ಪಾಶಕವೆಂಬ ಆಭರಣದಿಂದ ಶೋಭಿಸುತ್ತ ಶಬ್ದ

ಅಮೂಲ್ಯಾತುಲ್ಯಚಿತ್ರಾಢ್ಯವಸ್ತ್ರಯುಗ್ಮ ಸುಶೋಭಿತಾಂ ।
ಸದ್ರತ್ನಕುಂಡಲಾಭ್ಯಾಂ ಚ ಚಾರುಗಂಡಸ್ಥಲೋಜ್ಜ್ವಲಾಂ ॥ ೩೦ ॥

ಮಣಿಸಾರಪ್ರಭಾಮುಷ್ಟದಂತರಾಜಿವಿರಾಜಿತಾಂ ।
ರತ್ನದರ್ಪಣಹಸ್ತಾಂ ಚ ಕ್ರೀಡಾಪದ್ಮಂ ವಿಘೂರ್ಣತೀಂ ॥ ೩೧ ॥

ಚಂದನಾಗುರುಕಸ್ತೂರೀ ಕುಂಕುಮೇನಾಂಗಚರ್ಚಿತಾಂ ।
ಮುದಿತಾ ದದೃಶುಃ (ತತ್ರ) ಸರ್ವೇ ಜಗದಾದ್ಯಾಂ ಜಗತ್ಪ್ರಸೂಂ ॥ ೩೨ ॥

ತ್ರಿನೇತ್ರೋ ನೇತ್ರಕೋಣೇನ ತಾಂ ದದರ್ಶ ಮುದಾನ್ವಿತಃ ।
ಸರ್ವಾಂ ಸತ್ಯಾಕೃತಿಂ ದೃಷ್ಟ್ವಾ ವಿಜಹೌ ವಿರಹಜ್ವರಂ ॥ ೩೩ ॥

ಶಿವಃ ಸರ್ವಂ ವಿಸಸ್ಮಾರ ದುರ್ಗಾಸಂನ್ಯಸ್ತಮಾನಸಃ ।
ಪುಲಕಾಂಚಿತಸರ್ವಾಂಗೋ ಹರ್ಷಾಶ್ರುಯುಕ್ತಲೋಚನಃ ॥ ೩೪ ॥

ಮಾಡುತ್ತಿರುವ ಕಾಲುಕಡಗಗಳುಳ್ಳವಳಾಗಿ ಬೆಲೆಬಾಳುವ ದಿವ್ಯ ವಸ್ತ್ರಗಳನ್ನು ಧರಿಸಿ ಪ್ರಕಾಶಿಸುತ್ತ ರತ್ನಮಯವಾದ ಕುಂಡಲಗಳನ್ನು ಧರಿಸಿ, ಅವುಗಳಿಂದ ಪ್ರಕಾಶವಾದ ಕಪೋಲದೇಶವುಳ್ಳವಳಾಗಿ, ರತ್ನಮಯವಾದ ಕನ್ನಡಿಯನ್ನು ಕೈಯಲ್ಲಿ ಹಿಡಿದು ಕೊಂಡು ಆಟದ ಕಮಲವನ್ನು ತಿರುಗಿಸುತ್ತ ಕಂಗೊಳಿಸುತ್ತಿದ್ದಳು.

೩೨. ಚಂದನ, ಅಗರು, ಕಸ್ತೂರಿ, ಕೇಸರಿಗಳಿಂದ ಮಾಡಿದ ದಿವ್ಯಗಂಧವನ್ನು ಮೈಯಲ್ಲಿ ಬಳಿದುಕೊಂಡು ಸುಂದರಳಾದ, ಜಗತ್ತಿಗೆಲ್ಲ ಮೊದಲನೆಯವಳೂ, ಜಗತ್ತಿಗೆ ತಾಯಿಯೂ ಆದ ಆ ಪಾರ್ವತಿಯನ್ನು ನೋಡಿ ಎಲ್ಲರೂ ಸಂತೋಷ ಗೊಂಡರು.

೩೩–೩೪. ಈಶ್ವರನು ಕಡೆಗಣ್ಣಿನಿಂದ ಸರ್ವಸ್ವರೂಪಳೂ, ಸತ್ಯಸ್ವರೂಪಳೂ ಆದ ಪಾರ್ವತಿಯನ್ನು ನೋಡಿ ತನ್ನ ವಿರಹದುಃಖವನ್ನು ಬಿಟ್ಟನು. ಮತ್ತು ಮೈಯೆಲ್ಲ ರೋಮಾಂಚಗೊಂಡಿರಲು ಆನಂದಾಶ್ರುವಿನಿಂದ ಕೂಡಿದ ಕಣ್ಣುಗಳುಳ್ಳವನಾಗಿ ಆ ದುರ್ಗಾದೇವಿಯಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ ಸಕಲವನ್ನೂ ಮರೆತನು.

ಏತಸ್ಮಿನ್ನಂತರೇ ಶೈಲಃ ಪ್ರಹೃಷ್ಟಃ ಸಪುರೋಹಿತಃ ।
ತಂ ವರಂ ವರಯಾಮಾಸ ವಸ್ತ್ರಚಂದನಭೂಷಣೈಃ ॥ ೫೫ ॥

ಭಕ್ತ್ಯಾ ಪಾದ್ಯಾದಿಭಿರ್ಮಾಲ್ಯೈ ರ್ದಿವ್ಯಗಂಧಮನೋಹರೈಃ ।
ತತಃ ಶೀಘ್ರಂ ವೇದಮಂತ್ರೈಃ ಸಂಪ್ರದಾನಂ ಚಕಾರ ತಾಂ ॥ ೫೬ ॥

ಯೌತುಕಾನಿ ದದೌ ತಸ್ಮೈ ರತ್ನಾನಿ ವಿವಿಧಾನಿ ಚ ।
ಚಾರುರತ್ನವಿಕಾರಾಣಿ ಪಾತ್ರಾಣಿ ಸುಂದರಾಣಿ ಚ ॥ ೫೭ ॥

ಗವಾಂ ಲಕ್ಷಂ ಗಜೇಂದ್ರಾಣಾಂ ಸಹಸ್ರಾಣಿ ಚ ರಾಧಿಕೇ ।
ರತ್ನಕಂಬಲಯುಕ್ತಾನಿ ಸಾಂಕುಶಾನಿ ಮುದಾನ್ವಿತಃ ॥ ೫೮ ॥

ತ್ರಿಂಶಲ್ಲಕ್ಷಂ ಹಯಾನಾಂ ಚ ಸಜ್ಜಿತಾನಾಮುಕಾತರಃ ।
ದಾಸೀನಾಮನುರಕ್ತಾನಾಂ ಲಕ್ಷಂ ಸದ್ರತ್ನಭೂಷಿತಂ ॥ ೫೯ ॥

ಶತಂ ದ್ವಿಜವಟೂನಾಂ ಚ ಪಾರ್ವತೀಭ್ರಾತೃತುಲ್ಯಕಂ ।
ರಥಾನಾಂ ಚ ಶತಂ ರಮ್ಯಂ ರತ್ನೇಂದ್ರಸಾರನಿರ್ಮಿತಂ ॥ ೬೦ ॥

೫೫–೫೬. ಈ ಸಂದರ್ಭದಲ್ಲಿ ಹಿಮವಂತನು ಆನಂದಗೊಂಡವನಾಗಿ ಪುರೋಹಿತರನ್ನೊಡಗೊಂಡು ದಿವ್ಯವಸ್ತ್ರಾದಿಗಳಿಂದ ಆ ವರನನ್ನು ಪೂಜಿಸಿದನು. ಮತ್ತು ಭಕ್ತಿಯಿಂದ ಪಾದ್ಯ ಮುಂತಾದುವುಗಳನ್ನೂ. ಗಂಧಪುಷ್ಪಗಳನ್ನೂ ಸಮರ್ಪಿಸಿ ವೇದಮಂತ್ರಪೂರ್ವಕವಾಗಿ ಆ ಪಾರ್ವತಿಯನ್ನು ಪರಮೇಶ್ವರನಿಗೆ ದಾನಮಾಡಿದನು.

೫೭–೬೦. ಎಲೈ ರಾಧೆಯೇ, ಹಿಮವಂತನು ಶಂಕರನಿಗೆ ಕನ್ಯಾದಾನ ಕಾಲದಲ್ಲಿ ನಾನಾವಿಧವಾದ ರತ್ನಗಳನ್ನೂ, ರತ್ನಮಯವಾದ ಪಾತ್ರೆಗಳನ್ನೂ, ಒಂದು ಲಕ್ಷ ಗೋವುಗಳನ್ನೂ, ರತ್ನಕಂಬಳಿಗಳನ್ನು ಹೊದಿಸಿ ಅಂಕುಶಗಳನ್ನು ಕಿವಿಯಲ್ಲಿ ಸಿಕ್ಕಿಸಿರುವ ಸಾವಿರ ಆನೆಗಳನ್ನೂ, ಸುಸಜ್ಜಿತವಾದ ಮೂವತ್ತುಲಕ್ಷ ಕುದುರೆಗಳನ್ನೂ, ರತ್ನಾಭರಣಗಳಿಂದ ಅಲಂಕರಿಸಲ್ಪಟ್ಟ ವಿಶ್ವಾಸಾರ್ಹರಾದ ಒಂದುಲಕ್ಷ ದಾಸಿಯರನ್ನೂ, ಪಾರ್ವತಿಯ ಸಹೋದರರಂತಿರುವ ಬ್ರಾಹ್ಮಣವಟುಗಳು ನೂರುಮಂದಿಯನ್ನೂ, ರತ್ನಶ್ರೇಷ್ಠಗಳಿಂದ ಮಾಡಲ್ಪಟ್ಟ ಮನೋಹರವಾದ ನೂರು ರಥಗಳನ್ನೂ, ಉಡುಗೊರೆಯಾಗಿ ಕೊಟ್ಟನು.

ಪಾರ್ವತೀಂ ವಸ್ತ್ರಸಹಿತಾಂ ಸ್ವಸ್ತೀತ್ಯುಚ್ಚಾರ್ಯ ಶಂಕರಃ ।
ಜಗ್ರಾಹಾsನಂದಮನಸಾ ಯತ್ನಾಚ್ಚೈಲಸಮರ್ಪಿತಾಂ ॥ ೬೧ ॥

ಹಿಮಾಲಯಃ ಸುತಾಂ ದತ್ವಾ ಪರಿಹಾರಂ ಚಕಾರ ತಂ ।
ಮಾಧ್ಯಂದಿನೋಕ್ತ ಸ್ತೋತ್ರೇಣ ತುಷ್ಟಾವ ಸಂಪುಟಾಂಜಲಿಃ ॥ ೬೨ ॥

॥ ಹಿಮಾಲಯ ಉವಾಚ ॥

ಪ್ರಸೀದ ದಕ್ಷಯಜ್ಞಘ್ನ ನರಕಾರ್ಣವತಾರಕ ।
ಸರ್ವಾತ್ಮರೂಪ ಸರ್ವೇಶ ಪರಮಾನಂದವಿಗ್ರಹ ॥ ೬೩ ॥

ಗುಣಾರ್ಣವ ಗುಣಾತೀತ ಗುಣಯುಕ್ತ ಗುಣೇಶ್ವರ ।
ಗುಣಬೀಜ ಮಹಾಭಾಗ ಪ್ರಸೀದ ಗುಣಿನಾಂ ವರ ॥ ೬೪ ॥

ಯೋಗಾಧಾರ ಯೋಗರೂಪ ಯೋಗಜ್ಞ ಯೋಗಕಾರಣ ।
ಯೋಗೀಶ ಯೋಗಿನಾಂಬೀಜ ಪ್ರಸೀದ ಯೋಗಿನಾಂ ಗುರೋ ॥ ೬೫ ॥

---

೬೧. ಈಶ್ವರನು ಹಿಮವಂತನಿಂದ ಕೊಡಲ್ಪಟ್ಟ ಸಕಲ ಸಾಮಗ್ರೀಸಮೇತಳಾದ ಪಾರ್ವತಿಯನ್ನು ಸಂತೋಷದಿಂದ ಸ್ವಸ್ತಿ ಎಂದು ಹೇಳಿ ಸ್ವೀಕರಿಸಿದನು.

೬೨. ಹಿಮವಂತನು ಮಗಳನ್ನು ದಾನಮಾಡಿದನಂತರ ಮಾಧ್ಯಂದಿನ ಶಾಖೆಯಲ್ಲಿ ಹೇಳಿರುವಂತೆ ಆ ಶಂಕರನನ್ನು ಸ್ತೋತ್ರಮಾಡಿದನು.

೬೩. ಹಿಮಾಲಯನು :—ಎಲೈ ದಕ್ಷಯಜ್ಞವನ್ನು ವಿನಾಶಮಾಡಿದ, ಭಕ್ತರನ್ನು ನರಕವೆಂಬ ಸಮುದ್ರದಿಂದ ಪಾರುಮಾಡುವ, ಸಕಲರ ಆತ್ಮರೂಪನಾದ, ಆನಂದಮಯನಾದ ಶರೀರವುಳ್ಳ ಸರ್ವೇಶ್ವರನೇ, ಪ್ರಸನ್ನನಾಗು.

೬೪. ಅನಂತಗುಣಗಳಿಗೆ ಸಮುದ್ರನೂ, ಗುಣಗಳಿಗೆ ಮೀರಿದವನೂ, ಗುಣಗಳಿಗೆ ಅಧಿಪತಿಯೂ, ಗುಣಗಳಿಗೆ ಕಾರಣನೂ, ಮಹಾತ್ಮನೂ, ಗುಣವಂತರಲ್ಲಿ ಶ್ರೇಷ್ಠನೂ ಆದ ಪರಮಾತ್ಮನೇ, ಪ್ರಸನ್ನನಾಗು.

೬೫. ಯೋಗಗಳಿಗೆ ಆಧಾರನೂ, ಯೋಗಸ್ವರೂಪನೂ, ಯೋಗವನ್ನು ಬಲ್ಲವನೂ, ಯೋಗಗಳಿಗೆ ಕಾರಣನೂ, ಯೋಗಿಗಳಿಗೆ ಅಧಿಪತಿಯೂ, ಯೋಗಿಗಳಿಗೆ ಮೂಲನೂ, ಯೋಗಿಗಳಿಗೆ ಗುರುವೂ ಆದ ಪರಮಾತ್ಮನೇ ಪ್ರಸನ್ನನಾಗು.

ಪ್ರಲಯೆ ಪ್ರಲಯೊದ್ಯೈಕ ಭವಪ್ರಲಯಕಾರಣ ।
ಪ್ರಲಯಾಂತೇ ಸೃಷ್ಟಿಬೀಜ ಪ್ರಸೀದ ಪರಿಪಾಲಕ ॥ ೬೬ ॥

ಸಂಹಾರಕಾಲೇ ಘೋರೇ ಚ ಸೃಷ್ಟಿಸಂಹಾರಕಾರಣ ।
ದುರ್ನಿವಾರ್ಯ ದುರಾರಾಧ್ಯ ಶಾಽಽಶುತೋಷ ಪ್ರಸೀದ ಮೇ ॥ ೬೭ ॥

ಕಾಲಸ್ವರೂಪ ಕಾಲೇಶ ಕಾಲೇ ಚ ಫಲದಾಯಕ ।
ಕಾಲಬೀಜೈಕ ಕಾಲಘ್ನ ಪ್ರಸೀದ ಕಾಲಪಾಲಕ ॥ ೬೮ ॥

ಶಿವಸ್ವರೂಪ ಶಿವದ ಶಿವಬೀಜ ಶಿವಾಶ್ರಯ ।
ಶಿವಭೂತ ಶಿವಪ್ರಾಣ ಪ್ರಸೀದ ಪರಮಾಶ್ರಯ ॥ ೬೯ ॥

ಇತ್ಯೇವಂ ಸ್ತವನಂ ಕೃತ್ವಾ ವಿರರಾಮ ಹಿಮಾಲಯಃ ।
ಪ್ರಶಶಂಸುಃ ಸುರಾಃ ಸರ್ವೇ ಮುನಯಶ್ಚ ಗಿರೀಶ್ವರಂ ॥ ೭೦ ॥

---

೬೬. ಪ್ರಲಯಕ್ಕೂ ಮೊದಲಿನಲ್ಲಿಯೂ, ಪ್ರಲಯ ಕಾಲದಲ್ಲಿಯೂ ಒಬ್ಬನೇ ಆಗಿ ಜಗತ್ತಿನ ಪ್ರಲಯಕ್ಕೆ ಕಾರಣನಾದ ಪ್ರಲಯವಾದನಂತರ ಸೃಷ್ಟಿಗೆ ಕಾರಣನೂ ಜಗತ್ತನ್ನು ಕಾಪಾಡುವವನೂ ಆದ ಪರಮಾತ್ಮನೇ, ಪ್ರಸನ್ನನಾಗು.

೬೭. ಸೃಷ್ಟಿಪ್ರಲಯಕಾಲಗಳಲ್ಲಿ ಸೃಷ್ಟಿಪ್ರಲಯಗಳಿಗೆ ಕಾರಣನಾದ ಸಾಮಾನ್ಯರಿಂದ ಆರಾಧಿಸಲಶಕ್ಯನಾದ ಶತ್ರುಗಳಿಂದ ತಡೆಯಲಸಾಧ್ಯನಾದ ಬೇಗನೆ ಸಂತೋಷವನ್ನು ಹೊಂದುವ ಪರಮಾತ್ಮನೇ, ಪ್ರಸನ್ನನಾಗು.

೬೮. ಕಾಲರೂಪನೂ, ಕಾಲಕ್ಕೆ ಅಧಿಪತಿಯೂ, ಸಕಾಲದಲ್ಲಿ ಫಲವನ್ನು ಕೊಡುವವನೂ, ಕಾಲಕ್ಕೆ ಮುಖ್ಯಕಾರಣನೂ, ಕಾಲನಾಶಕನೂ, ಕಾಲವನ್ನು ಪರಿಪಾಲಿಸುವವನೂ ಆದ ಪರಮಾತ್ಮನೇ ಪ್ರಸನ್ನನಾಗು.

೬೯. ಮಂಗಳಸ್ವರೂಪನೂ, ಮಂಗಳವನ್ನುಂಟುಮಾಡುವವನೂ, ಮಂಗಳಕ್ಕೆ ಕಾರಣನೂ, ಮಂಗಳಾಶ್ರಯನೂ, ಮಂಗಳಕ್ಕೆ ಪ್ರಾಣರೂಪನೂ, ಭಕ್ತರಿಗೆ ಉತ್ತಮ ಆಶ್ರಯನೂ ಆದ ಪರಮಾತ್ಮನೇ, ಪ್ರಸನ್ನನಾಗು.

೭೦. ಹಿಮವಂತನು ಈ ಪ್ರಕಾರ ಸ್ತೋತ್ರಮಾಡಿ ಸುಮ್ಮನಾದನು. ದೇವತೆಗಳೂ, ಮುನಿಗಳೂ ಎಲ್ಲರೂ ಹಿಮವಂತನನ್ನು ಹೊಗಳಿದರು.

ಹಿಮಾಲಯಕೃತಂ ಸ್ತೋತ್ರಂ ಸಂಯತೋ ಯಃ ಪಠೇನ್ನರಃ ।
ಪ್ರದದಾತಿ ಶಿವಸ್ತಸ್ಮೈ ವಾಂಛಿತಂ ರಾಧಿಕೇ ಧ್ರುವಂ　॥ ೧೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರದನಾರಾಯಣಸಂವಾದೇ ಪಾರ್ವತೀಸಂಪ್ರದಾನೇ ಚತುಶ್ಚತ್ವಾರಿಂಶೋಽಧ್ಯಾಯಃ

---

೭೧. ಎಲೈ ರಾಧೆಯೇ, ಹಿಮವಂತನಿಂದ ಮಾಡಲ್ಪಟ್ಟ ಈ ಸ್ತೋತ್ರವನ್ನು ಯಾವ ಮನುಷ್ಯನು ಭಕ್ತಿಪೂರ್ವಕವಾಗಿ ಪಠನಮಾಡುತ್ತಾನೋ ಅವನಿಗೆ ಶಿವನು ಸಕಲ ಮನೋಭೀಷ್ಟಗಳನ್ನೂ ಕೊಡುತ್ತಾನೆ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ನಾರದ ನಾರಾಯಣ ಸಂವಾದದಲ್ಲಿ ಪಾರ್ವತೀಸಂಪ್ರದಾನವೆಂಬ
ನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ನಲವತ್ತನಾಲ್ಕನೆಯ ಅಧ್ಯಾಯದ ಸಾರಾಂಶ.

ವಸಿಷ್ಠಮುನಿಯ ಉಪದೇಶದಂತೆ ಹಿಮವಂತನು ಪರಮೇಶ್ವರನಿಗೆ ಪಾರ್ವತಿಯನ್ನು ಕೊಡಲು ನಿಶ್ಚಯಿಸಿಕೊಂಡು ಸುಮುಹೂರ್ತದಲ್ಲಿ ಲಗ್ನಪತ್ರಿಕೆಯನ್ನು ಬರೆಸಿ, ಸಕಲ ದೇವತೆಗಳಿಗೂ, ಬಾಂಧವರಿಗೂ ಕಳುಹಿಸಿದನು. ಮತ್ತು ವಿವಾಹಕ್ಕೆ ಅನುಗುಣವಾದ ಮಂಡಪವನ್ನು ಸಿದ್ಧಗೊಳಿಸಿದನು. ಬ್ರಹ್ಮ, ವಿಷ್ಣು ಮುಂತಾದ ದೇವತೆಗಳೆಲ್ಲ ವಿವಾಹಮಂಗಳಕ್ಕೆ ಬಂದು ನೆರೆದರು. ಶುಭದಿನದ ಶುಭಮುಹೂರ್ತದಲ್ಲಿ ಹಿಮವಂತನು ಪಾರ್ವತಿಗೆ ದಿವ್ಯವಾದ ಉಡುಪು ಮತ್ತು ಅಲಂಕಾರಗಳನ್ನು ತೊಡಿಸಿ ಪರಮೇಶ್ವರನಿಗೆ ಅರ್ಪಿಸಿದನು. ಆ ಸಂದರ್ಭದಲ್ಲಿ ಧನಕನಕಾದಿ ಸಕಲೈಶ್ವರ್ಯವನ್ನೂ ಪಾರ್ವತಿಗೆ ಬಳುವಳಿಯಾಗಿ ಕೊಟ್ಟನು. ಅಲ್ಲದೆ ಪರಮೇಶ್ವರನ ಮಹಿಮೆಯನ್ನು ಸ್ತುತಿಸಿದನು. ಹಿಮವಂತನು ಸ್ತುತಿಸಿದ ಪರಮೇಶ್ವರನ ಸ್ತೋತ್ರವನ್ನು ಭಕ್ತಿಪೂರ್ವಕವಾಗಿ ಪಠಿಸುವವರು ಶಿವನ ಅನುಗ್ರಹಕ್ಕೆ ಪಾತ್ರರಾಗುವರು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಪಂಚಚತ್ವಾರಿಂಶೋಽಧ್ಯಾಯಃ ||

|| ಶ್ರೀಕೃಷ್ಣ ಉವಾಚ ||

ಅಥ ವೇದವಿಧಾನೇನ ಸಂಸ್ಥಾಪ್ಯ ವಹ್ನಿಮೀಶ್ವರಃ |
ಯಜ್ಞಂ ಚಕಾರ ತತ್ರೈವ ವಾಮೇ ಸಂಸ್ಥಾಪ್ಯ ಪಾರ್ವತೀಂ || ೧ ||

ನಿವೃತ್ತೇ ವಿಧಿವದ್ಯಜ್ಞೇ ವಿಪ್ರೇಭ್ಯೋ ದಕ್ಷಿಣಾಂ ದದೌ |
ಶಿವಃ ಶತಸುವರ್ಣಾನಿ ವೃಂದಾವನ ವಿನೋದಿನಿ || ೨ ||

ಅಥ ಪ್ರದೀಪಮಾನೀಯ ಶೈಲೇಂದ್ರನಗರಸ್ತ್ರಿಯಃ |
ನಿರ್ವರ್ತ್ಯ ಮಂಗಲಂ ಕರ್ಮ ಗೃಹಂ ಸಂಪ್ರಾಪ್ಯ ದಂಪತೀ || ೩ ||

ನಲವತ್ತೈದನೆಯ ಅಧ್ಯಾಯ.

೧. ಶ್ರೀಕೃಷ್ಣನು :—ಅನಂತರ ಹಿಂದಿನ ಅಧ್ಯಾಯದಲ್ಲಿ ಹೇಳಿದಂತೆ ಕನ್ಯಾದಾನವಾದ ಮೇಲೆ ಈಶ್ವರನು ವೇದದಲ್ಲಿ ಹೇಳಿದ ರೀತಿಯನ್ನನುಸರಿಸಿ ಯಜ್ಞೇಶ್ವರನನ್ನು ಪ್ರತಿಷ್ಠೆಮಾಡಿಕೊಂಡು ಅಲ್ಲಿಯೇ ಎಡಭಾಗದಲ್ಲಿ ಪಾರ್ವತಿಯನ್ನು ಕೂರಿಸಿಕೊಂಡು ತತ್ಕಾಲೋಚಿತವಾದ ಹೋಮವನ್ನು ಮಾಡಿದನು.

೨. ಎಲೈ ವೃಂದಾವನದಲ್ಲಿ ವಿಹರಿಸುವ ರಾಧೆಯೇ, ಆ ಯಾಗವು ವಿಧಿವತ್ತಾಗಿ ಮುಗಿದನಂತರ ಈಶ್ವರನು ಅಲ್ಲಿಗೆ ಬಂದಿದ್ದ ಬ್ರಾಹ್ಮಣೋತ್ತಮರಿಗೆ ಒಬ್ಬೊಬ್ಬರಿಗೂ ನೂರು ಚಿನ್ನದ ನಾಣ್ಯಗಳನ್ನು ದಕ್ಷಿಣೆಯಾಗಿ ಕೊಟ್ಟನು.

೩–೫. ಅನಂತರ ಹಿಮವಂತನ ಪಟ್ಟಣದ ಸ್ತ್ರೀಯರುಗಳು ದಿವ್ಯವಾದ ದೀಪಗಳನ್ನು ತಂದು ಸಂತೋಷದಿಂದ ಮಂಗಳಕಾರ್ಯಗಳನ್ನು ನೆರವೇರಿಸಿ ದಂಪತಿ

ಕೃತ್ವಾ ಜಯಧ್ವನಿಂ ಪ್ರೀತ್ಯಾ ಶುಭನಿರ್ಮಂಛನಾದಿಕಂ ।
ಸಸ್ಮಿತಾಃ ಸಕಟಾಕ್ಷಾಶ್ಚ ಪುಲಕಾಂಚಿತವಿಗ್ರಹಾಃ ॥ ೪ ॥

ವಾಸಗೇಹಂ ಸಂಪ್ರವಿಶ್ಯ ದದೃಶುಃ ಕಾಮಿನೀಗಣಾಃ ।
ಶಂಕರಂ ರೂಪವೇಷಾಢ್ಯಂ ರತ್ನಭೂಷಣಭೂಷಿತಂ ॥ ೫ ॥

ಚಂದನಾಗುರುಕಸ್ತೂರೀಕುಂಕುಮಾಂಚಿತ ವಿಗ್ರಹಂ ।
ಈಷದ್ಧಾಸ್ಯಪ್ರಸನ್ನಾಸ್ಯಂ ಸಕಟಾಕ್ಷಂ ಮನೋಹರಂ ॥ ೬ ॥

ಅಪೂರ್ವಸೂಕ್ಷ್ಮವೇಷಾಢ್ಯಂ ಸಿಂದೂರಬಿಂದುಭೂಷಿತಂ ।
ಚಾರು ಚಂಪಕವರ್ಣಾಭಂ ಸರ್ವಾವಯವಸುಂದರಂ ॥ ೭ ॥

ನವೀನಯೌವನಸ್ಥಂ ಚ ಮುನೀಂದ್ರಚಿತ್ತಮೋಹನಂ ।
ಸರಸ್ವತೀಂ ಚ ಲಕ್ಷ್ಮೀಂ ಚ ಸಾವಿತ್ರೀಂ ಜಾಹ್ನವೀಂ ರತಿಂ ॥ ೮ ॥

ಗಳನ್ನು ಮನೆಗೆ ಕರೆತಂದು ಜಯಘೋಷವನ್ನು ಮಾಡುತ್ತ ಶುಭಕರವಾದ ನಿರ್ಮಂಛನ (ಅಭ್ಯಂಜನ) ಮೊದಲಾದುವುಗಳನ್ನು ಮಾಡಿಸಿ ಮುಗುಳು ನಗುತ್ತ ಕಡೆಗಣ್ಣಿನಿಂದ ನೋಡುತ್ತ ಮೈಯಲ್ಲಿ ರೋಮಾಂಚವನ್ನು ಹೊಂದಿದವರಾಗಿ ವಾಸ ಗೃಹಕ್ಕೆ ಕರೆತಂದು ವೇಷಭೂಷಣಗಳಿಂದಲಂಕೃತನಾದ ಶಂಕರನನ್ನು ಆನಂದದಿಂದ ನೋಡಿದರು.

೬–೭. ಚಂದನ, ಅಗರು, ಕಸ್ತೂರಿ, ಕೇಸರಿ ಇವುಗಳಿಂದ ಮಾಡಿದ ಗಂಧವನ್ನು ಮೈಗೆ ಹಚ್ಚಿಕೊಂಡು ಸ್ವಲ್ಪ ನಗುತ್ತ ಶಾಂತವಾದ ಮುಖವುಳ್ಳವನಾಗಿ ನೋಡಲು ಸುಂದರನಾಗಿ, ಅಪೂರ್ವವೂ, ಸೂಕ್ಷ್ಮವೂ ಆದ ವೇಷದಿಂದ ಪ್ರಕಾಶಿಸುವ, ಹಣೆಯಲ್ಲಿ ಚಂದ್ರದ ಬೊಟ್ಟನ್ನು ಧರಿಸಿ, ಸುಂದರವಾದ ಸಂಪಿಗೆಯ ಹೂವಿನಂತಿರುವ ಮೈ ಕಾಂತಿಯಿಂದ ಕೂಡಿರುವ, ಸಕಲಾಂಗಗಳಿಂದಲೂ ಸುಂದರ ನಾಗಿ ಪ್ರಕಾಶಿಸುತ್ತಿರುವ, ಆ ಶಂಕರನನ್ನು ನೋಡಿ ಪಟ್ಟಣದ ಸ್ತ್ರೀಯರು ಸಂತೋಷಗೊಂಡರು.

೮–೧೧. ಮತ್ತು ಆ ಶಂಕರನು ಹೊಸದಾದ ಪ್ರಾಯುವಯಸ್ಸಿನವನಾಗಿ, ಮುನಿಗಳ ಮನಸ್ಸನ್ನೂ ಮೋಹಗೊಳಿಸುತ್ತಿರುವವನಾಗಿದ್ದನು. ಆ ಸಭೆಯಲ್ಲಿ ಸರಸ್ವತಿಯೂ, ಲಕ್ಷ್ಮಿಯೂ, ಸಾವಿತ್ರಿಯೂ, ಜಾಹ್ನವಿಯೂ, ರತಿಯೂ, ಅದಿತಿಯೂ,

ಅದಿತಿಂ ಚ ಶಚೀಂ ಚೈವ ಲೋಪಾಮುದ್ರಾಮರುಂಧತೀಂ ।
ಅಹಲ್ಯಾಂ ತುಲಸೀಂ ಸ್ವಾಹಾಂ ರೋಹಿಣೀಂ ಚ ವಸುಂಧರಾಂ ॥ ೯ ॥

ಶತರೂಪಾಂ ಚ ಸಂಜ್ಞಾಂ ಚ ಸತೀಸ್ತ್ರೀಣಾಂ ಚ ಷೋಡಶ ।
ದೇವಕನ್ಯಾ ನಾಗಕನ್ಯಾ ಮುನಿಕನ್ಯಾ ಮನೋಹರಾಃ ॥ ೧೦ ॥

ಯಾ ಯಾಃ ಸ್ಥಿತಾಸ್ತತ್ರ ತಾಸಾಂ ಸಂಖ್ಯಾಂ ಕರ್ತುಂ ಚ ಕಃ ಕ್ಷಮಃ ।
ತಾಭೀ ರತ್ನಾಸನೇ ದತ್ತೇ ತತ್ರೋವಾಸ ಶಿವೋ ಮುದಾ ।
ತಮೂಚುಃ ಕ್ರಮಶೋ ದೇವ್ಯೋ ಮಧುರೋಕ್ತಿಂ ಸುಧಾಮಿವ ॥ ೧೧ ॥

॥ ಸರಸ್ವತ್ಯುವಾಚ ॥

ಪ್ರಾಪ್ತಾ ಸತೀ ಮಹಾದೇವಾಧುನಾ ಪ್ರಾಣಾಧಿಕಾ ಮುದಾ ।
ದೃಷ್ಟ್ವಾ ಪ್ರಿಯಾಸ್ಯಂ ಚಂದ್ರಾಭಂ ಸಂತಾಪಂ ತ್ಯಜ ಕಾಮುಕ ॥ ೧೨ ॥

ಕಾಲಂ ಗಮಯ ಕಾಲೇಶ ಸದಾ ಸಂಶ್ಲೇಷ ಪೂರ್ವಕಂ ।
ವಿಶ್ಲೇಷಸ್ತೇ ನ ಭವಿತಾ ಸರ್ವಕಾಲಂ ಮಮಾಶಿಷಾ ॥ ೧೩ ॥

ಶಚಿಯೂ, ಲೋಪಾಮುದ್ರೆಯೂ, ಅರುಂಧತಿಯೂ, ಅಹಲ್ಯೆಯೂ, ತುಲಸಿಯೂ, ಸ್ವಾಹಾದೇವಿಯೂ, ರೋಹಿಣಿಯೂ, ಭೂದೇವಿಯೂ, ಶತರೂಪೆಯೂ, ಸಂಜ್ಞೆಯೂ ಈ ರೀತಿ ಹದಿನಾರುಮಂದಿ ಪತಿವ್ರತಾಸ್ತ್ರೀಯರಿದ್ದರು. ಮತ್ತು ದೇವಕನ್ಯೆಯರು, ನಾಗಕನ್ಯೆಯರು, ಮುನಿಕನ್ಯೆಯರು ಇವರುಗಳು ಯಾರುಯಾರು ಇದ್ದರೋ ಅವರೆಲ್ಲರನ್ನು ಲೆಕ್ಕಿಸಲು ಸಾಧ್ಯವಾಗುತ್ತಿರಲಿಲ್ಲ. ಅವರುಗಳಿಂದ ರತ್ನಮಯವಾದ ಆಸನವು ಕೊಡಲ್ಪಡಲು ಅದರಲ್ಲಿ ಈಶ್ವರನು ಸಂತೋಷದಿಂದ ಕುಳಿತುಕೊಂಡನು. ಆ ದೇವಿಯರು ಸಂತೋಷಗೊಂಡವರಾಗಿ ಅಮೃತದಂತೆ ಮಧುರವಾಗಿರುವ ಮಾತನ್ನು ಶಂಕರನಿಗೆ ಕ್ರಮವಾಗಿ ಹೇಳಿದರು.

೧೨. ಸರಸ್ವತಿಯು :—ಎಲೈ ಮಹಾದೇವನೇ, ಪ್ರಾಣಕ್ಕಿಂತಲೂ ಪ್ರಿಯಳಾದ ಸತೀದೇವಿಯನ್ನು ಸಂತೋಷದಿಂದ ಹೊಂದಿರುವೆ. ಚಂದ್ರನಂತೆ ಕಾಂತಿಯುಳ್ಳ ನಿನ್ನ ಪ್ರಿಯೆಯ ಮುಖವನ್ನು ನೋಡಿ ನಿನ್ನ ಸಂತಾಪವನ್ನು ಬಿಡು.

೧೩. ಎಲೈ ಮೃತ್ಯುವಿಗೆ ಯಜಮಾನನೇ, ಯಾವಾಗಲೂ ಪ್ರಿಯತಮೆಯ ಆಲಿಂಗನದಿಂದಲೇ ಕಾಲವನ್ನು ಕಳೆ. ನನ್ನ ಆಶೀರ್ವಾದದಿಂದ ನಿನಗೆ ಯಾವಾಗಲೂ ನಿನ್ನ ಪ್ರಿಯತಮೆಯ ಅಗಲಿಕೆಯುಂಟಾಗುವುದಿಲ್ಲ.

|| ಲಕ್ಷ್ಮೀರುವಾಚ ||

ಲಜ್ಜಾಂ ವಿಹಾಯ ದೇವೇಶ ಸತೀಂ ಕೃತ್ವಾ ಸ್ವವಕ್ಷಸಿ |
ತಿಷ್ಠ ಸಂಪ್ರತಿ ಕಾ ಲಜ್ಜಾ ಪ್ರಾಣಾ ಯಾಂತಿ ಯಯಾ ವಿನಾ || ೧೪ ||

|| ಸಾವಿತ್ರ್ಯುವಾಚ ||

ಭೋಜಯಿತ್ವಾ ಶಚೀಂ ಶಂಭೋ ಶೀಘ್ರಂ ಭೋಜಯ ಮಾ ಖಿದಃ |
ತದಾಚಮ್ಯ ಸಕರ್ಪೂರಂ ತಾಂಬೂಲಂ ದೇಹಿ ಭಕ್ತಿತಃ || ೧೫ ||

|| ಜಾಹ್ನವ್ಯುವಾಚ ||

ಸ್ವರ್ಣಕಂಕತಿಕಾಂ ಕೃತ್ವಾ ಕೇಶಾನ್ಮಾರ್ಜಯ ಯೋಷಿತಃ |
ಕಾಮಿನ್ಯಾಃ ಸ್ವಾಮಿಸೌಭಾಗ್ಯಂ ಸುಖಂ ನಾತಃ ಪರಂ ಭವೇತ್ || ೧೬ ||

|| ರತಿರುವಾಚ ||

ಗೃಹೀತ್ವಾ ಪಾರ್ವತೀಂ ದೇವ ಸುಭಗಾಮತಿದುರ್ಲಭಾಂ |
ಕಥಂ ಮಮ ಪ್ರಾಣನಾಥೋ ನಿಃಸ್ವಾರ್ಥಂ ಭಸ್ಮಸಾತ್ಕೃತಃ || ೧೭ ||

---

೧೪. ಲಕ್ಷ್ಮಿಯು :—ಎಲೈ ದೇವೇಶ್ವರನೇ, ನಾಚಿಕೆಯನ್ನು ದೂರಮಾಡಿ ಸತಿಯನ್ನು ನಿನ್ನ ಹೃದಯದಲ್ಲಿಟ್ಟುಕೊಂಡು ವಾಸಿಸು. ಯಾವಳಿಲ್ಲದೇ ಪ್ರಾಣಗಳು ಉಳಿಯುವುದಿಲ್ಲವೋ ಅವಳ ವಿಷಯದಲ್ಲಿ ನಾಚಿಕೆಯೇತರದು.

೧೫. ಸಾವಿತ್ರಿಯು :—ಎಲೈ ಶಂಭುವೇ, ಜಾಗ್ರತೆಯಾಗಿ ಮೊದಲು ಸತೀ ದೇವಿಗೆ ಭೋಜನವನ್ನು ಮಾಡಿಸಿ ಅನಂತರ ಇತರರಿಗೆ ಭೋಜನಮಾಡಿಸು. ಪ್ರೀತಿಯಿಂದ ಆವಳಿಗೆ ಕರ್ಪೂರ ಸಹಿತವಾದ ವೀಳೆಯವನ್ನು ಕೊಡು.

೧೬. ಜಾಹ್ನವಿಯು :—ಚಿನ್ನದ ಬಾಚಣಿಗೆಯನ್ನು ತೆಗೆದುಕೊಂಡು ನಿನ್ನ ಪ್ರಿಯತಮಳ ತಲೆಯನ್ನು ಬಾಚು. ಹೆಂಗಸಿಗೆ ಪತಿಸೌಭಾಗ್ಯಕ್ಕಿಂತಲೂ ಬೇರೆಯಾವ ಸೌಭಾಗ್ಯವಿಲ್ಲ.

೧೭-೧೮. ರತಿಯು :—ಎಲೈ ದೇವನೇ, ಸುಂದರಿಯೂ, ಅತ್ಯಂತ ದುರ್ಲಭಳೂ ಆದ ಪಾರ್ವತಿಯನ್ನು ಹೊಂದಿರುವೆ. ಆದರೆ ನೀನು ನಿರ್ದಯನಾಗಿ ನನ್ನ

ಜೀವಯೆಪಿ ವಿಭೋ ಕಾಮಂ ಕಾಮವ್ಯಾಪಾರಮಾತ್ಮನಿ ।
ಕುರು ದೂರಂ ಚ ಸಂತಾಪಂ ಮಮ ವಿಶ್ಲೇಷಹೇತುಕಂ ॥ ೧೮ ॥

ದಂಪತೀವಿರಹಕ್ಲೇಶಂ ಸರ್ವಂ ಜ್ಞಾತ್ವಾ ದಯಾನಿಧೇ ।
ತಥಾಪಿ ಮಮ ಕಾಂತಶ್ಚ ಕೋಪೇನ ಭಸ್ಮಸಾತ್ಕೃತಃ ॥ ೧೯ ॥

ಇತ್ಯುಕ್ತ್ವಾ ಕಾಮಭಸ್ಮಾಽಥ ದದೌ ಸಾ ಗ್ರಂಥಿಬಂಧಿತಂ ।
ರುರೋದ ಪುರತಶ್ಶಂಭೋ ನಾಥ ನಾಥೇತ್ಯುದೀರ್ಯ ಚ ॥ ೨೦ ॥

ಹರಿಸ್ತದ್ರೋದನಂ ಶ್ರುತ್ವಾ ಕರುಣಾಮಯಸಾಗರಃ ।
ಬ್ರಹ್ಮಾ ಧರ್ಮಾಧಿದೇವಾಶ್ಚ ಯಯುರ್ವಾಸಗೃಹಂ ಶಿವಂ ॥ ೨೧ ॥

ದೃಷ್ಟ್ವಾ ನಾರಾಯಣಂ ಧರ್ಮಂ ಬ್ರಹ್ಮಾಣಂ ಚ ಸುರಾನಪಿ ।
ಜವೇನ ಪೀಠಾದುತ್ಥಾಯ ಸ್ವಾಜ್ಞಾಂ ಕುರ್ವಿತ್ಯುವಾಚ ಹ ॥ ೨೨ ॥

ಪತಿಯನ್ನು ಬೂದಿಮಾಡಿರುವೆ. ಈಗ ಆ ಮನ್ಮಥನನ್ನು ಬದುಕಿಸಿ ನಾನು ಕಾಮಾಸಕ್ತಳಾಗುವಂತೆ ಮಾಡಿ ನನ್ನ ಈ ವಿರಹವ್ಯಥೆಯನ್ನು ಹೋಗಲಾಡಿಸು.

೧೯. ಎಲೈ ದಯಾಸಮುದ್ರನೇ, ದಂಪತಿಗಳು ಒಬ್ಬರನ್ನೊಬ್ಬರು ಅಗಲಿದಾಗ ಉಂಟಾಗುವ ದುಃಖವೆಷ್ಟೆಂಬುದನ್ನೆಲ್ಲವನ್ನೂ ತಿಳಿದಿದ್ದರೂ ಕೂಡ ನನ್ನ ಕಾಂತನನ್ನು ಕೋಪದಿಂದ ಬೂದಿಮಾಡಿದೆ.

೨೦. ರತಿದೇವಿಯು ಹೀಗೆ ಹೇಳಿ ಗಂಟಿನಲ್ಲಿಟ್ಟುಕೊಂಡಿದ್ದ ಕಾಮನ ಬೂದಿಯನ್ನು ತೆಗೆದು ಪರಮೇಶ್ವರನಿಗೆ ಕೊಟ್ಟಳು. ಮತ್ತು ಶಂಕರನ ಮುಂಭಾಗದಲ್ಲಿ ನಿಂದು ಪತಿಯೇ, ಪತಿಯೇ ಎಂದು ಗಟ್ಟಿಯಾಗಿ ಅತ್ತಳು.

೨೧. ಹರಿಯು ಆ ಅಳುವಿನ ಧ್ವನಿಯನ್ನು ಕೇಳಿ ದಯೆಯಿಂದ ಕೂಡಿದವನಾಗಿ ಈಶ್ವರನ ವಾಸಗೃಹಕ್ಕೆ ಬಂದನು. ಅದೇ ರೀತಿಯಾಗಿ ಬ್ರಹ್ಮನೂ ಧರ್ಮನೇ ಮೊದಲಾದ ದೇವತೆಗಳೂ ಅಲ್ಲಿಗೆ ಬಂದರು.

೨೨. ಶಂಕರನು, ನಾರಾಯಣ ಬ್ರಹ್ಮ ಧರ್ಮ ಇವರುಗಳನ್ನೂ, ದೇವತೆಗಳನ್ನೂ ನೋಡಿ ಜಾಗ್ರತೆಯಾಗಿ ಪೀಠದಿಂದೆದ್ದು ನೀನು ಅಪ್ಪಣೆಮಾಡು ಎಂದು ನುಡಿದನು.

ಶಂಕರಸ್ಯ ವಚಃ ಶ್ರುತ್ವಾ ತಮುವಾಚ ಹರಿಃ ಸ್ವಯಂ ।
ಕಾಮಂ ಜೀವಯ ಹೇ ರುದ್ರೇತ್ಯುಕ್ತ್ವಾ ಶೀಘ್ರಂ ಜಗಾಮ ಸಃ ॥ ೨೩ ॥

ಊಚುರ್ದೇವ್ಯೋ ಬಹುತರಂ ವಾಕ್ಯಂ ವಿನಯಪೂರ್ವಕಂ ।
ಸುಧಾದೃಷ್ಟ್ಯಾ ಶೂಲಭೃತೋ ಭಸ್ಮತೋ ನಿರ್ಗತಃ ಸ್ಮರಃ ॥ ೨೪ ॥

ದೃಷ್ಟ್ವಾ ಕಾಮಂ ರತಿಸ್ತಂ ಚ ಪ್ರಣನಾಮ ಮಹೇಶ್ವರಂ ।
ತದ್ರೂಪಂ ಚ ತದಾಕಾರಂ ಸಸ್ಮಿತಂ ಸಧನುಃ ಶರಂ ॥ ೨೫ ॥

ಪ್ರಣಮ್ಯ ಶಂಕರಂ ಕಾಮಃ ಸ್ತುತಿಂ ಕೃತ್ವಾ ಯಥಾಗಮಂ ।
ಬಹಿರ್ಗತ್ವಾ ಹರಿಂ ದೇವಾನ್ಪ್ರಣಮ್ಯ ಸಮುವಾಸ ಚ ॥ ೨೬ ॥

ಕಾಮಂ ಸಂಭಾಷ್ಯ ದೇವಾಶ್ಚ ಯುಯುಜುಶ್ಚ ತಮಾಶಿಷಂ ।
ಕಾಲೇ ರಕ್ಷಾ ವಿನಾಶಶ್ಚ ನಿಷೇಧಃ ಕೇನ ವಾರ್ಯತೇ ॥ ೨೭ ॥

---

೨೩. ಶಂಕರನ ಮಾತನ್ನು ಕೇಳಿ ಹರಿಯು ಅವನನ್ನು ಕುರಿತು ಎಲೈ ರುದ್ರನೇ, ಕಾಮನನ್ನು ಬದುಕಿಸು ಎಂದು ಹೇಳಿ ತಾನು ಅಲ್ಲಿಂದ ಹೊರಟು ಹೋದನು.

೨೪. ದೇವಿಯರೆಲ್ಲರೂ ನಾನಾ ರೀತಿಯ ಕರುಣೆಯುಂಟಾಗುವ ಮಾತುಗಳನ್ನಾಡಿದರು. ಪರಮೇಶ್ವರನ ಅಮೃತಮಯವಾದ ನೋಟದಿಂದ ಬೂದಿಯೊಳಗಿನಿಂದ ಕಾಮನು ಹೊರಕ್ಕೆ ಬಂದನು.

೨೫. ರತೀದೇವಿಯು ಆ ಮೊದಲಿನ ರೂಪ, ಅದೇ ಆಕಾರ, ಆ ಮುಗುಳುನಗೆ, ಅದೇ ಬಿಲ್ಲುಬಾಣಗಳು ಇವುಗಳಿಂದ ಕೂಡಿದ ಕಾಮನನ್ನು ನೋಡಿದೊಡನೆಯೇ ಅವನಿಗೂ ಮತ್ತು ಶಂಕರನಿಗೂ ನಮಸ್ಕಾರಮಾಡಿದಳು.

೨೬. ಮನ್ಮಥನು ಈಶ್ವರನನ್ನು ವೇದೋಕ್ತಮಾರ್ಗದಿಂದ ಸ್ತೋತ್ರಮಾಡಿ ಹೊರಕ್ಕೆ ಬಂದು ವಿಷ್ಣುವಿಗೂ ದೇವತೆಗಳಿಗೂ ನಮಸ್ಕಾರಮಾಡಿ ಅವರೊಡನೆ ನಿಂತನು.

೨೭. ದೇವತೆಗಳೆಲ್ಲರೂ ಕೂಡ ಮನ್ಮಥನೊಡನೆ ಮಾತನಾಡುತ್ತ ಅವನಿಗೆ ಆಶೀರ್ವಾದವನ್ನು ಮಾಡಿದರು. ಕಾಲದಲ್ಲಿ ಬಂದೊದಗುವ ರಕ್ಷೆ ವಿನಾಶ ಇವುಗಳನ್ನು ಯಾರು ನಿವಾರಣೆ ಮಾಡಲು ಸಮರ್ಥರಾಗುತ್ತಾರೆ.

ಅಥ ಶೈಲಃ ಸುರಾನ್ ಸರ್ವಾನ್ ನಾರಾಯಣ ಪುರೋಗಮಾನ್ ।
ಭೋಜಯಾಮಾಸ ಭಕ್ತ್ಯಾ ಚ ಶಾಯಯಾಮಾಸ ಯತ್ನತಃ ॥ ೨೮ ॥

ಅಥ ಶಂಭುರ್ವಾಸಗೃಹೇ ವಾಮೇ ಸಂಸ್ಥಾಪ್ಯ ಪಾರ್ವತೀಂ ।
ಮಿಷ್ಟಾನ್ನಂ ಭೋಜಯಾಮಾಸ ತಯಾ ಸಹ ಮುದಾನ್ವಿತಃ ॥ ೨೯ ॥

ಭುಕ್ತವಂತಂ ಶಿವಂ ತತ್ರ ದೇವಮಾತಾsದಿತಿಃ ಸ್ವಯಂ ।
ಉವಾಚ ಸಸ್ಮಿತಂ ರಾಧೇ ಸಂಪ್ರೀತ್ಯಾ ಸರಸಂ ವಚಃ ॥ ೩೦ ॥

॥ ಅದಿತಿರುವಾಚ ॥

ಭೋಜನಾಂತೇ ಶಚಿ ಶಂಭೋಃ ಶೌಚಾರ್ಥಂ ಜಲಮರ್ಪಯ ।
ದೇಹಿ ಶೀಘ್ರಂ ಮಮ ಪ್ರೀತ್ಯಾ ದಂಪತ್ಯೋಃ ಪ್ರೀತಿಪೂರ್ವಕಂ ॥ ೩೧ ॥

---

೨೮. ಅನಂತರ ಹಿಮವಂತನು ನಾರಾಯಣನೇ ಮೊದಲಾದ ಎಲ್ಲ ದೇವತೆಗಳನ್ನೂ ಭಕ್ತಿಪೂರ್ವಕವಾಗಿ ಭೋಜನ ಮಾಡಿಸಿದನು. ಮತ್ತು ಎಲ್ಲರಿಗೂ ವಿಶ್ರಾಂತಿಮಾಡಿಸಿದನು.

೨೯. ಅನಂತರ ಈಶ್ವರನು ತನ್ನ ವಾಸದ ಮನೆಯಲ್ಲಿ ಪಾರ್ವತಿಯನ್ನು ವಾಮಭಾಗದಲ್ಲಿ ಕುಳ್ಳಿರಿಸಿಕೊಂಡು ಅವಳೊಡನೆ ಸಂತೋಷದಿಂದ ಮೃಷ್ಟಾನ್ನವನ್ನು ಊಟಮಾಡಿದನು.

೩೦. ಎಲೈ ರಾಧೆಯೇ, ದೇವತೆಗಳ ತಾಯಿಯಾದ ಅದಿತಿಯು ಊಟವನ್ನು ಮಾಡಿರುವ ಶಿವನನ್ನು ಕುರಿತು ಸಂತೋಷದಿಂದ ನಗುತ್ತ ವಿನೋದವಾಗಿ ಮಾತನಾಡಿದಳು.

೩೧. ಅದಿತಿಯು :—ಎಲೈ ಶಚಿಯೇ, ಊಟವಾದನಂತರ ನನ್ನ ಸಂತೋಷಾರ್ಥವಾಗಿ ಈ ದಂಪತಿಗಳಿಗೆ ಶೌಚವನ್ನು ಮಾಡಲು ಪ್ರೀತಿಯಿಂದ ನೀರನ್ನು ತಂದುಕೊಡು.

॥ ಶಚ್ಯುವಾಚ ॥

ಕೃತ್ವಾ ವಿಲಾಪಂ ಯದ್ಧೇತೋಃ ಶವಂ ಕೃತ್ವಾ ಸ್ವವಕ್ಷಸಿ ।
ಯೋ ಬಭ್ರಾಮ ಭುವಂ ಮೋಹಾತ್ಕಾಲೇನ ಪ್ರಾಪ ತಾಂ ಸತೀಂ ॥ ೩೨ ॥

॥ ಅರುಂಧತ್ಯುವಾಚ ॥

ಮಯಾ ದತ್ತಾ ಸತೀ ತುಭ್ಯಂ ಮೇನಾ ದಾತುಮನೀಪ್ಸಿತಾ ।
ವಿವಿಧಂ ಬೋಧಯಿತ್ವೇಮಾಂ ರತಿಂ ಚ ಕರ್ತುಮರ್ಹಸಿ ॥ ೩೩ ॥

॥ ಅಹಲ್ಯೋವಾಚ ॥

ವೃದ್ಧಾವಸ್ಥಾಂ ಪರಿತ್ಯಜ್ಯ ಹ್ಯತೀವ ತರುಣೋಽಧುನಾ ।
ತೇನ ಮೇನಾ ತು ಮೇನೇ ತ್ವಾಂ ಸುತಾಮರ್ಪಿತುಮೀಶ್ವರ ॥ ೩೪ ॥

॥ ತುಲಸ್ಯುವಾಚ ॥

ಸತೀ ತ್ವಯಾ ಪರಿತ್ಯಕ್ತಾ ಕಾಮೋ ದಗ್ಧಃ ಪುರಾ ಕೃತೇಃ ।
ಕಥಂ ತದಾ ವಸಿಷ್ಠಶ್ಚ ಪ್ರಭೋ ಪ್ರಸ್ಥಾಪಿತೋಽಧುನಾ ॥ ೩೫ ॥

---

೩೨. ಶಚಿಯು :— ಈ ಈಶ್ವರನು ಯಾವಳಿಗಾಗಿ ದುಃಖಪಡುತ್ತ ಶವವನ್ನು ಕೂಡ ಎದೆಗಪ್ಪಿಕೊಂಡು ದುಃಖದಿಂದ ಭೂಮಿಯನ್ನೆಲ್ಲ ಅಲೆದನೋ ಆ ಸತೀ ದೇವಿಯನ್ನು ಇಂದು ಕಾಲವಶದಿಂದ ಪಡೆದನು.

೩೩. ಅರುಂಧತಿಯು :—ಎಲೈ ಈಶ್ವರನೇ, ಮೇನಾದೇವಿಯು ತನ್ನ ಮಗಳನ್ನು ನಿನಗೆ ಕೊಡಲಿಷ್ಟಪಡಲಿಲ್ಲ. ನಾನು ಅವಳಿಗೆ ನಾನಾರೀತಿಯಿಂದ ಬೋಧನೆ ಮಾಡಿ ಸತಿಯನ್ನು ನಿನಗೆ ಕೊಡಿಸಿರುವೆನು. ಇವಳನ್ನು ಪ್ರೀತಿಸು.

೩೪. ಅಹಲ್ಯೆಯು :—ನೀನು ಮುದುಕನ ಸ್ವರೂಪವನ್ನು ಬಿಟ್ಟು ಬಹಳ ಚಿಕ್ಕಹುಡುಗನೂ, ಯೌವನವಂತನೂ ಆಗಿರುವೆ. ಎಲೈ ಈಶ್ವರನೇ ಆದುದರಿಂದಲೇ ಮೇನಾದೇವಿಯು ಮಗಳನ್ನು ನಿನಗೆ ಕೊಡಲು ಒಪ್ಪಿದಳು.

೩೫. ತುಲಸಿಯು :— ಎಲೈ ಪ್ರಭುವೇ, ಹಿಂದೆ ಸತೀದೇವಿಯನ್ನು ಬಿಟ್ಟು ಮನ್ಮಥನನ್ನೂ ಸುಟ್ಟು ನಿಸ್ಪೃಹನಾದ ನೀನು ಈಗ ವಸಿಷ್ಠರನ್ನು ಹಿಮವಂತನಲ್ಲಿಗೆ ಹೇಗೆ ಕಳುಹಿಸಿದೆ ?

|| ಸ್ವಾಹೋವಾಚ ||

ಸ್ಥಿರೋ ಭವ ಮಹಾದೇವ ಸ್ತ್ರೀಣಾಂ ವಚಸಿ ಸಂಪ್ರತಿ ।
ವಿವಾಹೇ ವ್ಯವಹಾರೋಽಸ್ತಿ ಪುರಂಧ್ರೀಣಾಂ ಪ್ರಗಲ್ಭತಾ || ३೬ ||

|| ರೋಹಿಣ್ಯುವಾಚ ||

ಕಾಮಂ ಪೂರಯ ಪಾರ್ವತ್ಯಾಃ ಕಾಮಶಾಸ್ತ್ರವಿಶಾರದ ।
ಕುರು ಪಾರಂ ಸ್ವಯಂ ಕಾಮೀ ಕಾಮಿನೀ ಕಾಮಸಾಗರಂ || ೩೭ ||

|| ವಸುಂಧರೋವಾಚ ||

ಭೋಗದ್ರವ್ಯಂ ವಿನಾ ಭೋಗೀ ನ ಹಿ ತುಷ್ಟಃ ಕ್ಷುಧಾತುರಃ ।
ಯೇನ ತುಷ್ಟಿರ್ಭವೇಚ್ಛಂಭೋ ತತ್ಕರ್ತುಮುಚಿತಂ ಸ್ತ್ರಿಯಾ || ೩೮ ||

|| ಸಂಜ್ಞೋವಾಚ ||

ಜಾನಾಸಿ ಭಾವಂ ಸರ್ವಜ್ಞ ಕಾಮಾರ್ತಾನಾಂ ಚ ಯೋಷಿತಾಂ ।
ನ ಚ ಸ್ವಸ್ವಾಮಿನಂ ಶಂಭೋ ಸತೀ ಜಾನಾತಿ ಸಂಗತಂ || ೩೯ ||

---

೩೬. ಸ್ವಾಹಾದೇವಿಯು :— ಎಲೈ ಮಹಾದೇವನೇ, ಈಗ ಈ ಸ್ತ್ರೀಯರಾಡುವ ಮಾತುಗಳನ್ನು ಕೇಳಿ ಅಸಮಾಧಾನಗೊಳ್ಳಬೇಡ. ವಿವಾಹಕಾಲದಲ್ಲಿ ಹೆಂಗಸರಿಗೇ ಹೆಚ್ಚು ಯಾಜಮಾನ್ಯವೆಂಬುದು ಎಲ್ಲೆಡೆಯಲ್ಲಿಯೂ ಬಳಕೆಯಲ್ಲಿದೆ.

೩೭. ರೋಹಿಣಿಯು :—ಎಲೈ ಕಾಮಶಾಸ್ತ್ರದಲ್ಲಿ ನಿಪುಣನೇ, ಪಾರ್ವತಿಯ ಇಷ್ಟವನ್ನು ಪೂರ್ತಿಗೊಳಿಸು. ಸ್ವತಃ ಕಾಮುಕನಾದ ನೀನು ನಿನ್ನ ಕಾಂತೆಗೆ ಕಾಮ ಸಮುದ್ರದ ದಡವನ್ನು ಕಾಣಿಸು.

೩೮. ವಸುಂಧರೆಯು :—ಭೋಗಾಸಕ್ತಿಯುಳ್ಳವನು ಮತ್ತು ಹಸಿವಿನಿಂದ ಬಳಲಿದವನು ಭೋಗದ್ರವ್ಯ ಮತ್ತು ಆಹಾರಸಾಮಗ್ರಿಗಳಿಲ್ಲದೆ ತೃಪ್ತಿಪಡುವುದಿಲ್ಲ. ಆದುದರಿಂದ ಯಾವುದರಿಂದ ಶಂಭುವಿಗೆ ತೃಪ್ತಿಯಾಗುವುದೋ ಅದನ್ನು ಸ್ತ್ರೀಯು ಮಾಡಬೇಕು.

೩೯. ಸಂಜ್ಞೆಯು :— ಎಲೈ ಸರ್ವಜ್ಞನೇ, ಕಾಮಪೀಡಿತರಾದವರ ಮನಸ್ಸನ್ನು ನೀನು ಸಂಪೂರ್ಣವಾಗಿ ತಿಳಿದಿರುವೆ. ಈ ಸತೀದೇವಿಯು ನಿನ್ನೊಡನೆ ಇರುವವಳಾದರೂ ನಿನ್ನನ್ನು ಸಂಪೂರ್ಣವಾಗಿ ತಿಳಿಯಲಾರಳು.

|| ಶತರೂಪೋವಾಚ ||

ತೂರ್ಣಂ ಪ್ರಸ್ಥಾಪಯ ಪ್ರೀತ್ಯಾ ಪಾರ್ವತ್ಯಾ ಸಹ ಶಂಕರಂ ।
ರತ್ನಪ್ರದೀಪಂ ತಾಂಬೂಲಂ ತಲ್ಪಂ ನಿರ್ಮಾಯ ನಿರ್ಜನೇ || ೪೦ ||

|| ಶ್ರೀಕೃಷ್ಣ ಉವಾಚ ||

ಸ್ತ್ರೀಣಾಂ ತದ್ವಚನಂ ಶ್ರುತ್ವಾ ತಾ ಉವಾಚ ಶಿವಃ ಸ್ವಯಂ ।
ನಿರ್ವಿಕಾರೀ ಚ ಭಗವಾನ್ ಯೋಗೀಂದ್ರಾಣಾಂ ಗುರೋರ್ಗುರುಃ || ೪೧ ||

|| ಶಂಕರ ಉವಾಚ ||

ದೇವ್ಯೋ ಮಾವದತೋಕ್ತಿಂ ಚ ಹ್ಯೇವಂಭೂತಾಂ ಮಮಾಂತಿಕೇ ।
ಜಗತಾಂ ಮಾತರಃ ಸಾಧ್ವ್ಯಃ ಪುತ್ರೇ ಚಪಲತಾ ಕಥಂ || ೪೨ ||

ಶಂಕರಸ್ಯ ವಚಃ ಶ್ರುತ್ವಾ ಲಜ್ಜಿತಾಃ ಸುರಯೋಷಿತಾಃ ।
ಬಭೂವುಃ ಸಂಭ್ರಮಾತ್ತೂರ್ಣಂ ಚಿತ್ರಪುತ್ತಲಿಕಾ ಯಥಾ || ೪೩ ||

---

೪೦. ಶತರೂಪಳು :—ರತ್ನಮಯವಾದ ದೀಪಗಳನ್ನೂ, ತಾಂಬೂಲವನ್ನೂ ಹಾಸಿಗೆಯನ್ನೂ ಏಕಾಂತದಲ್ಲಿ ಸಜ್ಜುಗೊಳಿಸಿ ಸಂತೋಷದಿಂದ ಶಂಕರನನ್ನು ಪಾರ್ವತಿಯೊಡನೆ ಶೀಘ್ರವಾಗಿ ಅಲ್ಲಿಗೆ ಕಳುಹಿಸೋಣ.

೪೧. ಶ್ರೀ ಕೃಷ್ಣನು :—ಸ್ತ್ರೀಯರುಗಳಾಡುತ್ತಿರುವ ಆ ಮಾತನ್ನು ಕೇಳಿ ಅವರನ್ನು ಕುರಿತು ನಿರ್ವಿಕಾರನೂ ಯೋಗಿಶ್ರೇಷ್ಠರಿಗೂ ಗುರುಗಳಿಗೂ ಗುರುವೂ ಪೂಜ್ಯನೂ ಆದ ಶಿವನು ತಾನು ಮಾತನಾಡಿದನು.

೪೨. ಶಂಕರನು :—ಎಲೈ ದೇವಿಯರೇ, ನನ್ನೆದುರಿನಲ್ಲಿ ಈ ರೀತಿಯಾಗಿ ಮಾತನಾಡಬೇಡಿರಿ. ನೀವು ಪ್ರಪಂಚಕ್ಕೆ ತಾಯಿಯರೂ, ಪತಿವ್ರತೆಯರೂ ಆಗಿ ಮಗನ ಎದುರಿನಲ್ಲಿ ಏಕೆ ಈ ರೀತಿಯಾದ ಚಪಲವನ್ನು ಮಾಡುವಿರಿ.

೪೩. ಶಂಕರನಾಡಿದ ಮಾತನ್ನು ಕೇಳಿ ದೇವಸ್ತ್ರೀಯರೆಲ್ಲರೂ ನಾಚಿಕೆಯನ್ನು ಹೊಂದಿ ಗಾಬರಿಯಿಂದ ಚಿತ್ರದಲ್ಲಿ ಬರೆದ ಬೊಂಬೆಗಳಂತೆ ಸುಮ್ಮನಾದರು.

ಭುಕ್ತ್ವಾ ಮಿಷ್ಟಾನಿ ಭಗವಾನಾಚಮ್ಯ ಚ ಮುದಾನ್ವಿತಃ ।
ಸಕರ್ಪೂರಂ ಚ ತಾಂಬೂಲಂ ಬುಭುಜೇ ಭಾರ್ಯಯಾ ಸಹ ॥ ೪೪ ॥

ರತ್ನಸಿಂಹಾಸನೇ ಶಂಭುರ್ಮೇನಾದತ್ತೇ ಮನೋಹರೇ ।
ಸಂನಿಧಾಯ ಮುದಾ ಯುಕ್ತೋ ದದರ್ಶ ವಾಸಮಂದಿರಂ ॥ ೪೫ ॥

ರತ್ನಪ್ರದೀಪಶತಕೈರ್ಜ್ವಲದ್ಭಿರ್ಜ್ವಲಿತಂ ಶ್ರಿಯಾ ।
ರತ್ನಪಾತ್ರಘಟಾಕೀರ್ಣಂ ಮುಕ್ತಾಮಾಣಿಕ್ಯಭೂಷಣಂ ॥ ೪೬ ॥

ರತ್ನದರ್ಪಣಶೋಭಾಢ್ಯಂ ಮಂಡಿತಂ ಶ್ವೇತಚಾಮರೈಃ ।
ಚಂದನಾಗುರುಸಂಯುಕ್ತಂ ಪುಷ್ಪತಲ್ಪಸಮನ್ವಿತಂ ॥ ೪೭ ॥

ನಾನಾಚಿತ್ರವಿಚಿತ್ರಾಢ್ಯಂ ನಿರ್ಮಿತಂ ವಿಶ್ವಕರ್ಮಣಾ ।
ರತ್ನಸಾರೇಣ ಖಚಿತಂ ರಚಿತಂ ಹೀರಕೈರ್ವರೈಃ ॥ ೪೮ ॥

---

೪೪. ಶಂಕರನು ಸಂತೋಷದಿಂದ ಪತ್ನಿಯೊಡನೆ ನಾನಾ ವಿಧವಾದ ಮೃಷ್ಟಾನ್ನಗಳನ್ನು ಭೋಜನಮಾಡಿ, ಆಚಮನವನ್ನು ಮಾಡಿ (ನೀರನ್ನು ಕುಡಿದು) ಪಚ್ಚಕರ್ಪೂರ ಸಮೇತವಾದ ತಾಂಬೂಲವನ್ನು ಸವಿದನು.

೪೫ ಮೇನಾದೇವಿಯಿಂದ ಸಿದ್ಧಮಾಡಲ್ಪಟ್ಟ ರತ್ನಮಯವಾದ ಸಿಂಹಾಸನದಲ್ಲಿ ಈಶ್ವರನು ಕುಳಿತುಕೊಂಡು ಆ ವಾಸಭವನವನ್ನು ಸಂತೋಷದಿಂದ ನೋಡಿದನು.

೪೬–೪೮. ರತ್ನಮಯಗಳಾದ ನೂರಾರು ದೀಪಗಳ ಕಾಂತಿಯಿಂದ ಪ್ರಕಾಶಿಸುತ್ತಿರುವ ರತ್ನಮಯಪಾತ್ರೆಗಳಿಂದ ಕೂಡಿರುವ, ಮುತ್ತು ರತ್ನಗಳಿಂದ ಅಲಂಕರಿಸಲ್ಪಟ್ಟಿರುವ, ರತ್ನಮಯವಾದ ಕನ್ನಡಿಗಳ ಕಾಂತಿಯಿಂದ ಕೂಡಿರುವ, ಬಿಳಿಯ ಚಾಮರಗಳಿಂದ ಕಂಗೊಳಿಸುತ್ತಿರುವ, ದಿವ್ಯಗಂಧಗಳಿಂದ ಕೂಡಿದ, ಹೂವಿನ ಹಾಸಿಗೆಯಿಂದ ಮನೋಹರವಾಗಿರುವ, ನಾನಾವಿಧ ಚಿತ್ರಗಳಿಂದ ಕೂಡಿ ಉತ್ತಮ ರತ್ನಗಳಿಂದ ನಿರ್ಮಿತವಾದ, ಉತ್ತಮವಾದ ಹೀರಕವೆಂಬ ರತ್ನಗಳಿಂದ ರಚಿಸಿರುವ, ವಿಶ್ವಕರ್ಮನಿಂದಲೇ ಮಾಡಲ್ಪಟ್ಟ ವಾಸಭವನವನ್ನು ನೋಡಿದನು.

ಕುತ್ರಚಿತ್ಸ್ವರನಿರ್ಮಾಣವೈಕುಂಠಸುಮನೋಹರಂ ।
ಬೃಂದಾವನಂ ಕುಂಜವನಂ ಕುತ್ರಚಿದ್ರಾಸಮಂಡಲಂ ॥ ೪೯ ॥

ಕೈಲಾಸಂ ಚ ಕುತ್ರಚನ ಕುತ್ರಚಿದಿಂದ್ರಮಂದಿರಂ ।
ದೃಷ್ಟ್ವಾಽಽಶ್ಚರ್ಯಂ ಮಹಾದೇವಃ ಪರಿತುಷ್ಟೋ ಬಭೂವ ಹ ॥ ೫೦ ॥

ಅಥ ಪ್ರಭಾತಕಾಲಶ್ಚ ಬಭೂವ ಪ್ರಾಣವಲ್ಲಭೇ ।
ನಾನಾಪ್ರಕಾರವಾದ್ಯಾನಿ ವಾದಯಾಂಚಕ್ರಿರೇ ಜನಾಃ ॥ ೫೧ ॥

ಸರ್ವೇ ಸುರಾಃ ಸಮುತ್ತಸ್ಥುಃ ಸಜ್ಜೀಭೂತಾಃ ಸಸಂಭ್ರಮಾಃ ।
ಸ್ವವಾಹನಾನ್ ಸಮಾರುಹ್ಯ ಕೈಲಾಸಂ ಗಂತುಮುದ್ಯತಾಃ ॥ ೫೨ ॥

ವಾಸಗೇಹಂ ಸಮಾಗತ್ಯ ಧರ್ಮೋ ನಾರಾಯಣಾಜ್ಞಯಾ ।
ಉವಾಚ ಶಂಕರಂ ಯೋಗೀ ಯೋಗೀಶಂ ಸಮಯೋಚಿತಂ ॥ ೫೩ ॥

೪೯-೫೦. ಕೆಲವೆಡೆಗಳಲ್ಲಿ ದೇವತೆಗಳಿಂದ ಮಾಡಲ್ಪಟ್ಟ ವೈಕುಂಠದ ಚಿತ್ರದಿಂದ ರಮ್ಯವಾಗಿರುವ, ಕೆಲವೆಡೆಯಲ್ಲಿ ಬರೆದಿರುವ ಬೃಂದಾವನ, ಕುಂಜವನ, ರಾಸಮಂಡಲ, ಕೈಲಾಸ ಮತ್ತು ಅಮರಾವತಿ ಇವುಗಳ ಚಿತ್ರವನ್ನು ಆಶ್ಚರ್ಯದಿಂದ ನೋಡುತ್ತ ಈಶ್ವರನು ಅತ್ಯಂತ ಸಂತೋಷವನ್ನು ಹೊಂದಿದನು.

೫೧. ಎಲೈ ಪ್ರಾಣವಲ್ಲಭೆಯೇ, ಪ್ರಾತಃಕಾಲವಾದನಂತರ ಜನರೆಲ್ಲರೂ ನಾನಾವಿಧವಾದ ವಾದ್ಯಗಳನ್ನು ಬಾರಿಸಿದರು.

೫೨. ಆಗ ಸಕಲ ದೇವತೆಗಳೂ ಸಂಭ್ರಮದಿಂದ ಎದ್ದು ತಮ್ಮ ತಮ್ಮ ವಾಹನಗಳನ್ನು ಹತ್ತಿಕೊಂಡು ಕೈಲಾಸಕ್ಕೆ ಹೋಗಲು ಸಿದ್ಧರಾದರು.

೫೩. ಧರ್ಮನು ನಾರಾಯಣನ ಅಪ್ಪಣೆಯಿಂದ ವಾಸಭವನಕ್ಕೆ ಬಂದು ಯೋಗಿಗಳಿಗೆ ಅಧಿಪತಿಯಾದ ಶಂಕರನನ್ನು ಕುರಿತು ಸಮಯೋಚಿತವಾದ ಮಾತುಗಳನ್ನಾಡಿದನು.

॥ ಧರ್ಮ ಉವಾಚ ॥

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ಭವತು ಪ್ರಮಥಾಧಿಪ ।
ಪಾರ್ವತ್ಯಾ ಸಹ ಮಾಹೇಂದ್ರೇ ಯಾತ್ರಾಂ ಕುರು ಹರಿಂ ಸ್ಮರನ್ ॥ ೫೪ ॥

ಇತ್ಥಂ ಧರ್ಮವಚಃ ಶ್ರುತ್ವಾ ಪಾರ್ವತ್ಯಾ ಸಹ ಶಂಕರಃ ।
ಯಾತ್ರಾಂ ಚಕಾರ ಮಾಹೇಂದ್ರೇ ವೃಂದಾವನವಿನೋದಿನಿ ॥ ೫೫ ॥

ಯಾತ್ರಾಂ ಕುರ್ವತಿ ದೇವೇಶೇ ಪಾರ್ವತ್ಯಾ ಸಹ ಶಂಕರೇ ।
ಉಚ್ಚೈರುದಿತ್ವಾ ಸಾ ಮೇನಾ ತಮುವಾಚ ಕೃಪಾನಿಧಿಂ ॥ ೫೬ ॥

॥ ಮೇನೋವಾಚ ॥

ಕೃಪಾನಿಧೇ ಕೃಪಾಂ ಕೃತ್ವಾ ಮದ್ವತ್ಸಾಂ ಪಾಲಯಿಷ್ಯಸಿ ।
ಸಹಸ್ರದೋಷಾನ್ ಭಗವಾನಾಷುತೋಷಃ ಕ್ಷಮಿಷ್ಯಸಿ ॥ ೫೭ ॥

---

೫೪. ಧರ್ಮನು :—ಎಲೈ ಪ್ರಮಥಗಣಗಳಿಗೆ ಅಧಿಪತಿಯಾದ ಈಶ್ವರನೇ, ಏಳು ಏಳು. ನಿನಗೆ ಮಂಗಳವಾಗಲಿ; ಪಾರ್ವತಿಯೊಡನೆ ಹರಿಯನ್ನು ಸ್ಮರಿಸುತ್ತ ಮಾಹೇಂದ್ರಪರ್ವತಕ್ಕೆ ಯಾತ್ರೆಮಾಡು.

೫೫. ರಾಧೆಯೇ, ಈ ರೀತಿಯಾದ ಧರ್ಮನ ಮಾತನ್ನು ಕೇಳಿ ಈಶ್ವರನು ಪಾರ್ವತಿಯೊಡನೆ ಮಾಹೇಂದ್ರ ಪರ್ವತಕ್ಕೆ ಪ್ರಯಾಣಮಾಡಿದನು.

೫೬. ದೇವತೆಗಳಿಗೆ ಒಡೆಯನಾದ ಆ ಶಂಕರನು ಪ್ರಯಾಣಮಾಡುತ್ತಿರಲು ಆ ಮೇನಾದೇವಿಯು ಗಟ್ಟಿಯಾಗಿ ಅಳುತ್ತ ದಯಾನಿಧಿಯಾದ ಆ ಶಂಕರನನ್ನು ಕುರಿತು ಈ ರೀತಿ ಹೇಳಿದಳು.

೫೭. ಮೇನಾದೇವಿಯು :— ಎಲೈ ದಯಾನಿಧಿಯೇ, ದಯೆಯಿಂದ ನನ್ನ ಮಗಳನ್ನು ಕಾಪಾಡು. ಎಲೈ ಶೀಘ್ರವಾಗಿ ಸಂತೋಷಹೊಂದುವ ಪೂಜ್ಯನೇ, ನನ್ನ ಮಗಳ ಸಾವಿರಾರು ತಪ್ಪುಗಳನ್ನು ಕ್ಷಮಿಸುವವನಾಗು.

ತ್ವತ್ಪದಾಂಬುಜಭಕ್ತ್ಯೈಷಾ ಮತ್ಸುತಾ ಜನ್ಮಜನ್ಮನಿ ।
ಸ್ವಪ್ನೇ ಜ್ಞಾನೇ ಸ್ಮೃತಿರ್ನಾಸ್ತಿ ಮಹಾದೇವಪ್ರಭುಂ ವಿನಾ ॥ ೫೮ ॥

ತ್ವದ್ಭಕ್ತಿಶ್ರುತಿಮಾತ್ರೇಣ ಹರ್ಷಾಶ್ರುಪುಲಕಾನ್ವಿತಾ ।
ತ್ವನ್ನಿಂದಯಾ ಭವೇನ್ಮೌನಾ ಮೃತ್ಯುಂಜಯ ಮೃತಾ ಇವ ॥ ೫೯ ॥

ಇತ್ಯುಕ್ತ್ವಾ ಮೇನಕಾ ಶೀಘ್ರಂ ತತ್ರಾಽಽಗತ್ಯ ಹಿಮಾಲಯಃ ।
ಉಚ್ಚೈ ರುರೋದ ಚ ತದಾ ವತ್ಸಾಂ ಕೃತ್ವಾ ಸ್ವವಕ್ಷಸಿ ॥ ೬೦ ॥

ಕ್ವ ಯಾಸಿ ವತ್ಸೇತ್ಯುಚ್ಚಾರ್ಯ ಶೂನ್ಯಂ ಕೃತ್ವಾ ಹಿಮಾಲಯಂ ।
ಸ್ಮಾರಂ ಸ್ಮಾರಂ ತದ್ಗುಣೌಘಂ ವಿದಾರ್ಯ ಮನ್ಮನಃ ಸ್ಫುಟಂ ॥ ೬೧ ॥

ಇತ್ಯೇವಮುಕ್ತ್ವಾ ಶೈಲೇಂದ್ರಃ ಸಮರ್ಪ್ಯ ಚ ಶಿವಾಂ ಶಿವೇ ।
ಸಶೈಲಃ ಸಹ ಪುತ್ರೈಶ್ಚ ರುರೋದೋಚ್ಚೈರ್ಮುಹುರ್ಮುಹುಃ ॥ ೬೨ ॥

---

೫೮. ಈ ನನ್ನ ಮಗಳು ಪ್ರತಿಜನ್ಮಗಳಲ್ಲಿಯೂ ನಿನ್ನ ಪಾದಕಮಲಗಳಲ್ಲಿ ಭಕ್ತಿಯುಳ್ಳವಳಾಗಿರುತ್ತಾಳೆ. ನಿದ್ರೆಯಲ್ಲಿಯೂ, ಎಚ್ಚರಗೊಂಡ ಸಮಯದಲ್ಲಿಯೂ ಕೂಡ ಮಹಾದೇವಪ್ರಭುವನ್ನು ಬಿಟ್ಟು ಬೇರೆ ಜ್ಞಾನವಿರುವುದಿಲ್ಲ.

೫೯. ಎಲೈ ಮೃತ್ಯುವನ್ನು ಜಯಿಸಿದವನೇ, ನಿನ್ನ ಭಕ್ತಿಯ ವಿಷಯವನ್ನು ಕೇಳಿದೊಡನೆಯೇ ಕಣ್ಣುಗಳಲ್ಲಿ ಆನಂದಾಶ್ರುಗಳನ್ನು ಸುರಿಸುತ್ತ ಮೈಯಲ್ಲಿ ರೋಮಾಂಚನವನ್ನು ಹೊಂದುತ್ತಾಳೆ. ನಿನ್ನನ್ನು ನಿಂದಿಸುತ್ತಿರುವುದನ್ನು ಕೇಳಿದರೆ ಮೃತರಂತೆ ಮೌನವನ್ನು ತಾಳುತ್ತಾಳೆ.

೬೦. ಮೇನಕೆಯು ಈರೀತಿ ಹೇಳಲು ಹಿಮವಂತನು ಬೇಗನೆ ಅಲ್ಲಿಗೆ ಬಂದು ತನ್ನ ಮಗಳಾದ ಪಾರ್ವತಿಯನ್ನು ಎದೆಗೆ ಅಪ್ಪಿಕೊಂಡು ಗಟ್ಟಿಯಾಗಿ ಅತ್ತನು.

೬೧. ಮತ್ತು 'ಎಲೈ ಮಗಳೇ, ಹಿಮವತ್ಪರ್ವತವನ್ನು ಶೂನ್ಯವನ್ನಾಗಿ ಮಾಡಿ ನನ್ನ ಹೃದಯವನ್ನು ಸೀಳುತ್ತ ಎಲ್ಲಿಗೆ ಹೋಗುವಿ' ಎಂದು ಹೇಳುತ್ತ ಅವಳ ಸದ್ಗುಣವನ್ನು ಸ್ಮರಿಸಿಕೊಂಡು ಅತ್ತನು.

೬೨. ಈ ಪ್ರಕಾರ ಹೇಳುತ್ತ ಹಿಮವಂತನು ಪಾರ್ವತಿಯನ್ನು ಈಶ್ವರನಿಗೆ ಅರ್ಪಿಸಿ ಮಕ್ಕಳಿಂಮೊಡಗೂಡಿದವನಾಗಿ ಮತ್ತೆ ಮತ್ತೆ ಬಿಕ್ಕಿ ಬಿಕ್ಕಿ ಗಟ್ಟಿಯಾಗಿ ಅತ್ತನು.

ನಾರಾಯಣಶ್ಚ ಭಗವಾನಧ್ಯಾತ್ಮವಿದ್ಯಯಾ ಸ್ವಯಂ ।
ಸರ್ವಾನ್ ಪ್ರಬೋಧಯಾಮಾಸ ಕೃಪಯಾ ಸ ಕೃಪಾನಿಧಿಃ ॥ ೬೩ ॥

ನನಾಮ ಪಾರ್ವತೀ ಭಕ್ತ್ಯಾ ಮಾತರಂ ಪಿತರಂ ಗುರೂನ್ ।
ಮಾಯಯಾ ಚ ಮಹಾಮಾಯಾ ರುರೋದೋಚ್ಚೈರ್ಮುಹುರ್ಮುಹುಃ॥

ಪಾರ್ವತೀ ರೋದನೇನೈವ ರುರುದುಃ ಸರ್ವಯೋಷಿತಃ ।
ಮುನಯಶ್ಚ ಸುರಾಃ ಸರ್ವೇ ಸಸ್ತ್ರೀಕಾ ಸಗಣಾ ಧ್ರುವಂ ॥ ೬೫ ॥

ಶೀಘ್ರಂ ಯಯುಸ್ತೇ ಕೈಲಾಸಂ ದೇವಾ ಮಾನಸಯಾಯಿನಃ ।
ಮುಹೂರ್ತಾರ್ಧೇನ ಮುದಿತಾಃ ಸಂಪ್ರಾಪುಃ ಶಂಕರಾಲಯಂ ॥ ೬೬ ॥

ದೃಷ್ಟ್ವಾಽಽಗತಂ ದೇವಪತ್ನ್ಯೋ ಮುನಿಪತ್ನ್ಯಶ್ಚ ಸತ್ವರಂ ।
ಆಯಯುರ್ದೀಪಮಾನೀಯ ಮುದಾ ಮಂಗಳಕರ್ಮಣಿ ॥ ೬೭ ॥

---

೬೩. ಪೂಜ್ಯನಾದ ನಾರಾಯಣನು ದಯೆಯಿಂದ, ದುಃಖಿತರಾದ ಹಿಮವಂತನೇ ಮೊದಲಾದವರಿಗೆ ವೇದಾಂತ ತತ್ತ್ವವನ್ನುಪದೇಶಮಾಡಿ ಸಮಾಧಾನ ಪಡಿಸಿದನು.

೬೪. ಪಾರ್ವತಿಯು ಭಕ್ತಿಯಿಂದ ತಾಯಿಗೂ, ತಂದೆಗೂ ಗುರುಜನಗಳಿಗೂ ನಮಸ್ಕಾರಮಾಡಿದಳು. ಮಹಾಮಾಯಾಸ್ವರೂಪಿಣಿಯಾಗಿದ್ದರೂ ಮಾಯೆಯಿಂದ ಮೋಹಿತಳಾಗಿ ಮತ್ತೆ ಮತ್ತೆ ಗಟ್ಟಿಯಾಗಿ ಅತ್ತಳು.

೬೫. ಪಾರ್ವತಿಯು ಅಳುತ್ತಿರುವುದನ್ನು ಕೇಳಿ ಹೆಂಗಸರೆಲ್ಲರೂ ಅತ್ತರು. ಮುನಿಗಳು ಮತ್ತು ದೇವತೆಗಳೂ ಸಹ ಸ್ತ್ರೀಯರಿಂದಲೂ ಬಂಧುಗಳಿಂದಲೂ ಕೂಡಿದವರಾಗಿ ಗಟ್ಟಿಯಾಗಿ ಅತ್ತರು.

೬೬. ಆ ದೇವತೆಗಳೆಲ್ಲರೂ ಜಾಗ್ರತೆಯಾಗಿ ಕೈಲಾಸಕ್ಕೆ ಹೊರಟರು. ಮನೋವೇಗದಿಂದ ಅರ್ಧ ಮುಹೂರ್ತದಲ್ಲಿಯೇ ಸಂತೋಷದಿಂದ ಶಂಕರನ ಮನೆಗೆ ಬಂದರು.

೬೭. ಅಲ್ಲಿಗೆ ಬಂದಿರುವ ಶಂಕರನನ್ನು ನೋಡಿ ದೇವಪತ್ನಿಯರೂ ಮುನಿಪತ್ನಿಯರೂ ಸಂತೋಷದಿಂದ ಮಂಗಳ ದೀಪಗಳನ್ನು ತೆಗೆದುಕೊಂಡು ಬಂದರು.

ವಾಯುಪತ್ನೀ ಕುಬೇರಸ್ಯ ಕಾಮಿನೀ ಶುಕ್ರಕಾಮಿನೀ ।
ತಾರಾ ಸುರಗುರೋಃ ಪತ್ನೀ ಪತ್ನೀ ದುರ್ವಾಸಸಸ್ತಥಾ ॥ ೧೮ ॥

ಅತ್ರಿಭಾರ್ಯಾನಸೂಯಾ ಚ ಚಂದ್ರಪತ್ನ್ಯಸ್ತಥೈವ ಚ ।
ದೇವಕನ್ಯಾ ನಾಗಕನ್ಯಾ ಮುನಿಕನ್ಯಾಃ ಸಹಸ್ರಶಃ ॥ ೧೯ ॥

ಅಸಂಖ್ಯಕಾಮಿನೀಸಂಘಃ ಸಂಖ್ಯಾಂ ಕರ್ತುಂ ಚ ಕಃ ಕ್ಷಮಃ ।
ತಾಶ್ಚ ಪ್ರವೇಶಯಾಮಾಸುರ್ದಂಪತೀ ವಾಸಮಂದಿರಂ ॥ ೨೦ ॥

ರತ್ನಸಿಂಹಾಸನೇ ರಮ್ಯೇ ವಾಸಯಾಮಾಸುರೀಶ್ವರೀಂ ।
ಸತೀಂ ತಾಂ ದರ್ಶಯಾಮಾಸ ಶಿವಃ ಪೂರ್ವಾಲಯಂ ಮುದಾ ॥ ೨೧ ॥

ಸತಿ ಸ್ಮರಸ್ಯತೋ ಗೇಹಾದ್ಯದ್ಗತಾ ತಾತಮಂದಿರಂ ।
ಅಧುನಾ ಶೈಲಕನ್ಯಾ ತ್ವಂ ತತ್ರ ದಕ್ಷಸುತಾ ಪುರಾ ॥ ೨೨ ॥

೧೮–೨೦. ವಾಯುಪತ್ನಿಯೂ, ಕುಬೇರನ ಹೆಂಡತಿಯೂ ಶುಕ್ರನ ಮಡದಿಯೂ, ಬೃಹಸ್ಪತಿಯ ಹೆಂಡತಿಯಾದ ತಾರೆಯೂ, ಅತ್ರಿಯ ಪತ್ನಿಯಾದ ಅನುಸೂಯೆಯೂ, ಚಂದ್ರನ ಮಡದಿಯರೂ, ದೇವಕನ್ಯೆಯರೂ, ನಾಗ ಕನ್ಯೆಯರೂ, ಮುನಿಕನ್ಯೆಯರೂ ಬಂದರು. ಹೀಗೆ ಬಂದಿರುವ ಹೆಂಗಸರನ್ನು ಲೆಕ್ಕಮಾಡಲಸಾಧ್ಯವಾಗಿತ್ತು. ಅವರೆಲ್ಲರೂ ಸೇರಿ ದಂಪತಿಗಳನ್ನು ವಾಸಮಂದಿರಕ್ಕೆ ಕಳುಹಿಸಿದರು.

೨೧. ಸರ್ವೇಶ್ವರಿಯಾದ ಪಾರ್ವತಿಯನ್ನು ರತ್ನಮಯವಾದ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಈಶ್ವರನು ತನ್ನ ಹಳೆಯ ಮನೆಯನ್ನು ಸಂತೋಷದಿಂದ ತೋರಿಸಿದನು.

೨೨. ಎಲೈ ಸತಿಯೇ, ನೀನು ಪೂರ್ವದಲ್ಲಿ ದಕ್ಷನ ಮಗಳಾಗಿದ್ದು ಈ ಮನೆಯಲ್ಲಿ ವಾಸಮಾಡುತ್ತ ಇಲ್ಲಿಂದ ನಿಮ್ಮ ತಂದೆಯ ಮನೆಗೆ ಹೋದೆ. ಈಗ ನೀನು ಹಿಮವಂತನ ಮಗಳಾಗಿರುವೆ, ಇದು ನಿನಗೆ ನೆನಪಿದೆಯೇ ?

ಜಾತಿಸ್ಮರಾಂ ಸ್ಮಾರಯಾಮಿ ನಿತ್ಯಂ ಸ್ಮರಸಿ ಚೇದ್ವದ |
ಶಂಕರಸ್ಯ ವಚಃ ಶ್ರುತ್ವಾ ಸಸ್ಮಿತೋವಾಚ ತಾಃ ಸತೀ || ೭೩ ||

ಸರ್ವಂ ಸ್ಮರಾಮಿ ಪ್ರಾಣೇಶ ಮೌನೀಭೂತೋ ಭವೇತಿ ತಂ |
ಶಿವಃ ಸಂಭೃತಸಂಭಾರೋ ನಾನಾವಸ್ತುಮನೋಹರಂ || ೭೪ ||

ಭೋಜಯಾಮಾಸ ದೇವಾಂಶ್ಚ ನಾರಾಯಣಪುರೋಗಮಾನ್ |
ಭುಕ್ತ್ವಾ ದೇವಾಃ ಪ್ರಜಗ್ಮುಸ್ತೇ ನಾನಾರತ್ನವಿಭೂಷಿತಾಃ || ೭೫ ||

ಸಸ್ತ್ರೀಕಾಃ ಸಗಣಾಃ ಸರ್ವೇ ಪ್ರಣಮ್ಯ ಚಂದ್ರಶೇಖರಂ |
ನಾರಾಯಣಂ ಚ ಬ್ರಹ್ಮಾಣಂ ನನಾಮ ಶಂಕರಃ ಸ್ವಯಂ || ೭೬ ||

ತೌ ಚ ತಂ ಚ ಸಮಾಶ್ಲಿಷ್ಯಾಽಽಶಿಷಂ ಕೃತ್ವಾ ಪ್ರಜಗ್ಮತುಃ |
ಅಥ ಶೈಲಶ್ಚ ಮೇನಾ ಚ ಮೈನಾಕಮಾಜುಹಾವ ಹ || ೭೭ ||

ಶೀಘ್ರಮಾನಯ ಭದ್ರಂ ತೇ ಪಾರ್ವತೀಂ ಶಂಕರಂ ಸುತೇ |
ತಯೋಃ ಸ ವಚನಂ ಶ್ರುತ್ವಾ ಶೀಘ್ರಂ ಗತ್ವಾ ಶಿವಾಲಯಂ || ೭೮ ||

೭೩–೭೬. ನೀನು ಜನ್ಮಾಂತರದ ಸ್ಮರಣೆಯುಳ್ಳವಳಾದರೂ ಜ್ಞಾಪಿಸುತ್ತೇನೆ. ನೀನೂ ಯಾವಾಗಲೂ ಜ್ಞಾಪಿಸಿಕೊಳ್ಳುತ್ತಿರುವುದಾದರೆ ಹೇಳು ಎಂದನು. ಶಂಕರನ ಮಾತನ್ನು ಕೇಳಿ ಆ ಸತಿಯು ಮಂದಹಾಸವನ್ನು ಬೀರುತ್ತ ಶಂಕರನನ್ನು ಕುರಿತು ಎಲೈ ಪ್ರಾಣೇಶನೇ, ಸಕಲವನ್ನೂ ಸ್ಮರಿಸಿಕೊಳ್ಳುತ್ತಿರುವೆನು, ಸುಮ್ಮನಿರು ಎಂದು ಹೇಳಿದಳು. ಈಶ್ವರನು ಸಕಲಸಾಮಗ್ರಿಗಳನ್ನೂ ಸಿದ್ಧಪಡಿಸಿಕೊಂಡು ನಾರಾಯಣನೇ ಮೊದಲಾದ ದೇವತೆಗಳಿಗೆ ಭೋಜನ ಮಾಡಿಸಿದನು. ದೇವತೆಗಳೆಲ್ಲರೂ ಭೋಜನವನ್ನು ಮಾಡಿಕೊಂಡು ನಾನಾರತ್ನಾಭರಣಗಳಿಂದ ಅಲಂಕೃತರಾಗಿ ತಮ್ಮ ಸ್ತ್ರೀಯರಿಂದಲೂ ಪರಿವಾರದಿಂದಲೂ ಸಮೇತರಾಗಿ ಹೊರಟುಹೋದರು. ಶಂಕರನು ನಾರಾಯಣನಿಗೂ ಬ್ರಹ್ಮನಿಗೂ ನಮಸ್ಕಾರಮಾಡಿದನು.

೭೭-೮೦. ಆಗ ಬ್ರಹ್ಮನಾರಾಯಣರು ಶಂಕರನನ್ನು ಅಪ್ಪಿಕೊಂಡು ಆಶೀರ್ವಾದವನ್ನು ಮಾಡಿ ತಮ್ಮ ಸ್ಥಳಗಳಿಗೆ ಹೊರಟುಹೋದರು. ಅನಂತರ ಹಿಮವಂತನೂ ಮೇನಾದೇವಿಯೂ ಮಗನಾದ ಮೈನಾಕನನ್ನು ಕರೆದು, ಎಲೈ ಮಗನೇ, ಶೀಘ್ರವಾಗಿ ಹೋಗಿ ಪಾರ್ವತಿಯನ್ನೂ, ಶಂಕರನನ್ನೂ ಕರೆದುಕೊಂಡು ಬಾ

ಆಜಗಾಮ ಸಮಾನೀಯ ಪಾರ್ವತೀಪರಮೇಶ್ವರೌ ।
ಪಾರ್ವತ್ಯಾಗಮನಂ ಶ್ರುತ್ವಾ ಬಾಲಾಶ್ಚ ಬಾಲಿಕಾಸ್ತಥಾ ॥ ೭೯ ॥

ವೃದ್ಧಾ ಯುವತಯೋ ಯಾ ಯಾಶ್ಚ ಶೈಲಾಶ್ಚ ದುದ್ರುವುರ್ಮುದಾ ।
ಮೇನಾ ಸುತಾಭ್ಯಾಂ ವಧ್ವಾ ಚ ಸಹ ದುದ್ರಾವ ಸಸ್ಮಿತಾ ॥ ೮೦ ॥

ಹಿಮಾಲಯಶ್ಚ ಮುದಿತೋ ದುದ್ರುವಾನುವ್ರಜನ್ಸುತಾಂ ।
ಅವರುಹ್ಯ ರಥಾದ್ದೇವೀ ಮಾತರಂ ಪಿತರಂ ಗುರೂನ್ ॥ ೮೧ ॥

ಪ್ರಣನಾಮ ಪ್ರರುದಿತಾ ನಿಮಗ್ನಾಽಽನನ್ದಸಾಗರೇ ।
ಪಾರ್ವತೀಂ ಚ ಸಮಾಶ್ಲಿಷ್ಯ ಮೇನಕಾ ಹರ್ಷವಿಹ್ವಲಾ ॥ ೮೨ ॥

ಹಿಮಾಲಯಶ್ಚ ಮುದಿತೋ ಗತಾಃ ಪ್ರಾಣಾ ಇವಾಽಽಗತಾಃ ।
ಸುತಾಂ ನಿಧಾಯ ಗೇಹೇ ಸ್ವೇ ರತ್ನಸಿಂಹಾಸನಂ ದದೌ ॥ ೮೩ ॥

ಎಂದರು. ಆ ಮೈನಾಕನು ಅವರ ಮಾತನ್ನು ಕೇಳಿ ಜಾಗ್ರತೆಯಾಗಿ ಈಶ್ವರನ ಮನೆಗೆ ಹೋಗಿ ಪಾರ್ವತೀಪರಮೇಶ್ವರರನ್ನು ಕರೆದುಕೊಂಡು ಬಂದನು. ಪಾರ್ವತಿಯು ಬಂದ ವರ್ತಮಾನವನ್ನು ಕೇಳಿ ಹುಡುಗರು, ಹುಡುಗಿಯರು, ಮುದುಕರು, ಯುವತಿಯರು ಆನಂದದಿಂದ ಓಡಿಬಂದರು. ಮೇನಾದೇವಿಯು ಮಕ್ಕಳನ್ನೂ ಸೊಸೆಯನ್ನೂ ಕರೆದುಕೊಂಡು ನಗುತ್ತಾ ಓಡಿಹೋದಳು.

೮೧–೮೩. ಹಿಮವಂತನೂ ಕೂಡ ಸಂತೋಷದಿಂದ ಓಡಿಹೋದನು. ಆಗ ಪಾರ್ವತಿಯು ರಥದಿಂದಿಳಿದು ತಾಯಿಗೂ ತಂದೆಗೂ ಗುರುಜನರಿಗೂ ನಮಸ್ಕಾರ ಮಾಡಿದಳು. ಮತ್ತು ಸಂತೋಷದ ಸಮುದ್ರದಲ್ಲಿ ಮುಳುಗಿದವಳಾಗಿದ್ದಳು. ಮೇನಾದೇವಿಯು ಸಂತೋಷದಿಂದ ಮಗಳನ್ನಪ್ಪಿಕೊಂಡಳು. ಹಿಮವಂತನೂ ಕೂಡ ಹೋದಪ್ರಾಣವು ಮತ್ತೆ ಬಂದಂತೆ ಅತ್ಯಂತ ಸಂತೋಷಗೊಂಡವನಾಗಿ ಮಗಳನ್ನು ಮನೆಗೆ ಕರೆತಂದು ರತ್ನಮಯವಾದ ಆಸನವನ್ನು ಕೊಟ್ಟನು.

ಶೂಲಭೃತೇ ಗಣೇಭ್ಯಶ್ಚ ಮಧುಪರ್ಕಾದಿಕಂ ಮುದಾ ।
ತಸ್ಥೌ ಶ್ವಶುರಗೇಹೇ ಚ ಸಗಣಶ್ಚಂದ್ರಶೇಖರಃ ॥ ೪೪ ॥

ನಿತ್ಯಂ ಷೋಡಶೋಪಚಾರೈಃ ಪೂಜಿತಃ ಸಹ ಭಾರ್ಯಯಾ ।
ಇತ್ಯೇವಂ ಕಥಿತಂ ರಾಧೇ ಶಂಕರೋದ್ವಾಹಮಂಗಳಂ ।
ಶೋಕಘ್ನಂ ಹರ್ಷಜನಕಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೪೫ ॥

ಇತಿ ಶ್ರೀ ಬ್ರಹ್ಮವೈವರ್ತಪುರಾಣೇ ಶ್ರೀಕೃಷ್ಣಜನ್ಮಖಂಡೇ
ರಾಧಾಕೃಷ್ಣಸಂವಾದೇ ಶಂಕರವಿವಾಹೋ ನಾಮ
ಪಂಚಚತ್ವಾರಿಂಶೋಽಧ್ಯಾಯಃ

೪೪-೪೫. ಗಣಗಳಿಂದ ಕೂಡಿದ ಶಂಕರನಿಗೆ ವಿಧಿಪೂರ್ವಕವಾಗಿ ಮಧುಪರ್ಕವೇ ಮೊದಲಾದವುಗಳನ್ನು ಕೊಟ್ಟನು. ಚಂದ್ರಶೇಖರನಾದ ಶಂಕರನು ತನ್ನ ಗಣಸಹಿತನಾಗಿ ಮಾವನ ಮನೆಯಲ್ಲಿ ಪತ್ನಿಸಮೇತನಾಗಿ ಪ್ರತಿದಿನವು ಷೋಡಶೋಪಚಾರಗಳಿಂದ ಪೂಜಿಸಲ್ಪಡುತ್ತಿದ್ದನು. ಎಲೈ ರಾಧೆಯೇ, ಈ ಪ್ರಕಾರವಾಗಿ ಶಂಕರನ ವಿವಾಹಮಂಗಳೋತ್ಸವದ ವಿಚಾರವನ್ನು ಹೇಳಿರುವೆನು. ಈ ಕಥೆಯು ಜನರ ದುಃಖವನ್ನು ನಾಶಮಾಡಿ ಸಂತೋಷವನ್ನುಂಟುಮಾಡುವುದಾಗಿರುವುದು. ಇನ್ನೇನನ್ನು ಕೇಳಲಪೇಕ್ಷಿಸುವಿ ?

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ನಾರದ ನಾರಾಯಣ ಸಂವಾದದಲ್ಲಿ ಶಂಕರವಿವಾಹವೆಂಬ
ನಲವತ್ತೈದನೆಯ ಅಧ್ಯಾಯವು ಮುಗಿದುದು

ನಲವತ್ತೈದನೆಯ ಅಧ್ಯಾಯದ ಸಾರಾಂಶ.

ಪರಮೇಶ್ವರನು ಪಾರ್ವತಿಯನ್ನು ಪರಿಗ್ರಹಿಸಿದನಂತರ ಶಾಸ್ತ್ರೋಕ್ತವಾಗಿ ಹವನ ಹೋಮಾದಿಗಳನ್ನು ಮಾಡಿ, ಬ್ರಾಹ್ಮಣೋತ್ತಮರಿಗೆ ಧನಕನಾದಿಗಳನ್ನು ದಾನಮಾಡಿ ವಿವಾಹಮಂಟಪದಿಂದ ನಗರಿಗೆ ಹಿಂತಿರುಗಿದನು. ಹಿಮವಂತನ ಸ್ತ್ರೀ ಪರಿವಾರದಿಂದ ಅಲಂಕರಿಸಲ್ಪಟ್ಟ ವಾಸಗೃಹಕ್ಕೆ ಪಾರ್ವತೀಸಮೇತನಾಗಿ ಬಂದು ಕುಳಿತನು. ಅಲ್ಲಿ ಸರಸ್ವತೀ, ಲಕ್ಷ್ಮೀ, ಸಾವಿತ್ರಿ ಮುಂತಾದ ಷೋಡಶ ಪತಿವ್ರತಾ ಸ್ತ್ರೀಯರು ಶಿವಪಾರ್ವತಿಯರಿಗೆ ಮನಃಪೂರ್ವಕವಾಗಿ ಆಶೀರ್ವದಿಸಿ ಅವರೀರ್ವರ ದಾಂಪತ್ಯವು ಲೋಕಕ್ಕೇ ಆದರ್ಶವಾಗಿರುವಂತೆ ಹರಸಿದರು. ರತೀದೇವಿಯು ಇದೇ ಸುಸಮಯವೆಂದು ಬಗೆದು ತನ್ನ ಪತಿಯನ್ನು ಬದುಕಿಸಿಕೊಡಬೇಕೆಂದು ದಯಾಮಯನಾದ ಶಿವನನ್ನು ಬೇಡಿದಳು. ಶಂಕರನು ಶ್ರೀಹರಿಯ ಅನುಮತಿಯಿಂದ ಭಸ್ಮೀಭೂತನಾಗಿದ್ದ ಮನ್ಮಥನನ್ನು ಬದುಕಿಸಿದನು. ಅನಂತರ ಅಲ್ಲಿ ನೆರೆದಿದ್ದ ಸ್ತ್ರೀಯರೆಲ್ಲರೂ ಶಂಕರನನ್ನು ಕುರಿತು ಬಹು ವಿನೋದವಾಗಿ ಮಾತನಾಡಿದರು. ಮರುದಿನ ಪ್ರಾತಃಕಾಲ ಶುಭಮುಹೂರ್ತದಲ್ಲಿ ಶಂಕರನು ಪಾರ್ವತಿಯನ್ನು ಕರೆದುಕೊಂಡು ಮಹೇಂದ್ರಪರ್ವತಕ್ಕೆ ಹೊರಟನು. ಆಗ ಹಿಮವಂತ ಮತ್ತು ಮೇನಾದೇವಿಯು ಪುತ್ರಿಯ ವಿರಹದುಃಖದಿಂದ ಬಹುವಾಗಿ ವ್ಯಥೆಗೊಂಡರು. ಶಂಕರನು ಅವರೆಲ್ಲರನ್ನೂ ಸಮಾಧಾನಗೊಳಿಸಿ ಪಾರ್ವತಿಯೊಡನೆ ತನ್ನ ಮಂದಿರಕ್ಕೆ ಬಂದು ಮಂಗಳಕಾರ್ಯಗಳನ್ನು ಮಾಡಿಸಿದನು. ಪುತ್ರೀ ವಿರಹವನ್ನು ತಡೆಯಲಾರದ ಹಿಮವಂತನು ಮೈನಾಕನನ್ನು ಕಳುಹಿಸಿ ಶಂಕರಪಾರ್ವತಿಯರನ್ನು ಪುನಃ ತನ್ನ ಮಂದಿರಕ್ಕೆ ಕರೆಸಿಕೊಂಡು ಅವರಿಗೆ ಬಹುವಾಗಿ ಸತ್ಕರಿಸಿ ತನ್ನ ಮನೆಯಲ್ಲಿಯೇ ಕೆಲವುಕಾಲ ಇಟ್ಟುಕೊಂಡಿದ್ದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಷಟ್ ಚತ್ವಾರಿಂಶೋಽಧ್ಯಾಯಃ ||

|| ರಾಧಿಕೋವಾಚ ||

ಸುಚಿರಂ ಚ ಮೃತಂ ಕಾಮಂ ಶಂಕರೇಣ ಚ ಜೀವಿತಂ |
ರತಿಃ ಪುನಃ ಪ್ರಿಯಂ ಪ್ರಾಪ್ಯ ಕಿಂ ಚಕಾರ ಮುದಾನ್ವಿತಾ || ೧ ||

ಸ್ತ್ರೀಣಾಂ ಸ್ವಸ್ವಾಮಿವಿಚ್ಛೇದೋ ಮರಣಾದತಿದುಷ್ಕರಃ |
ಪುನಃ ಸಂಮೇಲನಂ ಭರ್ತುಃ ಸುಖಂ ಪರಮದುರ್ಲಭಂ || ೨ ||

ಶಿವಃ ಸತೀಂ ತಾಂ ಸಂಪ್ರಾಪ್ಯ ಸಂಗೇ ಮಂಗಲಕರ್ಮಣಿ |
ಚಿರಂ ಪ್ರನಷ್ಟವಿರಹಃ ಕಿಂ ಚಕಾರ ಮುದಾನ್ವಿತಃ || ೩ ||

ನಲವತ್ತಾರನೆಯ ಅಧ್ಯಾಯವು.

೧. ರಾಧಿಕೆಯು :—ಬಹಳಕಾಲದ ಹಿಂದೆ ಮೃತನಾದ ಕಾಮನನ್ನು ಈಶ್ವರನು ಬದುಕಿಸಿದನಂತರ ರತಿಯು ತನ್ನ ಪತಿಯನ್ನು ಪಡೆದು ಏನುಮಾಡಿದಳು?

೨. ಸ್ತ್ರೀಯರಿಗೆ ತಮ್ಮ ಪತಿಯ ಅಗಲುವಿಕೆಯುಂಟಾದರೆ ಅದು ಮರಣಕ್ಕಿಂತಲೂ ಹೆಚ್ಚು ದುಃಖವನ್ನುಂಟುಮಾಡತಕ್ಕದ್ದಾಗಿರುತ್ತೆ. ಮತ್ತೆ ಪತಿಯೊಡನೆ ಸಮಾಗಮವೆಂಬ ಸೌಖ್ಯವು ಅತ್ಯಂತ ದುರ್ಲಭವು.

೩. ಈಶ್ವರನು ಆ ಸತೀದೇವಿಯನ್ನು ಪಡೆದು ಮಂಗಳಸಮಾರಂಭವು ಮುಗಿದನಂತರ ಬಹುಕಾಲದ ಮೇಲೆ ವಿರಹದುಃಖವನ್ನು ಕಳೆದುಕೊಂಡು ಸಂತೋಷದಿಂದ ಕೂಡಿದವನಾಗಿ ಏನನ್ನು ಮಾಡಿದನು ?

ಕಲತ್ರವಿರಹಃ ಪುಂಸಾಂ ಸರ್ವಶೋಕಾತ್ಸುದುಷ್ಕರಃ ।
ಪುನಃ ಸಂಮಿಲನಂ ತಸ್ಯಾಃ ಪ್ರಾಣದಾನಕರಂ ಸುಖಂ ॥ ೪ ॥

ರತಿಃ ಪುಂಸೋ ವಿರಹಿಣೀ ಶಿವಃ ಸ್ತ್ರೀವಿರಹೀ ಚಿರಂ ।
ದ್ವಯೋರ್ದ್ವಯೋಶ್ಚ ಸಂಪ್ರಾಪ್ತೌ ಕಿಂ ಬಭೂವ ದ್ವಯೋಃ ಸುಖಂ ॥ ೫ ॥

ತದೇವಂ ಶ್ರೋತುಮಿಚ್ಛಾಮಿ ಪರಂ ಕೌತೂಹಲಂ ಮಮ ।
ಕೃಪಯಾ ವಿದುಷಾಂ ಶ್ರೇಷ್ಠ ಸವ್ಯಾಸಂ ಕಥಯ ಪ್ರಭೋ ॥ ೬ ॥

ಮೇಲನಂ ಶಕ್ತಿಶಿವಯೋಃ ರತಿಮನ್ಮಥಯೋಸ್ತಥಾ ।
ಶೋಕಾಪಹಂ ಶ್ರುತವತಾಂ ಸರ್ವಮಂಗಲಕಾರಣಂ ॥ ೭ ॥

॥ ನಾರಾಯಣ ಉವಾಚ ॥

ಇತ್ಯುಕ್ತ್ವಾ ರಾಧಿಕಾದೇವಿ ಸಸ್ಮಿತಾ ವಿರರಾಮ ಹ ।
ಕೃಷ್ಣಸ್ತದ್ವಚನಂ ಶ್ರುತ್ವಾ ಸಸ್ಮಿತಸ್ತಾಮುವಾಚ ಹ ॥ ೮ ॥

---

೪. ಪುರುಷರಿಗೆ ಪತ್ನಿಯವಿರಹದಿಂದುಂಟಾಗುವ ದುಃಖವು ಇತರ ಎಲ್ಲ ದುಃಖಗಳಿಗಿಂತಲೂ ಕಷ್ಟವಾದುದು. ಮತ್ತೆ ಆ ಪತ್ನಿಯ ಸಮಾಗಮವಾದರೆ ಪ್ರಾಣದಾನ ಮಾಡುವುದಕ್ಕಿಂತಲೂ ಹೆಚ್ಚು ಸಂತೋಷವನ್ನುಂಟುಮಾಡ ತಕ್ಕುದಾಗಿರುತ್ತೆ.

೫. ರತಿಯು ಮನ್ಮಥನ ಅಗಲಿಕೆಯಿಂದ ಬಳಲಿದಳು. ಶಿವನು ಸ್ತ್ರೀ ವಿರಹದಿಂದ ಸಂತಪ್ತನಾದವನು. ಈರ್ವರೂ ಈರ್ವರನ್ನು ಪಡೆದನಂತರ ಆ ರತಿ ಮತ್ತು ಶಿವ ಇವರುಗಳಿಗೆ ಯಾವ ವಿಧವಾದ ಸುಖವುಂಟಾಯಿತು ?

೬. ಆ ಕಥೆಯನ್ನು ಕೇಳಲು ಕುತೂಹಲದಿಂದ ಕೂಡಿದವಳಾಗಿರುತ್ತೇನೆ. ಎಲೈ ಜ್ಞಾನಿಗಳಲ್ಲಿ ಶ್ರೇಷ್ಠನೇ, ದಯೆಯಿಂದ ವಿಸ್ತಾರವಾಗಿ ಹೇಳುವವನಾಗು.

೭. ರತಿ ಮನ್ಮಥರ ಮತ್ತು ಶಿವ ಪಾರ್ವತಿಯರ ಪುನಃಸಮಾಗಮದ ಕಥೆಯು ಕೇಳುವವರ ಸಕಲದುಃಖಗಳನ್ನು ನಾಶಮಾಡುವುದಲ್ಲದೆ ಸಕಲವಿಧವಾದ ಮಂಗಳ ಗಳನ್ನುಂಟುಮಾಡತಕ್ಕದ್ದಾಗಿರುತ್ತೆ.

೮. ನಾರಾಯಣನು :—ರಾಧಾದೇವಿಯು ಈ ಪ್ರಕಾರ ಹೇಳಿ ಮಂದಹಾಸ ವನ್ನು ಬೀರುತ್ತ ಸುಮ್ಮನಾದಳು; ಕೃಷ್ಣನು ಆ ರಾಧೆಯ ಮಾತನ್ನು ಕೇಳಿ ನಗುತ್ತ ಅವಳನ್ನು ಕುರಿತು ಈ ಪ್ರಕಾರ ಹೇಳತೊಡಗಿದನು.

॥ ಶ್ರೀಕೃಷ್ಣ ಉವಾಚ ॥

ಮೃತಂ ಕಾಮಂ ಪುನಃ ಪ್ರಾಪ್ಯ ಕಾಮಾರ್ತಾ ಕಾಮಕಾಮಿನೀ ।
ಸ್ವಾಲಯಂ ತಂ ಸಮಾನೀಯ ಹರ್ಷೋದ್ವಾಹಗೃಹಾದಹೋ ॥ ೯ ॥

ಭರ್ತುಃ ಸುವೇಷಂ ವಿವಿಧಂ ಸ್ವಾತ್ಮನಃ ಸ್ವಾಲಿಭಿರ್ಮುದಾ ।
ಕಾರಯಾಮಾಸ ಯತ್ನೇನ ಸಾರತೀ ರಮಣೋತ್ಸುಕಾ ॥ ೧೦ ॥

ಜ್ಞಾತ್ವಾ ಕಾಮಸ್ತು ತದ್ಭಾವಂ ಕಾಮಶಾಸ್ತ್ರವಿಧಾಯಕಃ ।
ರತ್ನಯಾನಂ ಸಮಾರುಹ್ಯ ಜಗಾಮ ಸ್ವಾಲಯಾದ್ವನಂ ॥ ೧೧ ॥

ಶೈಲೇಽತಿಶೈಲೇಽತಿರಮ್ಯೇ ಚ ನದ್ಯಾಂ ನದ್ಯಾಂ ನದೇ ನದೇ ।
ದ್ವೀಪೇ ದ್ವೀಪೇ ಸಿಂಧುತಟೇ ಪುಷ್ಪೋದ್ಯಾನೇ ಮನೋಹರೇ ॥ ೧೨ ॥

ಕಾಂಚನೇ ಭೂಮಿನಿಕರೇ ವಟಮೂಲೇಽತಿನಿರ್ಜನೇ ।
ನದೀಪುಲಿನಭೂಮ್ಯಾಂ ಚ ಪುಷ್ಪಿತೇ ಪುಷ್ಪಕಾನನೇ ॥ ೧೩ ॥

೯–೧೦. ಶ್ರೀಕೃಷ್ಣನು;—ಆ ಪತಿವ್ರತೆಯಾದ ಕಾಮನ ಪತ್ನಿಯು ಮೃತನಾದ ಕಾಮನನ್ನು ಮತ್ತೆ ಪಡೆದವಳಾಗಿ ಕಾಮಪೀಡಿತಳಾಗಿ ಅವನನ್ನು ತನ್ನ ಮನೆಗೆ ತರೆದುಕೊಂಡು ಹೋಗಿ ಗುಟ್ಟಾಗಿ ಅವನೊಡನೆ ಕ್ರೀಡಿಸಲು ಉತ್ಸಾಹವುಳ್ಳವಳಾಗಿ ತನ್ನ ಸಖಿಯರಿಂದ ಅವನಿಗೂ ತನಗೂ ನಾನಾವಿಧವಾದ ಅಲಂಕಾರಗಳನ್ನು ಅತ್ಯಂತ ಸಂತೋಷದಿಂದ ಮಾಡಿಸಿದಳು.

೧೧. ಕಾಮಶಾಸ್ತ್ರವನ್ನು ನಿರ್ಮಿಸಿರುವ ಆ ಮನ್ಮಥನು ಅವಳ ಅಭಿಪ್ರಾಯವನ್ನು ತಿಳಿದವನಾಗಿ ರತ್ನಮಯವಾದ ವಿಮಾನವನ್ನೇರಿದವನಾಗಿ ತನ್ನ ಮನೆಯನ್ನು ಬಿಟ್ಟು ವನಕ್ಕೆ ಹೋದನು.

೧೨–೧೩. ನಾನಾವಿಧವಾದ ಪರ್ವತಗಳಲ್ಲಿಯೂ, ಮನೋಹರಗಳಾದ ನದಿಗಳ ದಡಗಳಲ್ಲಿಯೂ, ಪ್ರತಿ ದ್ವೀಪಗಳಲ್ಲಿಯೂ, ಸಮುದ್ರದ ದಡದಲ್ಲಿಯೂ, ಹೂಗಳಿಂದ ಕಂಗೊಳಿಸುವ ಉದ್ಯಾನವನಗಳಲ್ಲಿಯೂ, ಮನೋಹರವಾದ ಹಸ್ತದ ಭೂಮಿಗಳಲ್ಲಿಯೂ, ಜನರಹಿತವಾದ ಆಲದ ಮರಗಳ ಬುಡದಲ್ಲಿಯೂ, ನದಿಯ ಮರಳುಭೂಮಿಗಳಲ್ಲಿಯೂ, ಹೂದೋಟಗಳಲ್ಲಿಯೂ, ದುಂಬಿಗಳ ಶಬ್ದದಿಂದಲೂ

ಭ್ರಮರ ಧ್ವನಿಸಂಯುಕ್ತೇ ಪುಂಸ್ಕೋಕಿಲರುತೆಶ್ರುತೇ ।
ಸುಗಂಧಿವಾಯುನಾಕೀರ್ಣೇ ದಧತೀ ಜಲಸೀಕರಂ ॥ ೧೪ ॥

ಚಿತ್ತೇಷು ಚೇತನಾನಾಂ ಚ ಹರಣಂ ಯೋಷಿತಾಮಹೋ ।
ಕಲಾಮಾನಪ್ರಕಾರೇಣ ಶೃಂಗಾರಂ ಚ ಚಕಾರ ಸಾ ॥ ೧೫ ॥

ಪೂರ್ವಮಬ್ದಶತಂ ದಿವ್ಯಂ ಸ ರೇಮೇ ವಾಮಯಾ ಸಹ ।
ದಿವಾನಿಶಂ ನ ಬುಬುಧೇ ಸಂಸಕ್ತಃ ಸತತಂ ಮುದಾ ॥ ೧೬ ॥

ತಸ್ಥತುಸ್ತೌ ಚ ತತ್ರೈವ ಸಂಸಕ್ತೌ ಸತತಂ ಮುದಾ ।
ಸುರತೌ ಚ ನ ವಿರತೌ ರತಿಶಾಸ್ತ್ರವಿಶಾರದೌ ॥ ೧೭ ॥

ಪತಿವಿಚ್ಛೇದ ಸಂತಾಪಂ ವಿಜಹೌ ಸಾ ರತಿರ್ಮುದಾ ।
ಪ್ರಾಪ್ಯ ರತ್ನಮಪಹೃತಂ ಕಃ ಕ್ಷಣಂ ತ್ಯಕ್ತುಮುತ್ಸಹೇತ್ ॥ ೧೮ ॥

ಕೋಗಿಲೆಗಳ ಇಂಪಾದ ಧ್ವನಿಯಿಂದಲೂ ಮನೋಹರವಾದ ಪ್ರದೇಶಗಳಲ್ಲಿಯೂ ಸುವಾಸನೆಯನ್ನು ಬೀರುತ್ತಿರುವ ಗಾಳಿಯಿಂದಲೂ, ನೀರಿನ ತುಂತುರಿನಿಂದಲೂ ಕೂಡಿದ ಪ್ರದೇಶಗಳಲ್ಲಿಯೂ ಪ್ರಾಣಿಗಳ ಮನಸ್ಸನ್ನು ವಿಶೇಷವಾಗಿ ಸ್ತ್ರೀಯರ ಮನಸ್ಸನ್ನು ಹರಣಮಾಡುವ ಆ ಮನ್ಮಥನು ರತಿದೇವಿಯೊಡನೆ ವಿಹರಿಸಿದನು ಆ ರತಿಯೂ ಕೂಡ ಶೃಂಗಾರಭಾವವನ್ನು ಹೊಂದಿದಳು.

೧೬. ಹೀಗೆ ದೇವಮಾನದ ಒಂದುನೂರು ವರುಷಗಳು ಆ ಮನ್ಮಥನು ತನ್ನ ಕಾಂತೆಯೊಡನೆ ವಿಹರಿಸಿದನು. ಸರ್ವದಾ ಅವಳೊಡನೆ ಸಂತೋಷದಿಂದ ಸೇರಿದ ಆ ಮನ್ಮಥನು ಹಗಲು ರಾತ್ರಿಗಳು ಕಳೆದುದನ್ನು ತಿಳಿಯಲಿಲ್ಲ

೧೭. ಈ ಪ್ರಕಾರವಾಗಿ ರತಿಶಾಸ್ತ್ರದಲ್ಲಿ ನಿಪುಣರಾದ ಉತ್ತಮವಾದ ರತಿಯಲ್ಲಿ ಆಸಕ್ತರಾದ ಆ ರತಿಮನ್ಮಥರು ಯಾವಾಗಲೂ ಒಬ್ಬರನ್ನೊಬ್ಬರು ಅಗಲದೆ ಸಂತೋಷದಿಂದ ವನಗಳಲ್ಲಿ ವಿಹರಿಸುತ್ತಿದ್ದರು.

೧೮. ರತೀದೇವಿಯು ತನ್ನ ಗಂಡನ ವಿಯೋಗದಿಂದುಂಟಾಗಿದ್ದ ಸಂತಾಪವನ್ನು ಬಿಟ್ಟಳು ಕಳೆದು ಹೋದ ರತ್ನವನ್ನು ಮತ್ತೆ ಪಡೆದು ಯಾವನು ತಾನೆ ಕ್ಷಣಕಾಲವಾದರೂ ಆ ರತ್ನವನ್ನು ಬಿಟ್ಟಿರಲು ಸಮರ್ಥನಾಗುತ್ತಾನೆ?

ಇತ್ಯೇವಂ ಕಥಿತಂ ಸರ್ವಂ ರತಿಸಂತಾಪಕಾರಣಂ ।
ಶೃಂಗಾರಂ ಶಕ್ತಿಶಿವಯೋರತುಲಂ ಶೃಣು ರಾಧಿಕೇ ॥ ೧೯ ॥

ಶೃಣ್ವತಾಂ ಕರ್ಣಪೀಯೂಷಂ ಪರಮಾಶ್ಚರ್ಯವಿಾಪ್ಸಿತಂ ।
ಸರ್ವಸಂತಾಪಹರಣಂ ಸುಖದಂ ಪುಣ್ಯದಂ ಶುಭಂ ॥ ೨೦ ॥

ವಸನ್ ಶ್ವಶುರಗೇಹೇ ಸ ಪಾರ್ವತ್ಯಾ ಸಹ ಶಂಕರಃ ।
ತದನುಜ್ಞಾಂ ಸಮಾಧಾಯ ಕ್ರೀಡಾರ್ಥಂ ಪ್ರಯಯೌ ವನಂ ॥ ೨೧ ॥

ರತ್ನಸ್ಯಂದನಮಾರುಹ್ಯ ರತ್ನಸಾರಪರಿಚ್ಛದಂ ।
ರತ್ನಸಾರೇಣ ಖಚಿತಂ ರಚಿತಂ ವಿಶ್ವಕರ್ಮಣಾ ॥ ೨೨ ॥

ಶತಶೃಂಗೇ ಸುವಸನೇ ಮಲಯೇ ಗಂಧಮಾದನೇ ।
ನಂದನೇ ಪುಷ್ಪಭದ್ರೇ ಚ ಪಾರಿಭದ್ರೇ ಚ ಭದ್ರಕೇ ॥ ೨೩ ॥

---

೧೯. ಎಲೈ ರಾಧೆಯೇ, ಈ ಪ್ರಕಾರವಾಗಿ ರತೀದೇವಿಯ ಸಂತಾಪ ಪರಿಹಾರವನ್ನು ಸಮಗ್ರವಾಗಿ ಹೇಳಿರುವೆನು. ಈಗ ಶಿವಪಾರ್ವತಿಯರ ಎಣೆಯಿಲ್ಲದ ಶೃಂಗಾರ ಕಥೆಯನ್ನು ಕೇಳು.

೨೦. ಈ ಕಥೆಯು ಕೇಳುವವರ ಕಿವಿಗೆ ಅಮೃತದಂತಿರುವುದಲ್ಲದೆ ಅತ್ಯಂತ ಆಶ್ಚರ್ಯಕರವಾಗಿಯೂ, ಸಕಲರ ಸಂತಾಪವನ್ನು ಹೋಗಲಾಡಿಸುವುದಾಗಿಯೂ ಸುಖವನ್ನೂ, ಪುಣ್ಯವನ್ನೂ ಉಂಟುಮಾಡುವುದಾಗಿಯೂ, ಮಂಗಳವನ್ನುಂಟು ಮಾಡುವುದಾಗಿಯೂ ಇರುವುದು.

೨೧-೨೨. ಮಾವನ ಮನೆಯಲ್ಲಿ ಪಾರ್ವತಿಯೊಡನೆ ವಾಸಮಾಡುತ್ತಿದ್ದ ಶಂಕರನು ಹಿಮವಂತನ ಅಪ್ಪಣೆಯನ್ನು ಪಡೆದವನಾಗಿ ಪಾರ್ವತಿಯೊಡನೆ ಕ್ರೀಡಿಸಲು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ದಿವ್ಯರತ್ನ ಮತ್ತು ಶ್ರೇಷ್ಠ ಮಣಿಗಳಿಂದ ಮಾಡಲ್ಪಟ್ಟು ಉತ್ತಮರತ್ನಗಳಿಂದ ಅಲಂಕರಿಸಲ್ಪಟ್ಟ ಶ್ರೇಷ್ಠವಾದ ರಥವನ್ನು ಹತ್ತಿಕೊಂಡವನಾಗಿ ಆನಂದದಿಂದ ವನಕ್ಕೆ ತೆರಳಿದನು.

೨೩-೨೬. ಶತಶೃಂಗಪರ್ವತದಲ್ಲಿಯೂ, ಸುವಸನದಲ್ಲಿಯೂ, ಮಲಯ ಪರ್ವತದಲ್ಲಿಯೂ, ಗಂಧಮಾಧನ ಪರ್ವತದಲ್ಲಿಯೂ, ನಂದನವನದಲ್ಲಿಯೂ, ಪುಷ್ಪಭದ್ರಾನದಿಯ ತೀರದಲ್ಲಿಯೂ, ಪಾರಿಭದ್ರವೆಂಬ ವನದಲ್ಲಿಯೂ, ಭದ್ರಕವನ

ಪುಲಿಂದೇ ಚ ಕಲಿಂದೇ ಚ ಪುಂಡ್ರೇ ಪಿಂಡಾರಕೇಽಂಧಕೇ ।
ವನೇ ವನೇಽತಿರಮ್ಯೇ ಚ ಸಾಗರಾಣಾಂ ತಟೇ ತಟೇ ॥ ೨೪ ॥

ನಿಕಟೇಽಸ್ತಗಿರೇಃ ಪಾರ್ಶ್ವವಟಮೂಲೇ ಮನೋಹರೇ ।
ಚಕಾರ ಕರುಣಾಂ ಯತ್ರ ಪರಿತ್ಯಜ್ಯ ಸತೀ ಶಿವಂ ॥ ೨೫ ॥

ನಾನಾಸ್ಥಾನೇಷು ರಹಸಿ ಪಶುಪಕ್ಷಿವಿವರ್ಜಿತೇ ।
ಯಥಾಮನೋರಥಂ ಗಾಮೀ ಸ ರೇಮೇ ವಾಮಯಾ ಸಹ ॥ ೨೬ ॥

ಯತ್ರ ಯತ್ರ ಶಿವಂ ನೀತ್ವಾ ಬಭ್ರಾಮ ಧರಣೀತಲಂ ।
ತತ್ಸರ್ವಂ ದರ್ಶಯಾಮಾಸ ಸತೀಂ ಶಂಭುರ್ಮುದಾನ್ವಿತಃ ॥ ೨೭ ॥

ಕೃತ್ವಾ ವಿಹಾರಂ ಸುಚಿರಂ ನ ಪೂರ್ಣಂ ಮಾನಸಂ ತಯೋಃ ।
ಮಹಾಶೃಂಗಾರಮಾರೇಭೇ ಸಹಸ್ರಾಬ್ದಂ ಜಗತ್ಪಿತಾ ॥ ೨೮ ॥

ದಲ್ಲಿಯೂ ಪುಲಿಂದ ಪ್ರದೇಶದಲ್ಲಿಯೂ ಕಲಿಂದ ಸ್ಥಳದಲ್ಲಿಯೂ ಪುಂಡ್ರವನದಲ್ಲಿಯೂ ಪಿಂಡಾರಕ ವನದಲ್ಲಿಯೂ ಅಂಧಕಾರಣ್ಯದಲ್ಲಿಯೂ ಅತಿಮನೋಹರಗಳಾದ ಪ್ರತಿ ವನಗಳಲ್ಲಿಯೂ ಸಮುದ್ರಗಳ ತೀರಗಳಲ್ಲಿಯೂ ಅಸ್ತಪವ ತದ ಸಮೀಪದಲ್ಲಿಯೂ ಮನೋಹರವಾದ ಆಲದಮರದ ಬುಡದಲ್ಲಿಯೂ ಶಿವನನ್ನು ಬಿಟ್ಟು ಪಾರ್ವತಿಯು ಎಲ್ಲೆಲ್ಲಿ ಗೋಳಾಡಿದ್ದಳೋ ಆ ಸ್ಥಳಗಳಲ್ಲಿಯೂ ಪಶುಪಕ್ಷಿಗಳ ಸಂಚಾರವಿಲ್ಲದ ನಾನಾ ಸ್ಥಳಗಳಲ್ಲಿಯೂ ಸಹ ಸ್ವೇಚ್ಛೆಯಿಂದ ಸಂಚರಿಸುವ ಆ ಶಂಕರನು ತನ್ನ ಕಾಂತೆಯೊಡನೆ ಕ್ರೀಡಿಸಿದನು.

೨೭. ಈಶ್ವರನು ತಾನು ಹಿಂದೆ ಸತಿಯ ಶವವನ್ನು ಹೊತ್ತುಕೊಂಡು ಯಾವ ಯಾವ ಸ್ಥಳಗಳಲ್ಲಿ ಅಲೆದಾಡಿದ್ದನೋ ಆ ಸ್ಥಳಗಳನ್ನೆಲ್ಲಾ ಪಾರ್ವತಿಗೆ ತೋರಿಸಿದನು.

೨೮. ಬಹಳಕಾಲ ಪರ್ಯಂತರವಾಗಿ ವಿಹರಿಸಿದರೂ ಕೂಡ ಆ ದಂಪತಿಗಳ ಮನಸ್ಸು ತೃಪ್ತಿಹೊಂದಲಿಲ್ಲ. ಆಗ ಜಗತ್ತಿಗೆ ತಂದೆಯಾದ ಆ ಶಂಕರನು ಸಾವಿರ ವರುಷಗಳವರೆಗೆ ಸಂಭೋಗರೂಪವಾದ ಶೃಂಗಾರರಸವನ್ನಾರಂಭಿಸಿದನು.

ಮಾಯಾತೀತೋಽತಿಮಾಯೇಶೋ ಮಾಯಾಸಕ್ತಃ ಸ್ವಮಾಯಯಾ ।
ನ ಕಾಲಂ ಬುಬುಧೇ ಯೋಗೀ ಸುಖೇನ ಕಾಲಕಾರಕಃ　　॥ ೨೯ ॥

ಶಕ್ತಿಶಕ್ತಿಮತೋಸ್ತತ್ರ ನ ಬಭೂವ ಪರಿಶ್ರಮಃ ।
ಜಹತೋಃ ಸರ್ವಸಂತಾಪಮನ್ಯೋನ್ಯ ವಿರಹೋದ್ಭವಂ　　॥ ೩೦ ॥

ಸುಖಸಂಸಕ್ತಮನಸೋಃ ಪುಲಕಾಂಚಿತಗಾತ್ರಯೋಃ ।
ಕಾಮಬಾಣಮೂರ್ಛಿತಯೋಃ ಪುಷ್ಪಶಯ್ಯಾಂಶಯಾನಯೋಃ　　॥ ೩೧ ॥

ನಗ್ನಯೋಃ ಸುಖಸಂಭೋಗದ್ರತಿಶಾಸ್ತ್ರವಿಧಿಜ್ಞಯೋಃ ।
ನಖದಂತಪ್ರಹಾರೈಶ್ಚ ಕ್ಷತವಿಕ್ಷತದೇಹಯೋಃ　　॥ ೩೨ ॥

ಚಂದನಾಗುರುಕಸ್ತೂರೀ ಸಿಂದೂರಬಿಂದುಲಿಪ್ತಯೋಃ ।
ನಿಬದ್ಧಕೇಶಕಬರೀ ಶ್ಲಥಯೋಶ್ಛಿನ್ನಮಾಲ್ಯಯೋಃ　　॥ ೩೩ ॥

ವಸನಾನಾಂ ನೂಪುರಾಣಾಂ ಕಂಕಣಾನಾಂ ಚ ಸುಂದರಿ ।
ವಲಯಾನಾಂ ಕುಂಡಲಾನಾಂ ಶಬ್ದೈಃ ಕ್ರೀಡಾಂ ಪ್ರಕುರ್ವತೋಃ ॥ ೩೪ ॥

---

೨೯. ಮಾಯೆಯಿಂದ ಬಿಡಲ್ಪಟ್ಟವನೂ, ಮಾಯೆಗೆ ಅಧಿಪತಿಯೂ, ಯೋಗಿಯೂ ಆದ ಶಂಕರನು ತನ್ನ ಮಾಯೆಯಿಂದ ಮಾಯೆಗೆ ಸಿಲುಕಿದವನಾಗಿ ಆ ಸುಖದಿಂದ ಕಳೆದುಹೋದ ಕಾಲವನ್ನು ತಿಳಿಯದವನಾದನು.

೩೦. ಒಬ್ಬರನ್ನೊಬ್ಬರು ಅಗಲಿದುದರಿಂದಾದ ಸಮಸ್ತ ಸಂತಾಪವನ್ನು ಹೋಗಲಾಡಿಸಿಕೊಳ್ಳಲು ಬಯಸಿದ ಶಿವ ಶಕ್ತಿಯರಿಗೆ ಆ ಕ್ರೀಡೆಯಿಂದ ಸ್ವಲ್ಪವೂ ಆಯಾಸವಾಗಲಿಲ್ಲ.

೩೧–೩೪. ಸುಖದಲ್ಲಿ ಆಸಕ್ತವಾದ ಮನಸ್ಸುಳ್ಳ, ರೋಮಾಂಚಗೊಂಡ ಶರೀರವುಳ್ಳ, ಮನ್ಮಥನ ಬಾಣದಿಂದ ಮೂರ್ಛೆಗೊಂಡು ಹೂವಿನ ಹಾಸಿಗೆಯಲ್ಲಿ ಮಲಗಿರುವ, ಸುಖಸಂಭೋಗದಿಂದ ನಗ್ನರಾಗಿರುವ, ಮನ್ಮಥ ಶಾಸ್ತ್ರನಿಯಮಗಳನ್ನು ತಿಳಿದವರಾದ, ನಖ ಮತ್ತು ದಂತ ಪ್ರಹಾರಗಳಿಂದ ಗಾಯಗೊಂಡ ಶರೀರವುಳ್ಳ, ಸುಗಂಧ ಮಿಶ್ರಿತವಾದ ಚಂದ್ರದಿಂದ ಹಣೆಗೆ ತಿಲಕವನ್ನಿಟ್ಟಿರುವ, ಆ ದಂಪತಿಗಳು ಕಟ್ಟಿದ ಕೇಶರಾಶಿಯು ಬಿಚ್ಚಿಹೋಗಿ ಹಾಕಿಕೊಂಡಿರುವ ಹೂಮಾಲೆಯು ಹರಿದು ಹೋಗಿರಲು ವಸ್ತ್ರ ಕಾಲುಬಳೆ ಕೈಬಳೆ ಮತ್ತು ಕಿವಿಯ ಕುಂಡಲ ಇವುಗಳು ಧ್ವನಿಗೈಯುತ್ತಿರಲು ಆನಂದದಿಂದ ಕ್ರೀಡಿಸುತ್ತಿದ್ದರು.

ಪುಷ್ಪತಲ್ಪಂ ದಲಿತಯೋಃರ್ಹಾಷ್ಪೋತ್ಕರ್ಷಂ ಚ ಬಿಭ್ರತೋಃ ।
ತೇಜಸಾ ಸಮಯೋಃ ಶಶ್ವತ್ಕ್ರೀಡಯಾ ಕೌತುಕೇನ ಚ ॥ ೩೫ ॥

ಭಾರೇಣ ವಿಶ್ವಂಭರಯೋರ್ಭಾರಾಕ್ರಾಂತಾ ವಸುಂಧರಾ ।
ಸಾ ವಿದೀರ್ಣಾ ಚಕಂಪೇ ಚ ಸಶೈಲವನಸಾಗರಾ ॥ ೩೬ ॥

ತಯೋರ್ಭರಭರಾಕ್ರಾಂತ ಧರಾಯಾಶ್ಚ ಭರೇಣ ಚ ।
ಭಾರಾಕ್ರಾಂತಶ್ಚ ಶೇಷಶ್ಚ ತದ್ಭರಾತೋಽಪಿ ಕಚ್ಛಪಃ ॥ ೩೭ ॥

ಕಚ್ಛಪಸ್ಯ ಭರೇಣೈವ ಸರ್ವಾಧಾರಾಃ ಸಮೀರಣಾಃ ।
ಮಹಾವಿಕ್ಲವಯುಕ್ತಾಶ್ಚ ಸರ್ವಪ್ರಾಣಾಶ್ಚ ಸ್ತಂಭಿತಾಃ ॥ ೩೮ ॥

ಸ್ತಂಭಿತೇಷು ಸಮೀರೇಷು ತ್ರಿಲೋಕಾ ಭಯವಿಹ್ವಲಾಃ ।
ಬ್ರಹ್ಮಾದಯಃ ಸುರಾಸ್ಸರ್ವೇ ವೈಕುಂಠಂ ಶರಣಂ ಯಯುಃ ॥ ೩೯ ॥

೩೫–೩೬. ಹೂವಿನ ಹಾಸಿಗೆಯಲ್ಲಿ ಹೊರಳುತ್ತ ಕ್ರೀಡೆಯಿಂದುಂಟಾದ ಆನಂದದಿಂದ ಬಾರಿಬಾರಿಗೂ ಆನಂದಬಾಷ್ಪವನ್ನು ಸುರಿಸುತ್ತಿರುವ ಸಮಾನವಾದ ಕಾಂತಿಯುಳ್ಳ ಜಗತ್ತನ್ನು ಧರಿಸಿದವರಾದ ಆ ದಂಪತಿಗಳ ಭಾರದಿಂದ ವ್ಯಾಕುಲಗೊಂಡ ಭೂಮಿಯು ಬೆಟ್ಟ, ಕಾಡು, ಸಮುದ್ರಸಹಿತವಾಗಿ ನಡುಗಿತು.

೩೭. ಆ ದಂಪತಿಗಳ ಭಾರದಿಂದ ಕೂಡಿದ ಭೂಮಿಯ ಭಾರದಿಂದ ಆದಿಶೇಷನು ನಡುಗಿದನು. ಆದಿಶೇಷನ ಭಾರದಿಂದ ಆದಿಕೂರ್ಮನು ನಡುಗಿದನು.

೩೮. ಕೂರ್ಮನ ಭಾರದಿಂದ ಸರ್ವರಿಗೂ ಆಧಾರವಾದ ಗಾಳಿಗಳು ವ್ಯಾಕುಲಗೊಂಡುವು. ಇದರಿಂದ ಸಕಲ ವಾಯುಗಳೂ ಸ್ತಬ್ಧವಾದವು.

೩೯. ಗಾಳಿಯ ಸಂಚಾರವಿಲ್ಲದಿರಲು ಮೂರು ಲೋಕಗಳೂ ಭಯದಿಂದ ಕಂಗೆಟ್ಟುವು. ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ವಿಷ್ಣುವನ್ನು ಮೊರೆ ಹೊಕ್ಕರು

ಸರ್ವಂ ನಿವೇದನಂ ಚಕ್ರೇನಾರಾಯಣಪದಾಂಬುಜೇ ।
ನಾರಾಯಣಶ್ಚ ಭಗವಾನುವಾಚ ಕಮಲೋದ್ಭವಂ ॥ ೪೦ ॥

॥ ನಾರಾಯಣ ಉವಾಚ ॥

ಶೃಂಗಾರಭಂಗಸಮಯೋ ಭವಿತಾ ನಾಧುನಾ ವಿಧೇ ।
ಕಾಲಪ್ರಯುಕ್ತಂ ಕಾರ್ಯಂ ಚ ಸಿದ್ಧಂ ತತ್ಸಮಯೋಚಿತಂ ॥ ೪೧ ॥

ಪೂರ್ಣೇ ವರ್ಷಸಹಸ್ರೇ ಚ ಸ್ವೇಚ್ಛಯಾ ವಿರಮಿಷ್ಯತಿ ।
ಶಂಭೋಃ ಸಂಭೋಗಮಿಷ್ಟಂ ಚ ಕೋ ಭೇದಂ ಕರ್ತುಮೀಶ್ವರಃ ॥ ೪೨ ॥

ಸ್ತ್ರೀಪುಂಸೋ ರತಿವಿಚ್ಛೇದಮುಪಾಯೇನ ಕರೋತಿ ಯಃ ।
ತಸ್ಯ ಸ್ತ್ರೀಪುಂಸಯೋರ್ಭೇದೋ ಭವೇಜ್ಜನ್ಮನಿ ಜನ್ಮನಿ ॥ ೪೩ ॥

ಯಾತ್ಯಂತೇ ಕಾಲಸೂತ್ರೇ ಚ ವರ್ಷಲಕ್ಷಂ ಸ ಪಾತಕೀ ।
ಭ್ರಷ್ಟಜ್ಞಾನೋ ನಷ್ಟಕೀರ್ತಿರಲಕ್ಷ್ಮೀಕೋ ಭವೇದಿಹ ॥ ೪೪ ॥

---

೪೦. ನಾರಾಯಣನೆದುರಿನಲ್ಲಿ ಎಲ್ಲವನ್ನೂ ವಿವರವಾಗಿ ವಿಜ್ಞಾಪಿಸಿಕೊಂಡರು ಅದನ್ನು ಕೇಳಿ ಪೂಜ್ಯನಾದ ನಾರಾಯಣನು ಬ್ರಹ್ಮನನ್ನು ಕುರಿತು ಇಂತೆಂದನು

೪೧. ಎಲೈ ಬ್ರಹ್ಮನೇ, ಶೃಂಗಾರವೆಂಬುದು ಈಗ ಮುಗಿಯತಕ್ಕುದಲ್ಲ. ಕಾಲಕ್ಕೆ ಯೋಗ್ಯವಾದ ಕಾರ್ಯವನ್ನು ಮಾಡಬೇಕು. ಅದು ಸಮಯೋಚಿತವಾಗಿ ಸಿದ್ಧಿಯಾಗುತ್ತದೆ.

೪೨. ಸಾವಿರ ವರುಷಗಳು ಕಳೆದರೂ ಕೂಡ ಶಂಕರನು ತನ್ನ ಇಷ್ಟದಂತೆ ವಿಹರಿಸುತ್ತಿರುವನು. ಆ ಪರಮೇಶ್ವರನಿಗೆ ಇಷ್ಟವಾಗಿರುವ ಸಂಭೋಗವನ್ನು ಭೇದಿಸಲು ಯಾರುತಾನೆ ಸಮರ್ಥರಾಗುತ್ತಾರೆ.

೪೩. ಯಾವನು ಉಪಾಯದಿಂದ ಸ್ತ್ರೀಪುರುಷರ ರತಿಕ್ರೀಡೆಯನ್ನು ಭಂಗಪಡಿಸುತ್ತಾನೋ ಅವನಿಗೆ ಪ್ರತಿಜನ್ಮದಲ್ಲಿಯೂ ಸ್ತ್ರೀಪುರುಷರ ಅಗಲಿಕೆಯುಂಟಾಗುತ್ತದೆ.

೪೪. ಈ ಲೋಕದಲ್ಲಿ ಅವನು ಜ್ಞಾನಹೀನನಾಗಿ ಕೀರ್ತಿಯನ್ನು ಗಳಿಸದೆ ದರಿದ್ರನಾಗಿ ಬಾಳಿ ಈ ಜನ್ಮವು ಕಳೆದನಂತರ ಮಹಾ ಪಾಪಿಯಾಗಿ ಕಾಲಸೂತ್ರವೆಂಬ ನರಕದಲ್ಲಿ ಒಂದುಲಕ್ಷ ವರುಷಗಳು ವ್ಯಥೆಯನ್ನನುಭವಿಸುವನು.

ರಂಭಾಯುಕ್ತಂ ಶಕ್ರಮಿಮಂ ಚಕಾರ ವಿರತೌ ರತೌ ।
ಮಹಾಮುನೀಂದ್ರೋ ದುರ್ವಾಸಾಸ್ತತ್ ಸ್ತ್ರೀಭೇದೋ ಬಭೂವ ಹ ॥ ೪೫ ॥

ಪುನರನ್ಯಾಂ ಸ ಸಂಪ್ರಾಪ್ಯ ನಿಷೇವ್ಯ ಶೂಲಪಾಣಿನಂ ।
ದಿವ್ಯವರ್ಷಸಹಸ್ರಂ ಚ ವಿಜಹೌ ವಿರಹಜ್ವರಂ ॥ ೪೬ ॥

ರೋಹಿಣೀಸಹಿತಂ ಚಂದ್ರಂ ಚಕಾರವಿರತಂ ರತೌ ।
ಮಹರ್ಷಿಗೌತಮಸ್ತಸ್ಯ ಸ್ತ್ರೀವಿಚ್ಛೇದೋ ಬಭೂವ ಹ ॥ ೪೭ ॥

ಪುನಃ ಶಿವಂ ಸಮಾರಾಧ್ಯ ಪ್ರಾಪ್ಯಾಹಲ್ಯಾಂ ಚ ಪುಷ್ಕರೇ ।
ದಿವ್ಯವರ್ಷಸಹಸ್ರಂ ಚ ವಿಜಹೌ ವಿರಹಜ್ವರಂ ॥ ೪೮ ॥

ಮುನಿಃ ಸ್ವಭಾರ್ಯಾಸಂಸಕ್ತೋ ದಿವಸೇ ನಿರ್ಜನೇ ವನೇ ।
ಬ್ರಹ್ಮಾಂಡಕಸುತಂ ನೀತ್ವಾ ಚಕಾರ ವಿರತಂ ರುಷಾ ॥ ೪೯ ॥

---

೪೫. ಮಹಾಮುನಿಯಾದ ದುರ್ವಾಸನು ಹಿಂದೆ ರಂಭೆಯಿಂದೊಡಗೂಡಿದ ಇಂದ್ರನನ್ನು ರತಿಕ್ರೀಡೆಯಿಂದ ಬಿಡಲ್ಪಟ್ಟವನನ್ನಾಗಿ ಮಾಡಿದನು. ಆ ಕಾರಣದಿಂದ ಅವನಿಗೆ ಪತ್ನೀವಿಯೋಗವುಂಟಾಯಿತು.

೪೬. ಆಗ ಆ ಮುನಿಯು ದೇವಮಾನದ ಸಾವಿರ ವರುಷಗಳು ಶಿವನನ್ನಾರಾಧಿಸಿ ಮತ್ತೊಬ್ಬ ಹೆಂಡತಿಯನ್ನು ಹೊಂದಿ ವಿರಹದಿಂದ ಮುಕ್ತನಾದನು.

೪೭. ಮಹರ್ಷಿಯಾದ ಗೌತಮನು ರೋಹಿಣೀಯುಕ್ತನಾದ ಚಂದ್ರನ ರತಿಕ್ರೀಡೆಗೆ ಭಂಗವನ್ನುಂಟುಮಾಡಿದನು. ಆದುದರಿಂದ ಅವನಿಗೆ ತನ್ನ ಪತ್ನಿಯ ವಿಯೋಗವುಂಟಾಯಿತು.

೪೮. ಆಗ ಗೌತಮನು ಒಂದು ಸಾವಿರ ವರ್ಷಕಾಲ ಪುಷ್ಕರಕ್ಷೇತ್ರದಲ್ಲಿ ಶಿವನನ್ನು ಪೂಜಿಸಿ ಕೊನೆಗೆ ತನ್ನ ಪತ್ನಿಯಾದ ಅಹಲ್ಯೆಯನ್ನು ಪಡೆದು ವಿರಹ ವ್ಯಥೆಯಿಂದ ಮುಕ್ತಿಹೊಂದಿದನು.

೪೯. ಓರ್ವ ಮುನಿಯು ತನ್ನ ಪತ್ನಿಯೊಡನೆ ಕ್ರೀಡಿಸುತ್ತಿರುವಾಗ ಬ್ರಹ್ಮಾಂಡಕನೆಂಬುವನು ಅವನ ಮಗನನ್ನು ನಿರ್ಜನವಾದ ಕಾಡಿಗೆ ತೆಗೆದುಕೊಂಡು ಹೋಗಿ ಕ್ರೀಡೆಗೆ ಭಂಗವನ್ನುಂಟುಮಾಡಿದನು.

ಬಭೂವ ಪುತ್ರವಿಚ್ಛೇದಸ್ತಸ್ಯ ಕಲ್ಪಾಂತರೇ ಪುನಃ ।
ಶಿವಂ ನಿಷೇವ್ಯ ಸಂಪ್ರಾಪ್ಯ ಪುತ್ರಂ ತತ್ಯಾಜ ವಿಕ್ಲಬಂ ॥ ೫೦ ॥

ಹರಿಶ್ಚಂದ್ರೋ ಹಾಲಿಕಂ ಚ ವೃಷಲ್ಯಾ ಸಹ ಸಂಯುತಂ ।
ವಾರಯಾಮಾಸ ನಿಶ್ಶೇಷ್ಟಂ ನಿರ್ಜನೇ ತತ್ಫಲಂ ಶೃಣು ॥ ೫೧ ॥

ಭ್ರಷ್ಟಂ ಶ್ರೀರಾಜ್ಯವಿತ್ತೇಭ್ಯಸ್ತಂ ಚಕಾರಾವಲೀಲಯಾ ।
ವಿಶ್ವಾಮಿತ್ರೋ ಮಹರ್ಷಿಶ್ಚ ತಾಡಯಾಮಾಸ ತಂ ಪುರಾ ॥ ೫೨ ॥

ತತಃ ಶಿವಂ ಸಮಾರಾಧ್ಯ ದಾತಾರಂ ಸರ್ವಸಂಪದಾಂ ।
ಸದ್ಯೋ ಜಗಾಮ ವೈಕುಂಠಂ ಸಗಣೋ ಮಮ ಮಂದಿರಂ ॥ ೫೩ ॥

ಅಜಾಮಿಲಂ ದ್ವಿಜಶ್ರೇಷ್ಠಂ ವೃಷಲ್ಯಾ ಸಹ ಸಂಯುತಂ ।
ನ ಭಿಯಾ ವಾರಯಾಮಾಸುಃ ಸುರಾಸ್ತಂ ಚಾಪಿ ಕೇಚನ ॥ ೫೪ ॥

---

೫೦. ಆದರಿಂದ ಅವನಿಗೆ ಒಂದು ಕಲ್ಪದವರೆಗೂ ಪುತ್ರವಿಯೋಗವುಂಟಾಯಿತು. ಮುಂದಿನ ಕಲ್ಪದಲ್ಲಿ ಈಶ್ವರನನ್ನು ಆರಾಧಿಸಿದನಂತರ ಮಗನನ್ನು ಪಡೆದು ದುಃಖವನ್ನು ಬಿಟ್ಟನು.

೫೧–೫೨. ಹರಿಶ್ಚಂದ್ರನು ವೃಷಲಿಯಿಂದೊಡಗೂಡಿದ ಹಾಲಿಕನನ್ನು ನಿರ್ಜನ ಪ್ರದೇಶದಲ್ಲಿ ತಡೆದನು. ಅದರ ಫಲವಾಗಿ ಅವನು ರಾಜ್ಯಭ್ರಷ್ಟನಾಗಿ ಧನರಹಿತನೂ, ಕಾಂತಿಹೀನನೂ ಆದನು. ಮತ್ತು ವಿಶ್ವಾಮಿತ್ರಮುನಿಯು ಅವನನ್ನು ಹೊಡೆಯುವಂತಾಯಿತು.

೫೩. ಅನಂತರ ಹರಿಶ್ಚಂದ್ರನು ಸಕಲೈಶ್ವರ್ಯಗಳನ್ನು ಕೊಡುವ ಶಿವನನ್ನು ಪೂಜೆಮಾಡಿ ತನ್ನ ಪರಿವಾರದೊಡನೆ ಶೀಘ್ರವಾಗಿ ನನ್ನ ಮನೆಯಾದ ವೈಕುಂಠವನ್ನು ಸೇರಿದನು.

೫೪. ಅಜಾಮಿಲನೆಂಬ ಬ್ರಾಹ್ಮಣನು ವೃಷಲೀ ಸಂಗತನಾಗಿರಲು ಕೆಲವರು ದೇವತೆಗಳು ಭಯವಿಲ್ಲದೆ ಅವನನ್ನು ತಡೆದರು.

ನಿಷ್ಪನ್ನೇ ಕರ್ಮಭೋಗೇ ಚ ಸ ಮದ್ಭಕ್ತೋ ಮುಮೋಚ ಹ ।
ಮಾನ್ನಾಮಸ್ಮೃತಿಮಾತ್ರೇಣ ಚಾಽಽಜಗಾಮ ಮಮಾಲಯಂ ॥ ೫೫ ॥

ಸರ್ವಂ ನಿಷೇಕಸಾಧ್ಯಂ ಚ ನಿಷೇಕೋ ಬಲವಾನ್ ವಿಧೇ ।
ನಿಷೇಕಫಲದಾತಾಹಂ ನಿಷೇಕಃ ಕೇನ ವಾರ್ಯತೇ ॥ ೫೬ ॥

ದಿವ್ಯಂ ವರ್ಷಸಹಸ್ರಂ ಚ ಶಂಭೋಃ ಸಂಭೋಗಕರ್ಮ ತತ್ ।
ನೀಷೇಕಫಲದಾತುಶ್ಚ ನಿಷೇಕಫಲಸಂಚಯಂ ॥ ೫೭ ॥

ಪೂರ್ಣೇ ವರ್ಷಸಹಸ್ರೇ ಚ ಗತ್ವಾ ತತ್ರ ಮಹೇಶ್ವರಃ ।
ಯೇನ ವೀರ್ಯಂ ಪತೇದ್ಭೂಮೌ ತತ್ಕರಿಷ್ಯತಿ ನಿಶ್ಚಿತಂ ॥ ೫೮ ॥

ತತ್ರ ವೀರ್ಯೇ ಚ ಭವಿತಾ ಸ್ಕಂದಕೋ ಭಕ್ತತಾರಕಃ ।
ಸದಾ ಭದ್ರಸ್ವರೂಪೋಽಹಂ ಭಯಂ ಕಿಂ ವಾ ಮಯಿ ಸ್ಥಿತೇ ॥ ೫೯ ॥

---

೫೫. ಆ ನನ್ನ ಭಕ್ತನಾದ ಅಜಾಮಿಳನು ಕರ್ಮಭೋಗವು ಮುಗಿದನಂತರ ನನ್ನ ನಾಮವನ್ನು ಸ್ಮರಿಸಿದ ಮಾತ್ರದಿಂದ ವೈಕುಂಠವನ್ನು ಸೇರಿದನು.

೫೬. ಎಲೈ ಬ್ರಹ್ಮನೇ, ಸಕಲವೂ ನಿಷೇಕದಿಂದ ಸಾಧ್ಯವಾದುದು, ನಿಷೇಕವು ಪ್ರಬಲವಾದುದು. ನಿಷೇಕದ ಫಲವನ್ನು ಕೊಡುವವನು ನಾನಾಗಿರುವೆನು. ಆದಕಾರಣ ನಿಷೇಕವನ್ನು ತಡೆಯಲು ಯಾವನು ಸಮರ್ಥನು?

೫೭. ದೈವಮಾನದ ಸಾವಿರ ವರುಷಗಳವರೆಗೂ ನಡೆದಿರುವ ಪರಮೇಶ್ವರನ ಸಂಭೋಗಕಾರ್ಯವೆಂದರೆ ನಿಷೇಕಗಳ ಫಲಗಳನ್ನು ಕೊಡುವವನೇ ನಿಷೇಕದ ಫಲವನ್ನು ಸಂಗ್ರಹಿಸುವುದಾಗಿರುತ್ತದೆ.

೫೮. ಎಲೈ ದೇವೇಶ್ವರನೇ, ಸಾವಿರ ವರುಷಗಳು ಕಳೆದನಂತರ ಅಲ್ಲಿಗೆ ಹೋಗಿ ಪರಮೇಶ್ವರನ ವೀರ್ಯವು ಭೂಮಿಯ ಮೇಲೆ ಬೀಳುವಂತೆ ಮಾಡಬೇಕು.

೫೯. ಆ ವೀರ್ಯದಲ್ಲಿ ಭಕ್ತರಕ್ಷಕವಾದ ಸ್ಕಂದನು ಹುಟ್ಟುವನು. ಯಾವಾಗಲೂ ಮಂಗಳರೂಪನಾದ ನಾನು ಜಾಗರೂಕನಾಗಿರಲು ನಿಮಗೆ ಯಾವ ವಿಧವಾದ ಭಯಕ್ಕೂ ಅವಕಾಶವಿಲ್ಲ.

ಅಧುನಾ ತ್ವಂ ಗೃಹಂ ಗಚ್ಛ ಭಗವನ್ ಸ್ವಗಣೈಃ ಸಹ ।
ಕರೋತು ಶಂಭುಃ ಸಂಭೋಗಂ ಪಾರ್ವತ್ಯಾ ಸಹ ನಿರ್ಜನೇ ॥ ೬೦ ॥

ಇತ್ಯುಕ್ತ್ವಾ ಕಮಲಾಕಾಂತಃ ಶೀಘ್ರಂ ಸ್ವಾಂತಃಪುರಂ ಯಯೌ ।
ಸ್ವಾಲಯಂ ಪ್ರಯಯುರ್ದೇವಾಃ ಶಿವಃ ಸ್ವಸ್ಥೋ ರತೌ ರತಃ ॥ ೬೧ ॥

॥ ನಾರಾಯಣ ಉವಾಚ ॥

ಇತ್ಯುಕ್ತ್ವಾ ರಾಧಿಕಾಂ ಕೃಷ್ಣಃ ಸಕಟಾಕ್ಷಾಂ ಚ ಸಸ್ಮಿತಾಂ ।
ಜಗಾಮ ಚಂದನವನಂ ನಿರ್ಜನೇ ಚ ತಯಾ ಸಹ ॥ ೬೨ ॥

ಅತೀವ ನಿರ್ಜನಂ ರಮ್ಯಂ ವಾಯುನಾ ಸುರಭೀಕೃತಂ ।
ಪುಷ್ಪೋದ್ಯಾನೈಃ ಸಮಾಕೀರ್ಣಂ ತತ್ರ ಕ್ರೀಡಾಂ ಚಕಾರ ಹ ॥ ೬೩ ॥

---

೬೦. ಎಲೈ ಪೂಜ್ಯನಾದ ಬ್ರಹ್ಮನೇ, ನೀನು ದೇವತೆಗಳ ಗುಂಪಿನೊಡನೆ ಮನೆಗೆ ಹೋಗು. ಪರಮೇಶ್ವರನು ಪಾರ್ವತಿಯೊಡನೆ ನಿರ್ಜನ ಪ್ರದೇಶದಲ್ಲಿ ಸಂಭೋಗವನ್ನು ಮಾಡಲಿ.

೬೧. ಹೀಗೆ ಹೇಳಿ ವಿಷ್ಣುವು ಜಾಗ್ರತೆಯಾಗಿ ತನ್ನ ಅಂತಃಪುರಕ್ಕೆ ಹೊರಟನು. ದೇವತೆಗಳೆಲ್ಲರೂ ತಮ್ಮ ತಮ್ಮ ಮನೆಗಳನ್ನು ಕುರಿತು ಹೊರಟರು. ಶಂಕರನು ನಿರಾತಂಕದಿಂದ ರತಿಕ್ರೀಡೆಯಲ್ಲಿ ಆಸಕ್ತನಾದನು.

೬೨. ನಾರಾಯಣನು:—ಕೃಷ್ಣನು ಕಡೆಗಣ್ಣಿನಿಂದ ನೋಡುತ್ತ ಮಂದಹಾಸ ವನ್ನು ಬೀರುತ್ತಿರುವ ರಾಧೆಯನ್ನು ಕುರಿತು ಈ ಪ್ರಕಾರ ಹೇಳಿ ಅವಳೊಡನೆ ಚಂದನವನಕ್ಕೆ ಹೊರಟನು.

೬೩. ಅತಿ ನಿರ್ಜನವಾದ ಮನೋಹರವಾದ ಸುಗಂಧದ ಗಾಳಿಯಿಂದ ಕೂಡಿದ ಮತ್ತು ಹೂವಿನ ಉದ್ಯಾನಗಳಿಂದ ಶೋಭಿಸುವ ಆ ವನದಲ್ಲಿ ಅವಳೊಡನೆ ಕ್ರೀಡಿಸಿದನು.

ಪುಷ್ಪತಲ್ಪಸಮಾಕೀರ್ಣೇ ಪರಪುಷ್ಟರುತಶ್ರುತೇ ।
ಭ್ರಮರಧ್ವನಿಸಂಯುಕ್ತೇ ಕಾಮಿನೀನಾಂ ಮನೋಹರೇ ॥ ೬೪ ॥

ಕೃಷ್ಣಸಂಭೋಗಮಾತ್ರೇಣ ಸುಖಸಂಮೂರ್ಛಿತಾ ಚ ಸಾ ।
ಅತೀವ ಮೂರ್ಛಿತಃ ಕೃಷ್ಣೋ ರಾಧಾಂಗಸ್ಪರ್ಶಮಾತ್ರತಃ ॥ ೬೫ ॥

ತಸ್ಥತುಸ್ತತ್ರ ಸಂಯುಕ್ತೌ ರಾಧಾರಾಸೇಶ್ವರೌ ಮುನೇ ।
ಅತೀವ ರತಿನಿಶ್ಶ್ರೇಷ್ಟೌ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೬೬ ॥

ಇತ್ಯೇವಂ ಮಂಗಲಂ ಕರ್ಮ ಯಃ ಶೃಣೋತಿ ಸಮಾಹಿತಃ ।
ಕದಾಚಿದ್ಬಂಧುವಿಚ್ಛೇದೋ ನ ಭವೇತ್ತಸ್ಯ ನಾರದ ॥ ೬೭ ॥

ಮಹಾಶೋಕಾರ್ಣವೇ ಮಗ್ನೋ ಬೇಧೇ ಪುತ್ರಕಲತ್ರಯೋಃ ।
ಮದ್ಭೃತ್ಯಾನಾಂ ಚ ಬಂಧೂನಾಂ ಮಾಸಂ ಶ್ರುತ್ವಾ ಲಭೇದ್ಧ್ರುವಂ ॥ ೬೮ ॥

೬೪–೬೫. ಹೂವಿನ ಹಾಸಿಗೆಯಿಂದ ಸುಂದರವಾದ, ಕೋಗಿಲೆಗಳ ಧ್ವನಿಯಿಂದ ಕೂಡಿದ ಆ ಸ್ಥಳದಲ್ಲಿ ಕೃಷ್ಣನ ಸಂಭೋಗದಿಂದ ರಾಧೆಯು ಆನಂದದಿಂದ ಮೂರ್ಛೆಯನ್ನು ಪಡೆದಳು. ಕೃಷ್ಣನೂ ಸಹ ರಾಧೆಯ ಅಂಗವನ್ನು ಸ್ಪರ್ಶಮಾಡಿದ ಮಾತ್ರದಿಂದಲೇ ಸಂತೋಷದಿಂದ ಮೂರ್ಛೆಹೊಂದಿದನು.

೬೬. ಎಲೈ ನಾರದಮುನಿಯೇ, ರಾಧಾಕೃಷ್ಣರಿಬ್ಬರೂ ರತಿಯಿಂದ ಶ್ರಮವನ್ನು ಹೊಂದಿದವರಾಗಿ ಇಬ್ಬರೂ ಜೊತೆಯಲ್ಲಿ ಅಲ್ಲಿಯೇ ಇದ್ದರು. ಇನ್ನೇನನ್ನು ಕೇಳಲು ಅಪೇಕ್ಷಿಸುವಿ?

೬೭. ಎಲೈ ನಾರದನೇ, ಯಾವನು ಈ ಮಂಗಳವಾದ ಕಥೆಯನ್ನು ಸಮಾಧಾನದಿಂದ ಕೇಳುತ್ತಾನೆಯೋ ಅವನಿಗೆ ಯಾವಾಗಲೂ ಬಂಧುಗಳ ವಿಯೋಗ ವುಂಟಾಗುವುದಿಲ್ಲ.

೬೮. ಯಾವನು ದೊಡ್ಡದಾದ ದುಃಖಸಮುದ್ರದಲ್ಲಿ ಮುಳುಗಿರುವನೋ ಯಾವನಿಗೆ ಪುತ್ರ ಪತ್ನಿ ಇವರುಗಳ ವಿಯೋಗವುಂಟಾಗಿರುವುದೋ ಮತ್ತು ಸೇವಕರ, ಬಂಧುಗಳ, ಅಗಲಿಕೆಯುಂಟಾಗಿರುವುದೋ ಅವನು ಒಂದು ತಿಂಗಳು ಈ ಕಥೆಯನ್ನು ಭಕ್ತಿಯಿಂದ ಕೇಳಲು ಸಕಲ ವಿಧವಾದ ಕಷ್ಟಗಳಿಂದಲೂ ಬಿಡುಗಡೆಯನ್ನು ಹೊಂದುವನು.

|| ಸೂತ ಉವಾಚ ||

ಇತ್ಯುಕ್ತ್ವಾ ಧರ್ಮಪುತ್ರಶ್ಚ ವಿರರಾಮ ಮಹಾಮುನಿಃ ।
ಪುನಃ ಸಂಪ್ರಷ್ಟುಮಾರೇಭೇ ದೇವರ್ಷಿಃ ಕೌತುಕಾನ್ವಿತಃ || ೬೯ ||

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರದನಾರಾಯಣಸಂವಾದೇ ಮಂಗಲವರ್ಣನಂ ನಾಮ ಷಟ್‌ಚತ್ವಾರಿಂಶೋಽಧ್ಯಾಯಃ

---

೬೯. ಸೂತಮುನಿಯು :—ಧರ್ಮನ ಮಗನಾದ ನಾರಾಯಣ ಮಹಾಮುನಿಯು ಈ ಪ್ರಕಾರವಾಗಿ ಹೇಳಿ ಸುಮ್ಮನಾದನು. ದೇವಮುನಿಯಾದ ನಾರದನು ಆಶ್ಚರ್ಯದಿಂದ ಕೂಡಿದವನಾಗಿ ಮತ್ತೆ ಪ್ರಶ್ನೆಮಾಡಲು ಪ್ರಾರಂಭಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ನಾರದ ನಾರಾಯಣ ಸಂವಾದದಲ್ಲಿ ಮಂಗಳವರ್ಣನವೆಂಬ ನಲವತ್ತಾರನೆಯ ಅಧ್ಯಾಯವು ಮುಗಿದುದು.

ನಲವತ್ತಾರನೆಯ ಅಧ್ಯಾಯ ಸಾರಾಂಶ.

ದೀರ್ಘಕಾಲದ ವಿರಹವ್ಯಥೆಯನ್ನು ಅನುಭವಿಸಿದನಂತರ ಪುನಃ ಸಮ್ಮೇಳನ ವನ್ನು ಪಡೆದ ರತಿಮನ್ಮಥರ ಮತ್ತು ಶಿವಪಾರ್ವತಿಯರ ಸಂಭೋಗಶೃಂಗಾರವನ್ನು ಕೇಳಲು ಬಯಸಿದ ರಾಧಾದೇವಿಗೆ ಶ್ರೀಕೃಷ್ಣನು ಎಲ್ಲವನ್ನೂ ವಿಸ್ತಾರವಾಗಿ ಹೇಳಿದನು.

ರತಿ ಮನ್ಮಥರೂ ಮತ್ತು ಪಾರ್ವತೀಪರಮೇಶ್ವರರೂ ಪ್ರಕೃತಿ ಸೌಂದರ್ಯದಿಂದ ಮನೋಹರವಾದ ದಿವ್ಯೋದ್ಯಾನಗಳಲ್ಲಿಯೂ, ನದ ನದೀತೀರಗಳಲ್ಲಿಯೂ ಪರ್ವತದ ತಪ್ಪಲುಗಳಲ್ಲಿಯೂ, ಜಾಜೀ ಸಂಪಿಗೆ ಮುಂತಾದ ಪುಷ್ಪೋದ್ಯಾನಗಳಲ್ಲಿಯೂ ಸಹಸ್ರಾರು ವರ್ಷಗಳಕಾಲ ಅಖಂಡವಾದ ರತಿಸುಖವನ್ನನುಭವಿಸಿದರು. ಸುಖ ಸಂಭೋಗ ಮಗ್ನರಾದ ಶಿವಪಾರ್ವತಿಯರ ಭಾರವನ್ನು ಸಹಿಸಲಾರದೆ ಭೂದೇವಿಯು ನಡುಗಿದಳು. ಆದಿಶೇಷನೂ, ಆದಿಕೂರ್ಮನೂ, ತಲೆಬಾಗಿದರು. ವಾಯುವು ನಿಶ್ಚಲವಾಯಿತು. ಆಗ ದೇವತೆಗಳೆಲ್ಲರೂ ವಿಷ್ಣುವಿನ ಮರೆಹೊಕ್ಕರು. ತತ್ವವನ್ನರಿತ ವಿಷ್ಣುವು ಶಿವಪಾರ್ವತಿಯರು ಅಖಂಡ ರತಿಸುಖದಲ್ಲಿ ಮಗ್ನರಾಗಿರುವುದರಿಂದ ಹೀಗೆ ವಾಯು ನಿರೋಧವಾಗಿರುವುದೆಂದು ಹೇಳಿ ಸಹಸ್ರ ವರ್ಷಗಳು ಕಳೆದನಂತರ ಶಿವ ಪಾರ್ವತಿಯರ ರತಿಗೆ ಭಂಗವನ್ನುಂಟುಮಾಡಿದರೆ ಶಿವನ ವೀರ್ಯವು ಭೂಮಿಯ ಮೇಲೆ ಬಿದ್ದು ಸ್ಕಂದನ ಅವತಾರವಾಗುವುದೆಂದು ತಿಳಿಸಿ ವಿಷ್ಣುವು ವಿರತನಾದನು.

ಈ ಅಧ್ಯಾಯದ ಕಥೆಯನ್ನು ಕೇಳಿದವರು ಯಾರ ವಿರಹದುಃಖಕ್ಕೂ ಒಳಗಾಗುವುದಿಲ್ಲ.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಸಪ್ತಚತ್ವಾರಿಂಶೋಽಧ್ಯಾಯಃ ॥

॥ ನಾರದ ಉವಾಚ ॥

ಅಥ ಕ್ರೀಡಾಂತರೇ ರಾಧಾ ಕಿಂ ಪಪ್ರಚ್ಛ ಹರಿಂ ವಿಭುಂ ।
ಕಾಂ ಕಥಾಂ ಕಥಯಾಮಾಸ ಕಥ್ಯತಾಂ ಕರುಣಾನಿಧೇ ॥ ೧ ॥

॥ ನಾರಾಯಣ ಉವಾಚ ॥

ಉತ್ಥಾಯ ಸುಖಸಂಭೋಗಾದ್ರಾಧಾಂ ಕೃತ್ವಾ ಪುರೋ ಹರಿಃ ।
ಉವಾಸ ಮಲಯದ್ರೋಣೀಂ ವಟಮೂಲೇ ಮನೋಹರೇ ॥ ೨ ॥

ರಾಧಾ ತಂ ಪರಿಪಪ್ರಚ್ಛ ಸಸ್ಮಿತಂ ಸುಮನೋಹರಂ ।
ದರ್ಪಭಂಗಂ ವಜ್ರಭೃತೋ ನಿಗೂಢಂ ಶ್ರುತಿಸುಂದರಂ ॥ ೩ ॥

ನಲವತ್ತೇಳನೆಯ ಅಧ್ಯಾಯ.

೧. ನಾರದನು :—ಎಲೈ ದಯಾಮಯನೇ, ರಾಧೆಯು ರತಿಕ್ರೀಡೆಯಾದ ನಂತರ ಪ್ರಭುವಾದ ಕೃಷ್ಣನನ್ನು ಕುರಿತು ಏನನ್ನು ಕೇಳಿದಳು? ಕೃಷ್ಣನು ಮತ್ತೆ ಯಾವ ಕಥೆಯನ್ನು ಹೇಳಿದನು? ಹೇಳುವವನಾಗು.

೨. ನಾರಾಯಣನು :—ಕೃಷ್ಣನು ಸುಖಸಂಭೋಗದಿಂದೆದ್ದು ರಾಧೆಯನ್ನು ಜೊತೆಯಲ್ಲಿ ಕರೆದುಕೊಂಡು ಮಲಯಪರ್ವತದ ತೊಪ್ಪಲಿನಲ್ಲಿರುವ ಮನೋಹರವಾದ ಆಲದಮರದ ಬುಡದಲ್ಲಿ ವಾಸಮಾಡುತ್ತಿದ್ದನು.

೩. ಆಗ ರಾಧೆಯು ಮಂದಹಾಸಮಾಡುತ್ತ ಆ ಕೃಷ್ಣನನ್ನು ಕುರಿತು ಅತಿ ಮನೋಹರವೂ, ಗುಪ್ತವೂ ಆದ ಇಂದ್ರನ ದರ್ಪಭಂಗದ ಕಥೆಯನ್ನು ಕೇಳಿದಳು.

॥ ರಾಧಿಕೋವಾಚ ॥

ಶ್ರುತಂ ಯಶಃ ಶೂಲಭೃತೋ ದರ್ಪಭಂಗಶ್ಚ ದೈವತಃ ।
ಪಾರ್ವತ್ಯಾ ದರ್ಪಭಂಗಶ್ಚ ವಿವಾಹಶ್ಚ ತಯೋರಹೋ ॥ ೪ ॥

ಅಧುನಾ ಶ್ರೋತುಮಿಚ್ಛಾಮಿ ದರ್ಪಭಂಗಂ ಹರೇರ್ಹರೇ ।
ಶೇಷಾಣಾಂ ಚ ಕ್ರಮೇಣೈವ ವದ ವ್ಯಸ್ಯ ಜಗದ್ಗುರೋ ॥ ೫ ॥

॥ ಶ್ರೀಕೃಷ್ಣ ಉವಾಚ ॥

ದರ್ಪಭಂಗಂ ಸುರಪತೇಸ್ತ್ರಿಷು ಲೋಕೇಷು ವಿಶ್ರುತಃ ।
ಕರ್ಣಪೀಯೂಷಮತುಲಂ ಸುಂದರಂ ಶೃಣು ಸುಂದರಿ ॥ ೬ ॥

ಪುರಾ ಶತಮಖೋ ದರ್ಪಾತ್ಕೃತ್ವಾ ಶತಮಖಾನ್ಮುದಾ ।
ಬಭೂವ ಸರ್ವದೇವಾನಾಮಧ್ಯಕ್ಷಃ ಸಂಪದಾಯುತಃ ॥ ೭ ॥

---

೪. ರಾಧೆಯು :—ಈಶ್ವರನ ಕೀರ್ತಿಯೂ ಮತ್ತು ದರ್ಪಭಂಗವೂ ಕೇಳಲ್ಪಟ್ಟಿತು. ಮತ್ತು ಪಾರ್ವತಿಯ ಗರ್ವಭಂಗವೂ ಶಿವಪಾರ್ವತಿಯರ ವಿವಾಹ ಸಂಬಂಧವಾದ ಆಶ್ಚರ್ಯಕರವಾದ ಕಥೆಯೂ ಕೇಳಲ್ಪಟ್ಟಿತು.

೫. ಎಲೈ ಕೃಷ್ಣನೇ, ಈಗ ಇಂದ್ರನ ಗರ್ವಭಂಗದ ಕಥೆಯನ್ನೂ, ಉಳಿದವರ ಕಥೆಯನ್ನೂ ಕೇಳಲಪೇಕ್ಷೆಯುಳ್ಳವಳಾಗಿರುವೆನು; ಕ್ರಮವಾಗಿ ಎಲ್ಲ ಕಥೆಯನ್ನೂ ಹೇಳುವವನಾಗು.

೬. ಶ್ರೀಕೃಷ್ಣನು :—ಎಲೈ ಸುಂದರಿಯೇ, ದೇವೇಂದ್ರನ ಗರ್ವಭಂಗದ ಕಥೆಯು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿದೆ. ಕಿವಿಗಳಿಗೆ ಅಮೃತದಂತಿರುವ ಸುಂದರವಾದ ಈ ಕಥೆಯನ್ನು ಕೇಳು.

೭. ಹಿಂದೆ ಇಂದ್ರನು ಆನಂದದಿಂದ ನೂರು ಯಾಗಗಳನ್ನು ಮಾಡಿ ದರ್ಪದಿಂದ ಸಕಲೈಶ್ವರ್ಯದಿಂದೊಡಗೂಡಿ ಸಮಸ್ತ ದೇವತೆಗಳಿಗೂ ಯಜಮಾನನಾದನು.

ದಿನೇ ದಿನೇ ತದೈಶ್ವರ್ಯಂ ವರ್ಧತೇ ತಪಸಾಂ ಬಲಾತ್ ।
ದೀಕ್ಷಾಂ ತಂ ಕಾರಯಾಮಾಸ ಸಿದ್ಧಮಂತ್ರಂ ಬೃಹಸ್ಪತಿಃ　　॥ ೮ ॥

ಸ ಜಜಾಪ ಮಹಾಮಂತ್ರಂ ಪುಷ್ಕರೇ ಶತವತ್ಸರಂ ।
ಬಭೂವ ಮಂತ್ರಸಿದ್ಧಶ್ಚ ಪರಿಪೂರ್ಣಮನೋರಥಃ　　॥ ೯ ॥

ಬ್ರಹ್ಮಸ್ವರೂಪಾಂ ಪ್ರಕೃತಿಂ ಸಂಪನ್ಮೂಢೋ ನ ಮನ್ಯತೇ ।
ಸಾ ತಂ ಶಶಾಪ ಸ್ವಗುರೋಃ ಶಾಪಂ ಲೇಭೇಽತಿಕೋಪತಃ　　॥ ೧೦ ॥

ಏಕದಾ ಪ್ರಕೃತೇಃಶಾಪಾದ್ಧತಬುದ್ಧಿಃ ಸ್ವಸಂಸದಿ ।
ಗುರುಂ ದೃಷ್ಟ್ವಾ ಸಮುತ್ಥಾಯ ನ ನನಾಮ ಮುದಾನ್ವಿತಃ　　॥ ೧೧ ॥

ಬೃಹಸ್ಪತಿಸ್ತತಃ ಕೋಪಾನ್ನೋವಾಸ ಗೃಹಮಾಯಯೌ ।
ನ ತಸ್ಥೌ ತಾರಕಾಭ್ಯಾಶೇ ತಪಸೇ ಕಾನನಂ ಯಯೌ　　॥ ೧೨ ॥

---

೮. ಪ್ರತಿದಿನವೂ ಅವನ ತಪಸ್ಸಿನ ಫಲದಿಂದ ಅವನ ಐಶ್ವರ್ಯವು ಹೆಚ್ಚಾಗುತ್ತಿದ್ದಿತು. ಬೃಹಸ್ಪತ್ಯಾಚಾರ್ಯರು ಮಂತ್ರಸಿದ್ಧಿಯನ್ನು ಹೊಂದಿರುವ ಆ ಇಂದ್ರನಿಗೆ ಮಂತ್ರದೀಕ್ಷೆಯನ್ನು ಮಾಡಿಸಿದರು.

೯. ಆ ಇಂದ್ರನು ಗುರುವು ಉಪದೇಶಮಾಡಿದ ಆ ಮಹಾಮಂತ್ರವನ್ನು ಪುಷ್ಕರಕ್ಷೇತ್ರದಲ್ಲಿ ನೂರು ವರುಷಗಳವರೆಗೆ ಜಪಮಾಡಿದನು. ಮಂತ್ರಸಿದ್ಧಿಯನ್ನು ಹೊಂದಿ ಸಂಪೂರ್ಣವಾದ ಇಷ್ಟಾರ್ಥವುಳ್ಳವನಾದನು.

೧೦. ಐಶ್ವರ್ಯಮತ್ತನಾದ ಆ ಇಂದ್ರನು ಬ್ರಹ್ಮಸ್ವರೂಪಳಾದ ಪ್ರಕೃತಿಯು ಮಹಿಮೆಯನ್ನು ತಿಳಿಯದವನಾದನು. ಆ ಪ್ರಕೃತಿಯು ಇಂದ್ರನನ್ನು ಶಪಿಸಿದಳು; ಮತ್ತು ಅತ್ಯಂತ ಕುಪಿತನಾದ ತನ್ನ ಗುರುವಿನ ಶಾಪವನ್ನೂ ಹೊಂದಿದನು.

೧೧. ಒಂದಾನೊಂದು ದಿನ ಪ್ರಕೃತಿಯ ಶಾಪದಿಂದ ಮೂಢಬುದ್ಧಿಯಾದ ಇಂದ್ರನು ತನ್ನ ಸಭೆಯಲ್ಲಿ ಕುಳಿತಿರುವಾಗ ಗುರುವು ಬಂದುದನ್ನು ನೋಡಿದರೂ ಮದಾಂಧನಾಗಿ ಮೇಲಕ್ಕೆ ಎದ್ದು ನಮುಸ್ಕಾರವನ್ನು ಮಾಡಿ ಗೌರವಿಸಲಿಲ್ಲ.

೧೨. ಅದರಿಂದ ಕೋಪಗೊಂಡ ಬೃಹಸ್ಪತಿಯು ಅಲ್ಲಿ ನಿಲ್ಲದೆ ಮನೆಗೆ ಬಂದನು. ತಾರಾದೇವಿಯೊಡನೆ ಆ ವಿಷಯವನ್ನು ತಿಳಿಸಿ ತಪಸ್ಸನ್ನು ಮಾಡಲು ಕಾಡಿಗೆ ಹೋದನು.

ಉವಾಚ ಮನಸಾ ದೀನೋ ಯಾತು ಸಂಪದ್ಧರೇರಿತಿ ।
ಅಥ ಶಕ್ರೋ ಮತಿಂ ಪ್ರಾಪ್ಯ ಕ್ವ ಗತೋऽಸ್ತಿ ಮದೀಶ್ವರಃ ॥ ೧೩ ॥

ಇತ್ಯುಕ್ತ್ವಾ ವೇಗತಃ ಶೀಘ್ರಂ ಜಗಾಮ ತಾರಕಾಂತಿಕಂ ।
ಪ್ರಣಮ್ಯ ಮಾತರಂ ಭಕ್ತ್ಯಾ ನತಸ್ಕಂಧಃ ಪುಟಾಂಜಲಿಃ ॥ ೧೪ ॥

ಸರ್ವಂ ನಿವೇದನಂ ಕೃತ್ವಾ ರುರೋದೋಚ್ಚೈರ್ಮುಹುರ್ಮುಹುಃ ।
ಪುತ್ರಸ್ಯ ರೋದನಂ ದೃಷ್ಟ್ವಾ ರುರೋದ ತಾರಕಾ ಭೃಶಂ ॥ ೧೫ ॥

ವತ್ಸ ಗಚ್ಛ ಗೃಹಂ ನೈವ ಗುರುಂ ದ್ರಕ್ಷ್ಯಸಿ ಸಾಂಪ್ರತಂ ।
ದುರ್ದಿನಾಂತೇ ಗುರುಂ ಪ್ರಾಪ್ಯ ಪುನರ್ಲಕ್ಷ್ಮೀಮವಾಪ್ಸ್ಯಸಿ ॥ ೧೬ ॥

ಅಧುನಾ ಕರ್ಮಣಾಂ ದೋಷಂ(ಭೋಗಂ) ಭುಂಕ್ಷ್ವ ಮೂಢ ದುರಾಶಯ ।
ದುರ್ದಿನೇ ಸ್ವಗುರೌ ರೋಷಃ ಸುದಿನೇ ಪರಿತೋಷಣಂ ॥ ೧೭ ॥

೧೩-೧೫. ಮನಸ್ಸಿನಲ್ಲಿಯೇ ಅತ್ಯಂತ ವ್ಯಥೆಯನ್ನು ಹೊಂದಿದ ಬೃಹಸ್ಪತಿಯು ಇಂದ್ರನ ಐಶ್ವರ್ಯವು ನಾಶವಾಗಲೆಂದನು. ಅನಂತರ ಇಂದ್ರನು ಜ್ಞಾನವನ್ನು ಹೊಂದಿ ನನ್ನ ಗುರುವು ಎಲ್ಲಿಗೆ ಹೋದನು? ಎಂದು ಯೋಚಿಸುತ್ತ ಜಾಗ್ರತೆಯಾಗಿ ಸಿಂಹಾಸನವನ್ನು ಬಿಟ್ಟಿದ್ದು ತಾರಾದೇವಿಯ ಸನ್ನಿಧಿಗೆ ಹೋದನು. ತಾಯಿಗೆ ಸಮಾನಳಾದ ತಾರೆಯನ್ನು ನಮಸ್ಕರಿಸಿ ಕೈಗಳನ್ನು ಜೋಡಿಸಿಕೊಂಡು ತಲೆಬಾಗಿ ನಿಂದು ನಡೆದ ಸಮಾಚಾರಗಳೆಲ್ಲವನ್ನೂ ಹೇಳಿ ಗಟ್ಟಿಯಾಗಿ ಅತ್ತನು. ಇವನು ಅಳುವುದನ್ನು ಕೇಳಿ ತಾರೆಯೂ ಅತ್ತಳು.

೧೬. ಎಲೈ ಮಗುವೇ, ಮನೆಗೆ ಹೋಗು; ಈ ಸಂದರ್ಭದಲ್ಲಿ ನೀನು ಗುರುವನ್ನು ನೋಡಲಾರೆ, ನಿನ್ನ ದುರದೃಷ್ಟದಿನಗಳು ಕಳೆದನಂತರ ಗುರುವನ್ನು ಹೊಂದಿ ಮತ್ತೆ ನಿನ್ನ ಐಶ್ವರ್ಯವನ್ನು ಪಡೆಯುವಿ.

೧೭-೧೮. ಎಲೈ ದುರ್ಬುದ್ಧಿಯುಳ್ಳ ಮೂಢನೇ, ಈಗ ನೀನು ಮಾಡಿದ ಕರ್ಮಫಲವನ್ನನುಭವಿಸು. ಗ್ರಹಚಾರ ಕ್ರೂರದಿನಗಳಲ್ಲಿ ಗುರುವಿಗೆ ಕೋಪವೂ, ಸುದಿನಗಳಲ್ಲಿ ಸಂತೋಷವೂ ಉಂಟಾಗುವುದು. ಎಲೈ ಇಂದ್ರನೇ, ಸುಖದುಃಖ

ಸುದಿನಂ ದುರ್ದಿನಂ ಶಕ್ರ ಕಾರಣಂ ಸುಖದುಃಖಯೋಃ ।
ಇತ್ಯುಕ್ತ್ವಾ ತಾರಕಾ ದೇವೀ ವಿರರಾಮ ಪತಿವ್ರತಾ ॥ ೧೮ ॥

ಜಗಾಮ ಶಕ್ರಃ ಸ್ನಾನಾರ್ಥಂ ಸ್ವರ್ಣದೀಂ ಸುಮನೋಹರಾಂ ।
ದದರ್ಶ ತತ್ರ ರುಚಿರಾಂ ಮಾರ್ಜಂತೀಂ ಚ ನಿತಂಬಿನೀಂ ॥ ೧೯ ॥

ಸಸ್ಮಿತಾಂ ಸಕಟಾಕ್ಷಾಂ ತಾಮಹಲ್ಯಾಂ ಗೌತಮಪ್ರಿಯಾಂ ।
ದೃಷ್ಟ್ವಾ ಚ ವಿಪುಲಶ್ರೋಣೀಂ ಸ್ತನಯುಗ್ಮಂ ಮನೋಹರಂ ॥ ೨೦

ಸ ತಸ್ಯಾಃ ಶಕ್ರಃ ಸಂಪಶ್ಯನ್ಮೋಹ ಕಾಮಮೋಹಿತಃ ।
ಪುನಃ ಸ ಚೇತನಾಂ ಪ್ರಾಪ್ಯ ವಿಹಾಯ ಸ್ನಾನಮೀಶ್ವರಿ ॥ ೨೧ ॥

ಮೂರ್ತಿಂ ವಿಧಾಯ ತದ್ಭರ್ತುಃ ತತ್ಸಮೀಪಂ ಜಗಾಮ ಹ ।
ಗತ್ವಾ ತು ಸ್ನಿಗ್ಧವಸ್ತ್ರಾಂ ತಾಂ ಸಮಾಕೃಷ್ಯ ಸ್ಮರಾತುರಃ ॥ ೨೨ ॥

ಚಕಾರ ವಿವಿಧಂ ತತ್ರ ಶೃಂಗಾರಂ ಸುಮನೋಹರಂ ।
ಮೂರ್ಛಾಂ ಸಂಪ್ರಾಪ ಕಾಮೇನ ತಂದ್ರಾಂ ಚ ಮುನಿಕಾಮಿನೀ ॥ ೨೩ ॥

ಸುದಿನ ಮತ್ತು ದುರ್ದಿನಗಳು ಕಾರಣಗಳಾಗಿರುತ್ತವೆ. ಹೀಗೆಂಬುದಾಗಿ ಹೇಳಿ ಪತಿವ್ರತೆಯಾದ ತಾರಾದೇವಿಯು ಸುಮ್ಮನಾದಳು.

೧೯. ಒಮ್ಮೆ ಇಂದ್ರನು ಸ್ನಾನಮಾಡಲೋಸುಗ ಮನೋಹರವಾದ ದೇವಗಂಗಾನದಿಯನ್ನು ಕುರಿತು ಹೊರಟನು. ಅಲ್ಲಿ ಸ್ನಾನಮಾಡುತ್ತಿರುವ ಸುಂದರಿಯಾದ ಸ್ತ್ರೀಯನ್ನು ಕಂಡನು.

೨೦-೨೩. ಮಂದಹಾಸವನ್ನು ಬೀರುತ್ತಿರುವ ಕಡೆಗಣ್ಣಿನ ನೋಟದಿಂದ ಮನೋಹರಳಾದ ಮತ್ತು ವಿಸ್ತಾರವಾದ ನಿತಂಬಪ್ರದೇಶವುಳ್ಳ ಗೌತಮ ಮಹಾಮುನಿಯ ಪತ್ನಿಯಾದ ಅಹಲಾದೇವಿಯನ್ನು ನೋಡಿದನು. ಮತ್ತು ಅವಳ ಮನೋಹರವಾದ ಕುಚಗಳನ್ನು ನೋಡಿ ಮೂರ್ಛೆಯನ್ನು ಹೊಂದಿದನು. ಸ್ವಲ್ಪ ಕಾಲದಲ್ಲಿ ಮತ್ತೆ ಜ್ಞಾನವನ್ನು ಪಡೆದು ಸ್ನಾನಮಾಡವುದನ್ನು ಬಿಟ್ಟು ಅವಳ ಪತಿಯಾದ ಗೌತಮನಂತೆ ವೇಷವನ್ನು ಧರಿಸಿ ಅವಳ ಸಮೀಪಕ್ಕೆ ಹೋದನು. ಸುಂದರವಾದ ವಸ್ತ್ರವನ್ನು ಧರಿಸಿದ ಅಹಲ್ಯೆಯ ಸಮೀಪಕ್ಕೆಹೋಗಿ ಕಾಮಾತುರನಾಗಿ ಅವಳೊಡನೆ ನಾನಾವಿಧವಾದ ಶೃಂಗಾರವನ್ನನುಭವಿಸಿದನು. ಮುನಿಪತ್ನಿಯು ಕಾಮವಶಳಾಗಿ ಆಲಸ್ಯದಿಂದ ಮೂರ್ಛೆಯನ್ನು ಹೊಂದಿದಳು.

ನಿಶ್ಚೇಷ್ಟಾ ಸುಖಸಂಭೋಗಾನ್ನಿಶ್ಚೇಷ್ಟಸ್ತ್ರಿದಶಾಧಿಪಃ ।
ಏತಸ್ಮಿನ್ನಂತರೇ ತಪಸ್ತ್ಯಕ್ತ್ವಾ ಸಮಾಗತ್ಯ ಮುನೀಶ್ವರಃ ॥ ೨೪ ॥

ದದರ್ಶ ಗೇಹೇ ಮಿಥುನಂ ಮೈಥುನೇ ಚ ರತಂ ಪ್ರಿಯೇ ।
ದೃಷ್ಟ್ವಾ ಚುಕೋಪ ಸ ಮುನಿರ್ಜ್ವಲನ್ನಿವ ಹುತಾಶನಃ ॥ ೨೫ ॥

ವಿಜ್ಞಾನೇನಾತಿರೋಷೇಣ ಬಭಂಜ ಸುರತಿಕ್ಷಣಂ ।
ಶಕ್ರಃ ಸ ಚೇತನಾಂ ಪ್ರಾಪ್ಯ ದೃಷ್ಟ್ವಾ ಚ ಮುನಿಪುಂಗವಂ ॥ ೨೬ ॥

ಕಾಲಸ್ವರೂಪಂ (ಕಾಮೇನ) ತ್ರಾಸೇನ ದಧಾರ ಚರಣಾಂಬುಜಂ ।
ಕೋಪರಕ್ತಾಸ್ಯನಯನೋ ದೇವಂ ಪಾದಾನತಂ ಭಿಯಾ ।
ಉವಾಚ ನೀತಿವಚನಂ ಗೌತಮಃ ಶರಣಾಗತಂ ॥ ೨೭ ॥

॥ ಗೌತಮ ಉವಾಚ ॥

ಧಿಕ್ ತ್ವಾಮಿಂದ್ರ ಸುರಶ್ರೇಷ್ಠ ಕಶ್ಯಪಾತ್ಮಜ ಪಂಡಿತ ॥ ೨೮ ॥

೨೪–೨೫. ಸುಖಸಂಭೋಗದಿಂದ ಅಹಲ್ಯೆಯೂ ದೇವೇಂದ್ರನೂ ನಿಶ್ಚೇಷ್ಟಿತರಾದರು. ಈ ಸಂದರ್ಭದಲ್ಲಿ ಗೌತಮ ಮುನಿಯು ತಪಸ್ಸನ್ನು ಮಾಡಿಕೊಂಡು ಬಂದು ಮನೆಯಲ್ಲಿ ಸಂಭೋಗಾಸಕ್ತರಾದ ಅಹಲ್ಯಾ ಮತ್ತು ಇಂದ್ರರನ್ನು ನೋಡಿ ಉರಿಯುತ್ತಿರುವ ಯಜ್ಞೇಶ್ವರನಂತೆ ಅತ್ಯಂತ ಕೋಪಗೊಂಡನು.

೨೬–೨೭. ದಿವ್ಯಜ್ಞಾನಿಯಾದ ಮುನಿಯು ಅತ್ಯಂತ ಕೋಪದಿಂದ ಆ ಉತ್ತಮ ರತಿಯ ಸಂದರ್ಭವನ್ನು ಮುರಿದನು. ಆಗ ಇಂದ್ರನು ಜ್ಞಾನವನ್ನು ಪಡೆದು ಮೃತ್ಯುವಿನಂತೆ ಎದುರಿನಲ್ಲಿ ನಿಂತಿರುವ ಆ ಮುನಿಯನ್ನು ನೋಡಿ ಭಯಗೊಂಡವನಾಗಿ ನಡುಗುತ್ತ ಆ ಮುನಿಯ ಪಾದಕಮಲಗಳನ್ನು ಹಿಡಿದುಕೊಂಡನು. ಕೋಪದಿಂದ ಕೆಂಪಾದ ಮುಖ ಮತ್ತು ಕಣ್ಣುಗಳುಳ್ಳ ಗೌತಮನು, ಹೆದರಿ ಕಾಲುಗಳಿಗೆರಗಿ ಮರೆಹೊಕ್ಕಿರುವ ದೇವೇಂದ್ರನನ್ನು ಕುರಿತು ಈ ಪ್ರಕಾರವಾಗಿ ಹೇಳಿದನು.

೨೮–೩೧. ಗೌತಮನು :–ದೇವಶ್ರೇಷ್ಠನೂ, ಕಶ್ಯಪನ ಮಗನೂ, ಜ್ಞಾನಿಯೂ, ಆದ ಇಂದ್ರನೇ. ನಿನಗೆ ಧಿಕ್ಕಾರವಿರಲಿ. ಬ್ರಹ್ಮನ ಮರಿಮಗನಾದ ನಿನಗೆ ಈ ದುಷ್ಟ

ಪ್ರಪೌತ್ರ ಜಗತಾಂ ಸ್ರಷ್ಟುಃ ಬುದ್ಧಿಸ್ತೇ ಕಥಮೀದೃಶೀ ।
ಮಾತಾಮಹಃ ಸ್ವಯಂ ದಕ್ಷೋsದಿತಿರ್ಮಾತಾ ಪತಿವ್ರತಾ ॥ ೨೯ ॥

ಕರ್ಮಸಾಧ್ಯಃ ಸ್ವಭಾವಶ್ಚ ಕುಲಧರ್ಮಂ ಪ್ರಬಾಧತೇ ।
ವೇದಂ ವಿಜ್ಞಾಯ ಜ್ಞಾನೀ ತ್ವಂ ಯೋನಿಲುಬ್ಧೋsಸಿ ಕರ್ಮಣಾ ॥ ೩೦ ॥

ಯೋನೀನಾಂ ಚ ಸಹಸ್ರಂ ಚ ತವಗಾತ್ರೇ ಭವತ್ವಿಹ ।
ಪೂರ್ಣವರ್ಷಂ ಚ ಸತತಂ ಯೋನಿಗಂಧಂ ಸಮಾಪ್ನುಹಿ ॥ ೩೦ ॥

ತತಃ ಸೂರ್ಯಂ ಸಮಾರಾಧ್ಯ ಯೋನಿಶ್ಚಕ್ಷುರ್ಭವಿಷ್ಯತಿ ।
ಮಮ ಪ್ರಾಣೇಶ್ವರೀ ದುಷ್ಟಾ ಯೇನ ಮೂಢ ತ್ವಯಾ ಕೃತಾ ॥ ೩೨ ॥

ಮಚ್ಛಾಪೇನ ಗುರೋಃ ಕೋಪಾದ್ಭ್ರಷ್ಟಶ್ರೀರ್ಭವ ಸಾಂಪ್ರತಂ ।
ಗುರೋರಪೇಕ್ಷಯಾ ಮೂಢ ಪ್ರಾಣಾ ನಾಪಹೃತಾಸ್ತವ ॥ ೩೩ ॥

ಬುದ್ಧಿಯು ಹೇಗೆಬಂದಿತು? ದಕ್ಷಬ್ರಹ್ಮನು ನಿನ್ನ ತಾಯಿಯ ತಂದೆಯು, ಪತಿವ್ರತೆಯಾದ ಅದಿತಿಯು ನಿನ್ನ ತಾಯಿಯು. ನಿನ್ನ ಕೆಲಸದಿಂದ ತಿಳಿಯಬಹುದಾದ ಸ್ವಭಾವವು ಕುಲಧರ್ಮವನ್ನು ನಾಶ ಮಾಡತಕ್ಕದ್ದಾಗಿದೆ. ವೇದವನ್ನು ಬಲ್ಲ ಜ್ಞಾನಿಯಾದ ನೀನು ಹೀನಕಾರ್ಯದಿಂದ ಯೋನಿಯಲ್ಲಿ ಆಶೆಗೊಂಡಿರುವಿ. ಆದಕಾರಣ ನಿನ್ನ ಶರೀರದಲ್ಲಿ ಸಾವಿರ ಯೋನಿಗಳಾಗಲಿ. ಸಾವಿರ ವರುಷಗಳ ವರೆಗೂ ನೀನು ಯಾವಾಗಲೂ ದುರ್ಗಂಧದಿಂದ ಕೂಡಿರುವವನಾಗು.

೩೨. ಎಲೈ ಮೂಢನೇ, ನನ್ನ ಪ್ರಾಣೇಶ್ವರಿಯನ್ನು ನೀನು ದುಷ್ಟಳನ್ನಾಗಿ ಮಾಡಿದ ಕಾರಣ ಈ ರೀತಿಯಾದ ಶಿಕ್ಷೆಯನ್ನು ಅನುಭವಿಸಿ ಅನಂತರ ಸೂರ್ಯನನ್ನು ಪೂಜೆಮಾಡಿ ಆ ಯೋನಿಗಳನ್ನು ಕಣ್ಣುಗಳನ್ನಾಗಿ ಪಡೆಯುವಿ.

೩೩-೩೫. ನನ್ನ ಶಾಪದಿಂದಲೂ ಗುರುವಿನ ಕೋಪದಿಂದಲೂ ಕೂಡ ಈಗ ನೀನು ನಷ್ಟವಾದ ಐಶ್ವರ್ಯವುಳ್ಳವನಾಗು. ತೇಜಸ್ವಿಯೂ ನನಗೆ ಅತ್ಯಂತ

ತೇಜಸ್ವಿನೋಽತಿ ಬಂಧೋರ್ಮೇ ಬಂಧುಭೇದಭಿಯಾ ಸುರ ।
ಉತ್ತಿಷ್ಠೋತ್ತಿಷ್ಠ ದೇವೇಂದ್ರ ಗಚ್ಛ ವತ್ಸ ಸ್ವಮಂದಿರಂ ॥ ೩೪ ॥

ಶುಭಾಶುಭಂ ಚ ಯತ್ಕಿಂಚಿತ್ಸರ್ವಂ ಕರ್ಮೋದ್ಭವಂ ಭವೇತ್ ।
ಮಹಾಮುನೀಂದ್ರವಚನಾದ್ಗತಃ ಶಕ್ರಶ್ಚ ಪುಷ್ಕರಂ ॥ ೩೫ ॥

ಚಕಾರಾಽಽರಾಧನಂ ಭಕ್ತ್ಯಾ ಸ್ವೈಷ್ಕೃತ್ಯಂ ಚ ಚಕಾರ ಹ ।
ಪಾದಾನತಮಹಲ್ಯಾಂ ತಾಮುವಾಚ ಮುನಿಪುಂಗವಃ ॥ ೩೬ ॥

ವನಂ ಗತ್ವಾ ಚಿರಂ ತಿಷ್ಠ ವಿಧಾಯ ಮೂರ್ತಿಮಶ್ಮನಃ ।
ಅಕಾಮಾಂ ಚಕಮೇ ಶಕ್ರಃ ಸರ್ವಂ ಜಾನಾಮ್ಯಹಂ ಪ್ರಿಯೇ ॥ ೩೭ ॥

ತಥಾ ಚ (ಅಪಿ) ಪರಭೋಗ್ಯಾ ಮೇ ನ ಚ ಭೋಗ್ಯಾ ಕದಾಚನ ।
ಪರವೀರ್ಯಂ ಯದುದರೇ ಕಾಮತೋಽಕಾಮತೋಪಿ ವಾ ॥ ೩೮ ॥

ಬಂಧುವೂ ಆದ ನಿನ್ನ ಗುರುವಿನ ಇಚ್ಛೆಯಿಂದ ನಿನ್ನ ಪ್ರಾಣಗಳನ್ನು ಅಪಹರಿಸದೆ ಬಿಟ್ಟಿರುವೆನು. ಎಲೈ ದೇವೇಂದ್ರನೇ, ಏಳು ಏಳು ನಿನ್ನ ಮನೆಗೆ ಹೋಗು. ಮನುಷ್ಯನಿಗೆ ಒಳ್ಳೆಯದು ಕೆಟ್ಟದು ಎರಡೂ ಕರ್ಮದಿಂದುಂಟಾಗುವುವು. ಮಹಾ ಮುನಿಯ ಮಾತನ್ನು ಕೇಳಿ ಇಂದ್ರನು ಪುಷ್ಕರ ಕ್ಷೇತ್ರಕ್ಕೆ ಹೊರಟುಹೋದನು.

೩೬. ಅಲ್ಲಿ ಭಕ್ತಿಯಿಂದ ಆರಾಧನೆಯನ್ನು ಮಾಡಿದನು ಮತ್ತು ಪ್ರಾಯಶ್ಚಿತ್ತ ವನ್ನು ಮಾಡಿಕೊಂಡನು. ಅಹಲ್ಯಾದೇವಿಯು ಕಾಲಿಗೆರಗಿ ಬೇಡಿಕೊಳ್ಳಲು ಮುನಿ ವರ್ಯನು ಅವಳನ್ನು ಕುರಿತು ಇಂತೆಂದನು.

೩೭. ಎಲೈ ಪ್ರಿಯಳೇ, ನೀನು ಕಾಡಿಗೆ ಹೋಗಿ ಬಹುಕಾಲ ಕಲ್ಲಿನ ಆಕಾರ ವನ್ನು ಧರಿಸಿಕೊಂಡಿರು. ನೀನು ಅಪೇಕ್ಷಿಸದಿದ್ದರೂ ತಾನಾಗಿಯೇ ಇಂದ್ರನು ನಿನ್ನನ್ನು ಅಪೇಕ್ಷಿಸಿಕೊಂಡು ಬಂದಿದ್ದಾನೆ. ನಾನು ಇದೆಲ್ಲವನ್ನೂ ತಿಳಿದಿರುವೆನು.

೩೮–೩೯. ಆದರೂ ಕೂಡ ಪರರಿಂದ ಉಪಭೋಗಿಸಲ್ಪಟ್ಟ ಅಧಮಳಾದ ನೀನು ನನ್ನ ಉಪಭೋಗಕ್ಕೆ ಯೋಗ್ಯಳಲ್ಲ. ಎಲೈ ಅಹಲ್ಯೆಯೇ, ಪರನ ವೀರ್ಯವು ಇಷ್ಟದಿಂದಲಾಗಲಿ ಇಷ್ಟವಿಲ್ಲದೆಯಾಗಲಿ ದೈವಯೋಗದಿಂದ ಯಾವಳ ಉದರದಲ್ಲಿ

ಅಹಲ್ಯೇ ಯೊತಿ ದೈವೇನ ತದುಪಾಯಂ ನಿಶಾಮಯ ।
ಅಕಾಮತೋ ನ ದುಷ್ಟಾ ಸಾ ಪ್ರಾಯಶ್ಚಿತ್ತೇನ ಶುದ್ಧ್ಯತಿ ॥ ೩೯ ॥

ಕಾಮಭೋಗೇನ ತ್ಯಾಜ್ಯಾ ಸಾ ಕರ್ಮಭೋಗೇನ ಶುದ್ಧ್ಯತಿ ।
ಪಿತೃಪಾಕೇ ದೈವಪಾಕೇ ಪೂಜಾಯಾಂ ನಾಧಿಕಾರಿಣೀ ॥ ೪೦ ॥

ಷಷ್ಟಿವರ್ಷಸಹಸ್ರಾಣಿ ಕಾಲಸೂತ್ರಂ ಪ್ರಯಾತಿ ಸಾ ।
ಷಷ್ಟಿವರ್ಷಸಹಸ್ರಾಣಿ ಕ್ಷಯಂ ಕೃತ್ವಾ ಸ್ವಕರ್ಮಣಃ ॥ ೪೧ ॥

ಸ್ವಾಮಿನೋ ವಚನಾತ್ಸಾತು ಪ್ರಣಮ್ಯ ಸ್ವಾಮಿನಂ ಭಿಯಾ ।
ನಾಥ ನಾಥೇತಿ ಕುರ್ವಂತೀ ರುದತೀ ವನಮಾಪ ಸಾ ॥ ೪೨ ॥

ಷಷ್ಟಿವರ್ಷಸಹಸ್ರಾಣಿ ಭುಕ್ತ್ವಾ ಭೋಗಂ ಮುನಿಪ್ರಿಯಾ ।
ಶ್ರೀರಾಮಚರಣಸ್ಪರ್ಶಾತ್ಸದ್ಯಃ ಶುದ್ಧಾ ಬಭೂವ ಹ ॥ ೪೩ ॥

ಪ್ರವೇಶಮಾಡುತ್ತದೆಯೋ ಅದರ ಪಾಂತ್ಯುಪಾಯವನ್ನು ಕೇಳು. ಇಷ್ಟವಿಲ್ಲದೆ ಪ್ರವೇಶಿಸಿದುದಾದರೆ ಆವಳು ದುಷ್ಟಳಾಗುವುದಿಲ್ಲ. ಪ್ರಾಯಶ್ಚಿತ್ತದಿಂದ ಶುದ್ಧಿಯನ್ನು ಹೊಂದುತ್ತಾಳೆ.

೪೦. ಇಷ್ಟಪಟ್ಟು ಪರರನ್ನು ಉಪಭೋಗಿಸಿದರೆ ಅವಳು ತ್ಯಾಜ್ಯಳು. ಪಾಪ ಕರ್ಮದ ಫಲವನ್ನನುಭವಿಸಿದನಂತರ ಶುದ್ಧಳಾಗುತ್ತಾಳೆ. ಪಿತೃಕಾರ್ಯಗಳಲ್ಲಿ ಮತ್ತು ದೇವಕಾರ್ಯಗಳಲ್ಲಿ ಅಡಿಗೆಮಾಡಲು ಪೂಜೆಮಾಡಲು ಅವಳು ಯೋಗ್ಯಳಲ್ಲ.

೪೧. ಅಂಥವಳು ಅರವತ್ತು ಸಾವಿರ ವರ್ಷಗಳು ಕಷ್ಟಪಟ್ಟು ತನ್ನ ಪಾಪ ಕರ್ಮದ ಫಲವನ್ನು ನಾಶಮಾಡಿಕೊಳ್ಳಲು ಅರವತ್ತು ಸಾವಿರ ವರ್ಷಗಳು ಕಾಲ ಸೂತ್ರವೆಂಬ ನರಕವನ್ನನುಭವಿಸುವಳು.

೪೨. ಆ ಅಹಲ್ಯಾದೇವಿಯು ತನ್ನ ಪತಿಯ ಮಾತನ್ನು ಕೇಳಿ ಭಯ ಗೊಂಡವಳಾಗಿ ಅವನಿಗೆ ನಮಸ್ಕಾರವನ್ನು ಮಾಡಿ ಪ್ರಿಯನೇ, ಪ್ರಿಯನೇ, ಎಂದು ಹೇಳಿಕೊಂಡು ಅಳುತ್ತಾ ಕಾಡಿಗೆ ಹೊರಟುಹೋದಳು.

೪೩. ಅರವತ್ತುಸಾವಿರ ವರ್ಷಗಳು ಕಾಡಿನಲ್ಲಿ ಕಲ್ಲಾಗಿದ್ದು ಕರ್ಮಫಲ ವನ್ನನುಭವಿಸಿದನಂತರ ಆ ಮುನಿಪತ್ನಿಯಾದ ಅಹಲ್ಯೆಯು ಶ್ರೀರಾಮಚಂದ್ರನ ಕಾಲುಸೋಕಿದೊಡನೆ ಪರಿಶುದ್ಧಳಾದಳು.

ತ್ರೈಲೋಕ್ಯಮೋಹನಂ ರೂಪಂ ವಿಧಾಯ ಮುನಿಕಾಮಿನೀ |
ಜಗಾಮ ಗೌತಮಾಭ್ಯಾಶಂ ಮುನಿಃ ಸಂಪ್ರಾಪ್ಯ ಸುಂದರೀಂ || ೪೪ ||

ಅಥ ಶಕ್ರಸ್ಯವೃತ್ತಾಂತಂ ಪರಮಂ ಶೃಣು: ಸುಂದರಿ |
ಪಾಪಘ್ನಂ ಪುಣ್ಯಬೀಜಂ ತತ್ಸಂವ್ಯಸ್ಯ ಕಥಯಾಮಿ ತೇ || ೪೫ ||

ಏಕದಾ ಚ ಗುರೋಃ ಕೋಪಾತ್ ಪ್ರಕೃತೇರವಹೇಳನಾತ್ |
ಬ್ರಹ್ಮಹತ್ಯಾ ವಜ್ರಭೃತೋ ಬಭೂವ ಹತಚೇತಸಃ || ೪೬ ||

ಶಕ್ರಸ್ತ್ಯಕ್ತ್ವಗುರುರ್ದೈವಗ್ರಸ್ತೋ ದೈತ್ಯನಿಪೀಡಿತಃ |
ಜಗಾಮ ಶರಣಂ ಭೀತೋ ಬ್ರಹ್ಮಾಣಂ ಜಗತಾಂ ಗುರುಂ || ೪೭ ||

ತದಾಜ್ಞಯಾ ವಿಶ್ವರೂಪಂ ಚಕಾರ ಚ ಪುರೋಹಿತಂ |
ಬಭೂವ ತತ್ರ ವಿಶ್ವಸ್ತೋ ದೈವಾದ್ಬುದ್ಧಿಹತೋ ಹರಿಃ || ೪೮ ||

---

೪೪. ಆ ಮುನಿಪತ್ನಿಯು ಮೂರು ಲೋಕಗಳನ್ನೂ ಮೋಹಗೊಳಿಸುವ ರೂಪವನ್ನು ಪಡೆದವಳಾಗಿ ಗೌತಮ ಮುನಿಯ ಸನ್ನಿಧಿಗೆ ಬಂದಳು. ಮುನಿಯು ಸುಂದರಿಯಾದ ತನ್ನ ಪತ್ನಿಯನ್ನು ಪಡೆದನು.

೪೫. ಎಲೈ ಸುಂದರಿಯೇ, ಅನಂತರದ ಇಂದ್ರನ ಸಮಾಚಾರವನ್ನು ಕೇಳು, ಪಾಪಗಳನ್ನು ಹೋಗಲಾಡಿಸಿ ಪುಣ್ಯವನ್ನುಂಟುಮಾಡುವ ಆ ಕಥೆಯನ್ನು ನಿನಗೆ ಹೇಳುವೆನು.

೪೬. ಒಂದಾನೊಂದು ಬಾರಿ ಗುರುವಿನ ಕೋಪದಿಂದಲೂ ಪ್ರಕೃತಿಯ ತಿರಸ್ಕಾರದಿಂದಲೂ ಪ್ರಜ್ಞಾಹೀನನಾದ ಇಂದ್ರನಿಗೆ ಬ್ರಹ್ಮಹತ್ಯೆಯು ಬಂದಿತು.

೪೭. ಇಂದ್ರನು ವಿಧಿಯಿಂದ ಆವರಿಸಲ್ಪಟ್ಟವನಾಗಿ ಗುರುವಾದ ಬೃಹಸ್ಪತಿಯನ್ನು ಬಿಟ್ಟು ರಾಕ್ಷಸರಿಂದ ಪೀಡಿತನಾಗಿ ಭೀತಿಗೊಂಡು ಜಗತ್ತಿಗೆ ಗುರುವಾದ ಬ್ರಹ್ಮನನ್ನು ಮರೆಹೊಕ್ಕನು.

೪೮. ದೈವಹತನಾದ ಆ ಇಂದ್ರನು ಬ್ರಹ್ಮನ ಅಪ್ಪಣೆಯಂತೆ ವಿಶ್ವರೂಪನೆಂಬುವನನ್ನು ನಂಬಿ ಅವನನ್ನು ಪುರೋಹಿತನನ್ನಾಗಿ ಮಾಡಿಕೊಂಡನು.

ದೈತ್ಯದೌಹಿತ್ರಸ್ಯ ತದ್ಭಾವಂ ವಿಜ್ಞಾಯ ಚ ವಿಚಕ್ಷಣಃ ।
ಪ್ರಚಿಚ್ಛೇದ ಶಿರಸ್ತಸ್ಯ ತೀಕ್ಷ್ಣಬಾಣೇನ ಲೀಲಯಾ ॥ ೪೯ ॥

ವಿಶ್ವರೂಪಪಿತಾ ತ್ವಷ್ಟಾ ಶ್ರುತ್ವಾ ಸದ್ಯಶ್ಚುಕೋಪ ಹ ।
ಇಂದ್ರಶತ್ರೋ ವಿವರ್ಧಸ್ವೇತ್ಯುಕ್ತ್ವಾ ಯಜ್ಞಂ ಚಕಾರ ಹ ॥ ೫೦ ॥

ಯಜ್ಞಕುಂಡಾತ್ಸಮುತ್ತಸ್ಥೌ ವೃತ್ರೋ ನಾಮ ಮಹಾಸುರಃ ।
ಚಕಾರ ನಿಗ್ರಹಂ ಕೋಪಾದ್ದೇವಾನಾಮವಲೀಲಯಾ ॥ ೫೧ ॥

ಶಕ್ರೋ ಮಹಾಮುನೇರಸ್ಥಾಂ ವಜ್ರಂ ಕೃತ್ವಾ ಸುದಾರುಣಂ ।
ಜಘಾನ ವೃತ್ರಂ ದೇವಾನಾಂ ಕಂಟಕಂ ದೈತ್ಯಮರ್ದನಃ ॥ ೫೨ ॥

ಬ್ರಹ್ಮಹತ್ಯಾ ಶುನಾಸೀರಂ ದುದ್ರಾವ ಹತಚೇತಸಂ ।
ರಕ್ತವಸ್ತ್ರಪರೀಧಾನಾ ವೃದ್ಧಸ್ತ್ರೀವೇಷಧಾರಿಣೀ ॥ ೫೩ ॥

---

೪೯. ರಾಕ್ಷಸನ ಮೊಮ್ಮಗನಾದ ಆ ವಿಶ್ವರೂಪನ ಸಂಚನ್ನು ತಿಳಿದು ನಿಪುಣನಾದ ಇಂದ್ರನು ತೀಕ್ಷ್ಣವಾದ ಬಾಣದಿಂದ ಅವನ ತಲೆಯನ್ನು ಕಡಿದನು.

೫೦. ವಿಶ್ವರೂಪನ ತಂದೆಯಾದ ತ್ವಷ್ಟನು ಈ ಸಮಾಚಾರವನ್ನು ಕೇಳಿದ ಕೂಡಲೇ ಬಹಳ ಕೋಪಗೊಂಡನು, ಮತ್ತು ' ಇಂದ್ರಶತ್ರುವನ್ನು ವೃದ್ಧಿಗೊಳಿಸು ' ಎಂದು ಹೇಳುತ್ತ ಒಂದು ಯಾಗವನ್ನು ಮಾಡಿದನು.

೫೧. ಆಗ ಯಜ್ಞಕುಂಡದಿಂದ ವೃತ್ರನೆಂಬ ಮಹಾರಾಕ್ಷಸನು ಮೇಲಕ್ಕೆ ಬಂದನು. ಅವನು ಮಹಾಕೋಪದಿಂದ ಲೀಲಾಮಾತ್ರವಾಗಿ ದೇವತೆಗಳನ್ನು ಗೆದ್ದನು.

೫೨. ದೈತ್ಯನಾಶಕನಾದ ಇಂದ್ರನು ಮಹಾಮುನಿಯಾದ ದಧೀಚಿಯ ಮೂಳೆಗಳನ್ನು ತಂದು ಅದರಿಂದ ವಜ್ರವೆಂಬ ಆಯುಧವನ್ನು ಮಾಡಿ ಆ ಘೋರವಾದ ಆಯುಧದಿಂದ ದೇವತೆಗಳಿಗೆ ಕಂಟಕನಾದ ಆ ವೃತ್ರಾಸುರನನ್ನು ಕೊಂದನು.

೫೩. ಹತಬುದ್ಧಿಯಾದ ಆ ಇಂದ್ರನನ್ನು, ಕೆಂಪು ಬಟ್ಟೆಯನ್ನುದರಿಸಿ ಮುದುಕಿಯಂತೆ ವೇಷವನ್ನು ಧರಿಸಿಕೊಂಡು ಬ್ರಹ್ಮಹತ್ಯೆಯು ಅಟ್ಟಿಸಿಕೊಂಡು ಬಂದಿತು.

ಸಪ್ತತಾಲಪ್ರಮಾಣಾ ಸಾ ಶುಷ್ಕಕಂಠೋಷ್ಠತಾಲುಕಾ ।
ಈಷಾಪ್ರಮಾಣದಶನಾ ಮಹಾಭೀತಂ ಚಕಾರ ತಂ ॥ ೫೪ ॥

ಧಾವಂತಂ ಪರಿಧಾವಂತೀ ಬಲಿಷ್ಠಾ ಹತಚೇತನಂ ।
ಖಡ್ಗಹಸ್ತಾ ದಯಾಹೀನಾ ವೇಗೇನ ಪರಿಧಾವತಿ . ॥ ೫೫ ॥

ಇಂದ್ರೋ ದೃಷ್ಟ್ವಾ ಚ ತಾಂ ಘೋರಾಂ ಸ್ಮಾರಂ ಸ್ಮಾರಂ ಗುರೋಃಪದಂ ।
ವಿವೇಶ ಮಾನಸಸರೋ ಮೃಣಾಳಸೂಕ್ಷ್ಮಸೂತ್ರತಃ ॥ ೫೬ ॥

ತತ್ರ ಗಂತುಂ ನ ಶಕ್ತಾ ಸಾ ಬ್ರಹ್ಮಣಃ ಶಾಪಕಾರಣಾತ್ ।
ಸಾ ತಸ್ಥೌ ವಟಶಾಖಾಯಾಂ ಸರಸಸ್ತಟಸನ್ನಿಧೌ ॥ ೫೭ ॥

---

೫೪. ಏಳು ತಾಳೇಮರಗಳಷ್ಟು ಉದ್ದವಾದ, ಒಣಗಿಹೋದ ಗಂಟಲು ಮತ್ತು ತುಟಿಗಳುಳ್ಳ, ನೇಗಿಲಿನಂತೆ ವಕ್ರವಾಗಿಯೂ ಉದ್ದವಾಗಿಯೂ ಇರುವ ಹಲ್ಲುಗಳುಳ್ಳ, ಆ ಬ್ರಹ್ಮಹತ್ಯೆಯು ಇಂದ್ರನಿಗೆ ಬಹಳ ಭಯವನ್ನುಂಟುಮಾಡಿತು.

೫೫. ಮುಂದೆ ಹೆದರಿಕೆಯಿಂದ ಓಡುತ್ತಿರುವ ಇಂದ್ರನ ಹಿಂದೆಯೇ ದಯೆಯಿಲ್ಲದ, ಮಹಾಬಲದಿಂದ ಕೂಡಿದ, ಆ ಬ್ರಹ್ಮಹತ್ಯೆಯು ಕೈಯಲ್ಲಿ ಖಡ್ಗವನ್ನು ಧರಿಸಿ ವೇಗವಾಗಿ ಅಟ್ಟಿಸಿಕೊಂಡು ಓಡತೊಡಗಿತು.

೫೬. ಇಂದ್ರನು ಆ ಘೋರರೂಪದಿಂದ ತನ್ನ ಬೆನ್ನುಹತ್ತಿ ಬರುತ್ತಿರುವ ಬ್ರಹ್ಮಹತ್ಯೆಯನ್ನು ಕಂಡು ಗುರುವಿನ ಪಾದಗಳನ್ನು ನೆನೆಯುತ್ತ ನೆನೆಯುತ್ತ ಮಾನಸಸರೋವರಕ್ಕೆ ಹೋಗಿ ಸೂಕ್ಷ್ಮವಾದ ತಾವರೇ ದಂಟಿನ ಎಳೆಯ ಮೂಲಕ ಒಳಕ್ಕೆ ಪ್ರವೇಶಿಸಿದನು.

೫೭. ಆ ಬ್ರಹ್ಮಹತ್ಯೆಯು ಬ್ರಹ್ಮನ ಶಾಪವಿರುವಕಾರಣ ಮಾನಸ ಸರೋವರದೊಳಗೆ ಹೋಗಲು ಸಾಮರ್ಥ್ಯವಿಲ್ಲದುದಾಗಿ ಆ ಸರೋವರದ ದಡದಲ್ಲಿರುವ ಆಲದ ಮರದ ಕೊಂಬೆಯಲ್ಲಿ ವಾಸಿಸುತ್ತಿದ್ದಿತು.

ಅಥಾತ್ರ ನಹುಷೋ ಭೂಪಸ್ತ್ರಿ ಲೋಕೇಶೋ ಬಭೂವ ಹ ।
ಸ ಯಯಾಚೇ ಶಚೀಂ ದೇವಾನ್ ಬಲಿಷ್ಠೋ ದುರ್ಬಲಾನಪಿ ॥ ೫೮ ॥

ಶಚೀ ಶ್ರುತ್ವಾ ಮಹಾಭೀತಾ ತಾರಕಾಂ ಶರಣಂ ಯಯೌ ।
ತಾರಾ ನಿರ್ಭರ್ತ್ಸ್ಯ ಸ್ವಪತಿಂ ಭೃತ್ಯಪತ್ನೀಂ ರರಕ್ಷ ಚ ॥ ೫೯ ॥

ಶಚೀಮಾಶ್ವಾಸ್ಯ ಸ ಗುರುರ್ಜಗಾಮ ತತ್ಸರೋ ಮುದಾ ।
ಆಜುಹಾವ ಶುನಾಸೀರಂ ಕಾತರಂ ಹತಚೇತಸಂ ॥ ೬೦ ॥

॥ ಬೃಹಸ್ಪತಿರುವಾಚ ।

ಉತ್ತಿಷ್ಠೋತ್ತಿಷ್ಠ ಹೇ ವತ್ಸ ಭಯಂ ಕಿಂ ತೇ ಮಯಿ ಸ್ಥಿತೇ ।
ತ್ವದೀಶ್ವರಂ ಸ್ವರೇಣೈವ ನಿಶಾಮಯ ಭಯಂ ತ್ಯಜ ॥ ೬೧ ॥

---

೫೮. ಅನಂತರ ನಹುಷನು ಇಂದ್ರಪದವಿಗೆ ಬಂದನು. ಬಲಿಷ್ಠನಾದ ಆ ನಹುಷನು ಒಂದಾನೊಂದು ದಿನ ಬಲಹೀನರಾದ ದೇವತೆಗಳನ್ನು ಕುರಿತು ಶಚೀದೇವಿಯನ್ನು ತನ್ನ ಉಪಭೋಗಕ್ಕಾಗಿ ಕರೆತರುವಂತೆ ಆಜ್ಞೆಮಾಡಿದನು.

೫೯. ಈ ಮಾತನ್ನು ಕೇಳಿ ಶಚೀದೇವಿಯು ಬಹಳ ಗಾಬರಿಗೊಂಡು ತಾರಕಾದೇವಿಯನ್ನು ಮರೆಹೊಕ್ಕಳು. ತಾರಾದೇವಿಯು ತನ್ನ ಪತಿಗೆ ಹೇಳಿ ಭೃತ್ಯನ ಪತ್ನಿಯಾದ ಶಚೀದೇವಿಯನ್ನು ಕಷ್ಟದಿಂದ ಬಿಡಿಸಿ ಕಾಪಾಡಿದಳು.

೬೦. ಗುರುವು ಶಚೀದೇವಿಯನ್ನು ಸಮಾಧಾನಪಡಿಸಿ ಸಂತೋಷದಿಂದ ಮಾನಸ ಸರೋವರಕ್ಕೆ ಬಂದನು. ಭಯದಿಂದ ಗಾಬರಿಗೊಂಡು ದುಃಖಿತನಾದ ಇಂದ್ರನನ್ನು ಕರೆದನು.

೬೧. ಬೃಹಸ್ಪತಿಯು :—ಎದ್ದೇಳು ಮಗನೇ, ಏಳು ಏಳು. ನಾನು ಇರುವಾಗ ನಿನಗೆ ಭಯವೆಂತಹುದು? ಈ ನನ್ನ ಧ್ವನಿಯಿಂದಲೇ ನನ್ನನ್ನು ನಿನ್ನ ಗುರುವೆಂದು ತಿಳಿದು ಭಯವನ್ನು ಬಿಡು.

ಸ್ವರಂ ಬೃಹಸ್ಪತೇರ್ಜ್ಞಾತ್ವಾ ಸರ್ವಸಿದ್ಧೇಶ್ವರೋ ಹರಿಃ ।
ಸೂಕ್ಷ್ಮರೂಪಂ ಪರಿತ್ಯಜ್ಯ ಸ್ವರೂಪಂ ಚ ದಧಾರ ಸಃ ॥ ೬೨ ॥

ಉತ್ಥಾಯ ಸದ್ಯಃ ಸಂಭ್ರಾಂತೋ ಗುರುಂ ತಂ ಸೂರ್ಯವರ್ಚಸಂ ।
ದೃಷ್ಟ್ವಾ ನನಾಮ ಸಂಪ್ರೀತ್ಯಾ ಸಂಪ್ರೀತಂ ತ್ಯಕ್ತಕೋಪಕಂ ॥ ೬೩ ॥

ಪಾದಾಂಬುಜೇ ನಿಪತಿತಂ ರುದಂತಂ ಭಯವಿಹ್ವಲಂ ।
ನಿಧಾಯ ವಕ್ಷಸಿ ಪ್ರೇಮ್ಣಾ ರುರೋದ ಪ್ರೇಮವಿಹ್ವಲಃ ॥ ೬೪ ॥

ರುದಂತಂ ವಾಕ್ಪತಿಂ ತುಷ್ಟಂ ತುಷ್ಟ್ವಾವ ತ್ರಿದಶೇಶ್ವರ ।
ಪುಟಾಂಜಲಿಃ ಪುಲಕಿತೋ ಭಕ್ತಿನಮ್ರಾತ್ಮಕಂಧರಃ ॥ ೬೫ ॥

॥ ಇಂದ್ರ ಉವಾಚ ॥

ಕ್ಷಮಸ್ವ ಭಗವನ್ ದೋಷಂ ದಯಾಂ ಕುರು ಕೃಪಾನಿಧೇ ।
ಭೃತ್ಯಾಪರಾಧಂ ಸತತಂ ನ ಗೃಹ್ಣಾತಿ ಸದೀಶ್ವರಃ ॥ ೬೬ ॥

---

೬೨. ಬೃಹಸ್ಪತಿಯ ಸ್ವರವನ್ನು ತಿಳಿದುಕೊಂಡು ಸಕಲಸಿದ್ಧಿಗಳಿಗೂ ಒಡೆಯನಾದ ಇಂದ್ರನು ತನ್ನ ಸೂಕ್ಷ್ಮವಾದ ರೂಪವನ್ನು ಬಿಟ್ಟು ನಿಜರೂಪವನ್ನು ಧರಿಸಿದನು.

೬೩. ಆಕ್ಷಣವೇ ಇಂದ್ರನು ಮೇಲಕ್ಕೆದ್ದು ಗಾಬರಿಗೊಂಡು ಸೂರ್ಯನಂತೆ ತೇಜಸ್ವಿಯಾಗಿ ಕೋಪವನ್ನು ಬಿಟ್ಟು ಶಾಂತನಾಗಿರುವ ಗುರುವನ್ನು ನೋಡಿ ಸಂತೋಷದಿಂದ ನಮಸ್ಕಾರಮಾಡಿದನು.

೬೪. ತನ್ನ ಕಾಲುಗಳ ಮೇಲೆ ಬಿದ್ದು ಅಳುತ್ತಿರುವ ಭಯಗೊಂಡಿರುವ ಇಂದ್ರನನ್ನು ಬೃಹಸ್ಪತಿಯು ಎದೆಗೆ ಅಪ್ಪಿಕೊಂಡು ಪ್ರೀತಿಯಿಂದ ಅತ್ತನು.

೬೫. ಸಂತೋಷದಿಂದ ಅಳುತ್ತಿರುವ ಬೃಹಸ್ಪತಿಯನ್ನು ಇಂದ್ರನು ಎರಡು ಕೈಗಳನ್ನು ಜೋಡಿಸಿಕೊಂಡು ರೋಮಾಂಚಹೊಂದಿದ ಶರೀರವುಳ್ಳವನಾಗಿ ಭಕ್ತಿಯಿಂದ ಬಾಗಿದ ತಲೆಯುಳ್ಳವನಾಗಿ ಸ್ತೋತ್ರಮಾಡಿದನು.

೬೬. ಇಂದ್ರನು :—ಎಲೈ ಪೂಜ್ಯನೇ, ದಯಾನಿಧಿಯೇ, ನನ್ನ ಅಪರಾಧವನ್ನು ಕ್ಷಮಿಸಿ ನನ್ನ ಮೇಲೆ ದಯೆಯನ್ನು ಬೀರು. ಉತ್ತಮವಾದ ಗುರುಗಳು ಸೇವಕನ ಅಪರಾಧವನ್ನು ಯಾವಾಗಲೂ ಎಣಿಸುವುದಿಲ್ಲ.

ಸ್ವಭಾರ್ಯಾಸು ಸ್ವಶಿಷ್ಯೇಷು ಸ್ವಭೃತ್ಯೇಷು ಸುತೇಷು ಚ ।
ದುರ್ಬಲಃ ಸಬಲೋ ವಾऽಪಿ ಕೋ ದಂಡಂ ಕರ್ತುಮಕ್ಷಮಃ   ॥ ೬೭ ॥

ತ್ರಿಷು ಕೋಟಿಷು ದೇವೇಷು ದೇವ ಕೋऽಹಮಪಂಡಿತಃ ।
ತ್ವತ್ಪ್ರಸಾದಾತ್ಸುರಶ್ರೇಷ್ಠ ಕೃಪಯಾ ವರ್ಧಿತಸ್ತ್ವಯಾ   ॥ ೬೮ ॥

ಸಂಹರ್ತುಮೀಶಸ್ತ್ವಂ ಸರ್ವಮಹಂ ಕೋ ವಾऽಪಿ ಕೀಟವತ್ ।
ಸ್ವಯಂ ವಿಧಾತುಃ ಪೌತ್ರಶ್ಚ ಪುನಃ ಸ್ರಷ್ಟುಂ ಸ್ವಯಂಕ್ಷಮಃ   ॥ ೬೯ ॥

ಇತಿ ತಸ್ಯ ಸ್ತವಂ ಶ್ರುತ್ವಾ ಪರಿತುಷ್ಟೋ ಗುರುಃ ಸ್ವಯಂ ।
ಉವಾಚ ವಚನಂ ಪ್ರೀತ್ಯಾ ಪ್ರಸನ್ನವದನೇಕ್ಷಣಃ   ॥ ೭೦ ॥

---

೬೭. ತನ್ನ ಪತ್ನಿಯರಲ್ಲಿ, ತನ್ನ ಶಿಷ್ಯರಲ್ಲಿ, ತನ್ನ ಸೇವಕರಲ್ಲಿ, ತನ್ನ ಮಕ್ಕಳಲ್ಲಿಯೂ ಕೂಡ ದುರ್ಬಲನಾಗಿರಲಿ, ಪ್ರಬಲನಾಗಿರಲಿ ಯಾವನು ತಾನೇ ಶಿಕ್ಷೆಮಾಡಲು ಸಾಮರ್ಥ್ಯವಿಲ್ಲದವನಾಗಿರುತ್ತಾನೆ.

೬೮. ಮೂರು ಕೋಟಿ ದೇವತೆಗಳಲ್ಲಿ ನಾನು ಜ್ಞಾನವಿಲ್ಲದ ಅಲ್ಪನಾದ ದೇವತೆಯು ಎಲೈ ಗುರುದೇವನೇ, ನಿನ್ನ ಅನುಗ್ರಹದಿಂದ ನಾನು ನಿನ್ನಿಂದಲೇ ಮೇಲ್ಮೆಯನ್ನು ಹೊಂದಿದೆನು.

೬೯. ನೀನು ಈ ಸಕಲ ಸೃಷ್ಟಿಯನ್ನು ಕೂಡ ಸಂಹಾರಮಾಡಲು ಸಮರ್ಥನಾಗಿರುವಿ. ನಾನಾದರೋ ಯಾವುದೋ ಒಂದು ಸಣ್ಣಹುಳುವಿನಂತಿರುವೆನು. ನೀನು ಸಾಕ್ಷಾತ್ ಬ್ರಹ್ಮನ ಮೊಮ್ಮಗನಾಗಿ ಮತ್ತೆ ಈ ಜಗತ್ತನ್ನು ಸೃಷ್ಟಿಮಾಡುವುದಕ್ಕೂ ಸಮರ್ಥನಾಗಿರುವಿ.

೭೦. ಈ ಪ್ರಕಾರವಾದ ಇಂದ್ರನ ಮಾತನ್ನು ಕೇಳಿ ಸಂತೋಷಗೊಂಡು ಗುರುವು ಪ್ರಸನ್ನವಾದ ಮುಖವುಳ್ಳವನಾಗಿ ಈ ಪ್ರಕಾರ ಹೇಳತೊಡಗಿದನು.

॥ ಗುರುರುವಾಚ ॥

ಸ್ಥಿರೋ ಭವ ಮಹಾರಾಜ ನಿಶ್ಚಲಾಂ ಕಮಲಾಂ ಲಭ ।
ಸಂಪ್ರಾಪ್ಸ್ಯೇ ಪರಮೈಶ್ವರ್ಯಂ ಪೂರ್ವಸ್ಮಾಚ್ಚ ಚತುರ್ಗುಣಂ ॥ ೭೧ ॥

ಗಚ್ಛಾಮರಾವತೀಂ ವತ್ಸ ರಾಜ್ಯಂ ಕುರು ಪುರಂಧರ ।
ಹತಶತ್ರುರ್ಮತ್ಪ್ರಸಾದಾತ್ ಗತ್ವಾ ಪಶ್ಯ ಸತೀಂ ಶಚೀಂ ॥ ೭೨ ॥

ಇತ್ಯೇವಮುಕ್ತ್ವಾ ಸ ಗುರುಃ ಸಶಿಷ್ಯೋ ಗಂತುಮುದ್ಯತಃ ।
ದದರ್ಶ ಪುರತೋ ಘೋರಾಂ ಬ್ರಹ್ಮಹತ್ಯಾಂ ಸುದುಃಸಹಾಂ ॥ ೭೩ ॥

ದೃಷ್ಟ್ವಾ ಶಕ್ರೋ ಮಹಾಭೀತಸ್ತಂ ಗುರುಂ ಶರಣಂ ಯಯೌ ।
ಬೃಹಸ್ಪತಿರ್ಮಹಾಭೀತಃ ಸಸ್ಮಾರ ಮಧುಸೂದನಂ ॥ ೭೪ ॥

ಏತಸ್ಮಿನ್ನಂತರೇ ತತ್ರ ವಾಗ್ಬಭೂವಾಶರೀರಿಣೀ ।
ಸ್ವಲ್ಪಾಕ್ಷರಾ ಚ ಬಹ್ವರ್ಥಾ ತಾಂ ಶುಶ್ರಾವ ಬೃಹಸ್ಪತಿಃ ॥ ೭೫ ॥

---

೭೧. ಗುರುವು :—ಎಲೈ ಮಹಾತ್ಮನೇ, ಧೈರ್ಯವನ್ನು ಹೊಂದು. ಮೊದಲಿಗಿಂತಲೂ ನಾಲ್ಕರಷ್ಟು ಉತ್ತಮವಾದ ಐಶ್ವರ್ಯವನ್ನು ಪಡೆದುಕೊಂಡು ಸ್ಥಿರವಾದ ರಾಜ್ಯಲಕ್ಷ್ಮಿಯನ್ನು ಹೊಂದು.

೭೨. ಎಲೈ ಮಗನೇ, ನನ್ನ ಅನುಗ್ರಹದಿಂದ ಹತರಾವ ಶತ್ರುಗಳುಳ್ಳವನಾಗಿ ಅಮರಾವತಿಗೆ ಹೋಗು ಅಲ್ಲಿ ಪತಿವ್ರತಾಶಿರೋಮಣಿಯಾದ ಶಚೀದೇವಿಯನ್ನು ನೋಡು.

೭೩. ಈ ಪ್ರಕಾರ ಹೇಳಿ, ಆ ಬೃಹಸ್ಪತಿಯು ಶಿಷ್ಯರೊಡನೆ ಹೊರಡಲುದ್ಯುಕ್ತನಾದನು. ಆಗ ಎದುರಿನಲ್ಲಿ ಭಯಂಕರವಾದ ಬ್ರಹ್ಮಹತ್ಯೆಯನ್ನು ಕಂಡನು.

೭೪. ಇಂದ್ರನು ಆ ಬ್ರಹ್ಮಹತ್ಯೆಯನ್ನು ನೋಡಿ ಬಹಳ ಹೆದರಿದವನಾಗಿ ಆ ಗುರುವನ್ನು ಮರೆಹೊಕ್ಕನು. ಬೃಹಸ್ಪತಿಯೂ ಸಹ ಬಹಳ ಭಯಗೊಂಡವನಾಗಿ ವಿಷ್ಣುವನ್ನು ಸ್ಮರಿಸಿದನು.

೭೫. ಈ ಸಮಯದಲ್ಲಿ ಒಂದು ಅಶರೀರವಾಣಿಯು ಆಯಿತು. ಸ್ವಲ್ಪ ಅಕ್ಷರಗಳಿಂದ ಕೂಡಿ ಬಹಳ ಅರ್ಥವನ್ನು ಕೊಡುವ ಆ ವಾಣಿಯನ್ನು ಬೃಹಸ್ಪತಿಯು ಕೇಳಿದನು.

ಸಂಸಾರವಿಜಯಂ ನಾಮ ಸರ್ವಾಶುಭವಿನಾಶನಂ |
ರಾಧಿಕಾಕವಚಂ ದತ್ವಾ ಶಿಷ್ಯಂ ರಕ್ಷಾಧುನೇತಿ ಚ || ೭೬ ||

ತದಾ ತ್ವತ್ಕವಚಂ ದತ್ವಾ ಶಿಷ್ಯಾರ್ಥಂ ಶಿಷ್ಯವತ್ಸಲಃ |
ಚಕಾರ ಭಸ್ಮಸಾತ್ತಾಂ ಚ ಹುಂಕಾರೇಣೈವ ಲೀಲಯಾ || ೭೭ ||

ತದಾ ಶಿಷ್ಯಂ ಗೃಹೀತ್ವಾಽಥ ಗತ್ವಾ ತಾಮಮರಾವತೀಂ |
ದದರ್ಶ ಚ್ಛಿನ್ನಭಗ್ನಾಂ ಚ ಶತ್ರುಣಾ ವಚನಾದ್ಗುರೋಃ || ೭೮ ||

ಭರ್ತುರಾಗಮನಂ ಶ್ರುತ್ವಾ ಶಚೀ ಸಂಹೃಷ್ಟಮಾನಸಾ |
ಪ್ರಣಮ್ಯ ಚ ಗುರುಂ ಭಕ್ತ್ಯಾ ಸ್ವಕಾಂತಂ ಪ್ರಣನಾಮ ಸಾ || ೭೯ ||

ಶ್ರುತ್ವಾಽಗಮನಮಿಂದ್ರಸ್ಯ ಸಮಾಜಗ್ಮುಃ ಸುರಾಃ ಪ್ರಿಯೇ |
ಋಷಯೋ ಮುನಯಶ್ಚೈವ ಹರ್ಷಗದ್ಗದಮಾನಸಾಃ || ೮೦ ||

---

೭೬. 'ಸಮಸ್ತವಾದ ಅಮಂಗಳಗಳನ್ನೂ ನಾಶಮಾಡುವ ಸಂಸಾರವಿಜಯ ವೆಂಬ ಹೆಸರಿನ ರಾಧಾಕವಚವನ್ನು ಈಗ ಶಿಷ್ಯನಿಗೆ ಕೊಟ್ಟು ಅವನನ್ನು ಕಾಪಾಡು.' ಎಂದಿತು.

೭೭. ಎಲೈ ರಾಧೆಯೇ, ಶಿಷ್ಯನಲ್ಲಿ ಪ್ರೀತಿಯುಳ್ಳ ಬೃಹಸ್ಪತಿಯು ನಿನ್ನ ಕವಚವನ್ನು ಶಿಷ್ಯನಾದ ಇಂದ್ರನಿಗೆ ಉಪದೇಶಮಾಡಿ ಹುಂಕಾರಮಾತ್ರದಿಂದಲೇ ಸುಲಭವಾಗಿ ಆ ಬ್ರಹ್ಮಹತ್ಯೆಯನ್ನು ಸುಟ್ಟು ಬೂದಿಮಾಡಿದನು.

೭೮. ಅನಂತರ ಶಿಷ್ಯನನ್ನು ಕರೆದುಕೊಂಡು ಅಮರಾವತಿಗೆ ಹೋಗಿ ಶತ್ರುವಿನಿಂದ ಕತ್ತರಿಸಲ್ಪಟ್ಟು ಮುರಿದುಹೋಗಿರುವ ಪಟ್ಟಣವನ್ನು ನೋಡಿದನು.

೭೯. ಶಚೀದೇವಿಯು ಗಂಡನು ಬಂದಿರುವುದನ್ನು ಕೇಳಿ ಬಹಳ ಸಂತೋಷಗೊಂಡವಳಾಗಿ ಭಕ್ತಿಯಿಂದ ಗುರುವಿಗೆ ನಮಸ್ಕಾರಮಾಡಿ ಅನಂತರ ತನ್ನ ಪತಿಗೂ ಕೂಡ ನಮಸ್ಕಾರವನ್ನು ಮಾಡಿದಳು.

೮೦. ಎಲೈ ಪ್ರಿಯೆಯೇ, ಇಂದ್ರನು ಬಂದ ವರ್ತಮಾನವನ್ನು ಕೇಳಿ ಸಕಲ ದೇವತೆಗಳೂ, ಋಷಿಗಳೂ, ಮುನಿಗಳೂ ಅತ್ಯಂತ ಸಂತೋಷದಿಂದ ಕೂಡಿದವರಾಗಿ ಬಂದರು.

ಯೋಜಯಾಮಾಸ ಸತ್ಕಾರಂ ನಿರ್ಮಾತುಮಮರಾವತೀಂ ।
ಪೂರ್ಣಮಬ್ದಶತಂ ಶಿಲ್ಪೀ ನಿರ್ಮಮೇ ರುಚಿರಾಂ ಪುರೀಂ ॥ ೮೧ ॥

ನಾನಾರತ್ನವಿಚಿತ್ರಾಢ್ಯಾಂ ಮಣಿರತ್ನೇಂದ್ರನಿರ್ಮಿತಾಂ ।
ಮನೋಹರಾಂ ನಿರುಪಮಾಂ ನ ಹಿ ತುಷ್ಟೋ ಯಯೌ ಹರಿಃ ॥ ೮೨ ॥

ವಿಶ್ವಕರ್ಮಾ ಗೃಹಂ ಗಂತುಂ ನ ಶಶಾಕ ವಿನಾಽಽಜ್ಞಯಾ ।
ಪರಮೋದ್ವಿಗ್ನಚಿತ್ತಶ್ಚ ಬ್ರಹ್ಮಾಣಂ ಶರಣಂ ಯಯೌ ॥ ೮೩ ॥

ವಿಜ್ಞಾಯ ತದಭಿಪ್ರಾಯಂ ತಮುವಾಚ ವಿಧಿಃ ಸ್ವಯಂ ।
ತವ ಕರ್ಮಕ್ಷಯಾದೇವ ಉತ್ತಮೋ ಭವಿತೇತಿ ಚ ॥ ೮೪ ॥

ಶ್ರುತ್ವಾ ತದ್ವಚನಂ ಕಾರುಃ ಶೀಘ್ರಂ ಪ್ರಾಪಾಮರಾವತೀಂ ।
ಬ್ರಹ್ಮಾ ಜಗಾಮ ವೈಕುಂಠಂ ಪ್ರಣಮ್ಯೋವಾಚ ಮಾತರಂ ॥ ೮೫ ॥

೮೧–೮೨. ಇಂದ್ರನು ಅಮರಾವತಿಯನ್ನು ನಿರ್ಮಾಣಮಾಡಲು ಉತ್ತಮ ಶಿಲ್ಪಿಯನ್ನು ನಿಯಮಿಸಿದನು. ವಿಶ್ವಕರ್ಮನೆಂಬ ಶಿಲ್ಪಿಯು ನಾನಾ ರತ್ನಗಳಿಂದ ವಿಚಿತ್ರವಾದ ರತ್ನಮಣಿಗಳಿಂದ ಮಾಡಲ್ಪಟ್ಟ ಮನೋಹರವಾದ ಎಣೆಯಿಲ್ಲದ ಸುಂದರವಾದ ಪಟ್ಟಣವನ್ನು ಒಂದುನೂರು ವರುಷಗಳ ಅವಧಿಯಲ್ಲಿ ನಿರ್ಮಾಣ ಮಾಡಿದನು. ಆದರೆ ಅದರಿಂದ ಇಂದ್ರನು ಸಂತೋಷಪಡಲಿಲ್ಲ.

೮೩. ವಿಶ್ವಕರ್ಮನು ಇಂದ್ರನ ಅಪ್ಪಣೆಯನ್ನು ಪಡೆದಲ್ಲದೆ ಮನೆಗೆ ಹೋಗಲು ಸಾಧ್ಯವಿರಲಿಲ್ಲ. ಇದರಿಂದ ವ್ಯಸನಗೊಂಡವನಾಗಿ ಬ್ರಹ್ಮನನ್ನು ಮರೆಹೊಕ್ಕನು.

೮೪. ಬ್ರಹ್ಮನು ಅವನ ಅಭಿಪ್ರಾಯವನ್ನು ತಿಳಿದವನಾಗಿ ಅವನನ್ನು ಕುರಿತು ನಿನ್ನ ಕೆಲಸದ ಸಂಪೂರ್ಣತೆಯಿಂದ ಅದು ಉತ್ತಮವಾಗುತ್ತದೆಯೆಂದು ನುಡಿದನು.

೮೫. ಆ ಬ್ರಹ್ಮನ ಮಾತನ್ನು ಕೇಳಿ ಶಿಲ್ಪಿಯು ಮತ್ತೆ ಅಮರಾವತಿಗೆ ಬಂದನು. ಬ್ರಹ್ಮನು ವೈಕುಂಠಕ್ಕೆ ಹೋಗಿ ತಾಯಿಯಾದ ಲಕ್ಷ್ಮಿಗೆ ನಮಸ್ಕರಿಸಿ ನಡೆದ ಸಮಾಚಾರಗಳನ್ನು ತಿಳಿಸಿದನು.

ಹರಿರ್ಬ್ರಹ್ಮಾಣಮಾಶ್ವಾಸ್ಯ ಪ್ರಸ್ಥಾಪ್ಯ ಸ್ವಗೃಹಂ ಚ ತಂ ।
ವಿಪ್ರರೂಪಂ ಸಮಾಸ್ಥಾಯ ಚಾಽಽಜಗಾಮಾಮರಾವತೀಂ ॥ ೮೬ ॥

ದಂಡೀ ಛತ್ರೀ ಶುಕ್ಲವಾಸಾ ಬಿಭ್ರತ್ತಿಲಕಮುಜ್ಜ್ವಲಂ ।
ಅತಿಖರ್ವಃ ಶುಕ್ಲದಂತಃ ಸಸ್ಮಿತಃ ಸುಮನೋಹರಃ ॥ ೮೭ ॥

ವಯಸಾಽತಿಶಿಶುರ್ಬುದ್ಧ್ಯಾ ಜ್ಞಾನವೃದ್ಧಾತ್ಪ್ರವಿಚಕ್ಷಣಃ ।
ಸ್ವಯಂ ವಿಧಾತುರ್ಧಾತಾ ಚ ದಾತಾ ಚ ಸರ್ವಸಂಪದಾಂ ॥ ೮೮ ॥

ಇಂದ್ರದ್ವಾರೇ ಸಮುತ್ತಿಷ್ಠನ್ ದ್ವಾರಪಾಲಮುವಾಚ ಹ ।
ಬ್ರೂಹೀಂದ್ರಂ ಬ್ರಾಹ್ಮಣೋ ದ್ವಾರೇ ಶೀಘ್ರಂ ತ್ವಾಂ ದ್ರಷ್ಟುಮಾಗತಃ ॥ ೮೯ ॥

ಇತ್ಯೇವಂ ವಚನಂ ಶ್ರುತ್ವಾ ದ್ವಾರಿ ಜ್ಞಾನಂ ಚಕಾರ ತಂ ।
ಸ ಚ ಶೀಘ್ರಂ ಸಮಾಗಮ್ಯ ದದರ್ಶ ಬ್ರಾಹ್ಮಣಾರ್ಭಕಂ ॥ ೯೦ ॥

---

೮೬. ವಿಷ್ಣುವು ಬ್ರಹ್ಮನನ್ನು ಸಮಾಧಾನಮಾಡಿಸಿ ಅವನನ್ನು ಮನೆಗೆ ಕಳುಹಿಸಿ ತಾನು ಬ್ರಾಹ್ಮಣರೂಪವನ್ನು ಹೊಂದಿ ಅಮರಾವತಿಗೆ ಬಂದನು.

೮೭-೮೯. ದಂಡವನ್ನೂ ಛತ್ರಿಯನ್ನೂ ಧರಿಸಿ, ಬಿಳಿಯ ವಸ್ತ್ರದಿಂದ ಕೂಡಿದವನಾಗಿ ಪ್ರಕಾಶಮಾನವಾದ ತಿಲಕವನ್ನಿಟ್ಟುಕೊಂಡು, ಅತ್ಯಂತ ಕುಳ್ಳನಾಗಿ, ಶುಭ್ರವಾದ ಹಲ್ಲುಗಳಿಂದ ಕೂಡಿ ಮಂದಹಾಸವನ್ನು ಬೀರುತ್ತ, ನೋಡುವವರ ಮನಸ್ಸನ್ನು ಸೆಳೆಯುವ ರೂಪವುಳ್ಳವನಾಗಿ, ವಯಸ್ಸಿನಲ್ಲಿ ಚಿಕ್ಕವನಾಗಿ, ಬುದ್ಧಿಯಲ್ಲಿ ಜ್ಞಾನವೃದ್ಧರಿಗೂ ಮಿಗಿಲಾಗಿ, ತಾನು ಬ್ರಹ್ಮನಿಗೂ ಕಾರಣನಾಗಿ, ಸಕಲ ಸಂಪತ್ತುಗಳನ್ನು ಕೊಡುವವನಾಗಿಯೂ ಇದ್ದ ಆ ಬ್ರಾಹ್ಮಣನು ಇಂದ್ರನ ಮನೆಯ ಬಾಗಿಲಿನಲ್ಲಿ ನಿಂತುಕೊಂಡು ದ್ವಾರಪಾಲಕರನ್ನು ಕುರಿತು 'ಬ್ರಾಹ್ಮಣನೊಬ್ಬನು ನಿನ್ನನ್ನು ಜಾಗ್ರತೆಯಾಗಿ ನೋಡಲು ಬಾಗಿಲಿನಲ್ಲಿ ನಿಂತಿರುವೆನೆಂದು' ಇಂದ್ರನಿಗೆ ತಿಳಿಸು ಎಂದು ನುಡಿದನು.

೯೦. ಈ ಮಾತನ್ನು ಕೇಳಿ ದ್ವಾರಪಾಲಕನು ಇಂದ್ರನಿಗೆ ಹೋಗಿ ವಿಷಯವನ್ನು ತಿಳಿಸಿದನು. ಆ ಇಂದ್ರನೂ ಕೂಡ ಶೀಘ್ರವಾಗಿ ಬಂದು ಬ್ರಾಹ್ಮಣ ಕುಮಾರನನ್ನು ಕಂಡನು.

ಬಾಲಕಾನಾಂ ಬಾಲಿಕಾನಾಂ ಸಮೂಹೈಃ ಪರಿವೇಷ್ಟಿತಂ ।
ಹಸದ್ಭಿಶ್ಚ ಮಹೋತ್ಸಾಹಾತ್ಸಸ್ಮಿತಂ ತೇಜಸಾನ್ವಿತಂ ॥ ೯೧ ॥

ಪ್ರಣನಾಮ ಹರಿರ್ಭಕ್ತ್ಯಾ ತಂ ಹರಿಂ ಶಿಶುರೂಪಿಣಂ ।
ಆಶಿಷಂ ಯುಯುಜೇ ಪ್ರೀತ್ಯಾ ತಂ ಹರಿರ್ಭಕ್ತವತ್ಸಲಃ ॥ ೯೨ ॥

ಮಧುಪರ್ಕಾದಿಕಂ ದತ್ವಾ ಶಕ್ರಃ ಪೂಜಾಂ ಚಕಾರ ತಂ ।
ಪಪ್ರಚ್ಛಾಗಮನಂ ಕಸ್ಮಾದ್ವದೇತಿ ವಿಪ್ರಬಾಲಕಂ ॥ ೯೩ ॥

ಇಂದ್ರಸ್ಯ ವಚನಂ ಶ್ರುತ್ವಾ ತಮುವಾಚ ದ್ವಿಜಾರ್ಭಕಃ ।
ಮೇಘಗಂಭೀರಯಾ ವಾಚಾ ಬೃಹಸ್ಪತಿಗುರೋರ್ಗುರುಃ ॥ ೯೪ ॥

॥ ಬ್ರಾಹ್ಮಣ ಉವಾಚ ॥

ಸಮಾಗತೋಽಹಂ ತ್ವಾಂ ದ್ರಷ್ಟುಂ ಪ್ರಷ್ಟುಂ ವಚನಮೀಪ್ಸಿತಂ ।
ಚಿತ್ರಂ ನಗರನಿರ್ಮಾಣಂ ಸಮಾಕರ್ಣ್ಯಾದ್ಭುತಂ ಹರೇಃ ॥ ೯೫ ॥

೯೧-೯೨. ಬಾಲಕರೂ, ಬಾಲಕಿಯರೂ ಸಂತೋಷದಿಂದ ನಗುತ್ತ ಅವನ ಸುತ್ತಲೂ ಗುಂಪುಕೂಡಿಕೊಂಡಿರಲು, ಮಂದಹಾಸವನ್ನು ಬೀರುತ್ತ ಮಹಾ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಆ ಬಾಲರೂಪನಾದ ಹರಿಯನ್ನು ನೋಡಿ ಇಂದ್ರನು ಭಕ್ತಿಯಿಂದ ನಮಸ್ಕಾರಮಾಡಿದನು. ಭಕ್ತವತ್ಸಲನಾದ ಹರಿಯು ಸಂತೋಷದಿಂದ ಇಂದ್ರನಿಗೆ ಆಶೀರ್ವಾದವನ್ನು ಮಾಡಿದನು.

೯೩. ಮಧುಪರ್ಕ ಮುಂತಾದುದನ್ನು ಕೊಟ್ಟು ಇಂದ್ರನು ಅವನನ್ನು ಪೂಜಿಸಿದನು. ಮತ್ತು ಯಾವ ಕಾರ್ಯಕ್ಕಾಗಿ ಇಲ್ಲಿಗೆ ಬಂದಿರುವಿ ಹೇಳು ಎಂದು ಕೇಳಿದನು.

೯೪. ಬೃಹಸ್ಪತ್ಯಾಚಾರ್ಯರ ಗುರುವಿಗೆ ಗುರುವಾದ ಆ ಬ್ರಾಹ್ಮಣ ವೇಷದ ಬಾಲಕನು ಇಂದ್ರನ ಮಾತನ್ನು ಕೇಳಿ ಮೇಘದ ಧ್ವನಿಯಿಂತೆ ಗಂಭೀರವಾದ ಧ್ವನಿಯಿಂದ ಮಾತನಾಡಿದನು.

೯೫. ಬ್ರಾಹ್ಮಣನು :—ಎಲೈ ಇಂದ್ರನೇ, ಈ ಆಶ್ಚರ್ಯಕರವಾಗಿಯೂ, ವಿಚಿತ್ರವಾಗಿಯೂ ಇರುವ ಈ ನಗರದ ನಿರ್ಮಾಣ ವಿಷಯವನ್ನು ಕೇಳಿ ನಿನ್ನನ್ನು ನೋಡಿ ಕೆಲವು ಮಾತುಗಳನ್ನಾಡಬೇಕೆಂದು ಬಂದಿರುವೆನು.

ಕತಿವರ್ಷಂ ಚ ನಿರ್ಮಾಣೇ ಭವಾನ್ ಸಂಕಲ್ಪಿತೋ ಯಥಾ |
ಕತಿಚಿತ್ತಾಂ ವಿಶ್ವಕರ್ಮಾ ನಿರ್ಮಾಣಂ ವಾ ಕರಿಷ್ಯತಿ || ೯೬ ||

ಏವಂಭೂತಂ ಚ ನಿರ್ಮಾಣಂ ನ ಕೇನೇಂದ್ರೇಣ ನಿರ್ಮಿತಂ |
ನೈವಂವಿಧಂ ಸುನಿರ್ಮಾಣೇ ವಿಶ್ವಕರ್ಮಾ ಪರಃ ಕ್ಷಮಃ || ೯೭ ||

ಬಾಲಕಸ್ಯ ವಚಃ ಶ್ರುತ್ವಾ ಜಹಾಸ ಸ ಸುರೇಶ್ವರಃ |
ಸಂಪನ್ಮದಾತಿಮತ್ತಶ್ಚ ಪುನಃ ಪಪ್ರಚ್ಛ ಬಾಲಕಂ || ೯೮ ||

ಕತೀಂದ್ರಾಣಾಂ ಸಮೂಹಶ್ಚ ತ್ವಯಾ ದೃಷ್ಟಃ ಶ್ರುತೋಽಥವಾ |
ವಿಶ್ವಕರ್ಮಾ ಕತಿವಿಧಸ್ತಂ ಮೇ ಬ್ರೂಹಿ ಶಿಶೋಽಧುನಾ || ೯೯ ||

ಶಕ್ರಸ್ಯ ವಚನಂ ಶ್ರುತ್ವಾ ಪ್ರಹಸ್ಯ ವಿಪ್ರಬಾಲಕಃ |
ತಮುವಾಚ ಶ್ರುತಿಸುಖಂ ಪೀಯೂಷಸದೃಶಂ ವಚಃ || ೧೦೦ ||

---

೯೬. ನೀನು ಎಷ್ಟು ವರುಷಗಳವರೆಗೆ ಈ ನಗರ ನಿರ್ಮಾಣ ಕಾರ್ಯವನ್ನು ನಡೆಸಬೇಕೆಂದಿರುವೆ? ವಿಶ್ವಕರ್ಮನೂ ಸಹ ಎಷ್ಟು ವರುಷಗಳಕಾಲ ಈ ನಗರ ನಿರ್ಮಾಣ ಕಾರ್ಯವನ್ನು ನೆರವೇರಿಸುವನು?

೯೭. ಈ ರೀತಿಯಾದ ನಗರನಿರ್ಮಾಣವನ್ನು ಹಿಂದೆ ಯಾವ ಇಂದ್ರರೂ ಮಾಡಿರಲಿಲ್ಲ. ಇಂಥಾ ನಿರ್ಮಾಣಕಾರ್ಯದಲ್ಲಿ ವಿಶ್ವಕರ್ಮನು ಏನೂ ಸಮರ್ಥನಲ್ಲ.

೯೮. ಬಾಲಕನ ಮಾತನ್ನು ಕೇಳಿ ಆ ಇಂದ್ರನು ನಕ್ಕನು. ಐಶ್ವರ್ಯ ಮದದಿಂದ ಬಹಳ ಮತ್ತನಾಗಿ ಆ ಬಾಲಕನನ್ನು ಕುರಿತು ಹೀಗೆ ಹೇಳಿದನು.

೯೯. ಎಲೈ ಬಾಲಕನೇ, ಎಷ್ಟುಜನ ಇಂದ್ರರ ಸಮೂಹವನ್ನು ನೀನು ನೋಡಿರುವೆ? ಅಥವಾ ಕೇಳಿರುವೆ? ಮತ್ತು ಎಷ್ಟುಮಂದಿ ವಿಶ್ವಕರ್ಮರಿರುವರು? ಎಂಬುದನ್ನು ನನಗೆ ತಿಳಿಸುವವನಾಗು.

೧೦೦. ಆ ಬ್ರಾಹ್ಮಣ ಬಾಲಕನು ಇಂದ್ರನ ಮಾತನ್ನು ಕೇಳಿ ನಗುತ್ತ ಅವನನ್ನು ಕುರಿತು ಕಿವಿಗಳಿಗೆ ಇಂಪಾಗಿಯೂ, ಅಮೃತಕ್ಕೆ ಸಮಾನವಾಗಿಯೂ ಇರುವ ಮಾತುಗಳನ್ನು ಹೇಳತೊಡಗಿದನು.

|| ಬ್ರಾಹ್ಮಣ ಉವಾಚ ||

ಜಾನಾಮಿ ಕಾಶ್ಯಪಂ ತಾತ ತವ ತಾತಂ ಪ್ರಜಾಪತಿಂ ।
ಮುನಿಂ ಮರೀಚಿನಾಮಾನಂ ತತ್ತಾತಂ ಚ ತಪೋನಿಧಿಂ || ೧೦೧ ||

ನಾಭಿಪದ್ಮೋದ್ಭವಂ ವಿಷ್ಣೋಃ ಸ್ತುತ್ವಾ ತಂ ವಿಧಿಮೀಶ್ವರಂ ।
ರಕ್ಷಿತಾರಂ ಚ ತಂ ವಿಷ್ಣುಂ ಪರಂ ಸತ್ವಗುಣಾನ್ವಿತಂ || ೧೦೨ ||

ಏಕಾರ್ಣವಂ ಚ ಪ್ರಲಯಂ ಸರ್ವಶೂನ್ಯಂ ಭಯಾನಕಂ ।
ಸೃಷ್ಟಿಂ ಕತಿವಿಧಾಂ ಶಕ್ರ ಕಲ್ಪಂ ಕತಿವಿಧಂ ಧ್ರುವಂ || ೧೦೩ ||

ಬ್ರಹ್ಮಾಂಡಂ ಚ ಕತಿವಿಧಂ ಬ್ರಹ್ಮವಿಷ್ಣುಮಹೇಶ್ವರಂ ।
ಬ್ರಹ್ಮಾಂಡೇಷು ಕತಿವಿಧಾನ್ ಇಂದ್ರಾನ್ ಕೋ ಗಂತುಮೀಶ್ವರ || ೧೦೪ ||

---

೧೦೧. ಬ್ರಾಹ್ಮಣನು :—ನಾನು ನಿನ್ನ ತಂದೆಯಾದ ಕಶ್ಯಪಬ್ರಹ್ಮನನ್ನು ತಿಳಿದಿರುವೆನು. ಮತ್ತು ಆ ಕಶ್ಯಪನ ತಂದೆಯೂ, ತಪಸ್ವಿಶ್ರೇಷ್ಠನೂ ಆದ ಮರೀಚಿ ಮುನಿಯನ್ನು ತಿಳಿದಿರುವೆನು.

೧೦೨. ವಿಷ್ಣುವಿನ ನಾಭಿಕಮಲದಲ್ಲಿ ಹುಟ್ಟಿ ಆ ವಿಷ್ಣುವನ್ನು ಸ್ತೋತ್ರ ಮಾಡಿದ ಜಗತ್ತನ್ನು ಸೃಷ್ಟಿಸಿದ ಬ್ರಹ್ಮನನ್ನೂ, ಸತ್ವಗುಣದಿಂದ ಕೂಡಿದ ಜಗದ್ರಕ್ಷಕನಾದ ವಿಷ್ಣುವನ್ನೂ ಕೂಡ ಬಲ್ಲೆನು.

೧೦೩. ಕೇವಲ ಲಯಮಯವಾದ ಪ್ರಳಯವನ್ನೂ, ಸರ್ವಶೂನ್ಯವಾದ ಭಯಂಕರ ಸ್ಥಿತಿಯನ್ನೂ, ಅನೇಕ ವಿಧವಾದ ಸೃಷ್ಟಿಯನ್ನೂ, ಅನೇಕ ಕಲ್ಪಗಳನ್ನೂ ಬಲ್ಲೆನು.

೧೦೪. ಅನೇಕ ವಿಧವಾದ ಬ್ರಹ್ಮಾಂಡಗಳನ್ನೂ ಅನೇಕಮಂದಿ ಬ್ರಹ್ಮವಿಷ್ಣುಮಹೇಶ್ವರರನ್ನೂ ಬಲ್ಲೆನು. ಅನೇಕ ಬ್ರಹ್ಮಾಂಡಗಳಲ್ಲಿರುವ ಇಂದ್ರರನ್ನು ತಿಳಿಯಲು ಯಾವನು ಸಮರ್ಥನು.

ಯದಿ ಸಂಖ್ಯಾಸ್ತಿ ರೇಣೂನಾಂ ಧರಾಯಾಂ ಚ ಸುರಾಧಿಪ ।
ತಥಾಽಪಿ ಸಂಖ್ಯಾ ಶಕ್ರಾಣಾಂ ನಾಸ್ತ್ಯೇವೇತಿ ವಿದುರ್ಬುಧಾಃ ॥ ೧೦೫ ॥

ಶಕ್ರಸ್ಯಾಽಯುಶ್ಚಾಧಿಕಾರೋ ಯುಗಾನಾಮೇಕಸಪ್ತತಿಃ ।
ಅಷ್ಟಾವಿಂಶತಿಶಕ್ರಾಣಾಂ ಪತನೇಽಹರ್ನಿಶಂ ವಿಧೇಃ ॥ ೧೦೬ ॥

ವಿಧೇರಷ್ಟೋತ್ತರಶತಮಾಯುರೇವ ಪ್ರಮಾಣತಃ ।
ಸುರೇಂದ್ರಾಣಾಂ ಚ ಕಾ ಸಂಖ್ಯಾ ನಾಸ್ತಿ ಸಂಖ್ಯಾ ವಿಧೇರಪಿ ॥ ೧೦೭ ॥

ಬ್ರಹ್ಮಾಂಡಸಂಖ್ಯಾ ಯತ್ರ ಕ್ವ ಬ್ರಹ್ಮವಿಷ್ಣುಮಹೇಶ್ವರಾಃ ।
ಮಹಾವಿಷ್ಣೋರ್ಲೋಮಕೂಪೋದ್ಭವೇ ತೋಯೇ ಸುನಿರ್ಮಲೇ ॥೧೦೮॥

ಬ್ರಹ್ಮಾಂಡೇಽಸ್ತಿ ಯಥಾ ನೌಕಾ ಭವತೋಯೇ ಚ ಕೃತ್ರಿಮೇ ।
ಏವಂ ಲೋಮ್ನಃ ಪ್ರಮಾಣೇನ ಬ್ರಹ್ಮಾಂಡಾಃ ಸಂತ್ಯಸಂಖ್ಯಕಾಃ ॥ ೧೦೯ ॥

---

೧೦೫. ಎಲೈ ದೇವೇಂದ್ರನೇ, ಭೂಮಿಯಲ್ಲಿರುವ ಧೂಳಿಯ ಕಣಗಳನ್ನು ಲೆಕ್ಕಮಾಡಬಹುದಾದರೂ ಸಹ ಇಂದ್ರರನ್ನು ಲೆಕ್ಕ ಮಾಡಲು ಸಾಧ್ಯವಿಲ್ಲ ಎಂಬುದಾಗಿ ದೊಡ್ಡ ವಿದ್ವಾಂಸರು ತಿಳಿಯುತ್ತಾರೆ.

೧೦೬. ಇಂದ್ರನ ಆಯುಃಪ್ರಮಾಣ ಮತ್ತು ಅಧಿಕಾರಾವಧಿಯು ಎಪ್ಪತ್ತೊಂದು ಯುಗಗಳು. ಇಪ್ಪತ್ತೆಂಟು ಇಂದ್ರರ ಅವಧಿಯು ಪೂರ್ತಿಯಾದರೆ ಬ್ರಹ್ಮನಿಗೆ ಒಂದು ಹಗಲು ರಾತ್ರಿಯಾಗುವುದು.

೧೦೭. ಬ್ರಹ್ಮನಿಗೆ ಒಂದುನೂರಎಂಟು ವರುಷಗಳು ಮಾತ್ರ ಆಯುಃ ಪ್ರಮಾಣವು. ಬ್ರಹ್ಮರ ಲೆಕ್ಕವೇ ಇಲ್ಲದಿರುವಾಗ ಇಂದ್ರರ ಲೆಕ್ಕವೆಲ್ಲಿಯದು ?

೧೦೮. ಬ್ರಹ್ಮಾಂಡಗಳ ಮತ್ತು ಬ್ರಹ್ಮವಿಷ್ಣುಮಹೇಶ್ವರರ ಸಂಖ್ಯೆಯಂತೂ ಇಲ್ಲವೇ ಇಲ್ಲ. ಮಹಾವಿಷ್ಣುವಿನ ರೋಮಕೂಪದಿಂದುಂಟಾದ ನೀರಿನಲ್ಲಿ ಈ ಬ್ರಹ್ಮಾಂಡಗಳು ತೇಲಾಡುತ್ತಿರುವುವು

೧೦೯. ಬ್ರಹ್ಮಾಂಡದ ಸಂಸಾರವೆಂಬ ಸಮುದ್ರದಲ್ಲಿ ಕೃತ್ರಿಮವಾದ ಹಡಗುಗಳು ಹೇಗೆ ತೇಲುತ್ತಿರುವುವೋ ಹಾಗೆಯೇ ಮಹಾವಿಷ್ಣುವಿನ ರೋಮಗಳ ಸಂಖ್ಯೆಗನು ಸಾರವಾಗಿ ಲೆಕ್ಕವಿಲ್ಲದಷ್ಟು ಬ್ರಹ್ಮಾಂಡಗಳಿರುವುವು.

ಬ್ರಹ್ಮಾಂಡೇ ಚ ಕತಿವಿಧಾಃ ಸುರಾಃ ಸಂತ್ಯೇವ ತ್ವತ್ಸಮಾಃ ।
ಏತಸ್ಮಿನ್ನಂತರೇ ತತ್ರ ದದರ್ಶ ಪುರುಷೋತ್ತಮಃ ॥ ೧೧೦ ॥

ಪಿಪೀಲಿಕಾಸಮೂಹಂ ಚ ವ್ಯಾಯತಂ ಧನುಷಾಂ ಶತಂ ।
ಕ್ರಮಶಸ್ತನ್ನಿರೀಕ್ಷ್ಯ ಸ ಜಹಾಸೋಚ್ಚೈರ್ದ್ವಿಜಾರ್ಭಕಃ ॥ ೧೧೧ ॥

ನೋವಾಚ ಕಿಂಚಿನ್ಮೌನೀ ಚ ಗಂಭೀರಃ ಸಾಗರೋ ಯಥಾ ।
ದೃಷ್ಟ್ವಾ ಹಾಸ್ಯಂ ದ್ವಿಜವಟೋರ್ಗಾಥಾಂ ಶ್ರುತ್ವಾऽತಿವಿಸ್ಮಿತಃ ।
ಪಪ್ರಚ್ಛ ಚ ಪುನರ್ವಿಪ್ರಂ ಶುಷ್ಕಕಂಠೋಷ್ಠತಾಲುಕಃ ॥ ೧೧೨ ॥

॥ ಇಂದ್ರ ಉವಾಚ ॥

ಕಥಂ ಹಸಸಿ ವಿಪ್ರೇಂದ್ರ ಮಾಂ ಶೀಘ್ರಂ ಕಾರಣಂ ವದ ।
ತ್ವಂ ವಾ ಕೋ ಮಾಯಯಾಚ್ಛನ್ನಃ ಶಿಶುರೂಪೀ ಗುಣಾರ್ಣವಃ ॥ ೧೧೩ ॥

ಇಂದ್ರಸ್ಯ ವಚನಂ ಶ್ರುತ್ವಾ ತಮುವಾಚ ದ್ವಿಜಾರ್ಭಕಃ ।
ಆಧ್ಯಾತ್ಮಿಕಂ ನೀತಿಸಾರಂ ಜ್ಞಾನಬೀಜಂ ಪರಂ ವಚಃ ॥ ೧೧೪ ॥

೧೧೦–೧೧೨. ಆ ಬ್ರಹ್ಮಾಂಡಗಳಲ್ಲಿ ಅನೇಕಮಂದಿ ನಿನಗೆ ಸಮರಾದ ದೇವತೆಗಳಿರುವರು ಎಂದನು. ಈ ಸಮಯದಲ್ಲಿ ಅಲ್ಲಿಯೇ ಎದುರಿನಲ್ಲಿ ಒಂದುನೂರು ಬಿಲ್ಲಿನಷ್ಟು ಉದ್ದವಾಗಿ ಹರಿಯುತ್ತಿರುವ ಇರುವೆಯ ಗುಂಪೊಂದನ್ನು ಆ ಪುರುಷ ಶ್ರೇಷ್ಠನು ಕಂಡನು. ಅವುಗಳನ್ನು ಕ್ರಮವಾಗಿ ಸ್ವಲ್ಪಕಾಲ ನೋಡುತ್ತಿದ್ದ ಆ ಬ್ರಾಹ್ಮಣ ಕುಮಾರನು ಗಟ್ಟಿಯಾಗಿ ನಕ್ಕು ಸಮುದ್ರದಂತೆ ಗಂಭೀರವಾಗಿದ್ದುಕೊಂಡು ಯಾವ ಮಾತನ್ನೂ ಆಡದೆ ಮೌನದಿಂದಿದ್ದನು. ಇಂದ್ರನು ಇವನ ಮಾತನ್ನು ಕೇಳಿ ಮತ್ತು ಇವನ ನಗುವನ್ನು ನೋಡಿ ಆಶ್ಚರ್ಯಗೊಂಡವನಾಗಿ ಒಣಗಿದ ತುಟಿ ಬಾಯಿಗಳುಳ್ಳವನಾಗಿ ಅವನನ್ನು ಕುರಿತು ಇಂತೆಂದನು.

೧೧೩. ಇಂದ್ರನು :—ಎಲೈ ಬ್ರಾಹ್ಮಣಶ್ರೇಷ್ಠನೇ, ನೀನು ಏತಕ್ಕಾಗಿ ನಗುತ್ತಿರುವಿ? ಇದರ ಕಾರಣವನ್ನು ನನಗೆ ತಿಳಿಸು. ಗುಣಗಳಿಗೆ ಸಮುದ್ರದಂತಿರುವ ಬಾಲಕರೂಪದಿಂದ ನಿನ್ನ ನಿಜರೂಪವನ್ನು ಮರೆಮಾಡಿಕೊಂಡಿರುವ ನೀನು ಯಾರು?

೧೧೪. ಇಂದ್ರನ ಮಾತನ್ನು ಕೇಳಿ ಆ ಬ್ರಾಹ್ಮಣ ಕುಮಾರನನ್ನು ಕುರಿತು, ಅಧ್ಯಾತ್ಮ ಸಂಬಂಧವಾದ ನೀತಿಶಾಸ್ತ್ರದ ಸಾರವಾದ ಜ್ಞಾನಕ್ಕೆ ಕಾರಣವಾದ ಅತ್ಯುತ್ತಮವಾದ ಮಾತನ್ನು ಹೇಳಿದನು.

॥ ಬ್ರಾಹ್ಮಣ ಉವಾಚ ॥

ದೃಷ್ಟಃ ಪಿಪೀಲಿಕಾಸಂಘಃ ಹೇತುರಸ್ಯ ನಿಗೂಢಕಃ ।
ಮಾ ಮಾಂ ಪೃಚ್ಛ ಶೋಕಬೀಜಂ ತವ ಚಾಜ್ಞಾನಕಾರಣಂ ॥ ೧೧೫ ॥

ಸಾಂಸಾರಿಕಾಣಾಂ ಸಂಸಾರವೃಕ್ಷಮೂಲನಿಕೃಂತನಂ ।
ಅಜ್ಞಾನತಮಸಿ ಛನ್ನಂ ಜ್ಞಾನದೀಪಮನುತ್ತಮಂ ॥ ೧೧೬ ॥

ನಿಗೂಢಂ ಸರ್ವವೇದೇಷು ಸಿದ್ಧಾನಾಮಪಿ ದುರ್ಲಭಂ ।
ಯೋಗಿನಾಂ ಪ್ರಾಣತುಲ್ಯಂ ಚ ಮೂಢಾಹಂಕಾರಭಂಜನಂ ॥ ೧೧೭ ॥

ಇತ್ಯುಕ್ತ್ವಾ ತತ್ರ ಸಂತಸ್ಥೌ ಸಸ್ಮಿತೋ ದ್ವಿಜಪುಂಗವಃ ।
ಪುನಃ ಪಪ್ರಚ್ಛ ಶಕ್ರಸ್ತಂ ಶುಷ್ಕಕಂಠೋಷ್ಠತಾಲುಕಃ ॥ ೧೧೮ ॥

॥ ಶಕ್ರ ಉವಾಚ ॥

ಬ್ರೂಹಿ ವಿಪ್ರವಟೋ ಶೀಘ್ರಂ ಜ್ಞಾನದೀಪಮನುತ್ತಮಂ ।
ನ ಜಾನಾಮಿ ಶಿಶುಃ ಕಸ್ತ್ವಂ ಜ್ಞಾನರಾಶಿಃ ಸ್ವಮೂರ್ತಿಮಾನ್ ॥ ೧೧೯ ॥

೧೧೫–೧೧೭. ಬ್ರಾಹ್ಮಣನು :—ಇರುವೆಯ ಗುಂಪನ್ನು ನೋಡಿದೆನು. ಇದರ ಕಾರಣವು ಅತ್ಯಂತ ಗುಪ್ತವಾದುದು. ಇದನ್ನು ನೀನು ಕೇಳಬೇಡ. ಇದು ನಿನ್ನ ದುಃಖಕ್ಕೆ ಕಾರಣವೂ ನಿನ್ನ ಅಜ್ಞಾನಕಾರಣವೂ ಆಗಿರುವುದು. ಸಂಸಾರ ಲಂಪಟರಾಗಿರುವವರ ಸಂಸಾರವೆಂಬ ಮರದ ಬೇರನ್ನು ನಾಶಮಾಡತಕ್ಕುದು. ಅತ್ಯುತ್ತಮವಾದ ಜ್ಞಾನವೆಂಬ ಈ ದೀಪವು ಅಜ್ಞಾನವೆಂಬ ಗಾಢಾಂಧಕಾರದಲ್ಲಿ ಮುಳುಗಿರುವುದು. ಮತ್ತು ಸಕಲ ವೇದಗಳಲ್ಲಿಯೂ ಅಡಗಿ ಸಿದ್ಧರಿಗೂ ದುರ್ಲಭವೆನಿಸಿರುವುದು. ಯೋಗಿಗಳಿಗೆ ಪ್ರಾಣಕ್ಕೆ ಸಮನಾಗಿರುವುದು. ಅಲ್ಲದೆ, ಮೂಢರ ಅಹಂಕಾರವನ್ನು ನಾಶಮಾಡತಕ್ಕದ್ದಾಗಿರುವುದು.

೧೧೮. ಈ ಪ್ರಕಾರ ಹೇಳಿ ಆ ಬ್ರಾಹ್ಮಣಶ್ರೇಷ್ಠನು ನಗುತ್ತ ಅಲ್ಲಿಯೇ ಇದ್ದನು. ಇಂದ್ರನು ಮತ್ತೆ ಅವನನ್ನು ಕುರಿತು ಈ ರೀತಿಯಾಗಿ ಪ್ರಶ್ನೆಮಾಡಿದನು.

೧೧೯. ಇಂದ್ರನು :—ಎಲೈ ಬ್ರಾಹ್ಮಣವಟುವೇ, ಪ್ರಾಚೀನವಾದ ಆ ಜ್ಞಾನದೀಪವನ್ನು ನನಗೆ ತಿಳಿಸು. ಜ್ಞಾನರಾಶಿಯಾಗಿ ಬಾಲಕರೂಪದಿಂದಿರುವ ನೀನಾರೆಂಬುದನ್ನು ನಾನರಿಯೆನು.

ಇಂದ್ರಸ್ಯ ವಚನಂ ಶ್ರುತ್ವಾ ವಿಪ್ರರೂಪೀ ಜನಾರ್ದನಃ ।
ಜ್ಞಾನಂ ಭಾಷಿತುಮಾರೇಭೇ ಯೋಗೀಂದ್ರಾಣಾಂ ಸುದುರ್ಲಭಂ ॥ ೧೨೦ ॥

॥ ಬ್ರಾಹ್ಮಣ ಉವಾಚ ॥

ಸೃಷ್ಟಾಃ ಪಿಪೀಲಿಕಾಸಂಘಾಃ ಏಕೈಕಃ ಕ್ರಮಶೋ ಮಯಾ ।
ಸರ್ವೇ ಸ್ವಕರ್ಮಣಾ ಶಕ್ರ ಶಕ್ರೀಭೂತಾಃ ಸುರಾಲಯೇ ॥ ೧೨೧ ॥

ಅಧುನಾ ಕರ್ಮಣಾ ಸರ್ವೇ ಕ್ರಮಶೋ ಭೂತಜನ್ಮನಾಂ ।
ಅತೀತಕಾಲೇ ಸಂಪ್ರಾಪ್ತಾ ಭೂತಜಾತಿಂ ಪಿಪೀಲಿಕಾಂ ॥ ೧೨೨ ॥

ಕರ್ಮಣಾ ಜೀವಿನೋ ಯಾಂತಿ ವೈಕುಂಠಂ ಚ ನಿರಾಮಯಂ ।
ಕರ್ಮಣಾ ಬ್ರಹ್ಮಲೋಕಂ ಚ ಶಿವಲೋಕಂ ಚ ಕರ್ಮಣಾ ॥ ೧೨೩ ॥

ಸ್ವರ್ಗಂ ಸ್ವರ್ಗಸಮಾಸ್ಥಾನಂ ಪಾತಾಲಂ ಚ ಸ್ವಕರ್ಮಣಾ ।
ಕರ್ಮಣಾ ನರಕಂ ಘೋರಂ ಸ್ವಾತ್ಮದುಃಖೈಕಕಾರಣಂ ॥ ೧೨೪ ॥

---

೧೨೦. ಇಂದ್ರನ ಮಾತನ್ನು ಕೇಳಿ ಬ್ರಾಹ್ಮಣರೂಪದಿಂದಿರುವ ಜನಾರ್ದನನು ಯೋಗಿಶ್ರೇಷ್ಠರಿಗೂ ದುರ್ಲಭವಾದ ಜ್ಞಾನವಿಷಯವನ್ನು ಹೇಳಲುಪಕ್ರಮಿಸಿದನು.

೧೨೧. ಬ್ರಾಹ್ಮಣನು :—ಎಲೈ ಇಂದ್ರನೇ, ಈ ಇರುವೆಯ ಗುಂಪನ್ನು ಒಂದೊಂದನ್ನಾಗಿ ನಾನು ಸೃಷ್ಟಿಸಿದೆನು. ಇವುಗಳೆಲ್ಲ ತಮ್ಮ ಪುಣ್ಯಕರ್ಮಪ್ರಭಾವ ದಿಂದ ಸ್ವರ್ಗಲೋಕದಲ್ಲಿ ಇಂದ್ರರಾಗಿದ್ದವುಗಳು.

೧೨೨. ಇವರು ಕಾಲಕ್ರಮವಾಗಿ ಜನ್ಮವನ್ನು ಹೊಂದುತ್ತಿರುವವರಾಗಿ ಕಾಲಕಳೆದಂತೆ ಈಗ ಇರುವೆಯ ಜನ್ಮವನ್ನು ಹೊಂದಿರುವರು.

೧೨೩. ತಮ್ಮ ತಮ್ಮ ಕರ್ಮಗಳಿಂದಲೇ ಜೀವಿಗಳು ನಿರ್ಬಾಧವಾದ ವೈಕುಂಠವನ್ನು ಹೊಂದುತ್ತಾರೆ. ಮತ್ತು ಕರ್ಮದಿಂದಲೇ ಬ್ರಹ್ಮಲೋಕವನ್ನೂ ಶಿವಲೋಕವನ್ನೂ ಹೊಂದುವರು.

೧೨೪. ಸ್ವರ್ಗವನ್ನೂ ಸ್ವರ್ಗಕ್ಕೆ ಸಮಾನವಾದ ಸ್ಥಾನವನ್ನೂ, ಪಾತಾಳ ವನ್ನೂ, ತಮ್ಮ ದುಃಖಕ್ಕೆ ಮುಖ್ಯಕಾರಣವಾದ ನರಕವನ್ನೂ ಕರ್ಮದಿಂದಲೇ ಹೊಂದುವರು.

ಕರ್ಮಣಾ ಸೂಕರೀಗರ್ಭಂ ಕರ್ಮಣಾ ಕ್ಷುದ್ರಜೀವನಂ ।
ಕರ್ಮಣಾ ಪಶುಪಕ್ಷೀಣಾಂ ಕರ್ಮಣಾ ಪಕ್ಷಿಯೋಷಿತಾಂ ॥ ೧೨೫ ॥

ಕರ್ಮಣಾ ಕೀಟಯೋನಿಂ ಚ ವೃಕ್ಷತ್ವಂ ಚ ಸ್ವಕರ್ಮಣಾ ।
ಸ್ವಕರ್ಮಣಾ ಸುಖೀ ದುಃಖೀ ಸೇವ್ಯಃ ಸೇವಕ ಏವ ಚ ॥ ೧೨೬ ॥

ಕರ್ಮಣಾ ಬ್ರಾಹ್ಮಣತ್ವಂ ಚ ದೈವಂ ಚಾಪಿ ಸ್ವಕರ್ಮಣಾ ।
ಸ್ವಕರ್ಮಣಾ ಚ ಪ್ರೇತತ್ವಂ ಬ್ರಹ್ಮತ್ವಂ ಚ ಸ್ವಕರ್ಮಣಾ ॥ ೧೨೭ ॥

ಕರ್ಮಣಾ ಶಿಬಿಕಾರೋಹೋ ರಾಜೇಂದ್ರಶ್ಚ ಸ್ವಕರ್ಮಣಾ ।
ಕರ್ಮಣಾ ಸ್ವಾಂಗಹೀನಶ್ಚ ಸ್ವಾಂಗವೃದ್ಧಶ್ಚ ಕರ್ಮಣಾ ।
ವಿಧಾತಾ ಕರ್ಮಸೂತ್ರೇಣ ಫಲದಾತಾ ಚ ಜೀವಿನಾಂ ॥ ೧೨೮ ॥

---

೧೨೫. ಕರ್ಮದಿಂದ ಹಂದಿಯ ಗರ್ಭವನ್ನೂ, ನೀಚಪ್ರಾಣಿಯ ಗರ್ಭವನ್ನೂ, ಪಶುಗಳ ಗರ್ಭವನ್ನೂ, ಪಕ್ಷಿಗಳ ಗರ್ಭವನ್ನೂ, ಹೊಂದುವರು.

೧೨೬. ಕರ್ಮದಿಂದ ಹುಳುಗಳ ಗರ್ಭವನ್ನೂ, ಮರಗಳ ಜನ್ಮವನ್ನೂ ಹೊಂದುವರಲ್ಲದೆ ತಮ್ಮ ಕರ್ಮದಿಂದಲೇ ಸುಖವಂತರೂ, ದುಃಖವಂತರೂ, ಸೇವೆ ಮಾಡಿಸಿಕೊಳ್ಳುವವರೂ, ಸೇವೆಮಾಡುವವರೂ ಆಗುತ್ತಾರೆ.

೧೨೭. ಕರ್ಮದಿಂದ ಬ್ರಾಹ್ಮಣಜನ್ಮವನ್ನೂ, ದೇವಜನ್ಮವನ್ನೂ, ಪ್ರೇತ ಜನ್ಮವನ್ನೂ, ಬ್ರಹ್ಮರೂಪವನ್ನೂ ಹೊಂದುವರು.

೧೨೮. ಕರ್ಮದಿಂದ ಪಲ್ಲಕ್ಕಿಯನ್ನು ಹತ್ತುವುದು, ರಾಜತನ ಇವುಗಳುಂಟಾಗುತ್ತವೆ. ಮತ್ತು ಕರ್ಮದಿಂದ ರೋಗಿಯೂ, ಸುಂದರನೂ ಆಗುತ್ತಾನೆ. ಕರ್ಮದಿಂದ ಅಂಗಹೀನನೂ, ಪುಷ್ಟವಾದ ಅಂಗವುಳ್ಳವನೂ ಆಗುವನು. ಬ್ರಹ್ಮನು ಈ ಕರ್ಮ ಸೂತ್ರವನ್ನವಲಂಬಿಸಿ ಜೀವಿಗಳಿಗೆ ತಕ್ಕ ಫಲಗಳನ್ನು ಕೊಡುತ್ತಾನೆ.

ಕರ್ಮಸ್ವಭಾವಸಾಧ್ಯಂ ಚ ಸ್ವಭಾವೋಽಭ್ಯಾಸ ಜೀವಕಃ ।
ಇತ್ಯೇವಂ ಕಥಿತಂ ಸರ್ವಮಾಧ್ಯಾತ್ಮಿಕಪರಂ ವಚಃ ॥ ೧೨೯ ॥

ಸುಖದಂ ಪುಣ್ಯದಂ ಸಾರಂ ನರಕಾರ್ಣವತಾರಕಂ ।
ಸಂಸಾರಂ ಸ್ವಪ್ನವತ್ಸರ್ವಂ ದೇವೇಂದ್ರ ಸಚರಾಚರಂ ॥ ೧೩೦ ॥

ಮೃತ್ಯುಶ್ಚ ಮಸ್ತಕಸ್ಥಾಯೀ ಸರ್ವೇಷಾಂ ಕಾಲಯೋಗತಃ ।
ಜಲಬುದ್ಬುದವತ್ಸರ್ವಂ ಜೀವಿನಾಂ ಚ ಶುಭಾಽಶುಭಂ ॥ ೧೩೧ ॥

ಶಶ್ವಚ್ಛಶ್ವದ್ಭ್ರಮತ್ಯೇವ ನಾಽವಿಷ್ಟಸ್ತತ್ರ ಪಂಡಿತಃ ।
ಇತ್ಯೇವಮುಕ್ತ್ವಾ ವಿಪ್ರಶ್ಚ ತತ್ರ ತಸ್ಥೌ ಚ ಸಸ್ಮಿತಃ ॥ ೧೩೨ ॥

ವಿಸ್ಮಿತಸ್ತ್ರಿದಶಾಧ್ಯಕ್ಷೋ ನಾಽತ್ಮಾನಂ ಬಹುಮನ್ಯತೇ ।
ಏತಸ್ಮಿನ್ನಂತರೇ ಶೀಘ್ರಮಾಜಗಾಮ ಮುನೀಶ್ವರಃ ॥ ೧೩೩ ॥

೧೨೯–೧೩೦. ಕರ್ಮವು ಸ್ವಭಾವಕ್ಕೆ ತಕ್ಕಂತೆ ನಡೆಯುತ್ತದೆ. ಸ್ವಭಾವವು ಅಭ್ಯಾಸದಿಂದ ಸಾಧ್ಯವಾಗುತ್ತದೆ ಈ ಪ್ರಕಾರ ಸುಖವನ್ನೂ, ಪುಣ್ಯವನ್ನೂ ಉಂಟು ಮಾಡುವ ಅಧ್ಯಾತ್ಮಪರವಾದ ಸಕಲ ವಿಷಯಗಳನ್ನೂ ತಿಳಿಸಿರುವೆನು. ಎಲೈ ದೇವೇಂದ್ರನೇ, ಚರಾಚರಾತ್ಮಕವಾದ ಸಕಲ ಜಗತ್ತೂ ಕೂಡ ಕನಸಿನಂತೆ ಸುಳ್ಳಾದುದು.

೧೩೧. ಕಾಲಮಹಿಮೆಯಿಂದ ಮೃತ್ಯುವೂ ಕೂಡ ಸಕಲರ ತಲೆಯ ಮೇಲೆ ಯಾವಾಗಲೂ ಸ್ಥಿರವಾಗಿರುವುದು ಪ್ರಾಣಿಗಳಿಗೆ ಬರುವ ಶುಭಾಶುಭಗಳೆಲ್ಲವೂ ನೀರಿನ ಮೇಲಿರುವ ಗುಳ್ಳೆಗೆ ಸಮಾನವಾದುದು.

೧೩೨. ಎಲೈ ಇಂದ್ರನೇ, ವಿದ್ವಾಂಸನಾದರೂ ಸಿದ್ಧಿಹೊಂದದವನಾಗಿ ಆ ಸಂಸಾರದಲ್ಲಿ ಮತ್ತೆಮತ್ತೆ ಸುತ್ತುತ್ತಿರುತ್ತಾನೆ. ಈ ಪ್ರಕಾರ ಹೇಳಿ ಆ ಬ್ರಾಹ್ಮಣನು ನಗುತ್ತ ಅಲ್ಲಿ ಕುಳಿತಿದ್ದನು.

೧೩೩. ದೇವೇಂದ್ರನು ಅತ್ಯಂತ ಆಶ್ಚರ್ಯಗೊಂಡವನಾಗಿ ತನ್ನ ಸಮಾನರಿಲ್ಲ ವೆಂಬ ಭಾವನೆಯನ್ನು ಬಿಟ್ಟನು. ಈ ಸಮಯದಲ್ಲಿ ಅಲ್ಲಿಗೆ ಒಬ್ಬ ಮುನಿಶ್ರೇಷ್ಠನು ಬಂದನು.

ಅತಿವೃದ್ಧೋ ಮಹಾಯೋಗೀ ಜ್ಞಾನೇನ ವಯಸಾ ಮಹಾನ್ ।
ಕೃಷ್ಣಾಜಿನೀ ಜಟಾಧಾರೀ ಬಿಭ್ರತ್ತಿಲಕಮುದ್ಭುತಂ ॥ ೧೩೪ ॥

ವಕ್ಷಸ್ಥಲೇ ರೋಮಚಕ್ರಂ ಬಿಭರ್ತಿ ಮಸ್ತಕೇ ಕಟಂ ।
ಸ್ಥಿತಂ ಸರ್ವಂ ಮಧ್ಯದೇಶೇ ಕಿಂಚಿದುತ್ಪಾಟಿತಂ ಸ್ಫುಟಂ ॥ ೧೩೫ ॥

ಸಮಾಗತ್ಯ ದ್ವಯೋರ್ಮಧ್ಯೇ ತಸ್ಥೌ ಸ್ಥಾಣುವದೇವ ಸಃ ।
ಮಹೇಂದ್ರೋ ಬ್ರಾಹ್ಮಣಂ ದೃಷ್ಟ್ವಾ ಪ್ರಣನಾಮ ಮುದಾನ್ವಿತಃ ॥ ೧೩೬ ॥

ಮಧುಪರ್ಕಾದಿಕಂ ದತ್ವಾ ಪೂಜಯಾಮಾಸ ಭಕ್ತಿತಃ ।
ಪಪ್ರಚ್ಛ ಕುಶಲಂ ವಿಪ್ರಂ ಚಕಾರ ವಿನಯಂ ಪರಂ ॥ ೧೩೭ ॥

ತುಷ್ಟಾವಾತಿಥಿಭಾವೇನ ಮುದಾ ಸಾದರಪೂರ್ವಕಂ ।
ವಿಪ್ರಾರ್ಭಕಸ್ತೇನ ಸಾರ್ಧಂ ಸಂಭಾಷಾಂ ಚ ಚಕಾರ ಸಃ ।
ಸ್ವಾಭಿಮತಂ ಪರಂ ಪ್ರಾಹ ಸರ್ವಂ ವಿನಯಪೂರ್ವಕಂ ॥ ೧೩೮ ॥

೧೩೪–೧೩೬. ಆ ಮುನಿಯು ಬಹಳ ಮುದುಕನಾಗಿಯೂ, ಜ್ಞಾನ ದಿಂದಲೂ, ವಯಸ್ಸಿನಿಂದಲೂ, ದೊಡ್ಡವನಾಗಿಯೂ, ಮಹಾಯೋಗಿಯಾಗಿಯೂ, ಕೃಷ್ಣಾಜಿನ ಮತ್ತು ಜಡೆಗಳನ್ನು ಧರಿಸಿದವನಾಗಿಯೂ, ಉತ್ತಮವಾದ ತಿಲಕವನ್ನು ಧರಿಸಿದವನಾಗಿಯೂ, ಎದೆಯಲ್ಲಿ ಕೂದಲುಗಳ ಸಮೂಹವನ್ನೂ, ತಲೆಯ ಮೇಲೆ ಚಾಪೆಯನ್ನೂ ಧರಿಸಿದವನಾಗಿದ್ದನು. ಆ ಎದೆಯಲ್ಲಿರುವ ಕೂದಲುಗಳು ಮಧ್ಯದಲ್ಲಿ ಸ್ವಲ್ಪಮಾತ್ರ ಕಿತ್ತುಹೋಗಿದ್ದವು. ಆ ಮುನಿಯು ಬಂದು ಇಂದ್ರ ಮತ್ತು ಬ್ರಾಹ್ಮಣ ಇವರಿಬ್ಬರ ಮಧ್ಯದಲ್ಲಿ ನಿಂತನು. ಮಹೇಂದ್ರನು ಆ ಬ್ರಾಹ್ಮಣನನ್ನು ನೋಡಿ ಸಂತೋಷದಿಂದ ನಮಸ್ಕಾರಮಾಡಿದನು.

೧೩೭. ಮಧುಪರ್ಕವೇ ಮುಂತಾದುವುಗಳನ್ನು ಕೊಟ್ಟು ಭಕ್ತಿಯಿಂದ ಪೂಜೆಮಾಡಿದನು. ಬಹಳ ವಿನಯದಿಂದ ಕೂಡಿದವನಾಗಿ ಆ ಬ್ರಾಹ್ಮಣನನ್ನು ಕುರಿತು ಕುಶಲಪ್ರಶ್ನೆಯನ್ನು ಮಾಡಿದನು.

೧೩೮. ಇಂದ್ರನು ಅತಿಥಿಯೆಂಬ ನಂಬಿಕೆಯಿಂದ ಆದರಪೂರ್ವಕವಾಗಿ ಅವನನ್ನು ಸ್ತೋತ್ರಮಾಡಿದನು. ಆ ಬ್ರಾಹ್ಮಣ ಕುಮಾರನು ಬಂದಿರುವ ಆ ಮುನಿ ಯೊಡನೆ ಮಾತನಾಡಿದನು. ತನ್ನ ಮನೋಭಿಪ್ರಾಯವನ್ನು ಪೂರ್ಣವಾಗಿ ವಿನಯ ದಿಂದ ಆ ಬ್ರಾಹ್ಮಣನಿಗೆ ತಿಳಿಸಿದನು.

|| ಬಾಲಕ ಉವಾಚ ||

ಕುತಸ್ತ್ವಮಾಗತೋ ವಿಪ್ರ ಕಿಂ ನಾಮ ಭವತೋ ವದ ।
ಕೋऽತ್ರಾಗಮನೇ ಹೇತುರ್ನಿವಾಸಃ ಕುತ್ರ ತೇऽಧುನಾ || ೧೩೯ ||

ಕಟಂ ಕಥಂ ಮಸ್ತಕೇ ತೇ ಲೋಮಚಕ್ರಂ ಚ ವಕ್ಷಸಿ ।
ಅತ್ಯುನ್ನತಂ ಮಧ್ಯದೇಶೇ ಕಿಂಚಿದುತ್ಪಾಟಿತಂ ಮುನೇ || ೧೪೦ ||

ಮಾಂ ಚೇತ್ ಕೃಪಾಸ್ತಿ ತೇ ವಿಪ್ರ ಸರ್ವಂ ಸಂವ್ಯಸ್ಯ ಕಥ್ಯತಾಂ ।
ಅತ್ಯದ್ಭುತಮಿದಂ ಸರ್ವಂ ಶ್ರೋತುಂ ಕೌತೂಹಲಂ ಮಮ || ೧೪೧ ||

ಸ ಶಿಶೋರ್ವಚನಂ ಶ್ರುತ್ವಾ ತಮುವಾಚ ಮಹಾಮುನಿಃ ।
ಸರ್ವಂ ಸ್ವಕೀಯವೃತ್ತಾಂತಂ ಶಕ್ರಸ್ಯ ಪುರತೋ ಮುದಾ || ೧೪೨ ||

---

೧೩೯ ಬಾಲಕನು:—ಎಲೈ ಬ್ರಾಹ್ಮಣನೇ, ನೀನು ಯಾವ ದೇಶದಿಂದ ಬಂದೆ? ನಿನ್ನ ಹೆಸರೇನು? ಹೇಳು ನೀನು ಇಲ್ಲಿಗೆ ಬರಲು ಕಾರಣವೇನು? ಈಗ ನೀನು ಇಲ್ಲಿ ಯಾವ ಪ್ರದೇಶದಲ್ಲಿ ವಾಸವಾಗಿರುವಿ?

೧೪೦. ನೀನು ತಲೆಯ ಮೇಲೆ ಚಾಪೆಯನ್ನಿಟ್ಟುಕೊಂಡಿರಲು ಕಾರಣವೇನು? ಎದೆಯಲ್ಲಿ ತುಂಬ ಕೂದಲಿನ ಸಮೂಹವಿರುವದಾದರೂ ಮಧ್ಯದಲ್ಲಿ ಸ್ವಲ್ಪಭಾಗ ಮಾತ್ರ ಕಿತ್ತುಹೋಗಿರುವುದು. ಇದಕ್ಕೆ ಕಾರಣವೇನು ?

೧೪೧. ಅತ್ಯಂತ ಆಶ್ಚರ್ಯಕರವಾದ ಈ ವಿಚಾರಗಳನ್ನೆಲ್ಲ ಕೇಳಬೇಕೆಂಬ ಕುತೂಹಲ ನನಗುಂಟಾಗಿದೆ. ಎಲೈ ಬ್ರಾಹ್ಮಣನೇ ನಿನಗೆ ನನ್ನಲ್ಲಿ ದಯೆಯಿರುವುದಾದರೆ ಈ ಎಲ್ಲ ವಿಚಾರಗಳನ್ನೂ ವಿವರವಾಗಿ ಹೇಳು.

೧೪೨. ಆ ಮಹಾ ಮುನಿಯು ಆ ಬಾಲಕನ ಮಾತನ್ನು ಕೇಳಿ ಅವನನ್ನು ಕುರಿತು ದೇವೇಂದ್ರನ ಮುಂದೆ ಸಂತೋಷದಿಂದ ತನ್ನ ಸಕಲ ವೃತ್ತಾಂತಗಳನ್ನೂ ಹೇಳತೊಡಗಿದನು.

॥ ಮುನಿರುವಾಚ ॥

ಅಲ್ಪಾಯುಷಾ ಮಯಾ ವಿಪ್ರ ಕುತ್ರಾಪಿ ನ ಕೃತಾ ಗೃಹಾಃ ।
ನ ವಿವಾಹಶ್ಚೋಪಜೀವ್ಯಂ ಭಿಕ್ಷೋಪಜೀವಿನಾಽಧುನಾ ॥ ೧೪೩ ॥

ಲೋಮಶೇತಿ ಚ ಮನ್ನಾಮ ಹೇತು ರ್ವಿಪ್ರಸ್ಯ ದರ್ಶನಂ ।
ವರ್ಷಣಾತಪಶಾಂತ್ಯರ್ಥಂ ಮಸ್ತಕಸ್ಥಂ ಕಟಂ ಮಮ. ॥ ೧೪೪ ॥

ವಕ್ಷಸ್ಥಲಸ್ಥಿತಂ ರೋಮಚಕ್ರಂ ತತ್ಕಾರಣಂ ಶೃಣು ।
ಸಾಂಸಾರಿಕಾಣಾಂ ಭಯದಂ ವಿವೇಕಜನನಂ ಪರಂ ॥ ೧೪೫ ॥

ಆಯುಃ ಸಂಖ್ಯಾಪ್ರಮಾಣಂ ಮೇ ಲೋಮಚಕ್ರಂ ಚ ವಕ್ಷಸಿ ।
ಶಕ್ರೈಕಪತನೇ ವಿಪ್ರ ಲೋಮೈಕೋತ್ಪಾಟನಂ ಮಮ ॥ ೧೪೬ ॥

---

೧೪೩. ಮುನಿಯು :—ಎಲೈ ಬ್ರಾಹ್ಮಣನೇ, ಅಲ್ಪಾಯುವಾದ ನಾನು ಎಲ್ಲಿಯೂ ಮನೆಯನ್ನು ಮಾಡಿಕೊಂಡಿಲ್ಲ. ಮದುವೆಯನ್ನೂ ಮಾಡಿಕೊಂಡವನಲ್ಲ. ಜೀವಿಕೆಯ ಮಾರ್ಗವನ್ನು ಕೂಡ ಅವಲಂಬಿಸಿದವನಲ್ಲ. ಪ್ರಕೃತಕಾಲದಲ್ಲಿ ಭಿಕ್ಷೆಯಿಂದ ಜೀವಿಸುತ್ತಿರುವೆನು

೧೪೪. ನನ್ನ ಹೆಸರು ಲೋಮಶನೆಂದು. ನಾನು ಇಲ್ಲಿಗೆ ಬಂದಿರುವುದು ಬ್ರಾಹ್ಮಣನಾದ ನಿನ್ನನ್ನು ನೋಡುವ ಇಚ್ಛೆಯಿಂದ. ಮಳೆ, ಬಿಸಿಲುಗಳ ಬಾಧೆಯನ್ನು ಹೋಗಲಾಡಿಸಿಕೊಳ್ಳುವುದಕ್ಕೋಸ್ಕರ ತಲೆಯ ಮೇಲೆ ಚಾಪೆಯನ್ನಿಟ್ಟು ಕೊಂಡಿರುವೆನು.

೧೪೫. ನನ್ನ ಎದೆಯಲ್ಲಿ ಕೂದಲುಗಳ ಸಮೂಹವಿರಲು ಕಾರಣವನ್ನು ಹೇಳುವೆನು. ಸಂಸಾರಿಗಳಿಗೆ ಭಯವನ್ನುಂಟುಮಾಡುವ ಮತ್ತು ಉತ್ತಮವಾದ ವಿವೇಕವನ್ನುಂಟುಮಾಡುವ ಆ ವಿಷಯವನ್ನು ಸಾವಧಾನದಿಂದ ಕೇಳು.

೧೪೬. ಎಲೈ ಬ್ರಾಹ್ಮಣನೇ, ನನ್ನ ಆಯುಸ್ಸಿನ ಸಂಖ್ಯೆಯಷ್ಟು ಕೂದಲುಗಳು ನನ್ನ ಎದೆಯಲ್ಲಿವೆ. ಒಬ್ಬ ಇಂದ್ರನ ಆಯುಸ್ಸು ಮುಗಿದರೆ ನನ್ನ ಎದೆಯಲ್ಲಿ ಒಂದು ಕೂದಲು ಹೋಗುತ್ತದೆ.

ಉತ್ಪಾಟಿತಾನಿ ಲೋಮಾನಿ ತೇನ ಮಧ್ಯೇ ಸ್ಥಿತಾನಿ ಚ ।
ಬ್ರಹ್ಮಣೋ ದ್ವಿಪರಾರ್ಧೇ ಚ ಮಮ ಮೃತ್ಯುರ್ನಿರೂಪಿತಃ ॥ ೧೪೭ ॥

ಅಸಂಖ್ಯವಿಧಯೋ ಬ್ರಹನ್ಮರಿಷ್ಯಂತಿ ಮೃತಾ ಅಪಿ ।
ಕಲತ್ರೇಣ ಚ ಪುತ್ರೇಣ ಗೃಹೇಣ ಕಿಂ ಪ್ರಯೋಜನಂ ॥ ೧೪೮ ॥

ಬ್ರಹ್ಮಣಃ ಪತನೇ ಚಕ್ಷುರ್ನಿಮೇಷಶ್ಚ ಹರೇರ್ಭವೇತ್ ।
ತತ್ಪಾದಪದ್ಮಮತುಲಂ ಚಿಂತಯಾಮಿ ನಿರಂತರಂ ॥ ೧೪೯ ॥

ಸುದುರ್ಲಭಂ ಶ್ರೀಹರೇರ್ದಾಸ್ಯಂ ಭಕ್ತಿರ್ಮುಕ್ತಿರ್ಗರೀಯಸೀ ।
ಸ್ವಪ್ನವತ್ಸರ್ವಮೈಶ್ವರ್ಯಂ ತದ್ಭಕ್ತಿವ್ಯವಧಾಯಕಂ ॥ ೧೫೦ ॥

ಇದಂ ಮದ್ಗುರುಣಾ ದತ್ತಂ ಶಂಭುನಾ ಜ್ಞಾನಮುತ್ತಮಂ ।
ವಿನಾ ಭಕ್ತಿಂ ನ ಗೃಹ್ಣಾಮಿ ಸಾಲೋಕ್ಯಾದಿಚತುಷ್ಟಯಂ ॥ ೧೫೧ ॥

---

೧೪೭. ಆದಕಾರಣದಿಂದ ನನ್ನ ಎದೆಯ ಮಧ್ಯದಲ್ಲಿ ಕೆಲವು ಕೂದಲುಗಳು ಉದುರಿಹೋಗಿವೆ. ಎರಡು ಪರಾರ್ಧಸಂಖ್ಯೆಯ ಬ್ರಹ್ಮರು ಮುಗಿಯುವವರೆಗೆ ನನ್ನ ಆಯುಸ್ಸಿನ ಅವಧಿಯಿರುವುದು.

೧೪೮. ಎಲೈ ಬ್ರಾಹ್ಮಣನೇ, ಲೆಕ್ಕವಿಲ್ಲದಷ್ಟು ಬ್ರಹ್ಮರು ಮೃತರಾಗಿರುತ್ತಾರೆ. ಇನ್ನು ಮುಂದೂ ಮರಣವನ್ನು ಹೊಂದುವರು. ಪತ್ನಿಯಿಂದಾಗಲೀ ಮಗನಿಂದಾಗಲೀ ಮನೆಯಿಂದಾಗಲೀ ಏನು ಪ್ರಯೋಜನವು ?

೧೪೯. ಒಬ್ಬ ಬ್ರಹ್ಮನು ಮೃತನಾದರೆ ವಿಷ್ಣುವಿನ ಕಣ್ಣುರೆಪ್ಪೆಯು ಒಂದು ಸಾರಿ ಮಿಡಿಯುತ್ತದೆ. ನಾನು ಎಣೆಯಿಲ್ಲದ ಆ ವಿಷ್ಣುವಿನ ಪಾದಕಮಲವನ್ನು ಯಾವಾಗಲೂ ಧ್ಯಾನಿಸುತ್ತಿರುವೆನು.

೧೫೦. ಮುಕ್ತಿಮಾರ್ಗವನ್ನು ಹೊಂದಲು ಅತ್ಯಂತ ಶ್ರೇಷ್ಠವಾದ ಶ್ರೀಹರಿಯ ಸೇವಕತನವೂ, ಭಕ್ತಿಯೂ ದೊರಕುವುದು ಸುಲಭವಲ್ಲ. ಪ್ರಪಂಚದ ಸಕಲೈಶ್ವರ್ಯವೂ ಕನಸಿನಂತಿದ್ದು ಶ್ರೀಹರಿಭಕ್ತಿಗೆ ತಡೆಯನ್ನುಂಟುಮಾಡತಕ್ಕುದಾಗಿರುತ್ತೆ.

೧೫೧. ಈ ದಿವ್ಯಜ್ಞಾನವು ನನ್ನ ಗುರುವಾದ ಪರಮೇಶ್ವರನಿಂದ ನನಗೆ ಕೊಡಲ್ಪಟ್ಟಿತು. ಭಕ್ತಿಯಿಲ್ಲದೆ ಸಾಲೋಕ್ಯ ಮುಂತಾದ ನಾಲ್ಕುವಿಧವಾದ ಮುಕ್ತಿಯನ್ನು ನಾನು ಹೊಂದಲು ಸಾಧ್ಯವಿಲ್ಲ.

ಇತ್ಯೇವಮುಕ್ತ್ವಾ ಸ ಮುನಿ ರ್ಜಗಾಮ ಶಿವಸಂನಿಧಿಂ ।
ಶಿಶುರೂಪೀ ಹರಿಸ್ತತ್ರೈವಾಂತರ್ಧಾನಂ ಚಕಾರ ಹ ॥ ೧೫೨ ॥

ಇಂದ್ರಸ್ತು ಸ್ವಪ್ನವದ್ದೃಷ್ಟ್ವಾ ಬಭೂವ ತತ್ರ ವಿಸ್ಮಿತಃ ।
ತೃಷ್ಣಾಮಾತ್ರಂ ತು ಸಂಪತ್ತೌ ನಾಸ್ತ್ಯೇವ ಪರಮೇಶ್ವರೇ ॥ ೧೫೩ ॥

ವಿಶ್ವಕರ್ಮಾಣಮಾಹೂಯ ಪ್ರಿಯಮುಕ್ತ್ವಾ ಶತಕ್ರತುಃ ।
ದತ್ವಾ ರತ್ನಾನಿ ಸಂಪೂಜ್ಯ ತಂ ಪ್ರಸ್ಥಾಪಿತವಾನ್ ಗೃಹಂ ॥ ೧೫೪ ॥

ಸರ್ವಂ ವಿನ್ಯಸ್ಯ ಪುತ್ರೇ ಚ ಶರಣಂ ಗಂತುಮುದ್ಯತಃ ।
ಶಚೀಂ ರಾಜ್ಯಶ್ರಿಯಂ ತ್ಯಕ್ತ್ವಾ ವಿವೇಕೀ ಕ್ಷಯಕಾಮುಕಃ ॥ ೧೫೫ ॥

ದೃಷ್ಟ್ವಾ ವಿವೇಕಿನಂ ಕಾಂತಂ ಹೃದಯೇನ ವಿದೂಯತಾ ।
ಶಚೀ ಜಗಾಮ ಶೋಕಾರ್ತಾ ಸಂತ್ರಸ್ತಾ ಶರಣಂ ಗುರೋಃ ॥ ೧೫೬ ॥

---

೧೫೨. ಈ ಪ್ರಕಾರ ಹೇಳಿ ಆ ಮುನಿಯು ಶಿವನ ಸಮೀಪವನ್ನು ಕುರಿತು ಹೊರಟನು. ಬಾಲಕನ ರೂಪದಿಂದಿದ್ದ ಹರಿಯು ಅಲ್ಲಿಯೇ ಮಾಯವಾದನು.

೧೫೩. ಇಂದ್ರನು ಕನಸಿನಂತಿದ್ದ ಆ ವಿಚಾರಗಳನ್ನು ನೋಡಿ ಬಹಳ ಆಶ್ಚರ್ಯಗೊಂಡನು. ಸಂಪತ್ತಿನ ವಿಷಯದಲ್ಲಿ ಪರಮೇಶ್ವರನಿಗೆ ಸ್ವಲ್ಪವಾದರೂ ಆಶೆಯಿಲ್ಲವು.

೧೫೪. ಇಂದ್ರನು ವಿಶ್ವಕರ್ಮನನ್ನು ಕರೆದು ಒಳ್ಳೆಯ ಮಾತುಗಳನ್ನಾಡಿ ನಾನಾವಿಧವಾದ ರತ್ನಗಳನ್ನು ಕೊಟ್ಟು ಗೌರವಿಸಿ ಅವನನ್ನು ಮನೆಗೆ ಕಳುಹಿ ಕೊಟ್ಟನು.

೧೫೫. ರಾಜ್ಯಸೂತ್ರವೆಲ್ಲವನ್ನೂ ಮಗನಿಗೆ ಒಪ್ಪಿಸಿ, ಶಚಿಯನ್ನೂ ರಾಜ್ಯ ಸಂಪತ್ತನ್ನೂ ಬಿಟ್ಟು ವಿವೇಕವನ್ನೂ ಹೊಂದಿ ಕರ್ಮಕ್ಷಯವನ್ನು ಪಡೆಯಲಪೇಕ್ಷೆ ಯಿಂದ ಈಶ್ವರನನ್ನು ಶರಣುಹೊಂದಲು ಸಿದ್ಧನಾದನು.

೧೫೬. ಶಚೀದೇವಿಯು ತನ್ನ ಪತಿಯು ವಿವೇಕವನ್ನು ಹೊಂದಿ ತನ್ನನ್ನು ದೂರಮಾಡುತ್ತಿರುವುದನ್ನು ಕಂಡು ಮನಸ್ಸಿನಲ್ಲಿ ಬಹಳ ದುಃಖಗೊಂಡವಳಾಗಿ ನಡುಗುತ್ತಿರುವ ಮನಸ್ಸಿನಿಂದ ಕೂಡಿದವಳಾಗಿ ಗುರುವನ್ನು ಮರೆಹೊಕ್ಕಳು.

ಸರ್ವಂ ನಿವೇದನಂ ಕೃತ್ವಾ ಸಮಾನೀಯ ಬೃಹಸ್ಪತಿಂ ।
ಬೋಧಯಾಮಾಸ ಶಕ್ರಂ ತಂ ನೀತಿಸಾರೇಣ ಕಾಮಿನೀ ॥ ೧೫೭ ॥

ಗುರುಃ ಶಾಸ್ತ್ರವಿಶೇಷಂ ಚ ದಂಪತೀರಸಸಂಯುತಂ ।
ವಿಧಾಯ ಚ ಸ್ವಯಂ ಪ್ರೀತ್ಯಾ ಪಾಠಯಾಮಾಸ ತಂ ಮುದಾ ॥ ೧೫೮ ॥

ನೀತಿಶಾಸ್ತ್ರಂ ಬಹುವಿಧಂ ಬೋಧಯಾಮಾಸ ವಾಕ್ಪತಿಃ ।
ಸ ಚಕಾರ ತದಾ ರಾಜ್ಯಂ ವೃಂದಾವನ ವಿನೋದಿನಿ ॥ ೧೫೯ ॥

ಇತ್ಯೇವಂ ಕಥಿತಂ ಸರ್ವಂ ಶಕ್ರದರ್ಪವಿಮೋಚನಂ ।
ಸಾಕ್ಷಾದ್ದೃಷ್ಟೋ ದರ್ಪಭಂಗೋ ನಂದಯಜ್ಞೇ ಸುರೇಶ್ವರಿ ॥ ೧೬೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರದ ನಾರಾಯಣ ಸಂವಾದೇ ಶ್ರೀಕೃಷ್ಣ ರಾಧಾಸಂವಾದೇ ಶಕ್ರದರ್ಪಭಂಗೋ ನಾಮ ಸಪ್ತಚತ್ವಾರಿಂಶೋಽಧ್ಯಾಯಃ

---

೧೫೭. ಗುರುವಿನೊಡನೆ ಸಕಲ ವೃತ್ತಾಂತವನ್ನೂ ಹೇಳಿದಳು ಮತ್ತು ಗುರುವನ್ನು ಕರೆತಂದು ನೀತಿವಚನಗಳನ್ನು ಇಂದ್ರನಿಗೆ ಉಪದೇಶಮಾಡಿಸಿದಳು.

೧೫೮. ಗುರುವು ದಂಪತಿಗಳ ಶೃಂಗಾರರಸವನ್ನೊಳಗೊಂಡ ಹೊಸ ಶಾಸ್ತ್ರವನ್ನು ನಿರ್ಮಾಣಮಾಡಿ ಅದನ್ನು ಆ ಇಂದ್ರನಿಗೆ ಉಪದೇಶಿಸಿದನು.

೧೫೯. ಮತ್ತು ಬೃಹಸ್ಪತಿಯು ಅನೇಕ ವಿಧವಾದ ನೀತಿಶಾಸ್ತ್ರಗಳನ್ನು ಇಂದ್ರನಿಗೆ ಉಪದೇಶಮಾಡಿದನು. ಎಲೈ ಬೃಂದಾವನದಲ್ಲಿ ವಿನೋದದಿಂದಿರುವ ರಾಧೆಯೇ, ಬೃಹಸ್ಪತಿಯ ಉಪದೇಶದಿಂದ ಆ ಇಂದ್ರನು ಮತ್ತೆ ಮೊದಲಿನಂತೆ ರಾಜ್ಯಭಾರವನ್ನು ಮಾಡತೊಡಗಿದನು.

೧೬೦. ಈ ಪ್ರಕಾರ ನಂದಯಜ್ಞದಲ್ಲಿ ನನ್ನಿಂದ ಪ್ರತ್ಯಕ್ಷವಾಗಿ ನೋಡಲ್ಪಟ್ಟದ್ದ ಇಂದ್ರನ ದರ್ಪಭಂಗದ ಕಥೆಯನ್ನು ನಿನಗೆ ತಿಳಿಸಿರುವೆನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ನಾರದ ನಾರಾಯಣ ಸಂವಾದಾಂತರ್ಗತವಾದ ಕೃಷ್ಣ ರಾಧಾಸಂವಾದದಲ್ಲಿ ಇಂದ್ರನ ದರ್ಪಭಂಗವೆಂಬ ನಲವತ್ತೇಳನೆಯ ಅಧ್ಯಾಯವು ಮುಗಿದುದು.

ನಲವತ್ತೇಳನೆಯ ಅಧ್ಯಾಯದ ಸಾರಾಂಶ.

ಇಂದ್ರನ ಗರ್ವಭಂಗದ ಕಥೆಯನ್ನು ಕೇಳಲು ಬಯಸಿದ ರಾಧಾದೇವಿಗೆ ಶ್ರೀಕೃಷ್ಣನು ಈ ರೀತಿ ಉತ್ತರವಿತ್ತನು.

ಇಂದ್ರನು ನೂರುಯಾಗಮಾಡಿ 'ಶತಕ್ರತು'ವೆಂಬ ಕೀರ್ತಿಯನ್ನು ಗಳಿಸಿದು ದಲ್ಲದೆ ಗುರುವಾದ ಬೃಹಸ್ಪತಿಯಿಂದ ಮಂತ್ರೋಪದೇಶವನ್ನು ಹೊಂದಿ, ಜಪಿಸಿ ಸಿದ್ಧಿಯನ್ನು ಪಡೆದು ಬಹಳ ಗರ್ವಗೊಂಡನು. ಈ ರೀತಿ ಗರ್ವಿತನಾದ ದೇವ ರಾಜನು ಒಮ್ಮೆ ತನ್ನ ಸಭೆಯಲ್ಲಿ ಗುರುವಾದ ಬೃಹಸ್ಪತಿಗೆ ಉಚಿತವಾದ ಮರ್ಯಾದೆ ಮಾಡದೆ ತಿರಸ್ಕರಿಸಲು ಬೃಹಸ್ಪತಿಯು 'ನಿನ್ನ ಐಶ್ವರ್ಯವೆಲ್ಲವೂ ನಾಶವಾಗಲಿ' ಎಂದು ಶಪಿಸಿ ತಪಸ್ಸಿಗೆ ತೆರಳಿದನು. ಈ ರೀತಿ ಶಪ್ತನಾದ ಇಂದ್ರನು ಪಶ್ಚಾತ್ತಾಪ ಗೊಂಡು ಗುರುವಿನ ಕ್ಷಮೆಬೇಡಲು ಅವನ ಮನೆಗೆ ಹೋಗಿ ಅವನು ತಪಸ್ಸಿಗೆ ಹೋದುದನ್ನು ತಿಳಿದು ತಾರಾದೇವಿಯಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡನು. ತಾರಾದೇವಿಯು ಅವನನ್ನು ಸಮಾಧಾನಪಡಿಸಿ ಕಳುಹಿಸಿದಳು. ಅನಂತರ, ಒಮ್ಮೆ ಇಂದ್ರನು ದೇವಗಂಗಾನದಿಯಲ್ಲಿ ಸ್ನಾನಮಾಡುತ್ತಿದ್ದ ಗೌತಮನ ಪತ್ನಿಯಾದ ಅಹಲ್ಯೆಯ ಸೌಂದರ್ಯವನ್ನು ನೋಡಿ ಕಾಮಾಂಧನಾಗಿ ಗೌತಮನ ವೇಷವನ್ನು ಧರಿಸಿ ಆಕೆಯೊಡನೆ ರಮಿಸುತ್ತಿದ್ದನು. ಆ ಸಮಯಕ್ಕೆ ಸರಿಯಾಗಿ ಬಂದ ಗೌತಮ ಮಹರ್ಷಿಯು ಇಂದ್ರನ ಆ ಕಾರ್ಯಕ್ಕೆ ಕೋಪಗೊಂಡವನಾಗಿ ಅವನು 'ಸಹಸ್ರ ಯೋನಿ'ಯಾಗುವಂತೆಯೂ, ಅವನ ಶರೀರವೆಲ್ಲ ದುರ್ಗಂಧಪೂರ್ಣವಾಗು ವಂತೆಯೂ ಶಪಿಸಿದನು. ದೇವೇಂದ್ರನು ತನ್ನ ತಪ್ಪಿಗಾಗಿ ಪುಷ್ಕರಕ್ಷೇತ್ರದಲ್ಲಿ ಬಹಳ ಕಾಲ ತಪಸ್ಸುಮಾಡಿದನು. ಇತ್ತ ಅಹಲ್ಯೆಯೂ ಕೂಡ ಪತಿದೇವನಿಂದ ಶಿಲೆ ಯಾಗುವಂತೆ ಶಪ್ತಳಾಗಿ, ಬಹಳದಿವಸಗಳಕಾಲ ಕಾಡಿನಲ್ಲಿ ಬಿದ್ದಿದ್ದು ಶ್ರೀರಾಮ ಚಂದ್ರನ ಪಾದಧೂಳಿಯು ಸೋಕಿದಕೂಡಲೇ ಮೊದಲಿನ ರೂಪವನ್ನು ಹೊಂದಿ ಗೌತಮಮಹರ್ಷಿಯೊಡಗೂಡಿ ಸುಖದಿಂದಿದ್ದಳು.

ಮತ್ತೊಮ್ಮೆ ದೇವೇಂದ್ರನು ದುರ್ದೈವದಿಂದ ಬ್ರಹ್ಮಹತ್ಯಾಶಾಪಕ್ಕೊಳಗಾಗಿ ಗುರು ವಾದ ಬೃಹಸ್ಪತಿಯನ್ನು ಬಿಟ್ಟು, ಬ್ರಹ್ಮನ ಅಪ್ಪಣೆಯಂತೆ ವಿಶ್ವಕರ್ಮನ ಮಗನಾದ ವಿಶ್ವರೂಪನೆಂಬುವವನನ್ನು ಗುರುವಾಗಿ ಮಾಡಿಕೊಂಡನು. ಆದರೆ ಅವನು ರಾಕ್ಷಸ ನೆಂದು ತಿಳಿದ ಕೂಡಲೇ ಅವನ ತಲೆಯನ್ನು ಕತ್ತರಿಸಿದನು. ಆಗ ಅವನ ತಂದೆಯು ಯಾಗವೊಂದನ್ನು ಮಾಡಿ 'ಇಂದ್ರನ ಶತ್ರುವು ವರ್ಧಿಸುವಂತೆ ಮಂತ್ರಪೂರ್ವಕ ಹೋಮಮಾಡಿದನು. ಕೂಡಲೇ ಯಜ್ಞಕುಂಡದಿಂದ ವೃತ್ರನೆಂಬ ರಾಕ್ಷಸನು ಹುಟ್ಟಿ

ದೇವತೆಗಳ ನಿಗ್ರಹಮಾಡತೊಡಗಿದಾಗ ದೇವೇಂದ್ರನು ದಧೀಚಿಮುನಿಯ ಮೂಳೆಯಿಂದ ಮಾಡಿದ ವಜ್ರಾಯುಧದಿಂದ ಅವನನ್ನು ವಧಿಸಿ ಬ್ರಹ್ಮಹತ್ಯೆಗೊಳಗಾದನು. ಕೂಡಲೇ ಬ್ರಹ್ಮಹತ್ಯೆಯು ಭಯಂಕರರೂಪವನ್ನು ತಾಳಿ ಇಂದ್ರನನ್ನು ಬೆನ್ನಟ್ಟಲು ಇಂದ್ರನು ಮಾನಸಸರೋವರಕ್ಕೆ ಹೋಗಿ ಒಂದು ಸೂಕ್ಷ್ಮವಾದ ತಾವರೆಯದಂಟಿನ ನಾರದ ಮೂಲಕ ಒಳಕ್ಕೆ ಪ್ರವೇಶಿಸಿದನು. ಬ್ರಹ್ಮಹತ್ಯೆಯು ಬ್ರಹ್ಮಶಾಪದಿಂದ ಅಲ್ಲಿಗೆ ಹೋಗಲಾರದೆ ಅದರ ತೀರದಲ್ಲಿದ್ದ ಆಲದಮರದ ಕೊಂಬೆಯಲ್ಲಿ ವಾಸಿಸುತ್ತಿತ್ತು. ಆ ಸಮಯದಲ್ಲಿ ನಹುಷನು ಇಂದ್ರನ ಪದವಿಗೆ ಬಂದು ಶಚೀದೇವಿಯನ್ನು ಕಾಮಿಸಲು ಆ ದೇವಿಯು ತಾರಾದೇವಿಯ ಮರೆಹೊಕ್ಕಳು. ತಾರೆಯು ಬೃಹಸ್ಪತಿಗೆ ಶಚಿಯ ಭಯವನ್ನು ತಪ್ಪಿಸುವಂತೆ ಹೇಳಿದಳು. ಕೂಡಲೇ ಬೃಹಸ್ಪತಿಯು ಮಾನಸ ಸರೋವರಕ್ಕೆ ಹೋಗಿ ಇಂದ್ರನಿಗೆ ಅಭಯದಾನಮಾಡಿ, ಅವನಿಗೆ ರಾಧಾಕವಚವನ್ನು ಉಪದೇಶಿಸಿ, ತನ್ಮೂಲಕ ಬ್ರಹ್ಮಹತ್ಯೆಯನ್ನು ಪರಿಹರಿಸಿ, ಪುನಃ ಅವನನ್ನು ಅಮರಾವತಿಗೆ ಕರೆತಂದನು. ಇಂದ್ರನು ಅಮರಾವತಿಯೆಲ್ಲಾ ಪಾಳಾಗಿರುವುದನ್ನು ನೋಡಿ ಅದನ್ನು ಸುಂದರವಾಗಿ ನಿರ್ಮಿಸಲು ವಿಶ್ವಕರ್ಮನನ್ನು ನಿಯಮಿಸಿದನು. ವಿಶ್ವಕರ್ಮನು ಒಂದುನೂರುವರ್ಷಗಳಲ್ಲಿ ಅದನ್ನು ಸುಂದರವಾಗಿ ನಿರ್ಮಿಸಿದರೂ ಇಂದ್ರನ ಅಪ್ಪಣೆಯನ್ನು ಪಡೆದಲ್ಲದೆ ತನ್ನ ಮನೆಗೆ ಹೋಗುವಂತಿರಲಿಲ್ಲ. ಆಗ ವಿಷ್ಣುವು ಬ್ರಾಹ್ಮಣರೂಪದಿಂದ ಅಮರಾವತಿಗೆ ಬಂದನು. ಅಲ್ಲಿ ಇಂದ್ರನ ಗರ್ವವನ್ನು ಕಂಡು ಅವನಿಗೆ ಅಧ್ಯಾತ್ಮತತ್ತ್ವಗಳನ್ನುಪದೇಶಿಸಿ ಅವನ ಗರ್ವವನ್ನು ಭಂಗಗೊಳಿಸಿದನು.

ಆ ಸಮಯಕ್ಕೆ ಸರಿಯಾಗಿ ಲೋಮಶನೆಂಬ ಮುನಿಯೊಬ್ಬನು ಅಲ್ಲಿಗೆ ಬಂದನು. ಬ್ರಾಹ್ಮಣರೂಪದಿಂದಿದ್ದ ವಿಷ್ಣುವು ಆ ಮುನಿಯ ಎದೆಯಲ್ಲಿದ್ದ ಕೆಲವು ಕೂದಲುಗಳು ಮಾತ್ರ ಉದುರಿರಲು ಕಾರಣವೇನೆಂದು ಕೇಳಿದಾಗ 'ಒಬ್ಬೊಬ್ಬ ಇಂದ್ರನ ಅವಧಿಯು ಮುಗಿದನಂತರ ತನ್ನ ಎದೆಯ ಒಂದೊಂದು ಕೂದಲು ಉದುರುವುದಾಗಿ ಆ ಮುನಿಯು ಹೇಳಲು' ಅದನ್ನು ಕೇಳಿದ ಇಂದ್ರನು ಅದುವರೆಗೆ ಅಸಂಖ್ಯವಾದ ಇಂದ್ರರು ಕಳೆದುಹೋಗಿರುವರೆಂದು ತಿಳಿದು ತನ್ನ ಅಹಂಕಾರವನ್ನು ಬಿಟ್ಟು ವಿಶ್ವಕರ್ಮನನ್ನು ಅವನ ಮಂದಿರಕ್ಕೆ ಕಳುಹಿಸಿದನು. ಇತ್ತ ಆ ಬ್ರಾಹ್ಮಣ ಕುಮಾರನೂ, ಮುನಿಯೂ ಅಂತರ್ಧಾನರಾಗಲು ಇಂದ್ರನು ತನ್ನ ಮನೆಗೆ ಬಂದು ಮಗನಿಗೆ ರಾಜ್ಯಭಾರವನ್ನು ವಹಿಸಿ, ಶಚೀದೇವಿಯನ್ನು ಬಿಟ್ಟು ತಪಸ್ಸಿಗೆ ತೆರಳುವುದರಲ್ಲಿದ್ದನು. ಅಷ್ಟರಲ್ಲೇ ಬೃಹಸ್ಪತಿಯು ಶಚಿಯ ಪ್ರಾರ್ಥನೆಯಂತೆ ಬಂದು ಇಂದ್ರನಿಗೆ ಕಾಮಶಾಸ್ತ್ರವನ್ನುಪದೇಶಿಸಿ ಶಚೀದೇವಿಯೊಡನೆ ಸುಖವಾಗಿರುವಂತೆ ಮಾಡಿಹೋದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಅಷ್ಟಚತ್ವಾರಿಂಶೋಽಧ್ಯಾಯಃ ॥

॥ ರಾಧಿಕೋವಾಚ ॥

ಕಥಿತೋ ಭವತಾ ಮಹ್ಯಂ ದರ್ಪಭಂಗಃ ಶ್ರುತೋ ಹರೇಃ ।
ದರ್ಪಭಂಗಂ ರವೇಶ್ಚಾಪಿ ಶ್ರೋತುಮಿಚ್ಛಾಮಿ ತತ್ತ್ವತಃ ॥ ೧ ॥

॥ ಶ್ರೀಕೃಷ್ಣ ಉವಾಚ ॥

ಏಕದೈವೋದಯಂ ಕೃತ್ವಾ ರವಿರಸ್ತಂ ಜಗಾಮ ಹ ।
ಮಾಲೀ ಸುಮಾಲೀ ದೈತ್ಯೇಂದ್ರೌ ದೀಪ್ತಿಂ ಕರ್ತುಂ ಸಮುದ್ಯಯೌ ॥ ೨ ॥

ನಲವತ್ತೆಂಟನೆಯ ಅಧ್ಯಾಯವು.

೧. ರಾಧಿಕೆಯು :—ಎಲೈ ಕೃಷ್ಣನೇ ನಿನ್ನಿಂದ ನನಗಾಗಿ ಹೇಳಲ್ಪಟ್ಟ ಇಂದ್ರನ ದರ್ಪಭಂಗದ ಕಥೆಯು ನನ್ನಿಂದ ಕೇಳಲ್ಪಟ್ಟಿತು. ಈಗ ಸೂರ್ಯನ ದರ್ಪಭಂಗದಕಥೆಯನ್ನು ಕೇಳಬೇಕೆಂದು ಅಪೇಕ್ಷಿಸುತ್ತೇನೆ.

೨. ಶ್ರೀಕೃಷ್ಣನು :—ಒಂದಾನೊಂದು ದಿನ ಸೂರ್ಯನು ನಿತ್ಯದಂತೆ ಉದಯವನ್ನು ಹೊಂದಿ ಅಸ್ತವನ್ನೂ ಹೊಂದಿದನು. ಆಗ ಮಾಲಿ ಸುಮಾಲಿ ಎಂಬೀರ್ವರು ರಾಕ್ಷಸರು ಲೋಕಕ್ಕೆ ಬೆಳಕನ್ನುಂಟುಮಾಡಲು ಉದಯಿಸಿದರು.

ಮಹಾಸಂಪನ್ಮದೋನ್ಮತ್ತೌ ಶಂಕರಸ್ಯ ವರೇಣ ಚ ।
ತಯೋಶ್ಚ ಪ್ರಭಯಾ ರಾತ್ರಿ ರ್ನಭವೇದಿತಿ ಸುಂದರಿ ॥ ೩ ॥

ರುಷ್ಟಃ ಸೂರ್ಯಃ ಸ್ವಶೂಲೇನ ತೌ ಜಘಾನಾವಲೀಲಯಾ ।
ಪತಿತೌ ಸೂರ್ಯಶೂಲೇನ ಮೂರ್ಛಿತೌ ಧರಣೀತಲೇ ॥ ೪ ॥

ಭಕ್ತಾಪಾಯಂ ಚ ವಿಜ್ಞಾಯ ಶಂಕರೋ ಭಕ್ತವತ್ಸಲಃ ।
ಆಗತ್ಯ ಜೀವಯಾಮಾಸ ಮಹಾಜ್ಞಾನೇನ ತೌ ವಿಭುಃ ॥ ೫ ॥

ತೌ ಚ ನತ್ವಾ ಶಿವಂ ಭಕ್ತ್ಯಾ ಜಗ್ಮತುರ್ನಿಜಮಂದಿರಂ ।
ದುದ್ರಾವ ಚ ಮಹಾದೇವಃ ಸೂರ್ಯಂ ಹಂತುಂ ರುಷಾ ಜ್ವಲನ್ ॥ ೬ ॥

ದೃಷ್ಟ್ವಾ ಸಂಹಾರಕರ್ತಾರಂ ಜಿಘಾಂಸಂತಂ ಹರಂ ರವಿಃ ।
ಭಿಯಾ ಪಲಾಯಮಾನಶ್ಚ ಬ್ರಹ್ಮಾಣಂ ಶರಣಂ ಯಯೌ ॥ ೭ ॥

---

೩. ಶಂಕರನ ವರದಿಂದಲೂ, ಹೆಚ್ಚಾದ ಐಶ್ವರ್ಯದಿಂದಲೂ ಕೊಬ್ಬಿದ ಆ ರಾಕ್ಷಸರ ಕಾಂತಿಯಿಂದ ರಾತ್ರಿಯೇ ಆಗಲಿಲ್ಲ.

೪. ಆಗ ಸೂರ್ಯನು ಕೋಪಗೊಂಡವನಾಗಿ ತನ್ನ ಶೂಲಾಯುಧದಿಂದ ಸುಲಭವಾಗಿ ಆ ರಾಕ್ಷಸರನ್ನು ಹೊಡೆದನು. ಆ ಶೂಲದ ಹೊಡೆತದಿಂದ ರಾಕ್ಷಸರಿಬ್ಬರೂ ನೆಲದ ಮೇಲೆ ಬಿದ್ದು ಮೂರ್ಛೆಯನ್ನು ಹೊಂದಿದರು.

೫. ಭಕ್ತರಲ್ಲಿ ಪ್ರೀತಿಯುಳ್ಳ ಶಂಕರನು ತನ್ನ ಭಕ್ತರಾದ ರಾಕ್ಷಸರಿಗುಂಟಾದ ಅಪಾಯವನ್ನು ನೋಡಿ ಅಲ್ಲಿಗೆ ಬಂದು ರಾಕ್ಷಸರಿಬ್ಬರನ್ನೂ ದಿವ್ಯಜ್ಞಾನದಿಂದ ಬದುಕಿಸಿದನು.

೬. ಆ ರಾಕ್ಷಸರಿಬ್ಬರೂ ಬದುಕಿದವರಾಗಿ ಅತ್ಯಂತ ಭಕ್ತಿಯಿಂದ ಈಶ್ವರನಿಗೆ ನಮಸ್ಕಾರವನ್ನು ಮಾಡಿ ತಮ್ಮ ಮನೆಗೆ ಹೊರಟುಹೋದರು ಮಹಾದೇವನು ಕೋಪದಿಂದ ಉರಿಯುತ್ತ ಸೂರ್ಯನನ್ನು ಕೊಲ್ಲಲೋಸ್ಕರ ಅವನಿದ್ದೆಡೆಗೆ ಓಡಿಹೋದನು.

೭. ಸೂರ್ಯನು ಸಂಹಾರಕಾರಣನಾದ ಈಶ್ವರನು ತನ್ನನ್ನು ಕೊಲ್ಲುವ ಇಚ್ಛೆಯಿಂದ ಓಡಿಬರುತ್ತಿರುವುದನ್ನು ಕಂಡು ಬಹಳ ಹೆದರಿದವನಾಗಿ ಓಡುತ್ತ ಹೋಗಿ ಬ್ರಹ್ಮನನ್ನು ಮರೆಹೊಕ್ಕನು.

ದುದ್ರಾವ ಚ ಮಹಾದೇವೋ ಬ್ರಹ್ಮಣೋ ನಿಲಯಂ ರುಷಾ ।
ಶೂಲಮತ್ಯರ್ಥಮುದ್ಯಮ್ಯ ಕಾಲಕಾಲೋ ವಿಧೇರ್ವಿಧಿಃ　　॥ ೮ ॥

ದೃಷ್ಟ್ವಾ ಬ್ರಹ್ಮಾ ಹರಂ ರುಷ್ಟಂ ತುಷ್ಟಾವ ಪರಮೇಶ್ವರಂ ।
ಚತುರ್ವಕ್ತ್ರೇಣ ವೇದೋಕ್ತಸ್ತೋತ್ರೇಣ ಜಗತಾಂ ಪತಿಃ　　॥ ೯ ॥

॥ ಬ್ರಹ್ಮೋವಾಚ ॥

ಪ್ರಸೀದ ದಕ್ಷಯಜ್ಞಘ್ನ ಸೂರ್ಯಂ ಮಚ್ಛರಣಾಗತಂ ।
ತ್ವಯೈವ ಸೃಷ್ಟಃ ಸೃಷ್ಟೇಶ್ಚ ಸಮಾರಂಭೇ ಜಗದ್ಗುರೋ　　॥ ೧೦ ॥

ಆಶುತೋಷ ಮಹಾಭಾಗ ಪ್ರಸೀದ ಭಕ್ತವತ್ಸಲ ।
ಕೃಪಯಾ ಚ ಕೃಪಾಸಿಂಧೋ ರಕ್ಷ ರಕ್ಷ ದಿವಾಕರಂ　　॥ ೧೧ ॥

ಬ್ರಹ್ಮಸ್ವರೂಪ ಭಗವನ್ ಸೃಷ್ಟಿಸ್ಥಿತ್ಯಂತಕಾರಣ ।
ಸ್ವಯಂ ರವಿಂ ವಿನಿರ್ಮಾಯ ಸ್ವಯಂ ಸಂಹರ್ತುಮಿಚ್ಛಸಿ　　॥ ೧೨ ॥

---

೮. ಇದನ್ನು ಕಂಡು ಮೃತ್ಯುವಿಗೆ ಮೃತ್ಯುವೂ, ಬ್ರಹ್ಮನಿಗೆ ಬ್ರಹ್ಮನೂ ಆದ ಆ ಮಹಾದೇವನು ಅತ್ಯಂತ ಕೋಪದಿಂದ ಕೂಡಿದವನಾಗಿ ಬ್ರಹ್ಮನ ಮನೆಯ ಕಡೆಗೆ ಓಡಿದನು.

೯. ಈಶ್ವರನು ಕೋಪಗೊಂಡಿರುವುದನ್ನು ಕಂಡು ಜಗತ್ತಿಗೆ ಪತಿಯಾದ ಬ್ರಹ್ಮನು ತನ್ನ ನಾಲ್ಕು ಮುಖಗಳಿಂದಲೂ ವೇದದಲ್ಲಿ ಹೇಳಿರುವ ಸ್ತೋತ್ರಗಳಿಂದ ಪರಮೇಶ್ವರನನ್ನು ಸ್ತೋತ್ರ ಮಾಡಿದನು.

೧೦. ಬ್ರಹ್ಮನು:—ಎಲೈ ಜಗತ್ತಿಗೆ ಗುರುವೇ, ದಕ್ಷಯಜ್ಞವನ್ನು ನಾಶ ಮಾಡಿದವನೇ, ನಿನ್ನಿಂದಲೇ ಸೃಷ್ಟಿಯ ಆರಂಭದಲ್ಲಿ ಸೃಷ್ಟಿಸಲ್ಪಟ್ಟಿರುವ, ಈಗ ನನ್ನನ್ನು ಮರೆಹೊಕ್ಕಿರುವ ಸೂರ್ಯನಮೇಲೆ ದಯೆದೋರು.

೧೧. ಎಲೈ ದಯಾಸಮುದ್ರನೇ, ಜಾಗ್ರತೆಯಾಗಿ ಸಂತೋಷಪಡುವವನೇ. ಮಹಾತ್ಮನೇ, ದಯೆಯಿಂದ ಸೂರ್ಯನನ್ನು ಕಾಪಾಡು ಕಾಪಾಡು.

೧೨. ಎಲೈ ಬ್ರಹ್ಮಸ್ವರೂಪನೇ, ಭಗವಂತನೇ, ಸೃಷ್ಟಿಸ್ಥಿತಿಲಯಗಳಿಗೆ ಕಾರಣನೇ, ಸೂರ್ಯನನ್ನು ಸೃಷ್ಟಿಮಾಡಿ ನೀನೇ ಅವನನ್ನು ಕೊಲ್ಲಬೇಕೆಂದಿರುವಿಯಾ ?

ಸ್ವಯಂ ಬ್ರಹ್ಮಾ ಸ್ವಯಂ ಶೇಷೋ ಧರ್ಮಃ ಸೂರ್ಯೋ ಹುತಾಶನಃ ।
ಇಂದ್ರಚಂದ್ರಾದಯೋ ದೇವಾಃ ತ್ವತ್ತೋ ಭೀತಾಃ ಪರಾತ್ಪರಃ ॥ ೧೩ ॥

ಋಷಯೋ ಮುನಯಶ್ಚೈವ ತ್ವಾಂ ನಿಷೇವ್ಯ ತಪೋಧನಾಃ ।
ತಪಸಾಂ ಫಲದಾತಾ ತ್ವಂ ತಪಸ್ತ್ವಂ ತಪಸಾಂ ಫಲಂ ॥ ೧೪ ॥

ಇತ್ಯೇವಮುಕ್ತ್ವಾ ಬ್ರಹ್ಮಾ ತಂ ಸೂರ್ಯಮಾನೀಯ ಭಕ್ತಿತಃ ।
ಪ್ರೀತ್ಯಾ ಸಮರ್ಪಯಾಮಾಸ ಶಂಕರೇ ದೀನವತ್ಸಲೇ ॥ ೧೫ ॥

ಶಂಭುಸ್ತಮಾಶಿಷಂ ಕೃತ್ವಾ ವಿಧಿಂ ನತ್ವಾ ಜಗದ್ವಿಧಿಃ ।
ಪ್ರಸನ್ನವದನಃ ಶ್ರೀಮಾನಾಲಯಂ ಪ್ರಯಯೌ ಮುದಾ ॥ ೧೬ ॥

ಇತಿ ಧಾತೃಕೃತಂ ಸ್ತೋತ್ರಂ ಸಂಕಟೇ ಯಃ ಪಠೇನ್ನರಃ ।
ಭಯಾತ್ಪ್ರಮುಚ್ಯತೇ ಭೀತೋ ಬದ್ಧೋ ಮುಚ್ಯೇತ ಬಂಧನಾತ್ ॥ ೧೭ ॥

---

೧೩. ಬ್ರಹ್ಮನೂ, ಶೇಷನೂ, ಧರ್ಮನೂ, ಸೂರ್ಯನೂ, ಅಗ್ನಿಯೂ, ಇಂದ್ರನೂ, ಚಂದ್ರನೇ ಮೊದಲಾದ ದೇವತೆಗಳೆಲ್ಲರೂ ಪರಾತ್ಪರನಾದ ನಿನ್ನಿಂದ ಭಯಪಡುತ್ತಾರೆ.

೧೪. ಋಷಿಗಳು ಮುನಿಗಳೂ ಕೂಡ ನಿನ್ನನ್ನು ಭಜಿಸಿ ತಪೋಧನರಾಗಿರುತ್ತಾರೆ. ನೀನು ತಪಸ್ಸುಗಳ ಫಲವನ್ನು ಕೊಡುವವನೂ ತಪೋರೂಪನೂ ಆಗಿರುವೆ.

೧೫. ಈ ಪ್ರಕಾರ ಹೇಳಿ ಬ್ರಹ್ಮನು ದೀನರಲ್ಲಿ ದಯೆಯುಳ್ಳ ಶಂಕರನಿಗೆ ಸಂತೋಷದಿಂದ ಸೂರ್ಯನನ್ನು ತಂದು ಒಪ್ಪಿಸಿದನು.

೧೬. ಈಶ್ವರನು ಆಶೀರ್ವಾದವನ್ನು ಮಾಡಿ ಬ್ರಹ್ಮನಿಗೆ ನಮಸ್ಕಾರವನ್ನು ಮಾಡಿ ಸಂತೋಷಗೊಂಡ ಮುಖದಿಂದ ತನ್ನ ಮನೆಗೆ ಹೋದನು.

೧೭–೧೮. ಈ ಪ್ರಕಾರ ಬ್ರಹ್ಮನು ಮಾಡಿದ ಸ್ತೋತ್ರವನ್ನು ಯಾವನು ಹೇಳುವನೋ ಆ ಮನುಷ್ಯನು ಭಯಗೊಂಡವನಾದರೆ ಭಯದಿಂದಲೂ, ಬಂಧನ

ರಾಜದ್ವಾರೇ ಶ್ಮಶಾನೇ ಚ ಮಗ್ನಪೋತೇ ಮಹಾರ್ಣವೇ ।
ಸ್ತೋತ್ರಸ್ಮರಣಮಾತ್ರೇಣ ಮುಚ್ಯತೇ ನಾಽತ್ರಸಂಶಯಃ ॥ ೧೮ ॥

ಇತಿ ಬ್ರಹ್ಮವೈವರ್ತಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರದನಾರಾಯಣ ಸಂವಾದೇ ಶ್ರೀಕೃಷ್ಣರಾಧಾ ಸಂವಾದೇ ಸೂರ್ಯದರ್ಪಭಂಗೋ ನಾಮಾಷ್ಟಚತ್ವಾರಿಂಶೋಽಧ್ಯಾಯಃ

ದಲ್ಲಿದ್ದರೆ ಬಂಧನದಿಂದಲೂ, ಬಿಡುಗಡೆಯನ್ನು ಹೊಂದುತ್ತಾನೆ. ಅರಮನೆಯಲ್ಲಿಯೂ ಸ್ಮಶಾನದಲ್ಲಿಯೂ ಸಮುದ್ರದಲ್ಲಿ ಹಡಗು ಒಡೆದು ಹೋದಾಗಲೂ ಈ ಸ್ತೋತ್ರವನ್ನು ಸ್ಮರಣೆಮಾಡುವಮಾತ್ರದಿಂದಲೇ ಮುಕ್ತನಾಗುತ್ತಾನೆ. ಸಂಶಯವಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ
ನಾರದ ನಾರಾಯಣ ಸಂವಾದಾಂತರ್ಗತವಾದ ಶ್ರೀಕೃಷ್ಣ
ರಾಧಾಸಂವಾದದಲ್ಲಿ ಸೂರ್ಯನ ದರ್ಪಭಂಗವೆಂಬ
ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

ನಲವತ್ತೈಟಂನೆಯ ಅಧ್ಯಾಯದ ಸಾರಾಂಶ.

ಒಮ್ಮೆ ಸೂರ್ಯದೇವನು ನಿತ್ಯದಂತೆ ಉದಯಿಸಿ ಅಸ್ತವಾಗಿದ್ದಾಗ ಮಾಲಿ ಸುಮಾಲಿಯರೆಂಬ ಇಬ್ಬರು ರಾಕ್ಷಸರು ಉದಯಿಸಿ ಲೋಕಕ್ಕೆ ಬೆಳಕನ್ನು ಕೊಟ್ಟರು. ಶಂಕರನ ವರಪ್ರಸಾದದಿಂದ ಕೊಬ್ಬಿದ್ದ ಆ ರಾಕ್ಷಸರ ಕಾಂತಿಯಿಂದ ಲೋಕದಲ್ಲಿ ಕತ್ತಲೇ ಇಲ್ಲದಂತಾಯಿತು. ಆಗ ಸೂರ್ಯನು ಕೋಪಗೊಂಡವನಾಗಿ ತನ್ನ ಶೂಲಾಯುಧದಿಂದ ಆ ರಾಕ್ಷಸರನ್ನು ಹೊಡೆದು ಮೂರ್ಛೆಗೊಳಿಸಿದನು. ಕೂಡಲೇ ಭಕ್ತವತ್ಸಲನಾದ ಶಂಕರನು ಅಲ್ಲಿಗೆ ಬಂದು ತನ್ನ ಭಕ್ತರನ್ನು ಪ್ರತ್ಯುಜ್ಜೀವಗೊಳಿಸಿದುದಲ್ಲದೆ, ಸೂರ್ಯನನ್ನು ನಾಶಗೊಳಿಸಲು ಹೊರಟನು. ಆಗ ಸೂರ್ಯನು ಬ್ರಹ್ಮನನ್ನು ಮರೆಹೊಗಲು ಬ್ರಹ್ಮನು ಶಂಕರನನ್ನು ಸ್ತುತಿಸಿ ಸೂರ್ಯನನ್ನು ಅವನಿಗೆ ಒಪ್ಪಿಸಿದನು. ಈಶ್ವರನು ಆಗ ಸೂರ್ಯನ ವಿಷಯದಲ್ಲಿ ಪ್ರಸನ್ನನಾಗಿ ಹೊರಟುಹೋದನು. ಈ ರೀತಿಯಾಗಿ ಸೂರ್ಯನ ಗರ್ವಭಂಗವುಂಟಾಯಿತೆಂದು ಶ್ರೀಕೃಷ್ಣನು ರಾಧಾದೇವಿಗೆ ತಿಳಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಏಕೋನಪಂಚಾಶತ್ತಮೋऽಧ್ಯಾಯಃ ॥

॥ ಶ್ರೀಕೃಷ್ಣ ಉವಾಚ ॥

ಸೂರ್ಯಃ ಪ್ರಣಮ್ಯ ಬ್ರಹ್ಮಾಣಂ ಮುದಾ ಯುಕ್ತಸ್ತದಾಜ್ಞಯಾ ।
ಚಕಾರ ವಿನಯಂ ಪ್ರೀತ್ಯಾ ತೇಜಸ್ವೀ ತ್ರಿಗುಣಾತ್ಮಕಃ ॥ ೧ ॥

ಅಥ ವಹ್ನೇರುಪಾಖ್ಯಾನಂ ಸಾವಧಾನಂ ನಿಶಾಮಯ ।
ಗೋಪನೀಯಂ ಪುರಾಣೇಷು ಕರ್ಣಪೀಯೂಷಮುತ್ತಮಂ ॥ ೨ ॥

ತ್ರೈಲೋಕ್ಯಂ ಭಸ್ಮಸಾತ್ಕರ್ತುಮೇಕದಾಗ್ನಿಃ ಸಮುದ್ಯತಃ ।
ಶತತಾಲಪ್ರಮಾಣಾಂ ತಾಂ ಶಿಖಾಂ ಕೃತ್ವಾ ಭಯಾನಕೀಂ ॥ ೩ ॥

ನಲವತ್ತೊಂಭತ್ತನೆಯ ಅಧ್ಯಾಯವು.

೧. ಶ್ರೀಕೃಷ್ಣನು :—ಸತ್ವರಜಸ್ತಮೋಗುಣರೂಪನಾಗಿ ಮಹಾತೇಜಸ್ವಿಯಾದ ಸೂರ್ಯನು ಸಂತೋಷದಿಂದ ಬ್ರಹ್ಮನಿಗೆ ನಮಸ್ಕಾರವನ್ನು ಮಾಡಿ ವಿನಯವನ್ನು ತೋರಿಸಿದನು.

೨. ಇನ್ನು ಅಗ್ನಿಯ ಕಥೆಯನ್ನು ಸಾವಧಾನವಾಗಿ ಕೇಳು. ಪುರಾಣಗಳಲ್ಲಿ ಈ ಕಥೆಯು ಅತ್ಯಂತ ಗುಪ್ತವಾಗಿರುವುದಲ್ಲದೆ ಕೇಳಲು ಕಿವಿಗಳಿಗೆ ಉತ್ತಮ ಅಮೃತದಂತಿರುವುದು.

೩–೪. ಒಂದಾನೊಂದು ಕಾಲದಲ್ಲಿ ಅಗ್ನಿಯು ಭೃಗುಮುನಿಯಿಂದ ಶಾಪ ವನ್ನು ಹೊಂದಿದವನಾಗಿ ವ್ಯಥೆಗೊಂಡು ತಾನು ಅತ್ಯಂತ ತೇಜಸ್ವಿಯೆಂದೂ ಇತರರು

ಕ್ಷುಭಿತಃ ಕುಪಿತಶ್ಚೈವ ಭೃಗೋಃ ಶಾಪಸ್ಯ ಕಾರಣಾತ್ ।
ಸ್ವಂ ಚ ತೇಜಸ್ವಿನಂ ಮತ್ವಾ ತುಚ್ಛಂ ಮತ್ವಾಽನ್ಯಮಾತ್ಮನಃ ॥ ೪ ॥

ಏತಸ್ಮಿನ್ನಂತರೇ ವಿಷ್ಣು ರಾಜಗಾಮಾವಲೀಲಯಾ ।
ವಹ್ನೇಸ್ತಾಂ ದಾಹಿಕೀಂ ಶಕ್ತಿಂ ತಾಂ ಜಹಾರ ಪುರಃ ಸ್ಥಿತಃ ॥ ೫ ॥

ಮಾಯಯಾ ಶಿಶುರೂಪೀ ಚ ತಮುವಾಚ ಜನಾರ್ದನಃ ।
ಸಸ್ಮಿತೋ ವಿನಯಂ ಕೃತ್ವಾ ಭಕ್ತಿನಮ್ರಾತ್ಮಕಂಧರಃ ॥ ೬ ॥

॥ ಶಿಶುರುವಾಚ ॥

ಕಥಂ ರುಷ್ಟೋಽಸಿ ಭಗವನ್ಬ್ರವಾನ್ಮಾಂ ಕಾರಣಂ ವದ ।
ತ್ರೈಲೋಕ್ಯಂ ಭಸ್ಮಸಾತ್ಕರ್ತುಮುದ್ಯತೋಽಸಿ ನಿರರ್ಥಕಂ ॥ ೭ ॥

ತ್ವಮೇವ ಭೃಗುಣಾ ಶಪ್ತೋ ಭೃಗೋಶ್ಚ ದಮನಂ ಕುರು ।
ಏಕಾಪರಾಧಾತ್ತ್ರೈಲೋಕ್ಯಂ ಭಸ್ಮೀಕರ್ತುಂ ನ ಚಾರ್ಹಸಿ ॥ ೮ ॥

ತನಗಿಂತಲೂ ಹೀನರೆಂದೂ ತಿಳಿದು ಕೋಪದಿಂದ ಅತಿ ಭಯಂಕರವಾದ ನೂರು ತಾಳೇಮರದೆತ್ತರವಾದ ಜ್ವಾಲೆಗಳನ್ನು ಮಾಡಿಕೊಂಡು ಮೂರು ಲೋಕಗಳನ್ನೂ ಸುಡಲು ಪ್ರಾರಂಭಿಸಿದನು.

೫. ಈ ಸಂದರ್ಭದಲ್ಲಿ ವಿಷ್ಣುವು ಅಲ್ಲಿಗೆ ಸುಲಭವಾಗಿ ಬಂದನು ಅಗ್ನಿಯ ಎದುರಿನಲ್ಲಿ ನಿಂತು ಅವನ ಸುಡುವ ಶಕ್ತಿಯನ್ನು ಅಪಹಾರಮಾಡಿದನು.

೬. ತನ್ನ ಮಾಯೆಯಿಂದ ಬಾಲಕನ ರೂಪವನ್ನು ಧರಿಸಿಕೊಂಡು ಅತ್ಯಂತ ವಿನಯದಿಂದ ಮಂದಹಾಸವನ್ನು ಬೀರುತ್ತ ಭಕ್ತಿಯಿಂದ ತಲೆಯನ್ನು ಬಾಗಿಸಿಕೊಂಡು ಆ ಜನಾರ್ದನನು ಅಗ್ನಿಯನ್ನು ಕುರಿತು ಈ ಪ್ರಕಾರ ಹೇಳಿದನು.

೭. ಬಾಲಕನು :—ಎಲೈ ಪೂಜ್ಯನೇ, ನೀನು ಏಕೆ ಕೋಪಗೊಂಡಿರುವಿ ? ಇದಕ್ಕೆ ಕಾರಣವೇನು ? ನನಗೆ ತಿಳಿಸು. ನೀನು ನಿಷ್ಪ್ರಯೋಜನವಾಗಿ ಮೂರು ಲೋಕಗಳನ್ನೂ ಸುಟ್ಟು ಬೂದಿಮಾಡಲು ತೊಡಗಿರುವೆಯೇಕೆ ?

೮. ನೀನು ಭೃಗುಮುನಿಯಿಂದ ಶಾಪವನ್ನು ಹೊಂದಿರುವೆ, ಆದಕಾರಣ ಭೃಗುಮುನಿಗೆ ಪ್ರತೀಕಾರವನ್ನು ಮಾಡು. ಒಬ್ಬನು ಮಾಡಿದ ತಪ್ಪಿಗಾಗಿ ಮೂರು ಲೋಕಗಳನ್ನೂ ಸುಡುವುದು ನ್ಯಾಯವಲ್ಲ.

ವಿಶ್ವಂ ಚ ಬ್ರಹ್ಮಣಾ ಸೃಷ್ಟಂ ತಸ್ಯ ಪಾತಾ ಸ್ವಯಂ ಹರಿಃ ।
ಸಂಹರ್ತಾ ಭಗವಾನ್ರುದ್ರ ಏವಮೇವ ಕ್ರಮೋ ಭವೇತ್ ॥ ೯ ॥

ತತ್ಕಥಂ ಭಸ್ಮಸಾತ್ಕರ್ತುಮೀಶ್ವರೇ ಶಂಕರೇ ಸ್ಥಿತೇ ।
ರಕ್ಷಿತಾರಂ ಹರಿಂ ಜಿತ್ವಾ ಸಂಹಾರಂ ಕುರು ಸತ್ವರಂ ॥ ೧೦ ॥

ಇತ್ಯುಕ್ತ್ವಾ ಬ್ರಾಹ್ಮಣವಟುಃ ಶರಪತ್ರಂ ಪುರಃ ಸ್ಥಿತಂ ।
ಅತಿಶುಷ್ಕಂ ಕರೇ ಧೃತ್ವಾ ದಗ್ಧುಂ ಕರ್ತುಂ ದದೌ ಮುದಾ ॥ ೧೧ ॥

ದೃಷ್ಟ್ವಾ ಶುಷ್ಕೇಂಧನೋ ವಹ್ನಿರ್ಲೇಲಿಹಾನೋ ಭಯಾನಕಃ ।
ಸ ವವ್ರೇ ಶಿಖಯಾ ವಿಪ್ರಂ ಮೇಘೇನ ಶಶಿನಂ ಯಥಾ ॥ ೧೨ ॥

೯. ಈ ಪ್ರಪಂಚವನ್ನು ಬ್ರಹ್ಮನು ಸೃಷ್ಟಿಮಾಡಿರುತ್ತಾನೆ. ಅದನ್ನು ವಿಷ್ಣುವು ಕಾಪಾಡುತ್ತಾನೆ. ಪೂಜ್ಯನಾದ ರುದ್ರನು ಅದನ್ನು ಸಂಹಾರಮಾಡುತ್ತಾನೆ. ಈ ರೀತಿಯಾದ ಕ್ರಮವಿರುತ್ತದೆ.

೧೦. ಆದಕಾರಣದಿಂದ ಜಗತ್ತನ್ನು ಬೂದಿಮಾಡಲು ಯಜಮಾನನಾಗಿ ಶಂಕರನಿರಲು ನೀನು ಹೇಗೆ ಆ ಕೆಲಸದಲ್ಲಿ ತೊಡಗಿರುವಿ? ಜಗದ್ರಕ್ಷಕನಾದ ಹರಿಯನ್ನು ಜಯಿಸಿ ಅನಂತರ ಬೇಗನೆ ಜಗತ್ತನ್ನು ಸಂಹಾರಮಾಡು.

೧೧. ಬ್ರಾಹ್ಮಣ ಕುಮಾರನು ಹೀಗೆ ಹೇಳಿ ಮುಂದೆ ಬಿದ್ದಿದ್ದ ಒಂದು ಒಣಗಿದ ದರ್ಭಪತ್ರವನ್ನು ಕೈಯಲ್ಲಿ ತೆಗೆದುಕೊಂಡು ಅದನ್ನು ಸುಡುವುದಕ್ಕಾಗಿ ಕೊಟ್ಟನು.

೧೨. ಅಗ್ನಿಯು ಒಣಗಿದ ಆ ಪತ್ರವನ್ನು ನೋಡಿ ಭಯಂಕರ ರೂಪವನ್ನು ತಾಳಿದವನಾಗಿ ನಾಲಿಗೆಯನ್ನು ಸವರುತ್ತ ಭಯಂಕರವಾದ ತನ್ನ ಜ್ವಾಲೆಯಿಂದ ಆ ಪತ್ರವನ್ನೂ ಮತ್ತು ಆ ಶಿಶುವನ್ನೂ ಆವರಿಸಿಕೊಂಡನು.

ನ ಚ ದಗ್ಧಂ ಶುಷ್ಕಪತ್ರಂ ಲೋಮೈಕಂ ಚ ಶಿಶೋಸ್ತಥಾ ।
ದೃಷ್ಟ್ವಾ ವ್ರೀಡಾಯುತೋ ವಹ್ನಿರ್ನಿಸ್ತಬ್ಧೋ ಹಿ ಶಿಶೋಃ ಪುರಃ ॥ ೧೩ ॥

ಕೃತ್ವಾ ವಹ್ನೇರ್ದರ್ಪಭಂಗಮಂತರ್ಧಾನಂ ಚಕಾರ ಸಃ ।
ವಹ್ನಿಃ ಸ್ವಮೂರ್ತಿಂ ಸಂಹೃತ್ಯ ಸ್ವಸ್ಥಾನಂ ಭೀತವದ್ಯಯೌ ॥ ೧೪ ॥

ಉಕ್ತೋ ವಹ್ನೇರ್ದರ್ಪಭಂಗಃ ಪರಂ ವೈ ಶ್ರೋತುಮಿಚ್ಛಸಿ ।
ನಿತ್ಯನೂತನಮಾಖ್ಯಾನಂ ದೇವಾನಾಂ ದರ್ಪಮೋಚನಂ ॥ ೧೫ ॥

॥ ಶ್ರೀ ರಾಧಿಕೋವಾಚ ॥

ಶೇಷಾಣಾಂ ದರ್ಪಭಂಗಂ ಚ ಕ್ರಮೇಣ ಕಥಯ ಪ್ರಭೋ ।
ಕಥಾಪೀಯೂಷಧಾರಾಂ ತೇ ಶ್ರುತ್ವಾ ತೃಪ್ಯೇತ ಕೋ ಭುವಿ ॥ ೧೬ ॥

---

೧೩. ಆದರೆ ಆ ಒಣಗಿದೆಲೆಯ ಮತ್ತು ಬಾಲಕನ ಒಂದು ಕೂದಲೂ, ಕೂಡ ಸುಡಲಿಲ್ಲ. ಇದನ್ನು ನೋಡಿ ಅಗ್ನಿಯು ನಾಚಿಕೆಯಿಂದ ಕುಮಾರನ ಮುಂದೆ ಅಲ್ಲಾಡದೆ ನಿಂತನು.

೧೪. ವಿಷ್ಣುವು ಅಗ್ನಿಯ ದರ್ಪವನ್ನು ಮುರಿದು ಅಲ್ಲಿಯೇ ಮಾಯವಾದನು. ಅಗ್ನಿಯು ತನ್ನ ಆಕಾರವನ್ನು ಕಡಿಮೆಮಾಡಿಕೊಂಡು ಹೆದರಿದವನಂತೆ ತನ್ನ ಸ್ಥಳಕ್ಕೆ ತೆರಳಿದನು.

೧೫. ಎಲೈ ರಾಧೆಯೇ, ಅಗ್ನಿಯ ದರ್ಪಭಂಗದ ಕಥೆಯನ್ನು ಹೇಳಿರುವೆನು. ಇನ್ನೇನನ್ನು ಕೇಳಲಪೇಕ್ಷಿಸುವಿ? ಈ ದೇವತೆಗಳ ದರ್ಪಭಂಗದ ಕಥೆಯು ಯಾವಾಗಲೂ ಹೊಸದಾಗಿ ಕಾಣುತ್ತಿರುವುದು.

೧೬. ರಾಧಿಕೆಯು :—ಎಲೈ ಪ್ರಭುವೇ, ಉಳಿದ ದೇವತೆಗಳ ದರ್ಪಭಂಗದ ಕಥೆಯನ್ನು ಹೇಳುವವನಾಗು. ನಿನ್ನ ಅಮೃತದಂತಿರುವ ಕಥೆಯ ಧಾರೆಯನ್ನು ಕೇಳಿ ಯಾವನು ತೃಪ್ತನಾಗಬಲ್ಲನು?

॥ ಶ್ರೀ ನಾರಾಯಣ ಉವಾಚ ॥

ರಾಧಿಕಾವಚನಂ ಶ್ರುತ್ವಾ ಸಸ್ಮಿತೋ ಭಗವಾನ್ಪ್ರಭುಃ ।
ಕಥಾಂ ಕಥಿತುಮಾರೇಭೇ ಶ್ರುತ್ವಾ ರಮ್ಯಾಂ ಪುರಾತನೀಂ ॥ ೧೭ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಅಗ್ನಿದರ್ಪಮೋಚನಂ
ನಾಮೈಕೋನಪಂಚಾಶತ್ತಮೋಽಧ್ಯಾಯಃ

---

೧೭. ನಾರಾಯಣನು :—ರಾಧೆಯ ಮಾತನ್ನು ಕೇಳಿ ಪೂಜ್ಯನಾದ ಕೃಷ್ಣನು ಮಂದಹಾಸವನ್ನು ಬೀರುತ್ತ ಬಹಳ ಪುರಾತನವೂ ಮನೋಹರವೂ ಆದ ಕಥೆಯನ್ನು ಹೇಳಲು ಪ್ರಾರಂಭಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ
ನಾರದ ನಾರಾಯಣ ಸಂವಾದಾಂತರ್ಗತವಾದ ಶ್ರೀಕೃಷ್ಣ
ರಾಧಾ ಸಂವಾದದಲ್ಲಿ ಅಗ್ನಿಯ ದರ್ಪನಾಶನವೆಂಬ
ನಲವತ್ತೊಂಭತ್ತನೆಯ ಅಧ್ಯಾಯವು
ಸಮಾಪ್ತವಾದುದು.

ನಲವತ್ತೊಂಭತ್ತನೆಯ ಅಧ್ಯಾಯದ ಸಾರಾಂಶ.

ಒಮ್ಮೆ ಅಗ್ನಿದೇವನು ಭೃಗುಮುನಿಯ ಶಾಪಕ್ಕೊಳಗಾಗಿ ವ್ಯಥೆಗೊಂಡು, ತಾನೇ ಅತಿತೇಜಸ್ವಿಯೆಂಬ ಗರ್ವದಿಂದ ನೂರು ತಾಳೀಮರದೆತ್ತರ ಉರಿಯಲಾರಂಭಿಸಿದನು. ಆಗ ವಿಷ್ಣುವು ಬಾಲಕನ ರೂಪದಲ್ಲಿ ಬಂದು ಅಗ್ನಿದೇವನಿಗೆ ವಿವೇಕವನ್ನು ಹೇಳಿ, ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳು ಕ್ರಮವಾಗಿ ಬ್ರಹ್ಮ ವಿಷ್ಣು ಮಹೇಶ್ವರರಿಗೆ ಸೇರುವುದರಿಂದ ನೀನು ಜಗತ್ತನ್ನು ನಾಶಮಾಡುವುದುಚಿತವಲ್ಲವೆಂದೂ, ಭೃಗು ಮುನಿಯಮೇಲೆ ನಿನಗೆ ಕೋಪವಿರುವುದಾದರೆ ಅವನನ್ನು ನಾಶಗೊಳಿಸಬಹುದೆಂದೂ ಹೇಳಿದನು. ಆದರೂ ಅಗ್ನಿಯು ಶಾಂತನಾಗದಿರಲು, ಶಿಶುರೂಪಿಯಾದ ವಿಷ್ಣುವು ಅಗ್ನಿಯ ಮುಂದೆ ಒಣಗಿದ ದರ್ಭೆಪತ್ರವೊಂದನ್ನಿಟ್ಟು ಅದನ್ನು ಸುಡಲು ಹೇಳಿದನು. ಅಗ್ನಿಯು ದರ್ಪದಿಂದ ಆ ಪತ್ರವನ್ನೂ, ಶಿಶುವನ್ನೂ ಸಹ ಸುಡಲು ತನ್ನ ಜ್ವಾಲಾ ಜಿಹ್ವೆಗಳನ್ನು ನೋಡಿ ವ್ಯರ್ಥಮನೋರಥನಾಗಿ ಲಜ್ಜೆಗೊಂಡು ಹಿಂತಿರುಗಿದನು. ಕೂಡಲೇ ವಿಷ್ಣುವು ಅಂತರ್ಧಾನ ಹೊಂದಿದನು.

ಈ ರೀತಿ ಅಗ್ನಿಯ ದರ್ಪಭಂಗವುಂಟಾಯಿತೆಂದು ಶ್ರೀಕೃಷ್ಣನು ರಾಧೆಗೆ ತಿಳಿಸಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ
ಶ್ರೀಕೃಷ್ಣಜನ್ಮಖಂಡೇ

|| ಪಂಚಾಶತ್ತಮೋಽಧ್ಯಾಯಃ ||

|| ಶ್ರೀಕೃಷ್ಣ ಉವಾಚ ||

ದುರ್ವಾಸಸೋ ದರ್ಪಭಂಗಂ ಕಥಯಾಮಿ ಶೃಣು ಪ್ರಿಯೇ ।
ಮಹಾಮುನೇರ್ಯೋಗತಶ್ಚ ರುದ್ರಾಂಶಸ್ಯಾತಿತೇಜಸಃ || ೧ ||

ಏಕದಾ ಚಾಂಬರೀಷಶ್ಚ ಕೃತ್ವಾ ಚ ದ್ವಾದಶೀವ್ರತಂ ।
ಪಾರಣಂ ಕರ್ತುಮಾರೇಭೇ ಭೋಜಯಿತ್ವಾ ದ್ವಿಜಾನ್ ಬಹೂನ್ || ೨ ||

ಏತಸ್ಮಿನ್ನಂತರೇ ತತ್ರ ಚಾಜಗಾಮ ಮುನಿಃ ಸ್ವಯಂ ।
ಕ್ಷುಧಾರ್ತಶ್ಚ ತೃಷಾರ್ತಶ್ಚ ವಿಷ್ಣುವ್ರತಪರಾಯಣಃ || ೩ ||

ಐವತ್ತನೆಯ ಅಧ್ಯಾಯವು.

೧. ಶ್ರೀಕೃಷ್ಣನು:—ಎಲೈ ಪ್ರಿಯನೇ, ಮಹಾಮುನಿಯೂ, ಯೋಗಸಿದ್ಧನೂ, ರುದ್ರನ ಅಂಶಾವತಾರನೂ, ಮಹಾ ತೇಜಸ್ವಿಯೂ ಆದ ದೂರ್ವಾಸ ಮುನಿಯ ದರ್ಪಭಂಗದ ಕಥೆಯನ್ನು ಹೇಳುವೆನು ಕೇಳು.

೨. ಒಂದಾನೊಂದು ದಿನ ಅಂಬರೀಷ ಮಹಾರಾಜನು ದ್ವಾದಶೀ ವ್ರತವನ್ನು ಮಾಡಿ ಅನೇಕ ಮಂದಿ ಬ್ರಾಹ್ಮಣರನ್ನು ಭೋಜನಮಾಡಿಸಿ ತಾನು ಪಾರಣೆಯನ್ನು ಮಾಡಲು ಪ್ರಾರಂಭಿಸಿದನು.

೩. ಆ ಸಮಯಕ್ಕೆ ಸರಿಯಾಗಿ ಏಕಾದಶೀವ್ರತದಲ್ಲಿ ನಿರತನಾದ ದೂರ್ವಾಸ ಮುನಿಯು ಹಸಿವು ಬಾಯಾರಿಕೆಗಳಿಂದ ಬಳಲಿದವನಾಗಿ ಅಲ್ಲಿಗೆ ಬಂದನು.

ಮಾಂ ಭೋಜಯ ಮಹಾಭಾಗೇತ್ಯೇವಂ ಸ ನೃಪಮುಕ್ತವಾನ್ ।
ರಾಜಾ ಭಕ್ತ್ಯಾ ದದೌ ತಸ್ಮೈ ಪರಮಾನ್ನಂ ಸುಧೋಪಮಂ ॥ ೪ ॥

ಸಕೇಶಂ ಪಾಯಸಂ ದೃಷ್ಟ್ವಾ ರಾಜಾನಂ ಶಪ್ತುಮುದ್ಯತಃ ।
ಜಟಾಂ ನಿಕೃತ್ಯ ಶಿರಸಃ ಸ್ಥಾಪಯಾಮಾಸ ಭೂತಲೇ ॥ ೫ ॥

ಜಟಾಮಧ್ಯಾತ್ಸಮುದ್ಭೂತೋ ಜ್ವಲದಗ್ನಿಶಿಖೋಪಮಃ ।
ಸಪ್ತತಾಲಪ್ರಮಾಣಶ್ಚ ಪುರುಷಃ ಪ್ರಲಯಾಂತಕಃ ॥ ೬ ॥

ನೃಪಶ್ರೇಷ್ಠಂ ಸ ರಾಜಾನಂ ಕೋಪೇನ ಹಂತುಮುದ್ಯತಃ ।
ಭಯೇನ ಕಂಪಿತಾಃ ಸರ್ವೇ ಶುಷ್ಕಕಂಠೋಷ್ಠತಾಲುಕಾಃ ॥ ೭ ॥

ಸಸ್ಮಾರ ಚ ಮಹಾಭೀತೋ ರಾಜಾ ಮಮ ಪದಾಂಬುಜಂ ।
ಸರ್ವವಿಘ್ನಸ್ಯೋಪಶಮಃ ಸ್ಮೃತಿಮಾತ್ರಾದ್ಬಭೂವ ಹ ॥ ೮ ॥

---

೪. ಎಲೈ ಮಹಾತ್ಮನೇ ನನಗೆ ಭೋಜನವನ್ನು ಮಾಡಿಸು ಎಂದು ರಾಜನನ್ನು ಕುರಿತು ಆ ಮುನಿಯು ಹೇಳಿದನು. ರಾಜನು ಬಹಳ ಭಕ್ತಿಯಿಂದ ಆ ಮುನಿಗೆ ಅಮೃತದಂತಿರುವ ಪಾಯಸವನ್ನು ಬಡಿಸಿದನು.

೫. ಆ ಪಾಯಸದಲ್ಲಿ ಒಂದು ಕೂದಲು ಇದ್ದುದನ್ನು ಕಂಡು ಮುನಿಯು ರಾಜನನ್ನು ಶಪಿಸಲು ತೊಡಗಿದನು. ತನ್ನ ತಲೆಯಿಂದ ಜಟೆಯನ್ನು ಕಿತ್ತು ನೆಲದ ಮೇಲೆ ಬಿಸುಟನು.

೬. ಆ ಜಟೆಯ ಮಧ್ಯದಿಂದ ಏಳು ತಾಳೆಯ ಮರದಷ್ಟು ಎತ್ತರನಾದ ಉರಿಯುತ್ತಿರುವ ಬೆಂಕಿಯ ಜ್ವಾಲೆಗೆ ಸಮನಾದ ಪ್ರಳಯಕಾಲದ ಯಮನಂತಿರುವ ಒಬ್ಬ ಮನುಷ್ಯನು ಹುಟ್ಟಿದನು.

೭. ಆ ಮನುಷ್ಯನು ರಾಜರಿಗೆಲ್ಲ ಶ್ರೇಷ್ಠನಾದ ಅಂಬರೀಷ ಮಹಾರಾಜನನ್ನು ಕೊಲ್ಲಲು ಸಿದ್ಧನಾದನು. ಅಲ್ಲಿದ್ದವರೆಲ್ಲರೂ ಇದನ್ನು ನೋಡಿ ಒಣಗಿಹೋದ ಗಂಟಲು ತುಟಿಗಳುಳ್ಳವರಾಗಿ ಭಯದಿಂದ ನಡುಗಿದರು.

೮. ರಾಜನೂ ಕೂಡ ಹೆದರಿದವನಾಗಿ ನನ್ನ ಪಾದಪಂಕಜಗಳನ್ನು ಸ್ಮರಿಸಿದನು. ಸ್ಮರಣೆಮಾಡಿದ ಮಾತ್ರದಿಂದಲೇ ಸಕಲ ತೊಂದರೆಗಳೂ ನಾಶವಾದುವು.

ಏತಸ್ಮಿನ್ನಂತರೇ ಚಕ್ರಂ ದುರ್ನಿವಾರ್ಯಂ ಸುದರ್ಶನಂ ।
ತೇಜಸಾ ಮಮ ತುಲ್ಯಂ ಚ ಕೋಟಿಸೂರ್ಯಪ್ರಭೋಪಮಂ ॥ ೯ ॥

ಆವಿರ್ಬಭೂವ ಸಹಸಾ ಸಭಾಮಧ್ಯೇ ಚ ಘೂರ್ಣಿತಂ ।
ನಿಕೃತ್ಯ ಕೃತ್ಯಾಪುರುಷಂ ದುದ್ರಾವ ಮುನಿಪುಂಗವಂ ॥ ೧೦ ॥

ಸಶೈಲಸಾಗರಾಂ ಪೃಥ್ವೀಂ ಕಾಂಚನೀಂ ಭೂಮಿಮುತ್ತಮಾಂ ।
ಭ್ರಾಮಯಿತ್ವಾ ಮಹೀಂ ಸರ್ವಾಂ ಪುನರ್ದುದ್ರಾವ ತಂ ಮುನಿಂ ॥ ೧೧ ॥

ಧಾವಂತಂ ಮುಕ್ತಕೇಶಂ ತಂ ಭೀತಂ ಕಾತರಮಾತುರಂ ।
ತೇಜಸಾಽಽಚ್ಛಾದ್ಯ ಸೂರ್ಯಂ ತಂ ದೀಪ್ತಿಂ ಕುರ್ವಂತಮುತ್ತಮಾಂ ॥ ೧೨ ॥

ಕೈಲಾಸಂ ಸಪ್ತವರ್ಗಂ ಚ ಬ್ರಹ್ಮಲೋಕಮನಾಮಯಂ ।
ವಿಪ್ರೇಂದ್ರೋ ಭ್ರಮಣಂ ಕೃತ್ವಾ ವೈಕುಂಠಂ ಶರಣಂ ಯಯೌ ॥ ೧೩ ॥

---

೯. ಈ ಸಂದರ್ಭದಲ್ಲಿ ಯಾರಿಂದಲೂ ತಡೆಯಲಸಾಧ್ಯವಾದ, ತೇಜಸ್ಸಿನಲ್ಲಿ ನನಗೆ ಸಮಾನವಾದ ಕೋಟಿ ಸೂರ್ಯರಂತೆ ಪ್ರಕಾಶಮಾನವಾದ, ನನ್ನ ಸುದರ್ಶನವೆಂಬ ಚಕ್ರವು ಅಲ್ಲಿ ಪ್ರತ್ಯಕ್ಷವಾಯಿತು.

೧೦. ಅದು ಪರ್ವತಗಳು ಸಮುದ್ರಗಳು ಇವುಗಳಿಂದ ಕೂಡಿದ ಭೂಮಿಯನ್ನೂ ಸುಮೇರು ಪರ್ವತದ ಭೂಮಿಯನ್ನೂ ಸಕಲ ಭೂಮಂಡಲವನ್ನೂ ಸಹಸ್ತುತಿಸಿ ಮತ್ತೆ ಆ ಮುನಿಯನ್ನೂ ಅಟ್ಟಿಸಿಕೊಂಡು ಹೋಯಿತು.

೧೧-೧೨. ಭಯದಿಂದ ಗಾಬರಿಗೊಂಡು ತಲೆಯ ಕೂದಲು ಬಿಚ್ಚಿ ಕೆದರಿರಲು, ತನ್ನ ಕಾಂತಿಯಿಂದ ಸೂರ್ಯನನ್ನೂ ಮುಚ್ಚಿ ಪ್ರಕಾಶಮಾನವಾಗಿರುವ ಆ ದೂರ್ವಾಸಮುನಿಯು ಕೈಲಾಸವನ್ನೂ ಸಪ್ತಸ್ವರ್ಗಲೋಕಗಳನ್ನೂ ಬ್ರಹ್ಮಲೋಕವನ್ನೂ ಸುತ್ತಿ ಕೊನೆಗೆ ವಿಷ್ಣುವನ್ನು ಮರೆಹೊಕ್ಕನು.

೧೩. ವಿಷ್ಣುವು ತನ್ನ ಪಾದಕಮಲಗಳ ಮೇಲೆ ಬಿದ್ದಿರುವ ಬ್ರಾಹ್ಮಣ ಶ್ರೇಷ್ಠನನ್ನು ನೋಡಿದನು. ದಯಾಸಮುದ್ರನಾದ ಆ ವಿಷ್ಣುವು ದಯೆಯಿಂದ ಆ ದೂರ್ವಾಸಮುನಿಗೆ ಅಭಯವನ್ನು ಕೊಟ್ಟನು.

ಪಾದಪದ್ಮೇ ಪತಂತಂ ಚ ದದರ್ಶ ವಿಪ್ರಪುಂಗವಂ ।
ಕೃಪಯಾ ಚ ಕೃಪಾಸಿಂಧುರ್ದದೌ ವಿಪ್ರಾಯ ನಿರ್ಭಯಂ ॥ ೧೪ ॥

ನಾರಾಯಣವರೇಣೈವ ಬಭೂವ ವಿಜ್ವರೋ ದ್ವಿಜಃ ।
ಪುನರ್ಯಯೌ ಹರಿಂ ಸ್ತುತ್ವಾ ನೃಪಗೇಹಂ ತದಾಜ್ಞಯಾ ॥ ೧೫ ॥

ರಾಜಾ ಮುನೀಂದ್ರಂ ಸಂಪ್ರಾಪ್ಯ ಭೋಜಯಾಮಾಸ ಪಾಯಸಂ ।
ಸ್ವಯಂ ಚ ಪಾರಣಂ ಚಕ್ರೇ ಸಸ್ತ್ರೀಕಃ ಸಹಬಾಂಧವಃ ॥ ೧೬ ॥

ರಾಜಾನಮಾಶಿಷಂ ಕೃತ್ವಾ ಭುಕ್ತ್ವಾ ವಿಪ್ರೋ ಗೃಹಂ ಯಯೌ ।
ಮಯಾ ನಿಯೋಜಿತಂ ಚಕ್ರಂ ಭಕ್ತಾನಾಂ ರಕ್ಷಣಾಯ ಚ ॥ ೧೭ ॥

---

೧೪. ನಾರಾಯಣನ ವರದಿಂದಲೇ ಆ ಮುನಿಯು ನಿರ್ಭಯನಾದನು. ಮತ್ತು ಹರಿಯನ್ನು ಸ್ತೋತ್ರಮಾಡಿ ಅವನ ಅಪ್ಪಣೆಯಿಂದ ಅಂಬರೀಷರಾಜನ ಮನೆಗೆ ಮತ್ತೆ ಬಂದನು.

೧೫. ಅಂಬರೀಷಮಹಾರಾಜನು ದೂರ್ವಾಸಮುನಿಯನ್ನಿದಿರ್ಗೊಂಡು ಅವನಿಗೆ ಪಾಯಸವನ್ನು ಭೋಜನಮಾಡಿಸಿದನು. ತಾನೂ ಕೂಡ ತನ್ನ ಪತ್ನಿಯರಿಂದಲೂ ಬಂಧುಗಳಿಂದಲೂ ಸಹಿತನಾಗಿ ಪಾರಣೆಯನ್ನು ಮಾಡಿದನು.

೧೬. ದೂರ್ವಾಸ ಮುನಿಯು ಭೋಜನವನ್ನು ಮಾಡಿ ರಾಜನಿಗೆ ಆಶೀರ್ವಾದವನ್ನು ಮಾಡಿ ತನ್ನ ಮನೆಗೆ ಹೊರಟನು ಭಕ್ತರನ್ನು ಕಾಪಾಡ ಲೋಸ್ಕರ ನಾನು ನನ್ನ ಚಕ್ರವನ್ನು ನಿಯಮಿಸಿರುವೆನು.

೧೭. ಪ್ರಳಯ ಕಾಲದಲ್ಲಿ ಸಕಲವೂ ನಾಶವಾಗುತ್ತವೆ. ನನ್ನಭಕ್ತನು ಮಾತ್ರ ನಾಶ ಹೊಂದುವುದಿಲ್ಲ. ಸಕಲ ದೇವತೆಗಳೂ ನನಗೆ ಪ್ರಾಣದಂತಿರುವರು. ನನ್ನ ಭಕ್ತರಾದರೋ ನನಗೆ ಪ್ರಾಣಕ್ಕಿಂತಲೂ ಹೆಚ್ಚಿನವರಾಗಿರುವರು.

ನಶ್ಯಂತಿ ಸರ್ವೇ ಪ್ರಲಯೇ ನ ಮೇ ಭಕ್ತಃ ಪ್ರಣಶ್ಯತಿ ।
ಸರ್ವೇ ದೇವಾ ಮಮ ಪ್ರಾಣಾ ಭಕ್ತಾಃ ಪ್ರಾಣಾಧಿಕಾ ಮಮ ॥ ೧೮ ॥

ತ್ವಂ ಚ ಲಕ್ಷ್ಮೀರ್ಮಹಾಮಾಯಾ ಸಾವಿತ್ರೀ ವಾ ಸರಸ್ವತೀ ।
ಬ್ರಹ್ಮಾ ಶಂಭುರನಂತಶ್ಚ ಧರ್ಮಶ್ಚ ಬ್ರಾಹ್ಮಣಾಸ್ತಥಾ ॥ ೧೯ ॥

ಗೋಪಾಂಗನಾಶ್ಚ ಗೋಪಾಶ್ಚ ಸರ್ವೇ ಪ್ರಿಯತಮಾ ಮಮ ।
ತೇಭ್ಯಃ ಪ್ರಿಯಾಃ ಪರಾಭಕ್ತಾಃ ಪ್ರಿಯೋ ಭಕ್ತಾನ್ನ ಕಶ್ಚನ ॥ ೨೦ ॥

ದತ್ವಾ ಸುದರ್ಶನಂ ಚಕ್ರಂ ಭಕ್ತಾನಾಂ ರಕ್ಷಣಾಯ ಚ ।
ತಥಾಪಿ ನ ಪ್ರತೀತಿರ್ಮೇ ಸ್ವಯಂ ದ್ರಷ್ಟುಂ ಪ್ರಯಾಮಿ ತಾನ್ ॥ ೨೧ ॥

ದುರ್ವಾಸಸೋ ದರ್ಪಭಂಗಃ ಶ್ರುತೋ ಮತ್ತಃ ಸುರೇಶ್ವರಿ ।
ಅಜ್ಞಾಪಯ ಮಹಾಭಾಗೇ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೨೨ ॥

೧೮-೨೦. ನನಗೆ ನೀನೂ ಮಹಾಮಾಯಾಸ್ವರೂಪಿಣಿಯಾದ ಲಕ್ಷ್ಮಿಯೂ, ಸಾವಿತ್ರಿಯೂ, ಸರಸ್ವತಿಯೂ, ಬ್ರಹ್ಮನೂ, ಈಶ್ವರನೂ, ಅನಂತನೂ, ಧರ್ಮನೂ, ಬ್ರಾಹ್ಮಣರೂ, ಗೋಪಿಯರೂ, ಗೋಪರೂ ಎಲ್ಲರೂ ಪ್ರಿಯರಾಗಿರುತ್ತಾರೆ. ಇವರೆಲ್ಲರಿಗಿಂತಲೂ ನನಗೆ ನನ್ನ ಭಕ್ತರು ಅತ್ಯಂತ ಪ್ರಿಯರಾಗಿರುತ್ತಾರೆ. ಭಕ್ತನಿಗಿಂತಲೂ ಪ್ರಿಯನಾದವನು ಯಾವನೊಬ್ಬನೂ ಇರುವುದಿಲ್ಲ.

೨೧. ಭಕ್ತರನ್ನು ರಕ್ಷಣೆಮಾಡುವುದಕ್ಕೋಸ್ಕರ ಸುದರ್ಶನ ಚಕ್ರವನ್ನು ಕೊಟ್ಟಿರುವೆನಾದರೂ ನನಗೆ ಅಷ್ಟು ಮಾತ್ರದಿಂದ ನಂಬಿಕೆಯಿಲ್ಲದೆ ನಾನೇ ಸ್ವಂತವಾಗಿ ಆ ಭಕ್ತರನ್ನು ನೋಡಲು ಹೋಗುವೆನು.

೨೨. ಎಲೈ ದೇವಿಯೇ, ದೂರ್ವಾಸಮುನಿಯ ದರ್ಪಭಂಗದ ಕಥೆಯನ್ನು ನನ್ನಿಂದ ಕೇಳಿರುವೆ. ಎಲೈ ಮಹಾತ್ಮಳೇ, ಮತ್ತೇನನ್ನು ಕೇಳಲಪೇಕ್ಷಿಸುವೆ? ಅಪ್ಪಣೆಮಾಡು.

॥ ಶ್ರೀ ರಾಧಿಕೋವಾಚ ॥

ಧನ್ವಂತರೇರ್ದರ್ಪಭಂಗಂ ಕಥಯಸ್ವ ಜಗದ್ಗುರೋ ।
ಪುರಾಣೇ ಗೋಪನೀಯಂ ಚ ಶ್ರೋತುಂ ಕೌತೂಹಲಂ ಮಮ ॥ ೨೩ ॥

॥ ಶ್ರೀ ನಾರಾಯಣ ಉವಾಚ ॥

ರಾಧಿಕಾವಚನಂ ಶ್ರುತ್ವಾ ಜಹಾಸ ಮಧುಸೂದನಃ ।
ಕಥಾಂ ಕಥಿತುಮಾರೇಭೇ ಶ್ರುತಿರಮ್ಯಾಂ ಪುರಾತನೀಂ ॥ ೨೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರಾಯಣ ನಾರದಸಂವಾದೇ ದುರ್ವಾಸಸೋ ದರ್ಪಭಂಗೋ ನಾಮ ಪಂಚಾಶತ್ತಮೋಽಧ್ಯಾಯಃ

---

೨೩. ರಾಧಿಕೆಯು :—ಎಲೈ ಜಗತ್ತಿನ ಗುರುವೇ ; ಪುರಾಣಗಳಲ್ಲಿ ಬಹಳ ಗುಪ್ತವಾಗಿರುವ ಧನ್ವಂತರಿಯ ದರ್ಪಭಂಗದ ಕಥೆಯನ್ನು ಕೇಳಬೇಕೆಂಬ ಕುತೂಹಲ ವುಂಟಾಗಿರುತ್ತೆ. ಆದುದರಿಂದ ಆ ಕಥೆಯನ್ನು ಹೇಳು.

೨೪. ನಾರಾಯಣನು :—ರಾಧೆಯ ಮಾತನ್ನು ಕೇಳಿ ಶ್ರೀಕೃಷ್ಣನು ನಗುತ್ತ ಪುರಾತನವಾದ ಮತ್ತು ಕಿವಿಗೆ ಇಂಪಾದ ಕಥೆಯನ್ನು ಹೇಳಲಾರಂಭಿಸಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣ ಜನ್ಮಖಂಡದ ನಾರದ ನಾರಾಯಣ ಸಂವಾದಾಂತರ್ಗತವಾದ ಶ್ರೀಕೃಷ್ಣ ರಾಧಿಕಾ ಸಂವಾದದಲ್ಲಿ ದೂರ್ವಾಸರ ದರ್ಪಭಂಗವೆಂಬ ಐವತ್ತನೆಯ ಅಧ್ಯಾಯವು ಸಮಾಪ್ತವಾದುದು.

ಐವತ್ತನೆಯ ಅಧ್ಯಾಯದ ಸಾರಾಂಶ.

ದೂರ್ವಾಸಮುನಿಯ ದರ್ಪಭಂಗದ ಕಥೆ:—ಒಮ್ಮೆ ಅಂಬರೀಷ ಮಹಾರಾಜನು ದ್ವಾದಶೀವ್ರತವನ್ನು ಮಾಡಿ ಅಸಂಖ್ಯಬ್ರಾಹ್ಮಣರಿಗೆ ಭೋಜನಮಾಡಿಸಿ ತಾನೂ ಪಾರಣೆಯನ್ನು ಮಾಡಲಾರಂಭಿಸಿದನು. ಆ ಸಮಯಕ್ಕೆ ಸರಿಯಾಗಿ ಏಕಾದಶೀವ್ರತವನ್ನಾಚರಿಸಿ ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿದ್ದ ದೂರ್ವಾಸಮುನಿಯು ಅಲ್ಲಿಗೆ ಬಂದನು. ಅಂಬರೀಷನು ಬಂದ ಅತಿಥಿಯನ್ನು ಭಕ್ತಿವಿಶ್ವಾಸಗಳಿಂದ ಸ್ವಾಗತಿಸಿ ಅಮೃತಾನ್ನವನ್ನೂ ಪಾಯಸವನ್ನೂ ಕೊಡಲು, ಆ ಮುನಿಗೆ ಪಾಯಸದಲ್ಲಿ ಒಂದು ಕೂದಲು ಸಿಕ್ಕಿತು. ಕೂಡಲೇ ಕುಪಿತನಾದ ಮುನಿಯು ಅಂಬರೀಷನನ್ನು ಶಪಿಸುತ್ತ ತನ್ನ ಜಟೆಗಳನ್ನು ಕಿತ್ತೆಸೆದನು. ಆ ಜಟಾರಾಶಿಯಿಂದ ಪ್ರಳಯರುದ್ರನಂತೆ ಭೀಕರನಾದ ಪುರುಷನೊಬ್ಬನು ಹುಟ್ಟಿ ಬಂದು ಅಂಬರೀಷನನ್ನು ಕೊಲ್ಲಲುದ್ಯುಕ್ತನಾದನು. ಆಗ ಅಂಬರೀಷನು ಭಯಭಕ್ತಿಯಿಂದ ಶ್ರೀಕೃಷ್ಣನನ್ನು ಧ್ಯಾನಿಸಲು ಶ್ರೀಕೃಷ್ಣನ ಸುದರ್ಶನಚಕ್ರವು ಅವನ ರಕ್ಷಣೆಗಾಗಿ ಅಲ್ಲಿಗೆ ಬಂದಿತು. ಆ ಚಕ್ರವು ಆ ಮುನಿಯನ್ನು ಎಲ್ಲಿ ಹೋದರೂ ಬಿಡದೆ ಬೆನ್ನಟ್ಟಿತು. ಆಗ ಆ ಮುನಿಯು ವಿಷ್ಣುವಿಗೆ ಶರಣಾಗತನಾದನು. ವಿಷ್ಣುವು ದೂರ್ವಾಸನಿಗೆ ಅಭಯವನ್ನು ಕೊಟ್ಟು, ತನ್ನ ಭಕ್ತನಾದ ಅಂಬರೀಷನ ಆತಿಥ್ಯವನ್ನು ಸ್ವೀಕರಿಸಬೇಕೆಂದು ಹೇಳಲು ದೂರ್ವಾಸನು ಅಲ್ಲಿಗೆ ಹೋಗಿ ಅವನು ಕೊಟ್ಟ ಪಾಯಸವನ್ನು ಸ್ವೀಕರಿಸಿದನು. ಅನಂತರ ಅಂಬರೀಷನೂ ಪತ್ನಿಯೊಡನೆ ಪಾರಣೆಮಾಡಿದನು. ಇಂತು ಭಕ್ತವತ್ಸಲನಾದ ವಿಷ್ಣುವು ಅಂಬರೀಷನಿಗೆ ಅನುಗ್ರಹಮಾಡಿದುದಲ್ಲದೆ ದೂರ್ವಾಸಮುನಿಯ ಗರ್ವವನ್ನೂ ಭಂಗಪಡಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ಏಕಪಂಚಾಶತ್ತಮೋಽಧ್ಯಾಯ ॥

॥ ಶ್ರೀಕೃಷ್ಣ ಉವಾಚ ॥

ನಾರಾಯಣಾಂಶೋ ಭಗವಾನ್ ಸ್ವಯಂ ಧನ್ವಂತರಿರ್ಮಹಾನ್ ।
ಪುರಾ ಸಮುದ್ರಮಥನೇ ಸಮುತ್ತಸ್ಥೌ ಮಹೋದಧೇಃ ॥ ೧ ॥

ಸರ್ವವೇದೇಷು ನಿಷ್ಣಾತೋ ಮಂತ್ರತಂತ್ರವಿಶಾರದಃ ।
ಶಿಷ್ಯೋ ಹಿ ವೈನತೇಯಸ್ಯ ಶಂಕರಸ್ಯೋಪಶಿಷ್ಯಕಃ ॥ ೨ ॥

ಶಿಷ್ಯಾಣಾಂ ಚ ಸಹಸ್ರೇಣ ಗತಃ ಕೈಲಾಸಮೀಶ್ವರಿ ।
ದದರ್ಶ ತಕ್ಷಕಂ ಮಾರ್ಗೇ ಲೇಲಿಹಾನಂ ಭಯಾನಕಂ ॥ ೩ ॥

ಐವತ್ತೊಂದನೆಯ ಅಧ್ಯಾಯ.

೧. ಶ್ರೀಕೃಷ್ಣನು:–ಹಿಂದೆ ಸಮುದ್ರಮಥನ ಕಾಲದಲ್ಲಿ ಸಾಕ್ಷಾನ್ನಾರಾಯಣನ ಅಂಶವನ್ನು ಹೊಂದಿದ ಪೂಜ್ಯನಾದ ಧನ್ವಂತರಿಯು ಸಮುದ್ರದಿಂದ ಮೇಲಕ್ಕೆ ಬಂದನು.

೨. ಆ ಧನ್ವಂತರಿಯು ಸಕಲ ವೇದಗಳಲ್ಲಿಯೂ ನಿಪುಣನಾಗಿ ಸಕಲ ಮಂತ್ರತಂತ್ರಗಳಲ್ಲಿಯೂ ಪ್ರಾಜ್ಞನಾಗಿ ಗರುಡನ ಮುಖ್ಯ ಶಿಷ್ಯನೂ ಈಶ್ವರನ ಶಿಷ್ಯ ಸಮೂಹದಲ್ಲಿ ಸೇರಿದವನೂ ಆಗಿದ್ದನು.

೩. ಆವನು ಒಂದುದಿನ ಸಾವಿರಜನ ಶಿಷ್ಯರೊಡನೆ ಕೈಲಾಸಕ್ಕೆ ಹೋದನು. ಅಲ್ಲಿ ದಾರಿಯಲ್ಲಿ ಭಯಂಕರನಾದ, ನಾಲಿಗೆಯನ್ನು ಸವರಿಕೊಳ್ಳುತ್ತಿರುವ ತಕ್ಷಕನನ್ನು ಕಂಡನು.

ಲಕ್ಷನಾಗೈಃ ಪರಿವೃತಂ ಶೈಲತುಲ್ಯಂ ವಿಷೋಲ್ಬಣಂ ।
ಭೋಕ್ತುಂ ಕೋಪಾತ್ಸಮಾಯಾಂತಮೇವಂ ದೃಷ್ಟ್ವಾ ಜಹಾಸ ಚ ॥ ೪ ॥

ದಂಭೀ ಧನ್ವಂತರೇಃ ಶಿಷ್ಯೋ ಧೃತ್ವಾ ತಕ್ಷಕಮುಲ್ಬಣಂ ।
ಮಂತ್ರೇಣ ಜೃಂಭಿತಂ ಕೃತ್ವಾ ನಿರ್ವಿಷಂ ತಂ ಚಕಾರ ಹ ॥ ೫ ॥

ಅಮೂಲ್ಯಂ ಮಣಿರತ್ನಂ ಚ ಜಹಾರ ಮಸ್ತಕೇ ಸ್ಥಿತಂ ।
ಕರೇಣ ಭ್ರಾಮಯಿತ್ವಾ ಚ ಪ್ರೇರಯಾಮಾಸ ದೂರತಃ ॥ ೬ ॥

ನಿಶ್ಚೇಷ್ಟಸ್ತಕ್ಷಕಸ್ತಸ್ಥೌ ತತ್ರ ಮಾರ್ಗೇ ಯಥಾ ಮೃತಃ ।
ಗಣಾ ನಿವೇದನಂ ಚಕ್ರುರ್ಗತ್ವಾ ವಾಸುಕಿಸನ್ನಿಧಿಂ ॥ ೭ ॥

ವಾಸುಕಿಸ್ತತ್ಸಮಾಕರ್ಣ್ಯ ಪ್ರಜ್ವಲನ್ನತಿಕೋಪತಃ ।
ಸರ್ಪಾನ್ ಪ್ರಸ್ಥಾಪಯಾಮಾಸಾ ಸಂಖ್ಯಾಂಶ್ಚೈವ ವಿಷೋಲ್ಬಣಾನ್ ॥ ೮ ॥

---

೪. ಒಂದು ಲಕ್ಷಸರ್ಪಗಳೊಡನೆ ಕೂಡಿಕೊಂಡು ಪರ್ವತಕ್ಕೆ ಸಮಾನನಾಗಿ, ಘೋರವಿಷದಿಂದ ಕೂಡಿ ಕೋಪದಿಂದ ತಿನ್ನಲು ಬರುತ್ತಿರುವ ಆ ಸರ್ಪನನ್ನು ನೋಡಿ ಧನ್ವಂತರಿಯು ನಕ್ಕನು.

೫. ಧನ್ವಂತರಿಯ ಶಿಷ್ಯರಲ್ಲೊಬ್ಬನು ಇದನ್ನು ನೋಡಿ ಮಹಾವಿಷವನ್ನು ಕಾರುತ್ತಿದ್ದ ಆ ತಕ್ಷಕನನ್ನು ಕೈಯಲ್ಲಿ ಹಿಡಿದುಕೊಂಡು ಮಂತ್ರದಿಂದ ಬಾಯಿಯನ್ನು ಅಗಲಿಸಿ ವಿಷವಿಲ್ಲದಂತೆ ಮಾಡಿದನು.

೬. ಮತ್ತು ತಲೆಯ ಮೇಲಿದ್ದ ಮಹಾಬೆಲೆಯುಳ್ಳ ರತ್ನಮಣಿಯನ್ನು ಅಪಹರಿಸಿದನು. ಅಲ್ಲದೆ ಅದನ್ನು ಕೈಯಲ್ಲಿ ಹಿಡಿದುಕೊಂಡು ತಿರುಗಿಸಿ ದೂರ ಬಿಸುಟನು.

೭. ತಕ್ಷಕನು ಅಲ್ಲಿಯೇ ದಾರಿಯಲ್ಲಿ ಅಲ್ಲಾಡದವನಾಗಿ ಸತ್ತವನಂತೆ ಬಿದ್ದಿದ್ದನು. ಸರ್ಪಗಣಗಳು ವಾಸುಕಿಯ ಸಮೀಪಕ್ಕೆ ಹೋಗಿ ಸಮಾಚಾರವನ್ನು ತಿಳಿಸಿದುವು.

೮. ವಾಸುಕಿಯು ಆ ಸಮಾಚಾರವನ್ನು ಕೇಳಿ ಕೋಪದಿಂದುರಿಯುತ್ತ ಮಹಾವಿಷಗಳಿಂದ ಕೂಡಿದ ಲೆಕ್ಕವಿಲ್ಲದಷ್ಟು ಸರ್ಪಗಳನ್ನು ಕಳುಹಿದನು.

ಸರ್ಪಸೇನಾಗ್ರಣೀನಾಂ ಚ ಮುಖ್ಯಾನ್ಪಂಚ ವಿಶಾರದಾನ್ ।
ದ್ರೋಣಕಾಲೀಯಕರ್ಕೋಟಪುಂಡರೀಕ ಧನಂಜಯಾನ್ ॥ ೯ ॥

ಸರ್ವೇ ನಾಗಾಃ ಸಮಾಜಗ್ಮುರ್ಯತ್ರ ಧನ್ವಂತರಿಃ ಸ್ವಯಂ ।
ಭಯಮಾಪುಃ ಶಿಷ್ಯಗಣಾ ದೃಷ್ಟ್ವಾ ನಾಗಾನಸಂಖ್ಯಕಾನ್ ॥ ೧೦ ॥

ನಾಗನಿಶ್ವಾಸವಾತೇನ ಸರ್ವೇ ಶಿಷ್ಯಾ ಮೃತಾ ಇವ ।
ನಿಶ್ಚೇಷ್ಟಾ ಜ್ಞಾನರಹಿತಾಃ ಶೇರತೇ ಧರಣೀತಲೇ ॥ ೧೧ ॥

ಧನ್ವಂತರಿಶ್ಚ ಭಗವಾನ್ ಪೀಯೂಷವರ್ಷಣೇನ ಚ ।
ಜೀವಯಾಮಾಸ ಶಿಷ್ಯಾಂಶ್ಚ ಮಂತ್ರೇಣ ಚ ಗುರುಂ ಸ್ಮರನ್ ॥ ೧೨ ॥

ಚೇತನಾಂ ಕಾರಯಿತ್ವಾ ಚ ಶಿಷ್ಯಾಣಾಂ ಚ ಜಗದ್ಗುರುಃ ।
ಚಕಾರ ಜೃಂಭಿತಂ ಮಂತ್ರೈಃ ಸರ್ಪಸಂಘಂ ವಿಷೋಲ್ಬಣಂ ॥ ೧೩ ॥

---

೯. ಈ ಸರ್ಪಸೈನ್ಯಕ್ಕೆ ಮುಖ್ಯರೂ ನಿಪುಣರೂ ಆದ ದ್ರೋಣ ಕಾಲೀಯ ಕಾರ್ಕೋಟ, ಪುಂಡರೀಕ, ಧನಂಜಯರೆಂಬ ಐದು ಮಂದಿಯನ್ನು ಸೇನಾಪತಿಗಳನ್ನಾಗಿ ಮಾಡಿದನು.

೧೦. ಈ ಎಲ್ಲ ಸರ್ಪಗಳೂ ಯಾವಸ್ಥಳದಲ್ಲಿ ಧನ್ವಂತರಿಯಿದ್ದನೋ ಅಲ್ಲಿಗೆ ಬಂದುವು. ಧನ್ವಂತರಿಯ ಶಿಷ್ಯರು ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿ ಬರುತ್ತಿರುವ ಸರ್ಪಗಳನ್ನು ನೋಡಿ ಬಹಳ ಭಯಗೊಂಡರು.

೧೧. ಆ ಸರ್ಪಗಳ ಉಸಿರಿನ ಗಾಳಿಯಿಂದ ಎಲ್ಲ ಶಿಷ್ಯರೂ ಸತ್ತವರಂತೆ ಅಲುಗಾಡದೆ ಜ್ಞಾನವಿಲ್ಲದವರಾಗಿ ನೆಲದ ಮೇಲೆ ಮಲಗಿದರು.

೧೨. ಪೂಜ್ಯನಾದ ಧನ್ವಂತರಿಯು ಗುರುವನ್ನು ಸ್ಮರಿಸುತ್ತ ಮಂತ್ರವನ್ನು ಜಪಮಾಡಿ ಅಮೃತದ ಮಳೆಯನ್ನು ಕರೆದು ಆ ಶಿಷ್ಯರನ್ನು ಬದುಕಿಸಿದನು.

೧೩. ಜಗತ್ತಿಗೆ ಗುರುವಾದ ಆ ಧನ್ವಂತರಿಯು ತಮ್ಮ ಶಿಷ್ಯರೆಲ್ಲರಿಗೂ ಜ್ಞಾನವುಂಟಾಗುವಂತೆ ಮಾಡಿ ವಿಷದಿಂದ ಭಯಂಕರವಾದ ಸರ್ಪಸಮೂಹವನ್ನು ಮಂತ್ರದಿಂದ ಜ್ಞಾನಶೂನ್ಯವನ್ನಾಗಿ ಮಾಡಿದನು.

ಸರ್ವೇ ಬಭೂವುರ್ನಿಶ್ಚೇಷ್ಟಾ ಜೃಂಭಿತಾಸ್ತೇ ಮೃತಾ ಇವ ।
ಕೋಽಪಿ ನಾಲಂ ತತೋ ದೇವಿ ವಾರ್ತಾಂ ದಾತುಂ ಗಣೇಷು ಚ ॥ ೧೪ ॥

ವಾಸುಕಿರ್ಬುಬುಧೇ ಸರ್ವಂ ಸರ್ವಜ್ಞಃ ಸರ್ವಸಂಕಟಂ ।
ಆಜುಹಾವ ಜಗದ್ಗೌರೀಂ ಭಗಿನೀಂ ಜ್ಞಾನರೂಪಿಣೀಂ ॥ ೧೫ ॥

॥ ವಾಸುಕಿರುವಾಚ ॥

ಮನಸೇ ತ್ವಂ ಸಮಾಗಚ್ಛ ನಾಗಾನ್ರಕ್ಷಾತಿಸಂಕಟಾತ್ ।
ಜಗತ್ತ್ರಯೇ ಮಹಾಭಾಗೇ ಪೂಜಾ ತವ ಭವಿಷ್ಯತಿ ॥ ೧೬ ॥

ವಾಸುಕೇರ್ವಚನಂ ಶ್ರುತ್ವಾ ಪ್ರಹಸ್ಯೋವಾಚ ಕನ್ಯಕಾ ।
ವಾಕ್ಯಂ ಪೀಯೂಷತುಲ್ಯಂ ಚ ವಿನಯಾವನತಸ್ಥಿತಾ ॥ ೧೭ ॥

---

೧೪. ಆ ಸರ್ಪಗಳೆಲ್ಲವೂ ಮಂತ್ರಪ್ರಭಾವದಿಂದ ಮೃತರಂತೆ ನಿಶ್ಚೇಷ್ಟರಾದರು. ಆ ಸರ್ಪಗಳ ಮಧ್ಯದಲ್ಲಿ ಒಬ್ಬನೂ ಕೂಡ ಸಮಾಚಾರವನ್ನು ವಾಸುಕಿಗೆ ಹೇಳಲು ಸಮರ್ಥನಾಗಿರಲಿಲ್ಲ.

೧೫. ಸರ್ವಜ್ಞನಾದ ವಾಸುಕಿಯು ಸರ್ಪಗಳಿಗೊದಗಿದ ದುಃಖವೆಲ್ಲವನ್ನೂ ತಿಳಿದುಕೊಂಡನು. ಅನಂತರ ಜಗನ್ಮಾತೆಯೂ, ಜ್ಞಾನರೂಪಿಣಿಯೂ ತನ್ನ ಸಹೋದರಿಯೂ ಆದ ಗೌರಿಯನ್ನು ಕರೆದನು.

೧೬. ವಾಸುಕಿಯು :–ಎಲೈ ಮನಸೆಯೇ, ನೀನು ಹೀಗೆ ಬಾ, ಸರ್ಪಗಳನ್ನು ಮಹಾಸಂಕಟದಿಂದ ಕಾಪಾಡುವವಳಾಗು. ಎಲೈ ಮಹಾತ್ಮಳೇ, ಇದರಿಂದ ನಿನಗೆ ಮೂರು ಲೋಕದಲ್ಲಿಯೂ ಪೂಜೆಯುಂಟಾಗುವುದು.

೧೭. ವಾಸುಕಿಯ ಮಾತನ್ನು ಕೇಳಿ ಆ ಕನ್ಯಕೆಯು ನಗುತ್ತ ವಿನಯದಿಂದ ಬಾಗಿನಿಂತವಳಾಗಿ ಅಮೃತಕ್ಕೆ ಸಮಾನವಾದ ಮಾತನಾಡಿದಳು

|| ಮನಸೋವಾಚ ||

ನಾಗೇಂದ್ರ ಶೃಣು ಮದ್ವಾಕ್ಯಂ ಯಾಸ್ಯಾಮಿ ಸಮರಂ ಪ್ರತಿ ।
ಭದ್ರಾಭದ್ರಂ ದೈವಸಾಧ್ಯಂ ಕರಿಷ್ಯಾಮಿ ಯಥೋಚಿತಂ || ೧೮ ||

ತಂ ಶತ್ರುಂ ಸಂಹರಿಷ್ಯಾಮಿ ಲೀಲಯಾ ಸಮರಸ್ಥಲೇ ।
ಅಹಂ ಯಂ ನಿಹನಿಷ್ಯಾಮಿ ತಂ ಕೋ ರಕ್ಷಿತುಮೀಶ್ವರಃ || ೧೯ ||

ಯದಿ ಬ್ರಹ್ಮಾದಯೋ ದೇವಾಃ ಸಮಾಯಾಂತಿ ರಣಸ್ಥಲೇ ।
ತಥಾಪಿ ತವ ಶತ್ರುಂ ಚ ಪ್ರಜೇಷ್ಯಾಮಿ ನ ಸಂಶಯಃ || ೨೦ ||

ಗುರುರ್ಮೇ ಭಗವಾನ್ಶೇಷಃ ಸಿದ್ಧಮಂತ್ರಂ ಚ ದತ್ತವಾನ್ ।
ನಾರಾಯಣಸ್ಯ ಜಗತಾಮೀಶಸ್ಯ ಪರಮಾದ್ಭುತಂ || ೨೧ ||

ಬಿಭರ್ಮಿ ಕವಚಂ ಕಂಠೇ ಪರಂ ತ್ರೈಲೋಕ್ಯಮಂಗಲಂ ।
ಸಂಸಾರಂ ಭಸ್ಮಸಾತ್ ಕೃತ್ವಾ ಪುನಃ ಸ್ರಷ್ಟುಮಹಂ ಕ್ಷಮಾ || ೨೨ ||

---

೧೮. ಮನಸೆಯು :—ಎಲೈ ನಾಗೇಂದ್ರನೇ, ನನ್ನ ಮಾತನ್ನು ಕೇಳು. ನಾನು ಯುದ್ಧಕ್ಕೆ ಹೋಗುತ್ತೇನೆ. ಜಯಾಪಜಯಗಳು ದೈವಾಯತ್ತವಾಗಿರುವುವು. ನಾನು ನನ್ನ ಶಕ್ತಿಗನುಸಾರವಾಗಿ ಕೆಲಸವನ್ನು ಮಾಡುವೆನು.

೧೯. ಯುದ್ಧರಂಗದಲ್ಲಿ ಆ ಶತ್ರುವನ್ನು ಸುಲಭವಾಗಿ ಸಂಹಾರಮಾಡುವೆನು. ನಾನು ಯಾರನ್ನು ಸಂಹರಿಸುವೆನೋ ಅವನನ್ನು ರಕ್ಷಣೆಮಾಡಲು ಯಾವನು ಸಮರ್ಥನು?

೨೦. ಯುದ್ಧರಂಗದಲ್ಲಿ ಒಂದು ಪಕ್ಷ ಬ್ರಹ್ಮನೇ ಮೊದಲಾದ ದೇವತೆಗಳು ಬಂದರೂ ಕೂಡ ಆಗಲೂ ನನ್ನ ಶತ್ರುವನ್ನು ಖಂಡಿತವಾಗಿಯೂ ಜಯಿಸುವೆನು.

೨೧. ನನ್ನ ಗುರುವೂ ಪೂಜ್ಯನೂ ಆದ ಆದಿಶೇಷನು ಜಗತ್ತಿಗೆ ಒಡೆಯನಾದ ನಾರಾಯಣನ ಆಶ್ಚರ್ಯಕರವಾದ ಮಂತ್ರವನ್ನು ನನಗೆ ಉಪದೇಶ ಮಾಡಿರುವನು.

೨೨. ಮೂರು ಲೋಕಕ್ಕೂ ಮಂಗಳವನ್ನುಂಟುಮಾಡುವ ಉತ್ತಮವಾದ ಕವಚವನ್ನು ಕತ್ತಿನಲ್ಲಿ ಧರಿಸಿರುವೆನು. ನಾನು ಈ ಜಗತ್ತನ್ನೇ ಸುಟ್ಟು ಬೂದಿಮಾಡಿ ಮತ್ತೆ ಸೃಷ್ಟಿಮಾಡಲು ಶಕ್ತಳಾಗಿರುವೆನು.

ಶಿಷ್ಯಾಹಂ ಮಂತ್ರಶಾಸ್ತ್ರೇಷು ಶಂಭೋರ್ಭಗವತಃ ಪುರಾ ।
ಮಹಾಜ್ಞಾನಂ ದತ್ತವಾನ್ಸ ಮಹ್ಯಂ ಚ ಕೃಪಯಾ ವಿಭುಃ ॥ ೨೩ ॥

ಶಂಭೋಶ್ಚ ಶಿಷ್ಯೋ ಗರುಡೋ ಗಣಯಾಮಿ ನ ತಂ ಧ್ರುವಂ ।
ಧನ್ವಂತರಿಸ್ತಚ್ಛಿಷ್ಯಾಣಾಮೇಕಃ ಕಿಂ ಗಣಯಾಮಿ ತಂ ॥ ೨೪ ॥

ಇತ್ಯುಕ್ತ್ವಾ ಸಾ ಜಗಾಮೈಕಾ ತ್ಯಕ್ತ್ವಾ ನಾಗಗಣಾನ್ರುಷಾ ।
ಪ್ರಣಮ್ಯ ಶ್ರೀಹರಿಂ ಶಂಭುಂ ಶೇಷಂ ಚ ಹೃಷ್ಟಮಾನಸಾ ॥ ೨೫ ॥

ಯತ್ರ ಧನ್ವಂತರಿರ್ದೇವಃ ಪ್ರಸನ್ನವದನೇಕ್ಷಣಃ ।
ತತ್ರಾಜಗಾಮ ಸಾ ದೇವೀ ಕೋಪರಕ್ತೇಕ್ಷಣಾ ರುಷಾ ॥ ೨೬ ।

ದೃಷ್ಟಿಮಾತ್ರೇಣ ಸರ್ವಾಂಶ್ಚ ಜೀವಯಾಮಾಸ ಸುಂದರೀ ।
ವಿಷದೃಷ್ಟ್ಯಾ ಶತ್ರುಶಿಷ್ಯಾನ್ನಿಶ್ಚೇಷ್ಟಾಂಶ್ಚ ಚಕಾರ ಹ ॥ ೨೭ ॥

---

೨೩. ಹಿಂದೆ ನಾನು ಮಂತ್ರಶಾಸ್ತ್ರವನ್ನು ಕಲಿಯುವುದಕ್ಕೋಸ್ಕರ ಪೂಜ್ಯನಾದ ಪರಮೇಶ್ವರನ ಶಿಷ್ಯಳಾಗಿದ್ದೆನು. ವಿಭುವಾದ ಆ ಪರಮೇಶ್ವರನು ದಯೆಯಿಂದ ನನಗೆ ಉತ್ತಮವಾದ ಜ್ಞಾನವನ್ನು ಕೊಟ್ಟಿರುವನು

೨೪. ಗರುಡನು ಪರಮೇಶ್ವರನ ಶಿಷ್ಯನು. ನಾನು ಅವನನ್ನು ಲೆಕ್ಕಿಸುವುದಿಲ್ಲ. ಧನ್ವಂತರಿಯು ಗರುಡನ ಶಿಷ್ಯರಲ್ಲೊಬ್ಬನು. ಅವನನ್ನು ಲೆಕ್ಕಿಸುವೆನೇ?

೨೫. ಹೀಗೆ ಹೇಳಿ ಆ ಮನಸೆಯು ಸರ್ಪಗಣವನ್ನು ಬಿಟ್ಟು ಶ್ರೀಹರಿಯನ್ನೂ ಪರಮೇಶ್ವರನನ್ನೂ ಶೇಷನನ್ನೂ ನಮಸ್ಕರಿಸಿ ಕೋಪದಿಂದ ಒಬ್ಬಳೇ ಹೊರಟಳು.

೨೬. ಕೋಪದಿಂದ ಕೆಂಪಾದ ಕಣ್ಣುಗಳುಳ್ಳ ಆ ದೇವಿಯು ಎಲ್ಲಿ ಪೂಜ್ಯನಾದ ಧನ್ವಂತರಿಯು ಸಮಾಧಾನಗೊಂಡ ಮುಖದಿಂದಿದ್ದನೋ ಅಲ್ಲಿಗೆ ಬಂದಳು.

೨೭. ಸುಂದರಿಯಾದ ಆ ದೇವಿಯು ತನ್ನ ನೋಟದಿಂದಲೇ ಸರ್ಪಗಳನ್ನೆಲ್ಲ ಬದುಕಿಸಿದಳು. ಮತ್ತು ವಿಷಮಯವಾದ ನೋಟವನ್ನು ಬೀರಿ ತನ್ನ ಶತ್ರುವಾದ ಧನ್ವಂತರಿಯ ಶಿಷ್ಯರನ್ನು ಜ್ಞಾನಶೂನ್ಯರಾಗಿ ಮಾಡಿದಳು.

ಧನ್ವಂತರಿಸ್ತು ಭಗವಾನ್ಮಂತ್ರಶಾಸ್ತ್ರವಿಶಾರದಃ ।
ಮಂತ್ರೇಣ ಯತ್ನಂ ಕೃತವಾನ್ನೋತ್ಥಾಪಯಿತುಮೀಶ್ವರಃ ॥ ೨೮ ॥

ದೃಷ್ಟ್ವಾ ಧನ್ವಂತರಿಂ ದೇವೀ ಪ್ರಹಾಸ್ಯೋವಾಚ ಸತ್ವರಂ ।
ಬಹೂಕ್ತಿಮರ್ಥಯುಕ್ತಾಂ ಚ ಸಾಹಂಕಾರಾಂ ಸುರೇಶ್ವರಿ ॥ ೨೯ ॥

॥ ಮನಸೋವಾಚ ॥

ಮಂತ್ರಾರ್ಥಂ ಮಂತ್ರಶಿಲ್ಪಂ ಚ ಮಂತ್ರಭೇದಂ ಮಹೌಷಧಂ ।
ವದ ಜಾನಾಸಿ ಕಿಂ ಸಿದ್ಧ ಶಿಷ್ಯೋಽಸಿ ಗರುಡಸ್ಯ ಚ ॥ ೩೦ ॥

ಅಹಂ ಚ ವೈನತೇಯಶ್ಚ ಶಿಷ್ಯೌ ಶಂಭೋಶ್ಚ ವಿಶ್ರುತೌ ।
ಸುಕಲ್ಪಕಾಲಂ ಸುಚಿರಮಹಂ ಧನ್ವಂತರೇ ಶೃಣು ॥ ೩೧ ॥

ಇತ್ಯುಕ್ತ್ವಾ ಸರಸಃ ಪದ್ಮಂ ಸಮಾನೀಯ ಜಗತ್ಪ್ರಸೂಃ ।
ಮಂತ್ರಸಂಮಲಿತಂ ಕೃತ್ವಾ ಪ್ರೇರಯಾಮಾಸ ಕೋಪತಃ ॥ ೩೨ ॥

---

೨೮. ಮಂತ್ರಶಾಸ್ತ್ರನಿಪುಣನಾದ ಪೂಜ್ಯನಾದ ಧನ್ವಂತರಿಯು ಮಂತ್ರದಿಂದ ಪ್ರಯತ್ನವನ್ನು ಮಾಡಿದನು. ಆದರೆ ಶಿಷ್ಯರನ್ನು ಮೇಲಕ್ಕೆಬ್ಬಿಸಲು ಸಾಧ್ಯವಾಗಲಿಲ್ಲ.

೨೯. ಎಲೈ ದೇವೇಶ್ವರಿಯಾದ ರಾಧೆಯೇ, ದೇವಿಯು ಧನ್ವಂತರಿಯನ್ನು ನೋಡಿ ನಗುತ್ತ, ಅರ್ಥದಿಂದ ಕೂಡಿದ ಮತ್ತು ಅಹಂಕಾರ ಪೂರ್ಣವಾದ ಮಾತನ್ನಾಡಿದಳು.

೩೦. ಮನಸೆಯು:—ಎಲೈ ಸಿದ್ಧನೇ, ನೀನು ಗರುಡನ ಶಿಷ್ಯನಾಗಿರುವಿ, ಆದುದರಿಂದ ಮಂತ್ರಗಳ ಅರ್ಥವನ್ನೂ, ಮಂತ್ರಗಳ ಕಲೆಯನ್ನೂ ಮಂತ್ರಗಳ ಭೇದವನ್ನೂ ತಿಳಿದಿರುವುದಾದರೆ ಹೇಳು.

೩೧. ಎಲೈ ಧನ್ವಂತರಿಯೇ, ಕೇಳು. ನಾನೂ ಗರುಡನೂ ಕೂಡ ಅನೇಕ ಕಲ್ಪಗಳವರೆಗೆ ಪರಮೇಶ್ವರನ ಶಿಷ್ಯರಾಗಿ ಪ್ರಸಿದ್ಧರಾಗಿದ್ದೆವು? ನಾನು ಬಹಳಕಾಲ ಶಿಷ್ಯಳಾಗಿದ್ದೆನು.

೩೨. ಜಗನ್ಮಾತೆಯಾದ ದೇವಿಯು ಈ ರೀತಿಯಾಗಿ ಹೇಳಿ ಸರೋವರದಿಂದೊಂದು ಕಮಲವನ್ನು ತಂದು ಮಂತ್ರಿಸಿ ಕೋಪದಿಂದ ಧನ್ವಂತರಿಯ ಮೇಲೆ ಬಿಟ್ಟಳು.

ದೃಷ್ಟ್ವಾಗತಂ ಪದ್ಮಪುಷ್ಪಂ ಜ್ವಲದಗ್ನಿಶಿಖೋಪಮಂ ।
(ಧನ್ವಂತರಿಶ್ಚ ನಿಃಶ್ವಾಸೈರ್ಭಸ್ಮಸಾತ್ತಚ್ಚಕಾರ ಹ) || ೩೩ ||

ತಚ್ಚ ಧನ್ವಂತರಿರ್ದೃಷ್ಟ್ವಾ ಸಮಂತ್ರರೇಣುಮುಷ್ಟಿನಾ ।
ಚಕಾರ ನಿಷ್ಫಲಂ ಭಸ್ಮ ತಾಂ ಪ್ರಹಸ್ಯಾವಲೀಲಯಾ || ೩೪ ||

ದೇವೀ ಜಗ್ರಾಹ ಶಕ್ತಿಂ ಚ ಗ್ರೀಷ್ಮಸೂರ್ಯಸಮಪ್ರಭಾಂ ।
ಮಂತ್ರಸಂವಲಿತಾಂ ಕೃತ್ವಾ ಪ್ರೇರಯಾಮಾಸ ತಂ ರಿಪುಂ || ೩೫ ||

ದೃಷ್ಟ್ವಾ ಜಾಜ್ವಲ್ಯಮಾನಾಂ ತಾಂ ಶಕ್ತಿಂ ಧನ್ವಂತರಿಃ ಸ್ವಯಂ ।
ವಿಷ್ಣುದತ್ತೇನ ಶೂಲೇನ ಸ ತು ಚಿಚ್ಛೇದ ಲೀಲಯಾ || ೩೬ ||

ತಾಂ ಚ ಶಕ್ತಿಂ ವೃಥಾ ದೃಷ್ಟ್ವಾ ಪ್ರಜಜ್ವಾಲೇಶ್ವರೀ ರುಷಾ ।
ಜಗ್ರಾಹ ನಾಗಪಾಶಂ ಚ ಘೋರಮವ್ಯರ್ಥಮುಲ್ಬಣಂ || ೩೭ ||

೩೩. ಧನ್ವಂತರಿಯು ತನ್ನೆದುರಾಗಿ ಬರುತ್ತಿರುವ, ಉರಿಯುತ್ತಿರುವ ಬೆಂಕಿಯ ಜ್ವಾಲೆಗೆ ಸಮನಾದ ಆ ಕಮಲದ ಹೂವನ್ನು ನೋಡಿ ನಿಟ್ಟುಸಿರನ್ನು ಬಿಟ್ಟುದರಿಂದಲೇ ಅದನ್ನು ಬೂದಿಮಾಡಿದನು.

೩೪. ಆ ಬೂದಿಯೂ ಕೂಡ ವೇಗವಾಗಿ ಇವನೆಡೆಗೆ ಬರುತ್ತಿರುವುದನ್ನು ನೋಡಿ ಧನ್ವಂತರಿಯು ತಿರಸ್ಕಾರದಿಂದ ನಗುತ್ತ ಒಂದು ಮುಷ್ಟಿ ಮಣ್ಣನ್ನು ಮಂತ್ರ ಪೂರ್ವಕವಾಗಿ ಎಸೆದು ಆ ಬೂದಿಯನ್ನು ವ್ಯರ್ಥಮಾಡಿದನು

೩೫. ದೇವಿಯು ಗ್ರೀಷ್ಮಕಾಲದ ಸೂರ್ಯನಂತೆ ಪ್ರಕಾಶಮಾನವಾದ ಶಕ್ತ್ಯಾಯುಧವನ್ನು ಕೈಗೆ ತೆಗೆದುಕೊಂಡು ಮಂತ್ರದಿಂದ ಅಭಿಮಂತ್ರಣೆಮಾಡಿ ಆ ಶತ್ರುವಿನ ಮೇಲೆ ಅದನ್ನೆಸೆದಳು.

೩೬. ಧನ್ವಂತರಿಯು ಉರಿಯುತ್ತ ಬರುತ್ತಿರುವ ಆ ಶಕ್ತ್ಯಾಯುಧವನ್ನು ನೋಡಿ ವಿಷ್ಣುವಿನಿಂದ ಕೊಡಲ್ಪಟ್ಟ ಶೂಲಾಯುಧದಿಂದ ಸುಲಭವಾಗಿ ಆ ಶಕ್ತಿಯನ್ನು ಕತ್ತರಿಸಿದನು.

೩೭. ಆ ಶಕ್ತ್ಯಾಯುಧವು ವ್ಯರ್ಥವಾದುದನ್ನು ಕಂಡು ಕೋಪದಿಂದುರಿದಳು. ಮತ್ತು ಭಯಂಕರವಾಗಿಯೂ, ತೀಕ್ಷ್ಣವಾಗಿಯೂ ವ್ಯರ್ಥವಾಗದೇ ಇರುವುದೂ ಆದ ನಾಗಪಾಶವನ್ನು ಕೈಗೆ ತೆಗೆದುಕೊಂಡಳು.

ನಾಗಲಕ್ಷಸಮಾಯುಕ್ತಂ ಸಿದ್ಧಮಂತ್ರೇಣ ಮಂತ್ರಿತಂ ।
ಪ್ರೇರಯಾಮಾಸ ಕೋಪೇನ ಕಾಲಾಂತಕಸಮಪ್ರಭಂ ॥ ೩೮ ॥

ಧನ್ವಂತರಿರ್ನಾಗಪಾಶಂ ದೃಷ್ಟ್ವಾ ಚ ಸಸ್ಮಿತೋ ಮುದಾ ।
ಸಸ್ಮಾರ ಗರುಡಂ ತೂರ್ಣಮಾಜಗಾಮ ಖಗೇಶ್ವರಃ ॥ ೩೯ ॥

ಸರ್ಪಾಸ್ತ್ರಮಾಗತಂ ದೃಷ್ಟ್ವಾ ಗರುಡೋ ಹರಿವಾಹನಃ ।
ವಿಧಾಯ ಚಂಚುನಾ ಶೀಘ್ರಂ ಬುಭುಜೇ ಕ್ಷುಧಿತಶ್ಚಿರಂ ॥ ೪೦ ॥

ನಾಗಾಸ್ತ್ರಂ ನಿಷ್ಫಲಂ ದೃಷ್ಟ್ವಾ ಕೋಪರಕ್ತೇಕ್ಷಣಾ ಭೃಶಂ
ಜಗ್ರಾಹ ಭಸ್ಮಮುಷ್ಟಿಂ ಚ ಶಿವದತ್ತಾಂ ಪುರಾ ಪ್ರಿಯೇ ॥ ೪೧ ॥

ಭಸ್ಮಮುಷ್ಟಿಂ ಮಂತ್ರಪೂತಾಂ ದೃಷ್ಟ್ವಾ ಚ ಪ್ರೇರಿತಾಂ ಯಥಾ ।
ಪಕ್ಷವಾತೇನ ಚಿಕ್ಷೇಪ ಶಿಷ್ಯಂ ಪಶ್ಚಾನ್ನಿಧಾಯ ಚ ॥ ೪೨ ॥

---

೩೮. ಲಕ್ಷ ಸರ್ಪಗಳಿಂದ ಕೂಡಿದ ಪ್ರಳಯಕಾಲದ ಯಮನಿಗೆ ಸಮನಾದ ಆ ನಾಗಪಾಶವನ್ನು ಸಿದ್ಧಮಂತ್ರದಿಂದ ಅಭಿಮಂತ್ರಿಸಿ ಕೋಪದಿಂದೆಸೆದಳು.

೩೯. ಧನ್ವಂತರಿಯು ನಾಗಪಾಶವನ್ನು ನೋಡಿ ಸಂತೋಷದಿಂದ ನಗುತ್ತ ಗರುಡನನ್ನು ಸ್ಮರಿಸಿದನು. ಆ ಕ್ಷಣವೇ ಗರುಡನು ಅಲ್ಲಿಗೆ ಬಂದನು.

೪೦. ಸಮೀಪಕ್ಕೆ ಬರುತ್ತಿರುವ ಸರ್ಪಾಸ್ತ್ರವನ್ನು ಕಂಡು ಹರಿಯ ವಾಹನನಾದ ಗರುಡನು ಕೊಕ್ಕಿನಿಂದ ಅವುಗಳನ್ನು ಬೇಗ ಕಚ್ಚಿಕೊಂಡು, ಬಹಳ ಹಸಿವಿನಿಂದ ಕೂಡಿದವನಾದಕಾರಣ ಸಾವಕಾಶವಾಗಿ ತಿಂದನು.

೪೧. ಎಲೈ ಪ್ರಿಯಳೇ, ಸರ್ಪಾಸ್ತ್ರವು ನಿಷ್ಫಲವಾದುದನ್ನು ಕಂಡು ದೇವಿಯು ಕೋಪದಿಂದ ಕೆಂಪಾದ ಕಣ್ಣುಳ್ಳವಳಾಗಿ ಹಿಂದೆ ಈಶ್ವರನು ಕೊಟ್ಟಿದ್ದ ಬೂದಿಯ ಮುಷ್ಟಿಯನ್ನು ತೆಗೆದುಕೊಂಡಳು.

೪೨. ಗರುಡನು ಬೂದಿಯ ಮುಷ್ಟಿಯನ್ನು ಮಂತ್ರಿಸಿ ಬಿಟ್ಟಿರುವುದನ್ನು ಕಂಡು ತನ್ನ ಶಿಷ್ಯನನ್ನು ಹಿಂದೆ ನಿಲ್ಲಿಸಿಕೊಂಡು ತನ್ನ ರೆಕ್ಕೆಯ ಗಾಳಿಯಿಂದ ಆ ಬೂದಿಯನ್ನು ಹಾರಿಸಿದನು

ನಿರಸ್ತಾಂ ಭಸ್ಮಮುಷ್ಟಿಂ ಚ ದೃಷ್ಟ್ವಾ ದೇವೀ ಚುಕೋಪ ಹ ।
ಜಗ್ರಾಹ ಶೂಲಮವ್ಯರ್ಥಂ ಹಂತುಂ ಧನ್ವಂತರಿಂ ಸ್ವಯಂ ॥ ೪೩ ॥

ಶಿವದತ್ತಂ ಚ ಶೂಲಂ ಚ ಶತಸೂರ್ಯಸಮಪ್ರಭಂ ।
ಅವ್ಯರ್ಥಶೂಲಂ ಲೋಕೇಷು ಪ್ರಲಯಾಗ್ನಿಸಮಪ್ರಭಂ ॥ ೪೪ ॥

ಅಥ ಬ್ರಹ್ಮಾ ತಥಾ ಶಂಭುರಾಜಗಾಮ ರಣಾಜಿರಂ ।
ಧನ್ವಂತರೇಶ್ಚ ರಕ್ಷಾರ್ಥಂ ಶಮನಾರ್ಥಂ ಖಗಸ್ಯ ಚ ॥ ೪೫ ॥

ದೃಷ್ಟ್ವಾ ಶಂಭುಂ ಜಗದ್ಗೌರೀ ವಿಧಿಂ ಚ ಜಗತಾಂ ಪತಿಂ ।
ಭಕ್ತ್ಯಾ ನನಾಮ ತಾವೇವ ನಿಃಶಂಕಾ ಶೂಲಧಾರಿಣೀ ॥ ೪೬ ॥

೪೩. ದೇವಿಯು ತಾನು ಪ್ರಯೋಗಿಸಿದ ಬೂದಿಯ ಮುಷ್ಟಿಯು ವ್ಯರ್ಥವಾದುದನ್ನು ಕಂಡು ಅತ್ಯಂತ ಕೋಪಗೊಂಡು ಎಂದೂ ವ್ಯರ್ಥವಾಗದ ಶೂಲಾಯುಧವನ್ನು ಕೈಗೆ ತೆಗೆದುಕೊಂಡಳು.

೪೪. ಈಶ್ವರನಿಂದ ಕೊಡಲ್ಪಟ್ಟ ಆ ಶೂಲಾಯುಧವು ನೂರುಮಂದಿ ಸೂರ್ಯರಿಗೆ ಸಮಾನವಾದ ಕಾಂತಿಯುಳ್ಳದ್ದು ಮತ್ತು ಲೋಕಗಳಲ್ಲಿ ಯಾವಾಗಲೂ ವ್ಯರ್ಥವಾಗದೆ ಸಫಲವಾಗಿದ್ದುದು, ಪ್ರಳಯಕಾಲದ ಬೆಂಕಿಯ ಜ್ವಾಲೆಗೆ ಸಮನಾದುದು.

೪೫. ಅನಂತರ ಬ್ರಹ್ಮನೂ ಮತ್ತು ಈಶ್ವರನೂ ಕೂಡ ಧನ್ವಂತರಿಯನ್ನು ಕಾಪಾಡುವುದಕ್ಕಾಗಿಯೂ ಗರುಡನನ್ನು ಸಮಾಧಾನಪಡಿಸುವುದಕ್ಕಾಗಿಯೂ ಯುದ್ಧಭೂಮಿಗೆ ಬಂದರು.

೪೬. ಜಗದ್ಗೌರಿಯು ಜಗತ್ತಿಗೆ ಒಡೆಯನಾದ ಬ್ರಹ್ಮನನ್ನೂ ಈಶ್ವರನನ್ನೂ ನೋಡಿ ಶೂಲಾಯುಧವನ್ನು ಹಿಡಿದುಕೊಂಡವಳಾಗಿಯೇ ಧೈರ್ಯದಿಂದ ಮುಂದೆ ಬಂದು ಭಕ್ತಿಯಿಂದ ಅವರಿಬ್ಬರಿಗೂ ನಮಸ್ಕಾರಮಾಡಿದಳು.

ಧನ್ವಂತರಿಶ್ಚ ಗರುಡಃ ಪ್ರಣನಾಮ ಸುರೇಶ್ವರೌ ।
ತುಷ್ಟಾವ ಪರಯಾ ಭಕ್ತ್ಯಾ ತೌ ಚ ಚಕ್ರತುರಾಶಿಷಂ ॥ ೪೭ ॥

ಉವಾಚ ಬ್ರಹ್ಮಾ ಮಧುರಂ ಹಿತಂ ಧನ್ವಂತರಿಂ ಮುದಾ ।
ಪೂಜಾರ್ಥಂ ಮನಸಾಯಾಶ್ಚ ಲೋಕಾನಾಂ ಹಿತಕಾಮ್ಯಯಾ ॥ ೪೮ ॥

॥ ಬ್ರಹ್ಮೋವಾಚ ॥

ಧನ್ವಂತರೇ ಮಹಾಭಾಗ ಸರ್ವಶಾಸ್ತ್ರವಿಶಾರದ ।
ರಣಂ ತೇ ಮನಸಾಸಾರ್ಧಂ ನ ಹಿ ಸಾಮ್ಯಂ ಚ ಮೇ ಮತಂ ॥ ೪೯ ॥

ಶಿವದತ್ತೇನ ಶೂಲೇನ ದುರ್ನಿವಾರ್ಯೇಣ ಸರ್ವತಃ ।
ತ್ರೈಲೋಕ್ಯಂ ಭಸ್ಮಸಾತ್ಕರ್ತುಂ ಕ್ಷಮೇಯಂ ತ್ರಿದಶೇಶ್ವರೀ ॥ ೫೦ ॥

ಧ್ಯಾನಂ ಕೌಥುಮಶಾಖೋಕ್ತಂ ಕೃತ್ವಾ ಭಕ್ತ್ಯಾ ಸಮಾಹಿತಃ ।
ದತ್ವಾ ಷೋಡಶೋಪಚಾರಂ ದೇವ್ಯಾಶ್ಚ ಕುರು ಪೂಜನಂ ॥ ೫೧ ॥

---

೪೭. ಧನ್ವಂತರಿಯೂ ಗರುಡನೂ ಕೂಡ ದೇವೇಶ್ವರರಾದ ಆ ಬ್ರಹ್ಮ ಮಹೇಶ್ವರರಿಗೆ ನಮಸ್ಕಾರ ಮಾಡಿದರು. ಮತ್ತು ಅತಿಭಕ್ತಿಯಿಂದ ಸ್ತೋತ್ರ ಮಾಡಿದರು. ಆ ಬ್ರಹ್ಮಮಹೇಶ್ವರರು ಆಶೀರ್ವಾದಗಳನ್ನು ಮಾಡಿದರು.

೪೮. ಬ್ರಹ್ಮನು ಜಗತ್ತಿಗೆ ಹಿತವನ್ನುಂಟುಮಾಡುವ ಆಪೇಕ್ಷೆಯಿಂದ ಸಂತೋಷಗೊಂಡವನಾಗಿ ಧನ್ವಂತರಿಯನ್ನು ಕುರಿತು ಮನಸಾದೇವಿಯನ್ನು ಪೂಜೆಮಾಡುವಂತೆ ಹಿತವಾಗಿಯೂ ಇಂಪಾಗಿಯೂ ಇರುವ ಮಾತನಾಡಿದನು.

೪೯. ಸಕಲಶಾಸ್ತ್ರನಿಪುಣನೂ, ಮಹಾತ್ಮನೂ ಆದ ಎಲೈ ಧನ್ವಂತರಿಯೇ, ನೀನು ಮನಸೆಯೊಡನೆ ಯುದ್ಧಮಾಡುವುದು ಸಮನಲ್ಲವೆಂದು ನನ್ನ ಅಭಿಪ್ರಾಯವು.

೫೦. ಈ ದೇವೇಶ್ವರಿಯು ತಡೆಯಲಸಾಧ್ಯವಾದ, ಈಶ್ವರನಿಂದ ಕೊಡಲ್ಪಟ್ಟ ಶೂಲಾಯುಧದಿಂದ ಮೂರು ಲೋಕವನ್ನೂ ಸುಟ್ಟು ಬೂದಿಮಾಡಲು ಶಕ್ತಳು.

೫೧. ಕೌಥುಮಶಾಖೆಯಲ್ಲಿ ಹೇಳಿರುವ ಪ್ರಕಾರ ಧ್ಯಾನವನ್ನು ಮಾಡಿ ಭಕ್ತಿಯಿಂದ ಸಮಾಧಾನ ಹೊಂದಿದ ಮನಸ್ಸುಳ್ಳವನಾಗಿ ಷೋಡಶೋಪಚಾರಗಳನ್ನು ಅರ್ಪಣೆಮಾಡಿ ಈ ದೇವಿಯನ್ನು ಪೂಜೆಮಾಡು.

ಆಸ್ತಿಕೋಕ್ತೇನ ಸ್ತೋತ್ರೇಣ ಸ್ತವನಂ ಕರ್ತುಮರ್ಹಸಿ ।
ಪರಿತುಷ್ಟಾ ಚ ಮನಸಾ ವರಂ ತುಭ್ಯಂ ಪ್ರದಾಸ್ಯತಿ || ೫೨ ||

ಬ್ರಹ್ಮಣೋ ವಚನಂ ಶ್ರುತ್ವಾ ಚಕಾರಾನುಮತಿಂ ಶಿವಃ ।
ವೈನತೇಯಶ್ಚ ಸಂಪ್ರೀತ್ಯಾ ಬೋಧಯಾಮಾಸ ಯತ್ನತಃ || ೫೩ ||

ಏಷಾಂ ಚ ವಚನಂ ಶ್ರುತ್ವಾ ಸ್ನಾತ್ವಾ ಶುಚಿರಲಂಕೃತಃ ।
ವಿಧಿಂ ಪುರೋಹಿತಂ ಕೃತ್ವಾ ಪೂಜಾಂ ಕರ್ತುಂ ಸಮುದ್ಯತಃ || ೫೪ ||

|| ಧನ್ವಂತರಿರುವಾಚ ||

ಇಹಾಗಚ್ಛ ಜಗದ್ಗೌರಿ ಗೃಹಾಣ ಮಮ ಪೂಜನಂ ।
ಪೂಜ್ಯಾ ತ್ವಂ ತ್ರಿಷು ಲೋಕೇಷು ಪುರಾ ಕಶ್ಯಪಕನ್ಯಕೇ || ೫೫ ||

ತ್ವಯಾ ಜಿತಂ ಜಗತ್ಸರ್ವಂ ದೇವಿ ವಿಷ್ಣುಸ್ವರೂಪಯಾ ।
ತೇನ ತೇऽಸ್ತ್ರಪ್ರಯೋಗಶ್ಚ ನ ಕೃತೋ ರಣಭೂಮಿಷು || ೫೬ ||

---

೫೨. ಮತ್ತು ಆಸ್ತೀಕನು ಹೇಳಿದ ಸ್ತೋತ್ರದಿಂದ ಸ್ತೋತ್ರವನ್ನು ಮಾಡು. ಅದರಿಂದ ಸಂತೋಷವನ್ನು ಹೊಂದಿದ ಮನಸಾದೇವಿಯು ನಿನಗೆ ವರವನ್ನು ಕೊಡುವಳು.

೫೩. ಬ್ರಹ್ಮನ ಮಾತನ್ನು ಕೇಳಿ ಈಶ್ವರನೂ ಅನುಮತಿಸಿದನು. ಗರುಡನೂ ಕೂಡ ಪ್ರೀತಿಯಿಂದ ಆ ಧನ್ವಂತರಿಯನ್ನು ಕುರಿತು ಬೋಧನೆ ಮಾಡಿದನು.

೫೪. ಇವರುಗಳ ಮಾತನ್ನು ಕೇಳಿ ಧನ್ವಂತರಿಯು ಸ್ನಾನಮಾಡಿ ಪರಿಶುದ್ಧನಾಗಿ ಅಲಂಕಾರ ಮಾಡಿಕೊಂಡು ಬ್ರಹ್ಮನನ್ನು ಪುರೋಹಿತನನ್ನಾಗಿ ಮಾಡಿಕೊಂಡು ಮನಸಾದೇವಿಯನ್ನು ಪೂಜಿಸಲು ತೊಡಗಿದನು.

೫೫. ಧನ್ವಂತರಿಯು :—ಪೂರ್ವದಲ್ಲಿ ಕಶ್ಯಪನ ಮಗಳಾಗಿದ್ದ ಎಲೈ ಜಗದ್ಗೌರಿಯೇ, ನೀನು ಮೂರು ಲೋಕಗಳಲ್ಲಿಯೂ ಪೂಜ್ಯಳಾಗಿರುವಿ. ಹೀಗೆ ಬಾ, ಈ ನನ್ನ ಪೂಜೆಯನ್ನು ಸ್ವೀಕರಿಸುವವಳಾಗು.

೫೬. ಎಲೈ ದೇವಿಯೇ, ವಿಷ್ಣುರೂಪಳಾದ ನಿನ್ನಿಂದ ಸಕಲ ಜಗತ್ತೂ ಜಯಿಸಲ್ಪಟ್ಟಿದೆ. ಆದಕಾರಣ ಯುದ್ಧರಂಗದಲ್ಲಿ ನಿನ್ನಮೇಲೆ ಬಾಣಪ್ರಯೋಗ ಮಾಡಲಿಲ್ಲ.

ಇತ್ಯುಕ್ತ್ವಾ ಸಂಯತೋ ಭೂತ್ವಾ ಭಕ್ತಿನಮ್ರಾತ್ಮಕಂಧರಃ ।
ಗೃಹೀತ್ವಾ ಶುಕ್ಲಕುಸುಮಂ ಧ್ಯಾನಂ ಕರ್ತುಂ ಸಮುದ್ಯತಃ ॥ ೫೭ ॥

ಚಾರುಚಂಪಕವರ್ಣಾಭಾಂ ಸರ್ವಾಂಗಸುಮನೋಹರಾಂ ।
ಈಷದ್ಧಾಸ್ಯಪ್ರಸನ್ನಾಸ್ಯಾಂ ಶೋಭಿತಾಂ ಸೂಕ್ಷ್ಮವಾಸಸಾ ॥ ೫೮ ॥

ಸುಚಾರುಕಬರೀಶೋಭಾಂ ರತ್ನಾಭರಣಭೂಷಿತಾಂ ।
ಸರ್ವಾಭಯಪ್ರದಾಂ ದೇವೀಂ ಭಕ್ತಾನುಗ್ರಹಕಾತರಾಂ ॥ ೫೯ ॥

ಸರ್ವವಿದ್ಯಪ್ರದಾಂ ಶಾಂತಾಂ ಸರ್ವವಿದ್ಯಾವಿಶಾರದಾಂ ।
ನಾಗೇಂದ್ರವಾಹಿನೀಂ ದೇವೀಂ ಭಜೇ ನಾಗೇಶ್ವರೀಂ ಪರಾಂ ॥ ೬೦ ।

ಧ್ಯಾತ್ವೈವಂ ಕುಸುಮಂ ದತ್ವಾ ನಾನಾದ್ರವ್ಯಸಮನ್ವಿತಂ ।
ದತ್ವಾ ಷೋಡಶೋಪಚಾರಂ ಪೂಜಯಾಮಾಸ ತಾಂ ಪ್ರಿಯೇ ॥ ೬೧ ॥

---

೫೭. ಹೀಗೆ ಹೇಳಿ ಸಮಾಧಾನಗೊಂಡವನಾಗಿ ಭಕ್ತಿಯಿಂದ ಬಾಗಿದ ಕತ್ತುಳ್ಳವನಾಗಿ ಬಿಳಿಯ ಹೂವನ್ನು ಕೈಯಲ್ಲಿ ತೆಗೆದುಕೊಂಡು ಧ್ಯಾನಮಾಡಲುಪ ಕ್ರಮಿಸಿದನು.

೫೮–೬೦. ಮನೋಹರವಾದ ಸಂಪಿಗೆಯ ಹೂವಿನಂತೆ ಮೈಬಣ್ಣವುಳ್ಳ, ಸಕಲಶರೀರಗಳಿಂದಲೂ ಮನೋಹರಳಾದ, ಸ್ವಲ್ಪ ನಗುವಿನಿಂದ ನಿರ್ಮಲವಾದ ಮುಖವುಳ್ಳ, ಸೂಕ್ಷ್ಮವಾದ ವಸ್ತ್ರದಿಂದ ಪ್ರಕಾಶಮಾನಳಾದ, ಮನೋಹರವಾದ ಜಡೆಯಿಂದ ಶೋಭಿತಳಾದ, ರತ್ನಮಯವಾದ ಆಭರಣಗಳಿಂದ ಅಲಂಕೃತಳಾದ, ಸಕಲರಿಗೂ ಅಭಯವನ್ನು ಕೊಡುವ, ಭಕ್ತರಮೇಲೆ ಅನುಗ್ರಹಮಾಡಲು ನಿರತ ಳಾದ, ಸಕಲ ವಿದ್ಯೆಗಳನ್ನೂ ಕೊಡುವ, ಸಕಲ ವಿದ್ಯೆಗಳಲ್ಲಿಯೂ ನಿಪುಣಳಾದ, ಶಾಂತರೂಪಳಾದ, ಆನೆಯಮೇಲೆ ಪ್ರಯಾಣಮಾಡುವ, ನಾಗಗಳಿಗೆ ಒಡೆಯಳಾದ ಉತ್ತಮಳಾದ ದೇವಿಯನ್ನು ನಾನು ಭಜಿಸುವೆನು.

೬೧. ಎಲೈ ಪ್ರಿಯಳೇ, ಈ ಪ್ರಕಾರ ಧ್ಯಾನಮಾಡಿ ನಾನಾ ದ್ರವ್ಯಗಳಿಂದ ಕೂಡಿದ ಪುಷ್ಪಗಳನ್ನು ಸಮರ್ಪಿಸಿ ಆ ದೇವಿಯನ್ನು ಷೋಡಶೋಪಚಾರ ವಿಧಿಯಿಂದ ಪೂಜಿಸಿದನು.

ಸ್ತೋತ್ರಂ ಚಕಾರ ಯತ್ನಾಚ್ಚ ಪುಲಕಾಂಚಿತವಿಗ್ರಹಃ ।
ಪುಟಾಂಜಲಿಯುತೋ ಭೂತ್ವಾ ಭಕ್ತಿನಮ್ರಾತ್ಮಕಂಧರಃ ॥ ೬೨ ॥

॥ ಧನ್ವಂತರಿರುವಾಚ ॥

ನಮಃ ಸಿದ್ಧಿಸ್ವರೂಪಾಯೈ ಸಿದ್ಧಿದಾಯೈ ನಮೋ ನಮಃ ।
ನಮಃ ಕಶ್ಯಪಕನ್ಯಾಯೈ ವರದಾಯೈ ನಮೋ ನಮಃ ॥ ೬೩ ॥

ನಮ ಶಂಕರಕನ್ಯಾಯೈ ಶಂಕರಾಯೈ ನಮೋನಮಃ ।
ನಮಸ್ತೇ ನಾಗವಾಹಿನ್ಯೈ ನಾಗೇಶ್ವರ್ಯೈ ನಮೋನಮಃ ॥ ೬೪ ॥

ನಮಃ ಆಸ್ತೀಕಜನನಿ ಜನನ್ಯೈ ಜಗತಾಂ ಮಮ ।
ನಮೋ ಜಗತ್ಕಾರಣಾಯೈ ಜರತ್ಕಾರುಸ್ತ್ರಿಯೈ ನಮಃ ॥ ೬೫ ॥

---

೬೨. ಎರಡು ಕೈಗಳನ್ನೂ ಜೋಡಿಸಿಕೊಂಡು ಭಕ್ತಿಪೂರ್ವಕವಾಗಿ ತಲೆಯನ್ನು ಬಾಗಿಸಿಕೊಂಡು ರೋಮಾಂಚಗೊಂಡ ಶರೀರವುಳ್ಳವನಾಗಿ ಪ್ರಯತ್ನಪೂರ್ವಕವಾಗಿ ಸ್ತೋತ್ರಮಾಡಲುಪಕ್ರಮಿಸಿದನು.

೬೩. ಧನ್ವಂತರಿಯು:—ಸಿದ್ಧಿಸ್ವರೂಪಿಣಿಯಾದ ನಿನಗೆ ನಮಸ್ಕಾರವು ಸಕಲೇಷ್ಟಾರ್ಥ ಸಿದ್ಧಿಯನ್ನುಂಟುಮಾಡುವ ನಿನಗೆ ನಮಸ್ಕಾರವು. ಕಶ್ಯಪಬ್ರಹ್ಮನ ಪುತ್ರಿಯಾದ ನಿನಗೆ ನಮಸ್ಕಾರವು. ಭಕ್ತರಿಗೆ ವರಗಳನ್ನು ಕೊಡುವ ನಿನಗೆ ನಮಸ್ಕಾರವು.

೬೪. ಶಂಕರನ ಕನ್ಯೆಯೂ, ಶಂಕರ ರೂಪಿಣಿಯೂ ಆದ ನಿನಗೆ ನಮಸ್ಕಾರವು. ಆನೆಯ ವಾಹನವುಳ್ಳವಳೂ ಸರ್ಪಗಳಿಗೆ ಈಶ್ವರಿಯೂ ಆದ ನಿನಗೆ ನಮಸ್ಕಾರವು.

೬೫. ಆಸ್ತೀಕಮುನಿಯ ತಾಯಿಯೂ, ಸಕಲ ಜಗತ್ತಿಗೂ ನನಗೂ ತಾಯಿಯಾದ ನಿನಗೆ ನಮಸ್ಕಾರವು. ಸಕಲ ಜಗತ್ತಿಗೆ ಕಾರಣಳೂ, ಜರತ್ಕಾರು ಪತ್ನಿಯೂ ಆದ ನಿನಗೆ ನಮಸ್ಕಾರವು.

ನಮೋ ನಾಗಭಗಿನ್ಯೈ ಚ ಯೋಗಿನ್ಯೈ ಚ ನಮೋನಮಃ ।
ನಮಶ್ಚಿರಂ ತಪಸ್ವಿನ್ಯೈ ಸುಖದಾಯೈ ನಮೋನಮಃ ॥ ೬೬ ॥

ನಮಸ್ತಪಸ್ಯಾರೂಪಾಯೈ ಫಲದಾಯೈ ನಮೋನಮಃ ।
ಸುಶೀಲಾಯೈ ಚ ಸಾಧ್ವೈ ಚ ಶಾಂತಾಯೈ ಚ ನಮೋನಮಃ ॥ ೬೭ ॥

ಇತ್ಯೇವಮುಕ್ತ್ವಾ ಭಕ್ತ್ಯಾ ಚ ಪ್ರಣನಾಮ ಪ್ರಯತ್ನತಃ ।
ತುಷ್ಟಾ ದೇವೀ ವರಂ ದತ್ವಾ ಸತ್ವರಂ ಸ್ವಾಲಯಂ ಯಯೌ ॥ ೬೮ ॥

ಬ್ರಹ್ಮರುದ್ರವೈನತೇಯಾಃ ಸಮಾಜಗ್ಮುರ್ನಿಜಾಲಯಂ ।
ಧನ್ವಂತರಿಶ್ಚ ಭಗವಾನ್ ಜಗಾಮ ನಿಜಮಂದಿರಂ ॥ ೬೯ ॥

ಜಗ್ಮುರ್ನಾಗಾಃ ಪ್ರಹೃಷ್ಟಾಶ್ಚ ಫಣಾರಾಜಿವಿರಾಜಿತಾಃ ।
ಇತ್ಯೇವಂ ಕಥಿತಂ ಸರ್ವಂ ಸ್ತವರಾಜಂ ಮಯಾ ತವ ॥ ೭೦ ॥

---

೬೬. ಸರ್ಪಸಹೋದರಿಯೂ, ಯೋಗಿನಿಯೂ ಆದ ನಿನಗೆ ನಮಸ್ಕಾರವು. ಬಹುಕಾಲ ತಪಸ್ಸನ್ನು ಮಾಡಿದವಳೂ ಸುಖವನ್ನು ಕೊಡುವವಳೂ ಆದ ನಿನಗೆ ನಮಸ್ಕಾರವು.

೬೭. ತಪೋರೂಪಳೂ, ತಪಸ್ಸಿನ ಫಲವನ್ನು ಕೊಡುವವಳೂ ಆದ ನಿನಗೆ ನಮಸ್ಕಾರವು. ಒಳ್ಳೆಯ ಸ್ವಭಾವವುಳ್ಳವಳೂ, ಪತಿವ್ರತೆಯೂ, ಶಾಂತಸ್ವಭಾವವುಳ್ಳವಳೂ ಆದ ನಿನಗೆ ನಮಸ್ಕಾರವು.

೬೮. ಈ ರೀತಿಯಾಗಿ ಸ್ತೋತ್ರಮಾಡಿ ಧನ್ವಂತರಿಯು ಭಕ್ತಿಯಿಂದ ನಮಸ್ಕಾರವನ್ನು ಮಾಡಿದನು. ಸಂತೋಷಗೊಂಡ ದೇವಿಯು ವರವನ್ನು ಕೊಟ್ಟು ಶೀಘ್ರವಾಗಿ ತನ್ನ ಮನೆಗೆ ಹೊರಟುಹೋದಳು.

೬೯. ಬ್ರಹ್ಮ, ರುದ್ರ ಮತ್ತು ಗರುಡ ಇವರು ತಮ್ಮ ತಮ್ಮ ಮನೆಗೆ ಬಂದರು. ಪೂಜ್ಯನಾದ ಧನ್ವಂತರಿಯು ತನ್ನ ಮನೆಯನ್ನು ಕುರಿತು ಹೊರಟುಹೋದನು.

೭೦. ಸರ್ಪಗಳೆಲ್ಲವೂ ಸಂತೋಷಗೊಂಡು ತಮ್ಮತಮ್ಮ ಹೆಡೆಗಳಿಂದ ಪ್ರಕಾಶಿಸುತ್ತ ಹೊರಟುಹೋದವು. ಹೀಗೆ ಸಕಲ ವಿಚಾರವನ್ನೂ ಸ್ತೋತ್ರ ಶ್ರೇಷ್ಠವನ್ನೂ ನಿನಗೆ ಹೇಳಿರುವೆನು.

ವಿಧಿನಾ ಮಾತರಂ ಭಕ್ತಿಮಾಸ್ತೀಕಶ್ಚ ಚಕಾರ ಹ ।
ತದಾ ತುಷ್ಟಾ ಜಗದ್ಗೌರೀ ಪುತ್ರಂ ತಂ ಮುನಿಪುಂಗವಂ　　॥ ೭೧ ॥

ಇದಂ ಸ್ತೋತ್ರಂ ಮಹಾಪುಣ್ಯಂ ಭಕ್ತಿಯುಕ್ತಶ್ಚ ಯಃ ಪಠೇತ್ ।
ವಂಶಜಾನಾಂ ನಾಗಭಯಂ ನಾಸ್ತಿ ತಸ್ಯ ನ ಸಂಶಯಃ　　॥ ೭೨ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರದನಾರಾಯಣಸಂವಾದೇ ಧನ್ವಂತರಿದರ್ಪಭಂಗೋ
ನಾಮ ಮನಸಾವಿಜಯೋ ನಾಮೈಕ
ಪಂಚಾಶತ್ತಮೋಽಧ್ಯಾಯಃ

---

೭೧. ಆಸ್ತೀಕಮುನಿಯೂ ಕೂಡ ನಿಯಮಪೂರ್ವಕವಾಗಿ ತಾಯಿಯನ್ನು ಭಕ್ತಿಯಿಂದ ಪೂಜಿಸಿದನು. ಆಗ ಜಗದ್ಗೌರಿಯು ಮುನಿಗಳಲ್ಲಿ ಶ್ರೇಷ್ಠನಾದ ತನ್ನ ಮಗನನ್ನು ಸಂತೋಷದಿಂದ ಮೆಚ್ಚಿದಳು.

೭೨. ಅತ್ಯಂತ ಪುಣ್ಯದಾಯಕವಾದ ಈ ಸ್ತೋತ್ರವನ್ನು ಯಾವ ಮನುಷ್ಯನು ಭಕ್ತಿಯಿಂದ ಪಠನಮಾಡುವನೋ ಅವನ ವಂಶದಲ್ಲಿ ಹುಟ್ಟಿದವರಿಗೆ ಸರ್ಪಗಳಿಂದ ಖಂಡಿತವಾಗಿಯೂ ಭಯವಿರುವುದಿಲ್ಲ.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ನಾರದ
ನಾರಾಯಣ ಸಂವಾದಾಂತರ್ಗತವಾದ ರಾಧಾಕೃಷ್ಣ ಸಂವಾದದಲ್ಲಿ
ಧನ್ವಂತರಿಯ ದರ್ಪಭಂಗ ಮತ್ತು ಮನಸಾದೇವಿಯ ವಿಜಯವೆಂಬ
ಐವತ್ತೊಂದನೆಯ ಅಧ್ಯಾಯವು
ಸಮಾಪ್ತವಾದುದು.

ಐವತ್ತೊಂದನೆಯ ಅಧ್ಯಾಯದ ಸಾರಾಂಶ.

ಧನ್ವಂತರಿಯ ದರ್ಪಭಂಗದ ಕಥೆ.—ದೇವಾಸುರರು ಕ್ಷೀರಸಮುದ್ರವನ್ನು ಮಥನಮಾಡಿದಾಗ ಅಲ್ಲಿಂದ ಹೊರಕ್ಕೆ ಬಂದ ಧನ್ವಂತರಿಯು ವೇದವೇದಾಂಗ ಗಳಲ್ಲಿಯೂ, ಮಂತ್ರತಂತ್ರಗಳಲ್ಲಿಯೂ ನಿಪುಣನಾಗಿದ್ದುದಲ್ಲದೆ ಗರುಡನ ಮತ್ತು ಈಶ್ವರನ ಪರಮಶಿಷ್ಯನಾಗಿದ್ದನು. ಅವನು ಒಮ್ಮೆ ತನ್ನ ಸಾವಿರಮಂದಿ ಶಿಷ್ಯರೊಡನೆ ಕೈಲಾಸಪರ್ವತಕ್ಕೆ ಹೋಗುತ್ತಾ ದಾರಿಯಲ್ಲಿ ತಕ್ಷಕನೆಂಬ ಸರ್ಪವನ್ನು ಕಂಡನು. ಲಕ್ಷ ಸರ್ಪಗಳ ಪರಿವಾರದಿಂದ ಕೂಡಿದ ಆ ತಕ್ಷಕನು ಇವನನ್ನು ತಿನ್ನಲು ಬರಲು, ಇವನ ಶಿಷ್ಯರಲ್ಲೊಬ್ಬನು ಆ ತಕ್ಷಕನ ಬಾಯನ್ನು ಹಿರಿದು ವಿಷವನ್ನೆಲ್ಲ ಮಂತ್ರ ಶಕ್ತಿಯಿಂದ ನಾಶಗೊಳಿಸಿದನು. ಅವನ ಹೆಡೆಯಲ್ಲಿದ್ದ ಅನರ್ಘರತ್ನವನ್ನೂ ಕಿತ್ತು ಬಿಸಾಡಿದನು. ಇತ್ತ ತಕ್ಷಕನು ನಿಶ್ಚೇಷ್ಟನಾಗಿ ಬಿದ್ದಿರುವುದನ್ನು ಇತರ ಸರ್ಪಗಳು ವಾಸುಕಿಗೆ ತಿಳಿಸಲು, ಸರ್ಪರಾಜನಾದ ವಾಸುಕಿಯು ಕಾಲೀಯ ಮುಂತಾದ ಮಹಾವಿಷವುಳ್ಳ ಐದು ಸರ್ಪಗಳನ್ನು ಕಳುಹಿಸಲು ಅವುಗಳೆಲ್ಲವೂ ಧನ್ವಂತರಿಯನ್ನು ಅಡ್ಡಗಟ್ಟಿದವು. ಆ ಸರ್ಪಗಳ ವಿಷದ ಗಾಳಿಯ ಸೋಂಕಿನಿಂದ ಧನ್ವಂತರಿಯ ಶಿಷ್ಯರೆಲ್ಲರೂ ಮೂರ್ಛೆಗೊಳ್ಳಲು ಧನ್ವಂತರಿಯು ಮಂತ್ರಶಕ್ತಿಯಿಂದ ಅಮೃತ ವೃಷ್ಟಿಯನ್ನು ಸುರಿಸಿ ಅವರನ್ನೆಲ್ಲ ಚೇತನಗೊಳಿಸಿದನು. ಅಲ್ಲದೆ ತನ್ನ ಮಂತ್ರ ಶಕ್ತಿಯಿಂದ ಆ ಮಹಾಸರ್ಪಗಳೆಲ್ಲವನ್ನೂ ನಿಶ್ಚೇಷ್ಟವಾಗುವಂತೆ ಮಾಡಿದನು. ಇದನ್ನು ಜ್ಞಾನದೃಷ್ಟಿಯಿಂದರಿತ ವಾಸುಕಿಯು ತನ್ನ ಸಹೋದರಿಯಾದ ಮನಸಾ ದೇವಿಯನ್ನು ಪ್ರಾರ್ಥಿಸಲು ಆಕೆಯು ಧನ್ವಂತರಿಯ ನಿಗ್ರಹಕ್ಕಾಗಿ ಅವನಿದ್ದೆಡೆಗೆ ಬಂದಳು. ತನ್ನ ಅಮೃತಮಯವಾದ ದೃಷ್ಟಿಯಿಂದಲೇ ಸರ್ಪಗಳನ್ನೆಲ್ಲ ಬದುಕಿಸಿ ವಿಷಮಯವಾದ ದೃಷ್ಟಿಯನ್ನು ಬೀರಿ ಧನ್ವಂತರಿಯ ಶಿಷ್ಯರನ್ನೆಲ್ಲ ಮೂರ್ಛೆ ಗೊಳಿಸಿದಳು. ಧನ್ವಂತರಿಯು ತನ್ನ ಮಂತ್ರಪ್ರಭಾವದಿಂದ ಅವರನ್ನು ಬದುಕಿಸ ಲಾಗಲಿಲ್ಲ. ಮನಸಾದೇವಿಯು ಒಂದು ತಾವರೆಹೂವನ್ನು ತೆಗೆದುಕೊಂಡು ಮಂತ್ರಿಸಿ ಧನ್ವಂತರಿಯ ಮೇಲೆ ಬಿಡಲು ಧನ್ವಂತರಿಯು ತನ್ನ ನಿಟ್ಟುಸಿರಿನಿಂದ ಅದನ್ನು ಬೂದಿಮಾಡಿದನು. ಆದರೂ ವಿಷಮಯವಾದ ಆ ಭಸ್ಮರಾಶಿಯು ಇವನ ಮೇಲೆ

ಬೀಳಲು ಬಂದಾಗ ಅದರ ಮೇಲೆ ಒಂದುಹಿಡಿ ಮಣ್ಣನ್ನು ಮಂತ್ರಿಸಿ ಎರಚಿ ನಾಶ ಪಡಿಸಿದನು. ಆಗ ಮನಸೆಯು ಕ್ರಮವಾಗಿ ತನ್ನ ಶಕ್ತ್ಯಾಯುಧ, ಪಾಶಾಯುಧ ಗಳನ್ನು ಪ್ರಯೋಗಿಸಿ ಅವೂ ವ್ಯರ್ಥವಾಗಲು ಈಶ್ವರನ ವರದಿಂದ ಲಬ್ಧವಾದ ತ್ರಿಶೂಲವನ್ನು ಹಿಡಿದಳು. ಕೂಡಲೇ ಧನ್ವಂತರಿಯು ಗರುಡನನ್ನೂ, ಮಹೇಶ್ವರ ನನ್ನೂ ಭಜಿಸಲು ಅವರೀರ್ವರೂ ಪ್ರತ್ಯಕ್ಷವಾಗಿ ಮನಸಾದೇವಿಯ ಮಹಿಮೆಯನ್ನು ಧನ್ವಂತರಿಗೆ ವಿವರಿಸಿ ಕೌಥುಮಶಾಖೋಕ್ತಪ್ರಕಾರವಾಗಿ ಆಕೆಯನ್ನು ಪೂಜಿಸಲು ಧನ್ವಂತರಿಗೆ ಹೇಳಿದರು. ಅದರಂತೆ ಧನ್ವಂತರಿಯು ಮನಸಾದೇವಿಯನ್ನು ಭಕ್ತಿ ಪೂರ್ವಕವಾಗಿ ಭಜಿಸಿ ಆಕೆಯ ಅನುಗ್ರಹಕ್ಕೆ ಪಾತ್ರನಾದನು.

ಈ ರೀತಿ ಧನ್ವಂತರಿಯ ದರ್ಪಭಂಗವಾದುದನ್ನು ಶ್ರೀಕೃಷ್ಣನು ರಾಧಾದೇವಿಗೆ ವಿವರಿಸಿದನು.

॥ ಓಂ ॥

॥ ಶ್ರೀ ಗಣೇಶಾಯ ನಮಃ ॥

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

॥ ದ್ವಿಪಂಚಾಶತ್ತಮೋಽಧ್ಯಾಯಃ ॥

॥ ಶ್ರೀಕೃಷ್ಣ ಉವಾಚ ॥

ಸರ್ವೇಷಾಂ ದರ್ಪಭಂಗಶ್ಚ ಕಥಿತಶ್ಚ ಶ್ರುತಸ್ತ್ವಯಾ ।
ಕ್ಷುದ್ರಾಣಾಂ ಮಹತಾಂ ಚೈವ ಕೃತ ಏವ ನ ಸಂಶಯಃ ॥ ೧ ॥

ಅಧುನಾ ಚ ಸಮುತ್ತಿಷ್ಠ ಗಚ್ಛ ವೃಂದಾವನಂ ವನಂ ।
ಗೋಪಿಕಾ ವಿರಹಾರ್ತಾಶ್ಚ ಶೀಘ್ರಂ ಪಶ್ಯಾಮಿ ಸುಂದರಿ ॥ ೨ ॥

॥ ಶ್ರೀ ನಾರಾಯಣ ಉವಾಚ ॥

ಇತ್ಯೇವಂ ವಚನಂ ಶ್ರುತ್ವಾ ಮಾನಿನೀ ರಸಿಕೇಶ್ವರೀ ।
ಉವಾಚ ಕೃಷ್ಣಂ ನಯ ಮಾಂ ನ ಶಕ್ತಾ ಗಂತುಮೀಶ್ವರ ॥ ೩ ॥

ಐವತ್ತೆರಡನೆಯ ಅಧ್ಯಾಯವು.

೧. ಶ್ರೀಕೃಷ್ಣನು:—ಸಕಲರ ದರ್ಪಭಂಗವನ್ನೂ ನಿನಗೆ ಹೇಳಿರುವೆನು. ನೀನೂ ಸಾವಧಾನದಿಂದ ಕೇಳಿರುವಿ. ದೊಡ್ಡವರ ಮತ್ತು ಸಾಮಾನ್ಯರ ದರ್ಪ ಭಂಗವು ನಿಃಸಂಶಯವಾಗಿ ಮಾಡಲ್ಪಟ್ಟಿರುತ್ತದೆ.

೨. ಎಲೈ ಸುಂದರಿಯೇ, ಈಗ ಮೇಲಕ್ಕೇಳು. ವೃಂದಾವನಕ್ಕೆ ನಡೆ. ನನ್ನ ವಿರಹದಿಂದ ಬಳಲಿರುವ ಗೋಪಿಕಾಸ್ತ್ರೀಯರನ್ನು ಜಾಗ್ರತೆಯಾಗಿ ನೋಡುವೆನು.

೩. ನಾರಾಯಣನು:—ಹೀಗೆ ಹೇಳಿದುದನ್ನು ಕೇಳಿ ಅಭಿಮಾನವತಿಯೂ ರಸಿಕರಲ್ಲಿ ಶ್ರೇಷ್ಠಳೂ ಆದ ರಾಧೆಯು ಕೃಷ್ಣನನ್ನು ಕುರಿತು ಎಲೈ ಈಶ್ವರನೇ, ನಾನು ನಡೆಯಲಾರೆನು. ನನ್ನನ್ನು ಎತ್ತಿಕೊಂಡು ಹೋಗು, ಎಂದಳು.

ರಾಧಿಕಾವಚನಂ ಶ್ರುತ್ವಾ ಪ್ರಹಸ್ಯ ಮಧುಸೂದನಃ ।
ಮಾಮಾರುಹೇತ್ಯೇವಮುಕ್ತ್ವಾ ಸೋಽಂತರ್ಧಾನಂ ಚಕಾರ ಹ　　॥ ೪ ॥

ಸಾ ಮನೋಯಾಯಿನೀ ರಾಧಾ ಕೃತ್ವಾ ಚ ರೋದನಂ ಕ್ಷಣಂ ।
ಇತಸ್ತತಸ್ತಮನ್ವೇಷ್ಯ ವೃಂದಾರಣ್ಯಂ ಜಗಾಮ ಸಾ　　॥ ೫ ॥

ವಿವೇಶ ಚಂದನವನಂ ರುದಂತೀ ಶೋಕಕಾತರಾ ।
ದದರ್ಶ ಗೋಪಿಕಾಸ್ತತ್ರ ಶೋಕಾರ್ತಾ ಭಯವಿಹ್ವಲಾಃ　　॥ ೬ ॥

ತಾಮ್ರಾಸ್ಯಾ ಘೂರ್ಣನಯನಾ ಭ್ರಮಂತೀಃ ಸರ್ವಕಾನನಂ ।
ನಾಥ ನಾಥೇತಿ ಕುರ್ವಂತೀರ್ನಿರಾಹಾರಾ ರುಷಾನ್ವಿತಾಃ　　॥ ೭ ॥

ತಾ ದೃಷ್ಟ್ವಾ ರಾಧಿಕಾ ಸಾ ಚ ಪ್ರೇಮವಿಚ್ಛೇದಕಾತರಾ ।
ಕಥಯಾಮಾಸ ವೃತ್ತಾಂತಂ ಮಲಯಭ್ರಮಣಾದಿಕಂ　　॥ ೮ ॥

---

೪. ಮಧುಸೂದನನು ರಾಧೆಯ ಮಾತನ್ನು ಕೇಳಿ ನಗುತ್ತ ನನ್ನ ಬೆನ್ನನ್ನು ಹತ್ತು ಎಂದು ಹೇಳಿ ಅಲ್ಲಿಯೇ ಮಾಯವಾದನು.

೫. ಆ ರಾಧೆಯು ಸ್ವಲ್ಪಕಾಲ ಅಳುತ್ತಿದ್ದು ಕೃಷ್ಣನನ್ನು ಎಲ್ಲೆಡೆಯಲ್ಲಿಯೂ ಹುಡುಕಿ ಕೊನೆಗೆ-ವೃಂದಾವನದ ಅರಣ್ಯಕ್ಕೆ ಹೋದಳು.

೬. ದುಃಖದಿಂದ ಕಾತರಳಾಗಿ ಅಳುತ್ತ ಚಂದನವನವನ್ನು ಪ್ರವೇಶಿಸಿದಳು. ಅಲ್ಲಿ ದುಃಖದಿಂದಲೂ, ಭಯದಿಂದಲೂ ವ್ಯಥೆಗೊಂಡಿರುವ ಗೋಪಿಕಾಸ್ತ್ರೀಯರನ್ನು ಕಂಡಳು.

೭. ಆ ಗೋಪಿಯರು ಕೆಂಪಾದ ಮುಖವುಳ್ಳವರಾಗಿ ತಿರುಗುತ್ತಿರುವ ಕಣ್ಣುಗಳುಳ್ಳವರಾಗಿ ಎಲ್ಲ ಕಾಡುಗಳನ್ನೂ ಅಲೆಯುತ್ತ ಪ್ರಿಯನೇ, ಪ್ರಿಯನೇ, ಎಂದು ಕೂಗುತ್ತ ಆಹಾರವನ್ನು ಕೂಡ ತೆಗೆದುಕೊಳ್ಳದೆ ಕೋಪಗೊಂಡವರಾಗಿದ್ದರು

೮. ರಾಧೆಯು ಅವರುಗಳನ್ನು ನೋಡಿ ಪ್ರೀತಿಗೆ ಭಂಗವುಂಟಾದಕಾರಣ ಭಯಗೊಂಡವಳಾಗಿ ಮಲಯಪರ್ವತದಲ್ಲಿ ಸಂಚಾರಮಾಡಿದುದೇ ಮೊದಲಾದ ಸಕಲ ಸಮಾಚಾರಗಳನ್ನೂ ತಿಳಿಸಿದಳು.

ತಾಭಿಃ ಸಾರ್ಧಂ ಚ ಸಾ ರಾಧಾ ರುರೋದ ವಿರಹಾತುರಾ ।
ಹಾ ನಾಥ ನಾಥೇತ್ಯುಚ್ಚಾರ್ಯೋ ವಿಲಪ್ಯ ಚ ಮುಹುರ್ಮುಹುಃ ॥ ೯ ॥

ವಿನಿಂದ್ಯ ಕೃಷ್ಣಂ ಕೋಪೇನ ತರ್ಜಯಾಮಾಸ ಚ ಕ್ಷಣಂ ।
ಕ್ಷಣಂ ಶರೀರಮುತ್ಸ್ರಷ್ಟುಂ ಕೋಪಾತ್ಸರ್ವಾಃ ಸಮುದ್ಯತಾಃ ॥ ೧೦ ॥

ಏತಸ್ಮಿನ್ನಂತರೇ ಕೃಷ್ಣಸ್ತತ್ರ ಚಂದನಕಾನನೇ ।
ಸ್ವಾತ್ಮಾನಂ ದರ್ಶಯಾಮಾಸ ರಾಧಿಕಾಂ ಗೋಪಿಕಾಗಣಂ ॥ ೧೧ ॥

ರಾಧಾ ಗೋಪಾಂಗನಾಭಿಶ್ಚ ದೃಷ್ಟ್ವಾ ಪ್ರಾಣೇಶ್ವರಂ ಮುದಾ ।
ಸಸ್ಮಿತಾ ಚ ಪ್ರದುದ್ರಾವ ಪುಲಕಾಂಚಿತವಿಗ್ರಹಾ ॥ ೧೨ ॥

ತೂರ್ಣಂ ಕೃಷ್ಣಂ ಸಮಾಶ್ಲಿಷ್ಯ ಜಹಾರ ಮುರಲೀಂ ರುಷಾ ।
ಮಾಲಾಂ ಚ ಪೀತವಸನಂ ಭಗ್ನಂ ಕೃತ್ವಾ ಚ ಮಾನಿನೀ ॥ ೧೩ ॥

---

೯. ರಾಧೆಯು ಆ ಗೋಪಿಯರೊಂದಿಗೆ ಸೇರಿ ವಿರಹವ್ಯಥೆಯಿಂದ ಪ್ರಿಯನೇ, ಪ್ರಿಯನೇ, ಎಂದು ಮತ್ತೆ ಮತ್ತೆ ಗೋಳಾಡುತ್ತ ಅತ್ತಳು.

೧೦. ಕೋಪದಿಂದ ಒಂದು ಕ್ಷಣಕಾಲ ಕೃಷ್ಣನನ್ನು ನಿಂದಿಸುತ್ತ ಗದರಿಸಿದಳು. ಅವರೆಲ್ಲರೂ ಸೇರಿ ಒಂದು ಕ್ಷಣದಲ್ಲಿ ಶರೀರವನ್ನು ಬಿಡಬೇಕೆಂದು ಸಿದ್ಧರಾದರು.

೧೧. ಈ ಸಮಯಕ್ಕೆ ಸರಿಯಾಗಿ ಕೃಷ್ಣನು ಆ ಚಂದನವನದಲ್ಲಿ ರಾಧೆಗೂ ಗೋಪಿಯರ ಸಮೂಹಕ್ಕೂ ತನ್ನ ರೂಪವನ್ನು ಕಾಣಿಸಿದನು.

೧೨. ರಾಧೆಯು ತನ್ನ ಪ್ರಾಣೇಶ್ವರನನ್ನು ಕಂಡು ಸಂತೋಷದಿಂದ ಮಂದಹಾಸವನ್ನು ಬೀರುತ್ತ ರೋಮಾಂಚವನ್ನು ಹೊಂದಿದ ಶರೀರವುಳ್ಳವಳಾಗಿ ಗೋಪಿಕಾಸ್ತ್ರೀಯರೊಡನೆ ಅವನೆಡೆಗೆ ಓಡಿಹೋದಳು.

೧೩. ಮಾನವತಿಯಾದ ರಾಧೆಯು ಕೃಷ್ಣನನ್ನು ಬಲವಾಗಿ ಅಪ್ಪಿಕೊಂಡು ಕೋಪದಿಂದ ಅವನ ಮುರಳಿಯನ್ನೂ, ವಸ್ತ್ರವನ್ನೂ ಮಾಲಿಕೆಯನ್ನೂ ಕಸಿದುಕೊಂಡು ಅವನನ್ನು ಬೆತ್ತಲೆಯನ್ನಾಗಿ ಮಾಡಿದಳು.

ಪುನಃ ಸಂಧಾರಯಾಮಾಸ ವಸ್ತ್ರಂ ಮಾಲಾಂ ಮನೋಹರಾಂ ।
ವಿನೋದಮುರಲೀಂ ತುಷ್ಟ್ವಾ ವೃಂದಾವನವಿನೋದಿನೀ ॥ ೧೪ ॥

ಚಂದನಾಗುರುಕಸ್ತೂರೀಕುಂಕುಮಾಕ್ತಂ ಚಕಾರ ತಂ ।
ಮುಹುರ್ಮುಹುರ್ಮುಖಂ ವೀಕ್ಷ್ಯ ಚುಚುಂಬ ಪರಮಾದರಂ ॥ ೧೫ ॥

ಕ್ಷಣಂ ಸಂತರ್ಜಯಾಮಾಸ ಕ್ಷಣಂ ಸ್ತೋತ್ರಂ ಚಕಾರ ಹ ।
ಸಕರ್ಪೂರಂ ಚ ತಾಂಬೂಲಂ ಕ್ಷಣಂ ತಸ್ಮೈ ಮುದಾ ದದೌ ॥ ೧೬ ॥

ಅಥ ಗೋಪಾಂಗನಾಃ ಸರ್ವಾ ರುರುದುಃ ಪ್ರೇಮವಿಹ್ವಲಾಃ ।
ಸರ್ವಂ ನಿವೇದನಂ ಚಕ್ರುಃ ಸ್ವದುಃಖಂ ವಿರಹೋದ್ಭವಂ ॥ ೧೭ ॥

ದೇಹತ್ಯಾಗಂ ಚ ಸ್ನಾನಂ ಚ ಸ್ವಾಹಾರಸ್ಯ ವಿಸರ್ಜನಂ ।
ವನೇವನೇಽಹರ್ನಿಶಂ ಚ ಶಶ್ವದ್ಭ್ರಮಣಮೇವ ಚ ॥ ೧೮ ॥

---

೧೪. ಮತ್ತೆ ಸಂತೋಷಗೊಂಡವಳಾಗಿ ಅವನಿಗೆ ಬಟ್ಟೆಯನ್ನುಡಿಸಿ ಮಾಲಿಕೆಯನ್ನು ಹಾಕಿ ಅವನ ಮುರಳಿಯನ್ನು ಅವನ ಕೈಗೆ ಕೊಟ್ಟಳು.

೧೫. ಮತ್ತು ಅತ್ಯಂತ ಕಾತರಳಾಗಿ ಚಂದನ, ಅಗರು, ಕಸ್ತೂರೀ ಕೇಸರಿ ಇವುಗಳಿಂದ ಕೂಡಿದ ಸುಗಂಧಯುಕ್ತವಾದ ಅವನ ಮುಖವನ್ನು ಮತ್ತೆ ಮತ್ತೆ ಚುಂಬಿಸಿದಳು.

೧೬. ಒಂದು ಕ್ಷಣಕಾಲ ಅವನನ್ನು ಗದರಿಸಿದಳು, ಮತ್ತೊಂದುಕ್ಷಣದಲ್ಲಿ ಅವನನ್ನು ಸ್ತೋತ್ರಮಾಡಿದಳು ಸ್ವಲ್ಪಕಾಲ ಪಚ್ಚಕರ್ಪೂರ ಮಿಶ್ರಿತವಾದ ತಾಂಬೂಲವನ್ನು ಪ್ರೀತಿಯಿಂದ ಕೊಟ್ಟಳು.

೧೭. ಅನಂತರದಲ್ಲಿ ಎಲ್ಲ ಗೋಪಿಯರೂ ಪ್ರೀತಿಯಿಂದ ಕೂಡಿದವರಾಗಿ ಅತ್ತರು. ಮತ್ತು ವಿರಹದಿಂದುಂಟಾದ ತಮ್ಮ ಸಮಸ್ತ ದುಃಖಗಳನ್ನೂ ಅವನಿಗೆ ವಿವರಿಸಿದರು.

೧೮. ತಾವು ವಿರಹಕಾಲದಲ್ಲಿ ಶರೀರವನ್ನೇ ಬಿಡಲು-ನಿಶ್ಚಯಿಸಿದುದನ್ನೂ, ಸ್ನಾನಾಹಾರಗಳನ್ನು ಬಿಟ್ಟಿರುವುದನ್ನೂ, ಹಗಲು ರಾತ್ರಿಗಳಲ್ಲಿ ನಾನಾ ಕಾಡುಗಳಲ್ಲಿ ಅಲೆದಿರುವುದನ್ನೂ ಇನ್ನೂ ಅನೇಕ ವಿಧವಾದ ಕಷ್ಟಗಳನ್ನೆಲ್ಲವನ್ನೂ ತಿಳಿಸಿದರು.

ಕ್ಷಣಂ ಚ ಭರ್ತ್ಸಯಾಮಾಸುಃ ಸ್ತೋತ್ರಂ ಚಕ್ರುಃ ಕ್ಷಣಂ ಮುದಾ ।
ಕ್ಷಣಂ ದದುರ್ಭೂಷಣಂ ಚ ಕ್ಷಣಂ ತಸ್ಮೈ ಚ ಚಂದನಂ ॥ ೧೯ ॥

ಕಾಶ್ಚಿದೂಚುಃ ಪ್ರಾಣಚೋರಂ ಪಶ್ಯ ರಕ್ಷೇತಿ ಸಂತತಂ ।
ಏವಂ ಪುನರ್ನಕರ್ತವ್ಯಮನೇನೇತಿ ಚ ಕಾಶ್ಚನ ॥ ೨೦ ॥

ಕಾಶ್ಚಿದೂಚುರಿಮಂ ಮಧ್ಯೇ ಯೂಯಂ ಕುರುತ ಸತ್ವರಂ ।
ನಿಬದ್ಧಂ ಪ್ರೇಮಪಾಶೇನ ಹೃದಯೇ ಚೇತಿ ಕಾಶ್ಚನ ॥ ೨೧ ॥

ಕಾಶ್ಚಿದೂಚುರಯಂ ನಾಸ್ತಿ ಪ್ರತೀತಿರ್ನ ಕದಾಚನ ।
ಯತ್ನಾಚ್ಚೇತನಚೋರಂ ಚ ಪಶ್ಯ ಪಶ್ಯೇತಿ ಕಾಶ್ಚನ ॥ ೨೨ ॥

ಕಾಶ್ಚಿದೂಚುರ್ನಿಷ್ಠುರೋಽಯಂ ನರಘಾತೀತಿ ಕೋಪತಃ ।
ನ ಪುನರ್ವದತೇ ಮಾಂ ಚ ಕಾಶ್ಚನೇತಿ ಚ ನಾರದ ॥ ೨೩ ॥

---

೧೯. ಸ್ವಲ್ಪಹೊತ್ತು ಅವನನ್ನು ನಿಂದಿಸಿದರು. ಸ್ವಲ್ಪಹೊತ್ತು ಸಂತೋಷ ದಿಂದ ಸ್ತೋತ್ರಮಾಡಿದರು. ಮತ್ತೆ ಕೆಲಕಾಲ ನಾನಾ ವಿಧವಾದ ಅಲಂಕಾರಗಳನ್ನು ಮಾಡಿದರು. ಮತ್ತು ಉತ್ತಮವಾದ ಗಂಧವನ್ನರ್ಪಿಸಿದರು

೨೦. ಕೆಲಮಂದಿ ಸ್ತ್ರೀಯರು ಅವನನ್ನು ಕುರಿತು 'ನಮ್ಮ ಪ್ರಾಣವನ್ನು ಅಪಹರಿಸುವ ಕಳ್ಳನನ್ನು ನೋಡು. ನಮ್ಮನ್ನು ಕಾಪಾಡು' ಎಂದು ಬೇಡಿಕೊಂಡರು. ಮತ್ತೆ ಕೆಲವರು ಈ ರೀತಿಯಾಗಿ ಇನ್ನು ಮುಂದೆ ಯಾವಾಗಲೂ ಮಾಡಬಾರದೆಂದು ಕೇಳಿಕೊಂಡರು.

೨೧. ಇನ್ನೂ ಕೆಲವರು ತಮ್ಮ ಸಖಿಯರನ್ನು ಕುರಿತು 'ಈ ಕೃಷ್ಣನನ್ನು ನೀವು ಗಳು ನಿಮ್ಮ ಮಧ್ಯದಲ್ಲಿ ಸೇರಿಸಿಕೊಳ್ಳಿರಿ' ಎಂದರು. ಉಳಿದ ಕೆಲವರು 'ಪ್ರೇಮವೆಂಬ ಹಗ್ಗದಿಂದಿವನನ್ನು ಕಟ್ಟಿ ನಿಮ್ಮ ಹೃದಯದಲ್ಲಿಟ್ಟುಕೊಳ್ಳಿರಿ' ಎಂದು ನುಡಿದರು.

೨೨. ಮತ್ತು ಕೆಲವರು 'ಇವನನ್ನು ಯಾವಾಗಲೂ ನಂಬಬಾರದು' ಎಂದರು. ಉಳಿದ ಕೆಲವು ಮಂದಿಯು ಈ ಮನಸ್ಸನ್ನು ಕದಿಯುವ ಕಳ್ಳನನ್ನು ಜಾಗರೂಕತೆ ಯಿಂದ ನೋಡಿಕೊಳ್ಳಿರಿ ಎಂದು ನುಡಿದರು.

೨೩. ಕೆಲವರು ಕೋಪದಿಂದ 'ಇವನು ಬಹಳ ನಿಷ್ಠುರಿಯು. ಮನುಷ್ಯರನ್ನು ಕೊಲ್ಲುವವನು ಎಂದರು. ಎಲೈ ನಾರದನೇ, 'ಇವನು ನಮ್ಮೊಡನೆ ಮಾತನಾಡುವು ದಿಲ್ಲ' ಎಂದು ಕೆಲವರು ನುಡಿದರು.

ನಿರ್ಜನಾನಿ ಚ ರಮ್ಯಾಣಿ ಯಾನಿ ಯಾನಿ ವನಾನಿ ಚ ।
ಭ್ರಮೇಯುರ್ಗೋಪಿಕಾಸ್ತಾನಿ ಕೃಷ್ಣೇನ ಸಹ ಕೌತುಕಾತ್ ॥ ೨೪ ॥

ಏವಂ ತು ಗೋಪಿಕಾಃ ಸರ್ವಾ ಮಧ್ಯೇ ಕೃತ್ವಾ ಸದೀಶ್ವರೀಂ ।
ಯಯುರ್ವನಾಂತರೇ ಯತ್ರ ಸುರಮ್ಯಾಂ ರಾಸಮಂಡಲಂ ॥ ೨೫ ॥

ರಾಸಂ ಗತ್ವಾ ಸ್ವರ್ಣಪೀಠೇ ತಸ್ಥೌ ಸ ರಸಿಕೇಶ್ವರಃ ।
ನಿಶಿ ಭಾತಿ ಯಥಾಽಽಕಾಶೇ ಚಂದ್ರಸ್ತಾರಾಗಣೈಃ ಸಹ ॥ ೨೬ ॥

ನಾನಾಮೂರ್ತೀರ್ವಿಧಾಯಾತ್ರ ಸಹ ತಾಭಿರ್ಜನಾರ್ದನಃ ।
ಚಕಾರ ಚ ಪುನಃ ಕ್ರೀಡಾಂ ಕಾಮುಕೀನಾಂ ಮನೋಹರಾಂ ॥ ೨೭ ॥

ಸ್ವಯಂ ರಾಧಾಂ ಕರೇ ಧೃತ್ವಾ ಪೂರ್ವೋಕ್ತಂ ರತಿಮಂದಿರಂ ।
ವಿಶ್ವಕರ್ಮವಿನಿರ್ಮಾಣಮಾರುರೋಹ ಸ್ಮರಾತುರಃ ॥ ೨೮ ॥

---

೨೪. ನಿರ್ಜನವಾದ ಮತ್ತು ಮನೋಹರವಾದ ಯಾವ ಯಾವ ವನಗಳಿವೆಯೋ ಆಯಾಯ ವನಗಳಲ್ಲಿ ಕೃಷ್ಣನೊಡನೆ ಕುತೂಹಲದಿಂದ ಗೋಪಿಯರು ವಿಹರಿಸಬಹುದೆಂದರು.'

೨೫. ಹೀಗೆ ಗೋಪಿಯರು ಎಲ್ಲರೂ ಸೇರಿ ಕೃಷ್ಣನನ್ನು ಮಧ್ಯದಲ್ಲಿಟ್ಟುಕೊಂಡು ಮನೋಹರವಾದ ರಾಸಮಂಡಲದ ಸುತ್ತ ನಡೆದರು.

೨೬. ಕೃಷ್ಣನು ರಾಸಮಂಡಲವನ್ನು ಸೇರಿ ಚಿನ್ನದ ಸಿಂಹಾಸನದಲ್ಲಿ ಕುಳಿತುಕೊಂಡನು. ರಸಿಕರಲ್ಲಿ ಶ್ರೇಷ್ಠನಾದ ಆ ಕೃಷ್ಣನು ಆಕಾಶದಲ್ಲಿ ಚಂದ್ರನು ನಕ್ಷತ್ರ ಸಮೂಹದಿಂದೊಡಗೂಡಿದವನಾಗಿ ಹೇಗೆ ಕಂಗೊಳಿಸುವನೋ ಹಾಗೆಯೇ ಪ್ರಕಾಶಿಸುತ್ತಿದ್ದನು.

೨೭. ಕೃಷ್ಣನು ಅನೇಕ ಶರೀರಗಳನ್ನು ಮಾಡಿಕೊಂಡು ರಾಸಮಂಡಲದಲ್ಲಿ ಗೋಪಿಕಾಸ್ತ್ರೀಯರೊಡನೆ ಮತ್ತೆ ಆ ಕಾಮುಕಿಯರಿಗೆ ಆನಂದದಾಯಕವಾದ ರಾಸಕ್ರೀಡೆಯನ್ನು ಆನಂದದಿಂದ ಮಾಡಿದನು.

೨೮. ಮತ್ತು ರಾಧೆಯ ಕೈಯನ್ನು ಹಿಡಿದುಕೊಂಡು ಮನ್ಮಥಪೀಡಿತನಾದ ಕೃಷ್ಣನು ವಿಶ್ವಕರ್ಮನಿಂದ ನಿರ್ಮಿತವಾದ ರತಿಮಂದಿರವನ್ನು ಪ್ರವೇಶಿಸಿದನು.

ಚಂದನಾಗುರುಕಸ್ತೂರೀಕುಂಕುಮಾಕ್ತಂ ಸುವಾಸಿತಂ ।
ತತ್ರ ಚಂಪಕತಲ್ಪೇ ಸ ಸುಷ್ವಾಪ ಚ ತಯಾ ಸಹ ॥ ೨೯ ॥

ನಾನಾಪ್ರಕಾರಶೃಂಗಾರಂ ಕಾಮಶಾಸ್ತ್ರವಿಶಾರದಃ ।
ಚಕಾರ ಕಾಮೀ ಕ್ರೀಡಾಂ ಚ ಕಾಮಿನ್ಯಾ ಸಹ ಕೌತುಕೀ ॥ ೩೦ ॥

ಬಭೂವ ಸುರತಿಸ್ತತ್ರ ಸುಚಿರಂ ಚ ತಯೋರ್ಮುನೇ ।
ರತಿನಿಷ್ಠಾ ತಯೋಃ ರಮ್ಯಾ ವಿರತಿರ್ನಾಸ್ತಿ ತತ್ ಕ್ಷಣಂ ॥ ೩೧ ॥

ಏವಂ ತೌ ತಸ್ಥತುಸ್ತತ್ರ ರಾಧಾಕೃಷ್ಣರಸೋತ್ಸುಕೌ ।
ತಸ್ಥುಸ್ತಾ ಗೋಪಿಕಾಭಿಶ್ಚ ಸುರತೌ ಕೃಷ್ಣಮೂರ್ತಯಃ ॥ ೩೨ ॥

॥ ನಾರದ ಉವಾಚ ॥

ಆದೌ ರಾಧಾಂ ಸಮುಚ್ಚಾರ್ಯ ಪಶ್ಚಾತ್ಕೃಷ್ಣಂ ವಿದುರ್ಬುಧಾಃ ।
ನಿಮಿತ್ತಮಸ್ಯ ಮಾಂ ಭಕ್ತಂ ವದ ಭಕ್ತಜನಪ್ರಿಯ ॥ ೩೩ ॥

---

೨೯. ಚಂದನ, ಅಗರು, ಕಸ್ತೂರೀ, ಕೇಸರಿ ಇವುಗಳಿಂದ ಸುವಾಸನೆಯಾಗಿರುವ ಆ ರತಿಮಂದಿರದಲ್ಲಿ ಸಂಪಿಗೆಯ ಹೂವಿನಿಂದ ಮಾಡಿದ ಹಾಸಿಗೆಯಲ್ಲಿ ಆ ಕೃಷ್ಣನು ರಾಧೆಯೊಡನೆ ಮಲಗಿದನು.

೩೦. ಕಾಮಶಾಸ್ತ್ರದಲ್ಲಿ ನಿಪುಣನೂ, ಕಾಮಿಯೂ ಆದ ಕೃಷ್ಣನು ಕುತೂಹಲದಿಂದ ಕೂಡಿದವನಾಗಿ ಕಾಮಿನಿಯಾದ ಆ ರಾಧೆಯೊಡನೆ ನಾನಾ ವಿಧವಾದ ಕ್ರೀಡೆಗಳನ್ನನುಭವಿಸಿದನು.

೩೧. ಎಲೈ ನಾರದನೇ, ಆ ರಾಧಾಕೃಷ್ಣರ ರತಿಯು ಬಹುಕಾಲದವರೆಗೂ ನಡೆಯಿತು. ರತಿಯಲ್ಲಿ ನಿಪುಣರಾದ ಆ ರಾಧಾಕೃಷ್ಣರಿಗೆ ಸ್ವಲ್ಪವೂ ವಿರತಿಯಿಲ್ಲದಾಯಿತು.

೩೨. ಹೀಗೆ ರಾಧಾಕೃಷ್ಣರು ರಾಸದಲ್ಲಿ ಉತ್ಸುಕರಾಗಿ ಇದ್ದರು. ಆ ಗೋಪಕನ್ಯೆಯರಾದರೋ ಆ ಕೃಷ್ಣನೊಡನೆ ಸುರತಸೌಖ್ಯವನ್ನು ಹೊಂದಿ ಸಂತುಷ್ಟರಾದರು.

೩೩. ನಾರದನು :—ಎಲೈ ಭಕ್ತರಲ್ಲಿ ಪ್ರೀತಿಯುಳ್ಳ ನಾರಾಯಣನೇ, ಮೊದಲು ರಾಧೆಯೆಂದು ಹೇಳಿ ಅನಂತರ ಕೃಷ್ಣನೆಂದೆನ್ನುವರು. ಇದರ ಕಾರಣವನ್ನು ಭಕ್ತನಾದ ನನಗೆ ತಿಳಿಸುವವನಾಗು.

॥ ಶ್ರೀ ನಾರಾಯಣ ಉವಾಚ ॥

ನಿಮಿತ್ತಮಸ್ಯ ತ್ರಿವಿಧಂ ಕಥಯಾಮಿ ನಿಶಾಮಯ ।
ಜಗನ್ಮಾತಾ ಚ ಪ್ರಕೃತಿಃ ಪುರುಷಶ್ಚ ಜಗತ್ಪಿತಾ ॥ ೩೪ ॥

ಗರೀಯಸೀ ತ್ರಿಜಗತಾಂ ಮಾತಾ ಶತಗುಣೈಃ ಪಿತುಃ ।
ರಾಧಾಕೃಷ್ಣೇತಿ ಗೌರೀಶೇತ್ಯೇವಂ ಶಬ್ದಃ ಶ್ರುತೌ ಶ್ರುತಃ ॥ ೩೫ ॥

ಕೃಷ್ಣರಾಧೇಶಗೌರೀತಿ ಲೋಕೇ ನ ಚ ಕದಾ ಶ್ರುತಃ ।
ಪ್ರಸೀದ ರೋಹಿಣೀಚಂದ್ರ ಗೃಹಾಣಾರ್ಘ್ಯಮಿದಂ ಮಮ ॥ ೩೬ ॥

ಗೃಹಾಣಾರ್ಘ್ಯಂ ಮಯಾ ದತ್ತಂ ಸಂಜ್ಞಯಾ ಸಹ ಭಾಸ್ಕರ ।
ಪ್ರಸೀದ ಕಮಲಾಕಾಂತ ಗೃಹಾಣ ಮಮ ಪೂಜನಂ ॥ ೩೭ ॥

ಇತಿ ದೃಷ್ಟಂ ಸಾಮವೇದೇ ಕೌಥುಮೇ ಮುನಿಸತ್ತಮ ।
ರಾಶಬ್ದೋಚ್ಚಾರಣಾದೇವ ಸ್ಫೀತೋ ಭವತಿ ಮಾಧವಃ ॥ ೩೮ ॥

---

೩೪. ನಾರಾಯಣನು :—ಎಲೈ ನಾರದನೇ, ಇದಕ್ಕೆ ಮೂರು ಕಾರಣಗಳಿರುವುವು. ಅವುಗಳನ್ನು ಹೇಳುವೆನು ಕೇಳು. ಪ್ರಕೃತಿಯು ಜಗತ್ತಿಗೆ ತಾಯಿಯು. ಪುರುಷನು ಜಗತ್ತಿಗೆ ತಂದೆಯು.

೩೫. ಮೂರು ಲೋಕದಲ್ಲಿಯೂ ತಂದೆಗಿಂತಲೂ ನೂರುಪಾಲು ತಾಯಿಯು ಶ್ರೇಷ್ಠಳು. ಮತ್ತು ರಾಧಾಕೃಷ್ಣ, ಗೌರೀಶ ಎಂಬ ಶಬ್ದಗಳು ವೇದದಲ್ಲಿ ಹೇಳಲ್ಪಟ್ಟಿವೆ.

೩೬–೩೭. ಕೃಷ್ಣರಾಧಾ ಈಶಗೌರೀ ಎಂಬುದಾಗಿ ಲೋಕದಲ್ಲಿ ಯಾವತ್ತೂ ಕೇಳಿಬರುತ್ತಿಲ್ಲ. ರೋಹಿಣೀಕಾಂತನೇ, ಪ್ರಸನ್ನನಾಗು ನಾನು ಕೊಡುವ ಅರ್ಘ್ಯವನ್ನು ಸ್ವೀಕರಿಸು. ಸಂಜ್ಞಾದೇವಿಯೊಡನೆ ಕೂಡಿರುವ ಭಾಸ್ಕರನೇ, ನನ್ನಿಂದ ಕೊಡಲ್ಪಡುವ ಅರ್ಘ್ಯವನ್ನು ನೀನು ಸ್ವೀಕರಿಸು. ಎಲೈ ಕಮಲಾಪತಿಯೇ, ಪ್ರಸನ್ನನಾಗು. ನಾನು ಕೊಡುವ ಪೂಜೆಯನ್ನು ಸ್ವೀಕರಿಸು.

೩೮–೪೦. ಈ ಪ್ರಕಾರ ಸಾಮವೇದದ ಕೌಥುಮವೆಂಬ ಶಾಖೆಯಲ್ಲಿ ಹೇಳಲ್ಪಟ್ಟಿದೆ. ಎಲೈ ನಾರದಮುನಿಯೇ, ರಾ ಎಂಬ ಶಬ್ದವನ್ನು ಹೇಳಿದೊಡನೆಯೇ

ಧಾಶಬ್ದೋಚ್ಚಾರತಃ ಪಶ್ಚಾದ್ಧಾವತ್ಯೇವ ಸಸಂಭ್ರಮಃ ।
ಆದೌ ಪುರುಷಮುಚ್ಚಾರ್ಯ ಪಶ್ಚಾತ್ಪ್ರಕೃತಿಮುಚ್ಚರೇತ್ ॥ ೩೯ ॥

ಸ ಭವೇನ್ಮಾತೃಘಾತೀ ಚ ವೇದಾತಿಕ್ರಮಣೇ ಮುನೇ ।
ತ್ರೈಲೋಕ್ಯೇ ಭಾರತಂ ಧನ್ಯಂ ಕರ್ಮಕ್ಷೇತ್ರಂ ಚ ಪುಣ್ಯದಂ ॥ ೪೦ ॥

ತತೋ ವೃಂದಾವನಂ ಪುಣ್ಯಂ ರಾಧಾಪಾದಾಬ್ಜರೇಣುನಾ ।
ಷಷ್ಟಿವರ್ಷಸಹಸ್ರಾಣಿ ತಪಸ್ತಪ್ತಂ ಚ ವೇಧಸಾ ।
ರಾಧಿಕಾಚರಣಾಂಭೋಜಪಾದರೇಣೂಪಲಬ್ಧಯೇ ॥ ೪೧ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರಾಯಣನಾರದಸಂವಾದೇ ರಾಧಾಮಾಧವಯೋ ರಾಸವರ್ಣನಂ ನಾಮ ದ್ವಿಪಂಚಾಶತ್ತಮೋಽಧ್ಯಾಯಃ

ಮಾಧವನು ಸಂತೋಷಗೊಳ್ಳುತ್ತಾನೆ. ಧಾ ಎಂಬ ಶಬ್ದವನ್ನು ಹೇಳಿದೊಡನೆ ಹಿಂದೆಯೇ ಸಡಗರದಿಂದ ಓಡುತ್ತಾನೆ. ಮೊದಲು ಪುರುಷನ ಹೆಸರನ್ನು ಹೇಳಿ ಅನಂತರ ಸ್ತ್ರೀಯ ಹೆಸರನ್ನು ಯಾವನು ಹೇಳುತ್ತಾನೆಯೋ ಅವನು ಮಾತೃಘಾತಕನಾಗುತ್ತಾನೆ. ಮತ್ತು ವೇದದಲ್ಲಿ ಹೇಳಿರುವುದನ್ನು ಮೀರಿದ ಪಾಪಕ್ಕೆ ಗುರಿಯಾಗುತ್ತಾನೆ. ಎಲೈ ನಾರದಮುನಿಯೇ, ಮೂರು ಲೋಕದಲ್ಲಿಯೂ ಭಾರತವು ಕರ್ಮಕ್ಷೇತ್ರವಾಗಿರುವುದರಿಂದಲೂ ಉತ್ತಮವಾದ ಪುಣ್ಯವನ್ನುಂಟುಮಾಡುವುದರಿಂದಲೂ ಧನ್ಯವಾದುದು.

೪೧. ಅದಕ್ಕಿಂತಲೂ ಕೂಡ ಬೃಂದಾವನವು ರಾಧಾದೇವಿಯ ಕಾಲಧೂಳುಗಳ ಸಮಾಗಮದಿಂದ ಅತ್ಯಂತ ಪವಿತ್ರವಾದುದು. ಈ ರಾಧಾದೇವಿಯ ಪಾದಪದ್ಮದ ಧೂಳಿಯನ್ನು ಪಡೆಯುವ ಅಪೇಕ್ಷೆಯಿಂದ ಬ್ರಹ್ಮನು ಅರವತ್ತು ಸಾವಿರ ವರುಷಗಳ ವರೆಗೆ ತಪಸ್ಸನ್ನು ಮಾಡಿದನು.

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ನಾರದ ನಾರಾಯಣ ಸಂವಾದದಲ್ಲಿ ರಾಧಾ ಮಾಧವ ರಾಸವರ್ಣನೆಯೆಂಬ ಐವತ್ತೆರಡನೆಯ ಅಧ್ಯಾಯವು ಮುಗಿದುದು.

ಐವತ್ತೆರಡನೆಯ ಅಧ್ಯಾಯದ ಸಾರಾಂಶ.

ಈ ರೀತಿ ಶ್ರೀ ಕೃಷ್ಣನು ಎಲ್ಲರ ದರ್ಪಭಂಗದ ಕಥೆಯನ್ನೂ ರಾಧೆಗೆ ಹೇಳಿ ವೃಂದಾವನಕ್ಕೆ ಹೊರಡಲಿಚ್ಛಿಸಿದನು. ಆಗ ರಾಧೆಯು ನಡೆಯಲಾಗುವುದಿಲ್ಲವೆಂದು ಹೇಳಿ ಕೃಷ್ಣನ ಹೆಗಲನ್ನೇರುವುದಕ್ಕೆ ಬಯಸಲು ಶ್ರೀಕೃಷ್ಣನು ಅಲ್ಲಿಯೇ ಅಂತರ್ಧಾನನಾದನು. ಆಗ ರಾಧೆಯು ವೃಂದಾವನಕ್ಕೆ ಹೋಗಿ ಇತರ ಗೋಪಿಯರೊಡನೆ ಶ್ರೀಕೃಷ್ಣನನ್ನು ಹುಡುಕುತ್ತಿರಲು ಅಲ್ಲಿ ಶ್ರೀಕೃಷ್ಣನು ಎಲ್ಲರಿಗೂ ಗೋಚರಿಸಿದನು. ಎಲ್ಲರೂ ಕೃಷ್ಣನ ವಿರಹದಿಂದ ತಾವು ಅನುಭವಿಸಿದ ದುಃಖವನ್ನು ಹೇಳಿಕೊಳ್ಳಲು ಅವರೆಲ್ಲರನ್ನೂ ಸಮಾಧಾನಗೊಳಿಸಿ ರಾಸಮಂಡಲಕ್ಕೆ ಕರೆದೊಯ್ದು ಅವರೆಲ್ಲರಿಗೂ ರತಿಸುಖವನ್ನುಂಟುಮಾಡಿದನು.

ಜಗತ್ತಿಗೆ ಪ್ರಕೃತಿಯು ತಾಯಿಯೂ, ಪುರುಷನು ತಂದೆಯೂ ಆಗಿರುವುದರಿಂದಲೂ, ವೇದದಲ್ಲಿ 'ಮಾತೃಭ್ಯೋ ನಮಃ, ಪಿತೃಭ್ಯೋ ನಮಃ' ಎಂದು ಹೇಳಿರುವುದರಿಂದಲೂ, ಜಗನ್ಮಾತೆಯಾದ ರಾಧೆಯ ಹೆಸರನ್ನು ಮೊದಲು ಹೇಳಿ ಅನಂತರ ಕೃಷ್ಣನ ಹೆಸರನ್ನು ಹೇಳಬೇಕು. ಹಾಗಲ್ಲದೆ ತದ್ವಿರುದ್ಧವಾಗಿ ಹೇಳುವವರು ಮಾತೃಹತ್ಯಾದೋಷಕ್ಕೆ ಗುರಿಯಾಗುವರೆಂದು ನಾರಾಯಣನು ನಾರದ ಮಹರ್ಷಿಗೆ ತಿಳಿಸಿದನು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ತ್ರಿಪಂಚಾಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಸಮತೀತೇ ಪೂರ್ಣರಾಸೇ ಕಿಂ ಚಕಾರ ಜಗತ್ಪತಿಃ ।
ರಹಸ್ಯಂ ಕಿಂ ಬಭೂವಾಥ ತದ್ಭವಾನ್ ವಕ್ತುಮರ್ಹತಿ || ೧ ||

|| ಶ್ರೀ ನಾರಾಯಣ ಉವಾಚ ||

ರಾಸಂ ನಿವರ್ತ್ಯ ರಾಸೇ ಚ ರಾಸೇಶ್ವರ್ಯಾಸಮನ್ವಿತಃ ।
ಸ್ವಯಂ ರಾಸೇಶ್ವರಸ್ತಸ್ಮಾದ್ಯಮುನಾಪುಲಿನಂ ಯಯೌ || ೨ ||

ತತ್ರ ಸ್ನಾತ್ವಾ ಜಲಂ ಪೀತ್ವಾ ನಿರ್ಮಲಂ ನಿರ್ಮಲೇ ಜಲೇ ।
ಸಾರ್ಧಂ ಗೋಪಾಂಗನಾಭಿಶ್ಚ ಜಲಕ್ರೀಡಾಂ ಚಕಾರ ಸಃ || ೩ ||

ಐವತ್ತಮೂರನೆಯ ಅಧ್ಯಾಯವು.

೧. ನಾರದನು :— ರಾಸಕ್ರೀಡೆಯು ಸಂಪೂರ್ಣವಾದನಂತರ ಜಗದೊಡೆಯನಾದ ಶ್ರೀಕೃಷ್ಣನು ಏನನ್ನು ಮಾಡಿದನು? ಅನಂತರ ರಹಸ್ಯವಾದ ಸಂದರ್ಭವಾವುದು ನಡೆಯಿತು? ಆ ವಿಚಾರಗಳನ್ನು ನನಗೆ ಹೇಳಬೇಕು.

೨. ನಾರಾಯಣ :— ತಾನೇ ರಾಸಕ್ರೀಡೆಗೆ ಅಧಿಪತಿಯಾದ ಶ್ರೀಕೃಷ್ಣನು ರಾಸಕ್ರೀಡೆಗೆ ಅಧಿದೇವತೆಯಾದ ರಾಧೆಯೊಡನೆ ರಾಸಕ್ರೀಡೆಯನ್ನು ಮುಗಿಸಿಕೊಂಡು ಅಲ್ಲಿಂದ ಯಮುನಾನದಿಯ ದಡಕ್ಕೆ ಬಂದನು.

೩. ಅಲ್ಲಿ ಪರಿಶುದ್ಧವಾದ ನೀರಿನಲ್ಲಿ ಸ್ನಾನವನ್ನು ಮಾಡಿ ಶುಚಿಯಾದ ನೀರನ್ನು ಕುಡಿದು ಗೋಪಿಕಾಸ್ತ್ರೀಯರೊಡನೆ ಅವನು ಜಲಕ್ರೀಡೆಯನ್ನಾಡಿದನು.

ತತೋ ಜಗಾಮ ಭಗವಾನ್ ಭಾಂಡೀರಂ ರಾಧಯಾ ಸಹ ।
ಗೋಪಾಂಗನಾಶ್ಚ ಸ್ವಗೃಹಾನ್ ಪ್ರಯಯುರ್ವಿರಹಾತುರಾಃ ॥ ೪ ॥

ಕ್ರೀಡಾಂ ಚಕಾರ ರಹಸಿ ಭಾಂಡೀರೇ ಮಾಲತೀವನೇ ।
ಮಾಲತೀಪುಷ್ಪಶಯ್ಯಾಯಾಂ ರಮ್ಯಾಯಾಂ ರಮಣೋತ್ಸುಕಃ ॥ ೫ ॥

ಕೃತ್ವಾ ಕ್ರೀಡಾಂ ಚ ತತ್ರೈವ ವಾಸಂತೀಕಾನನಂ ಯಯೌ ।
ರೇಮೇ ತತ್ರೈವ ರಾಸೇಶೋ ವಸಂತೇ ಸುಮನೋಹರೇ ॥ ೬ ॥

ತತ್ರೈವ ರಮಣಂ ಕೃತ್ವಾ ಯಯೌ ಚಂದನಕಾನನಂ ।
ಚಂದನೋಕ್ಷಿತಸರ್ವಾಂಗೋ ಗೃಹೀತ್ವಾ ಚಂದನೋಕ್ಷಿತಾಂ ॥ ೭ ॥

ರಮ್ಯೇ ಚಂದನತಲ್ಪೇ ಚ ಸ್ನಿಗ್ಧೇ ಚಂದನಪಲ್ಲವೇ ।
ಪೂರ್ಣಚಂದ್ರೇ ಸಮುದಿತೇ ವಿಜಹಾರ ತಯಾ ಸಹ ॥ ೮ ॥

---

೪. ಅನಂತರ ಭಗವಂತನು ರಾಧೆಯೊಡನೆ ಫಣಿಯಾಲದ ಮರದೆಡೆಗೆ ಹೋದನು. ಗೋಪಿಕಾಸ್ತ್ರೀಯರೂ ಕೂಡ ವಿರಹದಿಂದ ವ್ಯಥೆಗೊಂಡವರಾಗಿ ತಮ್ಮ ಮನೆಗಳಿಗೆ ಹೋದರು.

೫. ರತಿಕ್ರೀಡೆಯಲ್ಲಿ ಉತ್ಸಾಹಗೊಂಡ ಶ್ರೀಕೃಷ್ಣನು ಮರದ ಸಮೀಪದಲ್ಲಿರುವ ಮಾಲತೀವನದಲ್ಲಿ ಮನೋಹರವಾದ ಮಾಲತೀಹೂವಿನ ಹಾಸಿಗೆಯಲ್ಲಿ ಕ್ರೀಡಿಸಿದನು.

೬. ಅಲ್ಲಿ ಕ್ರೀಡೆಯನ್ನು ಮುಗಿಸಿಕೊಂಡು ವಸಂತೋದ್ಯಾನವನ್ನು ಕುರಿತು ಹೊರಟನು. ಆ ಉದ್ಯಾನವನವು ಅತ್ಯಂತ ಹಿತಕರವಾಗಿರಲು ಅಲ್ಲಿಯೂ ಕ್ರೀಡಿಸಿದನು.

೭-೮. ಅಲ್ಲಿ ಕ್ರೀಡೆಯು ಮುಗಿದನಂತರ ಚಂದನವನಕ್ಕೆ ಹೋದನು. ಅಲ್ಲಿ ಸಕಲಾಂಗಗಳಿಗೂ ಗಂಧವನ್ನು ಲೇಪನಮಾಡಿಕೊಂಡನು. ಆ ರಾಧೆಯೂ ಕೂಡ ಸಕಲಾಂಗಗಳಿಗೂ ಚಂದನವನ್ನು ಲೇಪನಮಾಡಿಕೊಂಡು ಮನೋಹರಳಾಗಿದ್ದಳು. ಅವಳೊಡನೆ ಮನೋಹರವಾದ ಚಿಗುರುಗಳಿಂದ ದಟ್ಟವಾದ ಗಂಧದ ಹಾಸಿಗೆಯಲ್ಲಿ ಪೂರ್ಣಚಂದ್ರನು ಉದಿಸಿರಲು ಆನಂದದಿಂದ ಕ್ರೀಡಿಸಿದನು.

ಕೃತ್ವಾ ವಿಹಾರಂ ತತ್ರೈವ ಯಯೌ ಚಂಪಕಕಾನನಂ ।
ರಮ್ಯೇ ಚಂಪಕತಲ್ಪೇ ಚ ಚಕಾರ ರತಿಮೀಶ್ವರೀಂ ॥ ೯ ॥

ರತಿಂ ನಿರ್ವರ್ತ್ಯ ತತ್ರೈವ ಯಯೌ ಪದ್ಮವನಂ ಪ್ರಭುಃ ।
ಪದ್ಮಪತ್ರಸಮಾಕೀರ್ಣೇ ತಲ್ಪೇಽತಿಸುಮನೋಹರೇ ॥ ೧೦ ॥

ಸಾರ್ಧಂ ತತ್ರ ಪದ್ಮಮುಖ್ಯಾ ಶೀತೇನ ಪದ್ಮವಾಯುನಾ ।
ಚಕಾರ ಸುಖಸಂಭೋಗಂ ಯಯೌ ನಿದ್ರಾಂ ತಯಾ ಸಹ ॥ ೧೧ ॥

ವಿಹಾಯ ನಿದ್ರಾಂ ನಿದ್ರೇಶೋ ದದರ್ಶ ನಿದ್ರಿತಾಂ ಪ್ರಿಯಾಂ ।
ಶಯಾನಾಂ ಪದ್ಮತಲ್ಪೇ ಚ ಸುಖಸಂಭೋಗಮಾತ್ರತಃ ॥ ೧೨ ॥

ದೃಷ್ಟ್ವಾ ಮುಖಂ ಚ ಘರ್ಮಾಕ್ತಂ ಶರಚ್ಚಂದ್ರವಿನಿರ್ಮಿತಂ ।
ಅತಿಸಂಲುಪ್ತಸಿಂದೂರಂ ಲುಪ್ತಂ ಕಜ್ಜಲಮುಲ್ಬಣಂ ॥ ೧೩ ॥

---

೯. ಜಗದೀಶ್ವರನು ಅಲ್ಲಿ ವಿಹರಿಸಿದನಂತರ ಸಂಪಿಗೆಯ ವನಕ್ಕೆ ಬಂದು ಸುಂದರವಾದ ಸಂಪಿಗೆಯ ಹಾಸಿಗೆಯಲ್ಲಿ ರತಿಕ್ರೀಡೆಯನ್ನಾಡಿದನು.

೧೦-೧೧. ಪ್ರಭುವಾದ ಶ್ರೀಕೃಷ್ಣನು ಅಲ್ಲಿ ರತಿಕ್ರೀಡೆಯಾದನಂತರ ಪದ್ಮವನಕ್ಕೆ ಬಂದನು. ಕಮಲದಳಗಳಿಂದ ವ್ಯಾಪ್ತವಾದ ಅತ್ಯಂತ ಮನೋಹರವಾದ ಕಮಲದ ಹಾಸಿಗೆಯಲ್ಲಿ ತಣ್ಣಗಿರುವ ಗಾಳಿಯು ಬೀಸುತ್ತಿರಲು ಕಮಲದಂತೆ ಸುಂದರವಾದ ಮುಖವುಳ್ಳ ಆ ರಾಧೆಯೊಡನೆ ಸುಖಸಂಭೋಗವನ್ನನುಭವಿಸಿದವನಾಗಿ ಅವಳೊಡನೆ ನಿದ್ರೆಯನ್ನು ಮಾಡಿದನು.

೧೨. ನಿದ್ರಾದೇವಿಯ ಪತಿಯಾದ ಭಗವಂತನು ತಾನು ನಿದ್ರೆಯಿಂದೆದ್ದವನಾಗಿ ತನ್ನ ಪ್ರಿಯೆತಮೆಯು ಸುಖಸಂಭೋಗದಿಂದ ಬಳಲಿ ಕಮಲದ ಹಾಸಿಗೆಯಲ್ಲಿ ಮಲಗಿ ನಿದ್ರಿಸುತ್ತಿರುವುದನ್ನು ನೋಡಿದನು.

೧೩-೧೬. ಭಕ್ತವತ್ಸಲನಾದ ಮಾಧವನು ಬೆವರಿನಿಂದ ನೆನೆದಿರುವ, ಶರತ್ಕಾಲದ ಚಂದ್ರನನ್ನು ಧಿಕ್ಕರಿಸುತ್ತಿರುವ, ಹಣೆಯ ಸಿಂದೂರ, ಕಣ್ಣಿನ ಕಾಡಿಗೆ

ಸಂಲುಪ್ತಾಧರರಾಗಂ ಚ ಸಂಲುಪ್ತಗಂಡಪತ್ರಕಂ ।
ವಿಸ್ರಸ್ತಕಬರೀಭಾರಂ ನೇತ್ರೋತ್ಪಲವಿಮುದ್ರಿತಂ ॥ ೧೪ ॥

ರತ್ನಕುಂಡಲಯುಗ್ಮೇನಾಮೂಲ್ಯೇನ ಪರಿಶೋಭಿತಂ ।
ರಾಜಿತಂ ಮೌಕ್ತಿಕೇನೈವ ಗಜರಾಜೋದ್ಭವೇನ ಚ ॥ ೧೫ ॥

ಪ್ರೇಮ್ಣಾ ಸ್ವಸೂಕ್ಷ್ಮವಸ್ತ್ರೇಣ ವಹ್ನಿಶುದ್ಧೇನ ಮಾಧವಃ ।
ಚಕಾರ ಮಾರ್ಜನಂ ಭಕ್ತ್ಯಾ ತದ್ವಕ್ತ್ರಂ ಭಕ್ತವತ್ಸಲಃ ॥ ೧೬ ॥

ಕೇಶಸಂಮಾರ್ಜನಂ ಕೃತ್ವಾ ನಿರ್ಮಾಯ ಕಬರೀಂ ಹರಿಃ ।
ಮಾಧವೀಮಾಲತೀಮಾಲಾಜಾಲೇನ ಪರಿಶೋಭಿತಾಂ ॥ ೧೭ ॥

ರತ್ನಪಟ್ಟಸೂತ್ರಬದ್ಧಾಂ ವಾಮವಕ್ತ್ರಾಂ ಮನೋಹರಾಂ ।
ಅತೀವ ವರ್ತುಲಾಕಾರಂ ಕುಂದಪುಷ್ಪಸುಶೋಭಿತಾಂ ॥ ೧೮ ॥

ದದೌ ಸಿಂದೂರತಿಲಕಮಧಶ್ಚಂದನಮುಜ್ಜ್ವಲಂ ।
ಕಸ್ತೂರೀಬಿಂದುನಾ ಸಾರ್ಧಂ ಪರಿತಃ ಪರಿಶೋಭಿತಾಂ ॥ ೧೯ ॥

ತುಟಿಯ ಅರಗಿನ ಬಣ್ಣ, ಕಪೋಲದ ಮಕರಿಕಾ ಪತ್ರ, ಇವುಗಳೆಲ್ಲ ಲುಪ್ತವಾಗಿರುವ, ಕೆದರಿದ ತಲೆಗೂದಲುಳ್ಳ, ಮುಚ್ಚಲ್ಪಟ್ಟ ಕಣ್ಣುಗಳುಳ್ಳ, ಮಹಾಬೆಲೆಯ ರತ್ನಮಯವಾದ ಕುಂಡಲಗಳಿಂದ ಪ್ರಕಾಶಿಸುತ್ತಿರುವ, ಶ್ರೇಷ್ಠವಾದ ಆನೆಯಿಂದ ಹುಟ್ಟಿದ ಉತ್ತಮವಾದ ಮುತ್ತಿನಿಂದ ಕಂಗೊಳಿಸುತ್ತಿರುವ, ರಾಧೆಯ ಮುಖವನ್ನು ನೋಡಿ ಅತ್ಯಂತ ಪ್ರೀತಿಯಿಂದಲೂ, ಭಕ್ತಿಯಿಂದಲೂ ಅಗ್ನಿಯಂತೆ ಪರಿಶುದ್ಧವಾದ ತನ್ನ ಸೂಕ್ಷ್ಮವಸ್ತ್ರದಿಂದ ಆ ಮುಖವನ್ನು ಒರಸಿದನು.

೧೭-೨೦. ಹರಿಯು ಆ ರಾಧೆಯ ತಲೆಯನ್ನು ಬಾಚಿ ಜಡೆಯನ್ನು ಹೆಣೆದು ಮಾಧವೀ ಮತ್ತು ಮಾಲತೀ ಹೂವುಗಳನ್ನು ಮುಡಿಸಿ ಅತ್ಯಂತ ಗುಂಡಾಗಿರುವ ಸುಂದರವಾದ ಮುಖವನ್ನು ಮಾಘೀಮಲ್ಲಿಗೆಯ ಹೂವಿನಿಂದ ಅಲಂಕರಿಸಿ ಸಿಂದೂರದ ತಿಲಕವನ್ನೂ ಅದರ ಕೆಳಭಾಗದಲ್ಲಿ ಉತ್ತಮವಾದ ಗಂಧವನ್ನೂ ಕಸ್ತೂರಿಯ ತಿಲಕವನ್ನೂ ಇಟ್ಟು ಎರಡು ಕೆನ್ನೆಗಳ ಮೇಲೂ ಚಿತ್ರವಿಚಿತ್ರವಾದ ಮಕರಿಕಾ ಪತ್ರಗಳನ್ನು

ಚಕಾರಪತ್ರಕಂ ಗಂಡಯುಗ್ಮೇ ಚಿತ್ರವಿಚಿತ್ರಿತಂ ।
ಪ್ರದದೌ ಕಜ್ಜಲಂ ಭಕ್ತ್ಯಾ ನೇತ್ರೋತ್ಪಲಸಮುಜ್ವಲಂ ॥ ೨೦ ॥

ಚಕಾರಾಧರರಾಗಂ ಚ ರಾಧಾಯಾಶ್ಚಾನುರಾಗತಃ ।
ಕರ್ಣಭೂಷಣಯುಗ್ಮಂ ಚ ಚಕಾರಾತೀವ ನಿರ್ಮಲಂ ॥ ೨೧ ॥

ಅಮೂಲ್ಯರತ್ನಹಾರಂ ಚ ಸ್ತನಭಾರಯುಗೋಜ್ವಲಂ ।
ದದೌ ಕಂಠೇ ಚ ವೈಕುಂಠೋ ಮಣಿರಾಜಿವಿರಾಜಿತಂ ॥ ೨೨ ॥

ವಹ್ನಿಶುದ್ಧಾಂಶುಕಂ ದಿವ್ಯಮಮೂಲ್ಯಂ ವಿಶ್ವರತ್ನತಃ ।
ವಾಸಯಾಮಾಸ ವಸನಂ ಕಸ್ತೂರೀಕುಂಕುಮಾಕ್ತಕಂ ॥ ೨೩ ॥

ಪ್ರದದೌ ಪಾದಯುಗಲೇ ರತ್ನಮಂಜೀರರಂಜಿತಂ ।
ಚಕಾರಾಲಕ್ತಕಂ ಭಕ್ತ್ಯಾ ಪಾದಾಂಗುಲಿನಖೇಷು ಚ ॥ ೨೪ ॥

ಬರೆದನು. ಮತ್ತು ಕನ್ನೈದಿಲೆಯಂತೆ ಪ್ರಕಾಶಮಾನವಾದ ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿದನು.

೨೧. ರಾಧೆಯಮೇಲಿನ ಪ್ರೇಮದಿಂದ ಆವಳ ತುಟಿಗೆ ಅರಗಿನ ರಸವನ್ನು ಬಳಿದನು. ಬಹಳ ಶುಭ್ರವಾದ ಎರಡು ಹೂವುಗಳನ್ನು ಕಿವಿಗಳ ಮೇಲಿಟ್ಟನು

೨೨. ಶ್ರೀಕೃಷ್ಣನು ರತ್ನಮಣಿಗಳ ಗುಂಪಿನಿಂದ ಪ್ರಕಾಶಿಸುತ್ತಿರುವ ಬಹು ಬೆಲೆಬಾಳುವ ರತ್ನಮಯವಾದ ಹಾರವನ್ನು ಸ್ತನಯುಗ್ಮಗಳಿಂದ ಪ್ರಕಾಶಿಸುವ ಆವಳ ಕತ್ತಿಗೆ ಹಾಕಿದನು.

೨೩. ಕಸ್ತೂರಿ, ಕೇಸರಿ ಇವುಗಳಲ್ಲಿ ನೆನೆದಿರುವ ಅಗ್ನಿಯಂತೆ ಪರಿಶುದ್ಧವಾದ ಪ್ರಪಂಚದ ಸಕಲ ರತ್ನಗಳಿಂದಲೂ ಶ್ರೇಷ್ಠವಾದ ವಸ್ತ್ರವನ್ನು ಉಡಿಸಿದನು.

೨೪. ಎರಡು ಕಾಲುಗಳಿಗೂ ರತ್ನಗಳಿಂದ ಮಾಡಿದ ಕಾಲುಸರಗಳನ್ನಿಟ್ಟನು. ಮತ್ತು ಕಾಲುಗಳಿಗೂ ಕಾಲಿನ ಉಗುರುಗಳಿಗೂ ಸಹ ಭಕ್ತಿಪೂರ್ವಕವಾಗಿ ಅರಗಿನ ಬಣ್ಣವನ್ನು ಬಳಿದನು.

ಚಕಾರ ಸೇವಾಂ ಸೇವ್ಯಾಯಾಃ ಸೇವ್ಯಸ್ತ್ರಿಜಗತಾಂ ಸತಾಂ ।
ಅಹೋ ಸೇವಕಸಂಭಕ್ತ್ಯಾ ಶ್ವೇತೇನ ಚಾಮರೇಣ ಚ ॥ ೨೫ ॥

ಸರ್ವಭಾವವಿದಾಂ ಶ್ರೇಷ್ಠೋ ಬೋಧಜ್ಞಃ ಕಾಮಶಾಸ್ತ್ರವಿತ್ ।
ಕಾಮಿನೀಂ ಬೋಧಯಾಮಾಸ ವಾಸಯಾಮಾಸ ವಕ್ಷಸಿ ॥ ೨೬ ॥

ಪ್ರೇಮ್ಣಾ ಚ ಪ್ರದದೌ ತಸ್ಯೈ ಸದ್ರತ್ನದರ್ಪಣಂ ಶುಭಂ ।
ಸುವೇಷದರ್ಶನಾರ್ಥಂ ಚ ಮುಖಚಂದ್ರಂ ಚ ಮಾರ್ಜಿತುಂ ॥ ೨೭ ॥

ನಾನಾಪುಷ್ಪೈರ್ವಿರಚಿತಾಮಮ್ಲಾನಾಂ ಚಂದನೋಕ್ಷಿತಾಂ ।
ಗಂಡೇ ಸೌಭಾಗ್ಯಯುಕ್ತಾಯಾಃ ಸೌಭಾಗ್ಯೇನ ದದೌ ಹರಿಃ ॥ ೨೮ ॥

ಕಸ್ತೂರೀಕುಂಕುಮಾಕ್ತಂ ಚ ಸುಗಂಧಿ ಚಂದನಂ ತತಃ ।
ದದೌ ಪ್ರಿಯಾಯಾಃ ಸರ್ವಾಂಗೇ ಪ್ರಿಯಃ ಪ್ರೇಮಭರೇಣ ಚ ॥ ೨೯ ॥

---

೨೫. ಮೂರು ಲೋಕದಲ್ಲಿರುವ ಸತ್ಪುರುಷರುಗಳಿಂದ ಸೇವಿಸಲ್ಪಡುವ ಹರಿಯು ಸೇವಿಸಲು ಯೋಗ್ಯಳಾದ ರಾಧೆಯ ಸೇವೆಯನ್ನು ಮಾಡಿದನು. ಸೇವಕರಂತೆ ಭಕ್ತಿಯಿಂದ ಬಿಳಿಯ ಚಾಮರವನ್ನು ಹಿಡಿದು ಬೀಸಿದನು. ಇದು ಆಶ್ಚರ್ಯವು.

೨೬. ಸಕಲರ ಮನೋಭಿಪ್ರಾಯಗಳನ್ನು ತಿಳಿದಿರುವ, ಕಾಮಶಾಸ್ತ್ರದಲ್ಲಿ ನಿಪುಣನಾದ, ಉಪದೇಶವನ್ನು ಮಾಡಬಲ್ಲ, ಶ್ರೀಕೃಷ್ಣನು ಕಾಮಿನಿಯಾದ ರಾಧೆಯನ್ನು ಎಚ್ಚರಗೊಳಿಸಿದನು ಮತ್ತು ಎದೆಗೆ ಒರಗಿಸಿಕೊಂಡನು.

೨೭. ಆ ಅಲಂಕಾರವನ್ನು ನೋಡಿಕೊಂಡು ಮುಖವನ್ನು ಒರೆಸಿಕೊಳ್ಳುವುದಕ್ಕೋಸ್ಕರ ಆ ರಾಧೆಗೆ ಪ್ರೀತಿಯಿಂದ ರತ್ನಮಯವಾದ ಕನ್ನಡಿಯನ್ನು ಕೊಟ್ಟನು.

೨೮. ಮತ್ತು ಬಾಡದಿರುವ ನಾನಾ ಜಾತಿಯ ಹೂವುಗಳಿಂದ ಮಾಡಿದ ಸುಗಂಧಮಿಶ್ರಿತವಾದ ಸೌಭಾಗ್ಯಚೂರ್ಣವನ್ನು ಕಪೋಲಗಳಿಗೆ ಕೊಟ್ಟನು.

೨೯. ಕಸ್ತೂರಿ ಮತ್ತು ಕೇಸರಿಯಿಂದ ಮಿಶ್ರಿತವಾದ ಸುಗಂಧದಿಂದ ಕೂಡಿದ ಗಂಧವನ್ನು ತನ್ನ ಪ್ರಿಯತಮೆಯ ಸರ್ವಾಂಗಗಳಿಗೂ ಪ್ರೀತಿಯಿಂದ ಲೇಪಿಸಿದನು.

ಪಾರಿಜಾತಸ್ಯ ಕುಸುಮಂ ದತ್ತಂ ರಹಸಿ ಬ್ರಹ್ಮಣಾ ।
ಪ್ರದದೌ ತತ್ಕಬರ್ಯಾಂ ಚ ಲಲಿತಾಯಾಂ ಚ ನಾರದ ॥ ೩೦ ॥

ಕಮಲಂ ನಿರ್ಮಲಂ ದಿವ್ಯಂ ಸಹಸ್ರದಲಮುಜ್ಜ್ವಲಂ ।
ಶಿವೇನ ದತ್ತಂ ರಹಸಿ ದದೌ ತದ್ದಕ್ಷಿಣೇ ಕರೇ ॥ ೩೧ ॥

ಅತಿಸಾರಂ ಮಣೀಂದ್ರಾಣಾಂ ಮಣಿರತ್ನಂ ಚ ಕೌಸ್ತುಭಂ ।
ದತ್ತಂ ರಹಸಿ ಧರ್ಮೇಣ ತಸ್ಯೈ ಸುಪ್ರೀತಯೇ ದದೌ ॥ ೩೨ ॥

ಆಸವಂ ರತ್ನಪಾತ್ರಸ್ಥಂ ದಸ್ರದತ್ತಂ ಚ ನಿರ್ಜನೇ ।
ಪಾನಾರ್ಥಂ ಪ್ರದದೌ ತಸ್ಯೈ ಕಾಮೋನ್ಮಾದಕರಂ ಪರಂ ॥ ೩೩ ॥

ಮಾಲತೀಮಾಧವೀಕುಂದಮಂದಾರಚಂಪಕಾದಿಕಂ ।
ಪುಷ್ಪಂ ತದ್ರತ್ನಪಾತ್ರಸ್ಥಂ ತಸ್ಯೈ ಸುಪ್ರೀತಯೇ ದದೌ ॥ ೩೪ ॥

---

೩೦. ಎಲೈ ನಾರದನೇ, ಶ್ರೀಹರಿಯು ಬ್ರಹ್ಮನಿಂದ ಗುಟ್ಟಾಗಿ ಕೊಡಲ್ಪಟ್ಟ ಪಾರಿಜಾತದ ಹೂವನ್ನು ಸುಂದರಳಾದ ಆ ರಾಧೆಯ ಹೆರಳಿಗೆ ಮುಡಿಸಿದನು.

೩೧. ಮತ್ತು ಈಶ್ವರನು ಗುಟ್ಟಾಗಿ ಕೊಟ್ಟಿದ್ದ ಸಾವಿರ ದಳಗಳಿಂದ ಕಂಗೊಳಿಸುತ್ತಿರುವ ಶುಭ್ರವಾದ ಮತ್ತು ಉತ್ತಮವಾದ ಕಮಲದ ಹೂವನ್ನು ಆ ರಾಧೆಯ ಬಲಗೈಯಲ್ಲಿ ಕೊಟ್ಟನು.

೩೨. ಧರ್ಮನು ರಹಸ್ಯವಾಗಿ ಕೊಟ್ಟಿದ್ದ ಸಕಲ ಶ್ರೇಷ್ಠವಾದ ಮಣಿಗಳಲ್ಲಿಯೂ ಶ್ರೇಷ್ಠವಾದ ಕೌಸ್ತುಭವೆಂಬ ಮಣಿರತ್ನವನ್ನು ಆ ರಾಧೆಯ ಸಂತೋಷಾರ್ಥವಾಗಿ ಕೊಟ್ಟನು.

೩೩. ಅಶ್ವಿನೀ ದೇವತೆಗಳು ಕೊಟ್ಟಿದ್ದ ಕಾಮವಿಕಾರವನ್ನು ವೃದ್ಧಿಗೊಳಿಸುವ ಅತ್ಯುತ್ತಮವಾದ ಮದ್ಯವನ್ನು ರತ್ನಮಯವಾದ ಪಾತ್ರೆಯಲ್ಲಿಟ್ಟು ಪಾನಮಾಡಲೋಸ್ಕರ ಆ ರಾಧೆಗೆ ಕೊಟ್ಟನು.

೩೪. ಜಾಜಿ, ಇರುಂತಿಗೆ, ಕೋಲುಮಲ್ಲಿಗೆ, ಮಂದಾರಸಂಪಿಗೆ ಮೊದಲಾದ ಹೂವುಗಳನ್ನು ಉತ್ತಮ ರತ್ನಗಳಿಂದ ಖಚಿತವಾದ ತಟ್ಟೆಯಲ್ಲಿಟ್ಟು ಆ ರಾಧೆಯ ಸಂತೋಷಾರ್ಥವಾಗಿ ಕೊಟ್ಟನು.

ಸುದುರ್ಲಭಂ ಚ ತಾಂಬೂಲಂ ಕರ್ಪೂರಾದಿಸುಸಂಸ್ಕೃತಂ ।
ಭಕ್ಷಣಂ ಕಾರಯಾಮಾಸ ಸಮಯಜ್ಞಶ್ಚ ತಾಂ ಪ್ರಿಯಾಂ ॥ ೩೫ ॥

ಸುದುರ್ಲಭಂ ಚ ವಿಶ್ವೇಷು ವಾಕ್ಪತೇಃ ಪರಿನಿರ್ಮಿತಂ ।
ಅನುತ್ತಮಮಮೂಲ್ಯಂ ಚ ವರುಣೇನ ರಹಃಸ್ಥಲೇ ॥ ೩೬ ॥

ಅತಿಸೂಕ್ಷ್ಮಮನುಪಮಂ ದತ್ತಂ ಭಕ್ತ್ಯಾ ವಿರಾಜಿತಂ ।
ವಾಸಯಾಮಾಸ ವಸನಂ ಕೃತ್ವಾ ನಗ್ನಾಂ ಚ ಕೌತುಕಾತ್ ॥ ೩೭ ॥

ದೇವರಾಜೇನ ದತ್ತಂ ಚ ಗಜರಾಜೇಂದ್ರಮೌಕ್ತಿಕಂ ।
ನಾಸಿಕಾಭೂಷಣಂ ಚಾರು ತಸ್ಯೈ ಸುಪ್ರೀತಯೇ ದದೌ ॥ ೩೮ ॥

ಏತಸ್ಮಿನ್ನಂತರೇ ತತ್ರ ಸುಶೀಲಾದ್ಯಾಶ್ಚ ಗೋಪಿಕಾಃ ।
ಷಷ್ಠಿಃ ಸತ್ಸಹಚರ್ಯಶ್ಚ ರಾಧಾಯಾಃ ಸುಪ್ರತಿಷ್ಠಿತಾಃ ॥ ೩೯ ॥

ಷಷ್ಟಿಸತ್ಕೋಟಿಗೋಪೀಭಿಃ ಸಾರ್ಧಂ ಸಂಹೃಷ್ಟಮಾನಸಾಃ ।
ಆಯಯುಃ ಪಾದಚಿಹ್ನೇನ ಪ್ರಿಯಸ್ಯ ವಹತಃ ಪ್ರಿಯಾಂ ॥ ೪೦ ॥

---

೩೫. ಸಮಯವನ್ನು ಬಲ್ಲ ಆ ಶ್ರೀಕೃಷ್ಣನು ಪಚ್ಚಕರ್ಪೂರ ಮುಂತಾದ ದ್ರವ್ಯಗಳಿಂದ ಮಿಶ್ರಿತವಾದ ತಾಂಬೂಲವನ್ನು ಅವಳಿಗೆ ತಿನ್ನಿಸಿದನು.

೩೬–೩೮. ಪ್ರಪಂಚದಲ್ಲಿ ಎಲ್ಲಿಯೂ ದೊರೆಯದ ಬೃಹಸ್ಪತಿಯಿಂದ ಮಾಡಲ್ಪಟ್ಟ ಅತಿಶ್ರೇಷ್ಠವೂ ಬಹಳ ಬೆಲೆಯುಳ್ಳದ್ದೂ ವರುಣನಿಂದ ರಹಸ್ಯವಾಗಿ ಕೊಡಲ್ಪಟ್ಟದ್ದೂ ಆದ ಅತಿ ಸೂಕ್ಷ್ಮವಾದ ವಸ್ತ್ರವನ್ನು (ತಮಾಷೆಗಾಗಿ ಆ ರಾಧೆಯನ್ನು ಬೆತ್ತಲೆಯಾಗಿ ಮಾಡಿ) ಅವಳಿಗೆ ಪ್ರೀತಿಯಿಂದಲೂ, ಭಕ್ತಿಯಿಂದಲೂ ಉಡಿಸಿದನು. ದೇವೇಂದ್ರನು ಕೊಟ್ಟದ್ದ ಆನೆಯ ಕುಂಭಸ್ಥಳದಿಂದ ಹುಟ್ಟಿದ ಮುತ್ತಿನಿಂದ ಮಾಡಿದ ಮೂಗುತಿಯನ್ನು ಆ ರಾಧೆಯ ಪ್ರೀತಿಗಾಗಿ ಕೊಟ್ಟನು.

೩೯–೪೦. ಈ ಸಂದರ್ಭದಲ್ಲಿ ಅಲ್ಲಿಗೆ ರಾಧೆಗೆ ಅತ್ಯಂತ ಪ್ರೀತಿಪಾತ್ರರಾದ ಗೆಳತಿಯರಾದ ಸುಶೀಲೆಯೇ ಮೊದಲಾದವರು ಅರುವತ್ತು ಕೋಟಿ ಗೋಪಿಕಾ ಸ್ತ್ರೀಯರೊಡನೆ ಸೇರಿ ಸಂತೋಷಗೊಂಡ ಮನಸ್ಸುಳ್ಳವರಾಗಿ ತಮ್ಮ ಪ್ರೀತಿಯನ್ನು ಪ್ರಿಯತಮನಾದ ಶ್ರೀಕೃಷ್ಣನ ಹೆಜ್ಜೆಯಮೇಲಿಡುವುದರಿಂದ ಪ್ರಕಟಿಸುತ್ತ ಬಂದರು.

ಕಾಶ್ಚಿಚ್ಚಂದನಹಸ್ತಾಶ್ಚ ಕಾಶ್ಚಿಚ್ಚಾಮರವಾಹಿಕಾಃ ।
ಕಾಶ್ಚಿತ್ಕಸ್ತೂರಿಹಸ್ತಾಶ್ಚ ಮಾಲಾಹಸ್ತಾಶ್ಚ ಕಾಶ್ಚನ ॥ ೪೧ ॥

ಕಾಶ್ಚಿತ್ಸಿಂದೂರಹಸ್ತಾಶ್ಚ ಕಾಶ್ಚಿತ್ಕಂಕತಿಕಾ ಕರಾಃ ।
ಕಾಶ್ಚಿದಲಕ್ತಕಕರಾ ವಸ್ತ್ರಹಸ್ತಾಶ್ಚ ಕಾಶ್ಚನ ॥ ೪೨ ॥

ಕಾಶ್ಚಿದ್ದರ್ಪಣಹಸ್ತಾಶ್ಚ ಪುಷ್ಪಪಾತ್ರಧರಾ ವರಾಃ ।
ಕಾಶ್ಚಿತ್ ಕ್ರೀಡಾಪದ್ಮಹಸ್ತಾ ಮಾಲಾಹಸ್ತಾಶ್ಚ ಕಾಶ್ಚನ ॥ ೪೩ ॥

ಕಾಶ್ಚಿದಾಸವಹಸ್ತಾಶ್ಚ ಕಾಶ್ಚಿದ್ಭೂಷಣವಾಹಿಕಾಃ ।
ಕರತಾಲಕರಾಃ ಕಾಶ್ಚಿತ್ ಮೃದಂಗವಾಹಿಕಾಃ ಪರಾಃ ॥ ೪೪ ॥

ಸ್ವರಯಂತ್ರಕರಾಃ ಕಾಶ್ಚಿದ್ವೀಣಾಹಸ್ತಾಶ್ಚ ಕಾಶ್ಚನ ।
ಷಟ್‌ತ್ರಿಂಶದ್ರಾಗರಾಗಿಣ್ಯೋ ಗೋಪಿಕಾರೂಪಧಾರಿಕಾಃ ॥ ೪೫ ॥

ಗೋಲೋಕಾದಾಗತಾ ಯಾಶ್ಚ ಭಾರತಂ ರಾಧಯಾ ಸಹ ।
ಕಾಶ್ಚಿಜ್ಜಗುಶ್ಚ ನನೃತುಸ್ತತ್ರಾಗತ್ಯ ಚ ಕಾಶ್ಚನ ॥ ೪೬ ॥

೪೧-೪೩. ಕೆಲವರು ಗಂಧದ ಪಾತ್ರೆಯನ್ನು ಹಿಡಿದವರಾಗಿಯೂ, ಕೆಲವರು ಚಾಮರವನ್ನು ಹಿಡಿದವರಾಗಿಯೂ, ಮತ್ತೆ ಕೆಲವರು ಕಸ್ತೂರಿಯನ್ನು ಹಿಡಿದವರಾಗಿಯೂ, ಉಳಿದ ಕೆಲವರು ಸಿಂದೂರವನ್ನೂ, ಬಾಚಣಿಗೆಯನ್ನೂ ಹಿಡಿದುಕೊಂಡವರಾಗಿಯೂ, ಮತ್ತೂ ಕೆಲವರು ಲಾಕ್ಷಾರಸವನ್ನೂ ದಿವ್ಯವಾದ ವಸ್ತ್ರಗಳನ್ನೂ ಹಿಡಿದುಕೊಂಡವರಾಗಿಯೂ, ಕೆಲವರು ಕನ್ನಡಿಯನ್ನೂ, ಹೂವಿನಪಾತ್ರೆಯನ್ನೂ ಧರಿಸಿದವರಾಗಿಯೂ, ಮತ್ತೂ ಕೆಲವರು ವಿಲಾಸಾರ್ಥವಾದ ಕಮಲಗಳನ್ನೂ ಹೂಮಾಲಿಕೆಗಳನ್ನೂ ಹಿಡಿದುಕೊಂಡವರಾಗಿಯೂ ಕಂಗೊಳಿಸುತ್ತಿದ್ದರು.

೪೪-೪೬. ಮತ್ತೆ ಕೆಲವರು ಮದ್ಯವನ್ನು ತಂದವರಾಗಿಯೂ, ಆಭರಣವನ್ನು ತಂದಿರುವವರಾಗಿಯೂ, ಕೆಲವರು ಕೈಚಪ್ಪಾಳೆ ಹೊಡೆಯುವವರಾಗಿಯೂ, ಮೃದಂಗವನ್ನು ಹಿಡಿದವರಾಗಿಯೂ, ಶ್ರುತಿವಾದ್ಯವನ್ನು ಹಿಡಿದವರಾಗಿಯೂ, ವೀಣೆಯನ್ನು ಹಿಡಿದವರಾಗಿಯೂ, ಮೂವತ್ತಾರು ರಾಗಗಳಲ್ಲಿ ಆಸಕ್ತಿಯುಳ್ಳವರಾಗಿಯೂ, ಗೋಪಿಕಾಸ್ತ್ರೀಯರ ರೂಪವನ್ನು ಧರಿಸಿದವರಾಗಿಯೂ ಕಂಗೊಳಿಸುತ್ತಿದ್ದರು. ಗೋಲೋಕದಿಂದ ರಾಧೆಯೊಡನೆ ಭಾರತಕ್ಕೆ ಯಾವ ಯಾವ ಸ್ತ್ರೀಯರು ಬಂದಿದ್ದರೋ ಅವರಲ್ಲಿ ಕೆಲವರು ಗಾನಮಾಡಿದರು. ಕೆಲವರು ಕುಣಿದರು.

ಕಾಶ್ಚಿಚ್ಚ ಕ್ರುಶ್ಚ ಸೇವಾಂ ಚ ರಾಧಾಯಾಃ ಶ್ವೇತಚಾಮರೈಃ ।
ಕಾಶ್ಚಿಚ್ಚಕ್ರುಶ್ಚ ದೇವ್ಯಾಶ್ಚ ಪಾದಸಂವಾಹನಂ ಮುದಾ ॥ ೪೭ ॥

ಕಾಚಿದ್ದದೌ ಚ ತಾಂಬೂಲಂ ಭಕ್ಷಣಾರ್ಥಂ ಮಹಾಮುನೇ ।
ಏವಂ ಕೌತುಕಯುಕ್ತಾಶ್ಚ ಪುಣ್ಯೇ ವೃಂದಾವನೇ ವನೇ ॥ ೪೮ ॥

ಪ್ರತಸ್ಥೌ ಗೋಪಿಕಾಸಾರ್ಧ್ವಂ ರಾಧಾವಕ್ಷಃ ಸ್ಥಲಸ್ಥಿತಃ ।
ಕ್ಷಣಂ ಪಪೌ ಚ ಮಾಧ್ವೀಕಂ ಪ್ರಿಯಯಾ ಸಹ ಮಾಧವಃ ॥ ೪೯ ॥

ಕ್ಷಣಂ ಚಖಾದ ತಾಂಬೂಲಂ ಕ್ಷಣಂ ನಿದ್ರಾಂ ಯಯೌ ಮುದಾ ।
ಕ್ಷಣಂ ಚಕಾರ ಶೃಂಗಾರಂ ರತ್ನನಿರ್ಮಿತಮಂದಿರೇ ॥ ೫೦ ॥

ಕ್ಷಣಂ ಜಲವಿಹಾರಂ ಚ ಚಕಾರ ಯಮುನಾತಲೇ ।
ಇತ್ಯೇವಂ ಕಥಿತಾ ವತ್ಸ ರಾಸಕ್ರೀಡಾ ಹರೇರಹೋ ॥ ೫೧ ॥

---

೪೭. ಮತ್ತೆ ಕೆಲವರು ಬಿಳಿಯ ಚಾಮರವನ್ನು ಬೀಸುತ್ತ ರಾಧೆಯನ್ನು ಸೇವಿಸಿದರು. ಇನ್ನು ಕೆಲವರು ರಾಧಾದೇವಿಯ ಕಾಲುಗಳನ್ನು ಆನಂದದಿಂದ ಒತ್ತಿದರು.

೪೮-೪೯. ಎಲೈ ಮಹಾಮುನಿಯಾದ ನಾರದನೇ, ಅವರಲ್ಲೊಬ್ಬಳು ರಾಧೆಗೆ ತಿನ್ನಲು ತಾಂಬೂಲವನ್ನು ಕೊಟ್ಟಳು. ಹೀಗೆ ಕುತೂಹಲದಿಂದ ಕೂಡಿದ ಆ ಶ್ರೀಹರಿಯು ಪವಿತ್ರವಾದ ಬೃಂದಾವನದ ತೋಟದಲ್ಲಿ ಗೋಪಿಕಾಸ್ತ್ರೀಯರಿಂದೊಡಗೂಡಿದವನಾಗಿ ರಾಧೆಯನ್ನು ಹೃದಯದಲ್ಲಿಟ್ಟುಕೊಂಡವನಾಗಿ ಹೊರಟನು. ಮತ್ತು ಸ್ವಲ್ಪಕಾಲ ಪ್ರೇಯಸಿಯೊಡನೆ ಮದ್ಯಪಾನವನ್ನು ಮಾಡಿದನು.

೫೦. ಸ್ವಲ್ಪಕಾಲ ತಾಂಬೂಲವನ್ನು ಸಘಿದನು. ಸ್ವಲ್ಪಹೊತ್ತು ಆನಂದದಿಂದ ನಿದ್ರೆಮಾಡಿದನು. ಸ್ವಲ್ಪಕಾಲ ರತ್ನಮಯವಾದ ಮನೆಯಲ್ಲಿ ಶೃಂಗಾರಲೀಲೆಯನ್ನನುಭವಿಸಿದನು.

೫೧-೫೪. ಮತ್ತೆ ಕೆಲಕಾಲ ಯಮುನಾನದಿಯ ನೀರಿನಲ್ಲಿ ಕ್ರೀಡೆಯಾಡಿದನು. ಎಲೈ ಕುಮಾರನಾದ ನಾರದನೇ, ಈ ಪ್ರಕಾರವಾದ ಸ್ವೇಚ್ಛಾಮಯನೂ,

ಸ್ವೇಚ್ಛಾಮಯಸ್ಯಾತ್ಮನಶ್ಚ ಪರಿಪೂರ್ಣತಮಸ್ಯ ಚ ।
ನಿರ್ಗುಣಸ್ಯ ಸ್ವತಂತ್ರಸ್ಯ ಪರಸ್ಯ ಪ್ರಕೃತೇಃ ಪ್ರಭೋಃ ॥ ೫೨ ॥

ಬ್ರಹ್ಮವಿಷ್ಣುಶಿವಾದೀನಾಮೀಶ್ವರಸ್ಯ ಪರಸ್ಯ ಚ ।
ಕೃಷ್ಣಜನ್ಮರಹಸ್ಯಂ ಚ ಬಾಲಕ್ರೀಡನಮೀಪ್ಸಿತಂ ॥ ೫೩ ॥

ಉಕ್ತಂ ಕಿಶೋರಚರಿತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೫೪ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ ನಾರಾಯಣನಾರದಸಂವಾದೇ ಶ್ರೀಕೃಷ್ಣರಾಸಕ್ರೀಡಾವರ್ಣನಂ ನಾಮ ತ್ರಿಪಂಚಾಶತ್ತಮೋಽಧ್ಯಾಯಃ

ಆತ್ಮರೂಪನೂ, ಪರಿಪೂರ್ಣನೂ, ನಿರ್ಗುಣನೂ, ಸ್ವತಂತ್ರನೂ, ಪ್ರಕೃತಿಗಿಂತಲೂ ಶ್ರೇಷ್ಠನೂ, ಪ್ರಭುವೂ, ಬ್ರಹ್ಮವಿಷ್ಣುಶಿವರಿಗೆ ಯಜಮಾನನೂ ಆದ ಹರಿಯ ರಾಸಕ್ರೀಡಾವಿಧಾನವನ್ನು ಹೇಳಿರುವೆನು. ಕೃಷ್ಣಜನ್ಮರಹಸ್ಯವನ್ನೂ ಅವನ ಬಾಲ ಕ್ರೀಡೆಯನ್ನೂ ಕೂಡ ವಿವರಿಸಿರುವೆನು. ಇನ್ನೇನನ್ನು ಕೇಳಲಿಚ್ಛಿಸುವಿ?

ಇಲ್ಲಿಗೆ ಬ್ರಹ್ಮವೈವರ್ತ ಮಹಾಪುರಾಣದ ಶ್ರೀಕೃಷ್ಣಜನ್ಮಖಂಡದಲ್ಲಿ ನಾರದ ನಾರಾಯಣ ಸಂವಾದದಲ್ಲಿ ಶ್ರೀಕೃಷ್ಣನ ರಾಸಕ್ರೀಡಾ ವರ್ಣನೆಯೆಂಬ ಐವತ್ತಮೂರನೆಯ ಅಧ್ಯಾಯವು ಸಮಾಪ್ತವಾದುದು.

ಐವತ್ತಮೂರನೆಯ ಅಧ್ಯಾಯದ ಸಾರಾಂಶ.

ರಾಸಕ್ರೀಡೆಯು ಮುಗಿನಂತರ ಶ್ರೀಕೃಷ್ಣನು ರಾಧೆಯೊಬ್ಬಳನ್ನೇ ಪ್ರತ್ಯೇಕವಾಗಿ ಕರೆದುಕೊಂಡು ಹೋಗಿ, ಮಲ್ಲಿಗೆ, ಜಾಜಿ, ಸಂಪಿಗೆ, ಪದ್ಮ ಮುಂತಾದ ಪುಷ್ಪೋದ್ಯಾನಗಳಲ್ಲಿ ಸ್ವೇಚ್ಛೆಯಾಗಿ ಆಕೆಯೊಡನೆ ರತಿಕ್ರೀಡೆಯಾಡಿದುದಲ್ಲದೆ ಲೋಕಮಾತೆಯಾದ ರಾಧಾದೇವಿಗೆ ಇಷ್ಟಬಂದಂತೆ ಅಲಂಕಾರಮಾಡಿ ತೃಪ್ತಿಪಡಿಸಿದನು. ಆ ಸಮಯಕ್ಕೆ ಇತರ ಗೋಪಿಯರೂ ಸಹ ಅಲ್ಲಿಗೆ ಬಂದು ಜಗದೊಡೆಯನಾದ ಶ್ರೀಕೃಷ್ಣನ ರಾಧಾಪ್ರೇಮವನ್ನು ಕಂಡು ಆನಂದಕುಂದಿಲರಾದರು.

|| ಓಂ ||

|| ಶ್ರೀ ಗಣೇಶಾಯ ನಮಃ ||

ಅಥ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ

ಶ್ರೀಕೃಷ್ಣಜನ್ಮಖಂಡೇ

|| ಚತುಃಪಂಚಾಶತ್ತಮೋಽಧ್ಯಾಯಃ ||

|| ನಾರದ ಉವಾಚ ||

ಅತಃ ಪರಂ ಕಿಂ ರಹಸ್ಯಂ ಬಭೂವ ಮುನಿಸತ್ತಮ |
ಕಥಂ ಜಗಾಮ ಭಗವಾನ್ಮಥುರಾಂ ನಂದಮಂದಿರಾತ್ || ೧ ||

ನಂದೋ ದಧಾರ ಪ್ರಾಣಾಂಶ್ಚ ವಿಚ್ಛೇದೇನ ಹರೇಃ ಕಥಂ |
ಗೋಪಾಂಗನಾ ಯಶೋದಾ ವಾ ಕೃಷ್ಣೈಕತಾನಮಾನಸಾಃ || ೨ ||

ಚಕ್ಷುರ್ನಿಮೇಷವಿಚ್ಛೇದಾದ್ಯಾ ರಾಧಾ ನಹಿ ಜೀವತಿ |
ಕಥಂ ದಧಾರ ಸಾ ದೇವೀ ಪ್ರಾಣಾನ್ ಪ್ರಾಣೇಶ್ವರಂ ವಿನಾ || ೩ ||

ಐವತ್ತನಾಲ್ಕನೆಯ ಅಧ್ಯಾಯವು.

೧. ನಾರದನು :—ಎಲೈ ಮುನಿಶ್ರೇಷ್ಠನೇ, ಅನಂತರ ನಡೆದ ರಹಸ್ಯವೇನು ? ಪೂಜ್ಯನಾದ ಶ್ರೀಕೃಷ್ಣನು ನಂದನ ಮನೆಯಿಂದ ಮಧುರಾಪಟ್ಟಣಕ್ಕೆ ಹೇಗೆಹೋದನು?

೨. ನಂದನು ಹರಿಯ ಅಗಲುವಿಕೆಯುಂಟಾಗಲು ಹೇಗೆ ಪ್ರಾಣಗಳನ್ನು ಧರಿಸಿಕೊಂಡಿದ್ದನು ? ಮತ್ತು ಕೃಷ್ಣನಲ್ಲಿಯೇ ನಟ್ಟ ಮನಸ್ಸುಳ್ಳ ಗೋಪಸ್ತ್ರೀಯರೂ, ಯಶೋದೆಯೂ ಹೇಗೆ ಪ್ರಾಣಸಹಿತರಾಗಿದ್ದರು ?

೩. ಯಾವಳು ಕಣ್ಣುರೆಪ್ಪೆಯನ್ನು ಮುಚ್ಚಿ ತೆರೆಯುವಷ್ಟು ಕಾಲಮಾತ್ರವೂ ಕೃಷ್ಣನ ವಿರಹವನ್ನು ಸಹಿಸಲಾರಳೋ ಅಂಥಾ ರಾಧೆಯು ತನ್ನ ಪ್ರಾಣೇಶ್ವರನನ್ನು ಬಿಟ್ಟು ಹೇಗೆ ಜೀವದಿಂದುಳಿದಳು ?

ಯೇ ಯೇ ತತ್ಸಂಗಿನೋ ಗೋಪಾಃ, ತಯೇನಾಸನಭೋಗತಃ ।
ಕಥಂ ವಿಸಸ್ಮರುಸ್ತೇ ಚ ತಾದೃಶಂ ಬಾಂಧವಂ ವ್ರಜೇ ॥ ೪ ॥

ಶ್ರೀಕೃಷ್ಣೋ ಮಥುರಾಂ ಗತ್ವಾ ಕಿಂ ಕಿಂ ಕರ್ಮ ಚಕಾರ ಸಃ ।
ಸ್ವರ್ಗಾರೋಹಣಪರ್ಯಂತಂ ತದ್ಭವಾನ್ ವಕ್ತುಮರ್ಹತಿ ॥ ೫ ॥

॥ ಶ್ರೀ ನಾರಾಯಣ ಉವಾಚ ॥

ಕಂಸಶ್ಚಕಾರ ಯಜ್ಞಂ ಚ ಸಮಾಹೂತೋ ಧನುರ್ಮಖಂ ।
ಜಗಾಮ ತತ್ರ ಭಗವಾಂಸ್ತೇನ ರಾಜ್ಞಾ ನಿಮಂತ್ರಿತಃ ॥ ೬ ॥

ರಾಜಾ ಪ್ರಸ್ಥಾಪಯಾಮಾಸ ಚಾಕ್ರೂರಂ ಭಗವತ್ಪ್ರಿಯಂ ।
ಅಕ್ರೂರಃ ಪ್ರೇರಿತೋ ರಾಜ್ಞಾ ಗತ್ವಾ ಚ ನಂದಮಂದಿರಂ ॥ ೭ ॥

ಶ್ರೀಕೃಷ್ಣಂ ಚ ಗೃಹೀತ್ವಾ ಸ ಸಗಣಂ ಮಥುರಾಂ ಗತಃ ।
ಕೃಷ್ಣಃ ಶ್ರೀಮಥುರಾಂ ಗತ್ವಾ ಜಘಾನ ನೃಪತಿಂ ಮುನೇ ॥ ೮ ॥

---

೪. ಗೋಕುಲದಲ್ಲಿ ಊಟವೇ ಮೊದಲಾದ ವ್ಯವಹಾರಗಳಲ್ಲಿ ಆ ಕೃಷ್ಣನ ಸ್ನೇಹವನ್ನು ಹೊಂದಿದ ಗೋಪಾಲಕರು ಯಾರು ಯಾರು ಇದ್ದರೋ ಅವರೆಲ್ಲರೂ ಅಂಥಾ ಬಂಧುವನ್ನು ಹೇಗೆ ಮರೆತರು ?

೫. ಶ್ರೀಕೃಷ್ಣನು ಮಥುರಾಪಟ್ಟಣಕ್ಕೆ ಹೋಗಿ ಏನೇನು ಕೆಲಸಗಳನ್ನು ಮಾಡಿದನು? ಸ್ವರ್ಗಾರೋಹಣದವರೆಗೆ ಆ ಕಥೆಯನ್ನು ನೀನು ನನಗೆ ಹೇಳಬೇಕು.

೬. ನಾರಾಯಣ:—ಕಂಸನು ಧನುರ್ಯಾಗವೆಂಬ ಯಜ್ಞವನ್ನು ಮಾಡಿ ಕೃಷ್ಣನನ್ನು ಕರೆಯಲು ಪೂಜ್ಯನಾದ ಹರಿಯು ಅಲ್ಲಿಗೆ ಬಂದನು.

೭–೮. ಕಂಸರಾಜನು ಶ್ರೀಕೃಷ್ಣನನ್ನು ಕರೆಯಲು ಅವನಿಗೆ ಪ್ರಿಯನಾದ ಅಕ್ರೂರನೆಂಬುವನನ್ನು ಕಳುಹಿಸಿದನು. ಅಕ್ರೂರನು ರಾಜನಿಂದ ಪ್ರೇರಿಸಲ್ಪಟ್ಟವನಾಗಿ ನಂದನ ಮನೆಗೆ ಹೋಗಿ ಪರಿವಾರಸಮೇತನಾದ ಶ್ರೀಕೃಷ್ಣನನ್ನು ಕರೆದುಕೊಂಡು ಮಥುರಾಪಟ್ಟಣಕ್ಕೆ ಬಂದನು. ಎಲೈ ಮುನಿಯೇ, ಶ್ರೀಕೃಷ್ಣನು ಕೂಡ ಮಥುರಾಪಟ್ಟಣಕ್ಕೆ ಬಂದು ರಾಜನಾದ ಕಂಸನನ್ನು ಕೊಂದನು.

ಜಘಾನ ರಜಕಂ ಚೈವ ಚಾಣೂರಂ ಮುಷ್ಟಿಕಂ ಗಜಂ ।
ಚಕಾರ ಪಿತ್ರೋರುದ್ಧಾರಂ ಬಾಂಧವಾನಾಂ ಚ ಬಾಂಧವಃ ॥ ೯ ।

ಕುಬ್ಜಯಾ ಸಹ ಶೃಂಗಾರಂ ಕೃತ್ವಾ ಚ ಕೌತುಕೇನ ಚ ।
ತಂ ಚ ಪ್ರಸ್ಥಾಪಯಾಮಾಸ ಗೋಲೋಕಂ ಗೋಪಿಕಾಪತಿಃ ॥ ೧೦ ॥

ಚಕಾರ ಕೃಪಯಾ ವಿಷ್ಣುರ್ಮಾಲಾಕಾರಸ್ಯ ಮೋಕ್ಷಣಂ ।
ಕೃಪಯಾ ಚೋದ್ಧವದ್ವಾರಾ ಬೋಧಯಾಮಾಸ ಗೋಪಿಕಾಃ ॥ ೧೧ ॥

ತದೋಪನೀತೋ ಭಗವಾನವಂತೀನಗರಂ ಯಯೌ ।
ಚಕಾರ ವಿದ್ಯಾಗ್ರಹಣಂ ಮುನೇಃ ಸಾಂದೀಪನೇರ್ಗುರೋಃ ॥ ೧೨ ॥

ತತೋ ಜಿತ್ವಾ ಜರಾಸಂಧಂ ನಿಹತ್ಯ ಯವನೇಶ್ವರಂ ।
ಉಗ್ರಸೇನಂ ಚ ನೃಪತಿಂ ಚಕಾರ ವಿಧಿಪೂರ್ವಕಂ ॥ ೧೩ ॥

---

೯. ಅನಂತರ ಅಗಸನನ್ನೂ, ಚಾಣೂರನನ್ನೂ, ಮುಷ್ಟಿಕನನ್ನೂ, ಆನೆಯನ್ನೂ ಕೊಂದನು. ಸಕಲರ ಬಂಧುವಾದ ಶ್ರೀಕೃಷ್ಣನು ತಾಯಿತಂದೆಗಳನ್ನೂ ಬಾಂಧವರನ್ನೂ ಕೂಡ ಸಂಕಟದಿಂದ ತಪ್ಪಿಸಿದನು.

೧೦. ಗೋಪಿಕಾಸ್ತ್ರೀಯರ ಪ್ರಿಯನಾದ ಕೃಷ್ಣನು ಕುತೂಹಲದಿಂದ ಕುಬ್ಜೆ ಯೊಡನೆ ಶೃಂಗಾರವನ್ನು ಮಾಡಿಕೊಂಡು ಅವಳನ್ನು ಗೋಕುಲಕ್ಕೆ ಕಳುಹಿಸಿದನು.

೧೧. ಶ್ರೀಕೃಷ್ಣನು ದಯೆಯಿಂದ ಹೂವಾಡಿಗನನ್ನು ಕ್ಷಮಿಸಿಬಿಟ್ಟನು. ಮತ್ತು ದಯೆಯಿಂದ ಉದ್ಧವನ ಮೂಲಕ ಗೋಪಿಕಾಸ್ತ್ರೀಯರಿಗೆ ಉಪದೇಶ ಮಾಡಿಸಿದನು.

೧೨. ಅನಂತರ ಉಪನಯನವನ್ನು ಮಾಡಲ್ಪಟ್ಟ, ಪೂಜ್ಯನಾದ ಶ್ರೀಕೃಷ್ಣನು ಅವನ್ತೀನಗರವನ್ನು ಕುರಿತು ಪ್ರಯಾಣಮಾಡಿದನು. ಅಲ್ಲಿ ಗುರುವಾದ ಸಾಂದೀಪನಿ ಯೆಂಬ ಮುನಿಯಿಂದ ವಿದ್ಯೆಯನ್ನು ಕಲಿತನು.

೧೩. ಅನಂತರ ಜರಾಸಂಧನನ್ನು ಗೆದ್ದು, ಯವನರಾಜನನ್ನು ಕೊಂದು. ಉಗ್ರಸೇನನನ್ನು ನಿಯಮಪೂರ್ವಕವಾಗಿ ರಾಜನನ್ನಾಗಿ ಮಾಡಿದನು.

ಗತ್ವಾ ಸಮುದ್ರನಿಕಟಂ ನಿರ್ಮಾಯ ದ್ವಾರಕಾಂ ಪುರೀಂ ।
ಜಹಾರ ರುಕ್ಮಿಣೀಂ ದೇವೀಂ ಜಿತ್ವಾ ನೃಪತಿಸಂಘಕಂ ॥ ೧೪ ॥

ಕಾಲಿಂದೀಂ ಲಕ್ಷ್ಮಣಾಂ ಶೈಬ್ಯಾಂ ಸತ್ಯಾಂ ಜಾಂಬವತೀಂ ಸತೀಂ ।
ಮಿತ್ರವಿಂದಾಂ ನಾಗ್ನಜಿತೀಂ ಸಮುದ್ವಾಹಂ ಚಕಾರ ಸಃ ॥ ೧೫ ॥

ನಿಹತ್ಯ ನರಕಂ ಭೂಪಂ ರಣೇನ ದಾರುಣೇನ ಚ ।
ಪತ್ನೀಃ ಷೋಡಶಸಾಹಸ್ರಂ ವಿಹಾರಂ ಚ ಚಕಾರ ಸಃ ॥ ೧೬ ॥

ಜಹಾರ ಪಾರಿಜಾತಂ ಚ ಜಿತ್ವಾ ಶಕ್ರಂ ಚ ಲೀಲಯಾ ।
ಚಿಚ್ಛೇದ ಬಾಣಹಸ್ತಾಂಶ್ಚ ಜಿತ್ವಾ ಚ ಚಂದ್ರಶೇಖರಂ ॥ ೧೭ ॥

ಪೌತ್ರಸ್ಯ ಮೋಕ್ಷಣಂ ಕೃತ್ವಾ ಪುನರಾಗತ್ಯ ದ್ವಾರಕಾಂ ।
ಆತ್ಮಾನಂ ದರ್ಶಯಾಮಾಸ ಲೋಕಾಂಶ್ಚ ಪ್ರತಿಮಂದಿರಂ ॥ ೧೮ ॥

---

೧೪ ಅನಂತರ ಸಮುದ್ರತೀರಕ್ಕೆ ಹೋಗಿ ದ್ವಾರಕೆಯೆಂಬ ಪಟ್ಟಣವನ್ನು ಮಾಡಿಕೊಂಡು, ಸಕಲ ರಾಜಸಮೂಹವನ್ನೂ ಜಯಿಸಿ, ರುಕ್ಮಿಣಿಯನ್ನು ಅಪಹರಿಸಿದನು.

೧೫. ಮತ್ತು ಕಾಲಿಂದಿ, ಲಕ್ಷ್ಮಣಾ, ಶೈಬ್ಯೆ, ಸತ್ಯೆ, ಜಾಂಬವತಿ, ಮಿತ್ರವಿಂದೆ, ನಾಗ್ನಜಿತಿ ಎಂಬ ಕನ್ಯೆಯರನ್ನು ಮದುವೆಯಾದನು.

೧೬. ಘೋರವಾದ ಯುದ್ಧವನ್ನು ಮಾಡಿ, ನರಕನೆಂಬ ರಾಜನನ್ನು ಕೊಂದು ಹದಿನಾರುಸಾವಿರ ಪತ್ನಿಯರೊಡನೆ ವಿಹರಿಸಿದನು.

೧೭. ಅತಿ ಸುಲಭವಾಗಿ ಇಂದ್ರನನ್ನು ಗೆದ್ದು ಪಾರಿಜಾತವನ್ನು ತಂದನು. ಈಶ್ವರನನ್ನೂ ಗೆದ್ದು ಬಾಣನ ಕೈಗಳನ್ನೂ ಕೂಡ ಕತ್ತರಿಸಿದನು.

೧೮. ಮೊಮ್ಮಗನನ್ನು ಬಿಡಿಸಿ, ಮತ್ತೆ ದ್ವಾರಕಾಪಟ್ಟಣಕ್ಕೆ ಬಂದು, ಪ್ರತಿ ಮನೆಯಲ್ಲಿಯೂ ಎಲ್ಲರಿಗೂ ಕಾಣಿಸಿಕೊಂಡನು.

ಯೋಗೇ ಚ ವಸುದೇವಸ್ಯ ತೀರ್ಥಯಾತ್ರಾಪ್ರಸಂಗತಃ ।
ಪ್ರಾಣಾಧಿಷ್ಠಾತೃದೇವೀಂ ಚ ದದರ್ಶ ತತ್ರ ರಾಧಿಕಾಂ ॥ ೧೯ ॥

ಪೂರ್ಣೇ ಚ ಶತವರ್ಷೇ ಚ ಸುದಾಮ್ನಃ ಶಾಪಮೋಕ್ಷಣೇ ।
ಪುನರ್ಯಯೌ ತಯಾ ಸಾರ್ಧಂ ಪುಣ್ಯಂ ವೃಂದಾವನಂ ವನಂ ॥ ೨೦ ॥

ಪುನಶ್ಚತುರ್ದಶಾಬ್ದಂ ಚ ತಯಾ ಸಾರ್ಧಂ ಜಗತ್ಪತಿಃ ।
ಚಕಾರ ರಾಸಂ ರಾಸೇ ಚ ಪುಣ್ಯಕ್ಷೇತ್ರೇ ಚ ಭಾರತೇ ॥ ೨೧ ॥

ಪೂರ್ಣಮೇಕಾದಶಾಬ್ದಂ ಚ ನಿವೃತ್ಯ ನಂದಮಂದಿರೇ ।
ಮಥುರಾಯಾಂ ದ್ವಾರಕಾಯಾಂ ಪೂರ್ಣಮಬ್ದಶತಂ ವಿಭುಃ ॥ ೨೨ ॥

ಚಕಾರ ಭಾರಹರಣಂ ಪೃಥಿವ್ಯಾಂ ಪೃಥುವಿಕ್ರಮಃ ।
ಪಂಚವಿಂಶತಿವರ್ಷೇ ಚ ಶತವರ್ಷಾಧಿಕಂ ಮುನೇ ॥ ೨೩ ॥

---

೧೯. ವಸುದೇವನು ಮಾಡಿದ ಯಾಗಸಮಯದಲ್ಲಿ ತೀರ್ಥಯಾತ್ರೆಯ ಕಾರಣದಿಂದ ತನ್ನ ಪ್ರಾಣಕ್ಕೆ ಅಧಿದೇವತೆಯಾದ ರಾಧೆಯನ್ನು ಕಂಡನು.

೨೦. ನೂರು ವರುಷಗಳು ಕಳೆದನಂತರ ಸುದಾಮನ ಶಾಪವು ಕಳೆಯಲು, ಆ ರಾಧೆಯೊಡನೆ ಪುಣ್ಯತಮವಾದ ವೃಂದಾವನಕ್ಕೆ ಮತ್ತೆ ತೆರಳಿದನು.

೨೧. ಜಗತ್ಪತಿಯು ಮತ್ತೆ ಹದಿನಾಲ್ಕು ವರುಷಗಳು ಭಾರತದ ಪುಣ್ಯ ಕ್ಷೇತ್ರದಲ್ಲಿ ಆ ರಾಧೆಯೊಡನೆ ರಾಸಕ್ರೀಡೆಯನ್ನಾಡಿದನು.

೨೨. ವಿಭುವಾದ ಶ್ರೀಕೃಷ್ಣನು ಅಲ್ಲಿ ಹನ್ನೊಂದು ವರುಷಗಳನ್ನು ಕಳೆದು, ಮಥುರಾಪಟ್ಟಣದಲ್ಲಿಯೂ, ದ್ವಾರಕಾನಗರದಲ್ಲಿಯೂ ನೂರು ವರುಷಗಳನ್ನು ಕಳೆದನು.

೨೩. ಎಲೈ ಮುನಿಯೇ, ಮಹಾ ಪರಾಕ್ರಮಶಾಲಿಯಾದ ಶ್ರೀಕೃಷ್ಣನು ಒಂದುನೂರ ಇಪ್ಪತ್ತೈದು ವರುಷಗಳವರೆಗೆ ಭೂಮಿಯ ಭಾರವನ್ನು ಹರಣ ಮಾಡಿದನು.

ತಿಷ್ಠನ್ಜಗಾಮ ಗೋಲೋಕಂ ಪೃಥಿವ್ಯಾಂ ಚ ಪುರಾತನಃ ।
ಯಶೋದಾಯೈ ಚ ನಂದಾಯ ವೃಷಭಾನಾಯ ಧೀಮತೇ ॥ ೨೪ ॥

ರಾಧಾಮಾತ್ರೇ ಕಲಾವತ್ಯೈ ದದೌ ಸಾಮೀಪ್ಯಮೋಕ್ಷಣಂ ।
ಕೃಷ್ಣೇನ ಸಾರ್ಧಂ ಗೋಪೀ ಚ ರಾಧಿಕಾ ಚ ಕುತೂಹಲಾತ್ ॥ ೨೫ ॥

ನಿಬಧ್ಯ ಧರ್ಮಸೇತುಂ ಚ ವೇದೋಕ್ತಂ ಚ ಯುಗೇ ಯುಗೇ ।
ಇತ್ಯೇವಂ ಕಥಿತಂ ಸರ್ವಂ ಸಮಾಸೇನ ಮಹಾಮುನೇ ॥ ೨೬ ॥

ಶ್ರೀಕೃಷ್ಣಚರಿತಂ ರಮ್ಯಂ ಚತುರ್ವರ್ಗಫಲಪ್ರದಂ ।
ಬ್ರಹ್ಮಾದಿಸ್ತಂಬಪರ್ಯಂತಂ ಸರ್ವಂ ನಶ್ವರಮೇವ ಚ ॥ ೨೭ ॥

ಭಜ ತಂ ಪರಮಾನಂದಂ ಸಾನಂದಂ ನಂದನಂದನಂ ।
ಸ್ವೇಚ್ಛಾಮಯಂ ಪರಂ ಬ್ರಹ್ಮ ಪರಮಾತ್ಮಾನಮೀಶ್ವರಂ ॥ ೨೮ ॥

೨೪–೨೬. ಪುರಾತನನಾದ ಪರಮಾತ್ಮನು ಭೂಮಿಯಲ್ಲಿ ವಾಸಮಾಡುತ್ತಿದ್ದು ಗೋಲೋಕಕ್ಕೆ ಹೋದನು. ಯಶೋದೆಗೂ ನಂದನಿಗೂ ಜ್ಞಾನಿಯಾದ ವೃಷಭಾನನಿಗೂ, ರಾಧೆಯ ತಾಯಿಯಾದ ಕಲಾವತಿಗೂ ಕೂಡ ಸಾಮೀಪ್ಯರೂಪವಾದ ಮೋಕ್ಷವನ್ನು ಕೊಟ್ಟನು. ಕೃಷ್ಣನೊಡನೆ ಗೋಪಿಯೂ ರಾಧೆಯೂ ಕೂಡ ಕುತೂಹಲದಿಂದ ಪ್ರತಿ ಯುಗದಲ್ಲಿಯೂ ಬಂದು ವೇದೋಕ್ತವಾದ ಧರ್ಮಸೇತುವೆಯನ್ನು ಕಟ್ಟುವರು. ಎಲೈ ಮಹಾಮುನಿಯೇ, ಈ ಪ್ರಕಾರವಾಗಿ ಎಲ್ಲವನ್ನೂ ಸಂಗ್ರಹವಾಗಿ ಹೇಳಿರುವೆನು.

೨೭. ಮನೋಹರವಾದ ಶ್ರೀಕೃಷ್ಣನ ಚರಿತ್ರೆಯು ಧರ್ಮಾರ್ಥಕಾಮಮೋಕ್ಷರೂಪವಾದ ಚತುರ್ವರ್ಗದ ಫಲವನ್ನು ಕೊಡತಕ್ಕುದಾಗಿರುತ್ತೆ. ಬ್ರಹ್ಮ ಮೊದಲಾಗಿ ಕಂಬದವರೆಗೆ ಸಕಲವೂ ನಾಶವನ್ನು ಹೊಂದುವುದು.

೨೮–೩೦. ಆದಕಾರಣ ಆನಂದರೂಪನೂ, ನಂದನಕುಮಾರನೂ, ಸ್ವೇಚ್ಛಾರೂಪನೂ, ಪರಬ್ರಹ್ಮನೂ, ಪರಮಾತ್ಮನೂ, ಸಕಲ ಜಗತ್ತಿಗೂ ಈಶ್ವರನೂ, ನಾಶ

ಪರಮವ್ಯಯಮವ್ಯಕ್ತಂ ಭಕ್ತಾನುಗ್ರಹವಿಗ್ರಹಂ ।
ಸತ್ಯಂ ನಿತ್ಯಂ ಸ್ವತಂತ್ರಂ ಚ ಸರ್ವೇಶಂ ಪ್ರಕೃತೇಃ ಪರಂ ॥ ೨೯ ॥

ನಿರ್ಗುಣಂ ಚ ನಿರೀಹಂ ಚ ನಿರಾಕಾರಂ ನಿರಂಜನಂ ॥ ೩೦ ॥

ಇತಿ ಶ್ರೀ ಬ್ರಹ್ಮವೈವರ್ತೇ ಮಹಾಪುರಾಣೇ ಶ್ರೀಕೃಷ್ಣಜನ್ಮಖಂಡೇ
ನಾರಾಯಣನಾರದಸಂವಾದೇ ಶ್ರೀಕೃಷ್ಣರಾಧಿಕಾಸಂವಾದೋ
ನಾಮ ಚತುಃಪಂಚಾಶತ್ತಮೋಽಧ್ಯಾಯಃ

ಪೂರ್ವಾರ್ಧಂ ಸಮಾಪ್ತಂ.

ಶ್ರೀ ಕೃಷ್ಣಾರ್ಪಣಮಸ್ತು.

ರಹಿತನೂ, ಅವ್ಯಕ್ತನೂ, ಭಕ್ತರಿಗೆ ಅನುಗ್ರಹಮಾಡುವುದಕ್ಕಾಗಿ ಶರೀರವನ್ನು ಧರಿಸಿದವನೂ, ಸತ್ಯಸ್ವರೂಪನೂ, ನಿತ್ಯನೂ, ಸ್ವತಂತ್ರನೂ, ಸರ್ವೇಶ್ವರನೂ, ಪ್ರಕೃತಿಗಿಂತಲೂ ಶ್ರೇಷ್ಠನೂ, ಗುಣರಹಿತನೂ, ಆಶಾರಹಿತನೂ, ನಿರಾಕಾರನೂ, ನಿರಂಜನನೂ ಆದ ಆ ಪರಮಾತ್ಮನನ್ನು ಯಾವಾಗಲೂ ಭಜನೆ ಮಾಡುವವನಾಗು.

ಇಲ್ಲಿಗೆ ಶ್ರೀ ಬ್ರಹ್ಮವೈವರ್ತಮಹಾಪುರಾಣದ ಶ್ರೀಕೃಷ್ಣಜನ್ಮಖಂಡದ
ನಾರದ ನಾರಾಯಣ ಸಂವಾದದಲ್ಲಿ ಶ್ರೀಕೃಷ್ಣರಾಧಿಕಾ
ಸಂವಾದವೆಂಬ ಐವತ್ತನಾಲ್ಕನೆಯ ಅಧ್ಯಾಯವು
ಮುಗಿದುದು

ಬ್ರಹ್ಮವೈವರ್ತ ಮಹಾಪುರಾಣದಲ್ಲಿರುವ ಶ್ರೀಕೃಷ್ಣಜನ್ಮಖಂಡದ
ಮೊದಲನೆಯ ಅರ್ಧವು ಪೂರ್ಣವಾದುದು.

ಐವತ್ತನಾಲ್ಕನೆಯ ಅಧ್ಯಾಯದ ಸಾರಾಂಶ.

ಕಂಸನು ಧನುರ್ಯಾಗವನ್ನು ಕೈಕೊಂಡು ಆ ಯಾಗಕ್ಕೆ ಶ್ರೀಕೃಷ್ಣನನ್ನು ಅಕ್ರೂರನ ಮೂಲಕ ಕರೆಸಿ ಅವನನ್ನು ವಧಿಸಲು ಪ್ರಯತ್ನಪಟ್ಟನು. ಆದರೆ ಸರ್ವಜ್ಞನಾದ ಶ್ರೀಕೃಷ್ಣನು ಮಥುರೆಗೆ ಹೋಗಿ ಅಲ್ಲಿ ಮುಷ್ಟಿಕ, ಚಾಣೂರ ಮುಂತಾದ ಮಲ್ಲರನ್ನು ನಿಗ್ರಹಿಸಿದುದಲ್ಲದೆ, ಕಂಸನನ್ನೂ ಕೊಂದು ಜರಾಸಂಧನನ್ನು ಗೆದ್ದು ಉಗ್ರಸೇನನಿಗೆ ಪಟ್ಟಾಭಿಷೇಕಮಾಡಿದನು. ತಾನು ಉಪನೀತನಾಗಿ ಅವಂತಿಗೆ ಹೋಗಿ ಸಾಂದೀಪಿನಿ ಎಂಬ ಗುರುವಿನಿಂದ ಸಕಲ ಶಾಸ್ತ್ರವನ್ನೂ ಕಲಿತು ಸಮುದ್ರ ಮಧ್ಯದಲ್ಲಿ ದ್ವಾರಕೆ ಎಂಬ ನಗರವನ್ನು ನಿರ್ಮಿಸಿಕೊಂಡು ಸುಖವಾಗಿದ್ದನು. ಅಲ್ಲದೆ ರುಕ್ಮಿಣಿ ಮುಂತಾದ ಅಷ್ಟಮಹಿಷಿಯರನ್ನು ಪಡೆದು ಅವರೆಲ್ಲರೊಡನೆ ಸುಖವಾಗಿದ್ದನು. ಈ ರೀತಿಯಾಗಿ ಕೃಷ್ಣನು ನೂರಾರು ವರ್ಷಗಳಕಾಲ ಭೂಮಿಯ ಭಾರವನ್ನು ಪರಿಹರಿಸಿಕೊಂಡು ಒಮ್ಮೆ ಮಥುರಾ ಪಟ್ಟಣದಲ್ಲಿಯೂ, ಮತ್ತೊಮ್ಮೆ ದ್ವಾರಕಾವತಿಯಲ್ಲಿಯೂ ಇನ್ನೊಮ್ಮೆ ನಂದಗೋಕುಲದಲ್ಲಿಯೂ ವಾಸಮಾಡಿಕೊಂಡಿದ್ದನು.

ಓಂ ತತ್ಸತ್.